# ಭಗವದ್ಗೀತೆ

(ಒಂದು ಸರಳ ಅನುವಾದ)



ಎಂ. ಎ. ಸಿಂಗಮ್ಮ

ಎಂ.ಡಿ. ವೇದವಲ್ಲಿ

# ಭಗವದ್ಗೀತೆ

(ಒಂದು ಸರಳ ಅನುವಾದ)

ಲೇಖಕರು :

ಎಂ.ಎ. ಸಿಂಗಮ್ಮ

ಎಂ.ಡಿ. ವೇದವಲ್ಲಿ

ಪ್ರಕಾಶಕರು :

ಡಾ. ಎಂ.ಡಿ. ಶ್ರೀನಿವಾಸ್

141-ಬಿ, 13ನೇ ಮುಖ್ಯ ರಸ್ತೆ, ಮೂರನೆಯ ಬ್ಲಾಕ್ ಪೂರ್ವ

ಜಯನಗರ, ಬೆಂಗಳೂರು-560 011

ದೂರವಾಣಿ : 41659666

# ಭಗವದ್ಗೀತೆ (ಒಂದು ಸರಳ ಅನುವಾದ)

ಲೇಖಕರು:

ಎಂ.ಎ. ಸಿಂಗಮ್ಮ

ಎಂ.ಡಿ. ವೇದವಲ್ಲಿ

ಮುದ್ರಣ ವರ್ಷ : **2010**

ಬೆಲೆ : ರೂ. **100/-**

**ಪುಸ್ತಕ ದೊರೆಯುವ ಸ್ಥಳ:**

**ಶ್ರೀ ಎಂ.ಡಿ. ಜಯಸಿಂಹ**
ನಂ. 40/10, 13ನೇ ಕ್ರಾಸ್
6ನೇಮೈನ್ ಹತ್ತಿರ, ಮಲ್ಲೇಶ್ವರಂ
ಬೆಂಗಳೂರು-560 003
ದೂರವಾಣಿ: 23445252

**ಶ್ರೀ ಎಂ.ಡಿ. ರಂಗನಾಥ್**
ನಂ. 966 (43), 65ನೇ ಕ್ರಾಸ್
5ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560 010
ದೂರವಾಣಿ: 25767368

*ಮುದ್ರಣ :*

**ಶ್ರೀರಾಮ ಪ್ರಿಂಟರ್ಸ್**
ನಂ. 25, 15ನೇ ಕ್ರಾಸ್, 5ನೇ ಮೈನ್
ಶ್ರೀನಿಧಿ ಲೇಔಟ್
ಬೆಂಗಳೂರು- 560 062.

# ಮೊದಲಮಾತು

ನನ್ನ ಪೂಜ್ಯ ತಾಯಿಯವರಾದ ಪರಮಪದಿಸಿರುವ ಎಂ.ಎ. ಸಿಂಗಮ್ಮನವರು ಭಗವದ್ರಾಮಾನುಜಾಚಾರ್ಯರ ಶ್ರೀಮದ್ಭಗವದ್ಗೀತಾ ಭಾಷ್ಯವನ್ನನುಸರಿಸಿ ಬರೆದಿದ್ದ "ಭಗವದ್ಗೀತೆ – ಒಂದು ಸರಳ ಅನುವಾದ" ಎಂಬ ಈ ಕಿರು ಗ್ರಂಥವನ್ನು ಈಗ ಹೊರತರುತ್ತಿದ್ದೇವೆ. ಇದನ್ನು ನನ್ನ ತಾಯಿಯವರು ತಮ್ಮ ತಂಗಿ ಶ್ರೀಮತಿ ಎಂ.ಡಿ. ವೇದವಲ್ಲಿಯವರೊಡನೆ ಅಧ್ಯಯನ ಮಾಡಿ ಅವರ ಮಾರ್ಗದರ್ಶನದಲ್ಲಿ ಬರೆದಿದ್ದರು. ಅವರು ಬರೆದಿದ್ದ ವಿಷಯಗಳನ್ನು ಎಂ.ಡಿ.ವೇದವಲ್ಲಿಯವರು ಸಂಪೂರ್ಣವಾಗಿ ಪರಿಶೀಲಿಸಿ ಪರಿಷ್ಕರಿಸಿದ್ದಾರೆ.

ಈ ಗ್ರಂಥದಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ನನ್ನ ತಾಯಿಯವರು ಬರೆದಿದ್ದ "ಹಿಂದೂ ಮತದಲ್ಲಿ ಭಗವದ್ಗೀತೆಯ ಶ್ರೇಷ್ಠತೆ" ಎಂಬ ಲೇಖನವೂ ಮತ್ತು 'ಭಗವದ್ಗೀತೆ – ಒಂದು ಸರಳ ಅನುವಾದ' ಎಂಬ ಕಿರುಗ್ರಂಥವೂ ಇವೆ. ಈ ವಿಭಾಗವು ಶ್ರೀಮದ್ಭಗವದ್ಗೀತೆಯ ಬಗ್ಗೆ ಆಸಕ್ತಿ ತಳೆದು ಅದರಲ್ಲಿರುವ ಪ್ರಮುಖ ವಿಷಯಗಳನ್ನು ತಿಳಿಯಬಿಚ್ಛಿಸುವ ಪ್ರಾರಂಭಿಕ ಓದುಗರಿಗೆ ಆ ಪವಿತ್ರ ಗ್ರಂಥದ ಮಹಾನ್ ಚಿಂತನೆಗಳ ಒಂದು ಪಕ್ಷಿನೋಟವನ್ನು ಒದಗಿಸುತ್ತದೆ.

ಇದರ ಎರಡನೆಯ ಭಾಗದಲ್ಲಿ ನನ್ನ ಪೂಜ್ಯ ಚಿಕ್ಕಮ್ಮ ಶ್ರೀಮತಿ ಎಂ.ಡಿ. ವೇದವಲ್ಲಿಯವರ "ಭಗವದ್ಗೀತೆಯಲ್ಲಿ ಶ್ರೀಕೃಷ್ಣನ ಸಂದೇಶ" ಎಂಬ ಲೇಖನವಿದೆ. ಇದರಲ್ಲಿ ಅವರು ಭಗವದ್ಗೀತೆಯ ಉಪದೇಶಗಳನ್ನು ಮತ್ತಷ್ಟು ಸಂಗ್ರಹವಾಗಿ ಮತ್ತು ಸ್ಪಷ್ಟವಾಗಿ ಪ್ರಸ್ತುತಪಡಿಸಿದ್ದಾರೆ.

ಸಹೃದಯರು ಭಗವದ್ಗೀತೆಯ ತಿರುಳನ್ನು ಅರಿಯಲು ಈ ಎರಡು ಭಾಗಗಳೂ ಸಹಾಯಕವಾಗುತ್ತವೆಯೆಂದು ಆಶಿಸುತ್ತೇನೆ.

ನನ್ನ ತಾಯಿಯವರು ಬರೆದಿದ್ದ "ಭಗವದ್ಗೀತೆ – ಒಂದು ಸರಳಾನುವಾದ" ಎಂಬುದು ಲೇಖನಮಾಲೆಯಾಗಿ ಬೆಂಗಳೂರಿನ ಉಭಯವೇದಾಂತ ಸಭೆಯವರು ಹೊರತರುತ್ತಿರುವ 'ಉಭಯವೇದ' ಎಂಬ ತ್ರೈಮಾಸಿಕ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅದನ್ನು ಪುಸ್ತಕರೂಪದಲ್ಲಿ ಪ್ರಕಟಿಸಲು ಅನುಮತಿ ನೀಡಿರುವ ಉಭಯವೇದಾಂತ ಸಭೆಯವರಿಗೆ ನನ್ನ ಅನಂತ ವಂದನೆಗಳನ್ನು ಅರ್ಪಿಸುತ್ತೇನೆ.

ಮಂಡಯಂ ಆಣ್ಣಾಥೊರೆ ಕುಟುಂಬದವರು ತಮ್ಮ ಕುಟುಂಬದ ಹಿರಿಯ ಸದಸ್ಯೆಯರಲ್ಲಿ ಒಬ್ಬರಾಗಿದ್ದ ನನ್ನ ತಾಯಿಯವರ ಈ ಗ್ರಂಥವನ್ನು ಪ್ರಕಟಿಸಲು ಧನ ಸಹಾಯ ಮಾಡಿದ್ದಾರೆ. ಅವರಿಗೂ ನನ್ನ ಕೃತಜ್ಞತೆಗಳು.

ಈ ಗ್ರಂಥವನ್ನು ಪ್ರಕಾಶಿಸುತ್ತಿರುವ ಶ್ರೀ ಎಂ.ಡಿ. ಶ್ರೀನಿವಾಸ್‌ರವರಿಗೂ, ಇದನ್ನು ಅಂದವಾಗಿ ಅಚ್ಚುಹಾಕಿಸಿಕೊಟ್ಟ ಶ್ರೀರಾಮ ಪ್ರಿಂಟರ್ಸ್‌ರವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಇದರ ರಚನೆಗೂ ಪ್ರಕಟಣೆಗೂ ಮೂಲಸೂತ್ರಧಾರನಾಗಿರುವ ಪರಮಾತ್ಮನ ಪಾದಾರವಿಂದಗಳಲ್ಲಿ ಈ ಗ್ರಂಥಪುಷ್ಪವನ್ನು ಸಮರ್ಪಿಸುತ್ತೇನೆ.

ಶ್ರೀ ಕೃಷ್ಣಾರ್ಪಣಮಸ್ತು

2-9-2010 — ಎಂ.ಎ. ಯದುಗಿರಿ

ಕೃಷ್ಣಜನ್ಮಾಷ್ಟಮಿ

# ವಿಷಯ ಸೂಚಿಕೆ


ಪುಟ ಸಂಖ್ಯೆ

ಭಾಗ - ಒಂದು

ಲೇಖಿಕಿ : ಎಂ. ಎ. ಸಿಂಗಮ್ಮ 1

ಹಿಂದೂ ಮತದಲ್ಲಿ ಭಗವದ್ಗೀತೆಯ ಶ್ರೇಷ್ಠತೆ

ಭಗವದ್ಗೀತೆ – ಒಂದು ಸರಳ ಅನುವಾದ 7

ಮೊದಲನೆಯ ಅಧ್ಯಾಯ - ಅರ್ಜುನ ವಿಷಾದ ಯೋಗ (ಅರ್ಜುನನ ಶೋಕ)

I ಕುರುಕ್ಷೇತ್ರ ಯುದ್ಧದ ವರ್ಣನೆ : ಶ್ಲೋಕಗಳು 1 ರಿಂದ 27 10

II ಅರ್ಜುನನ ವಿಷಾದ ಮತ್ತು ಶೋಕ : ಶ್ಲೋಕಗಳು 28 ರಿಂದ 47 12

*****

ಎರಡನೆಯ ಅಧ್ಯಾಯ - ಸಾಂಖ್ಯ ಯೋಗ

I ಅರ್ಜುನನ ಶೋಕ ಮತ್ತು ಪರಮಾತ್ಮನಲ್ಲಿ ಶರಣಾಗತಿ (ಶ್ಲೋಕಗಳು 1ರಿಂದ 10) 17

II ಆತ್ಮನ ನಿತ್ಯತೆ, ದೇಹದ ಅನಿತ್ಯತೆ ಮತ್ತು ಇವೆರಡರ ಪರಸ್ಪರ ವೈಲಕ್ಷಣ್ಯ (ಶ್ಲೋಕಗಳು 11 ರಿಂದ 30)

1. ದೇಹ ಮತ್ತು ಆತ್ಮ ಇವುಗಳ ಪರಸ್ಪರ ವೈಲಕ್ಷಣ್ಯ (11 ರಿಂದ 15) 18
2. ಆತ್ಮನ ನಿತ್ಯತೆ – ನಾಶರಹಿತನಾದ ಆತ್ಮನಿಗಾಗಿ ಶೋಕಿಸಬೇಡ (16 ರಿಂದ 25) 20
3. ದೇಹದ ಅನಿತ್ಯತೆ, ನಾಶವುಳ್ಳ ದೇಹದ ವಿನಾಶಕ್ಕಾಗಿ ದುಃಖಿಸಬೇಡ. (26 ರಿಂದ 30) 21

III ಕರ್ಮಯೋಗದ ನಿರೂಪಣೆ (ಶ್ಲೋಕಗಳು 31 ರಿಂದ 53)

1. ಸ್ವಧರ್ಮವನ್ನು ಕರ್ಮಯೋಗವಾಗಿ ಆಚರಿಸು, ಇದೇ ನಿನ್ನ ಕರ್ತವ್ಯ. (31 ರಿಂದ 37) 22

2. ಕರ್ಮಯೋಗದ ವರ್ಣನೆ (38 ರಿಂದ 53)

i) ಕರ್ಮಯೋಗದ ಮಹತ್ವ (38 ರಿಂದ 46) 23

ii) ಕರ್ಮಯೋಗದ ಲಕ್ಷಣ (47 ರಿಂದ 53) 25

IV ಸ್ಥಿತಪ್ರಜ್ಞತೆಯ ನಿರೂಪಣೆ (ಶ್ಲೋಕಗಳು 54 ರಿಂದ 72)

1. ಸ್ಥಿತಪ್ರಜ್ಞತೆಯ ಲಕ್ಷಣ ಮತ್ತು ಅದರ ನಾಲ್ಕು ಅವಸ್ಥೆಗಳು (54ರಿಂದ 58) 27

2. ಸ್ಥಿತಪ್ರಜ್ಞತೆಯ ಕಷ್ಟಸಾಧ್ಯತೆ (59 ರಿಂದ 60) 29

3. ಸ್ಥಿತಪ್ರಜ್ಞತೆಯನ್ನು ಪಡೆಯಲು ಉಪಾಯ- ಪರಮಾತ್ಮ ಚಿಂತನೆ (61) 30

4. ವಿಷಯ ಚಿಂತನೆಯಿಂದ ಪ್ರಾಪ್ತವಾಗುವ ಅನರ್ಥ ಮತ್ತು ಪರಮಾತ್ಮ ಚಿಂತನೆಯಿಂದ ಲಭಿಸುವ ಶ್ರೇಯಸ್ಸು (62 ರಿಂದ 67) 30

5. ಸ್ಥಿತಪ್ರಜ್ಞತೆ. ಅದರಿಂದ ಲಭಿಸುವ ಪರಮಶಾಂತಿ ಮತ್ತು ಆನಂದ (68 ರಿಂದ 72) 31

*****

**ಮೂರನೆಯ ಅಧ್ಯಾಯ - ಕರ್ಮಯೋಗ**

I ಉಪೋದ್ಘಾತ 35

II ಕರ್ಮಯೋಗ, ಜ್ಞಾನಯೋಗ - ಇವೆರಡರಲ್ಲಿ ಯಾವುದು ಶ್ರೇಷ್ಠ? ಅರ್ಜುನನ ಪ್ರಶ್ನೆ (ಶ್ಲೋಕಗಳು 1 ಮತ್ತು 2) 36

III ಕರ್ಮಯೋಗದ ಶ್ರೇಷ್ಠತೆ (ಶ್ಲೋಕಗಳು 3 ರಿಂದ 16)

1. ಜ್ಞಾನಯೋಗಕ್ಕಿಂತ ಕರ್ಮಯೋಗವು ಸುಲಭವಾದ ಮಾರ್ಗ. 37 (ಶ್ಲೋಕಗಳು 3 ರಿಂದ 8)

2. ಯಜ್ಞಾದಿ ಕರ್ಮಗಳನ್ನು ಕರ್ಮಯೋಗವಾಗಿ ಆಚರಿಸುವುದು ಉತ್ತಮ. (ಶ್ಲೋಕಗಳು 9 ರಿಂದ 16) 39

IV ಜ್ಞಾನಯೋಗಿಯೂ ಕರ್ಮಮಾಡಬೇಕು. (ಶ್ಲೋಕಗಳು 17 ರಿಂದ 26)

1. ಮುಕ್ತ ಪುರುಷನು ಮಾತ್ರ ವರ್ಣಾಶ್ರಮ ಕರ್ಮಗಳನ್ನು ಮಾಡಬೇಕಾಗಿಲ್ಲ. (ಶ್ಲೋಕಗಳು 17, 18) 40

2. ಆತ್ಮ ಸಾಕ್ಷಾತ್ಕಾರವಿಲ್ಲದವನಿಗೆ ಕರ್ಮಯೋಗವೇ ಶ್ರೇಷ್ಠವಾದ ಮಾರ್ಗವು. (ಶ್ಲೋಕ 19) 41

3. ಮುಕ್ತ ಪುರುಷನೂ ಕೂಡ ಲೋಕಕಲ್ಯಾಣಕ್ಕಾಗಿ ಕರ್ಮವನ್ನು ಮಾಡಲೇಬೇಕು. (ಶ್ಲೋಕಗಳು 20 ರಿಂದ 26)

1) ಜನಕಾದಿ ಋಷಿಗಳು ಕರ್ಮಮಾಡಿದರು. (ಶ್ಲೋಕಗಳು 20,21) 41

2) (ಪರಮ ಪುರುಷನಾದ ಶ್ರೀಕೃಷ್ಣನಾದ) ನಾನೂ ಕರ್ಮ ಮಾಡುತ್ತಿರುವೆನು. (ಶ್ಲೋಕಗಳು 22 ರಿಂದ 24) 41

3) ಕರ್ಮಯೋಗದ ಅನುಷ್ಠಾನದಲ್ಲಿ ಜ್ಞಾನಿಗೂ ಇತರರಿಗೂ ಇರುವ ವ್ಯತ್ಯಾಸ (ಶ್ಲೋಕಗಳು 25, 26) 42

V ಅಕರ್ತೃತ್ವಾನುಸಂಧಾನದೊಂದಿಗೆ ಭಗವಂತನ ಕೈಂಕರ್ಯವೆಂದು ಕರ್ತವ್ಯ ಕರ್ಮಗಳನ್ನು ಮಾಡಿರಿ. (ಶ್ಲೋಕಗಳು 27ರಿಂದ 32)

1. ತ್ರಿಗುಣಗಳ ಪ್ರೇರಣೆಯಿಂದ ಚೇತನನು ಕರ್ಮವನ್ನು ಮಾಡುತ್ತಾನೆ. (ಶ್ಲೋಕಗಳು 27 ರಿಂದ 29) 43

2. ಪರಮಾತ್ಮನ ನಿಯಮನದಿಂದ ಚೇತನನು ಕರ್ಮ ಮಾಡುತ್ತಾನೆ (ಶ್ಲೋಕಗಳು 30 ರಿಂದ 32) 43

VI ಜ್ಞಾನಯೋಗದ ಕಷ್ಟಸಾಧ್ಯತೆ (ಶ್ಲೋಕಗಳು 33 ರಿಂದ 42)

1. ಜ್ಞಾನಯೋಗಕ್ಕೆ ಇಂದ್ರಿಯ ನಿಗ್ರಹದ ಆವಶ್ಯಕತೆ – ಅದರ ಕಷ್ಟಸಾಧ್ಯತೆ. (ಶ್ಲೋಕಗಳು 33 ರಿಂದ 36) 45

2. ಪಾಪಕಾರ್ಯಗಳನ್ನು ಮಾಡಲು ಕಾಮಕ್ರೋಧಾದಿಗಳ ಪ್ರೇರಣೆಯೇ ಕಾರಣ. (ಶ್ಲೋಕಗಳು 37 ರಿಂದ 40) 47

3. ಕಾಮಕ್ರೋಧಾದಿಗಳನ್ನು ಕರ್ಮಯೋಗದ ಮೂಲಕ ಜಯಿಸಿ
ಜ್ಞಾನಯೋಗಕ್ಕೆ ಅರ್ಹತೆ ಪಡೆಯಬೇಕು.
(ಶ್ಲೋಕಗಳು 41 ರಿಂದ 43) 48

*****

## ನಾಲ್ಕನೆಯ ಅಧ್ಯಾಯ - ಜ್ಞಾನಯೋಗ

I ಕರ್ಮಯೋಗದ ಪರಮ ಪ್ರಾಚೀನತೆ (ಶ್ಲೋಕಗಳು 1 ರಿಂದ 3) 52

II ಭಗವದವತಾರ ವಿಷಯ (ಶ್ಲೋಕಗಳು 4 ರಿಂದ 11) 52

III ಕರ್ಮಯೋಗದ ಜ್ಞಾನಾಕಾರತೆ (ಶ್ಲೋಕಗಳು 12 ರಿಂದ 24)
(ಕರ್ಮಾಂಶ ಜ್ಞಾನಾಂಶಗಳ ವಿವರಣೆ)

1. ಕರ್ಮಯೋಗವನ್ನು ಅನುಷ್ಠಿಸುವವರ ದುರ್ಲಭತೆ (ಶ್ಲೋಕ 12) 54
2. ಕರ್ಮಯೋಗಾಚರಣೆಯಿಂದ ಪಾಪಗಳ ನಿರಸನ
(ಶ್ಲೋಕಗಳು 13 ರಿಂದ 15) 54
3. ಕರ್ಮ ಅಕರ್ಮಗಳ ಅರ್ಥ ವಿವರಣೆ (ಶ್ಲೋಕಗಳು 16, 17) 55
4. ಕರ್ಮದಲ್ಲಿರುವ ಜ್ಞಾನಾಂಶದ ನಿರೂಪಣೆ
(ಶ್ಲೋಕಗಳು 18 ರಿಂದ 24) 56

IV ಕರ್ಮದ ನಾನಾ ಪ್ರಕಾರಗಳು (ಶ್ಲೋಕಗಳು 25 ರಿಂದ 32) 58

V ಕರ್ಮದಲ್ಲಿರುವ ಜ್ಞಾನಾಂಶದ ಪ್ರಧಾನತೆ (ಶ್ಲೋಕಗಳು 33 ರಿಂದ 42) 60

*****

## ಐದನೆಯ ಅಧ್ಯಾಯ - ಕರ್ಮ ಸನ್ಯಾಸಯೋಗ

I ಕರ್ಮಯೋಗ ಮತ್ತು ಜ್ಞಾನಯೋಗ ಇವುಗಳಲ್ಲಿ
ಕರ್ಮಯೋಗದ ಶ್ರೇಷ್ಠತೆ (ಶ್ಲೋಕಗಳು 1 ರಿಂದ 7) 64

II ಕರ್ಮಯೋಗಾನುಷ್ಠಾನಕ್ಕೆ ಅವಶ್ಯಕವಾದ ಜ್ಞಾನಾನುಸಂಧಾನ ಪ್ರಕಾರಗಳು (ಶ್ಲೋಕಗಳು 8 ರಿಂದ 15)

1. ಅಕರ್ತೃತ್ವಾನುಸಂಧಾನ (ಶ್ಲೋಕ 8 ರಿಂದ 10) 66
2. ಫಲಾಸಕ್ತಿರಹಿತತ್ವ (ಶ್ಲೋಕಗಳು 11 ಮತ್ತು 12) 66
3. ಆತ್ಮನಾದ ತಾನು ವಶೀ, ಪ್ರಭು ಮತ್ತು ವಿಭು ಎಂಬ ಭಾವನೆ ಹೊಂದಿರಬೇಕು. (ಶ್ಲೋಕಗಳು 13 ರಿಂದ 15) 67

III ಕರ್ಮಯೋಗದಿಂದ ಉಂಟಾಗುವ ಆತ್ಮಜ್ಞಾನ ವಿಚಾರ (ಶ್ಲೋಕಗಳು 16ರಿಂದ 28) 69

IV ಕರ್ಮಗಳನ್ನು ಭಗವದಾರಾಧನೆ ಎಂದು ಭಕ್ತಿಯಿಂದ ಮಾಡುವುದರಿಂದ ಲಭಿಸುವ ಶಾಂತಿ ಮತ್ತು ಆನಂದ (ಶ್ಲೋಕ 29) 71

*****

ಆರನೆಯ ಅಧ್ಯಾಯ - ಆತ್ಮಸಂಯಮ ಯೋಗ

I ಕರ್ಮಯೋಗಿಯು ಅನುಷ್ಠಿಸುವ ಆತ್ಮ ಚಿಂತನರೂಪ ಧ್ಯಾನಯೋಗಾಭ್ಯಾಸ ಕ್ರಮ (ಶ್ಲೋಕಗಳು 1 ರಿಂದ 28)

1. ಧ್ಯಾನಯೋಗಕ್ಕೆ ಅರ್ಹತೆ ಪಡೆಯುವ ಮೊದಲು ಕರ್ಮಯೋಗಾನುಷ್ಠಾನ ಮಾಡಬೇಕು. (ಶ್ಲೋಕಗಳು 1 ರಿಂದ 4) 74
2. ಧ್ಯಾನ ಯೋಗಾಭ್ಯಾಸಕ್ಕೆ ಮೊದಲು ಮನಸ್ಸನ್ನು ನಿಗ್ರಹಿಸಬೇಕು. (ಶ್ಲೋಕಗಳು 5 ರಿಂದ 6) 75
3. ಧ್ಯಾನಯೋಗವನ್ನು ಆರಂಭಿಸಲು ಯೋಗ್ಯವಾದ ಅವಸ್ಥೆ (ಶ್ಲೋಕಗಳು 7 ರಿಂದ 9) 76
4. ಧ್ಯಾನಯೋಗವನ್ನು ಅನುಷ್ಠಿಸುವ ಕ್ರಮ (ಶ್ಲೋಕಗಳು 10ರಿಂದ 18) 76

i) ಶರೀರಕ್ಕೆ ಸಂಬಂಧ ಪಟ್ಟ ಅಭ್ಯಾಸಗಳು

ii) ಮನಸ್ಸಿಗೆ ಸಂಬಂಧಪಟ್ಟ ಅಭ್ಯಾಸಗಳು

iii) ಇತರ ಅಭ್ಯಾಸಗಳು ಮತ್ತು ನಿಯಮಗಳು

5. ಆತ್ಮ ಚಿಂತನ ಮಾಡುವ ಯೋಗಿಯಲ್ಲಿ ಉಂಟಾಗುವ ಮಾನಸಿಕ ಪರಿವರ್ತನೆ (ಶ್ಲೋಕಗಳು 19 ರಿಂದ 23) 78

6. ಯೋಗಿಯು ಧ್ಯೇಯ ವಸ್ತುವಿನಲ್ಲಿ ಮನಸ್ಸನ್ನು ನಿಲ್ಲಿಸುವ ಕ್ರಮ. (ಶ್ಲೋಕಗಳು 24 ರಿಂದ 26) 79

7. ಆತ್ಮ ಚಿಂತನೆ ಮಾಡುವ ಯೋಗಿಗೆ ಲಭಿಸುವ ನಿರತಿಶಯ ಆನಂದ (ಶ್ಲೋಕಗಳು 27 ಮತ್ತು 28) 80

II ಧ್ಯಾನಯೋಗ ನಿಷ್ಠರಾದ ಕರ್ಮಯೋಗಿಗಳ ನಾಲ್ಕು ಅವಸ್ಥೆಗಳು (ಶ್ಲೋಕಗಳು 29 ರಿಂದ 32) 80

III ಧ್ಯಾನಯೋಗಕ್ಕಾಗಿ ಮನಸ್ಸನ್ನು ಜಯಿಸಲು ಅವಶ್ಯಕವಾದ ಸಾಧನೆಗಳು, ಅಭ್ಯಾಸ ವೈರಾಗ್ಯಾದಿಗಳು (ಶ್ಲೋಕಗಳು 33 ರಿಂದ 36) 82

IV ಧ್ಯಾನಯೋಗದ ಮಹಾತ್ಮೆ (ಶ್ಲೋಕಗಳು 37 ರಿಂದ 46) 83

V ಆತ್ಮ ಚಿಂತನರೂಪ ಧ್ಯಾನಯೋಗಕ್ಕಿಂತ ಪರಮಾತ್ಮಚಿಂತನರೂಪ ಭಕ್ತಿ ಯೋಗದ ಶ್ರೇಷ್ಠತೆ (ಶ್ಲೋಕ 47) 85

*****

**ಏಳನೆಯ ಅಧ್ಯಾಯ - ಜ್ಞಾನ ವಿಜ್ಞಾನ ಯೋಗ**

**ಉಪೋದ್ಘಾತ :**

I ಪರಮಾತ್ಮನ ನಿಜಸ್ವರೂಪ (ಶ್ಲೋಕಗಳು 1 ರಿಂದ 16) 87

1. ಭಕ್ತಿಯೋಗಾಭ್ಯಾಸದಲ್ಲಿ ನಿರತನಾಗು (ಶ್ಲೋಕಗಳು 1 ರಿಂದ 3) 89

2. ಪರಮ ಪುರುಷನ ನಿಜಸ್ವರೂಪ (ಶ್ಲೋಕಗಳು 4 ರಿಂದ 12) 90

3. ಪ್ರಕೃತಿ ಸಂಬಂಧದಿಂದ ಪರಮಾತ್ಮನ ನಿಜಸ್ವರೂಪವು ಮರೆಯಾಗಿರುವಿಕೆ (ಶ್ಲೋಕ 13) 92

4. ಮಾಯಾ ನಿವೃತ್ತಿಗಾಗಿ ಭಗವಂತನಲ್ಲಿ ಶರಣಾಗತಿ (ಶ್ಲೋಕ 14) 93

5. ಭಗವದುಪಾಸಕರಭೇದಗಳು (ಶ್ಲೋಕಗಳು 15 ಮತ್ತು 16)

1) ಭಗವಂತನನ್ನು ಭಜಿಸದವರು (ಶ್ಲೋಕ 15) 93

2) ಭಗವಂತನನ್ನು ಭಜಿಸುವ ಭಕ್ತರು (ಶ್ಲೋಕ 16) 94

II. ಉಪಾಸಕರಲ್ಲಿ ಜ್ಞಾನಿಯ ಸರ್ವೋತ್ಕೃಷ್ಟತೆ (ಶ್ಲೋಕಗಳು 17 ರಿಂದ 30) 95

1) ಜ್ಞಾನಿಯ ಮಹಿಮೆ

2) ಜ್ಞಾನಿಯದುರ್ಲಭತೆ

3) ಜ್ಞಾನಿಯ ದುರ್ಲಭತೆಗೆ ಕಾರಣ

i) ಅನ್ಯದೇವತಾ ಪ್ರಾರ್ಥನೆ

ii) ಭಗವಂತನ ವಿಭವ ಸ್ವರೂಪವನ್ನು ಅರಿಯದಿರುವಿಕೆ

iii) ಪೂರ್ವಜನ್ಮದ ವಾಸನೆಯಿಂದ ಹುಟ್ಟುವಾಗಲೇ ಸಂಮೋಹ ಹೊಂದಿರುವಿಕೆ

4) ಪೂರ್ವಜನ್ಮದ ವಾಸನೆಯು ಹೋಗಿ ಜ್ಞಾನಿಯಾಗಲು ಉಪಾಯ–ಪುಣ್ಯ ಕರ್ಮಗಳನ್ನು ಮಾಡುವುದು.

*****

ಎಂಟನೆಯ ಅಧ್ಯಾಯ ಅಕ್ಷರ ಬ್ರಹ್ಮಯೋಗ

ಉಪೋದ್ಘಾತ : 101

I ಭಕ್ತರು ಅರಿಯಬೇಕಾದ ವಿಷಯಗಳು (ಬ್ರಹ್ಮ ಅಧ್ಯಾತ್ಮ ಕರ್ಮ, ಅಧಿಭೂತ, ಅಧಿದೈವ ಮತ್ತು ಅಧಿಯಜ್ಞ– ಎಂಬ ಪದಗಳ ಅರ್ಥ ವಿವರಣೆ) (ಶ್ಲೋಕಗಳು 1 ರಿಂದ 4) 102

II ಭಕ್ತರ ಅಂತ್ಯಕಾಲ ಸ್ಮೃತಿಯ ಪ್ರಭಾವ (ಶ್ಲೋಕಗಳು 5 ರಿಂದ 8) 102

III ತ್ರಿವಿಧಭಕ್ತರ ಉಪಾಸನ ಕ್ರಮ (ಶ್ಲೋಕಗಳು 9 ರಿಂದ 15)

1. ಐಶ್ವರ್ಯಾರ್ಥಿಯು ಧ್ಯಾನಿಸುವ ಕ್ರಮ (ಶ್ಲೋಕಗಳು 9ರಿಂದ 10) 103

2. ಕೈವಲ್ಯಾರ್ಥಿಯು (ಜಿಜ್ಞಾಸುವು) ಧ್ಯಾನಿಸುವ ಕ್ರಮ (ಶ್ಲೋಕಗಳು 11 ರಿಂದ 13) 104

3. ಜ್ಞಾನಿಯಾದ ಭಕ್ತನ ಭಗವದುಪಾಸನ ಕ್ರಮ (ಶ್ಲೋಕಗಳು 14 ರಿಂದ 15) 104

IV ತ್ರಿವಿಧ ಭಕ್ತರು ಹೊಂದುವ ಫಲ (ಶ್ಲೋಕಗಳು 16 ರಿಂದ 22)

1. ಐಶ್ವರ್ಯಾರ್ಥಿಗಳು ಹೊಂದುವ ಫಲ (ಶ್ಲೋಕಗಳು 16-19) 105

2. ಜಿಜ್ಞಾಸುಗಳು ಹೊಂದುವ ಫಲ (ಶ್ಲೋಕಗಳು 20-21) 105

3. ಜ್ಞಾನಿಯಾದ ಭಕ್ತನು ಪಡೆಯುವ ಸರ್ವೋತ್ಕೃಷ್ಟವಾದ ಫಲ (ಶ್ಲೋಕ 22) 106

V ಯೋಗಿಗಳು ಕಾಲವಾದ ಮೇಲೆ ಹೋಗುವ ಎರಡು ವಿಧವಾದ ಮಾರ್ಗಗಳು (ಶ್ಲೋಕಗಳು 23 ರಿಂದ 26) 107

ಶುಕ್ಲಗತಿ –ಅರ್ಚಿರಾದಿ ಮಾರ್ಗ

ಕೃಷ್ಣಗತಿ – ಧೂಮಾದಿ ಮಾರ್ಗ

VI ಭಕ್ತನಾದ ಯೋಗಿಯ ಪರಮಪದ ಪ್ರಾಪ್ತಿ (ಶ್ಲೋಕಗಳು 27-28) 108

*****

ಒಂಬತ್ತನೆಯ ಅಧ್ಯಾಯ-ರಾಜ ವಿದ್ಯಾರಾಜಗುಹ್ಯಯೋಗ

ಉಪೋದ್ಘಾತ :

I ಭಕ್ತಿಯೋಗವು ಒಂದು ಶ್ರೇಷ್ಠವಾದ ರಾಜವಿದ್ಯೆಯು. (ಶ್ಲೋಕಗಳು 1 ರಿಂದ 3)**107**101 108

II ಉಪಾಸ್ಯನಾದ ಪರಮಾತ್ಮನ ಮಹಾತ್ಮೆ (ಶ್ಲೋಕಗಳು 4 ರಿಂದ 10) 109

III ಪರಮಾತ್ಮನ ಅವತಾರಗಳ ಶ್ರೇಷ್ಠತೆ (ಶ್ಲೋಕಗಳು 11ರಿಂದ 13) 110

IV ಭಗವದ್ಭಕ್ತರಾದ ಮಹಾತ್ಮರ ವಿಶೇಷತೆ (ಶ್ಲೋಕಗಳು 14 ರಿಂದ 33) 110

V ಭಕ್ತಿಯೋಗದ (ಭಕ್ತಿರೂಪ ಉಪಾಸನೆಯ) ನಿರೂಪಣೆ
(25ನೇ ಶ್ಲೋಕ ಮತ್ತು 34ನೆಯ ಶ್ಲೋಕ) 117

*****

ಹತ್ತನೆಯ ಅಧ್ಯಾಯ – ವಿಭೂತಿ ಯೋಗ

ಉಪೋದ್ಘಾತ :

I ಭಗವಂತನ ಅನಂತವಾದ ಕಲ್ಯಾಣಗುಣಗಳ ವಿವರಣೆ. 122
(ಶ್ಲೋಕಗಳು 1 ರಿಂದ 41)

1. ಭಗವತ್ ಸ್ವಭಾವ ಅನುಸಂಧಾನದಿಂದ ಪಾಪಗಳು ನಿರಸನವಾಗಿ
ಭಕ್ತಿಯು ಉತ್ಪನ್ನವಾಗುತ್ತದೆ. (ಶ್ಲೋಕಗಳು 1 ರಿಂದ 3) 122

2. ಉತ್ಪನ್ನ[illegible]ಕ್ತಿಯು ಭಗವಂತನ ವಿಸ್ತಾರವಾದ ಐಶ್ವರ್ಯ ಮತ್ತು
ಆನಂತ[illegible]ಲ್ಯಾಣಗುಣಗಳ ಚಿಂತನದಿಂದ ವೃದ್ಧಿಯಾಗುತ್ತದೆ. 123
(ಶ್ಲೋಕಗ[illegible] ರಿಂದ 7)

3. ಭಕ್ತಿಯು ವೃದ್ಧಿಯಾಗಿ, ಭಗವಂತನನ್ನು ಅನವರತ ಪ್ರೀತಿಯಿಂದ
ಭಜಿಸುವ ಭಕ್ತರಿಗೆ ಪರಮಾತ್ಮನೇ ಬುದ್ಧಿಯೋಗವನ್ನು
(ಭಕ್ತಿರೂಪಾಪನ್ನ ಜ್ಞಾನವನ್ನು) ಕೊಟ್ಟು ಅನುಗ್ರಹಿಸುತ್ತಾನೆ. 124
(ಶ್ಲೋಕಗಳು 8ರಿಂದ 11)

4. ಭಗವಂತನ ವಿಭೂತಿಗಳನ್ನು ವಿಸ್ತಾರವಾಗಿ ತಿಳಿಸುವಂತೆ ಅರ್ಜುನನ
ಪ್ರಾರ್ಥನೆ (ಶ್ಲೋಕಗಳು 12 ರಿಂದ 18) 125

5. ಭಗವಂತನು ತನ್ನ ಕೆಲವು ಮುಖ್ಯವಾದ ವಿಭೂತಿಗಳನ್ನು ತಿಳಿಸುತ್ತಾನೆ
(ಶ್ಲೋಕಗಳು 19 ರಿಂದ 41) 127

II ಜಗತ್ತಿನಲ್ಲಿರುವ ಸಮಸ್ತ ಚಿದಚಿದ್ವಸ್ತುಗಳೆಲ್ಲವೂ ಭಗವಂತನ ಅಧೀನದಲ್ಲಿವೆ ಎಂಬುದನ್ನು ತಿಳಿಸುತ್ತಾನೆ. (ಶ್ಲೋಕ 42) 129

*****

**ಹನ್ನೊಂದನೆಯ ಅಧ್ಯಾಯ – ವಿಶ್ವರೂಪ ದರ್ಶನ ಯೋಗ**

**ಉಪೋದ್ಘಾತ : 132**

I ಅರ್ಜುನನಿಗೆ ಪರಮಾತ್ಮನ ಅನುಗ್ರಹದಿಂದ ದಿವ್ಯಚಕ್ಷುಸ್ಸಿನ ಮೂಲಕ ವಿಶ್ವರೂಪದರ್ಶನ ಪ್ರಾಪ್ತಿ. (ಶ್ಲೋಕಗಳು 1 ರಿಂದ 51)

1. ವಿಶ್ವರೂಪದರ್ಶನಕ್ಕಾಗಿ ಅರ್ಜುನನ ಪ್ರಾರ್ಥನೆ (ಶ್ಲೋಕಗಳು 1 ರಿಂದ 4) 132
2. ವಿಶ್ವರೂಪ ದರ್ಶನ (ಶ್ಲೋಕಗಳು 5 ರಿಂದ 8) 133
3. ವಿಶ್ವರೂಪದ ವರ್ಣನೆ (ಶ್ಲೋಕಗಳು 9 ರಿಂದ 13) 133
4. ವಿಶ್ವರೂಪದರ್ಶನದಿಂದ ಭೀತನಾದ ಅರ್ಜುನನ ಪ್ರಾರ್ಥನೆ (ಶ್ಲೋಕಗಳು 14 ರಿಂದ 31) 134
5. ಭಗವಂತನ ಉಪದೇಶ (ಶ್ಲೋಕಗಳು 32 ರಿಂದ 34) 137
6. ಪರಮಾತ್ಮನ ಸೌಮ್ಯರೂಪ ದರ್ಶನಕ್ಕಾಗಿ ಅರ್ಜುನನ ಪ್ರಾರ್ಥನೆ (ಶ್ಲೋಕಗಳು 35 ರಿಂದ 46) 138
7. ಪರಮಾತ್ಮನು ತನ್ನ ಮೊದಲಿನ ರೂಪವನ್ನು ತೋರಿಸುವುದು (ಶ್ಲೋಕಗಳು 47 ರಿಂದ 51) 141

II ತನ್ನನ್ನು ಅರಿಯಲು ಮತ್ತು ಹೊಂದಲು ಭಕ್ತಿ ಒಂದೇ ಉಪಾಯ – ಎಂಬ ಪರಮಾತ್ಮನ ಸಾರವಾದ ಉಪದೇಶ (ಶ್ಲೋಕಗಳು 52 ರಿಂದ 55) 141

*****

## ಹನ್ನೆರಡನೆಯ ಅಧ್ಯಾಯ - ಭಕ್ತಿಯೋಗ


| | | |
|---|---|---|
| I | ಭಕ್ತಿಯೋಗದ ಶ್ರೇಷ್ಠತೆ (ಶ್ಲೋಕಗಳು 1 ರಿಂದ 7) | 145 |
| II | ಭಕ್ತಿಯೋಗದ ಅಭ್ಯಾಸಗಳು (ಶ್ಲೋಕಗಳು 8 ರಿಂದ 10) | 146 |
| III | ಭಕ್ತಿಯೋಗಾಚರಣೆಗೆ ಅಶಕ್ತನಾದವನಿಗೆ ಆತ್ಮ ಚಿಂತನೆಯಿಂದ ಕೂಡಿದ ಕರ್ಮಯೋಗಾಭ್ಯಾಸವೇ ಉಚಿತವಾದುದು. (ಶ್ಲೋಕಗಳು 11ಮತ್ತು 12) | 147 |
| IV | ಕರ್ಮಯೋಗನಿಷ್ಠನಾದ ಭಕ್ತನಿಗೆ ಇರಬೇಕಾದ ಗುಣಪ್ರಕಾರಗಳು (ಶ್ಲೋಕಗಳು 13ರಿಂದ 19) | 148 |
| V | ಭಕ್ತರಲ್ಲಿ ಭಗವಂತನಿಗಿರುವ ಅತ್ಯಂತ ಪ್ರೀತಿ (ಶ್ಲೋಕ 20) | 151 |


*****

## ಹದಿಮೂರನೆಯ ಅಧ್ಯಾಯ -ಕ್ಷೇತ್ರಕ್ಷೇತ್ರಜ್ಞ ಯೋಗ


| | | |
|---|---|---|
| I | ಶರೀರ ಮತ್ತು ಜೀವಾತ್ಮರ, ಕ್ಷೇತ್ರ ಮತ್ತು ಕ್ಷೇತ್ರಜ್ಞರ ವಿಚಾರ (ಶ್ಲೋಕಗಳು 1 ರಿಂದ 4) | 154 |
| II | ಕ್ಷೇತ್ರದ ಸ್ವರೂಪ (ಶ್ಲೋಕಗಳು 5 ರಿಂದ 6) | 155 |
| III | ಆತ್ಮಸ್ವರೂಪಜ್ಞಾನ ಪಡೆಯಲು ಬೇಕಾದ ಜ್ಞಾನಾಭ್ಯಾಸಗಳು. (ಶ್ಲೋಕಗಳು 7ರಿಂದ 11) | 156 |
| IV | ಆತ್ಮಸ್ವರೂಪ ಶೋಧನೆ (ಶ್ಲೋಕಗಳು 12ರಿಂದ 18) | 157 |
| V | ಆತ್ಮನಿಗೆ ಶರೀರ ಸಂಬಂಧವು ಉಂಟಾಗಿ ಬಂಧನ ಬರುವುದಕ್ಕೆ ಕಾರಣ (ಸತ್ವರಜ ಸ್ತಮೋಗುಣಗಳ ಸಂಬಂಧವೇ ಕಾರಣ) (ಶ್ಲೋಕಗಳು 19ರಿಂದ 23) | 159 |
| VI | ದೇಹವೇ ಬೇರೆ, ಆತ್ಮನೇ ಬೇರೆ ಎಂಬ ವಿವೇಕ ಅನುಸಂಧಾನ ಕ್ರಮ (ಶ್ಲೋಕಗಳು 24 ರಿಂದ 34) | 160 |


*****

## ಹದಿನಾಲ್ಕನೆಯ ಅಧ್ಯಾಯ - ಗುಣತ್ರಯ ವಿಭಾಗ ಯೋಗ


I ಸತ್ವರಜಸ್ತಮೋ ಗುಣಗಳು ಚೇತನನಿಗೆ ಶರೀರ ಸಂಬಂಧದ ಮೂಲಕ ಬಂಧನವನ್ನು ಉಂಟುಮಾಡುವ ಪ್ರಕಾರ (ಶ್ಲೋಕಗಳು 1 ರಿಂದ 8) 164

II ಸತ್ವರಜಸ್ತಮೋ ಗುಣಗಳು ಕರ್ತೃತ್ವಕ್ಕೆ ಕಾರಣವಾಗಿರುವಿಕೆ (ಶ್ಲೋಕಗಳು 9 ರಿಂದ 20) 165

III ಗುಣಾತೀತನಾದ ಪುರುಷನ ಆಚಾರ ವ್ಯವಹಾರಾದಿಗಳು (ಶ್ಲೋಕಗಳು 21ರಿಂದ 25) 167

IV ಸತ್ವಾದಿ ತ್ರಿಗುಣಗಳ ನಿವೃತ್ತಿಗೂ, ಗತಿತ್ರಯಗಳ ಪ್ರಾಪ್ತಿಗೂ ಪರಮಾತ್ಮನಲ್ಲಿ ಶರಣಾಗತಿಯೇ ಉಪಾಯ (ಶ್ಲೋಕಗಳು 26 ಮತ್ತು 27) 169


*****

## ಹದಿನೈದನೆಯ ಅಧ್ಯಾಯ - ಪುರುಷೋತ್ತಮ ಯೋಗ


I ಸಂಸಾರಕ್ಕೂ ಅಶ್ವತ್ಥ ವೃಕ್ಷಕ್ಕೂ ಇರುವ ಹೋಲಿಕೆ:- (ಸಂಸಾರವು ಅಶ್ವತ್ಥ ವೃಕ್ಷದಂತೆ ಮೇಲೆ ಹುಟ್ಟಿ ಅಲ್ಲಿಂದ ಇಳಿದು ಕೆಳಗೆ ಹರಡಿಕೊಂಡಿದೆ) (ಶ್ಲೋಕಗಳು 1 ಮತ್ತು 2) 171

II ಸಂಸಾರವೆಂಬ ಅಶ್ವತ್ಥವೃಕ್ಷವನ್ನು ಕತ್ತರಿಸಲು ಉಪಾಯ - ಭಗವಂತನಲ್ಲಿ ಶರಣಾಗತಿ (ಶ್ಲೋಕಗಳು 3 ರಿಂದ 6) 173

III ಬದ್ಧ, ಮುಕ್ತ, ಜೀವಾತ್ಮರ ವರ್ಣನೆ (ಶ್ಲೋಕಗಳು 7ರಿಂದ 11) 174
(ಪ್ರಕೃತಿ ಸಂಬಂಧದಿಂದ ಕೂಡಿದವರಾಗಿ ಸಂಸಾರದಲ್ಲಿ ಬಂಧಿತರಾಗಿರುವವರೇ ಬದ್ಧರು - ಪ್ರಕೃತಿ ಸಂಬಂಧವನ್ನು ಕಳೆದುಕೊಂಡು ಸಂಸಾರದಿಂದ ಬಿಡುಗಡೆ ಹೊಂದಿರುವವರೇ ಮುಕ್ತರು.)

IV ಉತ್ತಮ ಪುರುಷನಾದ ಪರಮಾತ್ಮನ ಸ್ವರೂಪದ ನಿರೂಪಣೆ (ಶ್ಲೋಕಗಳು 12 ರಿಂದ 20) 175

(ಪರಮಾತ್ಮನು ಬದ್ಧ ಮತ್ತು ಮುಕ್ತ ಪುರುಷರಿಗಿಂತ ಅನ್ಯನೂ,
ಅವರನ್ನು ವಿಭೂತಿಯಾಗಿ ಹೊಂದಿ ಅವರನ್ನು
ಆಳುವವನೂ ಆಗಿ ಉತ್ತಮಪುರುಷನೆನಿಸಿ ಕೊಂಡಿದ್ದಾನೆ).

*****

ಹದಿನಾರನೆಯ ಅಧ್ಯಾಯ – ದೈವಾಸುರ ಸಂಪದ್ವಿಭಾಗಯೋಗ

I ದೈವೀ ಸಂಪತ್ತನ್ನು ಪಡೆದಿರುವವರ ಗುಣಗಳು
(ಶ್ಲೋಕಗಳು 1 ರಿಂದ 3) 179

II ಆಸುರೀ ಸಂಪತ್ತನ್ನು ಪಡೆದಿರುವವರ ಗುಣಗಳು.
(ಶ್ಲೋಕಗಳು 4 ರಿಂದ 18) 180

III ಪರಮಾತ್ಮನು ಅಸುರ ಸ್ವಭಾವವುಳ್ಳವರನ್ನು
ಅಸುರಯೋನಿಗಳಲ್ಲಿ ಹುಟ್ಟಿಸಿ ಅಧೋಗತಿ ಹೊಂದುವಂತೆ
ಮಾಡುತ್ತಾನೆ. (ಶ್ಲೋಕಗಳು 19 ರಿಂದ 20) 183

IV ಅಸುರ ಸ್ವಭಾವಕ್ಕೆ ಮೂಲಕಾರಣ ಕಾಮ,
ಕ್ರೋಧ, ಲೋಭಾದಿಗಳು ಮತ್ತು ಶಾಸ್ತ್ರಗಳ ಅನಾದರಣೆ.
(ಶ್ಲೋಕಗಳು 21 ರಿಂದ 23) 184

V ಕಾರ್ಯ ಅಕಾರ್ಯ ವ್ಯವಸ್ಥೆಗಳಿಗೆಲ್ಲಾ ಶಾಸ್ತ್ರವೇ ಪ್ರಮಾಣವು.
(ಶ್ಲೋಕ 24) (ಶಾಸ್ತ್ರಗಳಲ್ಲಿ ತಿಳಿಸಿರುವುದನ್ನು ಸರಿಯಾಗಿ
ಅರಿತು ಕರ್ಮಗಳನ್ನು ಆಚರಿಸಬೇಕು) 184

*****

ಹದಿನೇಳನೆಯ ಅಧ್ಯಾಯ – ಶ್ರದ್ಧಾತ್ರಯ ವಿಭಾಗಯೋಗ

I ಶಾಸ್ತ್ರವಿಧಿತ ಯಜ್ಞಯಾಗಾದಿ ಸಮಸ್ತ ಕರ್ಮಗಳ ಆಚರಣೆಯಲ್ಲಿ
ಇರುವ ಸಾತ್ವಿಕ, ರಾಜಸ, ತಾಮಸ ಎಂಬ ತ್ರಿವಿಧ ಶ್ರದ್ಧೆಗಳ ವಿವರಣೆ.
(ಶ್ಲೋಕಗಳು 1 ರಿಂದ 4) 187

II ಶಾಸ್ತ್ರವಿಹಿತವಲ್ಲದ ಕರ್ಮಗಳು ಅನರ್ಥ ಫಲವುಳ್ಳದ್ದಾಗಿವೆ.
(ಶ್ಲೋಕಗಳು 5ರಿಂದ 6) 188

III ಸಾತ್ವಿಕ, ರಾಜಸ, ತಾಮಸ ಆಹಾರಗಳ ವರ್ಣನೆ.
(ಶ್ಲೋಕಗಳು 7 ರಿಂದ 10) 188

IV ತ್ರಿವಿಧ ಯಾಗಗಳ ವರ್ಣನೆ. (ಶ್ಲೋಕಗಳು 11 ರಿಂದ 13) 189

V ತ್ರಿವಿಧ ತಪಸ್ಸುಗಳ ವರ್ಣನೆ. (ಶ್ಲೋಕಗಳು 14ರಿಂದ 19) 190

VI ತ್ರಿವಿಧ ದಾನಗಳ ವರ್ಣನೆ. (ಶ್ಲೋಕಗಳು 20 ರಿಂದ 22) 192

VII ಯಜ್ಞಾದಿ ಕರ್ಮಗಳೆಲ್ಲವೂ "ಓಂ ತತ್ ಸತ್" ಎಂಬ
ಶಬ್ದಗಳೊಂದಿಗೆ ಆಚರಿಸಲ್ಪಟ್ಟರೆ ಅತ್ಯುತ್ತಮವು.
(ಶ್ಲೋಕಗಳು 23 ರಿಂದ 28) 193

*****

ಹದಿನೆಂಟನೆಯ ಅಧ್ಯಾಯ - ಮೋಕ್ಷಸನ್ಯಾಸ ಯೋಗ

I ತ್ಯಾಗ ಮತ್ತು ಸನ್ಯಾಸ ಎರಡೂ ಒಂದೇ ಎಂಬ
ಪ್ರತಿಪಾದನೆ ಮತ್ತು ಅವೆರಡರ ಸ್ವರೂಪ ವಿವರಣೆ.
(ಶ್ಲೋಕಗಳು 1 ರಿಂದ 12) 197

II ಸರ್ವೇಶ್ವರನಾದ ಪರಮಾತ್ಮನಲ್ಲಿ ಸಮಸ್ತ ಕರ್ಮಗಳ
ಕರ್ತೃತ್ವಾನುಸಂಧಾನದ ನಿರೂಪಣೆ.
(ಶ್ಲೋಕಗಳು 13ರಿಂದ 17) 200

III ಕರ್ಮಾಚರಣೆಯಲ್ಲಿ ತ್ರಿಗುಣಗಳ ಕಾರ್ಯದ ವರ್ಣನೆ ಮತ್ತು
ಸತ್ತ್ವಗುಣದ ಉಪಾದೇಯತ್ವ.
(ಶ್ಲೋಕಗಳು 18 ರಿಂದ 40) 201

IV ವರ್ಣಾಶ್ರಮೋಚಿತವಾದ ಕರ್ಮಗಳನ್ನು ಭಗವದಾರಾಧನ
ರೂಪವಾಗಿ ಮಾಡುವುದರಿಂದ ಭಗವತ್ಪ್ರಾಪ್ತಿ ಉಂಟಾಗುವಿಕೆ.
(ಶ್ಲೋಕ 41 ರಿಂದ 60) 207

V ಗೀತಾಶಾಸ್ತ್ರದ ಪ್ರಕಾರ ಭಗವತ್ಪ್ರಾಪ್ತಿಗೆ ಭಕ್ತಿಯೇ ಉಪಾಯ; ಅದಕ್ಕೆ ಅಡ್ಡಿಯಾಗಿರುವ ಪಾಪಗಳ ನಿವಾರಣೆಗೆ ಭಗವಂತನಲ್ಲಿ ಶರಣಾಗತಿಯೇ ಉಪಾಯ ಎಂಬ ಭಗವಂತನ ಚರಮ ಸಂದೇಶ- ಗೀತಾಶಾಸ್ತ್ರದ ಸಾರ. (ಶ್ಲೋಕಗಳು 61ರಿಂದ 66) 213

VI ಭಗವದ್ಗೀತೆಯ ಫಲಶ್ರುತಿ (ಶ್ಲೋಕಗಳು 67 ರಿಂದ 78) 219

*****

ಭಾಗ – ಎರಡು

**ಭಗವದ್ಗೀತೆಯಲ್ಲಿ ಶ್ರೀಕೃಷ್ಣನ ಸಂದೇಶ** 223

ಲೇಖಕಿ : ಶ್ರೀಮತಿ ಎಂ. ಡಿ. ವೇದವಲ್ಲಿ

## ಭಾಗ - ಒಂದು

ಲೇಖಕಿ : ಎಂ. ಎ. ಸಿಂಗಮ್ಮ

# ಹಿಂದೂ ಮತದಲ್ಲಿ ಭಗವದ್ಗೀತೆಯ ಶ್ರೇಷ್ಠತೆ

ಹಿಂದೂ ಮತವು ಯಾವ ಒಬ್ಬ ಮಹಾಪುರುಷರಿಂದ ಸ್ಥಾಪಿಸಲ್ಪಟ್ಟ ಮತವಲ್ಲ. ಬೌದ್ಧ ಮತವನ್ನು ಬುದ್ಧ ಭಗವಾನರೂ, ಕ್ರೈಸ್ತ ಮತವನ್ನು ಏಸುಕ್ರಿಸ್ತ ಮಹಾಪುರುಷರೂ, ಇಸ್ಲಾಂ ಮತವನ್ನು ಮಹಮದ್ ಪೈಗಂಬರ್ ಮಹಾಪುರುಷರೂ ಸ್ಥಾಪಿಸಿದಂತೆ ಹಿಂದೂ ಮತವನ್ನು ಯಾರೂ ಸ್ಥಾಪಿಸಲಿಲ್ಲ. ಅನಾದಿಯೂ, ಅಪೌರುಷೇಯವೂ ಆದ ಶ್ರುತಿಯೇ ಇದಕ್ಕೆ ಆಧಾರ. ಈ ಶ್ರುತಿಗಳೊಂದಿಗೆ ಅವುಗಳ ಆಧಾರದಿಂದ ಹುಟ್ಟಿದ ಸ್ಮೃತಿ, ಇತಿಹಾಸ, ಪುರಾಣ, ಆಗಮ ಮತ್ತು ದರ್ಶನಾದಿಗಳು ಹಿಂದೂ ಮತಕ್ಕೆ ಆಧಾರ ಗ್ರಂಥಗಳಾಗಿವೆ.

**ಶ್ರುತಿಗಳು:-** ಮಹಾಋಷಿಗಳು ತಪಸ್ಸು ಮಾಡುತ್ತಿದ್ದ ಕಾಲದಲ್ಲಿ ಅವರಿಗೆ ಕೇಳಿಸಿದ ದಿವ್ಯ ತತ್ವಾಂಶಗಳೇ ಶ್ರುತಿಗಳು. 'ಶ್ರುತಂ' - ಎಂದರೆ ಕೇಳಲ್ಪಟ್ಟದ್ದು ಎಂದು ಅರ್ಥ. ಈ ಶ್ರುತಿ ವಾಕ್ಯಗಳೇ ವೇದಗಳು. ಹೀಗೆ ವೇದಗಳು ಪುರಾತನ ಕಾಲದ ಋಷಿಗಳು ತಮ್ಮ ಯೋಗಧ್ಯಾನಕಾಲದಲ್ಲಿ ಕೇಳಿದ ದಿವ್ಯಶಬ್ದ ರಾಶಿಗಳಾಗಿರುವುದರಿಂದ, ಅವು ಅಪೌರುಷೇಯವೂ, ಅನಾದಿಯೂ ಆದ ಪ್ರಮಾಣಶಾಸ್ತ್ರವೆನಿಸಿಕೊಂಡಿವೆ. ವೇದದಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣ ವೇದವೆಂದು ನಾಲ್ಕುಭಾಗಗಳಿವೆ. ಇವುಗಳು ಮನುಷ್ಯನು ತಿಳಿಯಬೇಕಾದ ತತ್ವ, ಹಿತ, ಪುರುಷಾರ್ಥಗಳನ್ನು ತಿಳಿಸುತ್ತವೆ. ಪ್ರತಿಯೊಂದು ವೇದದಲ್ಲಿಯೂ ಮಂತ್ರ, ಬ್ರಾಹ್ಮಣ ಮತ್ತು ಉಪನಿಷತ್ತುಗಳೆಂಬ ಮೂರು ಭಾಗಗಳಿವೆ. ವೇದದ ಪೂರ್ವಭಾಗವಾದ ಮಂತ್ರ ಬ್ರಾಹ್ಮಣಗಳು, ಧರ್ಮ, ಅರ್ಥ ಮತ್ತು ಕಾಮ ಪುರುಷಾರ್ಥಗಳಿಗೆ ಸಾಧನವಾದ ಕರ್ಮಗಳನ್ನು ಹೇಳುತ್ತವೆ. ವೇದದ ಉತ್ತರ ಭಾಗವಾದ ಉಪನಿಷತ್ತುಗಳು ಬ್ರಹ್ಮನ ಸ್ವರೂಪ, ರೂಪ, ಗುಣ, ವಿಭೂತಿಗಳನ್ನೂ, ಮೋಕ್ಷ ಪುರುಷಾರ್ಥಕ್ಕೆ ಬೇಕಾದ ಯೋಗಸಾಧನೆಗಳನ್ನೂ ತಿಳಿಸುತ್ತವೆ. ವೇದದಲ್ಲಿ ಬಹಳ ಮುಖ್ಯವಾದುದು ಉಪನಿಷತ್ತು. ಉಪನಿಷತ್ತುಗಳಿಗೆ ವೇದಾಂತಗಳೆಂದೂ ಹೆಸರು.

ಅನೇಕ ಉಪನಿಷತ್ತುಗಳಿವೆ. ಅವುಗಳಲ್ಲಿ ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ಐತರೇಯ, ತೈತ್ತಿರೀಯ, ಛಾಂದೋಗ್ಯ, ಬೃಹದಾರಣ್ಯಕ, ಕೌಶೀತಕೀ ಮತ್ತು ಶ್ವೇತಾಶ್ವತರ ಎಂಬ ಉಪನಿಷತ್ತುಗಳು ಬಹಳ ಮುಖ್ಯವಾದುವುಗಳು. ಇವುಗಳಲ್ಲಿ ಹಿಂದೂ ಮತದ ಮುಖ್ಯ ತತ್ವಗಳೆಲ್ಲಾ ಅಡಗಿವೆ.

ಈ ಉಪನಿಷತ್ತಿನ ಆಧಾರದ ಮೇಲೆ ಹಿಂದೂ ಮತದಲ್ಲಿ ಅನೇಕ ಗ್ರಂಥಗಳು ಹುಟ್ಟಿವೆ. ಉಪನಿಷತ್ತಿನ ಬುಡವನ್ನು ಆಧಾರವಾಗಿ ಹೊಂದಿ ಸ್ಮೃತಿ, ಇತಿಹಾಸ, ಪುರಾಣ, ಆಗಮ ಮತ್ತು ದರ್ಶನಗಳೆಂಬ ಅನೇಕ ಶಾಖೆಗಳು ಹುಟ್ಟಿವೆ. ಶ್ರುತಿಯನ್ನು ಆತ್ಮಕ್ಕೂ, ಸ್ಮೃತಿಯನ್ನು ಶರೀರಕ್ಕೂ, ಇತಿಹಾಸ ಪುರಾಣಾದಿಗಳನ್ನು ಅಂಗಗಳಿಗೂ ಹೋಲಿಸಬಹುದು. ಆದ್ದರಿಂದ ಹಿಂದೂ ಧರ್ಮಕ್ಕೆ ಮೊದಲನೆಯ ಆಧಾರ ಗ್ರಂಥ ಶ್ರುತಿ. ಅದರ ಆಧಾರದ ಮೇಲೆ ಸ್ಮೃತಿ, ಇತಿಹಾಸ, ಪುರಾಣ, ಆಗಮ ಮತ್ತು ದರ್ಶನಾದಿ ಇತರ ಆಧಾರಗ್ರಂಥಗಳು ಹುಟ್ಟಿವೆ.

**ಸ್ಮೃತಿಗಳು :-** ಹಿಂದೂಧರ್ಮದ ರೀತಿ ನೀತಿಗಳನ್ನು ಆಗಾಗ್ಗೆ ರೂಪಿಸಿ ತಿಳಿಸುವ ಗ್ರಂಥವೇ ಸ್ಮೃತಿಯು. ಇದು ಶ್ರುತಿಯ ತತ್ವಗಳ ಆಧಾರದ ಮೇಲೆ ಹಿಂದೂ ಸಮಾಜದ ಜೀವನವನ್ನೂ ರೀತಿ ನೀತಿ ನಡತೆಗಳನ್ನೂ ರೂಪಿಸುತ್ತದೆ. ಇದನ್ನು ಋಷಿಗಳು ಕಾಲಕಾಲಕ್ಕೆ ತಕ್ಕಂತೆ ಬದಲಾಯಿಸಿ ಹೊಸ ಹೊಸ ತತ್ವಗಳನ್ನೂ ಸೂತ್ರಗಳನ್ನೂ ಬರೆದಿದ್ದಾರೆ. ಇಂತಹ ಧರ್ಮಶಾಸ್ತ್ರಜ್ಞರಲ್ಲಿ ಮುಖ್ಯರಾದವರು ಮನು, ಯಾಜ್ಞವಲ್ಕ್ಯ ಮತ್ತು ಪರಾಶರರು. ಅವರವರು ಬರೆದಿರುವ ಈ ಧರ್ಮಶಾಸ್ತ್ರಗಳನ್ನು ಮನುಸ್ಮೃತಿ, ಯಾಜ್ಞವಲ್ಕ್ಯಸ್ಮೃತಿ ಮತ್ತು ಪರಾಶರ ಸ್ಮೃತಿ ಎಂದು ಕರೆದಿದ್ದಾರೆ. ಇವುಗಳು ಜನಗಳ ಕರ್ತವ್ಯಕರ್ಮಗಳನ್ನು ತಿಳಿಸುವದರಿಂದ ಇವುಗಳಿಗೆ ಧರ್ಮಶಾಸ್ತ್ರಗಳೆಂದು ಹೆಸರು. ಆದರೆ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು ದೇಶದಲ್ಲಿ ಆಗಾಗ್ಗೆ ಬದಲಾಯಿಸುತ್ತಿರುವುದರಿಂದ ಇವುಗಳಲ್ಲಿರುವ ಕಾನೂನು, ಕಟ್ಟಳೆಗಳನ್ನೂ ಅದಕ್ಕೆ ಅನುಗುಣವಾಗಿ ಬದಲಾಯಿಸುತ್ತಿರಬೇಕಾಗುತ್ತದೆ.

**ಇತಿಹಾಸ ಮತ್ತು ಪುರಾಣಗಳು :-** ಇವು ಉಪನಿಷತ್ತುಗಳಲ್ಲಿರುವ ತತ್ವಗಳನ್ನೂ ಸ್ಮೃತಿಯಲ್ಲಿರುವ ನೀತಿ ನಡತೆಗಳನ್ನೂ ಸಾಮಾನ್ಯಜನರಿಗೆ ತಿಳಿಯುವಂತೆ ಚರಿತ್ರೆಯ ಮತ್ತು ಕಥೆಯ ರೂಪದಲ್ಲಿ ತಿಳಿಸುತ್ತವೆ. ಶ್ರುತಿ, ಸ್ಮರಗಳನ್ನು ಬಹಳ ಸ್ವಲ್ಪ ಜನ ತಿಳಿಯುವ ಶಕ್ತಿ ಪಡೆದಿದ್ದಾರೆ. ಆದರೆ ಇತಿಹಾಸ ಪುರಾಣಗಳನ್ನು ಜನಸಾಮಾನ್ಯರೆಲ್ಲರೂ ತಿಳಿಯಬಲ್ಲರು. ರಾಮಾಯಣ, ಮಹಾಭಾರತಗಳೇ

ಇತಿಹಾಸಗಳು. ಇವುಗಳು ಚಿಕ್ಕವಯಸ್ಸಿನಿಂದಲೇ ಮಾನವನಲ್ಲಿ ಧಾರ್ಮಿಕ ಮನೋವೃತ್ತಿಯನ್ನು ಬೆಳೆಸುತ್ತವೆ. ಶ್ರೀರಾಮನ ದಿವ್ಯ ಚರಿತ್ರೆಯೇ ರಾಮಾಯಣವು. ನಮ್ಮ ದೇಶದ ಪ್ರತಿಯೊಂದು ಮಗುವಿಗೂ ಶ್ರೀ ರಾಮನ ಸತ್ಯಪರಿಪಾಲನೆ ಆದರ್ಶ ರಾಜ್ಯಾಡಳಿತ, ಸೀತಾದೇವಿಯ ಪಾತಿವ್ರತ್ಯ, ಲಕ್ಷ್ಮಣ ಮತ್ತು ಹನುಮಂತರ ಸೇವಾನಿಷ್ಠೆ ಎಲ್ಲವೂ ತಿಳಿದಿದೆ ಎನ್ನಬಹುದು. ಮಹಾಭಾರತವು ಹಿಂದೂಧರ್ಮದ ವಿಶ್ವಕೋಶವೆನ್ನಿಸಿಕೊಂಡಿದೆ. ಇದರಲ್ಲಿ ಅನೇಕ ತತ್ವ ವಿಚಾರಗಳ ಮತ್ತು ಧರ್ಮಾಧರ್ಮಗಳ ಚರ್ಚೆ ನಡೆದಿದೆ. ಶ್ರೀಕೃಷ್ಣನ ಗೀತೋಪದೇಶ ಮತ್ತು ಶಾಂತಿ ಪರ್ವದಲ್ಲಿ ಭೀಷ್ಮರ ಉಪದೇಶ ಇವೆರಡೂ ಬಹಳ ಪ್ರಸಿದ್ಧವಾದ ಉಪದೇಶಗಳಾಗಿವೆ.

ಶ್ರುತಿಯ ಸತ್ಯಗಳನ್ನು ಸಾಧಾರಣ ಮಾನವರಿಗೆ ತಿಳಿಯುವಂತೆ ಹೇಳುವಕಥೆಗಳೇ ಪುರಾಣಗಳು. ಅನೇಕ ಪುರಾಣಗಳಿವೆ. ಅವುಗಳಲ್ಲಿ ವಿಷ್ಣುಪುರಾಣ ಮತ್ತು ಭಾಗವತ ಪುರಾಣಗಳು ಬಹಳ ಮುಖ್ಯವಾದವುಗಳು.

**ಆಗಮಗಳು:-** ಶ್ರುತಿಯ ಆಧಾರದಿಂದ ಹುಟ್ಟಿರುವ ಸಾಧನಶಾಸ್ತ್ರಗಳೇ ಆಗಮಗಳು. ದೇವಾಲಯಗಳಲ್ಲೂ, ಮನೆಗಳಲ್ಲೂ, ನಡೆಸಬೇಕಾದ ಪೂಜಾದಿ ಕಾರ್ಯಕ್ರಮಗಳನ್ನು ಇವು ತಿಳಿಸುತ್ತವೆ. ಆಗಮಗಳು ವೈಷ್ಣವ ಆಗಮ, ಶೈವ ಆಗಮ ಮತ್ತು ಶಾಕ್ತ ಆಗಮಗಳೆಂದು ಮೂರು ವಿಧವಾಗಿವೆ. ವೈಷ್ಣವ ಆಗಮವು ವಿಷ್ಣುವಿನ ಪೂಜೆಯನ್ನೂ ಶೈವ ಆಗಮವು ಶಿವನ ಪೂಜೆಯನ್ನೂ ಶಾಕ್ತ ಆಗಮವು ಶಕ್ತಿಪೂಜೆಯನ್ನೂ ಪ್ರತಿಪಾದಿಸುತ್ತವೆ.

**ದರ್ಶನಗಳು:-** ಶ್ರುತಿಯ ಆಧಾರದಿಂದ ಹುಟ್ಟಿರುವ ತತ್ವಶಾಸ್ತ್ರಗಳೇ ದರ್ಶನಗಳು. ಹಿಂದೂಮತದಲ್ಲಿ ಮುಖ್ಯವಾಗಿ ಚಾರ್ವಾಕ, ಜೈನ, ಬೌದ್ಧ ಸಾಂಖ್ಯ-ಯೋಗ, ನ್ಯಾಯ- ವೈಶೇಷಿಕ ಮತ್ತು ಪೂರ್ವ ಮೀಮಾಂಸಾ-ಉತ್ತರ ಮೀಮಾಂಸಾ ಎಂಬ ದರ್ಶನಗಳು ಪ್ರಸಿದ್ಧವಾಗಿವೆ. ಇವುಗಳಲ್ಲಿ ಚಾರ್ವಾಕ, ಜೈನ ಮತ್ತು ಬೌದ್ಧ ದರ್ಶನಗಳು ವೇದದ ಪ್ರಮಾಣವನ್ನು ಒಪ್ಪುವುದಿಲ್ಲ. ಇತರ ದರ್ಶನಗಳು ವೇದದ ಆಧಾರದಿಂದ ಹುಟ್ಟಿವೆ. ಉತ್ತರ ಮೀಮಾಂಸಾದರ್ಶನಕ್ಕೆ ವೇದಾಂತದರ್ಶನವೆಂದು ಹೆಸರು. ವೇದಾಂತ ದರ್ಶನಕ್ಕೆ ಪ್ರಾಮುಖ್ಯತೆ ಹೆಚ್ಚು. ವೇದಾಂತ ದರ್ಶನದಲ್ಲಿ ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ ಎಂಬ ಮೂರು ಮುಖ್ಯವಾದ ಸಿದ್ಧಾಂತಗಳಿವೆ. ತತ್ವ ವಿಚಾರದಲ್ಲಿ ಇವುಗಳಲ್ಲಿ ವ್ಯತ್ಯಾಸಗಳಿದ್ದರೂ ನಡತೆಯ ವಿಷಯದಲ್ಲಿ ಇವುಗಳಲ್ಲಿ ಐಕ್ಯತೆಯಿದೆ ಎನ್ನಬಹುದು.

**ಭಕ್ತರ ಗಾನಗಳು ಮತ್ತು ಪ್ರವಚನಗಳು:-** ಮೇಲೆ ತಿಳಿಸಿದ ಗ್ರಂಥಗಳಲ್ಲದೆ ನಮ್ಮ ದೇಶದಲ್ಲಿ ಅನೇಕ ಭಕ್ತರ ಗಾನಗಳನ್ನೂ ಪ್ರವಚನಗಳನ್ನೂ ಒಳಗೊಂಡ ಪವಿತ್ರ ಗ್ರಂಥಗಳಿವೆ. ಪುರಂದರ ದಾಸರು, ಸರ್ವಜ್ಞರು, ನಮ್ಮಾಳ್ವಾರವರು, ತ್ಯಾಗರಾಜರು, ತುಳಸೀದಾಸರು, ತುಕಾರಾಮರು ಮುಂತಾಗಿ ಅನೇಕ ಭಕ್ತಶಿರೋಮಣಿಗಳು ಭಗವಂತನ ಸಾಕ್ಷಾತ್ಕಾರ ಪಡೆದು ತಮ್ಮ ದಿವ್ಯ ಸಂದೇಶಗಳನ್ನು ಕನ್ನಡ, ತಮಿಳು, ತೆಲುಗು, ಹಿಂದೀ, ಮರಾಠಿ ಮುಂತಾದ ಭಾಷೆಗಳಲ್ಲಿ ಗಾನ, ಪ್ರವಚನಗಳ ರೂಪದಲ್ಲಿ ಪ್ರಕಾಶಪಡಿಸಿದ್ದಾರೆ.

ಹೀಗೆ ಹಿಂದೂ ಧರ್ಮಕ್ಕೆ ತಳಹದಿಯಾಗಿ ಶ್ರುತಿಗಳೂ ಅವುಗಳ ಆಧಾರದಿಂದ ಹುಟ್ಟಿದ ಸ್ಮೃತಿ, ಇತಿಹಾಸ, ಪುರಾಣ, ಆಗಮ ಮತ್ತು ದರ್ಶನಾದಿಗಳೂ ಮತ್ತು ಭಕ್ತರ ಗಾನ, ಪ್ರವಚನಾದಿಗಳೂ ಆಧಾರ ಗ್ರಂಥಗಳಾಗಿವೆ. ಆದರೆ ಇವುಗಳಲ್ಲಿ **ಪ್ರಸ್ಥಾನತ್ರಯಿ** ಎಂಬ ಮೂರು ಗ್ರಂಥಗಳು ಬಹಳ ಮುಖ್ಯವಾದವುಗಳಾಗಿವೆ. ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆ, ಈ ಮೂರು ಗ್ರಂಥಗಳಿಗೆ ಪ್ರಸ್ಥಾನತ್ರಯಿ ಎಂದು ಹೆಸರು. ಉಪನಿಷತ್ತಿನ ತತ್ತ್ವಗಳನ್ನು ವಿಷದೀಕರಿಸುವ ಸೂತ್ರಗಳೇ ಬ್ರಹ್ಮಸೂತ್ರಗಳು. ಇದನ್ನು ಬಾದರಾಯಣರು ರಚಿಸಿದ್ದಾರೆ. ಬ್ರಹ್ಮನ ಸ್ವರೂಪವನ್ನೂ, ಅವನಿಗೂ ಜಗತ್ತಿಗೂ ಇರುವ ಸಂಬಂಧವನ್ನೂ ತಿಳಿಸುವುದರಿಂದ ಇದಕ್ಕೆ ಬ್ರಹ್ಮಸೂತ್ರವೆಂದು ಹೆಸರು ಬಂದಿದೆ. ವೇದಾಂತದ (ಉಪನಿಷತ್ತಿನ) ಸಾರವಾಗಿರುವುದರಿಂದ ಇದಕ್ಕೆ ವೇದಾಂತ ಸೂತ್ರವೆಂದೂ ಹೆಸರು. ಶ್ರೀ ಶಂಕರಾಚಾರ್ಯರು, ಶ್ರೀ ರಾಮಾನುಜಾಚಾರ್ಯರು, ಶ್ರೀ ಮಧ್ವಾಚಾರ್ಯರು ಮುಂತಾಗಿ ಅನೇಕ ಮಹಾಜ್ಞಾನಿಗಳು ಈ ಸೂತ್ರಗಳಿಗೆ ಬಹಳ ದೊಡ್ಡ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಇದರಿಂದ ವೇದಾಂತ ದರ್ಶನದಲ್ಲಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಮುಂತಾಗಿ ಅನೇಕ ಶಾಖೆಗಳು ಹುಟ್ಟಿವೆ.

**ಭಗವದ್ಗೀತೆ:-** ಭಗವದ್ಗೀತೆಯು ಉಪನಿಷತ್ತಿನ ಸಾರವಾಗಿರುವುದರಿಂದ ಇದು ಶ್ರುತಿಯಂತೆಯೇ ಹಿಂದೂಮತಕ್ಕೆ ಬಹಳ ಮುಖ್ಯವಾದ ಆಧಾರ ಗ್ರಂಥವಾಗಿದೆ. ಇದು ಪ್ರಸ್ಥಾನತ್ರಯಿಯಲ್ಲಿ ಒಂದು ಗ್ರಂಥವಾಗಿ ಹಿಂದೂಮತದಲ್ಲಿ ಮುಖ್ಯವಾದ ಸ್ಥಾನ ಪಡೆದಿದೆ. ಇದರಲ್ಲಿ ಹಿಂದೂಮತದ ಸಾರವೆಲ್ಲವೂ ಅಡಗಿದೆ. ಉಪನಿಷತ್ತಿನಲ್ಲಿರುವ ತತ್ತ್ವಬೋಧಕವಾದ, ನೀತಿಬೋಧಕವಾದ ವಿಷಯಗಳನ್ನು ಭಗವದ್ಗೀತೆಯು ಬಹಳ ಚೆನ್ನಾಗಿ ಸುಲಭರೀತಿಯಲ್ಲಿ ವಿವರಿಸಿರುವುದರಿಂದ ಇದಕ್ಕೆ ಹಿಂದೂ ಮತದಲ್ಲಿ ಬಹಳ ಶ್ರೇಷ್ಠತೆ ಲಭಿಸಿದೆ.

ಭಗವದ್ಗೀತೆಗೆ ಅನೇಕ ಮಹಾಪುರುಷರು ಅರ್ಥವ್ಯಾಖ್ಯಾನಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಶ್ರೀ ಶಂಕರಭಾಷ್ಯ, ಶ್ರೀರಾಮಾನುಜಭಾಷ್ಯ ಮತ್ತು ಶ್ರೀಮಧ್ವಭಾಷ್ಯಗಳು ಬಹಳ ಮುಖ್ಯವಾದವು. ಈ ಗೀತಾಭಾಷ್ಯಗಳಲ್ಲಿ ತತ್ವವಿಚಾರಗಳಲ್ಲಿ ವ್ಯತ್ಯಾಸಗಳಿದ್ದರೂ ನೀತಿ ನಡತೆಯ ವಿಷಯದಲ್ಲಿ ಸರ್ವರೂ ಏಕಾಭಿಪ್ರಾಯವನ್ನು ಸೂಚಿಸಿದ್ದಾರೆ. ಇದರೊಂದಿಗೆ ಬಾಲಗಂಗಾಧರತಿಲಕ್, ಅರವಿಂದಘೋಷ್, ಮಹಾತ್ಮಗಾಂಧಿ, ವಿನೋಬಾಭಾವೆ ಮುಂತಾಗಿ ಆಧುನಿಕ ಮಹಾತ್ಮರುಗಳು ಕೂಡ ಗೀತೆಗೆ ಅರ್ಥ ವಿಶೇಷಾರ್ಥಗಳನ್ನು ಬರೆದಿದ್ದಾರೆ. ಮಹಾತ್ಮ ಗಾಂಧಿಯವರು ಭಗವದ್ಗೀತಾ ಶ್ಲೋಕಗಳನ್ನು ಪ್ರತಿದಿನವೂ ಪಾರಾಯಣ ಮಾಡುತ್ತಿದ್ದರು. ಅವರು ಭಗವದ್ಗೀತೆಯನ್ನು ಗೀತಾಮಾತೆ ಅಂದರೆ ತನಗೆ ಶಾಂತಿ ನೀಡಿದ ತಾಯಿ ಎಂದು ಕರೆಯುತ್ತಿದ್ದರು.

ಭಗವದ್ಗೀತೆಯು ಮಹಾಭಾರತದ ಕಥೆಯ ಮಧ್ಯದಲ್ಲಿದೆ. ಕುರುಕ್ಷೇತ್ರದಲ್ಲಿ ಕೌರವರಿಗೂ, ಪಾಂಡವರಿಗೂ ನಡೆದ ಯುದ್ಧಾರಂಭದಲ್ಲಿ ಗೀತಾ ಪ್ರವಚನವು ಪ್ರಾರಂಭವಾಗುತ್ತದೆ. ತನ್ನ ಬಂಧು ಬಾಂಧವರನ್ನು ನೋಡಿ ಮೋಹ ಪರವಶನಾಗಿ ತನ್ನ ಕರ್ತವ್ಯಕರ್ಮವನ್ನು ಮಾಡಲು ಹಿಂಜರಿದ ಅರ್ಜುನನಿಗೆ ಶ್ರೀಕೃಷ್ಣ ಪರಮಾತ್ಮನು ಸರಿಯಾದ ತತ್ವವನ್ನು ಬೋಧಿಸಿ ಅವನಲ್ಲಿ ಕರ್ತವ್ಯ ಜ್ಞಾನವನ್ನು ಜಾಗ್ರತಗೊಳಿಸಿದ್ದಾನೆ. ಆದರೆ ಇದು ಕೇವಲ ಅರ್ಜುನನಿಗೆ ಮಾತ್ರ ನೀಡಿದ ಸಂದೇಶವಾಗಿರದೆ ಸರ್ವದೇಶ, ಸರ್ವಕಾಲ, ಸರ್ವಾವಸ್ಥೆಗಳಲ್ಲಿರುವ ಎಲ್ಲ ಮಾನವರಿಗೂ ಅನ್ವಯಿಸುವ ಉಪದೇಶವಾಗಿದೆ ಮತ್ತು ಮಾನವನು ಸಂಸಾರಿಯಾಗಿದ್ದುಕೊಂಡು, ತನ್ನ ಕರ್ತವ್ಯ ಕರ್ಮಗಳನ್ನು ಕರ್ಮಯೋಗವಾಗಿ ಆಚರಿಸುತ್ತಾ, ಭಗವಂತನಲ್ಲಿ ಭಕ್ತಿ ಹೊಂದಿ, ಅವನಿಗೆ ಶರಣಾಗತನಾಗಿ ತನ್ನ ಬಾಳನ್ನು ಸಾರ್ಥಕಗೊಳಿಸಿಕೊಳ್ಳಬಹುದೆಂಬ ಸರ್ವೋದಯ ಸಂದೇಶವನ್ನು ನೀಡುತ್ತದೆ. ಈ ಕಾರಣಗಳಿಂದ ಭಗವದ್ಗೀತೆಗೆ ಹೆಚ್ಚಾದ ಮಹತ್ವವುಂಟಾಗಿದೆ. ಭಗವದ್ಗೀತೆಯು ಶ್ರೀಕೃಷ್ಣಾರ್ಜುನ ಸಂವಾದ ರೂಪದಲ್ಲಿ ರುವುದರಿಂದ ಓದುವುದಕ್ಕೆ ಆಕರ್ಷಣೀಯವೂ ಆಗಿದೆ.

ಭಗವದ್ಗೀತೆಯಲ್ಲಿ ಹದಿನೆಂಟು ಅಧ್ಯಾಯಗಳಿವೆ. ಈ ಹದಿನೆಂಟು ಅಧ್ಯಾಯಗಳಲ್ಲಿ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಮತ್ತು ಶರಣಾಗತಿಯೋಗ ಸಾಧನೆಗಳ ವಿಸ್ತಾರವಾದ ವಿವರಣೆಯಿದೆ. ಮೊದಲು

ಕರ್ಮಯೋಗ, ಜ್ಞಾನಯೋಗಗಳನ್ನೂ ಅನಂತರ ಭಕ್ತಿಯೋಗವನ್ನೂ, ಕೊನೆಗೆ ಶರಣಾಗತಿ ಯೋಗವನ್ನೂ ಶ್ರೀಕೃಷ್ಣಪರಮಾತ್ಮನು ಹಂತಹಂತವಾಗಿ ಉಪದೇಶ ಮಾಡಿದ್ದಾನೆ. ಇದೂ ಅಲ್ಲದೆ ಭಗವದ್ಗೀತೆಯ ಪ್ರತಿಯೊಂದು ಅಧ್ಯಾಯದಲ್ಲಿಯೂ ನೈತಿಕ ಅಭ್ಯಾಸಗಳ ವಿವರಣೆಯಿದೆ. ಎರಡನೆಯ ಅಧ್ಯಾಯದಲ್ಲಿ ತಿಳಿಸಿರುವ ಸ್ಥಿತಪ್ರಜ್ಞನ ಗುಣಗಳನ್ನೂ, ಹನ್ನೆರಡನೆಯ ಅಧ್ಯಾಯದಲ್ಲಿ ತಿಳಿಸಿರುವ ಭಕ್ತನ ಗುಣಗಳನ್ನೂ ಅರ್ಥಸಹಿತ ಮನನ ಮಾಡುತ್ತ ಮಾನವರು ಮನಸ್ಸನ್ನು ಪರಿಶುದ್ಧಗೊಳಿಸಿಕೊಳ್ಳಲು ಪ್ರಯತ್ನಿಸಬೇಕು. ಗೀತಾಶ್ಲೋಕಗಳನ್ನು ಅರ್ಥಸಹಿತ ಮನನ ಮಾಡುತ್ತಿದ್ದರೆ ಮನಸ್ಸಿಗೆ ಕಷ್ಟಕಾಲದಲ್ಲಿ ಶಾಂತಿ ಲಭಿಸುತ್ತದೆ ಮತ್ತು ಭಗವಂತನಲ್ಲಿ ಭಕ್ತಿಯುಂಟಾಗುತ್ತದೆ. ಭಗವಂತನು ತನ್ನ ಸ್ವಂತ ವಾಕ್ಯದಲ್ಲಿ ಅರ್ಜುನನಿಗೆ ಉಪದೇಶ ನೀಡಿರುವುದರಿಂದ ಇದಕ್ಕೆ ಭಗವದ್ಗೀತೆ ಎಂದು ಹೆಸರು ಬಂದಿದೆ. ಶ್ರೀಕೃಷ್ಣನನ್ನು ಗೋಪಾಲಕನಿಗೂ, ಅರ್ಜುನನನ್ನು ಕರುವಿಗೂ, ಉಪನಿಷತ್ತನ್ನು ಹಸುವಿಗೂ, ಭಗವದ್ಗೀತೆಯನ್ನು ಹಾಲಿಗೂ ಹೋಲಿಸುತ್ತಾರೆ. ಉಪನಿಷತ್ತೆಂಬ ಹಸುವಿನಿಂದ, ಅರ್ಜುನನನ್ನು ಕರುವಿನಂತೆ ವ್ಯಾಜವಾಗಿ ಇಟ್ಟುಕೊಂಡು ಶ್ರೀಕೃಷ್ಣಪರಮಾತ್ಮನು ಗೀತಾಮೃತವೆಂಬ ಹಾಲನ್ನು ಕರೆದು ಲೋಕದ ಜನರಿಗೆ ನೀಡಿದ್ದಾನೆ. ಈ ಗೀತಾಮೃತವನ್ನು ಪಾನಮಾಡಿ ಸರ್ವರೂ ತಮ್ಮ ತಮ್ಮ ಬಾಳನ್ನು ಸಾರ್ಥಕಪಡಿಸಿಕೊಳ್ಳಬೇಕು.

**ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನಃ ।**
**ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್ ॥**

*****

# ಭಗವದ್ಗೀತೆ

## ಒಂದು ಸರಳ ಅನುವಾದ

## ಉಪೋದ್ಘಾತ

ಭಗವದ್ಗೀತೆ ಎಂಬುದು ಬಹಳ ಪ್ರಸಿದ್ಧವಾದ ಗ್ರಂಥ. ಇದು ಪವಿತ್ರ ಗ್ರಂಥಗಳಲ್ಲಿ ಒಂದು. ಇದರಲ್ಲಿ ಮಾನವನ ಮುಖ್ಯ ಸಮಸ್ಯೆಗಳಿಗೆ ಪರಿಹಾರವನ್ನೂ ಅವನ ನೀತಿ, ನಡತೆ ಮತ್ತು ಕರ್ತವ್ಯನಿಷ್ಠೆಗಳ ವಿಷಯವನ್ನೂ ಭಗವಂತನ ವಾಕ್ಯಗಳಿಂದಲೇ ತಿಳಿಸುವುದರಿಂದ ಇದಕ್ಕೆ ಬಹಳ ಪೂಜ್ಯತೆ ಇದೆ. ಅನೇಕ ದೇಶದೇಶಗಳ ಮಹಾ ಪುರುಷರು ದೈವೀಕ ಪ್ರೇರಣೆಯನ್ನು ಪಡೆದು ಇದರ ವಿಷಯವಾಗಿ ಅನೇಕ ವ್ಯಾಖ್ಯಾನಗಳನ್ನು ಬರೆದಿದ್ದಾರೆ.

ಭಗವದ್ಗೀತೆಗೆ ಹಿನ್ನೆಲೆಯಾಗಿ ಮಹಾಭಾರತದ ಕಥೆಯನ್ನು ಸ್ವಲ್ಪಮಟ್ಟಿಗಾದರೂ ತಿಳಿಯಬೇಕು. ಸಂಸ್ಕೃತ ಮಹಾಕಾವ್ಯವಾದ ಮಹಾಭಾರತದ ಒಂದು ಭಾಗವೇ ಸುಪ್ರಸಿದ್ಧವಾದ ಗೀತೆಯು. ಇದರಲ್ಲಿ ಕುರುವಂಶದ ಪಾಂಡವರು, ಕೌರವರು ಎಂಬ ಎರಡು ರಾಜ ಮನೆತನದವರ ವೈಮನಸ್ಯದ ವಿಷಯವನ್ನು ತಿಳಿಸಿದೆ. ಕುರುಕ್ಷೇತ್ರದ ರಣರಂಗದಲ್ಲಿ ನಡೆದ ಮಹಾಯುದ್ಧದಲ್ಲಿ ಅವರ ವೈಮನಸ್ಯವು ಕೊನೆಗಂಡಿತು. ಅಣ್ಣ ತಮ್ಮಂದಿರಾದ ಪಾಂಡು ಮತ್ತು ಧೃತರಾಷ್ಟ್ರರ ಮಕ್ಕಳೇ ಈ ಸ್ಪರ್ಧಿಸುವ ಸೋದರರು. ಪಾಂಡುವಿನ ಮಕ್ಕಳಾದ ಯುಧಿಷ್ಠಿರ, ಭೀಮ, ಅರ್ಜುನ, ನಕುಲ ಮತ್ತು ಸಹದೇವರೇ ಪಾಂಡವರು. ದ್ರೌಪದಿಯು ಅವರ ರಾಣಿ. ಧೃತರಾಷ್ಟ್ರನ ಮಕ್ಕಳೇ ಕೌರವರು. ಅವರಲ್ಲಿ ಧುರ್ಯೋಧನನೇ ಹಿರಿಯವನು.

ದೇವರ ಅವತಾರವೆಂದು ನಂಬಲ್ಪಟ್ಟ ಯಾದವ ಕುಮಾರನಾದ ಶ್ರೀಕೃಷ್ಣನು [illegible] ಬಂಧುವಾಗಿದ್ದನು. ಅವನು ಸಂಧಾನ ಮಾಡಿ ಯುದ್ಧವನ್ನು ತಪ್ಪಿಸಲೆಂದು ಎಷ್ಟೋ ಪ್ರಯತ್ನಪಟ್ಟನು. ಆದರೆ ಧುರ್ಯೋಧನನ ಹಠಮಾರಿತನ [illegible]ವನ್ನು ಮಾಡಲೇಬೇಕಾಯಿತು. ಧುರ್ಯೋಧನನು ಶ್ರೀಕೃಷ್ಣನ ಸೇನಾ ಬಲವನ್ನೂ, ಪಾಂಡವರು ಅವನ ಸಾನ್ನಿಧ್ಯವನ್ನೂ ಆರಿಸಿಕೊಂಡರು. ಆದ್ದರಿಂದಲೇ ಪಾಂಡವರ ಯೋಧನಾದ ಅರ್ಜುನನಿಗೆ ಶ್ರೀಕೃಷ್ಣನು ತಾನೇ ಸಾರಥಿಯಾದನು.

ಯುದ್ಧ ನಡೆಯುವುದಕ್ಕೆ ಸ್ವಲ್ಪ ಮುಂಚೆ ಶ್ರೀಕೃಷ್ಣನಿಗೂ ಅರ್ಜುನನಿಗೂ ನಡೆದ ಸಂವಾದವನ್ನು ಅಂಧನಾದ ಧೃತರಾಷ್ಟ್ರನಿಗೆ ಸಂಜಯನು ಕಥನ ರೂಪದಲ್ಲಿ ತಿಳಿಸುತ್ತಾನೆ. ಸಂಜಯನು ವಿವರಿಸುವ ಈ ಕೃಷ್ಣಾರ್ಜುನ ಸಂವಾದವೇ ಭಗವದ್ಗೀತೆ. ಧೃತರಾಷ್ಟ್ರನಿಗೆ ಯುದ್ಧದ ಪ್ರಗತಿಯನ್ನೆಲ್ಲಾ ಸರಿಯಾಗಿ ತಿಳಿಸಲು ಸಂಜಯನಿಗೆ ಅದ್ಭುತವಾದ ಶಕ್ತಿಯು ಅನುಗ್ರಹಿಸಲ್ಪಟ್ಟಿತೆಂದು ಮಹಾಕಾವ್ಯವು ತಿಳಿಸುತ್ತದೆ. ತನ್ನ ಸ್ವಂತ ಬಂಧು ಜನರೊಂದಿಗೂ, ಸ್ನೇಹಿತರೊಂದಿಗೂ ಯುದ್ಧ ಮಾಡಬೇಕಾದ ಅಹಿತಕರವಾದ ಕರ್ತವ್ಯವನ್ನು ಮಾಡಲು ಅರ್ಜುನ ಹಿಂಜರಿದ. ಅವನ ಮನಸ್ಸಿನಲ್ಲಿ ಉಂಟಾದ ವಿಷಾದವನ್ನು ಹೋಗಲಾಡಿಸಿ, ಅವನನ್ನು ಕರ್ತವ್ಯನಿಷ್ಠನನ್ನಾಗಿ ಮಾಡಲು ಶ್ರೀಕೃಷ್ಣನು ತತ್ತ್ವಶಾಸ್ತ್ರ ನೀತಿಶಾಸ್ತ್ರ ಮತ್ತು ಧರ್ಮಶಾಸ್ತ್ರ ಇವುಗಳೊಂದಿಗೆ, ಜ್ಞಾನ ವೈರಾಗ್ಯ ಭಕ್ತಿಗಳನ್ನೂ ಉಪದೇಶ ಮಾಡಿದನು.

ಅವರವರ ವರ್ಣಾಶ್ರಮದ ಪ್ರಕಾರ ಕರ್ತವ್ಯಗಳನ್ನು ನಡೆಸುತ್ತಾ, ಜ್ಞಾನ ಯೋಗದಿಂದ ಆತ್ಮಸಾಕ್ಷಾತ್ಕಾರವನ್ನು ಸಾಧಿಸಿ ಅದರಿಂದ ಉಂಟಾಗುವ ಅಪಾರವಾದ ಭಕ್ತಿಯಿಂದ ಅಂದರೆ ಅತಿಶಯವಾದ ಪ್ರೀತಿ ಶ್ರದ್ಧೆಗಳಿಂದ ಭಗವಂತನನ್ನು ಪಡೆಯುವ ಮಾರ್ಗವನ್ನು ಉಪದೇಶಿಸುವುದೇ ಭಗವದ್ಗೀತೆಯ ಉದ್ದೇಶ. ಮೊದಲನೆಯ ಷಟ್ಕದ ಆರು ಅಧ್ಯಾಯಗಳಲ್ಲಿ ಆತ್ಮಾನುಭವದಿಂದ ಸಿದ್ಧಿಸಲ್ಪಡುವ ಜ್ಞಾನಯೋಗ ಮತ್ತು ಕರ್ಮಯೋಗ ಎಂಬ ಎರಡು ನಿಷ್ಠೆಗಳು ತಿಳಿಸಲ್ಪಟ್ಟಿವೆ. ಎರಡನೆಯ ಷಟ್ಕದ ಮಧ್ಯದ ಆರು ಅಧ್ಯಾಯಗಳಲ್ಲಿ ಕರ್ಮಯೋಗ ಜ್ಞಾನಯೋಗ ಅಭ್ಯಾಸಗಳಿಂದ ಉಂಟಾಗುವ ಮತ್ತು ಭಗವಂತನ ಸಾಕ್ಷಾತ್ಕಾರಕ್ಕೆ ಅತ್ಯವಶ್ಯಕವಾದ ಭಕ್ತಿಯೋಗದ ವಿಷಯವೂ, ಮತ್ತು ಭಗವಂತನ ಸ್ವರೂಪ ಗುಣ ವಿಭೂತಿಗಳೂ ತಿಳಿಸಲ್ಪಟ್ಟಿವೆ. ಮೂರನೆಯ ಷಟ್ಕ ಅಥವಾ ಕೊನೆಯ ಆರು ಅಧ್ಯಾಯಗಳಲ್ಲಿ ಪ್ರಕೃತಿ ಪುರುಷರಿಂದ ಕೂಡಿರುವ ಜಗತ್ತಿನ ಸ್ವರೂಪವೂ, ಸರ್ವೇಶ್ವರನ ಸ್ವರೂಪವೂ, ಅವನನ್ನು ಹೊಂದಲು ಮಾರ್ಗಗಳಾದ ಭಕ್ತಿ ಮತ್ತು ಶರಣಾಗತಿ ಯೋಗಗಳೂ ತಿಳಿಸಲ್ಪಟ್ಟಿವೆ. ಶ್ರೀ ಭಗವದ್ಯಾಮುನಾಚಾರ್ಯರು ಗೀತಾರ್ಥ ಸಂಗ್ರಹವೆಂಬ ಅವರ ಕೃತಿಯಲ್ಲಿ ಭಗವದ್ಗೀತೆಯಲ್ಲಿ ತಿಳಿಸಿರುವ ಸಮಗ್ರ ಉಪದೇಶಗಳ ಸಾರಾಂಶವನ್ನು ತಿಳಿಸಿದ್ದಾರೆ. ಪ್ರತಿಯೊಂದು ಅಧ್ಯಾಯದಲ್ಲಿರುವ ವಿಷಯಗಳ ಸಾರಾಂಶವನ್ನು ಒಂದೊಂದು ಶ್ಲೋಕದಲ್ಲಿ ಸಂಗ್ರಹವಾಗಿ ವಿವರಿಸಿದ್ದಾರೆ. ಇದನ್ನೇ ಶ್ರೀ ಭಗವದ್ರಾಮಾನುಜಾ ಚಾರ್ಯರು ತಮ್ಮ ಗೀತಾ ಭಾಷ್ಯದಲ್ಲಿ ವಿವರಿಸಿ ತಿಳಿಸಿದ್ದಾರೆ. ಆದ್ದರಿಂದ ಪ್ರತಿ

ಅಧ್ಯಾಯಗಳ ಕೊನೆಯಲ್ಲಿ ಅದನ್ನು ವಿವರಿಸುವ ಗೀತಾರ್ಥ ಸಂಗ್ರಹದ ಶ್ಲೋಕವನ್ನೂ ಅದರ ಸರಳ ತಾತ್ಪರ್ಯವನ್ನೂ ಮುಂದೆ ತಿಳಿಸುವ ಪ್ರಯತ್ನ ಮಾಡಿದೆ.

ಶ್ಲೋಕ:-

**ಸ್ವಧರ್ಮ ಜ್ಞಾನ ವೈರಾಗ್ಯ ಸಾಧ್ಯ ಭಕ್ತ್ಯೇಕ ಗೋಚರಃ**
**ನಾರಾಯಣಃ ಪರಂಬ್ರಹ್ಮ ಗೀತಾಶಾಸ್ತ್ರೇಸಮೀರಿತಃ ॥**

ಪರಬ್ರಹ್ಮನಾದ ಶ್ರೀಮನ್ನಾರಾಯಣನನ್ನು ಹೊಂದಲು ಭಕ್ತಿ ಒಂದೇ ಉಪಾಯ, ಮಾನವನು ತನ್ನ ವರ್ಣಾಶ್ರಮೋಚಿತವಾದ ಕರ್ತವ್ಯ ಕರ್ಮಗಳನ್ನು ವೈರಾಗ್ಯದಿಂದ ಕರ್ಮಯೋಗವಾಗಿ ಆಚರಿಸುತ್ತಿದ್ದರೆ, ಅವನಿಗೆ ಅದರಿಂದ ಆಧ್ಯಾತ್ಮ ಜ್ಞಾನವುಂಟಾಗುತ್ತದೆ. ಅದರಿಂದ ಅವನಿಗೆ ಭಗವಂತನಲ್ಲಿ ಭಕ್ತಿ ಅಂದರೆ ಪ್ರೀತಿ ಹುಟ್ಟಿ ಅದು ಬೆಳೆದು ಅದರಿಂದ ಅವನಿಗೆ ಭಗವತ್ ಸಾಕ್ಷಾತ್ಕಾರವಾಗುತ್ತದೆ. ಇದೇ ಗೀತಾಶಾಸ್ತ್ರದ ಉಪದೇಶ- ಎಂಬುದೇ ಈ ಶ್ಲೋಕದ ತಾತ್ಪರ್ಯ. ಗೀತಾರ್ಥ ಸಂಗ್ರಹದ ಎರಡು, ಮೂರು ಮತ್ತು ನಾಲ್ಕನೇ ಶ್ಲೋಕಗಳಲ್ಲಿ ಭಗವದ್ಗೀತೆಯ ಮೂರು ಷಟ್ಕಗಳ ಮುಖ್ಯ ಸಾರಂಶವು ತಿಳಿಸಲ್ಪಟ್ಟಿವೆ.

*****

## ಮೊದಲನೆಯ ಅಧ್ಯಾಯ

# ಅರ್ಜುನ ವಿಷಾದ ಯೋಗ (ಅರ್ಜುನನ ಶೋಕ)

ವಿಷಯ ಸೂಚಿಕೆ :

I ಕುರುಕ್ಷೇತ್ರ ಯುದ್ಧದ ವರ್ಣನೆ : ಶ್ಲೋಕಗಳು 1 ರಿಂದ 27

II ಅರ್ಜುನನ ವಿಷಾದ ಮತ್ತು ಶೋಕ : ಶ್ಲೋಕಗಳು 28 ರಿಂದ 47

### I ಕುರುಕ್ಷೇತ್ರ ಯುದ್ಧದ ವರ್ಣನೆ : (ಶ್ಲೋಕಗಳು 1 ರಿಂದ 27)

ಕುರುಕ್ಷೇತ್ರ ರಣರಂಗದಲ್ಲಿ ಪಾಂಡವರಿಗೂ ಕೌರವರಿಗೂ ನಡೆದ ಯುದ್ಧದ ಸಿದ್ಧತೆಗಳ ವರ್ಣನೆಯೊಂದಿಗೆ ಭಗವದ್ಗೀತೆಯು ಪ್ರಾರಂಭವಾಗುತ್ತದೆ. ಕುರುಕ್ಷೇತ್ರ ದಲ್ಲಿ ಯುದ್ಧಮಾಡಲು ಸೇರಿದ್ದ ತನ್ನ ಮಕ್ಕಳಾದ ಕೌರವರೂ, ಪಾಂಡವರೂ ಏನು ಮಾಡಿದರೆಂದು ತಿಳಿಸುವಂತೆ ಧೃತರಾಷ್ಟ್ರನು ಸಂಜಯನನ್ನು ಕೇಳುತ್ತಾನೆ. ಆಗ ಸಂಜಯನು ಈ ರೀತಿ ವಿವರಿಸುತ್ತಾನೆ : -

ಕೌರವರ ಯಾಜಮಾನನಾದ ದುರ್ಯೋಧನನು ತನ್ನ ಸೈನ್ಯದೊಂದಿಗೆ ಯುದ್ಧ ಮಾಡಲು ಸಿದ್ಧವಾಗಿ ನಿಂತಿದ್ದ ಪಾಂಡವರ ಸೈನ್ಯವನ್ನು ನೋಡಿ, ತಕ್ಷಣವೇ ದ್ರೋಣಾಚಾರ್ಯರ ಬಳಿಗೆಬಂದು ಹೀಗೆಂದು ಹೇಳುತ್ತಾನೆ "ಆಚಾರ್ಯರೇ, ಪಾಂಡವರ ದೊಡ್ಡ ಸೈನ್ಯವನ್ನು ನೋಡಿರಿ. ನಿಮ್ಮ ಬುದ್ಧಿವಂತನಾದ ಶಿಷ್ಯನೂ, ದ್ರುಪದ ಪುತ್ರನೂ ಆದ ಧೃಷ್ಟದ್ಯುಮ್ನನೇ ಅದನ್ನು ನಡೆಸುತ್ತಿರುವನು. ಮಹಾ ಶೂರರೂ, ಧನುರ್ವಿದ್ಯಾವಿಶಾರದರೂ, ಯುದ್ಧದಲ್ಲಿ ಭೀಮಾರ್ಜುನರಿಗೆ ಸಮಾನರೂ ಆಗಿರುವ ಅನೇಕರು ಆ ಸೈನ್ಯದಲ್ಲಿ ಇದ್ದಾರೆ. ಮಹಾರಥರಾದ ಯುಯುಧಾನನೂ, ವಿರಾಟನೂ, ದ್ರುಪದನೂ, ಧೃಷ್ಟಕೇತುವೂ, ಕಾಶೀರಾಜನಾದ ವೀರಚೇಕೀತಾನನೂ, ಪುರುಜಿತ್ತೂ, ಕುಂತಿಭೋಜನೂ, ನರಶ್ರೇಷ್ಠನಾದ ಶೈಬ್ಯನೂ, ಶೂರನಾದ ಯುಧಾಮನ್ಯುವೂ, ಧೀರನಾದ ಉತ್ತಮೌಜಸ್ಸೂ, ಸುಭದ್ರಾಕುಮಾರನಾದ ಅಭಿಮನ್ಯುವೂ, ದ್ರೌಪದಿಯ ಮಕ್ಕಳೂ, ಈ ಎಲ್ಲ ಮಹಾರಥಿಗಳೂ ಅವರ ಸೈನ್ಯದಲ್ಲಿ ಇದ್ದಾರೆ. ಇನ್ನು ನಿಮ್ಮ ನೇತೃತ್ವದಲ್ಲಿ ಯುದ್ಧ ಮಾಡಲು ಸಿದ್ಧರಾಗಿರುವ ನಮ್ಮ ಕಡೆಯ ಪರಾಕ್ರಮಶಾಲಿ ಗಳಾದ ಮುಂದಾಳುಗಳನ್ನು ನಿಮ್ಮ ಅವಗಾಹನೆಗೆ ತರುವೆನು - ನನಗೋಸ್ಕರ ಪ್ರಾಣ ವನ್ನೂ ಕೊಡಲು ಸಿದ್ಧರಾಗಿರುವ ತಾವೂ, ಭೀಷ್ಮರೂ, ಕರ್ಣನೂ,

ಜಯಶಾಲಿಯಾದ ಕೃಪನೂ, ಅಶ್ವತ್ಥಾಮ, ವಿಕರ್ಣ, ಸೌಮದತ್ತಿ, ಜಯದ್ರಥ ಮುಂತಾದವರು ಇವರುಗಳೆಲ್ಲರೂ ಅನೇಕ ವಿಧವಾದ ಶಸ್ತ್ರಗಳನ್ನು ಹಿಡಿದು ಯುದ್ಧಮಾಡಲು ಚಾತುರ್ಯವುಳ್ಳವರಾಗಿದ್ದಾರೆ. ಹಾಗಿದ್ದರೂ ನನ್ನ ಮನಸ್ಸಿಗೆ ಆಗಾಗ್ಯೆ ಭೀಷ್ಮನಿಂದ ರಕ್ಷಿಸಲ್ಪಟ್ಟ ನಮ್ಮ ಸೈನ್ಯಕ್ಕಿಂತ, ಭೀಮನಿಂದ ರಕ್ಷಿಸಲ್ಪಟ್ಟ ಆ ಪಾಂಡವರ ಸೈನ್ಯವು ಹೆಚ್ಚು ಬಲವುಳ್ಳದ್ದೆಂಬ ಭಯವು ಬಂದಿರುವುದಕ್ಕೆ ಕಾರಣವೇನೋ ತಿಳಿಯಲಿಲ್ಲ. ಒಂದು ವೇಳೆ ನಮ್ಮ ಸೈನ್ಯವು ಕಮ್ಮಿಯಾಗಿದೆಯೇ ಎಂದರೆ ಅದು ಹಾಗೇನೂ ಇಲ್ಲ, ಬೇಕಾದಷ್ಟು ಇದೆ. ಅಲ್ಲದೆ ಪಾಂಡವರ ಸೈನ್ಯಕ್ಕಿಂತ ಬಲವುಳ್ಳದ್ದಾಗಿಯೂ ಇದೆ. ಆದುದರಿಂದ ನೀವೆಲ್ಲರೂ ಸಂತೋಷದಿಂದಲೂ, ಧೈರ್ಯದಿಂದಲೂ ನಿಮನಿಮಗೆ ಏರ್ಪಟ್ಟ ಸ್ಥಳಗಳಲ್ಲಿ ಇದ್ದುಕೊಂಡು ಭೀಷ್ಮನ ಆಜ್ಞೆಯನ್ನು ಅಲಕ್ಷ್ಯಮಾಡದೆ ನಡೆಸಿ ಅವನನ್ನು ಕಾಪಾಡಿರಿ"- ಎಂದು ಹೇಳಿದನು.

ದುರ್ಯೋಧನನು ಹೀಗೆ ದ್ರೋಣಾಚಾರ್ಯರಿಗೆ ಅರಿಕೆ ಮಾಡಿದ ತಕ್ಷಣವೇ ರಣರಂಗದಲ್ಲಿ ಎಲ್ಲಾ ಕಡೆಯಲ್ಲಿಯೂ ಶಂಖಗಳನ್ನು ಊದಿದರು. ಪರಾಕ್ರಮಿಯೂ, ಕುರುವೃದ್ಧ ಪಿತಾಮಹನೂ ಆದ ಭೀಷ್ಮನು ದುರ್ಯೋಧನನನ್ನು ಉತ್ಸಾಹಗೊಳಿಸುವಂತೆ ದೊಡ್ಡದೊಂದು ಸಿಂಹನಾದಮಾಡಿ ಶಂಖವನ್ನು ಊದಿದನು. ಒಡನೆಯೇ ಕೌರವ ಸೈನ್ಯದಲ್ಲಿ ಶಂಖಗಳೂ, ಭೇರಿಗಳೂ, ಪಣವ, ಆನಕ ಮೊದಲಾದ ವಾದ್ಯಗಳೆಲ್ಲಾ ಬಾರಿಸಲ್ಪಟ್ಟವು. ಆ ಶಬ್ದವೆಲ್ಲಾ ಒಂದಾಗಿ ಅತಿ ಪ್ರಬಲವಾಗಿ ಘೋಷಿಸಿದವು.

ಇಷ್ಟರಲ್ಲಿ ಈ ಕಡೆ ಬಿಳೀ ಕುದುರೆಗಳನ್ನು ಹೂಡಿದ ದೊಡ್ಡ ರಥದಲ್ಲಿ ಕುಳಿತಿದ್ದ ಅರ್ಜುನನು ದೇವದತ್ತವನ್ನೂ, ಅವನ ಸಾರಥಿಯಾಗಿದ್ದ ಕೃಷ್ಣನು ಪಾಂಚಜನ್ಯವನ್ನೂ ಊದಿದರು. ಅತಿ ಪರಾಕ್ರಮವುಳ್ಳ ಭೀಮನು ಪೌಂಡ್ರಕವೆಂಬ ತನ್ನ ಮಹಾಶಂಖ ವನ್ನೂ, ಊದಿದನು. ಹಾಗೆಯೇ ಧರ್ಮರಾಜನು ಅನಂತ ವಿಜಯವೆಂಬ ತನ್ನ ಶಂಖ ವನ್ನೂ, ನಕುಲ ಸಹದೇವರಿಬ್ಬರೂ ಸುಘೋಷಮಣಿಪುಷ್ಪಕಗಳೆಂಬ ತಮ್ಮ ತಮ್ಮ ಶಂಖಗಳನ್ನೂ ಊದಿದರು. ಇದೇ ರೀತಿಯಲ್ಲಿ ಮಹಾಧನುರ್ಧರನಾದ ಕಾಶೀರಾಜ ನೂ, ಮಹಾರಥನಾದ ಶಿಖಂಡಿಯೂ, ದೃಷ್ಟದ್ಯುಮ್ನನೂ, ಸಾತ್ಯಕಿಯೂ ಶಂಖಗಳನ್ನು ಊದಿದರು. ದ್ರುಪದನೂ, ದ್ರೌಪದಿಯ ಮಕ್ಕಳಾದ ಉಪಪಾಂಡವರೂ, ಸುಭದ್ರಾ ಕುಮಾರನೂ ಮಹಾಬಾಹುವೂ ಆದ ವೀರ ಅಭಿಮನ್ಯುವೂ, ನಾನಾಕಡೆಗಳಿಂದ ಬೇರೆ ಬೇರೆಯಾಗಿ ತಮ್ಮ ತಮ್ಮ ಶಂಖಗಳನ್ನು ಊದಿದರು. ಹೀಗೆ ಪಾಂಡವರ

ಕಡೆಯಿಂದ ಒಂದಾಗಿ ಸೇರಿದ ಶಂಖಧ್ವನಿಗಳು, ಭೂಮ್ಯಾಕಾಶಗಳನ್ನೆಲ್ಲಾ ಪ್ರತಿಧ್ವನಿಗೊಳಿಸುತ್ತಾ ಕೌರವರ ಹೃದಯವನ್ನು ನಡುಗಿಸಿಬಿಟ್ಟವು.

ಯುದ್ಧವನ್ನು ಆರಂಭಿಸುವ ಸಮಯದಲ್ಲಿ ಅರ್ಜುನನು ತನ್ನ ಬಿಲ್ಲನ್ನು ಮೇಲಕ್ಕೆ ಎತ್ತಿ ಹಿಡಿದು, ಸಾರಥಿಯಾದ ಕೃಷ್ಣನನ್ನು ನೋಡಿ – "ಕೃಷ್ಣಾ ಈ ಎರಡು ಸೇನೆಗಳ ನಡುವೆ ರಥವನ್ನು ತಂದು ನಿಲ್ಲಿಸು. ಈ ಯುದ್ಧದಲ್ಲಿ ಯಾರೊಡನೆ ನಾನು ಯುದ್ಧ ಮಾಡಬೇಕೋ, ಯಾರು ಯಾರು ಈ ಯುದ್ಧದಲ್ಲಿ ದುರ್ಮಾರ್ಗನಾದ ದುರ್ಯೋಧನನಿಗೆ ಪ್ರಿಯವನ್ನು ಉಂಟುಮಾಡಬೇಕೆಂದು ಯುದ್ಧೋತ್ಸಾಹದಿಂದ ಬಂದಿರುವರೋ ಅವರೆಲ್ಲರನ್ನೂ ನಾನು ಒಮ್ಮೆ ಚೆನ್ನಾಗಿ ನೋಡಬೇಕು" ಎಂದನು. ಅರ್ಜುನನ ಈ ಮಾತನ್ನು ಕೇಳಿದ ಒಡನೆ ಶ್ರೀ ಕೃಷ್ಣನು ಆ ಎರಡು ಸೇನೆಗಳ ನಡುವೆ, ಕೌರವರ ಕಡೆಯವರಾದ ಭೀಷ್ಮ, ದ್ರೋಣ ಮುಂತಾಗಿ ಎಲ್ಲರ ಮುಂದೆ ತನ್ನ ರಥವನ್ನು ತಂದು ನಿಲ್ಲಿಸಿದನು. ಅರ್ಜುನನನ್ನು ಕುರಿತು "ಎಲೈ ಅರ್ಜುನನೇ, ಅದೋ ಅಲ್ಲಿ ಬಂದು ಸೇರಿರುವ ಕೌರವಪಕ್ಷದವರನ್ನೆಲ್ಲಾ ನೋಡು". ಎಂದು ಹೇಳಿದನು.

ಆಗ ಅರ್ಜುನನು ತನ್ನ ಮುಂದೆ ಕಂಡದ್ದೇನು! ತನ್ನ ತಾತ ಭೀಷ್ಮನೂ, ತನ್ನ ಆಚಾರ್ಯ ದ್ರೋಣನೂ ತನ್ನ ಮುಂದೆ ತನ್ನ ಎದುರಾಗಿ ಯುದ್ಧಮಾಡಲು ನಿಂತಿರುವುದನ್ನು ನೋಡಿದನು. ಅಷ್ಟು ಮಾತ್ರವಲ್ಲದೆ ಉಭಯ ಸೈನ್ಯದಲ್ಲೂ ಬಂದು ನೆರೆದಿದ್ದ ಪಿತೃಗಳು, ಪಿತಾಮಹರು, ಆಚಾರ್ಯರು, ಸೋದರಮಾವಂದಿರು, ಸಹೋದರರು, ಪುತ್ರರು, ಸ್ನೇಹಿತರು, ಮೊಮ್ಮಕ್ಕಳು ಮುಂತಾದ ಅನ್ಯೋನ್ಯ ಬಂಧು ಗಳೆಲ್ಲರೂ ಒಬ್ಬರನ್ನೊಬ್ಬರು ಕೊಲ್ಲುವುದಕ್ಕಾಗಿ ಬಂದು ಸೇರಿರುವುದನ್ನು ನೋಡಿದನು.

## II ಅರ್ಜುನನ ವಿಷಾದ ಮತ್ತು ಶೋಕ (ಶ್ಲೋಕಗಳು 28 ರಿಂದ 47)

ಯಾವಾಗ ಯುದ್ಧ ಮಾಡಲು ಸಿದ್ಧರಾಗಿ ನಿಂತಿದ್ದ ಆಚಾರ್ಯರುಗಳನ್ನೂ ತನ್ನ ಪೂಜ್ಯ ಪಿತಾಮಹನೇ ಆದಿಯಾಗಿ ಎಲ್ಲ ಬಂಧುಬಾಂಧವರನ್ನೂ ಅರ್ಜುನನು ನೋಡಿದನೋ, ಆಗ ಇದ್ದಕ್ಕಿದ್ದಂತೆ ಯಾವುದೋ ಅವ್ಯಕ್ತಶಕ್ತಿಗೆ ಅಧೀನನಾದಂತಾಗಿ, ಅವರ ಮೇಲಿನ ಬಂಧುಪ್ರೇಮದಿಂದ ಮಹತ್ತಾದ ಕನಿಕರವನ್ನು ಹೊಂದಿ, ಶೋಕದಿಂದ ಕೃಷ್ಣನಿಗೆ ಹೀಗೆಂದು ಹೇಳತೊಡಗಿದನು – "ಕೃಷ್ಣಾ ನಾನು ನನ್ನ ಮುಂದೆ ಏನು ನೋಡುತ್ತಿದ್ದೇನೆ! ಒಬ್ಬರೊಂದಿಗೆ ಒಬ್ಬರು ಶತ್ರುಗಳಂತೆ ಯುದ್ಧ ಮಾಡಲು ಸಿದ್ಧರಾಗಿ ನನ್ನ ಎದುರಿನಲ್ಲಿ ನಿಂತಿರುವ ನನ್ನ ಪೂಜ್ಯ ಹಿರಿಯರನ್ನೂ, ಬಂಧು

ಜನಗಳನ್ನೂ, ನನ್ನ ಮಿತ್ರರನ್ನೂ ನಾನು ಯುದ್ಧದಲ್ಲಿ ಕೊಲ್ಲಬೇಕಾಗಿದೆ. ಯಾವ ಕಾರಣವೂ ತಿಳಿಯದೆ ನನಗೆ ನಿತ್ರಾಣವಾಗಿ ನನ್ನ ದೇಹಾವಯವಗಳು ಸಡಿಲಿದಂತೆಯೂ, ನನ್ನ ಬಾಯೊಣಗಿದಂತೆಯೂ ಆಗಿದೆ. ನನ್ನ ಶರೀರದಲ್ಲಿ ಕಂಪನವೂ, ರೋಮಾಂಚನವೂ, ತಲೆದೋರಿದೆ. ಇದೇನು! ನನ್ನ ಗಾಂಡೀವಧನುಸ್ಸು ನನ್ನ ಕೈಯಿಂದ ಜಾರುತ್ತಿದೆ. ನನ್ನ ಚರ್ಮವೂ ತಪಿಸುತ್ತಿದೆ. ಈ ರಥದಲ್ಲಿ ಸರಿಯಾಗಿ ಕುಳಿತುಕೊಳ್ಳುವುದಕ್ಕೂ ಶಕ್ತಿಯಿಲ್ಲದಂತಾಗಿದೆ. ಅಲ್ಲದೆ ನನ್ನ ಮನಸ್ಸು ಭ್ರಾಂತಿಗೊಂಡಂತಿದೆ. ಎಲೈ ಕೇಶವನೇ ! ಎಲ್ಲೆಡೆಯಲ್ಲಿಯೂ ನನ್ನ ಕಣ್ಣಿಗೆ ದುರ್ನಿಮಿತ್ತಗಳು ಕಾಣಿಸುತ್ತಿವೆ. ಈ ರೀತಿಯಾದ ಶಾರೀರಿಕ, ಮಾನಸಿಕ ಯಾತನೆಗೆ ಒಳಗಾಗಿ ಯುದ್ಧದಲ್ಲಿ ಸ್ವಜನರೆಲ್ಲರನ್ನೂ ಕೊಲ್ಲುವುದರಿಂದ ನನಗೆ ಶ್ರೇಯಸ್ಸೇನೂ ತೋರಲಿಲ್ಲ.

ನನ್ನ ಎಲ್ಲ ಬಂಧುಗಳೂ, ಮಿತ್ರರೂ, ಕೊಲ್ಲಲ್ಪಟ್ಟ ಮೇಲೆ ರಾಜ್ಯವನ್ನು ಆಳುವುದರಿಂದ ಏನು ಪ್ರಯೋಜನ ? ಎಲ್ಲರೂ ಹೋದಮೇಲೆ ಯಾವ ಸುಖವನ್ನು ಅನುಭವಿಸಲಿ ? ಅಲ್ಲದೆ ಬಂಧುಮಿತ್ರರೆಲ್ಲರೂ ಹತರಾದ ಮೇಲೆ ಬದುಕಿನಲ್ಲಿ ಬೇಸರವುಂಟಾಗುತ್ತದೆಯಲ್ಲವೇ! ನನಗೆ ಇದರಿಂದ ಲಭಿಸುವ ಜಯವೂ ಬೇಡ; ರಾಜ್ಯವೂ ಬೇಡ; ಸುಖವೂ ಬೇಡ; ಇನ್ನು ನನಗೆ ರಾಜ್ಯದಿಂದಾಗಲಿ, ಭೋಗ ದಿಂದಾಗಲಿ, ಈ ಬದುಕಿನಿಂದಾಗಲಿ ಆಗಬೇಕಾದುದೇನು? ನಾವು ಈ ರಾಜ್ಯವನ್ನೂ ಭೋಗಗಳನ್ನೂ, ಸುಖಗಳನ್ನೂ ಯಾರಿಗಾಗಿ ಕೋರುತ್ತೇವೆಯೋ, ಅವರೆಲ್ಲರೂ ಈಗ ತಮ್ಮ ಪ್ರಾಣವನ್ನೂ ಧನವನ್ನೂ ಲೆಕ್ಕಿಸದೆ ಈ ಯುದ್ಧಕ್ಕಾಗಿ ಬಂದು ನಿಂತಿರುವರು. ನಾನು ಅವರನ್ನು ಕೊಂದು ಅವರ ಐಶ್ವರ್ಯನ್ನು ಸ್ವಾಧೀನಪಡಿಸಿಕೊಳ್ಳಲೇ! ನನ್ನ ಸ್ವಂತ ಆಚಾರ್ಯರು, ಪಿತೃಗಳು, ಪುತ್ರರು, ಪಿತಾಮಹರು, ಸೋದರ ಮಾವಂದಿರು, ಮೊಮ್ಮಕ್ಕಳು, ಮಿತ್ರರು – ಇವರೆಲ್ಲರನ್ನೂ ಕೊಲ್ಲಲೇ? ಓ ಮಧುಸೂದನಾ, ಇವರು ನನ್ನನ್ನು ಕೊಲ್ಲುವವರಾಗಿದ್ದರೂ, ನಾನು ಇವರನ್ನು ಕೊಲ್ಲಲು ಇಷ್ಟಪಡುವುದಿಲ್ಲ. ..ನರಿಂದ ತ್ರೈಲೋಕ್ಯಾಧಿಪತ್ಯವೇ ಲಭಿಸುವ ಹಾಗಿದ್ದರೂ, ನನಗೆ ಅದು ಬೇಡ. ...ದಮೇಲೆ ಈ ಅಲ್ಪ ಭೂಮಿಗಾಗಿ ಈ ಘೋರಕೃತ್ಯವನ್ನು ನಾನು ಮಾಡಲಾರೆನು.

ಕೃಷ್ಣಾ, ನನ್ನ ಸ್ವಂತ ಬಂಧುಜನರ ಮೇಲಿನ ಪ್ರೀತಿಯಿಂದಲೂ ಚಿತ್ತಸ್ಥೈರ್ಯ ...ರುವುದರಿಂದಲೂ, ನಾನು ಯುದ್ಧಮಾಡಲು ಹಿಂಜರಿಯುತ್ತಿರುವೆನೆಂದು ...ನು ತಿಳಿಯಬಹುದು. ಧೃತರಾಷ್ಟ್ರನ ಮಕ್ಕಳನ್ನು ಕೊಲ್ಲುವುದರಿಂದ ನನಗೆ

ಸಂತೋಷವೇನಿದೆ? ಆದರೆ ಯುದ್ಧ ಮಾಡಲು ನನಗೆ ಇಷ್ಟವಿಲ್ಲದಿರುವುದಕ್ಕೆ ಅದೊಂದೇ ಕಾರಣವಲ್ಲ. ನಮ್ಮ ಬಂಧುಮಿತ್ರರನ್ನು ಕೊಲ್ಲುವುದರಿಂದ ನಮಗೆ ಪಾಪ ಬರುವುದಿಲ್ಲವೇ! ಈ ಧೃತರಾಷ್ಟ್ರ ಪುತ್ರರನ್ನು ಕೊಲ್ಲುವುದು ನಮಗೆ ಯೋಗ್ಯವಲ್ಲ. ಸ್ವ ಜನರನ್ನು ಕೊಂದು ನಾವು ಹೇಗೆ ಸುಖಿಗಳಾಗುವೆವು? ಧೃತರಾಷ್ಟ್ರನ ಮಕ್ಕಳೇನೋ ದುರಾಸೆಯಿಂದ ಬುದ್ಧಿಗೆಟ್ಟು ಕುಲಕ್ಷಯ ದೋಷವನ್ನೂ ಮಿತ್ರದ್ರೋಹಪಾತಕವನ್ನೂ ತಿಳಿಯದೆ ಯುದ್ಧಕ್ಕೆ ಬಂದಿರುವರು. ಆದರೆ ಧರ್ಮವೇ ಮೂರ್ತಿಮತ್ತಾಗಿರುವ ಧರ್ಮರಾಜನ ಸಹೋದರರಾದ ನಾವಾದರೋ ಕುಲಕ್ಷಯದಿಂದುಂಟಾಗುವ ದೋಷವನ್ನು ಚೆನ್ನಾಗಿ ತಿಳಿದೂ ಈ ಪಾಪಕಾರ್ಯದಿಂದ ನಿವೃತ್ತರಾಗಬೇಕೆಂದು ಯೋಚಿಸದಿರಬಹುದೇ!

ಅದೂ ಅಲ್ಲದೆ ಕುಲಕ್ಷಯದಿಂದ ಉಂಟಾಗುವ ದುಷ್ಪರಿಣಾಮವನ್ನು ಪರಿಶೀಲಿಸಿ ನೋಡೋಣ. ಕುಲಕ್ಷಯದಿಂದ ಸನಾತನ ಕುಲ ಧರ್ಮವೆಲ್ಲಾ ನಾಶವಾಗುವುವು. ಧರ್ಮವು ನಷ್ಟವಾದರೆ ಅಧರ್ಮವು ವಂಶವನ್ನೆಲ್ಲಾ ಸಂಪೂರ್ಣ ವಾಗಿ ಆವರಿಸುತ್ತದೆ. ಅಧರ್ಮವು ಜಾಸ್ತಿಯಾದರೆ ಆ ವಂಶದ ಕುಲಸ್ತ್ರೀಯರು ಶೀಲರಹಿತರಾಗಿ ಭ್ರಷ್ಟೆಯರಾಗುವರು. ಇದರಿಂದ ವರ್ಣಸಂಕರವುಂಟಾಗುತ್ತದೆ, ಅಂದರೆ ಬೇರೆ ಬೇರೆ ಜಾತಿ, ಪಂಥ, ನಾಗರೀಕತೆ, ಎಲ್ಲವೂ ಬೆರೆತು ಹೋಗುತ್ತದೆ. ಇದು ಸಮಾಜದ ವ್ಯವಸ್ಥಿತ ಪದ್ಧತಿಯನ್ನೇ ಗೊಂದಲಕ್ಕೀಡುಮಾಡುತ್ತದೆ. ವರ್ಣ ಸಾಂಕರ್ಯದಿಂದ ದುರಾಚಾರ ಜೀವನವನ್ನೂ ನಡೆಸುವವರೂ ಕುಲಘಾತಕರೂ ನರಕಕ್ಕೆ ಬೀಳುವರು. ಪಿತೃಗಳು ಪಿಂಡೋದಕಗಳಿಲ್ಲದೆ ನರಕಕ್ಕೇ ಬೀಳುವರು, ವರ್ಣ ಸಾಂಕರ್ಯಕ್ಕೆ ಕಾರಣವಾದ ಈ ಕುಲಘಾತಕರ ಈ ದೋಷಗಳಿಂದ ಬಹುಕಾಲದಿಂದ ಅನುಸರಿಸಿ ಬಂದ ಕುಲಧರ್ಮಗಳೂ, ಜಾತಿಧರ್ಮಗಳೂ ಕೆಟ್ಟುಹೋಗುವುವು. ಇದರಿಂದ ಅವರಿಗೆ ನರಕದಲ್ಲೇ ನಿತ್ಯವಾಸವಾಗುತ್ತದೆ, ಅವರ ಹೀನಕಾರ್ಯಗಳಿಂದ ಕುಲಧರ್ಮದ ಪವಿತ್ರತೆಯೇ ನಾಶವಾಗುತ್ತದೆ.

ಈ ಯುದ್ಧದಲ್ಲಿ ನಾನು ಮುಂದಾಳಾಗಿ ನಿಂತು ಯುದ್ಧ ಮಾಡುವುದರಿಂದ ಉಂಟಾಗುವ ಅನಾಹುತಗಳೆಷ್ಟು? ರಾಜ್ಯಲಾಭದ ಆಸೆಯಿಂದ ಸ್ವಜನರನ್ನು ಕೊಲ್ಲುವುದಕ್ಕಾಗಿ ಇಲ್ಲಿಗೆ ಬಂದ ನಾವು, ಎಂತಹ ಮಹಾ ಪಾಪವನ್ನು ನಡೆಸುವುದಕ್ಕೆ ಪ್ರಯತ್ನಿಸುತ್ತಿದ್ದೇವೆ? ನಾನು ಕೌರವರ ಮೇಲೆ ಕೈಮಾಡದೆ ಶಸ್ತ್ರವನ್ನು ತ್ಯಾಗ ಮಾಡಿ ಸುಮ್ಮನಾದ ಮೇಲೂ, ಆ ಧೃತರಾಷ್ಟ್ರನ ಪುತ್ರರು ಶಸ್ತ್ರಪಾಣಿಗಳಾಗಿ ಬಂದು,

ಯುದ್ಧದಲ್ಲಿ ನನ್ನನ್ನು ಕೊಂದರೂ ಸರಿ, ಅದೇ ನನಗೆ ಅತ್ಯಂತ ಕ್ಷೇಮಕರವೆಂದು ಭಾವಿಸುತ್ತೇನೆ. ನಿಜವಾಗಿಯೂ ಈ ರೀತಿಯಾದ ಅಹಿಂಸಾ ಮಾರ್ಗದಿಂದ, ನಾವು ಯುದ್ಧದಲ್ಲಿ ಜಯವನ್ನು ಗಳಿಸಿ ಪಡೆಯುವ ಸುಖಕ್ಕಿಂತ ಹೆಚ್ಚಾದ ಸುಖ ಸಂತೋಷಗಳನ್ನು ಪಡೆಯುವೆನೆಂದು ನನಗೆ ತೋರುತ್ತದೆ.

ಹೀಗೆಂದು ಹೇಳಿ ಅರ್ಜುನನು ಅತಿ ಆಶ್ಚರ್ಯಕರವಾದ ರೀತಿಯಲ್ಲಿ, ಯುದ್ಧದಲ್ಲಿ ವಿರಕ್ತಿಯಿಂದ ಧನುರ್ಬಾಣಗಳನ್ನು ಕೆಳಗಿಟ್ಟು ವ್ಯಸನದಿಂದ ಕುಗ್ಗಿದ ಮನಸ್ಸುಳ್ಳವನಾಗಿ ಆ ರಥದಲ್ಲಿ ಸುಮ್ಮನೆ ಕುಳಿತು ಬಿಟ್ಟನು.

ಇದು ಅರ್ಜುನನ ವಿಷಾದ ಯೋಗವೆಂಬ ಮೊದಲನೆಯ ಅಧ್ಯಾಯವು. ಈ ಮೊದಲನೆಯ ಅಧ್ಯಾಯದ ಸಾರಾಂಶವನ್ನು ಗೀತಾರ್ಥ ಸಂಗ್ರಹದ 5ನೇ ಶ್ಲೋಕದಲ್ಲಿ ಶ್ರೀ ಯಾಮುನಾಚಾರ್ಯರು ಹೀಗೆ ವಿವರಿಸಿದ್ದಾರೆ.

**ಅಸ್ಥಾನ ಸ್ನೇಹ ಕಾರುಣ್ಯ ಧರ್ಮಾಧರ್ಮ ಧಿಯಾಕುಲಂ ।**
**ಪಾರ್ಥಂ ಪ್ರಪನ್ನಮುದ್ದಿಶ್ಯ ಶಾಸ್ತ್ರಾವತಾರಣಂ ಕೃತಂ ॥**

ಅರ್ಜುನನು ಕುರುಕ್ಷೇತ್ರಯುದ್ಧ ಪ್ರಾರಂಭವಾಗುವ ಸಮಯದಲ್ಲಿ , ಸ್ನೇಹ ಕರುಣೆಗೆ ಯೋಗ್ಯರಲ್ಲದವರಲ್ಲಿ ಕರುಣೆಯುಳ್ಳವನಾಗಿ ಮತ್ತು ಕ್ಷತ್ರಿಯನಾದ ತನಗೆ ಕರ್ತವ್ಯವೂ ಧರ್ಮವೂ ಆದ ದುಷ್ಟ ನಿಗ್ರಹ ಮಾಡುವ ಯುದ್ಧದಲ್ಲಿ ಅದು ತನಗೆ ಅಧರ್ಮವೆಂಬ ಭಾವನೆ ಹೊಂದಿದವನಾಗಿ, ವ್ಯಾಕುಲ ಚಿತ್ತನಾಗಿ ಮೋಹಗೊಂಡನು. ತನ್ನ ಕರ್ತವ್ಯವೇನೆಂಬುದನ್ನು ಅರಿಯದೆ, ತನಗೆ ಸಾರಥಿಯಾಗಿದ್ದ ಶ್ರೀಕೃಷ್ಣನಲ್ಲಿ ಅವನು ಶರಣಾಗತಿ ಮಾಡಿ, ತನಗೆ ಜ್ಞಾನೋಪದೇಶ ಮಾಡಿ ಮಾರ್ಗದರ್ಶನ ನೀಡಬೇಕೆಂದು ಪ್ರಾರ್ಥಿಸುತ್ತಾನೆ. ಆಗ ಶ್ರೀಕೃಷ್ಣನು ಅರ್ಜುನನನ್ನು ವ್ಯಾಜವಾಗಿ ಇಟ್ಟುಕೊಂಡು, ಈ ಭಗವದ್ಗೀತಾ ಶಾಸ್ತ್ರವನ್ನು ಎಲ್ಲರಿಗೂ ಉಪದೇಶ ಮಾಡಿದ್ದಾನೆ ಎಂಬುದೇ ಗೀತೆಯ ಮೊದಲನೆಯ ಅಧ್ಯಾಯದ ಸಾರಾಂಶ.

*****

## ಎರಡನೆಯ ಅಧ್ಯಾಯ

# ಸಾಂಖ್ಯ ಯೋಗ

ವಿಷಯ ಸೂಚಿಕೆ :


I ಅರ್ಜುನನ ಶೋಕ ಮತ್ತು ಪರಮಾತ್ಮನಲ್ಲಿ ಶರಣಾಗತಿ
(ಶ್ಲೋಕಗಳು 1 ರಿಂದ 10)

II ಆತ್ಮನ ನಿತ್ಯತೆ, ದೇಹದ ಅನಿತ್ಯತೆ ಮತ್ತು ಇವೆರಡರ ಪರಸ್ಪರ ವೈಲಕ್ಷಣ್ಯ
(ಶ್ಲೋಕಗಳು 11 ರಿಂದ 30)

1. ದೇಹ ಮತ್ತು ಆತ್ಮ ಇವುಗಳ ಪರಸ್ಪರ ವೈಲಕ್ಷಣ್ಯ (11 ರಿಂದ 15)

2. ಆತ್ಮನ ನಿತ್ಯತೆ- ನಾಶರಹಿತನಾದ ಆತ್ಮನಿಗಾಗಿ ಶೋಕಿಸಬೇಡ (16 ರಿಂದ 25)

3. ದೇಹದ ಅನಿತ್ಯತೆ, ನಾಶವುಳ್ಳ ದೇಹದ ವಿನಾಶಕ್ಕಾಗಿ ದುಃಖಿಸಬೇಡ
(26 ರಿಂದ 30)

III ಕರ್ಮಯೋಗದ ನಿರೂಪಣೆ (ಶ್ಲೋಕಗಳು 31 ರಿಂದ 54)

1. ಸ್ವಧರ್ಮವನ್ನು ಕರ್ಮಯೋಗವಾಗಿ ಆಚರಿಸು ಇದೇ ನಿನ್ನ ಕರ್ತವ್ಯ
(31 ರಿಂದ 37)

2. ಕರ್ಮಯೋಗದ ವರ್ಣನೆ (38 ರಿಂದ 54)

i) ಕರ್ಮಯೋಗದ ಮಹತ್ವ (38 ರಿಂದ 46)

ii) ಕರ್ಮಯೋಗದ ಲಕ್ಷಣ (47 ರಿಂದ 53)

IV ಸ್ಥಿತಪ್ರಜ್ಞತೆಯ ನಿರೂಪಣೆ (ಶ್ಲೋಕಗಳು 54 ರಿಂದ 72)

1. ಸ್ಥಿತಪ್ರಜ್ಞತೆಯ ಲಕ್ಷಣ ಮತ್ತು ಅದರ ನಾಲ್ಕು ಅವಸ್ಥೆಗಳು (54 ರಿಂದ 58)

2. ಸ್ಥಿತಪ್ರಜ್ಞತೆಯ ಕಷ್ಟಸಾಧ್ಯತೆ (59 ರಿಂದ 60)

3. ಸ್ಥಿತಪ್ರಜ್ಞತೆಯನ್ನು ಪಡೆಯಲು ಉಪಾಯ = ಪರಮಾತ್ಮ ಚಿಂತನೆ (61)

4. ವಿಷಯ ಚಿಂತನೆಯಿಂದ ಪ್ರಾಪ್ತವಾಗುವ ಅನರ್ಥ ಮತ್ತು ಪರಮಾತ್ಮ ಚಿಂತನೆಯಿಂದ ಲಭಿಸುವ ಶ್ರೇಯಸ್ಸು (62 ರಿಂದ 67)

## 5. ಸ್ಥಿತಪ್ರಜ್ಞತೆ. ಆದರಿಂದ ಲಭಿಸುವ ಪರಮಶಾಂತಿ ಮತ್ತು ಆನಂದ (68 ರಿಂದ 72)

## I ಅರ್ಜುನನ ಶೋಕ, ಪರಮಾತ್ಮನಲ್ಲಿ ಶರಣಾಗತಿ ಮತ್ತು ಗೀತೋಪದೇಶದ ಪ್ರಾರಂಭ (ಶ್ಲೋಕಗಳು 1 ರಿಂದ 10)

ತನ್ನ ಬಂಧು ಮಿತ್ರರಿಗೆ ಉಂಟಾಗುವ ಸಾವಿಗಾಗಿ ಶೋಕಗೊಂಡ ಅರ್ಜುನನ ಕಣ್ಣುಗಳು ದುಃಖಾಶ್ರುಗಳಿಂದ ತುಂಬಿದವು. ಅವನ ಮನಸ್ಸು ಅತ್ಯಂತ ವ್ಯಾಕುಲಗೊಂಡಿತು. ಆಗ ದುಃಖಿಸುತ್ತಿರುವ ಅರ್ಜುನನನ್ನು ನೋಡಿ ಕೃಷ್ಣನು ಹೀಗೆ ಹೇಳುತ್ತಾನೆ – "ಅರ್ಜುನ! ಇದೇನಿದು ಅಜ್ಞಾನಿಗಳಿಗೆ ಯೋಗ್ಯವಾದ, ಪರಲೋಕ ಸಾಧನೆಗೆ ವಿರೋಧವಾದ, ಇಹಲೋಕದಲ್ಲಿ ಅಪಕೀರ್ತಿಯನ್ನು ತರತಕ್ಕ ಈ ಮನೋವ್ಯಾಕುಲತೆಯು ಇಂತಹ ಅಕಾಲದಲ್ಲಿ ನಿನಗೆ ಹೇಗೆ ಉಂಟಾಯಿತು? ಹೇಡಿಯಾಗಬೇಡ. ಈರೀತಿ ಎದೆಗುಂದುವುದು ನಿನ್ನಂತಹ ವೀರನಿಗೆ ಯೋಗ್ಯವಲ್ಲ, ಸಂದಿಗ್ಧವಾದ ವೇಳೆಯಲ್ಲಿ ನಿನಗೆ ಬಂದಿರತಕ್ಕ ನಿನ್ನ ಮನಸ್ಸಿನ ಈ ಹೀನವಾದ ದುರ್ಬಲತೆಯನ್ನು ಬಿಟ್ಟು ಉತ್ಸಾಹದಿಂದ ಯುದ್ಧ ಸನ್ನದ್ಧನಾಗಿ ಏಳು" ಎಂದನು. ಆಗ ಅರ್ಜುನನು ಕೃಷ್ಣನಿಗೆ ಈರೀತಿ ಹೇಳುತ್ತಾನೆ – "ಓ ಮಧುಸೂದನಾ! ಗುರುಗಳಾದ, ಪೂಜಾರ್ಹರಾದ ಭೀಷ್ಮದ್ರೋಣರನ್ನು ಯುದ್ಧದಲ್ಲಿ ಎದುರಿಸಿ, ಹೇಗೆ ತಾನೆ ನಾನು ಬಾಣಗಳಿಂದ ಅವರೊಡನೆ ಹೋರಾಡಲಿ? ಮಹಾತ್ಮರಾದ ಗುರುಗಳನ್ನು ಕೊಂದು ರಾಜ್ಯಾಧಿಪತ್ಯವನ್ನು ಅನುಭವಿಸುವುದಕ್ಕಿಂತ ಭಿಕ್ಷಾನ್ನದಿಂದ ಜೀವಿಸುವುದಾದರೂ ಮೇಲೆಂದು ನನಗೆ ತೋರುತ್ತದೆ. ಒಂದು ವೇಳೆ ಅವರನ್ನು ಕೊಂದರೂ ನನಗೆ ಬರುವ ಲಾಭವೇನು? ಈ ಪ್ರಪಂಚದಲ್ಲಿ ನಾನು ಅವರ ರಕ್ತದಿಂದ ತೋಯ್ದ ಭೋಗಗಳನ್ನೇ ಅನುಭವಿಸಬೇಕಾಗುತ್ತದೆ. ಅವರನ್ನು ನಾವು ಜಯಿಸುತ್ತೇವೆಯೋ, ಅಥವಾ ಅವರೇ ನಮ್ಮನ್ನು ಜಯಿಸುತ್ತಾರೆಯೋ ಇವೆರಡರಲ್ಲಿ ಯಾವುದು ಮೇಲೆಂದು ನನಗೆ ತಿಳಿಯುತ್ತಿಲ್ಲ. ಆದರೆ ನನಗೆ ಯಾರನ್ನು ಕೊಂದು ಬದುಕಬೇಕೆಂಬ ಆಸೆಯಿಲ್ಲವೋ ಅಂತಹ ಧೃತರಾಷ್ಟ್ರನ ಮಕ್ಕಳೇ ಎದುರಾಗಿ ಬಂದು ನಿಂತಿರುವರು. ಕೃಷ್ಣಾ, ವ್ಯಸನದಿಂದಲೂ, ಪಾಪಭಯದಿಂದಲೂ ಕಲಕಿದ ಮನಸ್ಸುಳ್ಳವನಾಗಿ ಧರ್ಮ ವಿಚಾರದಲ್ಲಿ ಸಂದಿಗ್ಧಚಿತ್ತನಾಗಿ, ನಾನು ನಿನ್ನನ್ನು ಕೇಳುತ್ತಿದ್ದೇನೆ. ಮುಂದೆ ನನಗೆ ಯಾವುದು ಶ್ರೇಯಸ್ಕರವೋ ಅದನ್ನು ನೀನೇ ನನಗೆ

ಹೇಳಬೇಕು. ನಾನು ನಿನಗೆ ಶಿಷ್ಯನು. ಶರಣಾಗತನಾದ ನನ್ನನ್ನು ಅನುಗ್ರಹಿಸಿ, ಸರಿಯಾದ ದಾರಿಯಲ್ಲಿ ನನ್ನನ್ನು ನಡೆಸು. ನೀನೇ ನನಗೆ ಮಾರ್ಗದರ್ಶನ ನೀಡಬೇಕು. ಭೂಮಿಯಲ್ಲಿ ಐಶ್ವರ್ಯ ಸಮೃದ್ಧವಾದ ಮತ್ತು ನಿಷ್ಕಂಟಕವಾದ ರಾಜ್ಯವನ್ನಾಗಲೀ, ಕೊನೆಗೆ ಸ್ವರ್ಗದ ದೇವೇಂದ್ರನ ಪದವಿಯನ್ನಾಗಲೀ ಹೊಂದಬಹುದಾಗಿದ್ದರೂ, ಇಂದ್ರಿಯಗಳನ್ನು ಶೋಷಿಸತಕ್ಕ ಈ ನನ್ನ ದುಃಖವನ್ನು ನೀಗಿಸುವ ಉಪಾಯವೇನೋ ಅದು ನನಗೆ ತಿಳಿಯದಾಗಿದೆ" ಎಂದು ಶ್ರೀ ಕೃಷ್ಣನಲ್ಲಿ ಶರಣಾಗತಿ ಮಾಡಿ "ಕೃಷ್ಣಾ ನಾನಂತೂ ಯುದ್ಧಮಾಡಲಾರೆನು", ಎನ್ನುತ್ತಾ ಅರ್ಜುನನು ಸುಮ್ಮನೆ ಕುಳಿತುಬಿಟ್ಟನು. ಹೀಗೆ ಆಶ್ಚರ್ಯಕರವಾದ ರೀತಿಯಲ್ಲಿ ಇಂತಹ ವಿಷಮಗಳಿಗೆಯಲ್ಲಿ ಎರಡು ಸೈನ್ಯಗಳ ನಡುವೆ ದುಃಖಿಸುತ್ತಾ ರಥದಲ್ಲಿ ಕುಳಿತುಬಿಟ್ಟ ಶರಣಾಗತನಾದ ಅರ್ಜುನನನ್ನು ನೋಡಿ, ಕೃಷ್ಣನು ನಗುಮುಖದಿಂದ ಹೀಗೆ ಹೇಳತೊಡಗಿದನು.

## ಗೀತೋಪದೇಶದ ಪ್ರಾರಂಭ

ಇಲ್ಲಿಂದ ಅಂದರೆ ಎರಡನೇ ಅಧ್ಯಾಯದ ಹನ್ನೊಂದನೇ ಶ್ಲೋಕದಿಂದ ಭಗವದ್ಗೀತೆಯ ಉಪದೇಶ ಪ್ರಾರಂಭವಾಗುತ್ತದೆ. ಅರ್ಜುನನ ಮೋಹ ನಾಶಕ್ಕಾಗಿ ಪರಮಾತ್ಮನು ದೇಹ ಆತ್ಮರುಗಳ ನಿಜ ಸ್ವರೂಪವನ್ನೂ, ಪರಮಾತ್ಮನ ಸ್ವರೂಪವನ್ನೂ ಮತ್ತು ಪರಮಾತ್ಮನನ್ನು ಹೊಂದಲು ಉಪಾಯಗಳಾದ ಕರ್ಮ, ಜ್ಞಾನ, ಭಕ್ತಿ ಮತ್ತು ಶರಣಾಗತಿಯೋಗಗಳ ವಿಚಾರವನ್ನೂ ವಿಸ್ತಾರವಾಗಿ ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳಲ್ಲಿ ತಿಳಿಸಿದ್ದಾನೆ. ಈ ಉಪದೇಶವು ಸರ್ವದೇಶ, ಸರ್ವಕಾಲದ ಸರ್ವಮಾನವರಿಗೂ ಅನ್ವಯಿಸುವಂತಹ ಮಹತ್ತರವಾದ ಸರ್ವೋದಯ ಸಂದೇಶವಾಗಿದೆ.

### II ಆತ್ಮನ ನಿತ್ಯತೆ, ದೇಹದ ಅನಿತ್ಯತೆ ಮತ್ತು ಇವೆರಡರ ಪರಸ್ಪರ ವೈಲಕ್ಷಣ್ಯ (ಶ್ಲೋಕಗಳು 11 ರಿಂದ 30)

#### 1. ದೇಹ ಮತ್ತು ಆತ್ಮ ಇವೆರಡರ ಪರಸ್ಪರ ವೈಲಕ್ಷಣ್ಯ (ಶ್ಲೋಕಗಳು 11 ರಿಂದ 15)

ತನ್ನಲ್ಲಿ ಶರಣಾಗತನಾಗಿ, ತನಗೆ ಮಾರ್ಗದರ್ಶನ ನೀಡಬೇಕೆಂದು ಪ್ರಾರ್ಥಿಸಿದ ಅರ್ಜುನನಿಗೆ ಶ್ರೀಕೃಷ್ಣ ಗೀತೋಪದೇಶವನ್ನು ಪ್ರಾರಂಭಿಸುತ್ತಾನೆ.

"ಅರ್ಜುನ, ಯಾರಾದರೂ ಮೃತರಾದರೆ, ದೇಹದ ಮತ್ತು ಆತ್ಮನ ನಿಜ ಸ್ವರೂಪಗಳನ್ನು ಅರಿತ ಜ್ಞಾನಿಗಳು ಶರೀರವನ್ನು ಕುರಿತಾಗಲಿ, ಆತ್ಮನನ್ನು ಕುರಿತಾಗಲೀ ದುಃಖಿಸುವುದಿಲ್ಲ. ನೀನು, ದುಃಖಿಸಲು ಯೋಗ್ಯರಲ್ಲದ ಕೌರವರ ಸಾವಿಗಾಗಿ ದುಃಖಿಸುತ್ತಿರುವೆ. ಆದರೂ ಧರ್ಮವನ್ನು ತಿಳಿದವನಂತೆ ತಾರ್ಕಿಕವಾಗಿ ಮಾತನಾಡುತ್ತಿದ್ದೀಯೆ. ಈಗ ನನ್ನಿಂದ ತತ್ವಶಾಸ್ತ್ರ, ನೀತಿ ಶಾಸ್ತ್ರಗಳ ಸಾರಾಂಶವನ್ನು ತಿಳಿದುಕೊಂಡು ನಿಜವಾದ ಜ್ಞಾನಿಯಾಗು.

ನಾನಾಗಲಿ, ನೀನಾಗಲಿ, ಈ ರಾಜರಾಗಲಿ ಹಿಂದೆ ಯಾವಾಗಲೂ ಇಲ್ಲದಿದ್ದವರಲ್ಲ; ಮುಂದೆ ಇಲ್ಲದೆ ಹೋಗುವವರೂ ಅಲ್ಲ. ನಾವೆಲ್ಲರೂ ಹಿಂದೆ ಇದ್ದವರೇ, ಮುಂದೆಯೂ ಇರತಕ್ಕವರೇ; ನಾನು, ನೀನು, ಈ ರಾಜರುಗಳು ಎಲ್ಲರೂ ಹಿಂದೆಯೂ ಇದ್ದೆವು, ಈಗಲೂ ಇದ್ದೇವೆ. ಮತ್ತು ಮುಂದೆಯೂ ಇರುತ್ತೇವೆ, (ಇಲ್ಲಿ ನಾನು, ನೀನು, ಇವರು ಎಂದು ಬೇರೆ ಬೇರೆಯಾಗಿ ಹೇಳಿರುವುದರಿಂದ ಪರಮಾತ್ಮನಿಗೂ, ಆತ್ಮರುಗಳಿಗೂ ಭೇದವೂ ಮತ್ತು ಆತ್ಮರುಗಳಲ್ಲಿ ಪರಸ್ಪರ ಭೇದವೂ ಪ್ರತಿಪಾದಿಸಲ್ಪಟ್ಟಿದೆ.) ಈ ದೇಹದಲ್ಲಿ ಬಾಲ್ಯ, ಯೌವನ, ಮುಪ್ಪು ಎಂಬ ಈ ಬದಲಾವಣೆಗಳು ಹೇಗೆ ಬರುವುವೋ ಅದೇ ರೀತಿ ಈ ದೇಹವು ಹೋದರೂ ಬೇರೊಂದು ದೇಹವು ಬರುವುದು. ಆದ್ದರಿಂದ ಜ್ಞಾನಿಯು ತನ್ನ ಸಾವಿಗಾಗಲೀ, ಇಲ್ಲವೇ ತನ್ನ ಹತ್ತಿರದ ಬಂಧುಗಳ ಸಾವಿಗಾಗಲೀ ದುಃಖಿಸುವುದಿಲ್ಲ. ಎಲೈ ಕುಂತೀಕುಮಾರನೇ! ಪ್ರಾಣಿಗಳಿಗೆ ಇಂದ್ರಿಯಗಳೊಡನೆ ಶಬ್ದಾದಿವಿಷಯಗಳ ಸಂಯೋಗವೇ ಶೀತೋಷ್ಣ ಸುಖದುಃಖಗಳನ್ನು ಉಂಟುಮಾಡುವುದು. ಅವು ಆಗಾಗ್ಗೆ ಬಂದು ಹೋಗತಕ್ಕವುಗಳೇ ಹೊರತು ಸ್ಥಿರವಲ್ಲ. ಅವುಗಳನ್ನು ನೀನು ಧೈರ್ಯವಾಗಿ ಸಹಿಸಿಕೊಳ್ಳಬೇಕು. ಈ ಶೀತೋಷ್ಣ ಸುಖ ದುಃಖಾದಿಗಳು ಯಾವನನ್ನು ಕದಲಿಸಲಾರವೋ ಅವನೇ ಧೀರನು, ಈ ಸುಖದುಃಖಗಳೆರಡನ್ನೂ ಸಮವಾಗಿ ಭಾವಿಸತಕ್ಕ ಧೀರನೇ ಮೋಕ್ಷಕ್ಕೂ ಅರ್ಹನಾಗುವನು.

## 2. ಆತ್ಮನ ನಿತ್ಯತೆ - ನಾಶರಹಿತನಾದ ಆತ್ಮನಿಗಾಗಿ ಶೋಕಿಸಬೇಡ. (ಶ್ಲೋಕಗಳು 16-25)

ಹಾಗಾದರೆ ತತ್ವವಿತ್ತುಗಳಾದ ಹಿರಿಯರು ತಮ್ಮ ಸಾತ್ವಿಕ ಅನುಭವಗಳಿಂದ ಏನನ್ನು ನಿಷ್ಕರ್ಷಿಸಿದ್ದಾರೆ? ಲೋಕದಲ್ಲಿ ಇಲ್ಲದುದಕ್ಕೆ ಎಂದೂ ಇರುವಿಕೆಯಿಲ್ಲ,

ಇರುವುದಕ್ಕೆ ಎಂದಿಗೂ ಅಭಾವವಿಲ್ಲ, ಅಂದರೆ ಅಸತ್ತಾದ ದೇಹಕ್ಕೆ ಸದ್ಭಾವವಿಲ್ಲ (ಸ್ಥಿರವಾದ ಇರುವಿಕೆಯಿಲ್ಲ) ಮತ್ತು ಸತ್ತಾದ ಆತ್ಮಕ್ಕೆ ಅಸದ್ಭಾವವಿಲ್ಲ (ಅಸ್ಥಿರತ್ವವಿಲ್ಲ). ಇವೆರಡರ ಅಂದರೆ, ದೇಹಾತ್ಮಗಳ ನಿಶ್ಚಯ ಜ್ಞಾನವು ತತ್ವಜ್ಞರಾದ ಜ್ಞಾನಿಗಳಿಗೆ ಮಾತ್ರ ಇರುವುದು. ಪ್ರಪಂಚದಲ್ಲೆಲ್ಲಾ ವ್ಯಾಪಿಸಿಕೊಂಡಿರುವ ಆತ್ಮವು ನಾಶವಿಲ್ಲದುದು ಮತ್ತು ನಾಶರಹಿತನಾದ ಆತ್ಮನಿಗೆ ನಾಶವುಂಟುಮಾಡಲು ಯಾವನಿಂದಲೂ ಸಾಧ್ಯವಿಲ್ಲ. ನಾಶರಹಿತನೂ, ಇಂದ್ರಿಯದಿಂದ ಗ್ರಹಿಸಲಸಾಧ್ಯನೂ, ಶಾಶ್ವತನೂ ಆದ ಆತ್ಮನ ಬಾಹ್ಯ ಶರೀರಗಳೆಲ್ಲವೂ ಎಂದಾದರೂ ನಾಶ ಹೊಂದತಕ್ಕವುಗಳೇ ಆಗಿವೆ ಎಂದು ಹೇಳಲ್ಪಟ್ಟಿದೆ. ಆದುದರಿಂದ ನೀನು ಚಿಂತಿಸದೆ ಯುದ್ಧ ಮಾಡು.

ಅರ್ಜುನಾ! ನೀನು ಯುದ್ಧ ಮಾಡಲು ಹಿಂದೆಗೆಯುತ್ತೀಯೆ? ಯುದ್ಧದಲ್ಲಿಯಾಗಲೀ, ಬೇರೆ ಸಂದರ್ಭದಲ್ಲಿಯಾಗಲೀ, ಆತ್ಮನು ಕೊಲ್ಲಲ್ಪಡತಕ್ಕವನಲ್ಲ. ಈ ಆತ್ಮನು ಇತರರನ್ನು ಕೊಲ್ಲತಕ್ಕವನೆಂದಾಗಲೀ, ಅಥವಾ ಇತರರಿಂದ ಕೊಲ್ಲಲ್ಪಡತಕ್ಕವನೆಂದಾಗಲೀ ಯಾರು ತಿಳಿಯುವರೋ, ಅವರಿಬ್ಬರೂ ತತ್ವವನ್ನು ತಿಳಿದವರಲ್ಲ. ಆತ್ಮನು ಕೊಲ್ಲುವುದೂ ಇಲ್ಲ, ಕೊಲ್ಲಲ್ಪಡುವುದೂ ಇಲ್ಲ. ಇವನು ಹುಟ್ಟುವವನೂ ಅಲ್ಲ, ಸಾಯುವವನೂ ಅಲ್ಲ, ಹಿಂದೆ ಇಲ್ಲದಿದ್ದು ಈಗ ಬಂದವನೂ ಅಲ್ಲ, ಈಗ ಇದ್ದು ಮುಂದೆ ಇಲ್ಲದೆ ಹೋಗುವವನೂ ಅಲ್ಲ. ಯುದ್ಧದಲ್ಲಿ ಈ ಶರೀರವು ಕೊಲ್ಲಲ್ಪಟ್ಟರೂ ಜನ್ಮರಹಿತನೂ, ನಿತ್ಯನೂ, ಶಾಶ್ವತನೂ, ಸನಾತನನೂ ಆದ ಈ ಆತ್ಮನು ಕೊಲ್ಲಲ್ಪಡುವುದಿಲ್ಲ. ಪಾರ್ಥಾ! ಹೀಗೆ ಆತ್ಮನು ಹುಟ್ಟು ಸಾವು ಇಲ್ಲದವನೆಂದೂ, ನಿತ್ಯನೆಂದೂ, ಯಾವನು ತಿಳಿಯುವನೋ ಅಂತಹವನು ಹೇಗೆ ಮತ್ತೊಬ್ಬರನ್ನು ಕೊಲ್ಲಿಸಬಲ್ಲನು ಮತ್ತು ಕೊಲ್ಲಬಲ್ಲನು? ಆದರೆ ಸಾವಿರಾರು ಜನರು ಯುದ್ಧದಲ್ಲಿ ಕೊಲ್ಲುವುದನ್ನೂ ಕೊಲ್ಲಲ್ಪಡುವುದನ್ನೂ ನಾವು ನೋಡುತ್ತೇವೆಯಲ್ಲಾ ಅಂದರೆ ಅವರ ಶರೀರವು ಆತ್ಮನಿಂದ ಬೇರ್ಪಡುತ್ತದೆಯೇ ವಿನಃ ಆತ್ಮನಿಗೆ ಎಂದೂ ಸಾವಿಲ್ಲ. ಆತ್ಮನು ನಿತ್ಯನಾಗಿರುವುದರಿಂದ ಮರಣವು ಕೇವಲ ಶರೀರ ವಿಯೋಗ. ಮನುಷ್ಯನು ಮಾಸಿದ ಅಥವಾ ಹರಿದು ಹೋದ ಬಟ್ಟೆಗಳನ್ನು ತೆಗೆದು ಬಿಸುಟು, ಬೇರೆ ಹೊಸ ಬಟ್ಟೆಗಳನ್ನು ಮೈಮೇಲೆ ಹೊದ್ದುಕೊಳ್ಳುವಂತೆಯೇ, ದೇಹಿಯು ಜೀರ್ಣವಾದ ಶರೀರವನ್ನು ಬಿಟ್ಟು ಬೇರೆ ಹೊಸ ಶರೀರವನ್ನು ಹೊಂದುವನು.

ಹಾಗಾದರೆ ದೇಹಿಯು ಅಥವಾ ಆತ್ಮನ ಸ್ವಭಾವವೇನು? ಈ ಆತ್ಮನನ್ನು ಶಸ್ತ್ರಗಳು ಭೇದಿಸಲಾರವು. ಅಗ್ನಿಯು ದಹಿಸಲಾರದು. ನೀರು ಅವನನ್ನು

ನೆನೆಸಲಾರದು, ಗಾಳಿಯು ಅವನನ್ನು ಶೋಷಿಸಲಾರದು. ಆತ್ಮವೆಂಬುದು ಭೇದಿಸುವುದಕ್ಕಾಗಲೀ, ಸುಡುವುದಕ್ಕಾಗಲೀ, ನೆನೆಸುವುದಕ್ಕಾಗಲೀ, ಶೋಷಿಸು ವುದಕ್ಕಾಗಲೀ ಆಗದ ನಿತ್ಯವಸ್ತುವೆಂದು ತಿಳಿ. ಇದು ಸರ್ವ ವ್ಯಾಪಿಯಾದ, ಸ್ಥಿರವಾದ, ಅಚಲವಾದ ಮತ್ತು ಅನಾದಿಯಾದ ವಸ್ತು. ಆತ್ಮವು ಕಣ್ಣು ಮುಂತಾದ ಇಂದ್ರಿಯಗಳಿಗೆ ಗೋಚರಿಸುವು ದಿಲ್ಲ, ಮನಸ್ಸಿಗೂ ತೋರತಕ್ಕದಲ್ಲ, ಇದನ್ನು ವಿಕಾರ ಹೊಂದಿಸುವುದೂ ಸಾಧ್ಯವಿಲ್ಲ. ಈ ಆತ್ಮನನ್ನು ಹೀಗೆಂದು ತಿಳಿದ ಮೇಲೆ ಅವನನ್ನು ಕುರಿತು ದುಃಖಿಸಲು ಕಾರಣವಿಲ್ಲ.

### 3. ದೇಹದ ಅನಿತ್ಯತೆ - ನಾಶವುಳ್ಳ ದೇಹದ ವಿನಾಶಕ್ಕಾಗಿ ದುಃಖಿಸಬೇಡ. (ಶ್ಲೋಕಗಳು 26 ರಿಂದ 30)

ಅರ್ಜುನಾ! ಆತ್ಮನು ಅಮರನು ಎಂಬ ನಂಬಿಕೆಯು ನಿನಗೆ ಇನ್ನೂ ಬಂದಿಲ್ಲ ದಿರಬಹುದು. ಒಂದು ವೇಳೆ ಯಾವಾಗಲೂ ಹುಟ್ಟುತ್ತಲೂ ಮತ್ತು ಸಾಯುತ್ತಲೂ ಇರುವ ಈ ಶರೀರವನ್ನೇ ನೀನು ಆತ್ಮನೆಂದು ಭಾವಿಸಿದರೂ ಆಗಲೂ ನೀನು ದುಃಖಿಸುವ ಕಾರಣವಿಲ್ಲ. ಶೂನ್ಯದಿಂದ ಯಾವುದೂ ಹುಟ್ಟುವುದಿಲ್ಲ, ಇರುವ ಪದಾರ್ಥಗಳು ಬೇರೆ ಬೇರೆ ಅವಸ್ಥೆಯನ್ನು ಹೊಂದುತ್ತವೆ. ಪ್ರತಿಯೊಂದು ಪದಾರ್ಥಕ್ಕೂ ಉತ್ಪತ್ತಿಯೂ, ನಾಶವೂ ಸಿದ್ಧವು. ಅಂತೆಯೇ ನಾಶವಾದ ಪದಾರ್ಥಕ್ಕೆ ಉತ್ಪತ್ತಿಯುಂಟಾಗಿ ಕಾಲಕ್ರಮೇಣ ಅದು ನಾಶವನ್ನು ಹೊಂದುತ್ತದೆ. ಆದ್ದರಿಂದ ಹುಟ್ಟಿದವನಿಗೆ ಸಾವು ನಿಶ್ಚಯವು. ಅದರಂತೆಯೇ ಸತ್ತವನಿಗೆ ಪುನರ್ಜನ್ಮವೂ ನಿಶ್ಚಯವು. ಯಾರಿಂದಲೂ ತಪ್ಪಿಸಲು ಆಗದ ಈ ವಿಷಯದಲ್ಲಿ ಅಂದರೆ ದೇಹದ ವಿನಾಶಕ್ಕಾಗಿ ನೀನು ದುಃಖಿಸುವುದು ಉಚಿತವಲ್ಲ. ಅರ್ಜುನಾ! ಮನುಷ್ಯಾದಿ ಭೂತಗಳೆಲ್ಲವೂ ಮೊದಲು ಅವ್ಯಕ್ತವಾಗಿದ್ದು ನಡುವೆ ಕೆಲವು ಕಾಲದವರೆಗೆ ವ್ಯಕ್ತವಾಗಿ ಕಾಣಿಸಿಕೊಂಡು, ಕೊನೆಗೆ ಕಾಣಿಸದಂತೆ ಆಗುವುವು. ಅಂತಹವುಗಳ ವಿಷಯದಲ್ಲಿ ನೀನು ಯಾಕೆ ದುಃಖ ಪಡುತ್ತೀಯೆ? ಈ ಆತ್ಮನನ್ನು ಯಾವನೋ ಒಬ್ಬನು ಆಶ್ಚರ್ಯದಿಂದ ನೋಡುತ್ತಾನೆ. ಒಬ್ಬನು ಆಶ್ಚರ್ಯದಿಂದ ಹೇಳುತ್ತಾನೆ, ಯಾವನೋ ಒಬ್ಬನು ಇದನ್ನು ಕುರಿತು ಆಶ್ಚರ್ಯವಾಗಿ ಕೇಳುತ್ತಾನೆ. ಹೀಗೆ ಅವರವರು ಕಂಡು ಕೇಳಿ, ಬಾಯಿಂದ ಆಡಿದರೂ ಅವರಲ್ಲಿ ಯಾವನೂ ಇದರ ತತ್ವವನ್ನು ಯಥಾರ್ಥವಾಗಿ ತಿಳಿಯುವುದಿಲ್ಲ, ಆತ್ಮನ ಯಥಾರ್ಥ ಸ್ವರೂಪವನ್ನು ತಿಳಿಯುವುದು ಸುಲಭ ಸಾಧ್ಯವಾದುದಲ್ಲ. ಪ್ರಾಣಿಗಳ ದೇಹವು ಕೊಲ್ಲಲ್ಪಟ್ಟರೂ

ಒಳಗಿನದು ಆತ್ಮ ಎಂಬುದನ್ನು ನಿಶ್ಚಯವಾಗಿ ನಂಬಿದರೆ ನಶ್ವರವಾದ ದೇಹವಿನಾಶಕ್ಕಾಗಿ ದುಃಖಿಸುವುದು ಉಚಿತವಲ್ಲ ಎಂಬುದು ಮನದಟ್ಟಾಗುತ್ತದೆ.

## III ಕರ್ಮಯೋಗದ ನಿರೂಪಣೆ (ಶ್ಲೋಕಗಳು 31 ರಿಂದ 53)

### 1. ಸ್ವಧರ್ಮವನ್ನು ಕರ್ಮಯೋಗವಾಗಿ ಆಚರಿಸು. ಅದೇ ನಿನ್ನ ಕರ್ತವ್ಯ : (ಶ್ಲೋಕಗಳು 31 ರಿಂದ 37)

ಅರ್ಜುನಾ! ನಾನು ಈ ಪ್ರಪಂಚದಲ್ಲಿ ಇರುವ ಮನುಷ್ಯ ಮಾತ್ರದವನಾದುದರಿಂದ ಈ ಆತ್ಮನ ವಿಷಯವಾದ ತತ್ತ್ವೋಪದೇಶವು ನನಗೆ ಬೇಕಾಗಿಲ್ಲವೆಂದು ನೀನು ಹೇಳಬಹುದು. ಆಗಲೂ ನೀನು ಈ ಯುದ್ಧದಲ್ಲಿ ಯುದ್ಧ ಮಾಡದೆ ಕುಳಿತಿರುವಹಾಗಿಲ್ಲ. ಯಾತಕ್ಕೆಂದರೆ ಅನ್ಯಾಯವನ್ನು ಹೊಡೆದೋಡಿಸಿ ನ್ಯಾಯವನ್ನು ಸ್ಥಾಪಿಸುವುದೇ ಈ ಯುದ್ಧದ ಗುರಿ. ಅಲ್ಲದೆ ಕ್ಷತ್ರಿಯನಾದ ನಿನ್ನ ಸ್ವಧರ್ಮವು ಏನೆಂಬುದನ್ನು ಯೋಚಿಸಿನೋಡು. ಆಗಲೂ ಈ ಕಾರ್ಯಕ್ಕಾಗಿ ನೀನು ಹೆದರಬೇಕಾದ ಕಾರಣವಿಲ್ಲ. ಕ್ಷತ್ರಿಯನಿಗೆ ಸ್ವಧರ್ಮವಾದ ಯುದ್ಧಕ್ಕಿಂತಲೂ ಶ್ರೇಯಸ್ಕರವಾದುದು ಬೇರೊಂದಿಲ್ಲ. ಈಗ ಪ್ರಾಪ್ತವಾಗಿರುವ ಈ ಯುದ್ಧವು ತಾನಾಗಿ ತೆರೆದಿಟ್ಟಿರುವ ಸ್ವರ್ಗದ್ವಾರವೆಂದು ತಿಳಿ. ಈ ಯುದ್ಧವನ್ನು ಭಾಗ್ಯಶಾಲಿಗಳಾದ ಕ್ಷತ್ರಿಯರೇ ಪಡೆಯುವವರು. ಆದರೆ ನೀನು ಮೋಹದಿಂದಲೂ, ಅಜ್ಞಾನದಿಂದಲೂ ನಿನ್ನ ಕರ್ತವ್ಯವನ್ನು ಮಾಡದೆ, ನಿನ್ನ ಸ್ವಧರ್ಮವಾದ ಈ ಯುದ್ಧವನ್ನು ನಡೆಸದೇ ಹೋದರೆ ನಿನ್ನ ಹೆಸರನ್ನೂ, ಕೀರ್ತಿಯನ್ನೂ ಕೆಡಿಸಿಕೊಂಡು ಪಾಪವನ್ನು ಪಡೆಯುವೆ. ನಿನ್ನ ವಿಷಯವಾಗಿ ಎಲ್ಲರೂ ಎಂದೆಂದಿಗೂ ಅಳಿಯದ ಅಪವಾದವನ್ನು ನುಡಿಯುವರು. ಗೌರವವುಳ್ಳ ನಿನ್ನಂತಹವರಿಗೆ ಅಪಕೀರ್ತಿಯೆಂಬುದು ಮರಣ ಕ್ಕಿಂತಲೂ ಅಧಿಕವಾದುದು. ಬಂಧುಗಳೆಂಬ ಕನಿಕರದಿಂದ ಈಗ ನೀನು ಯುದ್ಧವನ್ನು ಬಿಟ್ಟು ಹೋದರೂ ಮಹಾರಥಿಗಳಾದವರು, ನೀನು ಭಯಪಟ್ಟು ರಣರಂಗದಿಂದ ಓಡಿ ಹೋದವನೆಂದು ತಿಳಿಯುವರು. ಇದುವರೆಗೂ ನಿನ್ನಲ್ಲಿ ವಿಶೇಷ ಗೌರವವನ್ನು ಇಟ್ಟಿದ್ದವರಿಗೆ ನೀನು ತುಚ್ಛನೆನಿಸುವೆ. ಅಲ್ಲದೆ ನಿನ್ನ ಶತ್ರುಗಳೇ ನಿನ್ನ ಸಾಮರ್ಥ್ಯವನ್ನು ನಿಂದಿಸುತ್ತಾ ನಿನ್ನ ವಿಷಯದಲ್ಲಿ ಆಡಬಾರದ ಮಾತುಗಳನ್ನೂ ಆಡತೊಡಗುವರು. ನಿನಗೆ ಇದಕ್ಕಿಂತಲೂ ದುಃಖಕರವಾದುದು ಏನಿದೆ? ಎಲೈ ಕುಂತೀ ಪುತ್ರನೇ! ಏಳು, ನನ್ನ ಬುದ್ಧಿವಾದವನ್ನು

ಕೇಳಿ, ದೃಢವಾದ ಮನಸ್ಸಿನಿಂದ ಯುದ್ಧಮಾಡು. ಈ ಯುದ್ಧದಲ್ಲಿ ನೀನು ಒಂದು ವೇಳೆ ಸತ್ತರೆ ಸ್ವರ್ಗಸುಖವನ್ನು ಪಡೆಯುತ್ತೀಯೆ. ನೀನು ಗೆದ್ದರೆ, ಭೂರಾಜ್ಯದ ಸುಖವನ್ನು ಪಡೆಯುತ್ತೀಯೆ.

## 2. ಕರ್ಮಯೋಗದ ವರ್ಣನೆ (ಶ್ಲೋಕಗಳು 38 ರಿಂದ 53)

### (i) ಕರ್ಮಯೋಗದ ಮಹತ್ವ (ಶ್ಲೋಕಗಳು 38 ರಿಂದ 46)

ಅರ್ಜುನಾ! ನಿನ್ನ ಬಂಧು ಜನರೊಂದಿಗೂ, ಮಿತ್ರರು, ಆಚಾರ್ಯರು, ಮುಖ್ಯಸ್ಥರು ಎಲ್ಲರೊಂದಿಗೂ ಯುದ್ಧ ಮಾಡಿದರೆ ನಿನಗೆ ಪಾಪವುಂಟಾಗುತ್ತದೆ ಯೆಂಬ ತಿಳಿವಳಿಕೆ ಇನ್ನೂ ನಿನ್ನ ಮನಸ್ಸಿನಲ್ಲಿ ಇರುವಂತೆ ತೋರುತ್ತದೆ. ಯಾವ ರೀತಿಯಲ್ಲಿ ಒಬ್ಬನು ತನ್ನ ಕರ್ತವ್ಯವನ್ನು ಕರ್ಮಯೋಗದ ಭಾವನೆಯಿಂದ ಮಾಡಿದರೆ ಪಾಪಕ್ಕೆ ಗುರಿಯಾಗುವುದಿಲ್ಲ ಎಂಬುದನ್ನು ನಿನಗೆ ತಿಳಿಸುತ್ತೇನೆ. ನೀನು ಈ ಸಂದಿಗ್ಧ ಸ್ಥಿತಿಯಲ್ಲಿ ಕ್ಷತ್ರಿಯನ ಕರ್ತವ್ಯವಾದ ಈ ಯುದ್ಧದಲ್ಲಿ ನಿನಗೆ ಬರಬಹುದಾದ ಸುಖದುಃಖಗಳನ್ನೂ ಜಯಾಪಜಯಗಳನ್ನೂ ಸಮವಾಗಿ ಭಾವಿಸುವ ಬುದ್ಧಿಯನ್ನು ಪಡೆದು ಯುದ್ಧ ಮಾಡಿದರೆ, ಆಗ ನೀನು ಕರ್ಮಬಂಧನದಿಂದ ಬಿಡುಗಡೆ ಹೊಂದುತ್ತೀಯೆ ಮತ್ತು ಇದರಿಂದ ನಿನಗೆ ಇಹಲೋಕದಲ್ಲಿ ರಾಜ್ಯಲಾಭವೂ, ಪರಲೋಕದಲ್ಲಿ ಉತ್ತಮಗತಿಯೂ ಪ್ರಾಪ್ತವಾಗುವುದು ಮಾತ್ರವಲ್ಲದೆ ಅವರೆಡಕ್ಕಿಂತ ಮೇಲಾಗಿ ಇರುವ ಮೋಕ್ಷಕ್ಕೆ ಸಾಧನವೂ ಆಗಬಲ್ಲದು. ಈಗ ನಿನಗೆ ಆತ್ಮಜ್ಞಾನ ಸ್ವರೂಪವಾದ ಸಾಂಖ್ಯತತ್ವವು ತಿಳಿದಿರುವುದರಿಂದ, ಯಾವ ಬುದ್ಧಿಯಿಂದ ಈ ಯುದ್ಧ ಕರ್ಮವನ್ನು ನಡೆಸಿದರೆ ಕರ್ಮ ಬಂಧವು ನೀಗಿ ಮುಕ್ತಿಯನ್ನು ನೀನು ಪಡೆಯ ಬಹುದೋ ಅಂತಹ ಕರ್ಮಯೋಗದ ವಿಷಯವನ್ನು ತಿಳಿಸುವೆನು. ಕೇಳು. ಕರ್ಮಯೋಗಾನುಷ್ಠಾನದಲ್ಲಿ ಕರ್ಮವು ಅರ್ಧದಲ್ಲಿ ಬಿಡಲ್ಪಟ್ಟರೂ ಅದಕ್ಕೆ ಫಲವುಂಟು. ಆದರಿಂದ ಯಾವ ವಿಧವಾದ ದೋಷವೂ, ತೊಂದರೆಯೂ ಉಂಟಾಗುವುದಿಲ್ಲ. ಆದರೆ ಕಾಮ್ಯಕರ್ಮಗಳನ್ನು ಸಾಂಗವಾಗಿ ಪೂರ್ಣವಾಗಿ ಮಾಡದೇ ಹೋದರೆ ಅದಕ್ಕೆ ಯಾವ ಫಲವೂ ಲಭಿಸುವುದಿಲ್ಲ. ಕರ್ಮಯೋಗದಲ್ಲಿ ಮಾತ್ರ ಅಂಶಮಾತ್ರವನ್ನು ಅನುಷ್ಠಿಸಿದರೂ ಅದು ಮಹತ್ತಾದ ಭಯದಿಂದಲೂ, ಪಾಪದಿಂದಲೂ ಕಾಪಾಡುವುದು. ಈ ಕರ್ಮಯೋಗದಲ್ಲಿ ಮುಖ್ಯವಾದದ್ದು ಆತ್ಮಯಾಥಾತ್ಮ್ಯನಿಶ್ಚಯಾತ್ಮಕ ಬುದ್ಧಿಯು ಅಂದರೆ ವ್ಯವಸಾಯಾತ್ಮಿಕ ಬುದ್ಧಿಯು.

ವ್ಯವಸಾಯ ಅಂದರೆ ನಿಶ್ಚಯ ಜ್ಞಾನ, ಆತ್ಮನ ಯಥಾರ್ಥ ಸ್ವರೂಪ ನಿಶ್ಚಯಾತ್ಮಕವಾದ ಬುದ್ಧಿಯೇ, ವ್ಯವಸಾಯಾತ್ಮಿಕ ಬುದ್ಧಿಯು. ಮೋಕ್ಷಾರ್ಥಿಯಾದವನು ಮೋಕ್ಷವೆಂಬ ಒಂದೇ ಫಲವನ್ನು ಉದ್ದೇಶಿಸುವುದರಿಂದ ಮನಸ್ಸು ಸ್ಥಿರವಾಗಿ ಒಂದೇ ರೀತಿಯಲ್ಲಿ ಇರುತ್ತದೆ. ಆದರೆ ಅವ್ಯವಸಾಯಿಗಳ ಬುದ್ಧಿಯು ಅಂದರೆ ಕಾಮ್ಯಕರ್ಮಗಳಲ್ಲಿ ಆಸಕ್ತರಾಗಿರುವವರ ಬುದ್ಧಿಯು ನಾನಾ ಶಾಖೆಗಳನ್ನು ಉಳ್ಳದ್ದಾಗಿಯೂ, ಅನಂತವಾಗಿಯೂ ಇವೆ. ಕಾಮ್ಯಾರ್ಥಿಗೆ ಫಲವು ಹಲವು ಬಗೆಯಾಗಿರುವುದರಿಂದ ಬುದ್ಧಿಯೂ ಹಲವು ಬಗೆಯಾಗಿರುತ್ತದೆ. ಸ್ವರ್ಗಾದಿ ಭೋಗಗಳಲ್ಲಿ ಆಸೆಯಿರುವ ಅಲ್ಪಜ್ಞರಿಗೆ ಈ ಬುದ್ಧಿಯು ಅಂದರೆ ಆತ್ಮ ಸ್ವರೂಪ ಯಥಾರ್ಥ ನಿಶ್ಚಯ ಬುದ್ಧಿಯು ಎಂದಿಗೂ ಹುಟ್ಟಲಾರದು. ಅಲ್ಪಜ್ಞರಾದ ಕೆಲವು ವೇದವಾದರತರು ವೇದವು ಕೇವಲ ಭೋಗೈಶ್ವರ್ಯ ಪುರುಷಾರ್ಥವೆಂದು ಮಿಥ್ಯಾವಾದವನ್ನು ಮಾಡುತ್ತಾರೆ. ಬಹಳ ಪವಿತ್ರವಾದ ವೇದವು ಮೋಕ್ಷೋಪಾಯಕ್ಕಿಂತ ಕೀಳು ಎನ್ನುವ ಮೂರು ವಿಧವಾದ ಪುರುಷರು ಲೋಕದಲ್ಲಿದ್ದಾರೆ. ಸತ್ವಗುಣ, ರಜೋಗುಣ ತಮೋಗುಣಗಳ ಪ್ರಾಚುರ್ಯವುಳ್ಳ ಅಧಿಕಾರಿಗಳನ್ನು ಪ್ರತಿಪಾದಿಸುವ ವೇದವು ಅವರವರಿಗೆ ಯಾವ ಯಾವ ಗುಣವು ಪ್ರಾಧಾನ್ಯವಾಗಿ ಇರುವುದೋ ಅವುಗಳಿಗೆ ಬೇಕಾದ ಪ್ರಾಪಂಚಿಕ ಭೋಗೈಶ್ವರ್ಯ ಸಾಧನೆಯನ್ನು ತಿಳಿಸುತ್ತದೆ ಎಂಬುದು ನಿನಗೆ ಬಹಳ ಆಶ್ಚರ್ಯವನ್ನು ಉಂಟು ಮಾಡಬಹುದು. ಅದು ಸಾತ್ವಿಕರು, ರಾಜಸರು, ತಾಮಸರು ತಮಗೆ ಬೇಕಾದುದನ್ನು ಆರಿಸಿ ತೆಗೆದುಕೊಳ್ಳಬಹುದಾದ ಒಂದು ದೊಡ್ಡ ಉಗ್ರಾಣದಂತೆ ಇದೆ. ವೇದವು ಸರ್ವವ್ಯಾಪಿಯಾಗಿದ್ದು ಎಲ್ಲವನ್ನೂ ಅಡಗಿಸಿಕೊಂಡಿದೆ. ನೀನು ಈ ತ್ರಿಗುಣಗಳ ಅಧಿಕತೆ ಇಲ್ಲದವನಾಗಿ ಸತ್ವಗುಣವೊಂದನ್ನೇ ಆರಿಸಿಕೊಳ್ಳಬೇಕು. ಅಲ್ಲದೆ ಸುಖದುಃಖಾದಿ ದ್ವಂದ್ವಗಳನ್ನು ಜಯಿಸಿ ನಿರ್ದ್ವಂದ್ವನಾಗಿ, ನಿನ್ನ ಯೋಗಕ್ಷೇಮದ ಚಿಂತೆಯನ್ನು ತೊರೆದು, ಆತ್ಮನಲ್ಲಿಯೇ ದೃಢವಾದ ಮನಸ್ಸುಳ್ಳವನಾಗಬೇಕು. ವೇದವು ತುಂಬಿ ತುಳುಕುವ ಒಂದು ದೊಡ್ಡ ಜಲಾಶಯದ ಹಾಗೆ ಇದೆ. ಕೋಡಿ ಹರಿಯುತ್ತಿರುವ ಜಲಾಶಯದಲ್ಲಿ ಸುತ್ತಲೂ ನೀರು ತುಂಬಿ ತುಳುಕುತ್ತಿದ್ದರೂ, ಬಾಯಾರಿದವನು ತನಗೆ ಬೇಕಾದಷ್ಟು ನೀರನ್ನು ಮಾತ್ರ ತೆಗೆದುಕೊಳ್ಳುವ ಹಾಗೆ ವೇದವಿತ್ತಾದ ಮುಮುಕ್ಷುವು ಸಮಸ್ತ ವೇದಗಳಲ್ಲಿ ಮೋಕ್ಷ ಸಾಧನೆಗೆ ಎಷ್ಟು ಅಂಶಗಳು ತನಗೆ ಅವಶ್ಯಕವೋ ಅಷ್ಟನ್ನು ಮಾತ್ರ ಗ್ರಹಿಸಬೇಕು.

## ii) ಕರ್ಮಯೋಗದ ಲಕ್ಷಣ (47 ರಿಂದ 53)

ಇದುವರೆಗೂ ನಿನಗೆ ಈ ಯೋಗದ ಪ್ರಾಮುಖ್ಯತೆಯನ್ನೂ, ಶ್ರೇಷ್ಠತೆಯನ್ನೂ ತಿಳಿಸಿದೆನು. ಇನ್ನು ಮುಂದೆ ನಿನಗೆ ಅದರ ಸಾರ ಅಥವ ಧರ್ಮವನ್ನು ತಿಳಿಸುವೆನು. ಕರ್ಮ ಮಾಡುವುದರಲ್ಲಿ ನಿನಗೆ ಅಧಿಕಾರವಿದೆಯೇ ಹೊರತು, ಎಂದಿಗೂ ಅವುಗಳ ಫಲದಲ್ಲಿ ಅಧಿಕಾರವಿಲ್ಲ. ಆದ್ದರಿಂದ ಫಲಕ್ಕೆ ನೀನು ಕಾರಣನೆಂದು ತಿಳಿಯಬೇಡ, ಫಲವು ಇಲ್ಲವೆಂದು ಕರ್ಮವನ್ನು ಮಾಡದೆ ಇರಬೇಡ.

ಈ ರೀತಿಯಾದ ಮನೋಭಾವನೆಯಿಂದ ಕರ್ಮವನ್ನು ಮಾಡುತ್ತಾ ಬಂದರೆ ಅದು ಆತ್ಮದ ಸ್ವರೂಪಕ್ಕೆ ಹೊಂದಿಕೆಯಾಗುತ್ತದೆ. ಈಗ ಆತ್ಮದ ಮುಖ್ಯವಾದ ಗುಣಗಳು ಯಾವುವು ಎಂಬುದನ್ನು ಮನನ ಮಾಡಬೇಕು. ಆತ್ಮವು ಅವ್ಯಯವೂ, ಅವಿಕಾರ್ಯವೂ, ಅವಧ್ಯವೂ, ಅನಂತವೂ, ಶಾಶ್ವತವೂ ಮತ್ತು ಅಮರವೂ ಆಗಿದೆ. ಅದಕ್ಕೆ ಉಷ್ಣವಾಗಲೀ, ಶೀತವಾಗಲೀ, ಸುಖದುಃಖಗಳಾಗಲೀ, ಆಯುಧವಾಗಲೀ, ಬೆಂಕಿಯಾಗಲೀ, ನೀರಾಗಲೀ, ಗಾಳಿಯಾಗಲೀ ಯಾವುದೂ ಯಾವ ರೀತಿಯಾದ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಅಲ್ಲದೆ ಈ ದ್ವಂದ್ವಗಳಿಂದ ಆತ್ಮಕ್ಕೆ ಯಾವ ರೀತಿಯಾದ ವ್ಯತ್ಯಾಸವೂ ಆಗುವುದಿಲ್ಲ. ಅವಿದ್ಯೆಯಿಂದ, ಆತ್ಮವು ದೇಹದೊಂದಿಗೆ ಸೇರಿದೆ ಎಂಬ ದೇಹಾತ್ಮ ಭ್ರಮವು ಉಂಟಾಗುತ್ತದೆ. ಶುದ್ಧವೂ, ಸತ್ವವೂ, ಆದ ಆತ್ಮವು ಕೆಲವು ವೇಳೆ ಅಜ್ಞಾನದಿಂದ ಅಸ್ಥಿರವೂ, ಅಪೂರ್ಣವೂ ಆದ ಈ ದೇಹದೊಂದಿಗೆ ತನ್ನನ್ನು ಏಕೀಭವಿಸಿಕೊಂಡು ಅನವಶ್ಯಕವಾದ ವಿಷಯಗಳನ್ನು ಅಪೇಕ್ಷಿಸುತ್ತದೆ. ಅದು ಆತ್ಮನ ನಿಜಸ್ವರೂಪಕ್ಕೆ ವಿರೋಧವಾದುದಾಗಿದೆ.

ಈವರೆಗೂ ತಿಳಿಸಿದ ಕರ್ಮಯೋಗವನ್ನು ಮೂರು ಭಾಗವಾಗಿ ವಿಂಗಡಿಸ ಬಹುದು. ಮೊದಲನೆಯದಾಗಿ ಕರ್ತವ್ಯ ಕರ್ಮವನ್ನು ಮಾಡಲೇಬೇಕು, ನೀನು ಈಗ "ನಾನು ಯುದ್ಧಮಾಡುವುದಿಲ್ಲ" ಎಂದು ಹೇಳುತ್ತಾ ಕುಳಿತಿದ್ದೀಯೆ. ನೀನು ಕರ್ಮ ಮಾಡದೇ ಇರುವ ಪ್ರವೃತ್ತಿಯನ್ನು ತ್ಯಜಿಸಿ ಕರ್ತವ್ಯ ಕರ್ಮವನ್ನು ಮಾಡುವವನಾಗು. ಎರಡನೆಯದಾಗಿ ನೀನೇ ಕರ್ಮಕ್ಕೆ ಕಾರಣನೆಂದು ತಿಳಿಯಬೇಡ. ಕರ್ಮದ ಕರ್ತೃ ನೀನಲ್ಲ ಎಂಬ ಅನುಸಂಧಾನದೊಂದಿಗೆ ಕರ್ಮ ಮಾಡು. ಮೂರನೆಯದಾಗಿ ನಿನ್ನ ಕರ್ಮದ ಫಲಗಳಿಗೂ ನೀನು ಕಾರಣನಲ್ಲ ಎಂಬುದನ್ನು ಅರಿತು ಕರ್ಮದ ಫಲವನ್ನೂ ಅಪೇಕ್ಷಿಸಬೇಡ. ಕರ್ಮಕ್ಕೂ ಅದರ ಫಲಕ್ಕೂ ನೀನು ಕಾರಣನಲ್ಲ ಎಂದರೆ ಕರ್ಮ ಮತ್ತು ಅದರ ಫಲ ಯಾರಿಗೆ ಸೇರಿವೆ ಎಂಬ ಪ್ರಶ್ನೆ ಹುಟ್ಟುತ್ತದೆ. ಅದಕ್ಕೆ, ಉತ್ತರ

ಮೂರನೆಯ ಅಧ್ಯಾಯದಲ್ಲಿ "ಸರ್ವೇಶ್ವರನಿಗೆ ಸೇರಿವೆ" ಎಂಬುದು ಮತ್ತು ಅವನು ತ್ರಿಗುಣಗಳ ಮೂಲಕ ಕರ್ಮಮಾಡಿಸುತ್ತಾನೆ ಎಂಬುದು ತಿಳಿಸಿದೆ. ಈಗ ಹೇಳಿರುವ ಪ್ರಕಾರ ಕರ್ಮದ ಕರ್ತೃ ನಾನಲ್ಲ ಎಂಬ ಅಕರ್ತೃತ್ವಾನುಸಂಧಾನದೊಂದಿಗೆ ಮತ್ತು ಫಲಾಸಕ್ತಿರಹಿತನಾಗಿ ಕರ್ಮಮಾಡು. ಒಟ್ಟಿನಲ್ಲಿ ಈ ಶ್ಲೋಕದ ಮುಖ್ಯವಾದ ತಾತ್ಪರ್ಯವೇನೆಂದರೆ ಕರ್ಮ ಮಾಡಬೇಕು. ಆದರೆ ಅದನ್ನು ಮಾಡುವಾಗ ಅಕರ್ತೃತ್ವಾನುಸಂಧಾನವೂ, ಫಲಾಭಿಸಂಧಿರಹಿತತ್ವವೂ ಇರಬೇಕು. ಇದೇ ಕರ್ಮಯೋಗದ ಉಪದೇಶ.

ನೀನು, ಕರ್ಮದಲ್ಲಿ ನಿನ್ನದು ಎಂಬ ಅಭಿಮಾನವನ್ನು ಬಿಟ್ಟು ಆ ಕರ್ಮಕ್ಕೆ ಫಲವು ಸಿದ್ಧಿಸಿದರೂ, ಸಿದ್ಧಿಸದೇ ಹೋದರೂ ಎರಡನ್ನು ಸಮವಾಗಿ ಭಾವಿಸಿ, ಚಿತ್ತ ಸ್ಥೈರ್ಯದಿಂದ ಕರ್ಮಗಳನ್ನು ಮಾಡುವವನಾಗು. ಹೀಗೆ ಸಿದ್ಧಿ ಮತ್ತು ಅಸಿದ್ಧಿ ಎರಡರಲ್ಲೂ ಸಮಭಾವದಿಂದ ಇರುವುದೇ ಯೋಗವು. ಈ ರೀತಿಯಾಗಿ ಯೋಗನಿಷ್ಠನಾಗಿ, ಕರ್ಮಗಳನ್ನು ಮಾಡಿ ಅದರ ಜಯಾಪಜಯಗಳಲ್ಲಿ ಪ್ರಶಾಂತತೆಯಿಂದ ಇರುವವನಾಗು. ಮೊದಲು ಮೊದಲು ಈರೀತಿಯಾದ ಮನೋದಾರ್ಢ್ಯವನ್ನು ಪಡೆಯುವುದು ಕಷ್ಟವಾಗಿದ್ದರೂ, ಫಲದಲ್ಲಿರುವ ಆಸಕ್ತಿ ಯನ್ನು ತ್ಯಜಿಸಲು ಸ್ಥಿರವಾದ ಅಭ್ಯಾಸವನ್ನು ಮಾಡುತ್ತಾ ಇದ್ದರೆ ಪ್ರಶಾಂತತೆಯು ತಾನಾಗಿಯೇ ಉಂಟಾಗುತ್ತದೆ.

ಅರ್ಜುನ! ಫಲದಲ್ಲಿ ಆಸಕ್ತಿ ಇಲ್ಲದೆ ಸಮಬುದ್ಧಿಯಿಂದ ನಡೆಸುವ ಕರ್ಮವು ಪರಮ ಕಲ್ಯಾಣವಾದ ಮೋಕ್ಷವನ್ನು ಕೊಡುತ್ತದೆ. ಫಲದ ಉದ್ದೇಶದಿಂದ ಮಾಡತಕ್ಕ ಕರ್ಮವು ತುಂಬಾ ನಿಕೃಷ್ಟವಾದುದು. ಆದುದರಿಂದ ಕರ್ಮಮಾಡುವಾಗ ಇಂತಹ ಸಮತ್ವಭಾವನೆಯಿಂದ ಕೂಡಿದ ಬುದ್ಧಿಯೋಗವನ್ನು ಆಶ್ರಯಿಸುವವನಾಗು. ಫಲದಲ್ಲಿಯೇ ಆಸೆ ಹೊಂದಿ ಕರ್ಮಮಾಡುವವನು ಸಂಸಾರವೆಂಬ ಚಕ್ರದಲ್ಲಿ ಸಿಕ್ಕಿ ಕಷ್ಟ ಪಡುವನು. ಆದರೆ ಫಲಾಫಲಗಳಲ್ಲಿ ಸಮತ್ವಬುದ್ಧಿಯಿಂದ ಕರ್ಮಮಾಡುವವನು ಈ ಜನ್ಮದಲ್ಲಿಯೇ ಪುಣ್ಯ – ಪಾಪಗಳೆರಡರಿಂದಲೂ ಬಿಡಲ್ಪಡುವನು. ಆದುದರಿಂದ ಕರ್ಮಗಳನ್ನು ಮಾಡುವಾಗ ಈ ಬುದ್ಧಿಯೋಗವೇ ಕುಶಲತೆಯು. ಈ ಬುದ್ಧಿಯೋಗವನ್ನು ಅಭ್ಯಾಸ ಮಾಡುವ ಮನುಷ್ಯರು ಯಾವ ಫಲವನ್ನು ಹೊಂದುತ್ತಾರೆಂದರೆ, ಅವರು ಕರ್ಮಗಳಿಂದ ಉಂಟಾಗುವ ಫಲದಲ್ಲಿ ಆಸಕ್ತಿ ಹೊಂದದೆ ಜನ್ಮದಿಂದ ಉಂಟಾಗುವ ಬಂಧನದಿಂದ ಬಿಡಲ್ಪಟ್ಟವರಾಗಿ ನಿರ್ದುಷ್ಟವಾದ ಕ್ಲೇಶರಹಿತವಾದ ಪರಮಪದವನ್ನು ಅಂದರೆ ಮೋಕ್ಷವನ್ನು ಪಡೆಯುತ್ತಾರೆ.

ಯಾವಾಗ ನಿನ್ನ ಬುದ್ಧಿಯು ಈ ಅಲ್ಪವೂ, ಅಸ್ಥಿರವೂ ಆದ ಫಲಗಳಲ್ಲಿ ಆಸೆ ಎಂಬ ಮೋಹರೂಪವಾದ ದೋಷವನ್ನು ದಾಟುವುದೋ ಆಗ ನಿನಗೆ ಸತ್ಯದ ಅರಿವು ಉಂಟಾಗುತ್ತದೆ. ಅಲ್ಲದೆ ನೀನು ಇದುವರೆಗೆ ಕೇಳಿದ ಮತ್ತು ಮುಂದೆ ಕೇಳತಕ್ಕ ವಿಷಯಗಳಲ್ಲೆಲ್ಲಾ ವಿರಕ್ತಿಯನ್ನು ಹೊಂದುವೆ. ನಿನಗೆ ಪ್ರಪಂಚದಲ್ಲಿ ಅನುಭವವು ಜಾಸ್ತಿ ಆದಷ್ಟೂ ಪ್ರಾಕೃತ ವಿಷಯಗಳಲ್ಲಿ ಖೇದವುಂಟಾಗಿ ನಿನ್ನ ಮೋಹವು ನಾಶವಾಗುತ್ತದೆ. ಯಾವಾಗ ನಿನ್ನ ಬುದ್ಧಿಯು ಮೇಲೆ ಹೇಳಲ್ಪಟ್ಟ ತತ್ವೋಪದೇಶಗಳನ್ನು ಕೇಳಿ, ಮನಸ್ಸಿನಲ್ಲಿ ಚಾಂಚಲ್ಯವನ್ನು ಹೊಂದದೆ, ಆತ್ಮ ಜ್ಞಾನಯೋಗದಲ್ಲಿ ಸ್ಥಿರವಾಗಿ ನಿಲ್ಲುವುದೋ ಆಗ ನೀನು ಯೋಗಸಿದ್ಧಿಯನ್ನು ಹೊಂದಿದವನಾಗುತ್ತೀಯೆ. ಅಂದರೆ ಶಾಸ್ತ್ರಗಳ ಅಧ್ಯಯನದಿಂದ ಆತ್ಮಯಾಥಾತ್ಮ್ಯ ಜ್ಞಾನವುಂಟಾಗುತ್ತದೆ. ಆತ್ಮ ಜ್ಞಾನದಿಂದ ಕೂಡಿದ ಕರ್ಮಯೋಗ ಅನುಷ್ಠಾನದಿಂದ ಸ್ಥಿತಪ್ರಜ್ಞತೆ ಎಂಬ ಜ್ಞಾನನಿಷ್ಠೆ ಉಂಟಾಗಿ, ಅದರಿಂದ ಆತ್ಮಸಾಕ್ಷಾತ್ಕಾರವು ಸಾಧಿಸಲ್ಪಡುತ್ತದೆ.

## IV ಸ್ಥಿತಪ್ರಜ್ಞತೆಯ ನಿರೂಪಣೆ (ಶ್ಲೋಕಗಳು 54 ರಿಂದ 72)

### 1. ಸ್ಥಿತಪ್ರಜ್ಞತೆಯ ಲಕ್ಷಣಗಳು ಮತ್ತು ಅದರ ನಾಲ್ಕು ಅವಸ್ಥೆಗಳು (ಶ್ಲೋಕಗಳು 54 ರಿಂದ 58)

ಶ್ರೀಕೃಷ್ಣನು ಅರ್ಜುನನಿಗೆ ಈ ಎರಡನೆಯ ಅಧ್ಯಾಯದಲ್ಲಿ ಮೊದಲು ಸಾಂಖ್ಯ ಬುದ್ಧಿಯನ್ನು ಅಂದರೆ ದೇಹದ ಅನಿತ್ಯತೆ, ಆತ್ಮನ ನಿತ್ಯತೆ ಮತ್ತು ದೇಹಾತ್ಮರುಗಳ ವಿಲಕ್ಷಣತೆಯನ್ನು ತಿಳಿಸಿದ್ದಾನೆ. ಅನಂತರ ಕರ್ತೃತ್ವಜ್ಞಾನರಹಿತನಾಗಿಯೂ, ಫಲ ಸಂಗರಹಿತನಾಗಿಯೂ ಕರ್ಮ ಮಾಡುವ ಬುದ್ಧಿಯೋಗವೆಂಬ ಕರ್ಮಯೋಗವನ್ನು ತಿಳಿಸಿದನು. ಈಗ ಮುಂದೆ ಇವೆರಡರಿಂದ ಉಂಟಾಗುವ ಸ್ಥಿತಪ್ರಜ್ಞತೆಯನ್ನೂ ಸ್ಥಿತಪ್ರಜ್ಞನ ಲಕ್ಷಣವನ್ನೂ ತಿಳಿಸುತ್ತಾನೆ. ಅರ್ಜುನನಿಗೆ ಸ್ಥಿತಪ್ರಜ್ಞನ ವಿಷಯವನ್ನು ತಿಳಿಯಬೇಕೆಂಬ ಕುತೂಹಲವು ಉಂಟಾಯಿತು. ಆಗ ಆತನು ಶ್ರೀಕೃಷ್ಣನನ್ನು ಸ್ಥಿತಪ್ರಜ್ಞನ ಸ್ವರೂಪ ಲಕ್ಷಣವನ್ನೂ, ಅವನ ಕಾಯಿಕ, ವಾಚಿಕ ಮತ್ತು ಮಾನಸಿಕ ವ್ಯಾಪಾರಗಳು ಯಾವ ರೀತಿ ಇವೆ ಎಂಬ ವಿಷಯವನ್ನೂ ತಿಳಿಸಬೇಕೆಂದು ಕೇಳಿಕೊಂಡನು. ಆಗ ಶ್ರೀಕೃಷ್ಣನು ಮುಂದೆ ಹೇಳುವ ರೀತಿಯಲ್ಲಿ ತಿಳಿಸುತ್ತಾನೆ.

ನಾನು ಈಗ ನಿನಗೆ ಸ್ಥಿತಪ್ರಜ್ಞನ ನಾಲ್ಕು ಅವಸ್ಥೆಗಳನ್ನು ಮೇಲಿನ ಅವಸ್ಥೆಯಿಂದ ಪ್ರಾರಂಭಿಸಿ ತಿಳಿಸುತ್ತೇನೆ. ಯಾವಾತನು ಮನಸ್ಸಿನಲ್ಲಿ ಉಂಟಾಗುವ ಇತರ ಸಮಸ್ತವಾದ ಕಾಮನೆಗಳನ್ನು ನಿಶ್ಶೇಷವಾಗಿ ಬಿಟ್ಟು ಆತ್ಮ ಸ್ವರೂಪ ಚಿಂತನೆಯಲ್ಲೇ ಮನಸ್ಸುಳ್ಳವನಾಗಿ ಸಂತುಷ್ಟನಾಗಿ ಇರುವನೋ ಅವನು ಸ್ಥಿತಪ್ರಜ್ಞನೆಂದು ಹೇಳಲ್ಪಡುವನು. ಇದು ಸ್ಥಿತಪ್ರಜ್ಞತೆಯ ಮೊದಲನೆಯ ಅವಸ್ಥೆ. ದುಃಖ ಬಂದಾಗ ಅದರಿಂದ ಖೇದವು ಇಲ್ಲದೇ ಇರುವ ಮನಸ್ಸುಳ್ಳವನಾಗಿಯೂ, ಸುಖ ಬಂದಾಗ ಅವುಗಳಲ್ಲಿ ಆಸೆಯು ಇಲ್ಲದವನಾಗಿಯೂ, ಕೋಪ, ಭಯ, ಆಸೆ ಮುಂತಾದವುಗಳಿಂದ ರಹಿತನಾಗಿಯೂ ಇರುವವನು ಸ್ಥಿರಬುದ್ಧಿಯುಳ್ಳವನೆಂದು ಕರೆಯಲ್ಪಡುವನು. ಇದು ಸ್ಥಿತಪ್ರಜ್ಞತೆಯ ಹಿಂದಿನ ಅವಸ್ಥೆ. ಇದರಲ್ಲಿ ಅವನು ಎಲ್ಲಾ ಆಸೆಗಳನ್ನು ಜಯಿಸಿರುತ್ತಾನೆ. ಆದರೆ ಆತ್ಮಜ್ಞಾನದಲ್ಲಿಯೇ ತೃಪ್ತಿಯನ್ನು ಹೊಂದುವಷ್ಟು ಸ್ಥಿರವಾದ ಬುದ್ಧಿಯನ್ನು ಹೊಂದುವುದಿಲ್ಲ. ಈ ಎರಡನೆಯ ಅವಸ್ಥೆಗೆ ಕೆಳಗಿನದಾದ ಮೂರನೆಯ ಅವಸ್ಥೆಯಲ್ಲಿ ಎಲ್ಲಾ ವಸ್ತುವಿನಲ್ಲಿಯೂ ಅಭಿಮಾನವನ್ನು ಬಿಟ್ಟು ಶುಭ ಪ್ರಾಪ್ತಿಗೆ ಆನಂದ ಪಡದೆ, ಅಶುಭ ಪ್ರಾಪ್ತಿಗೆ ವ್ಯಸನ ಪಡದೇ ಇರುವವನ ಬುದ್ಧಿಯು ಸ್ಥಿರವಾಗಿರುತ್ತದೆ. ಇದಕ್ಕೆ ಕೆಳಗಿನ ಅವಸ್ಥೆಯಾದ ನಾಲ್ಕನೆಯ ಅವಸ್ಥೆಯಲ್ಲಿ ಆಮೆಯು ಎಲ್ಲಾ ಕಡೆಗಳಿಂದಲೂ ತನ್ನ ಕೈಕಾಲುಗಳನ್ನು ಒಳಗೆ ಎಳೆದುಕೊಂಡು ಅಡಗಿಸಿ ಇಟ್ಟುಕೊಳ್ಳುವಂತೆ ಇಂದ್ರಿಯಗಳನ್ನು ಎಲ್ಲಾ ಕಡೆಯಿಂದಲೂ ಆಯಾ ಇಂದ್ರಿಯಗಳಿಗೆ ಭೋಗ್ಯವಾದ ವಿಷಯಗಳಿಂದ ಎಳೆದಿಟ್ಟುಕೊಂಡು ಮನಸ್ಸನ್ನು ಆತ್ಮನ ದಿವ್ಯಸ್ವರೂಪ ಅನುಸಂಧಾನದಲ್ಲಿ ಸ್ಥಾಪಿಸಿದರೆ ಆಗ ಅವನ ಪ್ರಜ್ಞೆಯು ಪ್ರತಿಷ್ಠಿತವಾಗುತ್ತದೆ.

ಇಲ್ಲಿ ನಾಲ್ಕು ಶ್ಲೋಕಗಳಿಂದ ಸ್ಥಿತ ಪ್ರಜ್ಞತೆಯ ನಾಲ್ಕು ಅವಸ್ಥೆಗಳು ಹೇಳಲ್ಪಟ್ಟಿವೆ. ಮೇಲಿನ ಅವಸ್ಥೆಯನ್ನು ಮೊದಲು 55ನೇ ಶ್ಲೋಕದಲ್ಲಿ ಹೇಳಿ, ಅನಂತರ ಕ್ರಮವಾಗಿ ಕೆಳಗಿನ ಅವಸ್ಥೆಗಳನ್ನು 56, 57, 58ನೇ ಶ್ಲೋಕಗಳಲ್ಲಿ ತಿಳಿಸಿದೆ. ಆದ್ದರಿಂದ ಇದನ್ನು ಅನುಷ್ಠಿಸುವ ಸಾಧಕನು ಕೆಳಗಿನಿಂದ ಪ್ರಾರಂಭಿಸಿ ಅಂದರೆ ಮೊದಲು 58ನೇ ಶ್ಲೋಕದಲ್ಲಿ ತಿಳಿಸಿರುವ ಅಭ್ಯಾಸವನ್ನು ಮಾಡಿ, ಅನಂತರ 57, 56ನೇ ಶ್ಲೋಕದಲ್ಲಿ ತಿಳಿಸಿರುವ ಅಭ್ಯಾಸವನ್ನು ಹಂತಹಂತವಾಗಿ ತಿಳಿದು ಅಭ್ಯಾಸ ಮಾಡಿ, ಕೊನೆಗೆ 55ನೇ ಶ್ಲೋಕದಲ್ಲಿ ತಿಳಿಸಿರುವ ಸ್ಥಿತಪ್ರಜ್ಞತೆಯ ಮೇಲಿನ ಅವಸ್ಥೆಯನ್ನು ಪಡೆಯಲು ಪ್ರಯತ್ನಿಸಬೇಕು. ಮೊದಲು ಆಮೆಯು ತನ್ನ ಅಂಗಗಳನ್ನೆಲ್ಲಾ ಒಳಗೆ ಎಳೆದು ಕೊಳ್ಳುವಂತೆ ಇಂದ್ರಿಯಗಳನ್ನು ವಿಷಯಗಳಲ್ಲಿ ಪ್ರವರ್ತಿಸದಂತೆ ತಡೆಯಬೇಕು.

ಅನಂತರ ಮನಸ್ಸಿನಲ್ಲಿ ವಿಷಯಗಳ ಮೇಲಿನ ಆಸೆಯು ಹೋಗುವುದಕ್ಕಾಗಿ ಮನಸ್ಸನ್ನು ಆತ್ಮ ಪರಮಾತ್ಮ ಚಿಂತನೆಯಲ್ಲಿ ನೆಲೆಗೊಳಿಸಲು ಪ್ರಯತ್ನಿಸಬೇಕು. ಹೀಗೆ ಮಾಡುತ್ತಿದ್ದರೆ ಮನಸ್ಸು ಅಹಂಕಾರ ಮಮಕಾರ, ರಹಿತವಾಗಿ ನಿರ್ಮಲವಾಗುತ್ತದೆ. ಆಗ ಸುಖದುಃಖಗಳನ್ನು ಸಮಭಾವನೆಯಿಂದ ಕಾಣುವ ಮನೋಶಕ್ತಿ ಉಂಟಾಗುತ್ತದೆ. ಕಾಲಕ್ರಮೇಣ ಅವನು ಸುಖದುಃಖಗಳು ಪ್ರಾಪ್ತವಾದಾಗ ವಿಕಾರರಹಿತನಾಗಿ, ಶಾಂತಚಿತ್ತನಾಗಿ ಇರುವ ಅರ್ಹತೆ ಪಡೆಯುತ್ತಾನೆ. ಕೊನೆಗೆ ಅವನ ಮನಸ್ಸು ಕೇವಲ ಆತ್ಮಜ್ಞಾನ ಒಂದರಲ್ಲೇ ನೆಲೆಸುವ ಅವಸ್ಥೆ ಪಡೆಯುತ್ತಾನೆ. ಆಗ ಇತರ ಯಾವ ವಿಷಯಗಳ ಕಡೆಗೂ ಗಮನ ಕೊಡದೆ, ಅದೊಂದರಲ್ಲೇ ಪ್ರೀತಿ ಹೊಂದಿ ಅದರ ಮನನದಲ್ಲೇ ಸಂತುಷ್ಟನಾಗಿ ಇರುತ್ತಾನೆ. ಇದೇ ಸ್ಥಿತಪ್ರಜ್ಞತೆಯ ಮೇಲಿನ ಹಂತ, ಇದನ್ನು ಹತ್ತಿದವನು ಆತ್ಮಸಾಕ್ಷಾತ್ಕಾರವನ್ನು ಪಡೆಯುತ್ತಾನೆ.

### 2. ಸ್ಥಿತಪ್ರಜ್ಞತೆಯ ಕಷ್ಟಸಾಧ್ಯತೆ (ಶ್ಲೋಕಗಳು 59 ಮತ್ತು 60)

ಈ ಶ್ಲೋಕಗಳಲ್ಲಿ ಸ್ಥಿತ ಪ್ರಜ್ಞತೆಯನ್ನು ಪಡೆಯುವುದು ಸುಲಭ ಸಾಧ್ಯವಲ್ಲ ಎಂದು ಹೇಳುತ್ತಾರೆ. ವಿಷಯಾನುಭವವನ್ನು ಹೊಂದದಂತೆ ಇಂದ್ರಿಯಗಳನ್ನು ತಡೆದು ನಿಗ್ರಹಿಸುವುದು ಬಹಳ ಕಷ್ಟವಾದ ಅಭ್ಯಾಸ. ವಿಷಯಾನುಭವವನ್ನು ಹೊಂದದಂತೆ ಇಂದ್ರಿಯಗಳನ್ನು ನಿಗ್ರಹಿಸಿದರೆ ವಿಷಯಾನುಭವ ಮಾತ್ರ ನಿವೃತ್ತಿಯಾಗುತ್ತದೆ. ಆದರೆ ಮನಸ್ಸಿನಲ್ಲಿ ಅವುಗಳನ್ನು ಅನುಭವಿಸಬೇಕೆಂಬ ಆಸೆಯು ನಿವೃತ್ತಿಯಾಗುವುದಿಲ್ಲ. ಈ ವಿಷಯರಾಗವು ಆತ್ಮಸ್ವರೂಪಸಾಕ್ಷಾತ್ಕಾರವಾದ ಕೂಡಲೇ ನಿವೃತ್ತಿಯಾಗುತ್ತದೆ. ಆದ್ದರಿಂದ ಇಂದ್ರಿಯಗಳನ್ನೂ ಮನಸ್ಸನ್ನೂ ಜಯಿಸುವುದು ಬಹಳ ಕಷ್ಟ. ಎಷ್ಟೇ ವಿದ್ವಾಂಸನಾದರೂ ಅವನು ಎಷ್ಟೇ ಪ್ರಯತ್ನದಿಂದ ತಡೆದಿಟ್ಟರೂ, ಅವನ ಮನಸ್ಸನ್ನೂ ಕೂಡ ಇಂದ್ರಿಯಗಳು ಬಲಪೂರ್ವಕವಾಗಿ ವಿಷಯಾನುಭವಕ್ಕೆ ಸೆಳೆಯುತ್ತವೆ.

### 3. ಸ್ಥಿತಪ್ರಜ್ಞತೆಯನ್ನು ಪಡೆಯಲು ಉಪಾಯ- ಪರಮಾತ್ಮ ಚಿಂತನೆ (ಶ್ಲೋಕ 61)

ಆದುದರಿಂದ ಎಲ್ಲಾ ಇಂದ್ರಿಯಗಳನ್ನು ವಿಷಯದಲ್ಲಿ ಪ್ರವರ್ತಿಸದಂತೆ ತಡೆದು ಪರಮಾತ್ಮನಾದ ನನ್ನಲ್ಲಿ ಮನಸ್ಸುಳ್ಳವನಾಗಿಯೂ, ಚಿತ್ತ ಸಮಾಧಾನ ಉಳ್ಳವನಾಗಿಯೂ ಇರತಕ್ಕದ್ದು. ಯಾರಿಗೆ ಮನಸ್ಸು ಮುಂತಾಗಿ ಇಂದ್ರಿಯಗಳೆಲ್ಲಾ ವಶದಲ್ಲಿ ಇರುತ್ತವೆಯೋ ಆತನ ಬುದ್ಧಿಯು ಸ್ಥಿರವಾಗಿರುತ್ತದೆ.

## 4. ವಿಷಯ ಚಿಂತನೆಯಿಂದ ಉಂಟಾಗುವ ಅನರ್ಥ ಮತ್ತು ಪರಮಾತ್ಮ ಚಿಂತನೆ ಯಿಂದ ಲಭಿಸುವ ಶ್ರೇಯಸ್ಸು (ಶ್ಲೋಕಗಳು 62 ರಿಂದ 67)

ಈಗ ಮುಂದೆ ಪರಮಾತ್ಮ ಚಿಂತನೆ ಮಾಡದೆ ವಿಷಯಚಿಂತನೆ ಮಾಡುತ್ತಿದ್ದರೆ, ಅದು ಯಾವ ರೀತಿ ಮನಸ್ಸನ್ನು ಕೆಡಿಸಿ ಮನುಷ್ಯನನ್ನು ನಾಶಪಡಿಸುತ್ತದೆ ಎಂಬುದನ್ನು ತಿಳಿಸುತ್ತೇನೆ. ಮನಸ್ಸಿನಲ್ಲಿ ವಿಷಯಗಳನ್ನೇ ಚಿಂತಿಸುತ್ತಿದ್ದರೆ ಮನುಷ್ಯನಿಗೆ ಆ ವಿಷಯಗಳಲ್ಲಿ ಆಸಕ್ತಿಯು ಉಂಟಾಗುತ್ತದೆ. ವಿಷಯಗಳಲ್ಲಿ ಆಸಕ್ತಿಯು ಮೇಲೆ ಮೇಲೆ ವೃದ್ಧಿ ಹೊಂದಿ ಅವುಗಳಲ್ಲಿ ಕಾಮವು ಅಂದರೆ ಅವುಗಳನ್ನು ಅನುಭವಿಸಬೇಕೆಂಬ ಉತ್ಕಟವಾದ ಇಚ್ಛೆಯು ಉಂಟಾಗುತ್ತದೆ. ಆ ವಿಷಯಾನುಭವಕ್ಕೆ ಪ್ರತಿಬಂಧಕವು ಉಂಟಾದರೆ ಅದರ ಮೇಲಿನ ಕೋಪವು ಉತ್ಪನ್ನವಾಗುತ್ತದೆ. ಕೋಪದಿಂದ ಕೃತ್ಯಾಕೃತ್ಯ ವಿವೇಕವು ನಾಶವಾಗಿ ವಿವೇಕಶೂನ್ಯತೆಯು ಉಂಟಾಗುತ್ತದೆ. ವಿವೇಕಶೂನ್ಯತೆಯಿಂದ ಮನುಷ್ಯನಿಗೆ ಕರ್ತವ್ಯವು ಯಾವುದೋ, ಕರ್ತವ್ಯವಲ್ಲದ್ದು ಯಾವುದೋ ತಿಳಿಯದೆ ದಿಗ್ಭ್ರಮೆಯುಂಟಾಗಿ ತಾನು ಆತ್ಮನೆಂಬ ಜ್ಞಾನವು ಮರೆತುಹೋಗುತ್ತದೆ. ಈ ರೀತಿಯಾದ ಸ್ಮೃತಿಭ್ರಂಶದಿಂದ ತಾನು ಆತ್ಮದರ್ಶನ ಮಾಡಬೇಕೆಂಬ ಬುದ್ಧಿಯು ನಾಶವಾಗಿ ಮನುಷ್ಯನಿಗೆ ಸಂಪೂರ್ಣವಾದ ನಾಶವುಂಟಾಗುತ್ತದೆ. ಅವನು ಮತ್ತೆ ಸಂಸಾರದಲ್ಲಿ ಮುಳುಗಿ ನಷ್ಟವಾಗುತ್ತಾನೆ.

ಆದರೆ ರಾಗದ್ವೇಷಗಳನ್ನು ತ್ಯಜಿಸಿ, ಇಂದ್ರಿಯಗಳನ್ನು ತನ್ನ ಅಧೀನ ಮಾಡಿಕೊಂಡಿರುವವನು ವಿಷಯಗಳ ಮಧ್ಯೆ ಸಂಚರಿಸುತ್ತಿದ್ದರೂ ಅವುಗಳಲ್ಲಿ ಆಸಕ್ತಿ ಹೊಂದದೆ ಉದಾಸೀನನಾಗಿ ಇರುತ್ತಾನೆ. ಮನಸ್ಸನ್ನು ತನಗೆ ವಿಧೇಯವಾಗಿ ಮಾಡಿ ಕೊಂಡಿರುವವನು ಮನಃಶಾಂತತೆಯನ್ನು ಹೊಂದಬಲ್ಲನು. ಇಂಥಹ ಪುರುಷನಿಗೆ ಆತ್ಮಜ್ಞಾನ ವಿರೋಧಿಯಾದ ದೋಷಗಳೆಲ್ಲವೂ ಕ್ರಮೇಣ ತೊಲಗುತ್ತವೆ. ಅವನ ಮನಸ್ಸು ಕಲ್ಮಷರಹಿತವಾಗಿ ನಿರ್ಮಲವಾಗಿರುತ್ತದೆ. ಅಂತಃಕರಣ ನಿರ್ಮಲತೆಯಿಂದ ಮನಸ್ಸಿನಲ್ಲಿ ಶಾಂತಿ ಉಂಟಾಗಿ, ಅವನ ಸಮಸ್ತ ದುಃಖಗಳೂ ನಾಶವಾಗುತ್ತದೆ. ಹೀಗೆ ಪ್ರಸನ್ನ ಚಿತ್ತನಾಗಿರುವ ಪುರುಷನ ಬುದ್ಧಿಯು ಸ್ಥಿರವಾಗುತ್ತದೆ. ಅವನಲ್ಲಿ ಆತ್ಮ ಜ್ಞಾನವು ತಾನಾಗಿಯೇ ನೆಲೆಗೊಳ್ಳುವುದು. ಯಾವಾಗ ಆತ್ಮಜ್ಞಾನವು ನೆಲೆಗೊಳ್ಳುವುದೋ ಆಗ ಪ್ರಕೃತಿ ಸಂಬಂಧದಿಂದ ಬರುವ ದುಃಖಗಳೆಲ್ಲವೂ

ತಾವಾಗಿಯೇ ನಶಿಸಿಹೋಗುತ್ತವೆ. ಆದರೆ ಇಂದ್ರಿಯಗಳು ಸ್ವಾಧೀನವಿಲ್ಲದವನಿಗೆ ಆತ್ಮಜ್ಞಾನವು ಉಂಟಾಗದೆ, ಪರಮಾತ್ಮನಲ್ಲಿ ಮನಸ್ಸು ನಿಲ್ಲದೆ ಮನಃಶಾಂತಿಯು ಉಂಟಾಗಲಾರದು. ಮನಃಶಾಂತಿಯು ಇಲ್ಲದೇ ಇರುವವನಿಗೆ ಸುಖವೂ ಇರುವುದಿಲ್ಲ. ಸ್ವೇಚ್ಛೆಯಾಗಿ ವಿಷಯಗಳಲ್ಲಿ ಪ್ರವರ್ತಿಸುತ್ತಿರುವ ಇಂದ್ರಿಯಗಳನ್ನು ಯಾರ ಮನಸ್ಸು ಅನುಸರಿಸಿ ನಡೆಯುತ್ತದೆಯೋ ಅದು ಅಂದರೆ ಆ ಮನಸ್ಸು ಆ ಪುರುಷನ ಬುದ್ಧಿಯನ್ನು ಗಾಳಿಯು ನೀರಿನಲ್ಲಿರುವ ಹಡಗನ್ನು ಎಳೆಯುವಂತೆ ಎಳೆದುಕೊಂಡು ಹೋಗುತ್ತದೆ. ಆದ್ದರಿಂದ ವಿವೇಕಿಯಾದವನು ತನ್ನ ಮನಸ್ಸನ್ನು ಇಂದ್ರಿಯಗಳಿಗೆ ವಶವಾಗದಂತೆ ತಡೆದು ಪರಮಾತ್ಮ ಚಿಂತನೆಯಲ್ಲಿ ನೆಲೆಗೊಳಿಸಿ ಶಾಂತನಾಗಿರುತ್ತಾನೆ.

## 5. ಸ್ಥಿತಪ್ರಜ್ಞತೆ, ಅದರಿಂದ ಲಭಿಸುವ ಪರಮ ಶಾಂತಿ ಮತ್ತು ಆನಂದ (ಶ್ಲೋಕಗಳು 68 ರಿಂದ 72)

ಆದುದರಿಂದ ಮೇಲೆ ವಿವರಿಸಿದ ಹಾಗೆ ಯಾವನು ಶುಭಸ್ಥಾನವಾದ ನನ್ನಲ್ಲಿ ಮನಸ್ಸನ್ನು ನಿಲ್ಲಿಸಿ, ಇಂದ್ರಿಯಗಳನ್ನು ವಿಷಯಗಳ ಕಡೆಗೆ ಹೋಗದ ಹಾಗೆ ತಡೆದು ಅವುಗಳನ್ನು ಅಡಗಿಸುತ್ತಾನೆಯೋ ಅವನಿಗೆ ಮಾತ್ರವೇ ಆತ್ಮನಲ್ಲಿ ಪ್ರಜ್ಞೆಯು ಚೆನ್ನಾಗಿ ನೆಲೆಸುತ್ತದೆ. ಅವನೇ ನಿಜವಾದ ಸ್ಥಿತಪ್ರಜ್ಞನು. ಲೋಕದಲ್ಲಿ ಬಹುಮಂದಿ ಮನುಷ್ಯರಿಗೂ, ಈ ಸಂಯಮಿಗೂ ಅಂದರೆ ಇಂದ್ರಿಯವನ್ನು ನಿಗ್ರಹಿಸಿರುವವನಿಗೂ ಬಹಳ ವ್ಯತ್ಯಾಸವಿರುತ್ತದೆ. ಯಾವ ಜೀವಾತ್ಮವಿಷಯವಾದ ಜ್ಞಾನವು ಸಮಸ್ತ ಚೇತನರಿಗೂ ರಾತ್ರಿಯಂತೆ ಕತ್ತಲಾಗಿರುವುದೋ ಅಂತಹ ಆತ್ಮವಿಷಯದಲ್ಲಿ, ಇಂದ್ರಿಯಗಳನ್ನು ಜಯಿಸಿರುವ ಜ್ಞಾನನಿಷ್ಠನು ಜಾಗ್ರದ್ದೆಶೆಯನ್ನು ಹೊಂದಿರುವನು ಅಂದರೆ ಆತ್ಮ ವಿಷಯ ಜ್ಞಾನವು ಅವನಿಗೆ ಪ್ರಕಾಶವಾಗಿರುವುದು. ಯಾವ ಶಬ್ದಾದಿ ಭೋಗ ವಿಷಯಗಳಲ್ಲಿ ಸಮಸ್ತ ಚೇತನರೂ ಜಾಗ್ರದ್ದೆಶೆಯನ್ನು ಹೊಂದಿರುವರೋ ಆ ವಿಷಯಗಳ ಜ್ಞಾನವು ಜ್ಞಾನನಿಷ್ಠನಿಗೆ ರಾತ್ರಿಯಂತೆ ಪ್ರಕಾಶರಹಿತವಾಗಿ ಇರುತ್ತದೆ ಅಂದರೆ ನಿದ್ರಾಪರವಶನಾದವನಿಗೆ ಹೇಗೆ ಇತರ ವಿಷಯಗಳು ಗೋಚರ ವಾಗುವುದಿಲ್ಲವೋ ಅದೇ ರೀತಿ ಆತ್ಮಜ್ಞಾನ ಪಡೆದಿರುವವನಿಗೆ ಇತರ ಶಬ್ದಾದಿ ವಿಷಯಗಳು ಗೋಚರವಾಗುವುದಿಲ್ಲ. ತನಗೆ ತಾನೆ ಪೂರ್ಣವಾಗಿ ತುಂಬಿರುವುದರಿಂದ ಏಕರೂಪವಾಗಿರುವ ಸಮುದ್ರದಲ್ಲಿ ನದಿ ಮುಂತಾದುವುಗಳ ನೀರು ಹೋಗಿ ಸೇರಿದರೂ ಅಥವಾ ಸೇರದಿದ್ದರೂ, ಆ ಸಮುದ್ರವು ಹೇಗೆ ವಿಕಾರವನ್ನು ಹೊಂದುವುದಿಲ್ಲವೋ ಹಾಗೆಯೇ ಇಂದ್ರಿಯ ನಿಗ್ರಹವನ್ನು ಮಾಡಿರುವ

ಸ್ಥಿತಪ್ರಜ್ಞನು ಆತ್ಮ ಸಾಕ್ಷಾತ್ಕಾರದಿಂದ ತೃಪ್ತಿಯನ್ನು ಹೊಂದಿರುವುದರಿಂದ ಸಮಸ್ತ ಶಬ್ದಾದಿ ವಿಷಯಗಳು ಅವನ ಇಂದ್ರಿಯಗಳಿಗೆ ಪ್ರಾಪ್ತವಾಗದೇ ಇದ್ದರೂ ವಿಕಾರವನ್ನು ಹೊಂದದೆ ಮನಃಶಾಂತಿಯನ್ನು ಹೊಂದುತ್ತಾನೆ. ಆದರೆ ಶಬ್ದಾದಿ ವಿಷಯಗಳಲ್ಲಿ ವಿಕಾರವನ್ನು ಹೊಂದುವವನು ಎಂದಿಗೂ ಮನಃಶಾಂತಿ ಹೊಂದುವುದಿಲ್ಲ. ಯಾವ ಮನುಷ್ಯನು ಸಮಸ್ತ ಐಹಿಕ ವಿಷಯಗಳನ್ನು ಪರಿತ್ಯಾಗಮಾಡಿ ನಿಸ್ಪೃಹನಾಗಿ, ಆ ವಿಷಯಗಳಲ್ಲಿ ಆಸೆಯನ್ನು ಬಿಟ್ಟು ಅಹಂಕಾರ ಮಮಕಾರವಿಲ್ಲದವನಾಗಿ ಇರುವನೋ ಅವನು ಶಾಂತಿಯನ್ನು ಹೊಂದುತ್ತಾನೆ. ಅರ್ಜುನಾ! ಈ ಸ್ಥಿತಿಯೇ **ಬ್ರಾಹ್ಮೀಸ್ಥಿತಿಯು.** ಈ ಸ್ಥಿತಿಯನ್ನು ಹೊಂದಿದ ಮನುಷ್ಯನು ಮತ್ತೆ ಮೋಹಗೊಳ್ಳುವುದಿಲ್ಲ. ಅಂತ್ಯಕಾಲದಲ್ಲಿಯಾದರೂ ಈ ಸ್ಥಿತಿಯಲ್ಲಿದ್ದುಕೊಂಡು ಸುಖರೂಪವಾದ ಆತ್ಮನನ್ನು ಹೊಂದುತ್ತಾನೆ.

ಈ ಎರಡನೆಯ ಅಧ್ಯಾಯದಲ್ಲಿ ಪ್ರತಿಪಾದಿಸಿರುವ ಅರ್ಥವನ್ನು ಶ್ರೀ ಯಾಮುನಾಚಾರ್ಯರು ಗೀತಾರ್ಥ ಸಂಗ್ರಹದ ಆರನೇ ಶ್ಲೋಕದಲ್ಲಿ ಹೀಗೆ ಸಂಗ್ರಹಿಸಿ ತಿಳಿಸಿದ್ದಾರೆ.

**ನಿತ್ಯಾತ್ಮಾಸಂಗಕರ್ಮೇಹಾಗೋಚರಾ ಸಾಂಖ್ಯಯೋಗಧೀಃ ।**
**ದ್ವಿತೀಯೇ ಸ್ಥಿತಧೀರ್ಲಕ್ಷಾ ಪ್ರೋಕ್ತಾತನ್ಮೋಹ ಶಾಂತಯೇ ॥**

ದೇಹವೇ ಆತ್ಮನೆಂದೂ, ಕ್ಷತ್ರಿಯನು ಮಾಡಬೇಕಾದ ಧರ್ಮಯುದ್ಧವನ್ನೇ ಪಾಪವೆಂದೂ ಭ್ರಮೆಗೊಂಡ ಅರ್ಜುನನ ಮೋಹವು ನಾಶವಾಗಿ ಅವನಿಗೆ ಶಾಂತಿ ಉಂಟಾಗಲು ಅವನಿಗೆ ಮೊಟ್ಟಮೊದಲು ಆತ್ಮನ ನಿತ್ಯತೆ, ದೇಹದ ಅನಿತ್ಯತೆ, ದೇಹ ಆತ್ಮ ಇವೆರಡರ ವಿಲಕ್ಷಣತೆಯನ್ನು ತಿಳಿಸಿ ಆತ್ಮನ ನಿಜಸ್ವರೂಪದ ಜ್ಞಾನವನ್ನೂ, ಅನಂತರ ಸ್ವಧರ್ಮವಾದ ಯುದ್ಧವನ್ನು ಫಲಾಪೇಕ್ಷೆ ರಹಿತನಾಗಿ ಮಾಡಬೇಕೆಂಬ ಕರ್ಮಯೋಗದ ಜ್ಞಾನವನ್ನೂ ಮತ್ತು ಇವೆರಡರಿಂದ ಸಾಧಿಸಲ್ಪಡುವ ಆತ್ಮಾವಲೋಕನಕ್ಕೆ ಸಾಧನವಾದ ಸ್ಥಿತಪ್ರಜ್ಞತೆಯ ಲಕ್ಷಣವನ್ನೂ ಶ್ರೀಕೃಷ್ಣ ಪರಮಾತ್ಮನು ಎರಡನೇ ಅಧ್ಯಾಯದಲ್ಲಿ ಉಪದೇಶಮಾಡಿದ್ದಾನೆ.

ಈ ಅಧ್ಯಾಯದಲ್ಲಿ ಪ್ರತ್ಯಗಾತ್ಮನ ಸ್ವರೂಪ ವಿಷಯವಾದ ಸಾಂಖ್ಯ ಬುದ್ಧಿಯೂ ಮತ್ತು ಫಲಾಸಕ್ತಿರಹಿತವಾಗಿ ಮಾಡುವ ಸ್ವಧರ್ಮಾನುಷ್ಠಾನ ವಿಷಯವಾದ ಕರ್ಮಯೋಗಬುದ್ಧಿಯೂ ಹೇಳಲ್ಪಟ್ಟಿರುವುದರಿಂದ ಇದಕ್ಕೆ ಸಾಂಖ್ಯಯೋಗವೆಂದು ಹೆಸರು.

*****

## ಮೂರನೆಯ ಅಧ್ಯಾಯ

# ಕರ್ಮಯೋಗ

ವಿಷಯ ಸೂಚಿಕೆ :

I ಉಪೋದ್ಘಾತ

II ಕರ್ಮಯೋಗ, ಜ್ಞಾನಯೋಗ - ಇವೆರಡರಲ್ಲಿ ಯಾವುದು ಶ್ರೇಷ್ಠ? ಅರ್ಜುನನ ಪ್ರಶ್ನೆ (ಶ್ಲೋಕಗಳು 1 ಮತ್ತು 2)

III ಕರ್ಮಯೋಗದ ಶ್ರೇಷ್ಠತೆ (ಶ್ಲೋಕಗಳು 3 ರಿಂದ 16)

1. ಜ್ಞಾನಯೋಗಕ್ಕಿಂತ ಕರ್ಮಯೋಗ ಸುಲಭವಾದ ಮಾರ್ಗ. (ಶ್ಲೋಕಗಳು 3 ರಿಂದ 8)

2. ಯಜ್ಞಾದಿ ಕರ್ಮಗಳನ್ನು ಕರ್ಮಯೋಗವಾಗಿ ಆಚರಿಸುವುದು ಉತ್ತಮ. (ಶ್ಲೋಕಗಳು 9 ರಿಂದ 16)

IV ಜ್ಞಾನಯೋಗಿಯೂ ಕರ್ಮಮಾಡಬೇಕು. (ಶ್ಲೋಕಗಳು 17 ರಿಂದ 26)

1. ಮುಕ್ತ ಪುರುಷನು ಮಾತ್ರ ವರ್ಣಾಶ್ರಮ ಕರ್ಮಗಳನ್ನು ಮಾಡಬೇಕಾಗಿಲ್ಲ. (ಶ್ಲೋಕಗಳು 17, 18)

2. ಆತ್ಮಸಾಕ್ಷಾತ್ಕಾರವಿಲ್ಲದವನಿಗೆ ಕರ್ಮಯೋಗವೇ ಶ್ರೇಷ್ಠವಾದ ಮಾರ್ಗ. (ಶ್ಲೋಕ 19)

3. ಮುಕ್ತ ಪುರುಷನೂ ಕೂಡ ಲೋಕಕಲ್ಯಾಣಕ್ಕಾಗಿ ಕರ್ಮವನ್ನು ಮಾಡಲೇ ಬೇಕು. (ಶ್ಲೋಕಗಳು 20 ರಿಂದ 26)

   1) ಜನಕಾದಿ ಋಷಿಗಳು ಕರ್ಮ ಮಾಡಿದರು. (ಶ್ಲೋಕಗಳು 20, 21)

   2) (ಪರಮ ಪುರುಷನಾದ ಶ್ರೀಕೃಷ್ಣನಾದ) ನಾನೂ ಕರ್ಮ ಮಾಡುತ್ತಿರುವೆನು. (ಶ್ಲೋಕಗಳು 22 ರಿಂದ 24)

   3) ಕರ್ಮಯೋಗದ ಅನುಷ್ಠಾನದಲ್ಲಿ ಜ್ಞಾನಿಗೂ ಇತರರಿಗೂ ಇರುವ ವ್ಯತ್ಯಾಸ (ಶ್ಲೋಕಗಳು 25, 26)

V ಅಕರ್ತೃತ್ವಾನುಸಂಧಾನದೊಂದಿಗೆ ಭಗವಂತನ ಕೈಂಕರ್ಯವೆಂದು ಕರ್ತವ್ಯ ಕರ್ಮಗಳನ್ನು ಮಾಡಿರಿ. (ಶ್ಲೋಕಗಳು 27ರಿಂದ 32)

1. ತ್ರಿಗುಣಗಳ ಪ್ರೇರಣೆಯಿಂದ ಚೇತನನು ಕರ್ಮವನ್ನು ಮಾಡುತ್ತಾನೆ. (ಶ್ಲೋಕಗಳು 27 ರಿಂದ 29)

2. ಪರಮಾತ್ಮನ ನಿಯಮನದಿಂದ ಚೇತನನು ಕರ್ಮ ಮಾಡುತ್ತಾನೆ. (ಶ್ಲೋಕಗಳು 30 ರಿಂದ 32)

VI ಜ್ಞಾನಯೋಗದ ಕಷ್ಟಸಾಧ್ಯತೆ. (ಶ್ಲೋಕಗಳು 33 ರಿಂದ 42)

1. ಜ್ಞಾನಯೋಗಕ್ಕೆ ಇಂದ್ರಿಯ ನಿಗ್ರಹದ ಆವಶ್ಯಕತೆ - ಅದರ ಕಷ್ಟಸಾಧ್ಯತೆ. (ಶ್ಲೋಕಗಳು 33 ರಿಂದ 36)

2. ಪಾಪಕಾರ್ಯಗಳನ್ನು ಮಾಡಲು ಕಾಮಕ್ರೋಧಾದಿಗಳ ಪ್ರೇರಣೆಯೇ ಕಾರಣ. (ಶ್ಲೋಕಗಳು 37 ರಿಂದ 40)

3. ಕಾಮಕ್ರೋಧಾದಿಗಳನ್ನು ಕರ್ಮಯೋಗದ ಮೂಲಕ ಜಯಿಸಿ ಜ್ಞಾನಯೋಗಕ್ಕೆ ಅರ್ಹತೆ ಪಡೆಯಬೇಕು. (ಶ್ಲೋಕಗಳು 41 ರಿಂದ 43)

## I ಉಪೋದ್ಘಾತ

ಎರಡನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಸಾಂಖ್ಯ ಮತ್ತು ಬುದ್ಧಿಯೋಗವನ್ನು ಹೇಳಿದ್ದಾನೆ. ಸಾಂಖ್ಯದಲ್ಲಿ ಆತ್ಮನ ಮುಖ್ಯವಾದ ಲಕ್ಷಣಗಳನ್ನು ತಿಳಿಸಿ ಯೋಗದಲ್ಲಿ ಆತ್ಮ ಸಾಕ್ಷಾತ್ಕಾರ ಹೊಂದುವ ರೀತಿಯನ್ನು ತಿಳಿಸಿದ್ದಾನೆ. ಕರ್ಮದ ಕಟ್ಟಳೆಯ ಪ್ರಕಾರ ಪ್ರತಿಯೊಂದು ಕರ್ಮಕ್ಕೂ ಒಂದು ಫಲವು ಉಂಟಾಗಲೇಬೇಕು ಮತ್ತು ಕರ್ಮ ಮಾಡುವವನು ಅದರ ಫಲದಿಂದ ಉಂಟಾಗುವ ಸುಖವನ್ನೋ ದುಃಖವನ್ನೋ ಅನುಭವಿಸಲೇಬೇಕು. ಮನುಷ್ಯನು ಬದುಕಿರುವವರೆಗೂ ಕರ್ಮವನ್ನು ಮಾಡುತ್ತಲೇ ಇರುತ್ತಾನೆ. ಕರ್ಮವನ್ನು ಮಾಡದೆ ಇರುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅವನು ಕರ್ಮಬಂಧನದಲ್ಲಿ ಸಿಲುಕಿ ಅದರ ಸುಖದುಃಖಗಳನ್ನು ಅವನ ಜೀವಿತದಲ್ಲಿ ಅನುಭವಿಸಿಯೇ ತೀರಬೇಕು. ಹಾಗಾದರೆ ಮನುಷ್ಯನಿಗೆ ಕರ್ಮದ ಸಂಕೋಲೆಯಿಂದ ಬಿಡುಗಡೆಯೇ ಇಲ್ಲವೇ ಎಂಬ ಪ್ರಶ್ನೆಯು ಹುಟ್ಟುತ್ತದೆ. ಕರ್ಮದ ಫಲದಲ್ಲಿ ಆಸೆಯನ್ನು ಬಿಟ್ಟು ಕರ್ಮದಿಂದ ಉಂಟಾಗುವ

ಜಯಾಪಜಯಗಳನ್ನು ಲಕ್ಷ್ಯ ಮಾಡದೆ ನಿರ್ವಿಕಾರನಾಗಿ ಕರ್ಮ ಮಾಡಿದರೆ ಕರ್ಮ ಬಂಧನದಿಂದ ಬಿಡುಗಡೆಯು ಉಂಟಾಗುತ್ತದೆ ಎಂದು ಶ್ರೀಕೃಷ್ಣನು ಹೇಳುತ್ತಾನೆ.

ಕರ್ಮಬಂಧನದಿಂದ ಬಿಡುಗಡೆ ಹೊಂದುವುದೇ ಮುಕ್ತಿಯು. ಕರ್ಮ ಮಾಡಿದರೆ ಫಲ ಲಭಿಸಿಯೇ ಲಭಿಸುತ್ತದೆ, ಕರ್ಮಕ್ಕೆ ಫಲವು ಸಿದ್ಧವಾದುದು. ಆದರೆ ಅದು ನಮ್ಮನ್ನು ಬಂಧಿಸದಂತೆ ಇರಬೇಕು ಎಂಬುದೇ ನಮ್ಮ ಧ್ಯೇಯ. ಫಲಸಂಗರಹಿತರಾಗಿ ಕರ್ಮಮಾಡಿದರೆ ಇದು ಸಾಧ್ಯವಾಗಬಲ್ಲದು ಎಂದು ಹೇಳಿದೆ. ಆದರೆ ಫಲಾಪೇಕ್ಷೆ ಇಲ್ಲದೆ ಕರ್ಮ ಮಾಡುವುದು ಸಾಧ್ಯವೇ ಎಂದರೆ ಸಾಧ್ಯ. ನಮಗೆ ಕರ್ಮಮಾಡದೆ ಒಂದು ಕ್ಷಣವೂ ಇರಲು ಸಾಧ್ಯವಿಲ್ಲ. ಆದರೆ ನಿಷ್ಕಾಮವಾಗಿ ಉದ್ದೇಶರಹಿತವಾಗಿ ಕರ್ಮ ಮಾಡಬಲ್ಲೆವು. ಉಸಿರಾಡುವುದು, ಕಣ್ಣು ರೆಪ್ಪೆ ಹೊಡೆಯುವುದು ಮುಂತಾದ ಕರ್ಮಗಳನ್ನು ನಾವು ಮನಸ್ಸಿನಲ್ಲಿ ಯಾವ ಉದ್ದೇಶವನ್ನೂ, ಫಲಾಪೇಕ್ಷೆಯನ್ನೂ ಹೊಂದದೆ ತಾನಾಗಿಯೇ ಮಾಡುತ್ತಿದ್ದೇವೆ. ಅದೇ ರೀತಿ ಇತರ ಕರ್ಮಗಳನ್ನೂ ಮಾಡಲು ಪ್ರಯತ್ನಿಸಬಲ್ಲೆವು. ಫಲಸಂಗದಿಂದ ಬಂಧವುಂಟಾಗುತ್ತದೆ. ಹೇಗೆ ಕರ್ಮವಿಲ್ಲದಿದ್ದರೆ ಫಲವಿಲ್ಲವೋ ಅದೇ ರೀತಿ ಫಲಸಂಗವಿಲ್ಲದಿದ್ದರೆ ಬಂಧವೂ ಇರುವುದಿಲ್ಲ. ಕರ್ಮ ಮಾಡುವುದರಿಂದ ಕರ್ಮಕ್ಕೆ ಫಲವು ಉಂಟಾದರೂ, ನಿಷ್ಕಾಮವಾಗಿ ಕರ್ಮ ಮಾಡಿದರೆ ಬಂಧವುಂಟಾಗುವುದಿಲ್ಲ.

ಎರಡನೆಯ ಅಧ್ಯಾಯದಲ್ಲಿ ಬುದ್ಧಿಯೋಗವನ್ನು ತಿಳಿಸುವಾಗ ಕರ್ಮದಲ್ಲಿ ಇರುವ ಕರ್ಮಭಾಗವನ್ನೂ, ಜ್ಞಾನಭಾಗವನ್ನೂ ಬೇರ್ಪಡಿಸಿ ಸೂಚಿಸಿದೆ. ಅಂದರೆ ಒಂದು ಸತ್ಕರ್ಮವು ಉಂಟಾಗಬೇಕಾದರೆ ಮಾಡುವ ಕೆಲಸ ಕಾರ್ಯಗಳು ಸತ್ಕಾರ್ಯವಾಗಿರಬೇಕು ಮತ್ತು ಅದನ್ನು ಮಾಡುವವನ ಹೃದಯದಲ್ಲಿ ಸದ್ಭಾವನೆಯೂ ಇರಬೇಕು. ಅಂದರೆ ಸದ್ಭಾವನೆಯೊಂದಿಗೆ ಸತ್ಕಾರ್ಯವನ್ನು ಮಾಡಬೇಕು. ಸತ್ಕಾರ್ಯ ಸದ್ಭಾವನೆ ಇವೆರಡೂ ಒಂದರೊಂದಿಗೆ ಒಂದು ಸೇರಿ ಸತ್ಕಾರ್ಯ ನಡೆಯುತ್ತದೆ. ಇವೆರಡೂ ಅಂದರೆ ಕಾರ್ಯ ಮತ್ತು ಮನೋಭಾವನೆ ಎರಡೂ ಅವಶ್ಯಕವಾಗಿ ಇರಬೇಕು. ಮೂರನೆಯ ಅಧ್ಯಾಯದಲ್ಲಿ ಕರ್ಮದಲ್ಲಿರುವ ಕಾರ್ಯ ಅಂದರೆ ಕರ್ಮಾಂಶದ ವಿಷಯವನ್ನು ಪ್ರಧಾನವಾಗಿ ತಿಳಿಸುವುದರಿಂದ ಇದನ್ನು ಕರ್ಮಯೋಗವೆಂದೂ, ನಾಲ್ಕನೆಯ ಅಧ್ಯಾಯದಲ್ಲಿ ಕರ್ಮಯೋಗದಲ್ಲಿರುವ ಮನೋಭಾವನೆ ಅಂದರೆ ಜ್ಞಾನಾಂಶದ ವಿಷಯವನ್ನು ಪ್ರಧಾನವಾಗಿ ತಿಳಿಸುವುದರಿಂದ ಅದು ಜ್ಞಾನಯೋಗವೆಂದೂ ಕರೆಯಲ್ಪಟ್ಟಿದೆ.

## II ಕರ್ಮಯೋಗ, ಜ್ಞಾನಯೋಗ - ಇವೆರಡರಲ್ಲಿ ಯಾವುದು ಶ್ರೇಷ್ಠ? - ಅರ್ಜುನನ ಪ್ರಶ್ನೆ (ಶ್ಲೋಕಗಳು 1 ಮತ್ತು 2)

ಎರಡನೆಯ ಅಧ್ಯಾಯದಲ್ಲಿ ಕೃಷ್ಣನು ಮೊದಲು ಅರ್ಜುನನಿಗೆ ಕರ್ಮವನ್ನು ಮಾಡಿಯೇ ಮಾಡಬೇಕೆಂಬುದನ್ನು ತಿಳಿಸಿ, ಅನಂತರ ಕರ್ಮವು ಕೀಳುತರವಾದುದರಿಂದ ಮನಸ್ಸನ್ನು ಬುದ್ಧಿಯೋಗದಲ್ಲಿ ನೆಲೆಗೊಳಿಸುವಂತೆ ಹೇಳಿ, ಇಂದ್ರಿಯ ನಿಗ್ರಹವು ಸ್ಥಿತಪ್ರಜ್ಞತೆಗೆ ಮುಖ್ಯವಾದುದು ಎಂಬುದನ್ನೂ ತಿಳಿಸಿದ್ದಾನೆ. ಈ ರೀತಿ ಶ್ರೀಕೃಷ್ಣನು ಯುದ್ಧಮಾಡುವುದು ಕರ್ತವ್ಯಕರ್ಮವೆಂಬುದನ್ನು ಮೊದಲು ಹೇಳಿ ಅನಂತರ ಬುದ್ಧಿಯೋಗದ ಮಹತ್ವವನ್ನೂ ಸ್ಥಿತಪ್ರಜ್ಞತೆಯ ಶ್ರೇಷ್ಠತೆಯನ್ನೂ ಹೇಳಿರುವುದರಿಂದ ಅರ್ಜುನನಿಗೆ ದಿಗ್ಭ್ರಮೆಯೂ, ಕರ್ಮವನ್ನು ಮಾಡಬೇಕೇ ಬೇಡವೇ ಎಂಬ ಸಂದೇಹವೂ ಉಂಟಾಯಿತು. ಆಗ ತನ್ನ ಸಂದೇಹವನ್ನು ನಿವಾರಣೆ ಮಾಡಿಕೊಳ್ಳಲು ಅವನು ಶ್ರೀ ಕೃಷ್ಣನನ್ನು ಕುರಿತು "ಎಲೈ ಕೃಷ್ಣನೇ, ಕರ್ಮನಿಷ್ಠೆಗಿಂತ ಜ್ಞಾನ ನಿಷ್ಠೆಯು ಶ್ರೇಷ್ಠವಾದುದೆಂದು ನಿನ್ನ ಅಭಿಪ್ರಾಯವಾಗಿದ್ದರೆ ಏತಕೋಸ್ಕರ ಈ ಘೋರ ಕರ್ಮವಾದ ಯುದ್ಧವನ್ನು ಮಾಡೆಂದು ನನ್ನನ್ನು ಆಜ್ಞಾಪಿಸುತ್ತೀಯೆ. ಹೀಗೆ ಒಂದಕ್ಕೊಂದು ವಿರುದ್ಧವಾದ ಅಭಿಪ್ರಾಯಗಳಿಂದ ಕೂಡಿರುವ ವಾಕ್ಯಗಳಿಂದ ನೀನು ನನಗೆ ಸಂದೇಹವನ್ನುಂಟುಮಾಡಿ ನನ್ನ ಮನಸ್ಸಿನಲ್ಲಿ ವ್ಯಾಕುಲವನ್ನುಂಟುಮಾಡಿರುವೆ, ಈಗ ನಾನು ಯಾವ ಒಂದು ಮಾರ್ಗವನ್ನು ಆಶ್ರಯಿಸಿ ಶ್ರೇಯಸ್ಸನ್ನು ಪಡೆಯ ಬಲ್ಲೆನು ಎಂಬುದನ್ನು ನೀನು ತಿಳಿಸು" ಎಂದನು. ಅದಕ್ಕೆ ಉತ್ತರವನ್ನು ಶ್ರೀ ಕೃಷ್ಣನು ಮುಂದಿನ ಶ್ಲೋಕಗಳಲ್ಲಿ ತಿಳಿಸಿದ್ದಾನೆ

## III ಕರ್ಮಯೋಗದ ಶ್ರೇಷ್ಠತೆ (ಶ್ಲೋಕಗಳು 3 ರಿಂದ 16)

### 1. ಜ್ಞಾನಯೋಗಕ್ಕಿಂತ ಕರ್ಮಯೋಗವು ಸುಲಭವಾದ ಮಾರ್ಗ. (ಶ್ಲೋಕಗಳು 3 ರಿಂದ 8)

ಸಾಧಾರಣವಾಗಿ ಲೋಕದಲ್ಲಿರುವ ಜನರು ತಾವು ಆತ್ಮರು, ತಮಗೆ ಆತ್ಮ ಸಾಕ್ಷಾತ್ಕಾರವು ಆಗಬೇಕೆಂಬ ಯೋಚನೆಯೇ ಇಲ್ಲದೆ ತಾವು ವಿಷಯಾನುಭವವನ್ನು ಪಡೆಯಲು ಅನೇಕ ಕರ್ಮಗಳನ್ನು ಮಾಡುತ್ತಾರೆ. ಆದರೆ ಮೋಕ್ಷವನ್ನೋ ಅಥವಾ ಶ್ರೇಯಸ್ಸನ್ನೋ ಪಡೆಯಬೇಕೆಂದಿರುವವರಲ್ಲಿ ಎರಡು ಬಗೆಯ ಜನರಿರುವರು. ಒಬ್ಬರು ಜ್ಞಾನನಿಷ್ಠರಾದ ಸಾಂಖ್ಯರು. ಮತ್ತೊಬ್ಬರು ಕರ್ಮಯೋಗಾನುಷ್ಠಾನ

ಮಾಡುವ ಯೋಗಿಗಳು. ಸಾಂಖ್ಯರಿಗೆ ಜ್ಞಾನಯೋಗ ನಿಷ್ಠೆಯೂ, ಕರ್ಮಯೋಗಿಗಳಿಗೆ ಕರ್ಮಯೋಗಾನುಷ್ಠಾನವೂ ನನ್ನಿಂದ ಹೇಳಲ್ಪಟ್ಟಿದೆ. ಕರ್ಮವನ್ನು ಮಾಡದೆ ನೀನು ನೈಷ್ಕರ್ಮ್ಯವನ್ನು ಹೊಂದಲಾರೆ. ಅಲ್ಲದೆ ಕರ್ಮವನ್ನು ತ್ಯಜಿಸುವುದರಿಂದ ನೀನು ಜ್ಞಾನಯೋಗ ನಿಷ್ಠೆಯನ್ನು ಪಡೆಯಲಾರೆ. ಎರಡನೆಯ ಅಧ್ಯಾಯದಲ್ಲಿ ಮೊದಲು ತಿಳಿಸಿರುವ ಆತ್ಮಸ್ವರೂಪ ಜ್ಞಾನದೊಂದಿಗೆ ಕರ್ಮ ಮಾಡಿ ಕರ್ಮಯೋಗದಲ್ಲಿ ಸಿದ್ಧಿ ಹೊಂದಿದ ಮೇಲೆ, ಸ್ಥಿತಪ್ರಜ್ಞತೆಯಿಂದ ಕೂಡಿರುವ ಜ್ಞಾನಯೋಗ ನಿಷ್ಠೆಗೆ ಅರ್ಹತೆ ಉಂಟಾಗುತ್ತದೆ. ಆದ್ದರಿಂದ ಎಲ್ಲರೂ ಮೊದಲು ಕರ್ಮಯೋಗವನ್ನು ಅನುಷ್ಠಿಸಿ, ಜ್ಞಾನಯೋಗಕ್ಕೆ ಅರ್ಹತೆ ಪಡೆಯಬೇಕು.

ಎಲ್ಲರೂ ಕರ್ಮವನ್ನು ಮಾಡಿಯೇ ತೀರಬೇಕು. ಯಾರೂ ಎಂದಿಗೂ ಒಂದು ಕ್ಷಣವೂ ಕರ್ಮವನ್ನು ಮಾಡದೇ ಇರಲು ಸಾಧ್ಯವಿಲ್ಲ. ಸರ್ವರೂ ಪ್ರಕೃತಿಯಿಂದ ಉತ್ಪನ್ನವಾದ ಗುಣಗಳಿಗೆ ವಶರಾಗಿ ಕರ್ಮಗಳನ್ನು ಮಾಡಿಯೇ ಮಾಡುತ್ತಾರೆ. ಅದನ್ನು ನೀನು ನಿನ್ನ ಇಚ್ಛಾಶಕ್ತಿಯಿಂದ ತಡೆಯಲು ಆಗುವುದಿಲ್ಲ. ಒಂದು ವೇಳೆ ನೀನು ಕಷ್ಟಪಟ್ಟು ಸ್ವಲ್ಪ ಕಾಲ ನಿನ್ನ ಇಂದ್ರಿಯಗಳನ್ನು ವಿಷಯಗಳಲ್ಲಿ ಪ್ರವರ್ತಿಸದಂತೆ ತಡೆದರೂ, ನಿನ್ನ ಮನಸ್ಸು ವಿಷಯಗಳನ್ನು ಯಾವಾಗಲೂ ಸ್ಮರಿಸುತ್ತಲೇ ಇರುತ್ತದೆ. ಯಾವನು ಇಂದ್ರಿಯಗಳನ್ನು ವಿಷಯಗಳಿಂದ ತಡೆದು, ಯಾವ ಕರ್ಮಗಳನ್ನೂ ಮಾಡದೇ ಇದ್ದರೂ, ಮನಸ್ಸಿನಲ್ಲಿ ತೃಪ್ತಿಯಾಗದ ಆ ವಿಷಯಗಳನ್ನು ಚಿಂತಿಸುತ್ತಾ ಇರುತ್ತಾನೆಯೋ ಅವನು ಮೂಢಾತ್ಮನೆಂದೂ, ಮಿಥ್ಯಾಚಾರನೆಂದೂ ಕರೆಯಲ್ಪಡುತ್ತಾನೆ. ಆದುದರಿಂದ ಮೊದಲು ಮನಸ್ಸಿನಿಂದ ಇಂದ್ರಿಯಗಳನ್ನು ನಿಗ್ರಹಿಸಿ, ಆಸಕ್ತಿರಹಿತನಾಗಿ ಕರ್ಮೇಂದ್ರಿಯಗಳ ಮೂಲಕ ಕರ್ಮಗಳನ್ನು ಮಾಡಿದರೆ, ಅವನು ಶ್ರೇಷ್ಠನಾಗುತ್ತಾನೆ. ಆದ್ದರಿಂದ ನೀನು ಸತ್ಕರ್ಮಗಳನ್ನು ಫಲಾಪೇಕ್ಷೆಯಿಲ್ಲದೆ ನನ್ನ ಕೈಂಕರ್ಯವೆಂದು ತಿಳಿದು ಮಾಡುವವನಾಗು. ಆಗ ನೀನು ವಿಷಯಾಸಕ್ತನಾಗಿ, ತೃಪ್ತಿಯಾಗದ ಆಸೆಗಳನ್ನೇ ಯಾವಾಗಲೂ ಚಿಂತಿಸುತ್ತಾ ಸೋಮಾರಿಯಾಗಿ ಕಾಲ ಕಳೆಯುವ ಅಲ್ಪನ ಸ್ಥಿತಿಗಿಂತ ಉತ್ತಮ ಸ್ಥಿತಿಯನ್ನು ಪಡೆದು ಸಿದ್ಧಿ ಪಡೆಯುವೆ. ನಿನ್ನ ಮನಸ್ಸಿನಲ್ಲಿ ನಾನು ಜ್ಞಾನಯೋಗ ನಿಷ್ಠೆ ಅಥವಾ ಸ್ಥಿತಪ್ರಜ್ಞತ್ವ ಸ್ಥಿತಿಯನ್ನು ಪಡೆದಿರುವೆನೆಂಬ ತಪ್ಪಾದ ಭಾವನೆಯನ್ನು ಕಲ್ಪಿಸಿಕೊಂಡು ಸತ್ಕರ್ಮಗಳನ್ನು ಮಾಡುವ ವಿಷಯದಲ್ಲಿ ಉದಾಸೀನನಾಗಿ ಇರಬೇಡ. ಕರ್ಮಯೋಗಾನುಷ್ಠಾನದಲ್ಲಿ

ಸಿದ್ಧಿಯನ್ನು ಪಡೆದ ಎಲ್ಲೋ ಕೆಲವು ಮನುಷ್ಯರು ಆ ಸ್ಥಿತಿಯನ್ನು ಅಂದರೆ ಸ್ಥಿತಪ್ರಜ್ಞತ್ವ ಸ್ಥಿತಿಯನ್ನು ಪಡೆದಿರುತ್ತಾರೆ. ನಾನು ಅವರಲ್ಲಿ ಒಬ್ಬನು ಎಂದು ತಿಳಿದು ನೀನು ಸತ್ಕರ್ಮಗಳನ್ನು ಮಾಡುವುದನ್ನು ಬಿಟ್ಟೆಯಾದರೆ ನೀನು ಕರ್ಮಯೋಗಿಯೂ ಆಗದೆ ಜ್ಞಾನಯೋಗಿಯೂ ಆಗದೆ ನಾಶವಾಗುತ್ತೀಯೆ.

ಅರ್ಜುನಾ! ನಿನ್ನ ಈಗಿನ ಮನಃಸ್ಥಿತಿಯಲ್ಲಿ ನೀನು ಶಾಸ್ತ್ರ ವಿಹಿತವಾದ, ನಿನ್ನ ಕರ್ತವ್ಯವಾದ ಕರ್ಮವನ್ನು ಮಾಡಬೇಕೆಂದು ನಾನು ನಿನಗೆ ಬುದ್ಧಿವಾದವನ್ನು ಹೇಳುತ್ತೇನೆ. ಸಾಂಖ್ಯ ಜ್ಞಾನವನ್ನು ಅಂದರೆ ಆತ್ಮನ ಲಕ್ಷಣಗಳನ್ನು ತಿಳಿದಿರುವ ನೀನು ಬುದ್ಧಿಯೋಗದ ಪ್ರಕಾರ ಕರ್ಮವನ್ನು ಮಾಡಿಯೇ ತೀರಬೇಕೇ ಹೊರತು, ನಿನಗೆ ಸ್ಥಿತಪ್ರಜ್ಞತ್ವ ಸ್ಥಿತಿಯು ಬಂದಿದೆ ಎಂಬ ಸುಳ್ಳು ಭಾವನೆಯಿಂದ ಕರ್ಮವನ್ನು ಮಾಡದೇ ಇರಬೇಡ. ಕರ್ಮವನ್ನು ಮಾಡದಿರುವ ಬರೀ ಜ್ಞಾನಯೋಗಕ್ಕಿಂತ ಕರ್ಮ ಯೋಗವೇ ಶ್ರೇಷ್ಠವು, ಕರ್ಮದಲ್ಲಿ ಪ್ರವರ್ತಿಸದೇ ಇದ್ದರೆ ನಿನಗೆ ಶರೀರ ರಕ್ಷಣವೂ ಸಿದ್ಧಿಸುವುದಿಲ್ಲ, ಶರೀರ ಪೋಷಣೆಗಾಗಿಯಾದರೂ ನೀನು ಕರ್ಮ ಮಾಡಲೇಬೇಕಾಗುತ್ತದೆ.

## 2. ಯಜ್ಞಾದಿ ಕರ್ಮಗಳನ್ನು ಕರ್ಮಯೋಗವಾಗಿ (ಫಲಾಸಕ್ತಿ ರಹಿತವಾಗಿ) ಆಚರಿಸುವುದು ಉತ್ತಮ. (ಶ್ಲೋಕಗಳು 9 ರಿಂದ 16)

ಎಲೈ ಅರ್ಜುನನೇ! ಈ ಲೋಕದ ಜನರು ಭಗವತ್ ಪ್ರೀತಿಕರವಾದ ಯಜ್ಞರೂಪವಾದ ಕರ್ಮಗಳ ಹೊರತು ಬೇರೆ ಯಾವ ಕರ್ಮಗಳನ್ನು ಮಾಡಲು ಪ್ರವರ್ತಿಸಿದರೂ ಕರ್ಮದಿಂದ ಬಂಧಿಸಲ್ಪಡುವರು. ಯಜ್ಞಾದಿ ಕರ್ಮಗಳನ್ನು ಆಸಕ್ತಿರಹಿತರಾಗಿ ಮಾಡಿದರೆ ಕರ್ಮ ಬಂಧನವುಂಟಾಗುವುದಿಲ್ಲ, ಯಜ್ಞವೆಂದರೆ ಭಗವಂತನ ಆರಾಧನೆ ಎಂದು ಅರ್ಥ ಹೇಳಿದ್ದಾರೆ. ಸತ್ಕರ್ಮಗಳನ್ನು ಪರಮಾತ್ಮನ ಆರಾಧನೆ ಎಂಬ ಭಕ್ತಿ ಭಾವನೆಯೊಂದಿಗೆ ಸ್ವಾರ್ಥತೆಯಿಲ್ಲದೆ ಫಲಾಸಕ್ತಿರಹಿತನಾಗಿ ಮಾಡಬೇಕು ಎಂಬುದೇ ಇಲ್ಲಿ ಕೃಷ್ಣನ ಉಪದೇಶ. ಸೃಷ್ಟಿಕಾಲದಲ್ಲಿ ಸರ್ವೇಶ್ವರನು ಯಜ್ಞಗಳೊಡನೆಯೇ ಪ್ರಜೆಗಳನ್ನು ಸೃಷ್ಟಿಸಿ "ನಿಮ್ಮ ಇಷ್ಟಾರ್ಥಗಳನ್ನು ಕೊಡುವ ಕಾಮಧೇನುವಾದ ಈ ಯಜ್ಞಗಳ ಮೂಲಕ ವೃದ್ಧಿಯನ್ನು ಪಡೆಯಿರಿ. ಯಜ್ಞಗಳ

ಮೂಲಕ ದೇವತೆಗಳನ್ನು ಆರಾಧಿಸಿದರೆ ದೇವತೆಗಳೂ ನಿಮ್ಮನ್ನು ಪೋಷಿಸುತ್ತಾರೆ, ಹೀಗೆ ಪರಸ್ಪರ ಪ್ರೀತಿಯಿಂದ ಒಬ್ಬರನ್ನೊಬ್ಬರು ಸಂತೋಷಗೊಳಿಸಿದರೆ ಇಬ್ಬರೂ ಪರಮ ಶ್ರೇಯಸ್ಸನ್ನು ಪಡೆಯುತ್ತೀರಿ. ಯಜ್ಞದಿಂದ ಆರಾಧಿಸಲ್ಪಟ್ಟ ದೇವತೆಗಳು ನಿಮಗೆ ಕೊಡುವ ಇಚ್ಛಿತ ಭೋಗಗಳನ್ನು ಅವರಿಗೆ ಅರ್ಪಿಸದೆ ಅನುಭವಿಸುವವನು ಕಳ್ಳನೇ ಸರಿ" ಎಂದು ಹೇಳಿದನು. ಆದುದರಿಂದ ಶರೀರ ಧಾರಣೆಗೋಸ್ಕರವಾಗಿಯೂ ನಾವು ಕರ್ಮವನ್ನು ಮಾಡಬೇಕಾಗಿರುವುದರಿಂದ ಮೊದಲು ಯಜ್ಞಾದಿ ಕರ್ಮಗಳಿಂದ ಭಗವಂತನನ್ನು ಆರಾಧಿಸಿ ಯಜ್ಞ ಶೇಷವಾದ ಅನ್ನಾದಿ ಆಹಾರವನ್ನು ಭುಜಿಸಿ ದೇಹಧಾರಣೆ ಮಾಡಿಕೊಳ್ಳಬೇಕಾದುದು ನಮ್ಮ ಕರ್ತವ್ಯ, ಹೀಗೆ ಯಜ್ಞಶೇಷವಾದ ಅನ್ನವನ್ನು ಭುಜಿಸುವ ಸತ್ಪುರುಷರು ಸಮಸ್ತ ಪಾಪಗಳಿಂದ ಮುಕ್ತರಾಗುವರು. ಹಾಗಿಲ್ಲದೆ ಯಾರು ಕೇವಲ ತಮಗೆ ಮಾತ್ರ ಅಡಿಗೆಯನ್ನು ಮಾಡಿಕೊಳ್ಳುವರೋ ಆ ಪಾಪಿಗಳು ಪಾಪವನ್ನೇ ಭುಜಿಸುವರು. ಯಜ್ಞ ಅಥವಾ ಭಗವಂತನ ಆರಾಧನೆಯೇ ಪ್ರಪಂಚದಲ್ಲಿ ಶ್ರೇಷ್ಠವಾದ ಕರ್ಮವು. ಅದನ್ನು ಮುಕ್ತಸಂಗನಾಗಿ ಆಚರಿಸುವುದೇ ಮುಕ್ತಿಯನ್ನು ಪಡೆಯಲು ಮೊದಲನೆಯ ಸಾಧನ.

ಮುಂದೆ ನಾನು ನಿನಗೆ ಸಮಸ್ತಕ್ಕೂ ಪ್ರಪಂಚದಲ್ಲಿ ಯಜ್ಞವೇ ಮೂಲ ಕಾರಣವು ಮತ್ತು ಅದನ್ನು ಅನುಸರಿಸಿ ನಡೆಯುವುದು ಒಳ್ಳೆಯದು ಎಂಬುದನ್ನು ತಿಳಿಸುತ್ತೇನೆ. ಅನ್ನದಿಂದ ಪ್ರಾಣಿಗಳು ಉಂಟಾಗುತ್ತವೆ. ಅನ್ನವು ಮಳೆಯಿಂದ ಉಂಟಾಗುತ್ತದೆ. ಮಳೆಯು ಯಜ್ಞದಿಂದಲೂ ಮತ್ತು ಯಜ್ಞವು ಕರ್ಮದಿಂದಲೂ ಉಂಟಾಗುತ್ತವೆ. ಕರ್ಮವು ಸಜೀವ ಶರೀರದಿಂದಲೂ ಮತ್ತು ಶರೀರವು ಜೀವಾತ್ಮನಿಂದಲೂ ಉತ್ಪನ್ನವಾಗುತ್ತವೆ. ಜೀವನಿಂದ ಕೂಡಿರುವ ಶರೀರವು ಮತ್ತೆ ಅನ್ನದಿಂದ ಉಂಟಾಗುತ್ತದೆ. ಸರ್ವಗತವಾದ ಶರೀರವು ಸರ್ವದಾ ಯಜ್ಞದಲ್ಲಿ ಪ್ರತಿಷ್ಠಿತವಾದುದಾಗಿದೆ. ಹೀಗೆ ಅನ್ಯೋನ್ಯವಾದ ಕಾರ್ಯಕಾರಣ ಭಾವದಿಂದ ಕೂಡಿ ಪರಮಾತ್ಮನಿಂದ ಪ್ರವರ್ತಿಸಲ್ಪಟ್ಟ ಈ ಚಕ್ರವು ತಿರುಗುತ್ತಿದೆ. ಯಾವನು ಈ ಲೋಕದಲ್ಲಿ ಈ ರೀತಿಯಾಗಿ ಪ್ರವರ್ತಿಸಲ್ಪಟ್ಟ ಚಕ್ರವನ್ನು ಅನುಸರಿಸಿ ನಡೆಯುವುದಿಲ್ಲವೋ, ಮಾಡಬೇಕಾದ ಯಜ್ಞಗಳನ್ನು ಅಂದರೆ ಭಗವದಾರಾಧನರೂಪವಾದ ಕರ್ತವ್ಯ ಕರ್ಮಗಳನ್ನು ಮಾಡುವುದಿಲ್ಲವೋ ಅವನು ಕೇವಲ ಪಾಪಮಯವಾದ ಜೀವನವುಳ್ಳವನೂ, ಇಂದ್ರಿಯಾರಾಮನು ಅಂದರೆ ಇಂದ್ರಿಯ ಸುಖಗಳಲ್ಲಿಯೇ ಮುಳುಗಿದವನೂ ಆಗಿ ಲೋಕದಲ್ಲಿ ನಿರರ್ಥಕವಾದ ಜೀವನವನ್ನು ನಡೆಸುವನು.

## IV ಜ್ಞಾನಯೋಗಿಯೂ ಕರ್ಮವನ್ನು ಮಾಡಬೇಕು (ಶ್ಲೋಕಗಳು 17ರಿಂದ 26)

### 1. ಮುಕ್ತ ಪುರುಷನು ಮಾತ್ರ ವರ್ಣಾಶ್ರಮಕರ್ಮಗಳನ್ನು ಮಾಡಬೇಕಾಗಿಲ್ಲ. (ಶ್ಲೋಕಗಳು 17 ಮತ್ತು 18)

ಯಾವ ಮನುಷ್ಯನು ಆತ್ಮತತ್ತ್ವಯಾಥಾತ್ಮ್ಯ ದರ್ಶನದಲ್ಲಿಯೇ ಅಭಿಮಾನವುಳ್ಳವನಾಗಿ, ಪ್ರೀತಿಯುಳ್ಳವನಾಗಿ, ಸಂತೋಷವುಳ್ಳವನಾಗಿ ಇರುತ್ತಾನೆಯೋ ಅಂತಹವನಿಗೆ ಸಾಧನರೂಪವಾದ ಕರ್ಮವು ಇರುವುದಿಲ್ಲ. ಆತ್ಮ ಸಾಕ್ಷಾತ್ಕಾರ ಸಿದ್ಧಿ ಪಡೆದಿರುವ ಮನುಷ್ಯನು ಸಾಧನಗಳ ಮೂಲಕ ಸಾಧಿಸಬೇಕಾದುದು ಏನೂ ಇಲ್ಲ. ಈ ಲೋಕದಲ್ಲಿ ಮಾಡುವ ಕರ್ಮದಿಂದ ಅವನಿಗೆ ಯಾವ ಪ್ರಯೋಜನವೂ ಇಲ್ಲ ಮತ್ತು ಕರ್ಮತ್ಯಾಗದಿಂದ ಅವನಿಗೆ ಯಾವ ಹಾನಿಯೂ ಇಲ್ಲ ಮತ್ತು ಅವನಿಗೆ ಸಮಸ್ತ ಭೂತಗಳಿಂದ ಯಾವ ವಿಧವಾದ ಸ್ವಾರ್ಥವಾದ ಪ್ರಯೋಜನವೂ ಇಲ್ಲ.

### 2. ಆತ್ಮ ಸಾಕ್ಷಾತ್ಕಾರವಾಗದವನಿಗೆ ಕರ್ಮವೇ ಶ್ರೇಷ್ಠವಾದ ಮಾರ್ಗವು. (ಶ್ಲೋಕ 19)

ಅರ್ಜುನ ! ಮೇಲೆ ಹೇಳಿದ ಕಾರಣಗಳಿಂದ ಆತ್ಮಸಾಕ್ಷಾತ್ಕಾರ ಪಡೆಯದ ನೀನು ಯಾವಾಗಲೂ ಸಂಗರಹಿತನಾಗಿ ಫಲಾಪೇಕ್ಷೆರಹಿತನಾಗಿ ಕರ್ತವ್ಯ ಕರ್ಮವನ್ನು ಚೆನ್ನಾಗಿ ಮಾಡುವವನಾಗು. ಫಲಾಪೇಕ್ಷೆಯನ್ನು ಬಿಟ್ಟು ಕರ್ಮವನ್ನು ಆಚರಿಸತಕ್ಕ ಪುರುಷನೇ ಸರ್ವೋತ್ಕೃಷ್ಟವಾದ ಉನ್ನತ ದೆಸೆಯನ್ನು ಪಡೆಯುತ್ತಾನೆ. ಬಹುಮಂದಿ ಜನರಿಗೆ ಕರ್ಮಯೋಗವೇ ಶ್ರೇಷ್ಠವಾದ ಮಾರ್ಗವಾಗಿದೆ.

### 3. ಮುಕ್ತ ಪುರುಷನೂ ಕೂಡ ಲೋಕಕಲ್ಯಾಣಕ್ಕಾಗಿ ಕರ್ಮವನ್ನು ಮಾಡಲೇಬೇಕು. (ಶ್ಲೋಕಗಳು 20 ರಿಂದ 26)

#### 1) ಜನಕಾದಿ ಋಷಿಗಳು ಕರ್ಮವನ್ನು ಮಾಡಿದರು. (ಶ್ಲೋಕಗಳು 20 ಮತ್ತು 21)

ಜ್ಞಾನಿಗಳಲ್ಲಿ ಅಗ್ರೇಸರನಾದ ಜನಕನೇ ಮೊದಲಾದ ರಾಜಋಷಿಗಳೂ ಕೂಡ ಕರ್ಮಯೋಗವನ್ನು ಅನುಷ್ಠಿಸಿಯೇ ಪರಮ ಸಿದ್ಧಿಯನ್ನು ಪಡೆದರು. ಲೋಕಕಲ್ಯಾಣಕ್ಕಾಗಿಯೂ ಕರ್ಮವನ್ನೇ ಮಾಡಬೇಕಾಗುತ್ತದೆ. ನೀನು ಕರ್ಮವನ್ನು ನಿನಗಾಗಿ ಮಾಡದಿದ್ದರೂ ಲೋಕಸಂಗ್ರಹಕ್ಕಾಗಿ ಅಂದರೆ ಇತರರನ್ನು ಕರ್ಮ ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡುವುದಕ್ಕಾದರೂ ಕರ್ಮವನ್ನು

ಆಚರಿಸಲೇಬೇಕು. ಮಹಾತ್ಮನು ಯಾವ ಯಾವ ಕರ್ಮಗಳನ್ನು ಆಚರಿಸುತ್ತಾನೆಯೋ ಅದೇ ಪ್ರಮಾಣವೆಂದು ತಿಳಿದು ಇತರ ಜನರೂ ಅವುಗಳನ್ನೇ ಆಚರಿಸುತ್ತಾರೆ.

### 2) (ಪರಮ ಪುರುಷನಾದ, ಶ್ರೀಕೃಷ್ಣನಾದ) ನಾನೂ ಕರ್ಮವನ್ನು ಮಾಡುತ್ತಿರುವೆನು. (ಶ್ಲೋಕಗಳು 22 ರಿಂದ 24)

ಮಹಾತ್ಮರ ಶ್ರೇಷ್ಠವಾದ ನಡತೆಯು ಜನತೆಯ ಮೇಲೆ ಪ್ರಭಾವವನ್ನು ಉಂಟುಮಾಡುವುದರಿಂದ ನಾನೂ ಕೂಡ ಕರ್ಮವನ್ನು ಮಾಡುತ್ತಿದ್ದೇನೆ. ಅರ್ಜುನ! ಸಮಸ್ತ ವಿಶ್ವದಲ್ಲಿಯೂ ಮಾಡಬೇಕಾದ ಕರ್ತವ್ಯವು ನನಗೆ ಏನೂ ಇಲ್ಲವು. ನಾನು ಪಡೆಯಬೇಕಾದುದೂ ಏನೂ ಇಲ್ಲವು. ಆದಾಗ್ಯೂ ನಾನು ಕರ್ಮವನ್ನು ಮಾಡುತ್ತಲೇ ಇರುವೆನು. ಕಾರಣವಿಷ್ಟೆ, ನಾನು ಯಾವಾಗಲಾದರೂ ಕರ್ಮದಲ್ಲಿ ಪ್ರವೃತ್ತನಾಗದೇ ಇದ್ದ ಪಕ್ಷದಲ್ಲಿ ಸಮಸ್ತ ಮಾನವರೂ ಎಲ್ಲಾ ಪ್ರಕಾರದಲ್ಲಿಯೂ ನನ್ನನ್ನೇ ಅನುಸರಿಸಿ ಅವರೂ ಕರ್ಮವನ್ನು ಮಾಡುವುದೇ ಇಲ್ಲ. ಆದ್ದರಿಂದ ನಾನು ಕರ್ಮ ಮಾಡದೇ ಹೋದರೆ ಈ ಲೋಕದ ಜನರು ನಷ್ಟರಾಗಿ ಲೋಕವೆಲ್ಲವೂ ಕೆಟ್ಟು ಹೋಗುವುದು. ಇದರಿಂದ ನಾನೇ ವರ್ಣಸಂಕರದ ಕರ್ತೃವಾಗುವೆನು ಮತ್ತು ಪ್ರಜೆಗಳನ್ನು ನಾಶಮಾಡುವವನೂ ಆಗುವೆನು.

### 3) ಕರ್ಮಯೋಗದ ಅನುಷ್ಠಾನದಲ್ಲಿ ಜ್ಞಾನಿಗೂ, ಇತರರಿಗೂ ಇರುವ ವ್ಯತ್ಯಾಸ (ಶ್ಲೋಕಗಳು 25, 26)

ಪ್ರಪಂಚದಲ್ಲಿರುವವರಿಗೆಲ್ಲಾ ಒಳ್ಳೆಯ ಮಾದರಿಯಾಗಿ ಇರುವುದಕ್ಕಾದರೂ ನೀನು ಸಂಗರಹಿತನಾಗಿ ಕರ್ಮವನ್ನು ಮಾಡಲೇಬೇಕು. ನಿನಗೆ ಫಲಾಪೇಕ್ಷೆಯು ಇಲ್ಲದಿದ್ದರೂ ಮಾಡುತ್ತಿರುವ ಕರ್ಮವನ್ನು ಅರ್ಧ ಮನಸ್ಸಿನಿಂದ ಮಾಡದೆ ಮುತುವರ್ಜಿಯಿಂದ ಫಲಾಪೇಕ್ಷೆಯು ಇರುವವನಂತೆಯೇ ಸರಿಯಾದ ರೀತಿಯಲ್ಲಿಯೇ ದಕ್ಷತೆಯಿಂದ ಮಾಡಬೇಕು. ಆತ್ಮಜ್ಞಾನಿಯು ಕರ್ಮದಲ್ಲಿ ಆಸಕ್ತರಾಗಿರುವ ಜ್ಞಾನರಹಿತರಿಗೆ ಕರ್ಮಕ್ಕಿಂತಲೂ ಬೇರೆಯಾದ ಮೋಕ್ಷ ಮಾರ್ಗವು ಉಂಟೆಂದು ಹೇಳಿ ಅವರಲ್ಲಿ ಬುದ್ಧಿ ಭೇದವನ್ನು ಅಂದರೆ ವಿರೋಧವಾದ ಅಭಿಪ್ರಾಯವನ್ನು ಹುಟ್ಟಿಸಬಾರದು. ಅದಕ್ಕೆ ಬದಲಾಗಿ ಬುದ್ಧಿವಂತಿಕೆಯಿಂದಲೂ, ಚಾತುರ್ಯದಿಂದಲೂ ಕರ್ಮಗಳನ್ನು ಮಾಡುತ್ತಾ ಸಮಸ್ತ ಕರ್ಮಗಳಲ್ಲಿಯೂ ಅವರಿಗೆ ಪ್ರೀತಿಯನ್ನು ಉಂಟುಮಾಡಬೇಕು.

**V ಅಕರ್ತೃತ್ವಾನುಸಂಧಾನದೊಂದಿಗೆ ಭಗವಂತನ ಕೈಂಕರ್ಯವೆಂದು ಕರ್ತವ್ಯ ಕರ್ಮಗಳನ್ನು ಮಾಡಿರಿ. (ಶ್ಲೋಕಗಳು 27ರಿಂದ 32)**

ಕರ್ಮಕ್ಕೆ ಕರ್ತೃ ಆತ್ಮನಾದ ನೀನಲ್ಲ ಎಂಬ ಅನುಸಂಧಾನದೊಂದಿಗೆ ಅಂದರೆ ಅಕರ್ತೃತ್ವಾನುಸಂಧಾನದೊಂದಿಗೆ ಕರ್ಮ ಮಾಡು ಎಂಬುದೇ ಗೀತೆಯ ಉಪದೇಶ. ಕರ್ಮವನ್ನು ಮಾಡುವವನು ನೀನಲ್ಲ ಎಂದು ಹೇಳುವುದಾದರೆ ಕರ್ಮ ಮಾಡುವವನು ಯಾರು? ಕರ್ಮಕ್ಕೆ ಕರ್ತೃ ಯಾರು? ಎಂಬ ವಿಷಯಕ್ಕೆ ಈ ಮುಂದಿನ ಶ್ಲೋಕಗಳಲ್ಲಿ ಉತ್ತರ ತಿಳಿಸಿದೆ.

**1. ಚೇತನನು ತ್ರಿಗುಣಗಳಿಂದ ಪ್ರೇರಿತನಾಗಿ ಕರ್ಮವನ್ನು ಮಾಡುತ್ತಾನೆ. (ಶ್ಲೋಕಗಳು 27 ರಿಂದ 29)**

ಕರ್ಮಗಳು ಎಲ್ಲಾ ವಿಧದಲ್ಲಿಯೂ ಸತ್ವರಜಸ್ತಮೋಗುಣಗಳಿಗೆ ಅನುರೂಪವಾಗಿ ಮಾಡಲ್ಪಡುತ್ತವೆ. ಆದರೆ ಶರೀರವೇ ಆತ್ಮವೆಂಬ ಭ್ರಮೆ ಹೊಂದಿ ಅಹಂಕಾರದಿಂದ ಮೋಹಿತವಾದ ಜ್ಞಾನವುಳ್ಳ ಮೂಢನಾದ ಮನುಷ್ಯನು "ಕರ್ಮಗಳನ್ನು ಮಾಡುವವನು ನಾನು" ಎಂದು ತಿಳಿಯುತ್ತಾನೆ. ಪ್ರಕೃತಿಯ ಗುಣಗಳ ಲಕ್ಷಣಗಳನ್ನೂ ಮತ್ತು ಅವುಗಳಿಂದ ನಡೆಸಲ್ಪಡುವ ಕರ್ಮಗಳ ಲಕ್ಷಣಗಳನ್ನೂ ಮತ್ತು ವಿಭಾಗಗಳನ್ನೂ ಬಲ್ಲ ತತ್ವಜ್ಞನಾದರೋ ಪ್ರಕೃತಿಯ ಗುಣಗಳು ತಮ್ಮ ತಮ್ಮ ವಿಷಯಗಳಲ್ಲಿ ಪ್ರವರ್ತಿಸುತ್ತವೆ ಎಂದು ತಿಳಿದು, ಆ ಕರ್ಮಗಳಿಗೆ ತಾನೇ ಕರ್ತೃ ಎಂಬ ಅಹಂಕಾರ ಪಡುವುದಿಲ್ಲ. ಪ್ರಕೃತಿಯ ಗುಣಗಳಿಂದ ಮೋಹಿತರಾದವರು ಆ ಗುಣಗಳ ಕಾರ್ಯರೂಪವಾದ ಕರ್ಮಗಳಲ್ಲಿ ಆಸಕ್ತರಾಗುತ್ತಾರೆ. ಪೂರ್ಣ ಜ್ಞಾನಿಗಳು, ಅಲ್ಪಜ್ಞರಾಗಿಯೂ ಮಂದ ಬುದ್ಧಿಯುಳ್ಳವರಾಗಿಯೂ ಇರುವವರಿಗೆ ಚಿತ್ತ ಚಾಂಚಲ್ಯವನ್ನು ಉಂಟುಮಾಡಬಾರದು. ಅಂದರೆ ಜ್ಞಾನಿಗಳಾದ ಅವರು ಅಕರ್ತೃತ್ವಾನು ಸಂಧಾನದೊಂದಿಗೆ ಕರ್ಮಗಳನ್ನು ತಾವು ಶ್ರದ್ಧೆಯಿಂದ ಆಚರಿಸಿ ತಮ್ಮನ್ನು ಅನುಕರಣೆ ಮಾಡುವ ಮಂದಮತಿಗಳು ಕರ್ಮಯೋಗವನ್ನೇ ಪ್ರೀತಿಸಿ ಅನುಷ್ಠಿಸುವಂತೆ ಮಾಡಬೇಕು.

**2. ಚೇತನನು ಪರಮಾತ್ಮನ ನಿಯಮನದಿಂದ ಕರ್ಮವನ್ನು ಮಾಡುತ್ತಾನೆ. (ಶ್ಲೋಕಗಳು 30 ರಿಂದ 32)**

ಪ್ರಕೃತಿಯ ಸತ್ವರಜಸ್ತಮೋಗುಣಗಳಿಂದ ಪ್ರೇರಿತನಾಗಿ ಚೇತನನು

ಕರ್ಮಮಾಡುತ್ತಾನೆ ಎಂದು ಮೇಲೆ ವಿವರಿಸಿದೆ. ಆದರೆ ಜಗತ್ತಿನ ಜೀವಿಗಳಿಗೆಲ್ಲಾ ಅಂತರಾತ್ಮನಾಗಿ ಇದ್ದುಕೊಂಡು ಪರಮಾತ್ಮನು ಅವುಗಳನ್ನು ನಿಯಮಿಸುತ್ತಿದ್ದಾನೆ. ಅವನ ನಿಯಮನಕ್ಕೆ ಒಳಪಟ್ಟು ಎಲ್ಲಾ ಕರ್ಮಗಳೂ ನಡೆಯುತ್ತಿವೆ ಎಂದು ಮುಂದೆ ಭಗವದ್ಗೀತೆಯಲ್ಲಿ ತಿಳಿಸಿದೆ. ಆದ್ದರಿಂದ ತ್ರಿಗುಣಗಳಿಂದ ಕೂಡಿರುವ ಶರೀರದ ಮೂಲಕ ಮಾಡಲ್ಪಟ್ಟ ಸಮಸ್ತ ಕರ್ಮಗಳಿಂದ ಉಂಟಾಗುವ ಕರ್ತೃತ್ವವನ್ನು ಪರಮಾತ್ಮನಲ್ಲಿ ಆರೋಪಿಸಿ ಕರ್ಮಮಾಡಬೇಕೆಂದು **"ಮಯಿಸರ್ವಾಣಿ ಕರ್ಮಾಣಿ ಸನ್ನ್ಯಸ್ಯ ಅಧ್ಯಾತ್ಮ ಚೇತಸಾ। ನಿರಾಶೀಃ ನಿರ್ಮಮೋ ಭೂತ್ವಾ ಯುಧ್ಯಸ್ವವಿಗತ ಜ್ವರಃ"** ಎಂಬ ಈ ಅಧ್ಯಾಯದ ಮೂವತ್ತನೆಯ ಶ್ಲೋಕದಲ್ಲಿ ತಿಳಿಸಿದೆ. ಇದು ಬಹಳ ಮುಖ್ಯವಾದ ಶ್ಲೋಕ. ಇದಕ್ಕೆ ಶ್ರೀ ರಾಮಾನುಜರು ವಿಸ್ತಾರವಾಗಿ ವ್ಯಾಖ್ಯಾನ ಬರೆದಿದ್ದಾರೆ. ಇದರಲ್ಲಿ ಕರ್ಮಯೋಗದ ಐದು ಅಭ್ಯಾಸಗಳು ತಿಳಿಸಲ್ಪಟ್ಟಿವೆ. ಅವು ಯಾವುವೆಂದರೆ:

**1. ಅಧ್ಯಾತ್ಮ ಚೇತಸಾ :-** ಆತ್ಮ ಪರಮಾತ್ಮ ಸ್ವರೂಪ ಚಿಂತನೆಯೊಂದಿಗೆ ಕರ್ಮಮಾಡಬೇಕು. ಅಂದರೆ ಕರ್ಮದೊಂದಿಗೆ ಅಧ್ಯಾತ್ಮಜ್ಞಾನವೂ ಮಿಳಿತವಾಗಿರ ಬೇಕು ಎಂದು ತಿಳಿಸಿದೆ.

**2. ಮಯಿಸರ್ವಾಣಿ ಕರ್ಮಾಣಿ ಸನ್ನ್ಯಸ್ಯ:-** ಕರ್ಮಗಳ ಕರ್ತೃತ್ವ, ಫಲ, ಮಮತಾದಿಗಳನ್ನೂ ಸರ್ವಕರ್ಮಗಳನ್ನೂ ಭಗವಂತನಿಗೆ ಸಮರ್ಪಿಸಬೇಕು ಅಂದರೆ ಕರ್ಮಗಳು ಪರಮಾತ್ಮನಿಗೆ ಸೇರಿರುವಂತಹವು ಮತ್ತು ಚೇತನನಿಂದ ಅವುಗಳನ್ನು ಮಾಡಿಸುವವನು ಪರಮಾತ್ಮನೇ. ಹೀಗೆ ಕರ್ಮವೂ, ಕರ್ಮದ ಕರ್ತೃತ್ವವೂ ಪರಮಾತ್ಮನೇ ಆಗಿರುವುದರಿಂದ ಚೇತನನು ಕರ್ಮತ್ಯಾಗ ಮಾಡದೆ ಕರ್ಮವನ್ನೂ ಅದರ ಫಲವನ್ನೂ ಪರಮಾತ್ಮನಿಗೆ ಸಮರ್ಪಿಸಿ, ಕರ್ಮವನ್ನು ಪರಮಾತ್ಮನ ಪವಿತ್ರ ಆರಾಧನೆ ಎಂಬ ಭಾವನೆಯಿಂದ ಪ್ರೀತಿಭಕ್ತಿಗಳಿಂದ ಸಂತೋಷವಾಗಿ ಮಾಡಬೇಕು. ಅಂದರೆ ಕರ್ಮದೊಂದಿಗೆ ಭಕ್ತಿಯು ಮಿಳಿತವಾಗಿರಬೇಕು ಎಂದು ಇಲ್ಲಿ ತಿಳಿಸಿದೆ.

**3. ನಿರಾಶೀಃ-** ಕರ್ಮಗಳನ್ನು ಫಲಾಸಕ್ತಿ ರಹಿತವಾಗಿ ಮಾಡಬೇಕು.

**4. ನಿರ್ಮಮಃಭೂತ್ವಾ-** ಕರ್ಮವು ನನ್ನದಲ್ಲ, ಪರಮಾತ್ಮನದು. ಕರ್ಮದ ಕರ್ತೃ ನಾನಲ್ಲ, ಪರಮಾತ್ಮನು. ಆದ್ದರಿಂದ ಕರ್ಮದಲ್ಲಿ ಅದು ನನ್ನದು ಎಂಬ ಮಮಕಾರವಾಗಲಿ, ಅದನ್ನು ನಾನು ಮಾಡುತ್ತೇನೆ ಎಂಬ ಅಹಂಕಾರವಾಗಲಿ ಇರಕೂಡದು. ಪರಮಾತ್ಮನು ತನ್ನ ಕರ್ಮವನ್ನು ನನ್ನ ಮೂಲಕ ಮಾಡಿಸುತ್ತಿದ್ದಾನೆ ಎಂಬ ಪವಿತ್ರ ಭಾವನೆಯಿಂದ ಅಹಂಕಾರ ಮಮಕಾರ ರಹಿತನಾಗಿ ಕರ್ಮವನ್ನು ಮಾಡಬೇಕು.

5. ವಿಗತ ಜ್ವರಃ ಯುಧ್ಯಸ್ವ- ಯಾವ ಸಂತಾಪವೂ ಇಲ್ಲದವನಾಗಿ ಕರ್ಮಮಾಡು. ಕರ್ಮ, ಅದರ ಫಲ ಎರಡೂ ನಿನ್ನದಲ್ಲವೆಂದು ತಿಳಿದ ಮೇಲೆ ಕರ್ಮ ಮಾಡುವಾಗ ಯಾವ ಉದ್ವೇಗವೂ ನಿನಗೆ ಉಂಟಾಗುವುದಿಲ್ಲ. ಶಾಂತಮನಸ್ಕನಾಗಿ ಯುದ್ಧ ಮಾಡು ಅಂದರೆ ಕರ್ಮವನ್ನು ಮಾಡು. ಕರ್ಮ ಮಾಡುವಾಗ ಕರ್ಮದೊಂದಿಗೆ ಆಧ್ಯಾತ್ಮ ಚಿಂತನೆ ಮತ್ತು ಭಗವದ್ಭಕ್ತಿ ಎರಡೂ ಮಿಳಿತವಾಗಿರಬೇಕು ಎಂದು ಇಲ್ಲಿ ತಿಳಿಸಿದೆ. ಅಂದರೆ ಸಮಸ್ತ ಕರ್ಮಗಳನ್ನೂ ಪರಮಾತ್ಮನಿಗೆ ಸಮರ್ಪಿಸಿ ಮಾಡಬೇಕು. ಕರ್ಮಗಳ ಕರ್ತೃತ್ವ, ಫಲ ಮಮತಾದಿಗಳನ್ನೆಲ್ಲಾ ಪರಮಾತ್ಮನಿಗೆ ಸಮರ್ಪಿಸಿ ಕರ್ಮವು ನನ್ನದಲ್ಲ, ಪರಮಾತ್ಮನದು, ಕರ್ಮದ ಕರ್ತೃ ನಾನಲ್ಲ, ಪರಮಾತ್ಮನೇ ನನ್ನ ಮೂಲಕ ನನ್ನ ಪ್ರಕೃತಿಯ ಗುಣಗಳಿಗೆ ಅನುಗುಣವಾಗಿ ಕರ್ಮ ಮಾಡಿಸುತ್ತಿದ್ದಾನೆ, ಅಂದರೆ ಕರ್ಮವೂ, ಅದರ ಕರ್ತೃತ್ವವೂ, ಅದರ ಫಲವೂ ಎಲ್ಲವೂ ಪರಮಾತ್ಮನಿಗೇ ಸೇರಿದ್ದು ಎಂದು ಸಮಸ್ತ ಕರ್ತವ್ಯ ಕರ್ಮಗಳನ್ನು ಭಗವಂತನ ಕೈಂಕರ್ಯವೆಂಬ ಪವಿತ್ರ ಭಕ್ತಿ ಭಾವನೆಯೊಂದಿಗೆ, ಅಹಂಕಾರ ಮಮಕಾರ ರಹಿತನಾಗಿ ಶಾಂತಚಿತ್ತನಾಗಿ ಸಂತೋಷದಿಂದ ಮಾಡಬೇಕು ಎಂಬುದೇ ಇದರ ಉಪದೇಶ. ಯಾರು ನನ್ನ ಈ ಅಭಿಪ್ರಾಯದಲ್ಲಿ ಶ್ರದ್ಧಾವಂತರಾಗಿಯೂ, ದೋಷವೆಣಿಸದವ ರಾಗಿಯೂ ಇರುತ್ತಾರೋ ಅವರೆಲ್ಲರೂ ಕರ್ಮ ವಿಮೋಚನೆಯನ್ನು ಹೊಂದುತ್ತಾರೆ. ಅಂದರೆ ಕರ್ಮದಿಂದ ಬಿಡಲ್ಪಟ್ಟವರಾಗುತ್ತಾರೆ. ಆದರೆ ಯಾರು ನನ್ನ ಈ ಅಭಿಪ್ರಾಯದಲ್ಲಿ ದೋಷವನ್ನೆಣಿಸಿ ಇದನ್ನು ಅನುಷ್ಠಿಸದೆ ಇರುತ್ತಾರೆಯೋ ಅವರು ಯಾವ ಬಗೆಯ ಜ್ಞಾನವೂ ಇಲ್ಲದ ಮೂಢರು, ನಷ್ಟ ಹೊಂದಿದವರು ಮತ್ತು ವಿವೇಕ ಹೀನರು ಎಂದು ತಿಳಿ.

## VI ಜ್ಞಾನಯೋಗದ ಕಷ್ಟಸಾಧ್ಯತೆ (ಶ್ಲೋಕಗಳು 33 ರಿಂದ 42)

### 1. ಜ್ಞಾನಯೋಗಕ್ಕೆ ಇಂದ್ರಿಯ ನಿಗ್ರಹದ ಆವಶ್ಯಕತೆ - ಅದರ ಕಷ್ಟ ಸಾಧ್ಯತೆ (ಶ್ಲೋಕಗಳು 33 ರಿಂದ 36)

ಪ್ರಕೃತಿಯ ವಾಸನೆಗಳು ಬಹಳ ಪ್ರಬಲವಾಗಿರುವುದರಿಂದ ಮನುಷ್ಯನಿಗೆ ಮೊದಲು ಕರ್ಮವನ್ನೆಲ್ಲಾ ತ್ಯಜಿಸಿ ಧ್ಯಾನನಿಷ್ಠನಾಗುವುದು ಬಹಳ ಕಷ್ಟವು. ಜ್ಞಾನಿಯೂ ಕೂಡ ತನ್ನ ಶರೀರಕ್ಕೆ ಸಂಬಂಧಿಸಿದ ಹಳೆಯ ವಾಸನೆಗಳಿಗೆ ಅನುಗುಣವಾದ ಪ್ರವೃತ್ತಿ ಉಳ್ಳವನಾಗಿರುತ್ತಾನೆ. ಸಮಸ್ತ ಜೀವಿಗಳೂ ಅಂದರೆ ಶರೀರದಿಂದ ಕೂಡಿದ ಬದ್ಧ ಚೇತನರು ತಮ್ಮ ತಮ್ಮ ಪ್ರಕೃತಿಯ ವಾಸನೆಗಳನ್ನು

ಅನುಸರಿಸಿ ಶಬ್ದಾದಿ ವಿಷಯಗಳಲ್ಲಿ ಪ್ರವರ್ತಿಸುತ್ತಾರೆ. ಆದ್ದರಿಂದ ಇಂದ್ರಿಯ ನಿಗ್ರಹಾದಿಗಳನ್ನು ಮಾಡಲು ಹೇಗೆ ಸಾಧ್ಯ? ಅವರು ತಮ್ಮ ಪ್ರಕೃತಿ ವಾಸನೆಗೆ ವಿರೋಧವಾದ ಇಂದ್ರಿಯ ನಿಗ್ರಹಾದಿಗಳನ್ನು ಮಾಡಲು ಶಕ್ತರಾಗುವುದಿಲ್ಲ. ಅವರು ಇಂದ್ರಿಯಗಳಿಗೆ ಸೇರಿದ ವಿಷಯೋಪ ಭೋಗಗಳಲ್ಲಿ ವ್ಯವಸ್ಥಿತವಾಗಿರುವ ರಾಗ ದ್ವೇಷಗಳಿಗೆ ವಶರಾಗುತ್ತಾರೆ. ಬದ್ಧ ಜೀವಿಯಾದ ಜ್ಞಾನಿಯ ಆತ್ಮ ಜ್ಞಾನ ವಿಷಯವಾದ ಅಭ್ಯಾಸಗಳಿಗೆ ಈ ರಾಗದ್ವೇಷಗಳು ಶತ್ರುವು. ಅವುಗಳಿಗೆ ವಶನಾಗದಿರಲು ಕರ್ಮಯೋಗದಲ್ಲಿಯೇ ಮಗ್ನನಾಗಿ ಇರುವ ಅಭ್ಯಾಸವನ್ನು ಮಾಡಬೇಕು.

ನಮ್ಮ ಸ್ವಧರ್ಮವು ಕೀಳುದರ್ಜೆಯದಾದರೂ ಅದನ್ನು ತ್ಯಜಿಸಿ ಇದ್ದಕ್ಕಿದ್ದಂತೆ ಉತ್ತಮವಾದ ಪರಧರ್ಮವನ್ನು ಅಭ್ಯಾಸ ಮಾಡುವುದು ಅಪಾಯಕಾರಿಯು. ನಾವು ನಮಗೆ ಎಟುಕದ ಎತ್ತರಕ್ಕೆ ಹೋಗಲು ಪ್ರಯತ್ನಿಸಿದರೆ ಕೆಳಗೆ ಬೀಳುವುದು ಖಂಡಿತ. ಆದುದರಿಂದ ಚೆನ್ನಾಗಿ ಅನುಷ್ಠಿಸಲ್ಪಟ್ಟ ಪರಧರ್ಮಕ್ಕಿಂತ ಸ್ವಧರ್ಮವು ಅಲ್ಪವಾದುದಾದರೂ ಶ್ರೇಷ್ಠವೆಂಬುದನ್ನು ತಿಳಿ. ಪರಧರ್ಮವನ್ನು ಎಷ್ಟೇ ಜಾಗರೂಕತೆಯಿಂದ ಮಾಡಿದರೂ ಅಪಾಯಕಾರಿಯು. ಸ್ವಧರ್ಮವನ್ನು ಮಾಡುವಾಗ ಮರಣವುಂಟಾದರೂ ಅದು ಶ್ರೇಯಸ್ಕರವು. ಪರಧರ್ಮಾನುಷ್ಠಾನ ಮಾಡುವಾಗ ಅರ್ಧದಲ್ಲಿ ಮರಣವುಂಟಾದರೆ ಅದು ಅಪಾಯಕರವಾದುದು ಎಂದು ಗೀತೆಯಲ್ಲಿ ತಿಳಿಸಿದೆ. ಇಲ್ಲಿ ಸ್ವಧರ್ಮವೆಂದರೆ ಕರ್ಮಯೋಗವೆಂದೂ, ಅರ್ಥ ಹೇಳಿದ್ದಾರೆ.

ಹಿಂದಿನ ಶ್ಲೋಕಗಳಲ್ಲಿ ತಿಳಿಸಿರುವಂತೆ ಜೀವಿಗಳು ಪ್ರಕೃತಿಯ ವಾಸನೆಯನ್ನು ಅನುಸರಿಸಿ ನಡೆಯುವ ಪ್ರವೃತ್ತಿ ಪಡೆದಿರುವುದರಿಂದ ಅವರೆಲ್ಲರಿಗೂ ಕರ್ಮ ಯೋಗಾನುಷ್ಠಾನವೇ ಸುಲಭವಾದ ಸ್ವಧರ್ಮವಾಗಿದೆ. ಅದು ಪ್ರಮಾದರಹಿತ ವಾದುದೂ ಸುಲಭಸಾಧ್ಯವಾದುದೂ ಆಗಿದೆ. ಆದರೆ ಗುಣದಿಂದ ಕೂಡಿದ್ದಾಗಿದ್ದರೂ ಜ್ಞಾನಯೋಗವು ಪರಧರ್ಮವಾಗಿದೆ. ಅದು ಚೇತನನ ಪ್ರಕೃತಿ ವಾಸನೆಗೆ ಅತ್ಯಂತ ವ್ಯತಿರಿಕ್ತವಾದುದಾಗಿ ಬಹಳ ಕಷ್ಟಸಾಧ್ಯವಾಗಿದೆ ಮತ್ತು ಪ್ರಮಾದದಿಂದ ಕೂಡಿದೆ. ರಾಗ ದ್ವೇಷಾದಿ ವಿಘ್ನಗಳ ಹೊಡೆತದಿಂದ ಜ್ಞಾನ ಯೋಗಾಭ್ಯಾಸಕ್ಕೆ ಅರ್ಧದಲ್ಲಿ ವಿಘ್ನವುಂಟಾದರೆ ಅದರಿಂದ ಪ್ರಮಾದ ಉಂಟಾಗುವ ಸಂಭವವುಂಟು. ಆದ್ದರಿಂದ ಮಾನವನು ತನಗೆ ಪರಧರ್ಮವಾದ ಜ್ಞಾನಯೋಗವನ್ನು ಅನುಷ್ಠಿಸುವುದಕ್ಕಿಂತ ತನಗೆ

ಸ್ವಧರ್ಮವಾದ ಕರ್ಮಯೋಗವನ್ನು ಅನುಷ್ಠಿಸುವುದು ಶ್ರೇಯಸ್ಕರವಾದುದು. ಮೊದಲು ತನಗೆ ಯೋಗ್ಯವೂ, ಸುಖಕರವೂ ಆದ ಕರ್ಮಯೋಗವನ್ನು ಅನುಷ್ಠಿಸಿ, ಅದರಲ್ಲಿ ಸಿದ್ಧಿ ಪಡೆದ ನಂತರ ಜ್ಞಾನಯೋಗವನ್ನು ಆಚರಿಸುವುದು ಉತ್ತಮವಾದ ಮಾರ್ಗ ಎಂದು ಅಭಿಪ್ರಾಯ. ಹೀಗೆ ಕರ್ಮಯೋಗ ಸುಲಭವಾಗಿ ಆಚರಿಸತಕ್ಕ ಮಾರ್ಗವಾಗಿಯೂ, ಅನರ್ಥರಹಿತವಾದುದಾಗಿಯೂ, ಜ್ಞಾನ ಭಕ್ತಿಗಳಿಂದ ಕೂಡಿದ್ದಾಗಿಯೂ ಇರುವುದರಿಂದ ಕರ್ಮಯೋಗವೇ ಶ್ರೇಷ್ಠವಾದ ಮಾರ್ಗವಾಗಿದೆ.

## 2. ಪಾಪಕಾರ್ಯಗಳನ್ನು ಮಾಡಲು ಕಾಮಕ್ರೋಧಾದಿಗಳೇ ಕಾರಣ (ಶ್ಲೋಕಗಳು 37 ರಿಂದ 40)

ಕೃಷ್ಣನು ಅರ್ಜುನನಿಗೆ ಅವನು ತನಗೆ ಸ್ವಧರ್ಮವಾದ ಯುದ್ಧ ಮಾಡಬೇಕು, ಅದನ್ನು ಕರ್ಮಯೋಗವಾಗಿ ಮಾಡಿದರೆ ಅವನಿಗೆ ಶ್ರೇಯಸ್ಸು ಉಂಟಾಗುತ್ತದೆ ಎಂಬ ವಿಷಯವನ್ನೆಲ್ಲಾ ತಿಳಿಸಿದನು. ಆದರೆ ಅರ್ಜುನನಿಗೆ ಇಷ್ಟೆಲ್ಲಾ ತಿಳಿದ ಮೇಲೆ, ಏತಕ್ಕೆ ಮನುಷ್ಯನು ಕೆಟ್ಟ ಕೆಲಸ ಮಾಡಲು ಪ್ರವರ್ತಿಸುತ್ತಾನೆ ಎಂಬ ಸಂದೇಹವುಂಟಾಯಿತು. ಅವನು ಕೃಷ್ಣನನ್ನು, ಜ್ಞಾನಯೋಗದಲ್ಲಿ ಅರ್ಜವದೊಡನೆ ನಿರತನಾದ ಮನುಷ್ಯನು ದೃಢ ಬುದ್ಧಿಯಿಂದ ಇದ್ದರೂ ಯಾವುದರಿಂದ ಪ್ರೇರಿತನಾಗಿ ಅವನ ಇಷ್ಟವಿಲ್ಲದಿದ್ದರೂ ಬಲಾತ್ಕಾರದಿಂದ ನಿಯೋಜಿಸಲ್ಪಟ್ಟವನಾಗಿ ಪಾಪ ಕಾರ್ಯದಲ್ಲಿ ಪ್ರವೃತ್ತನಾಗುತ್ತಾನೆ ಎಂದು ಕೇಳಿದನು. ಇದಕ್ಕೆ ಉತ್ತರವಾಗಿ ಶ್ರೀಕೃಷ್ಣನು ಅರ್ಜುನನಿಗೆ ಮುಂದೆ ತಿಳಿಸುವ ರೀತಿಯಲ್ಲಿ ಉಪದೇಶ ಮಾಡುತ್ತಾನೆ.

ಜ್ಞಾನ ಯೋಗವನ್ನು ಅಭ್ಯಾಸ ಮಾಡುವವನನ್ನು ಹೀಗೆ ಪಾಪವನ್ನು ಮಾಡಲು ಬಲಾತ್ಕಾರದಿಂದ ಪ್ರೇರೇಪಿಸುವುದು ರಜೋಗುಣದಿಂದ ಉತ್ಪನ್ನವಾಗುವ ಕಾಮ ಕ್ರೋಧಾದಿಗಳು. ಬಹಳ ಕಾಲದಿಂದಲೂ ಮನುಷ್ಯನಲ್ಲಿ ಬೇರೂರಿರುವ ವಾಸನೆಗಳ ಬಲದಿಂದ ಉಂಟಾದ ಕಾಮವು ಎಷ್ಟು ಅನುಭವಿಸಿದರೂ ತೃಪ್ತಿಯುಂಟಾಗದೆ ವಿಷಯೋಪಭೋಗಗಳಲ್ಲಿಯೇ ಅವನು ಮುಳುಗಿರುವಂತೆ ಬಲವಂತ ಪಡಿಸುತ್ತದೆ. ಈ ಕಾಮದ ಇಷ್ಟ ಪ್ರಾಪ್ತಿಗೆ ಏನಾದರೂ ವಿಘ್ನವುಂಟಾದರೆ ಅದಕ್ಕೆ ಕಾರಣರಾದ ಚೇತನರ ಮೇಲೆ ಕ್ರೋಧವುಂಟಾಗಿ ಅದು ಮನುಷ್ಯನಿಂದ ಅನೇಕ ಪಾಪಗಳನ್ನು ಮಾಡಿಸುತ್ತದೆ. ಆದುದರಿಂದ ಜ್ಞಾನಯೋಗಕ್ಕೆ ಕಾಮ ಕ್ರೋಧಾದಿಗಳು ವೈರಿಗಳು ಎಂಬುದನ್ನು ತಿಳಿ.

ನಿನಗೆ ಕಾಮವೂ, ಅದರಿಂದ ಉಂಟಾಗುವ ಕ್ರೋಧವೂ ಆತ್ಮನ ಲಕ್ಷಣವನ್ನು ನಾಶಪಡಿಸಬಲ್ಲದೇ ಎಂಬ ಅನುಮಾನವುಂಟಾಗಬಹುದು. ಆದರೆ ಅದು ನಾಶಪಡಿಸುವುದಿಲ್ಲ. ಹೊಗೆಯಿಂದ ಬೆಂಕಿಯೂ, ಕೊಳೆಯಿಂದ ಕನ್ನಡಿಯೂ, ಗರ್ಭಚೀಲದಿಂದ ಗರ್ಭವೂ ಹೇಗೆ ಆವರಿಸಲ್ಪಟ್ಟಿದೆಯೋ ಹಾಗೆ ಕಾಮವು ಮನುಷ್ಯನ ನಿಜವಾದ ಜ್ಞಾನವನ್ನು ಆವರಿಸಿರುತ್ತದೆ. ಹೊಗೆಯು ಬೆಂಕಿಯನ್ನೂ, ಕೊಳೆಯು ಕನ್ನಡಿಯನ್ನೂ, ಗರ್ಭಚೀಲವು ಗರ್ಭವನ್ನೂ ಆವರಿಸಿ ಕೆಲವು ಕಾಲ ಅವುಗಳ ನಿಜವಾದ ಲಕ್ಷಣಗಳನ್ನು ಮರೆಮಾಡಬಹುದೇ ಹೊರತು ಅವುಗಳನ್ನು ನಾಶಪಡಿಸಲು ಆಗುವುದಿಲ್ಲ. ಹಾಗೆಯೇ ಕಾಮವೂ, ಅದರಿಂದ ಉಂಟಾಗುವ ಕ್ರೋಧವೂ ಆತ್ಮನ ನಿಜವಾದ ಲಕ್ಷಣಗಳನ್ನು ಕೆಲವು ಕಾಲ ಮರೆಮಾಡಬಹುದು, ಅಷ್ಟೆ. ಈ ಕಾಮಕ್ರೋಧಾದಿಗಳು ಜೀವಾತ್ಮನನ್ನು ಆವರಿಸುತ್ತವೆ. ಪೂರ್ತಿಗೊಳಿಸಲು ಅನರ್ಹವಾದ ವಿಷಯಗಳನ್ನು ಹೊಂದಿರುವ, ಸಾಕು ಎಂಬ ತೃಪ್ತಿಯೇ ಇಲ್ಲದ ಮತ್ತು ವಿಷಯಗಳಲ್ಲಿ ವ್ಯಾಮೋಹವನ್ನು ಹುಟ್ಟಿಸುವಂತಹ ಈ ನಿತ್ಯ ವೈರಿಯಾದ ಕಾಮವು ಜ್ಞಾನಯೋಗಿಯ ಜ್ಞಾನವನ್ನು ಆವರಿಸುತ್ತದೆ. ಆದರೆ ಅದು ಅದರ ಪ್ರಭಾವವಿರುವತನಕ ಜ್ಞಾನವನ್ನು ಸ್ವಲ್ಪ ಕಾಲ ಮರೆ ಮಾಡಬಹುದೇ ಹೊರತು ಆತ್ಮನ ನಿಜವಾದ ಜ್ಞಾನವನ್ನು ನಾಶಪಡಿಸಲು ಆಗುವುದಿಲ್ಲ.

ಇಂದ್ರಿಯ, ಮನಸ್ಸು ಬುದ್ಧಿ ಇವುಗಳು ಈ ಕಾಮಕ್ಕೆ ಆಶ್ರಯ ಸ್ಥಾನಗಳು. ಈ ಕಾಮವು ಇಂದ್ರಿಯ, ಮನಸ್ಸು ಬುದ್ಧಿ ಇವುಗಳ ಮೂಲಕ ಜ್ಞಾನವನ್ನು ಆವರಿಸಿಕೊಂಡು, ದೇಹಿಯಾದ ಆತ್ಮನನ್ನು ತನ್ನ ವಶಮಾಡಿಕೊಂಡು ಮೋಹಗೊಳಿಸುತ್ತದೆ. ಕಾಮವು ಮನುಷ್ಯನನ್ನು ವಿಷಯಾನುಭವಕ್ಕೆ ಎಳೆಯುತ್ತಾ ಆತ್ಮ ಜ್ಞಾನದಲ್ಲಿ ಇರಗೊಡಿಸದೆ, ವಿಷಯದಲ್ಲಿ ಆಸಕ್ತಿ ಯುಳ್ಳವನನ್ನಾಗಿಯೂ, ಆತ್ಮಾನುಭವದಲ್ಲಿ ವಿಮುಖನನ್ನಾಗಿಯೂ ಮಾಡುತ್ತದೆ. ಆದ್ದರಿಂದ ಕಾಮವು ಅವನ ನಿಜವಾದ ಶತ್ರುವು.

### 3. ಕಾಮಕ್ರೋಧಾದಿಗಳನ್ನು ಕರ್ಮಯೋಗದ ಮೂಲಕ ಜಯಿಸಿ ಜ್ಞಾನಯೋಗಕ್ಕೆ ಅರ್ಹತೆ ಪಡೆಯಬೇಕು. (ಶ್ಲೋಕಗಳು 41 ರಿಂದ 43)

ನೀನು ಮೊದಲು ಇಂದ್ರಿಯಗಳನ್ನು ನಿಗ್ರಹಿಸಿ ಜ್ಞಾನವನ್ನೂ, ವಿಜ್ಞಾನವನ್ನೂ ನಾಶಪಡಿಸುವ ಮಹಾಪಾಪಿಯಾದ ಈ ಕಾಮವನ್ನು ಸಂಪೂರ್ಣವಾಗಿ ನಾಶಮಾಡು, ಇಂದ್ರಿಯಗಳನ್ನು ಕರ್ಮಯೋಗದಲ್ಲಿ ನಿರತವಾಗುವಂತೆ ಮಾಡಿದರೆ ಆಗ

ಇಂದ್ರಿಯಗಳನ್ನು ಕಾಮಕ್ಕೆ ವಶವಾಗಿ ವಿಷಯಾನುಭವದಲ್ಲಿ ಪ್ರವರ್ತಿಸದಂತೆ ತಡೆಯಲು ಶಕ್ತನಾಗುವೆ. ಇಂದ್ರಿಯವು ಬಹಳ ಪ್ರಬಲವಾದ ಜ್ಞಾನ ವಿರೋಧಿಯು. ಪ್ರಪಂಚದಲ್ಲಿರುವ ಅನೇಕ ಮನುಷ್ಯರನ್ನು ಅವರು ಆತ್ಮ ಸಾಕ್ಷಾತ್ಕಾರವನ್ನು ಪಡೆಯದಂತೆ ಇಂದ್ರಿಯಗಳು ತಡೆಯುತ್ತವೆ. ಇಂದ್ರಿಯಗಳಿಗಿಂತ ಮನಸ್ಸು ಪ್ರಬಲವಾದ ಜ್ಞಾನ ವಿರೋಧಿಯು. ಮನಸ್ಸಿಗಿಂತ ಬುದ್ಧಿಯು ಪ್ರಬಲವಾದ ಜ್ಞಾನ ವಿರೋಧಿಯು. ಇಂದ್ರಿಯಗಳು ಪ್ರಶಾಂತವಾಗಿ ಇದ್ದರೂ ಮನಸ್ಸು ವಿಷಯದಲ್ಲಿ ಪ್ರವರ್ತಿಸಿದರೆ ಆಗ ಆತ್ಮ ಜ್ಞಾನವು ಉಂಟಾಗುವುದಿಲ್ಲ. ಮನಸ್ಸು ವಿಷಯಗಳಿಂದ ವಿಮುಖವಾದ ಮೇಲೆಯೂ ಬುದ್ಧಿಯು ವಿಷಯದಲ್ಲಿ ಪ್ರವರ್ತಿಸಿದರೆ ಆಗಲೂ ಆತ್ಮಜ್ಞಾನವು ಉಂಟಾಗುವುದಿಲ್ಲ. ಕೊನೆಗೆ ನೀನು ಬುದ್ಧಿಯನ್ನು ವಿಷಯಗಳ ಹಿಡಿತದಿಂದ ತಪ್ಪಿಸಿದರೂ, ಬಹಳ ಕಾಲದ ವಾಸನೆಗಳಿಂದ ಉಂಟಾಗಿರುವ ಕಾಮವು ನಿನ್ನಲ್ಲಿ ಕಾರ್ಯ ಪ್ರವೃತ್ತಿಯನ್ನು ಉಂಟುಮಾಡಿ ಬುದ್ಧಿ ಮನಸ್ಸು ಮತ್ತು ಇಂದ್ರಿಯಗಳ ಮೇಲೆ ತನ್ನ ಸ್ವಭಾವವನ್ನು ಬೀರುತ್ತದೆ.

ಆದುದರಿಂದ ನೀನು ಜ್ಞಾನ ವಿರೋಧಿಗಳಲ್ಲಿ ಕಾಮವು ಅತಿ ಪ್ರಬಲವಾದುದೆಂದು ತಿಳಿ. ಇಂದ್ರಿಯ, ಮನಸ್ಸು ಮತ್ತು ಬುದ್ಧಿಗಳು ಅದರ ವಶವಾಗದಂತೆ ತಡೆಯಬೇಕು. ಆದ್ದರಿಂದ ಮೊದಲು ಬುದ್ಧಿಯಿಂದ ಇಂದ್ರಿಯಗಳನ್ನೂ, ಮನಸ್ಸನ್ನೂ, ಕರ್ಮಯೋಗದಲ್ಲಿ ನಿಲ್ಲಿಸಿ, ಕಾಮ ಕ್ರೋಧಗಳೆಂಬ ಪ್ರಬಲವಾದ ಕ್ರೂರ ಶತ್ರುಗಳನ್ನು ನಾಶಮಾಡಿ, ಅನಂತರ ಸ್ಥಿತ ಪ್ರಜ್ಞನಾಗಿ ಆತ್ಮ ಸಾಕ್ಷಾತ್ಕಾರವನ್ನು ಪಡೆಯಲು ಪ್ರಯತ್ನಿಸು.

ಒಟ್ಟಿನಲ್ಲಿ ಈ ಮೂರನೆಯ ಅಧ್ಯಾಯದ ಸಾರಾಂಶವೇನೆಂದರೆ- ಜ್ಞಾನಯೋಗ ನಿಷ್ಠೆಗಿಂತ ಕರ್ಮಯೋಗವೇ ಶ್ರೇಷ್ಠವಾದುದು. ಏತಕ್ಕೆಂದರೆ ಇದು ಮನುಷ್ಯನಿಗೆ ಸ್ವಭಾವಸಿದ್ಧವಾದ, ಸುಲಭಸಾಧ್ಯವಾದ, ಪ್ರಮಾದರಹಿತವಾದ ಅಭ್ಯಾಸ. ಜ್ಞಾನಿಯಾದವನೂ ಕೂಡ ಶರೀರ ಪೋಷಣಾದಿಗಳಿಗಾಗಿಯೂ, ಲೋಕಕಲ್ಯಾಣಕ್ಕಾಗಿಯೂ ಕರ್ಮವನ್ನು ಮಾಡಲೇಬೇಕು. ಜ್ಞಾನನಿಷ್ಠೆಗೆ ಪ್ರಬಲ ವೈರಿಗಳಾದ ಕಾಮಕ್ರೋಧಾದಿಗಳನ್ನು ಜಯಿಸಲು ಕರ್ಮಯೋಗಾಚರಣೆಯೇ ಸಾಧನ. ಅಂದರೆ ಇಂದ್ರಿಯ, ಮನಸ್ಸು ಮತ್ತು ಬುದ್ಧಿಗಳನ್ನು ಕರ್ಮಯೋಗಾನುಷ್ಠಾನ ದಲ್ಲಿ ನೆಲೆಗೊಳಿಸಿದರೆ ಕಾಮಕ್ರೋಧಾದಿಗಳನ್ನು ಜಯಿಸಲು ಸಾಧ್ಯವಾಗಬಲ್ಲದು. ಆದ್ದರಿಂದ ಸರ್ವರೂ ಕರ್ತವ್ಯಕರ್ಮಗಳನ್ನು ಕರ್ಮಯೋಗವಾಗಿ ಮಾಡಲೇಬೇಕು.

ಅಂದರೆ ಕರ್ಮಮಾಡುವವನು ತಾನಲ್ಲ, ಪ್ರಕೃತಿ ಸಂಬಂಧದಿಂದ ತನ್ನಲ್ಲಿ ಉಂಟಾಗಿರುವ ಸತ್ವರಜಸ್ತಮೋಗುಣಗಳ ಮೂಲಕ ಪರಮಾತ್ಮನು ತನ್ನಿಂದ ಕರ್ಮ ಮಾಡಿಸುತ್ತಾನೆ. ಆದ್ದರಿಂದ ಕರ್ಮವೂ, ಅದರ ಕರ್ತೃತ್ವವೂ, ಅದರ ಫಲವೂ ಎಲ್ಲವೂ ಪರಮಾತ್ಮನಿಗೆ ಸೇರಿದ್ದೆಂಬ ಪವಿತ್ರ ಭಾವನೆಯನ್ನು ಹೊಂದಿದವನಾಗಿ ತಾನು ಮಾಡುವ ಕರ್ಮಗಳೆಲ್ಲವನ್ನೂ ಭಗವತ್ಕೈಂಕರ್ಯ, ಭಗವದಾರಾಧನೆ ಎಂದು ಪ್ರೀತಿಯಿಂದಲೂ, ಭಕ್ತಿಯಿಂದಲೂ, ಅಹಂಕಾರ ಮಮಕಾರ ಫಲಸಂಗರಹಿತನಾಗಿ ಸಂತೋಷವಾಗಿ ಶಾಂತತೆಯಿಂದ ಮಾಡಬೇಕು ಎಂದು ಶ್ರೀಕೃಷ್ಣನು ಉಪದೇಶವನ್ನು ನೀಡಿದ್ದಾನೆ. ಕರ್ಮಯೋಗದಲ್ಲಿ ಜ್ಞಾನ, ಭಕ್ತಿಗಳೆರಡೂ ಮಿಳಿತವಾಗಿವೆ ಎಂಬುದು ಇಲ್ಲಿ ಸೂಚಿಸಲ್ಪಟ್ಟಿದೆ. ಮುಂದೆ ಗೀತೆಯ ಒಂಭತ್ತನೇ ಅಧ್ಯಾಯದಲ್ಲಿ ಇದನ್ನು ವ್ಯಕ್ತವಾಗಿಯೂ ವಿವರವಾಗಿಯೂ ತಿಳಿಸಿದೆ.

ಗೀತಾರ್ಥ ಸಂಗ್ರಹದಲ್ಲಿ ಶ್ರೀ ಯಾಮುನಾಚಾರ್ಯರು ಇದನ್ನು ಹೀಗೆ ತಿಳಿಸಿದ್ದಾರೆ.

**ಅಸಕ್ತ್ಯಾ ಲೋಕರಕ್ಷಾಯೈ ಗುಣೇಷ್ವಾರೋಪ್ಯಕರ್ತೃತಾಂ ।**
**ಸರ್ವೇಶ್ವರೇ ವಾನ್ಯಸ್ಯೋಕ್ತಾತೃತೀಯೇ ಕರ್ಮಕಾರ್ಯತಾ ॥**

ಅಂದರೆ ನನಗೆ ಶರೀರೇಂದ್ರಿಯಗಳನ್ನು ಅನುಗ್ರಹಿಸಿ ನನ್ನಲ್ಲಿ ಅಂತರಾತ್ಮನಾಗಿರುವ ಪರಮಾತ್ಮನೇ ಪ್ರಕೃತಿ ಸಂಬಂಧದಿಂದ ನನ್ನಲ್ಲಿ ಉಂಟಾಗಿರುವ ಸತ್ವರಜಸ್ತಮೋಗುಣಗಳ ಮೂಲಕ, ನನ್ನಿಂದ ಕರ್ಮ ಮಾಡಿಸುತ್ತಾನೆಂದು ತಿಳಿದು, 'ಈ ಕರ್ಮವು ನನ್ನದು' ಎಂಬ ಮಮಕಾರವನ್ನೂ 'ಈ ಕರ್ಮವನ್ನು ಮಾಡುತ್ತಾ ಇರುವವನು ನಾನು' ಎಂಬ ಅಹಂಕಾರವನ್ನೂ ಈ ಕರ್ಮದಿಂದ 'ನಾನು ಈ ಫಲವನ್ನು ಪಡೆಯಬೇಕು' ಎಂಬ ಫಲಾಪೇಕ್ಷೆಯನ್ನೂ ಬಿಟ್ಟು ಸರ್ವರೂ ಕರ್ಮಯೋಗವಾಗಿ ಕರ್ಮಗಳನ್ನು ಆಚರಿಸಲೇಬೇಕು. ಜ್ಞಾನ ಯೋಗಿಯೂ ಕೂಡ ಲೋಕದ ಜನರಿಗೆ ಆದರ್ಶ ನೀಡುವ ಸಲುವಾಗಿ, ಕರ್ಮಯೋಗವಾಗಿ, ಕರ್ಮಗಳನ್ನು ಆಚರಿಸುತ್ತಲೇ ಇರಬೇಕು ಎಂದು ಮೂರನೆಯ ಅಧ್ಯಾಯದಲ್ಲಿ ತಿಳಿಸಿದೆ ಎಂದು ತಾತ್ಪರ್ಯ.

*****

## ನಾಲ್ಕನೆಯ ಅಧ್ಯಾಯ

# ಜ್ಞಾನಯೋಗ

ವಿಷಯ ಸೂಚಿಕೆ :

I ಕರ್ಮಯೋಗದ ಪರಮ ಪ್ರಾಚೀನತೆ (ಶ್ಲೋಕಗಳು 1 ರಿಂದ 3)

II ಭಗವದವತಾರ ವಿಷಯ (ಶ್ಲೋಕಗಳು 4 ರಿಂದ 11)

III ಕರ್ಮಯೋಗದ ಜ್ಞಾನಾಕಾರತೆ (ಶ್ಲೋಕಗಳು 12 ರಿಂದ 24)
(ಕರ್ಮಾಂಶ ಜ್ಞಾನಾಂಶಗಳ ವಿವರಣೆ)

1. ಕರ್ಮಯೋಗವನ್ನು ಅನುಷ್ಠಿಸುವವರ ದುರ್ಲಭತೆ (ಶ್ಲೋಕ 12)
2. ಕರ್ಮಯೋಗಾಚರಣೆಯಿಂದ ಪಾಪಗಳ ನಿರಸನ (ಶ್ಲೋಕಗಳು 13 ರಿಂದ 15)
3. ಕರ್ಮ ಅಕರ್ಮಗಳ ಅರ್ಥ ವಿವರಣೆ (ಶ್ಲೋಕಗಳು 16, 17)
4. ಕರ್ಮದಲ್ಲಿರುವ ಜ್ಞಾನಾಂಶದ ನಿರೂಪಣೆ (ಶ್ಲೋಕಗಳು 18ರಿಂದ 24)

IV ಕರ್ಮದ ನಾನಾ ಪ್ರಕಾರಗಳು (ಶ್ಲೋಕಗಳು 25 ರಿಂದ 32)

V ಕರ್ಮದಲ್ಲಿರುವ ಜ್ಞಾನಾಂಶದ ಪ್ರಧಾನತೆ (ಶ್ಲೋಕಗಳು 33 ರಿಂದ 42)

ಮೂರನೆಯ ಅಧ್ಯಾಯದಲ್ಲಿ, ಪ್ರಕೃತಿ ಸಂಬಂಧ ಪಡೆದಿರುವ ಬದ್ಧ ಚೇತನನು ತನ್ನ ಜೀವನಯಾತ್ರೆಗೆ ಆವಶ್ಯಕವಾದ ಕರ್ಮವನ್ನು ಮಾಡಬೇಕು. ಮೋಕ್ಷದಲ್ಲಿ ಆಸೆಯಿರುವ ಮುಮುಕ್ಷುವೂ ಕೂಡ ಕೂಡಲೇ ಅಂದರೆ ಮೋಕ್ಷದಲ್ಲಿ ಆಸೆಯು ಹುಟ್ಟಿದ ತಕ್ಷಣದಲ್ಲೇ ಜ್ಞಾನಯೋಗಾಭ್ಯಾಸಕ್ಕೆ ಅಧಿಕಾರಿಯಾಗಲಾರನು, ಆದ್ದರಿಂದ ಅವನು ಕರ್ಮಯೋಗವನ್ನೇ ಅಭ್ಯಾಸ ಮಾಡಬೇಕು. ಆತ್ಮ ಸಾಕ್ಷಾತ್ಕಾರವನ್ನು ಉಂಟುಮಾಡುವ ಮುಮುಕ್ಷುವಿನ ಸ್ಥಿತಿಯನ್ನು ಹೊಂದಬೇಕೆಂದು ಅವನು ದೃಢವಾಗಿ ನಿಶ್ಚಯಿಸಿದರೂ, ಬುದ್ಧಿಯೋಗದಿಂದ ಅವನು ಫಲಾಪೇಕ್ಷರಹಿತ ನಾಗಿ ಅವನ ಕರ್ತವ್ಯ ಕರ್ಮಗಳನ್ನು ಮಾಡಲೇಬೇಕು. ಅವನು ಜ್ಞಾನಯೋಗ ನಿಷ್ಠೆಯನ್ನು ಪಡೆದ ಮೇಲೂ ತನ್ನ ಸಮಾಜದ ಮೇಲ್ಮೆಗೂ, ತನ್ನನ್ನು ಹಿಂಬಾಲಿಸು ವವರಿಗೆ ಮಾದರಿಯಾಗಿ ಇರುವುದಕ್ಕೋಸ್ಕರವೂ ಕರ್ಮವನ್ನು ಮಾಡಲೇಬೇಕು

ಎಂದು ಹೇಳಲ್ಪಟ್ಟಿದೆ. ನಾಲ್ಕನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಈ ಕರ್ಮಯೋಗವು ಬಹಳ ಪುರಾತನ ಕಾಲದಿಂದ ಬಳಕೆಯಲ್ಲಿರುವ ಅತ್ಯುತ್ತಮವಾದ ಮಾರ್ಗವೆಂದು ಹೇಳಿ ಕರ್ಮಯೋಗದ ಕರ್ತವ್ಯತ್ವವನ್ನು ದೃಢಪಡಿಸಿದ್ದಾನೆ. ಆಗ ಪ್ರಾಸಂಗಿಕವಾಗಿ ಉಂಟಾದ ಅರ್ಜುನನ ಸಂದೇಹವನ್ನು ನಿವೃತ್ತಿ ಮಾಡುವ ಸಲುವಾಗಿ ಭಗವದವತಾರ ವಿಚಾರವನ್ನು ಅಂದರೆ ಅದರ ಉದ್ದೇಶ, ಕಾಲ ಮತ್ತು ಫಲಗಳನ್ನು ತಿಳಿಸಿದ್ದಾನೆ. ಅನಂತರ ಕರ್ಮಯೋಗವೇ ಜ್ಞಾನಯೋಗಾಕಾರವನ್ನು ಹೊಂದಿದೆ ಎಂಬುದನ್ನೂ, ಕರ್ಮಯೋಗದ ಸ್ವರೂಪವನ್ನೂ, ಅದರಲ್ಲಿರುವ ಭೇದಗಳನ್ನೂ ಅದರಲ್ಲಿರುವ ಜ್ಞಾನಾಂಶದ ಪ್ರಧಾನತೆಯನ್ನೂ ವಿವರವಾಗಿ ತಿಳಿಸಿದ್ದಾನೆ

## I ಕರ್ಮಯೋಗದ ಪರಮ ಪ್ರಾಚೀನತೆ (ಶ್ಲೋಕಗಳು 1 ರಿಂದ 3)

ಎಲೈ ಅರ್ಜುನನೇ; ನೀನು ಈಗ ಒದಗಿ ಬಂದಿರುವ ಯುದ್ಧವನ್ನು ಮಾಡುವುದಿಲ್ಲವೆಂದು ನಿಶ್ಚಯಿಸಿ ಮನಸ್ಸಿನಲ್ಲಿ ಕಳವಳವನ್ನು ಹೊಂದಿರುತ್ತೀಯೆ ನಾನು ನಿನ್ನನ್ನು ಯುದ್ಧ ಮಾಡಲು ಪ್ರೇರೇಪಿಸುವುದಕೋಸ್ಕರ, ಈ ಕರ್ಮ ಯೋಗವನ್ನು ನಿನಗೆ ಹೊಸದಾಗಿ ಉಪದೇಶಿಸುತ್ತಿರುವೆನೆಂದು ತಿಳಿಯಬೇಡ. ಈ ಯೋಗವು ಬಹಳ ಪುರಾತನವಾದ ಐತಿಹ್ಯವನ್ನು ಹೊಂದಿದೆ. ಈ ಪ್ರಪಂಚದ ಜನರು ಆತ್ಮಸಾಕ್ಷಾತ್ಕಾರವನ್ನು ಪಡೆದು ಶ್ರೇಯಸ್ಸನ್ನು ಹೊಂದುವುದಕ್ಕಾಗಿ ನಾನು ಈ ಪವಿತ್ರವಾದ ಯೋಗವನ್ನು ಹಿಂದೆಯೇ ವಿವಸ್ವತನಿಗೆ ಉಪದೇಶಿಸಿದೆನು. ಅನಂತರ ವಿವಸ್ವತನು ಮನುವಿಗೂ, ಮನುವು ಇಕ್ಷ್ವಾಕುವಿಗೂ ಉಪದೇಶಿಸಿದರು. ಹೀಗೆ ಪರಂಪರೆಯಾಗಿ ಬಂದ ಇದನ್ನು ರಾಜಋಷಿಗಳು ಚೆನ್ನಾಗಿ ತಿಳಿದುಕೊಂಡರು. ಆದರೆ ಕಾಲಕ್ರಮೇಣ ಈ ಯೋಗವು ಈ ಲೋಕದಲ್ಲಿ ನಷ್ಟವಾಗಿ ಹೋಗಿದೆ.

ಈಗ ನೀನು ನನಗೆ ಶರಣಾಗತನಾಗಿ ನನ್ನ ಶಿಷ್ಯನಾಗಿರುವುದಲ್ಲದೆ ನನ್ನ ಸ್ನೇಹಿತನೂ ಆಗಿರುವೆ. ನೀನು ಕಳವಳದಿಂದ ಕೂಡಿದ ಮನಸುಳ್ಳವನಾಗಿ, ಈ ಯುದ್ಧ ಮಾಡುವುದು ಸರಿಯೇ, ತಪ್ಪೇ ಎಂಬ ವಿಷಯದಲ್ಲಿ ಮನಸ್ಸಿನಲ್ಲಿ ಭ್ರಾಂತಿಯನ್ನು ಹೊಂದಿ ದುಃಖಿಸುತ್ತಿದ್ದೀಯೆ. ಆದುದರಿಂದ ಈ ರಹಸ್ಯವಾದ ಯೋಗವನ್ನು ನಾನು ನಿನಗೆ ವಿಶದವಾಗಿಯೂ, ಸ್ಪಷ್ಟವಾಗಿಯೂ ತಿಳಿಸುತ್ತೇನೆ. ಈ ಸಂದಿಗ್ಧವಾದ ಸ್ಥಿತಿಯಲ್ಲಿ ನಿನಗೆ ನಿನ್ನ ಕರ್ತವ್ಯವು ಯಾವುದು ಎಂಬ ಜ್ಞಾನೋದಯವನ್ನೂ, ಶ್ರೇಯಸ್ಸನ್ನೂ ಉಂಟುಮಾಡುವ ಈ ಯೋಗವು ಬಹಳ ಶ್ರೇಷ್ಠವಾದ ಉತ್ತಮವಾದ ರಹಸ್ಯವಾಗಿದೆ. ನಾನು ಒಬ್ಬನೇ ನಿನಗೆ ಇದನ್ನು ಉಪದೇಶಿಸಲು ಶಕ್ತನು.

## II ಭಗವದವತಾರ ವಿಷಯ (ಶ್ಲೋಕಗಳು 4 ರಿಂದ 11)

ಅರ್ಜುನನಿಗೆ ಇದ್ದಕ್ಕಿದ್ದಂತೆ ಭಗವದವತಾರ ವಿಷಯದಲ್ಲಿ ಸ್ವಲ್ಪ ಅನುಮಾನ ವುಂಟಾಗಲು ಅವನು ಶ್ರೀಕೃಷ್ಣನನ್ನು ಕುರಿತು ಹೀಗೆ ಪ್ರಶ್ನಿಸುತ್ತಾನೆ. "ಎಲೈ ಶ್ರೀಕೃಷ್ಣನೇ! ಸೂರ್ಯನ ಜನ್ಮವು ಬಹಳ ಪುರಾತನ ಕಾಲದ್ದು. ಆದರೆ ನೀನು ನನ್ನಂತೆಯೇ ಇತ್ತೀಚೆಗೆ ಹುಟ್ಟಿರುವೆ. ಇಷ್ಟು ಕಾಲವ್ಯತ್ಯಾಸವಿರುವಾಗ ನೀನೇ ಮನ್ವಂತರದ ಆದಿಯಲ್ಲಿ ಸೂರ್ಯನಿಗೆ ಉಪದೇಶಿಸಿದೆ ಎಂದು ಹೇಳುವ ಈ ಅಸಂಭಾವಿತವಾದ ಮಾತನ್ನು ನಾನು ಹೇಗೆ ನಿಜವೆಂದು ನಂಬಲಿ? ಕಲ್ಯಾಣ ಗುಣಗಳಿಂದ ಕೂಡಿದ ಭಗವಂತನಾದ ನೀನು ಕರ್ಮಬಂಧನದಿಂದ ರಹಿತನಾಗಿದ್ದರೂ, ಕರ್ಮವಶರಾದ ಈ ದೇವ ಮನುಷ್ಯಾದಿಗಳಿಗೆ ಸಮಾನನಾಗಿ ಪದೇ ಪದೇ ಜನ್ಮವೆತ್ತುವುದು ಸತ್ಯವೇ? ಅದು ಸತ್ಯವಾದುದಾದರೆ ಈ ನಿನ್ನ ಅವತಾರದ ಪ್ರಕಾರವೇನು? ರಾಮಕೃಷ್ಣಾದಿ ಭಗವದವತಾರಗಳ ದೇಹದ ಪ್ರಕಾರವೂ ಮನುಷ್ಯರಂತೆಯೇ ಇದೆಯೇ? ಈ ಅವತಾರದ ಕಾರಣವು ಏನು? ಈ ಅವತಾರವು ಯಾವ ಕಾಲದಲ್ಲಿ, ಯಾವ ಉದ್ದೇಶಕ್ಕಾಗಿ, ಯಾವ ಕರ್ತವ್ಯ ಕರ್ಮಗಳ ಪಾಲನೆಗಾಗಿ ಉಂಟಾಗುತ್ತದೆ ಎಂಬ ಎಲ್ಲಾ ವಿಷಯವನ್ನೂ ನನಗೆ ತಿಳಿಸು ಎಂದನು". ಆಗ ಶ್ರೀಕೃಷ್ಣನು ಅರ್ಜುನನನ್ನು ಕುರಿತು "ಎಲೈ ಅರ್ಜುನನೇ! ನನಗೆ ಅನೇಕ ಜನ್ಮಗಳು ಎಂದರೆ ಅವತಾರಗಳು ಕಳೆದು ಹೋದುವು. ನಿನಗೂ ಹಾಗೆಯೇ ಅನೇಕ ಜನ್ಮಗಳು ಕಳೆದು ಹೋಗಿವೆ. ಆದರೆ ನನಗೆ ಪೂರ್ವ ಜನ್ಮದ ವಿಷಯವೆಲ್ಲವೂ ತಿಳಿದಿದೆ. ನಿನಗೆ ನಿನ್ನ ಪೂರ್ವ ಜನ್ಮದ ವೃತ್ತಾಂತವು ಅಂದರೆ ನೀನು ಅನೇಕ ಜನ್ಮವೆತ್ತಿರುವ ವಿಷಯವು ತಿಳಿದಿಲ್ಲ. ಇದೇ ನನಗೂ ನಿನಗೂ ಇರುವ ವ್ಯತ್ಯಾಸ. ನಿನ್ನ ಜನ್ಮವು ಹೇಗೆ ಸತ್ಯವೋ ಹಾಗೆಯೇ ಪರಮಾತ್ಮನಾದ ನನ್ನ ಜನ್ಮವೂ ಸತ್ಯವು. ಆದರೆ ನನಗೆ ನಿನ್ನ ಹಾಗೆ ಜನ್ಮವಿಲ್ಲ, ನಾಶವಿಲ್ಲ, ವಿಕಾರವಿಲ್ಲ, ನಾನು ಸರ್ವಭೂತಗಳಿಗೂ ನಿಯಾಮಕನು. ಅಲ್ಲದೆ ನನಗೆ ಕರ್ಮ ಬಂಧನವೂ ಇಲ್ಲ. ಪ್ರಪಂಚದ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೋಸ್ಕರ ನಾನು ವೇದಾಂತದಲ್ಲಿ ಪ್ರಸಿದ್ಧವಾಗಿರುವ, ನಿರತಿಶಯ ಪ್ರಕಾಶವಾಗಿರುವ ನನ್ನ ಸ್ವರೂಪದೊಡನೆ ನನ್ನ ಸ್ವ ಇಚ್ಛೆಯಿಂದ ಅವತರಿಸುವೆನು. ನಾನು ಮನುಷ್ಯ ಜನ್ಮದಲ್ಲಿ ಅವತರಿಸಿದ್ದರೂ ನನ್ನ ದಿವ್ಯ ಮಂಗಳಯುಕ್ತತ್ವವು ನಾಶವಾಗುವುದಿಲ್ಲ" ಎಂದು ಹೇಳಿದನು.

ಯಾವ ಯಾವ ಕಾಲದಲ್ಲಿ ಧರ್ಮವು ನಶಿಸಿ ಅಧರ್ಮವು ತಲೆ ಎತ್ತುವುದೋ ಮತ್ತು ಯಾವಾಗ ಜನರಲ್ಲಿ ಧರ್ಮಚ್ಯುತಿಯುಂಟಾಗುವುದೋ ಆಗ ಅವರ

ಏಳಿಗೆಗೋಸ್ಕರ ನಾನು ಸ್ವಇಚ್ಛೆಯಿಂದ ಅವತರಿಸುವೆನು. ನನ್ನ ಅವತಾರಕ್ಕೆ ಕಾಲ ನಿಯಮವೇನೂ ಇಲ್ಲವು. ಅಲ್ಲದೆ ಶಿಷ್ಟ ರಕ್ಷಣೆಗಾಗಿಯೂ, ದುಷ್ಟ ವಿನಾಶಕ್ಕಾಗಿಯೂ, ಧರ್ಮಸ್ಥಾಪನೆಗೋಸ್ಕರವೂ ಯುಗಯುಗಗಳಲ್ಲಿಯೂ ನಾನು ಅವತರಿಸಿ ಜನತೆಯ ನಲ್ಮೆಯನ್ನು ಹೆಚ್ಚಿಸುತ್ತೇನೆ. ನನ್ನ ಅವತಾರ ಕಾಲದ ನನ್ನ ಚೇಷ್ಟಿತಗಳ ನಿಜತತ್ವವನ್ನು ಯಾವನು ಶ್ರವಣ, ಮನನಧ್ಯಾನಾದಿಗಳ ಮೂಲಕ ಯಥಾರ್ಥವಾಗಿಯೂ, ಸಂಶಯ ರಹಿತವಾಗಿಯೂ, ತಿಳಿಯುವನೋ ಅವನು ತನ್ನ ಈಗಿನ ದೇಹವನ್ನು ತ್ಯಜಿಸಿದ ಮೇಲೆ ಪುನರ್ಜನ್ಮವಿಲ್ಲದೆ ನನ್ನನ್ನೇ ಹೊಂದುತ್ತಾನೆ. ಅನೇಕರು ನನ್ನ ಅವತಾರಗಳ ಜ್ಞಾನ ರೂಪವಾದ ತಪಸ್ಸಿನಿಂದ ಅಂದರೆ ನನ್ನ ಜನ್ಮ ಮತ್ತು ಕರ್ಮಗಳ ತತ್ವಜ್ಞಾನವೆಂಬ ತಪಸ್ಸಿನಿಂದ ಪರಿಶುದ್ಧರಾಗಿ, ರಾಗಭಯ ಕ್ರೋಧರಹಿತರಾಗಿ, ನನ್ನಲ್ಲೇ ನೆಟ್ಟ ಮನಸ್ಸುಳ್ಳವರಾಗಿ, ಜ್ಞಾನ ತಪಸ್ಸಿನಿಂದಲೂ, ಬ್ರಹ್ಮಜ್ಞಾನದಿಂದಲೂ ಪರಿಶುದ್ಧರಾಗಿ, ನನ್ನನ್ನೇ ಆಶ್ರಯಿಸಿ ನನ್ನ ಸ್ವಭಾವವನ್ನು ಹೊಂದುತ್ತಾರೆ. ಎಲೈ ಅರ್ಜುನನೇ! ಯಾರ್‍ಯಾರು ಯಾವ ರೀತಿಯಿಂದ ನನ್ನನ್ನು ಶರಣಾಗತಿ ಮಾಡಿ ಆಶ್ರಯಿಸುತ್ತಾರೆಯೋ ನಾನು ಅವರುಗಳನ್ನು ಆ ಪ್ರಕಾರವಾಗಿಯೇ ಅಂದರೆ ಅವರವರ ಇಚ್ಛೆಗೆ ಅನುಸಾರವಾಗಿ ಅವರವರಿಗೆ ದರ್ಶನಕೊಟ್ಟು ಅನುಗ್ರಹಿಸುವೆನು.

## III ಕರ್ಮಯೋಗದ ಜ್ಞಾನಾಕಾರತೆ (ಶ್ಲೋಕಗಳು 12 ರಿಂದ 24) (ಕರ್ಮಾಂಶ ಜ್ಞಾನಾಂಶಗಳ ವಿವರಣೆ)

### 1. ಕರ್ಮಯೋಗವನ್ನು ಅನುಷ್ಠಿಸುವವರ ದುರ್ಲಭತೆ (ಶ್ಲೋಕ 12)

ಲೌಕಿಕ ಸಕಾಮ ಪುರುಷರು ಅಂದರೆ ಕರ್ಮಕ್ಕೆ ಫಲವನ್ನು ಅಪೇಕ್ಷಿಸುವವರು, ತಮ್ಮ ಕರ್ಮಗಳಿಗೆ ಶೀಘ್ರವಾಗಿ ಫಲವು ಲಭಿಸಬೇಕೆಂಬ ಆಸೆಯುಳ್ಳವರಾಗಿ ಇಂದ್ರಾದಿ ದೇವತೆಗಳನ್ನು ಪೂಜಿಸುತ್ತಾರೆ ಮತ್ತು ಕರ್ಮಫಲದ ಸಿದ್ಧಿಯನ್ನು ಶೀಘ್ರವಾಗಿ ಹೊಂದುತ್ತಾರೆ. ಅವರು ಮೋಕ್ಷದಲ್ಲಿ ಆಸೆ ಹೊಂದಿ ಭಗವದಾರಾಧನರೂಪವಾದ ಕರ್ಮಯೋಗವನ್ನು ಆಚರಿಸುವುದಿಲ್ಲ. ಅಂದರೆ ಕರ್ಮಯೋಗನಿಷ್ಠರು ಬಹಳ ದುರ್ಲಭರು ಎಂದು ಅರ್ಥ.

### 2. ಕರ್ಮಯೋಗಾಚಾರಣೆಯಿಂದ ಪಾಪಗಳ ನಿರಸನ (ಶ್ಲೋಕಗಳು 13 ರಿಂದ 15)

ಮನುಷ್ಯರು ಅವರವರು ಮಾಡುವ ಕರ್ಮಗಳಿಗೆ ತಕ್ಕ ಫಲವನ್ನು ಹೊಂದಲು

ನಾನು ಅವರವರ ಗುಣಗಳನ್ನು ಅನುಸರಿಸಿ ನಾಲ್ಕು ವರ್ಣಗಳನ್ನು ಸೃಷ್ಟಿಸಿರುತ್ತೇನೆ. ನಾನೇ ಇವುಗಳಿಗೆ ಕರ್ತೃವಾಗಿದ್ದರೂ ನಾಶರಹಿತನಾದ ನನ್ನನ್ನು ಅಕರ್ತೃವನ್ನಾಗಿ ತಿಳಿ. ಈ ಕರ್ಮಗಳು ಯಾವುವೂ ನನಗೆ ಅಂಟುವುದಿಲ್ಲ, ಮತ್ತು ನನಗೆ ಕರ್ಮಫಲದಲ್ಲಿ ಆಸೆಯೂ ಇಲ್ಲ. (ಜಗತ್ತಿನ ವಿಚಿತ್ರವಾದ ಸೃಷ್ಟಿಗೆ ಪರಮಾತ್ಮನು ಕಾರಣನಾಗಿದ್ದರೂ, ಸೃಷ್ಟಿ ಕಾರ್ಯದಲ್ಲಿರುವ ದೇವ ಮನುಷ್ಯಾದಿ ವೈವಿಧ್ಯತೆಯು ಪರಮಾತ್ಮನಿಂದ ಉಂಟಾದುದಲ್ಲ, ಅದಕ್ಕೆ ಜೀವಿಗಳಲ್ಲಿರುವ ಪುಣ್ಯ ಪಾಪ ರೂಪವಾದ ಕರ್ಮಗಳ ವೈವಿಧ್ಯತೆ ಮತ್ತು ತಾರತಮ್ಯವೇ ಕಾರಣ.) ಆದ್ದರಿಂದ ಯಾರು ನನ್ನನ್ನು ಅಕರ್ತನನ್ನಾಗಿಯೂ, ಕರ್ಮಫಲದಲ್ಲಿ ಸಂಗರಹಿತನನ್ನಾಗಿಯೂ ತಿಳಿಯುತ್ತಾರೆಯೋ ಅಂದರೆ ಪರಮಾತ್ಮನಾದ ನಾನು ಪ್ರಪಂಚದ ಸೃಷ್ಟಿಗೆ ಮಾತ್ರ ಕಾರಣನೆಂದೂ ಸೃಷ್ಟಿ ವೈಚಿತ್ರ್ಯಕ್ಕೆ ಜೀವಾತ್ಮರೇ ಮುಖ್ಯ ಕಾರಣರೆಂದು ಅರಿತು ಕರ್ಮಮಾಡುತ್ತಾರೆಯೋ ಅವರು ಪ್ರಾಚೀನ ಕರ್ಮಗಳಿಂದ ಅಂದರೆ ಪೂರ್ವಕೃತ ಪಾಪಗಳಿಂದ ಬಿಡುಗಡೆಯನ್ನು ಹೊಂದುತ್ತಾರೆ. ಪೂರ್ವಿಕರಾದ ವಿವಸ್ವತನೂ, ಮನುವೂ ಮೋಕ್ಷಾರ್ಥಿಗಳಾಗಿ ಈ ತತ್ವಗಳನ್ನು ತಿಳಿದುಕೊಂಡೇ ಕರ್ಮಗಳನ್ನು ನಡೆಸಿರುವರು. ಆದ್ದರಿಂದ ಪೂರ್ವಿಕರು ಪೂರ್ವಕಾಲದಲ್ಲಿ ಆಚರಿಸಿದ ರೀತಿಯಲ್ಲಿ ಕರ್ಮಗಳನ್ನು ನೀನೂ ಆಚರಿಸು.

### 3. ಕರ್ಮ, ಅಕರ್ಮಗಳ ಅರ್ಥ ವಿವರಣೆ (ಶ್ಲೋಕಗಳು 16, 17)

ಮುಂದೆ ಕರ್ಮದ ಸ್ವರೂಪವು ಏನೆಂಬುದನ್ನೂ, ಕರ್ಮ, ಅಕರ್ಮ ಇವುಗಳ ಅರ್ಥವೇನೆಂಬುದನ್ನೂ ತಿಳಿಸುವೆನು. ಮುಮುಕ್ಷುವು ಅನುಸರಿಸಬೇಕಾದ ಕರ್ಮವು ಯಾವುದು, ಕರ್ಮವಲ್ಲದುದು ಅಂದರೆ ಜ್ಞಾನವು ಯಾವುದು, ಎಂಬ ವಿಷಯದಲ್ಲಿ ವಿದ್ವಾಂಸರುಗಳೂ ಕೂಡ ಮೋಹಗೊಂಡವರಾಗಿರುತ್ತಾರೆ. ಯಾವುದನ್ನು ತಿಳಿದುಕೊಂಡರೆ ಅಶುಭದಿಂದ ಅಂದರೆ ಈ ಹೇಯವಾದ ಪ್ರಕೃತಿ ಸಂಬಂಧದಿಂದ ಬಿಡುಗಡೆ ಹೊಂದುವೆಯೋ ಆ ಕರ್ಮಯೋಗವನ್ನು ನಾನು ನಿನಗೆ ತಿಳಿಸುತ್ತೇನೆ. ಕರ್ಮಮಾರ್ಗವನ್ನು ತಿಳಿಯುವುದು ಕಷ್ಟ. ಅದನ್ನು ತಿಳಿಯಬೇಕಾದರೆ ಮೊದಲು ಕರ್ಮ, ವಿಕರ್ಮ ಮತ್ತು ಅಕರ್ಮ ಎಂಬ ಮೂರು ವಿಷಯಗಳನ್ನು ತಿಳಿಯಬೇಕು. ಮೋಕ್ಷ ಸಾಧನ ಭೂತವಾದ ಕರ್ಮಾನುಷ್ಠಾನವೇ ಕರ್ಮವು, ವಿಕರ್ಮ ಎಂಬುದು ನಿತ್ಯ ನೈಮಿತ್ತಿಕ ಕಾಮ್ಯಕರ್ಮಗಳಿಗೆ ಸಾಧನವಾದ ದ್ರವ್ಯಾರ್ಜನೆ ಮುಂತಾದ ವಿಧವಿಧವಾದ ಕರ್ಮಗಳು. ಇದರ ವಿಷಯವು ಹಿಂದೆ ಎರಡನೆಯ ಅಧ್ಯಾಯದ

'ವ್ಯವಸಾಯಾತ್ಮಿಕಾ ಬುದ್ಧಿ' ಎಂಬ ನಾವಲತ್ತೊಂದನೇ ಶ್ಲೋಕದಲ್ಲಿ ತಿಳಿಸಿದೆ. ನಿತ್ಯ, ನೈಮಿತ್ತಿಕ, ಕಾಮ್ಯ ಕರ್ಮಗಳಿಗೆ ಸಾಧನಗಳಾದ ದ್ರವ್ಯಾರ್ಜನೆ ಮೊದಲಾದ ಕರ್ಮಗಳಲ್ಲಿರುವ ವೈವಿಧ್ಯತೆಯನ್ನು ಬಿಟ್ಟು ಮೋಕ್ಷ ಒಂದನ್ನೇ ಫಲವಾಗಿ ಹೊಂದಿ ಅನುಸಂಧಾನ ಮಾಡಬೇಕೆಂದು ಅಲ್ಲಿ ತಿಳಿಸಿದೆ. ಅಕರ್ಮ ಎಂದರೆ ಕೆಲಸವನ್ನು ಮಾಡದೆ ಸೋಮಾರಿಯಾಗಿರುವುದೆಂದು ಅರ್ಥವಲ್ಲ. ಅಕರ್ಮವು ಜ್ಞಾನವು ಅಂದರೆ ಬುದ್ಧಿಯ ವ್ಯಾಪಾರವು, ಕರ್ಮಮಾಡುವಾಗ ಶರೀರದ ಮೂಲಕ ಅನುಷ್ಠಿಸಲ್ಪಡುವ ಶಾರೀರಕ ಕೆಲಸ ಕಾರ್ಯಗಳೇ ಕರ್ಮವು. ಅದರಲ್ಲಿ ಅಂತರ್ಗತವಾದ ಜ್ಞಾನವೇ ಅಂದರೆ ಕರ್ಮ ಮಾಡುವಾಗ ಇರುವ ಮಾನಸಿಕ ಭಾವನೆಗಳೇ ಅಕರ್ಮವು. ಕರ್ಮ ವಿಕರ್ಮ ಮತ್ತು ಅಕರ್ಮಗಳಲ್ಲಿ ತಿಳಿದುಕೊಳ್ಳಬೇಕಾದ ಅಂಶಗಳು ಬಹಳವಾಗಿರುವುದರಿಂದ ಇವುಗಳಿಂದ ಕೂಡಿರುವ ಕರ್ಮಯೋಗದ ಸ್ವರೂಪವನ್ನು ತಿಳಿಯುವುದು ಬಹಳ ಕಷ್ಟವು.

### 4. ಕರ್ಮದಲ್ಲಿರುವ ಜ್ಞಾನಾಂಶದ ನಿರೂಪಣೆ (ಶ್ಲೋಕಗಳು 18ರಿಂದ 24)

ಮುಮುಕ್ಷುಗಳು ಆತ್ಮನ ಯಥಾರ್ಥ ಜ್ಞಾನದೊಂದಿಗೆ ಕರ್ಮ ಮಾಡುತ್ತಾರೆ. ಅವರು ಫಲಾಭಿಸಂಧಿರಹಿತವಾಗಿ, ಭಗವದಾರಾಧನರೂಪವಾಗಿ ಮಾಡುವ ಕೆಲಸವೇ· ಕರ್ಮವು ಮತ್ತು ಅವರು ಅನುಸಂಧಾನ ಮಾಡುವ ಆತ್ಮಯಾಥಾತ್ಮ್ಯ ಜ್ಞಾನವೇ ಅಕರ್ಮವು. ಬುದ್ಧಿವಂತನಾದವನು ತನ್ನ ಪ್ರತಿಯೊಂದು ಕಾರ್ಯದಲ್ಲಿಯೂ, ಕರ್ಮ, ಅಕರ್ಮ ಎರಡನ್ನೂ ಸೇರಿಸಿ ಕೆಲಸವನ್ನು ಮಾಡುತ್ತಾನೆ. ಅಂದರೆ ಯಾವನು ಕರ್ಮವನ್ನು ಆಚರಿಸುವಾಗ ಆತ್ಮಯಾಥಾತ್ಮ್ಯ ಜ್ಞಾನವನ್ನು ಅನುಸಂಧಾನ ಮಾಡುವನೋ, ಯಾವನು ಆತ್ಮಯಾಥಾತ್ಮ್ಯ ಜ್ಞಾನವನ್ನು ಅನುಸಂಧಾನ ಮಾಡುವಾಗ ಕರ್ಮವನ್ನು ಆಚರಿಸುವನೋ ಅವನೇ ಮನುಷ್ಯರಲ್ಲಿ ಬುದ್ಧಿವಂತನಾದವನು. ಅವನು ಮೋಕ್ಷಾರ್ಹನು ಮತ್ತು ಸಮಸ್ತ ಕರ್ಮಗಳನ್ನು ಮಾಡಿದವನೂ ಆಗುತ್ತಾನೆ. ಯಾವನ ಕರ್ಮಗಳು ಫಲಾಸಕ್ತಿಯಿಂದಲೂ ತಾನು ಕರ್ಮ ಮಾಡುತ್ತಿರುವೆನು ಎಂಬ ಸಂಕಲ್ಪದಿಂದಲೂ ಬಿಡಲ್ಪಟ್ಟಿರುವುದೋ ಆ ಜ್ಞಾನವೆಂಬ ಅಗ್ನಿಯಿಂದ ದಹಿಸಲ್ಪಟ್ಟ ಕರ್ಮಗಳನ್ನು ಹೊಂದಿರುವ ಅವನನ್ನು ಜ್ಞಾನಿಗಳು ಪಂಡಿತನೆಂದು ಹೇಳುತ್ತಾರೆ. ಆತ್ಮ ಸ್ವರೂಪ ಜ್ಞಾನಾನುಸಂಧಾನದೊಂದಿಗೆ ಕರ್ಮ ಮಾಡುವುದರಿಂದ ಆ ಜ್ಞಾನಾಗ್ನಿಯು ಅವನ ಪ್ರಾಚೀನ ಕರ್ಮಗಳನ್ನು ನಾಶ ಮಾಡುತ್ತದೆ. ಆದ್ದರಿಂದ ಕರ್ಮ ಫಲಗಳಲ್ಲಿ ಆಸಕ್ತಿಯನ್ನು ಬಿಟ್ಟು ನಿತ್ಯನಾದ ಆತ್ಮನಲ್ಲಿ

ತೃಪ್ತನಾಗಿ, ಅಸ್ಥಿರವಾದ ಪ್ರಕೃತಿಯಲ್ಲಿ ಆಶ್ರಯ ಬುದ್ಧಿ ಇಲ್ಲದವನಾಗಿರುವ ಜ್ಞಾನಿಯು ಕರ್ಮದಲ್ಲಿ ಪ್ರವೃತ್ತಿ ಉಳ್ಳವನಾಗಿದ್ದರೂ ಯಾವ ಕರ್ಮದಲ್ಲಿಯೂ ಕರ್ತೃತ್ವವನ್ನು ಉಳ್ಳವನಾಗಿರುವುದಿಲ್ಲ. "ನೈವ ಕಿಂಚಿತ್ ಕರೋತಿ ಸಃ" ಅಂದರೆ ಕೇವಲ ಶಾರೀರಕವಾಗಿ ಕರ್ಮವನ್ನು ಮಾಡುತ್ತಿದ್ದರೂ ಅವನು ಏನೊಂದು ಕರ್ಮವನ್ನೂ ಮಾಡಿದವನಾಗುವುದಿಲ್ಲ. ಅಂದರೆ ಕರ್ಮದ ಹೆಸರಿನಲ್ಲಿ ಅವನು ಜ್ಞಾನಾಭ್ಯಾಸವನ್ನೇ ಮಾಡುತ್ತಾನೆ ಎಂದು ಅರ್ಥ.

ನಿರಾಶಿಯಾಗಿರುವವನು ಅಂದರೆ ಕರ್ಮ ಫಲದಲ್ಲಿ ಆಸೆ ಇಲ್ಲದವನು, "ಯತಚಿತ್ತಾತ್ಮನು" ಅಂದರೆ ಜಯಿಸಲ್ಪಟ್ಟ ಮನಸ್ಸು ಮತ್ತು ಬುದ್ಧಿ ಉಳ್ಳವನು, ಸಮಸ್ತ ಐಹಿಕ ವಿಷಯೋಪಭೋಗಗಳನ್ನು ತ್ಯಜಿಸಿದವನು, ಕೇವಲ ಶಾರೀರಿಕ ಕರ್ಮಗಳನ್ನು ಅಂದರೆ ದೇಹಧಾರಣೆಗೆ ಬೇಕಾದ ಕರ್ಮಗಳನ್ನು ಮಾಡುತ್ತಿದ್ದರೂ ಅವನು ಪಾಪವನ್ನು ಗಳಿಸುವುದಿಲ್ಲ. ತನಗೆ ತಾನೇ ಲಭಿಸುವ ಲಾಭದಲ್ಲಿ ಸಂತುಷ್ಟನಾಗಿ, ದ್ವಂದಾತೀತನಾಗಿ ಅಂದರೆ ಶೀತೋಷ್ಣ ಸುಖದುಃಖಾದಿಗಳನ್ನು ಅತಿಕ್ರಮಿಸಿದವನಾಗಿ, ಮತ್ಸರ ರಹಿತನಾಗಿ, ಜಯಾಪಜಯಗಳಲ್ಲಿ ಸಮಭಾವವನ್ನು ಹೊಂದಿರುವವನು ಕರ್ಮಗಳನ್ನು ಮಾಡುತ್ತಿದ್ದರೂ ಅವನನ್ನು ಕರ್ಮಗಳು ಬಂಧಿಸುವುದಿಲ್ಲ. "ಕೃತ್ವಾಪಿನ ನಿಬಧ್ಯತೇ" ಎಂದರೆ ಅವನು ಕರ್ಮಗಳನ್ನು ಮಾಡುತ್ತಿದ್ದರೂ ಬಂಧಿಸಲ್ಪಡುವುದಿಲ್ಲ. ತಾನು, ತನ್ನದೆಂಬ ಅಭಿಮಾನವನ್ನೂ, ಸಂಸಾರದಲ್ಲಿ ಮೋಹವನ್ನೂ ಬಿಟ್ಟು ಮುಕ್ತನಾಗಿ, ಆತ್ಮಜ್ಞಾನದಲ್ಲಿ ನೆಲೆಗೊಂಡ ಮನಸ್ಸುಳ್ಳವನಾಗಿ, ಯಜ್ಞಕ್ಕಾಗಿ ಕರ್ಮಗಳನ್ನು ಮಾಡುವವನ ಅಂದರೆ ಭಗವತ್ಪ್ರೀತಿಗಾಗಿಯೇ ಕರ್ಮಗಳನ್ನು ಮಾಡುವವನ ಸಮಸ್ತವಾದ ಕರ್ಮಗಳೂ ಅಂದರೆ (ಪಾಪಗಳು) ಸಂಪೂರ್ಣವಾಗಿ ನಾಶ ಹೊಂದುತ್ತವೆ. "ಯಜ್ಞಾ ಯಾಚರತಃ ಕರ್ಮ"- ಎಂದರೆ ಹಿಂದೆಯೇ ತಿಳಿಸಿರುವಂತೆ ಭಗವದಾರಾಧನೆ ಎಂಬ ಭಾವನೆಯಿಂದ ಭಗವಂತನಿಗೆ ಅರ್ಪಣವಾಗಿ, ಸ್ವಾರ್ಥ ರಹಿತನಾಗಿ ಕರ್ತವ್ಯ ಕರ್ಮ ಮಾಡುವುದೇ ಯಜ್ಞವು. ಹೀಗೆ ಮಾಡುವುದರಿಂದ ಸರ್ವ ಕರ್ಮಗಳೂ ಭಗವಂತನ ಪೂಜೆಯಾಗಿ ಪರಿಣಮಿಸುತ್ತವೆ ಮತ್ತು ಸಾಧಕನು ಯಜ್ಞ ಮಾಡುವಾಗ ಆ ಕರ್ಮದಲ್ಲಿ ಬ್ರಹ್ಮವನ್ನೇ ನೋಡುತ್ತಾನೆ. ಅದು ಹೇಗೆ ಎಂಬುದನ್ನು ಈ ಅಧ್ಯಾಯದ ಇಪ್ಪತ್ತನಾಲ್ಕನೆಯ ಶ್ಲೋಕದಲ್ಲಿ ಸ್ಪಷ್ಟವಾಗಿ ತಿಳಿಸಿದೆ.

**ಬ್ರಹ್ಮಾರ್ಪಣಂ ಬ್ರಹ್ಮಹವಿಃಬ್ರಹ್ಮಾಗ್ನೌ ಬ್ರಹ್ಮಣಾಹುತಮ್ ।**
**ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮ ಸಮಾಧಿನಾ॥**

ಅಂದರೆ ಬ್ರಹ್ಮವೆಂಬ ಅರ್ಪಣದ ಮೂಲಕ, ಬ್ರಹ್ಮವೆಂಬ ಹವಿಸ್ಸು, ಬ್ರಹ್ಮವೆಂಬ ಅಗ್ನಿಯಲ್ಲಿ, ಬ್ರಹ್ಮವೆಂಬ ಕರ್ತೃವಿನ ಮೂಲಕ ಹೋಮ ಮಾಡಲ್ಪಡುತ್ತದೆ. ಹೀಗೆ ಸರ್ವವೂ ಬ್ರಹ್ಮಾತ್ಮಕವಾಗಿರುವುದರಿಂದ ಸಮಸ್ತ ಕರ್ಮವೂ ಬ್ರಹ್ಮಮಯವಾದುದು ಎಂಬ ಭಾವದಿಂದ ಯಜ್ಞಾದಿ ಕರ್ಮಗಳನ್ನು ಮಾಡತಕ್ಕವನು ಹೊಂದತಕ್ಕ ಫಲವೂ ಆ ಬ್ರಹ್ಮನೇ ಆಗಿದ್ದಾನೆ. ಹೀಗೆ ಕರ್ಮ, ಅದರ ಕರ್ತೃ, ಅದನ್ನು ಮಾಡುವ ಸಲಕರಣೆ ಎಲ್ಲವೂ ಬ್ರಹ್ಮಾತ್ಮಕವಾಗಿರುವುದರಿಂದ ಕರ್ಮವೆಲ್ಲವೂ ಬ್ರಹ್ಮಮಯವಾದುದೆಂದು ನಿಶ್ಚಯಿಸಿ ಅನುಸಂಧಾನ ಮಾಡುತ್ತಾ ಕರ್ಮಮಾಡಿ ಬ್ರಹ್ಮಕರ್ಮಸಮಾಧಿ ಹೊಂದಿರುವ ಪುರುಷನು ಬ್ರಹ್ಮನನ್ನೇ ಹೊಂದುತ್ತಾನೆ.

ಒಟ್ಟಿನಲ್ಲಿ ಕರ್ಮಯೋಗದಲ್ಲಿ ಎರಡು ವಿಧವಾದ ಜ್ಞಾನಾಕಾರತೆ ಉಂಟಾಗುತ್ತದೆ. ಒಂದು ಆತ್ಮಯಥಾರ್ಥಸ್ವರೂಪಜ್ಞಾನಾನುಸಂಧಾನದಿಂದ ಉಂಟಾಗುವ ಜ್ಞಾನಾಕಾರತೆ. ಮತ್ತೊಂದು ಸಮಸ್ತವೂ ಬ್ರಹ್ಮಾತ್ಮಕವಾದುದೆಂಬ ಜ್ಞಾನಾನುಸಂಧಾನದಿಂದ ಉಂಟಾಗುವ ಜ್ಞಾನಾಕಾರತೆ. ಕರ್ಮ, ಅದರ ಕರ್ತೃ, ಫಲ ಎಲ್ಲವೂ ಬ್ರಹ್ಮಾತ್ಮಕವಾಗಿ ಬ್ರಹ್ಮಮಯವಾದುದು ಎಂದು ತಿಳಿದು ಅದನ್ನು ಅನುಸಂಧಾನ ಮಾಡುತ್ತಾ, ಆತ್ಮಯಥಾರ್ಥಸ್ವರೂಪಜ್ಞಾನದೊಂದಿಗೂ, ಬ್ರಹ್ಮಕರ್ಮಸಮಾಧಿ ಜ್ಞಾನದೊಂದಿಗೂ, ಭಗವದಾರಾಧನರೂಪವಾಗಿ ಸಮಸ್ತ ಕರ್ಮಗಳನ್ನೂ ಮಾಡಿದರೆ ಅದರಲ್ಲಿ ಭಗವದರ್ಪಿತ ಭಾವಹುಟ್ಟಿ ಅವನು ಪರಬ್ರಹ್ಮನನ್ನು ಹೊಂದುತ್ತಾನೆ. ಆದ್ದರಿಂದ ಇಲ್ಲಿ ಶ್ರೀಕೃಷ್ಣನು ಭಗವದರ್ಪಣವಾಗಿ ಸಮಸ್ತ ಕರ್ಮಗಳನ್ನು ಮಾಡಬೇಕೆಂದು ಉಪದೇಶ ನೀಡಿದ್ದಾನೆ.

## IV ಕರ್ಮದ ನಾನಾ ಪ್ರಕಾರಗಳು (ಶ್ಲೋಕಗಳು 25 ರಿಂದ 32)

ಕೆಲವು ಕರ್ಮಯೋಗಿಗಳು ದೇವತಾರ್ಚನ ರೂಪವಾದ ಯಜ್ಞವನ್ನು ಮಾಡುತ್ತಾರೆ, ಕೆಲವರು ಹಿಂದೆ ಹೇಳಿದಂತೆ ಪರಬ್ರಹ್ಮಕಾರ್ಯರೂಪವಾದ ಅಗ್ನಿಯಲ್ಲಿ ಹವಿಸ್ಸನ್ನು ಹೋಮ ಮಾಡುತ್ತಾರೆ. ಬೇರೆ ಕೆಲವರು ಕಣ್ಣು ಕಿವಿ ಮೊದಲಾದ ಇಂದ್ರಿಯಗಳನ್ನು ನಿಗ್ರಹಮಾಡಿ ಸಂಯಮಯಜ್ಞವನ್ನು ಮಾಡುತ್ತಾರೆ. ಮತ್ತೆ ಕೆಲವರು ಶಬ್ದಾದಿ ವಿಷಯಗಳನ್ನೇ ಆ ಇಂದ್ರಿಯಾಗ್ನಿಯಲ್ಲಿ ಹೋಮಮಾಡಿ ದಗ್ಧ

ಮಾಡಿ ಬಿಡುವರು. ಅಂದರೆ ಇಂದ್ರಿಯಗಳಲ್ಲಿ ವಿಷಯಗಳ ಮೇಲಿನ ಆಸೆಯೇ ನಾಶವಾಗಿ ಭಸ್ಮವಾಗುವಂತೆ ಮಾಡುತ್ತಾರೆ. ಮತ್ತೆ ಕೆಲವರು ಜ್ಞಾನದ ಬೆಳಕಿನಿಂದ ಪ್ರಕಾಶ ಹೊಂದಿರುವ ಮನಸ್ಸನ್ನು ನಿಯಮಿಸುವ ಮನೋನಿಗ್ರಹಯೋಗವೆಂಬ ಅಗ್ನಿಯಲ್ಲಿ ಸಮಸ್ತವಾದ ಇಂದ್ರಿಯ ವ್ಯಾಪಾರಗಳನ್ನೂ, ಪ್ರಾಣ ವ್ಯಾಪಾರಗಳನ್ನೂ ಹೋಮ ಮಾಡುತ್ತಾರೆ. ಅಂದರೆ ಇಂದ್ರಿಯ ಮತ್ತು ಪ್ರಾಣ ಕರ್ಮಗಳ ಮೇಲಿನ ವ್ಯಾಮೋಹದಿಂದ ಮನಸ್ಸನ್ನು ಬಿಡಿಸಲು ಪ್ರಯತ್ನಿಸುತ್ತಾರೆ. ಕೆಲವರು ದ್ರವ್ಯಯಜ್ಞ ವನ್ನೂ, ಕೆಲವರು ತಪೋಯಜ್ಞವನ್ನೂ, ಕೆಲವರು ಯೋಗಯಜ್ಞವನ್ನೂ, ಕೆಲವರು ಸ್ವಾಧ್ಯಾಯ ಯಜ್ಞವನ್ನೂ ಮತ್ತು ಜ್ಞಾನಯಜ್ಞವನ್ನೂ ಮುಂತಾಗಿ ಅನೇಕ ವಿಧವಾದ ಯಜ್ಞಗಳನ್ನು ಕರ್ಮಯೋಗಿಗಳು ಜಿತೇಂದ್ರಿಯರಾಗಿ, ದೃಢಸಂಕಲ್ಪವುಳ್ಳವರಾಗಿ ಆಚರಿಸುತ್ತಾರೆ. ದ್ರವ್ಯವನ್ನು ನ್ಯಾಯವಾದ ಮಾರ್ಗದಲ್ಲಿ ಸಂಪಾದಿಸಿ ಸತ್ಕಾರ್ಯಕ್ಕೆ ವಿನಿಯೋಗಿಸುವುದು ದ್ರವ್ಯಯಜ್ಞವು, ಕೃಚ್ಛ್ರ, ಚಾಂದ್ರಾಯಣ, ಉಪವಾಸಾದಿ ವ್ರತಾಚರಣೆಯೇ ತಪೋಯಜ್ಞವು, ಪುಣ್ಯತೀರ್ಥಗಳ ಯಾತ್ರಾದಿಗಳೇ ಯೋಗ ಯಜ್ಞವು, ಸ್ವಾಧ್ಯಾಯ ಅಭ್ಯಾಸವೇ ಸ್ವಾಧ್ಯಾಯ ಯಜ್ಞವು ಮತ್ತು ಅವುಗಳ ಜ್ಞಾನಾನುಸಂಧಾನವೇ ಜ್ಞಾನಯಜ್ಞವು - ಈ ಐದು ವಿಧವಾದ ಕರ್ಮ ಯೋಗಗಳನ್ನು ಆಚರಿಸುತ್ತಾರೆ, ಹಠಯೋಗವನ್ನು ಅಭ್ಯಾಸಮಾಡುವ ಕೆಲವರು ನಿಯತವಾದ ಆಹಾರವನ್ನು ಸೇವಿಸಿ ಪೂರಕ ಎಂದರೆ ಪ್ರಾಣ ವಾಯುವನ್ನು ಉಚ್ಛ್ವಾಸದ ಮೂಲಕ ಒಳಗೆ ತೆಗೆದುಕೊಂಡು, ರೇಚಕ ಎಂದರೆ ಪ್ರಾಣ ವಾಯುವನ್ನು ನಿಶ್ವಾಸದ ಮೂಲಕ ಹೊರಗೆ ಕಳುಹಿಸಿ, ಕುಂಭಕ ಎಂದರೆ ಒಳಗೆ ತೆಗೆದುಕೊಂಡ ಪ್ರಾಣವಾಯುವನ್ನು ಸ್ವಲ್ಪಕಾಲ ತಡೆದು ಅಂದರೆ ಶ್ವಾಸ ನಿರೋಧಮಾಡಿ ಪ್ರಾಣಾಯಾಮ ಯಜ್ಞವನ್ನು ಮಾಡುತ್ತಾರೆ.

ಈ ರೀತಿಯಾಗಿ ಯಜ್ಞ ವಿಧಿಗಳನ್ನು ತಿಳಿದ ಕರ್ಮಯೋಗಿಗಳು ಯಜ್ಞಗಳ ಮಹಿಮೆಯನ್ನು ಅರಿತವರಾಗಿ ಅನೇಕ ವಿಧವಾದ ಯಜ್ಞಗಳನ್ನು ಆಚರಿಸಿ ಅವುಗಳಲ್ಲಿ ನಿಷ್ಠೆ ಹೊಂದಿದವರಾಗಿ ತಮ್ಮ ಪಾಪಗಳನ್ನೆಲ್ಲಾ ಹೋಗಲಾಡಿಸಿಕೊಂಡು ಶಾಶ್ವತವಾದ ಪರಬ್ರಹ್ಮಪ್ರಾಪ್ತಿಯನ್ನು ಹೊಂದುತ್ತಾರೆ. ಆದರೆ ಯಜ್ಞರೂಪವಾದ ಕರ್ಮವನ್ನು ಆಚರಿಸದೇ ಇರುವವನಿಗೆ ಇಹಲೋಕದಲ್ಲಿ ಯಾವ ಪುರುಷಾರ್ಥವೂ ಲಭಿಸುವುದಿಲ್ಲವು, ಅಂದ ಮೇಲೆ ಈ ಪ್ರಾಕೃತ ಪುರುಷಾರ್ಥಗಳೇ ಅವನಿಗೆ ಸಿದ್ಧಿಸದ ಮೇಲೆ ಅದಕ್ಕಿಂತ ಬೇರೆಯಾದ ಮೋಕ್ಷ ಪುರುಷಾರ್ಥವು ಅವನಿಗೆ ಹೇಗೆ ತಾನೆ

ಲಭಿಸೀತು? ಮನುಷ್ಯನು ಇಹಲೋಕದ ಸುಖ ಸಂತೋಷಗಳನ್ನು ಅನುಭವಿಸ ಬೇಕಾದರೇನೇ ತನ್ನ ಸ್ವಾರ್ಥತೆಯನ್ನು ತ್ಯಜಿಸಬೇಕಾಗಿರುವಾಗ ಪರಲೋಕದ ಆನಂದವನ್ನು ಅವನು ಅನುಭವಿಸಬೇಕಾದರೆ ಅವನು ಅನೇಕ ಯಜ್ಞಕರ್ಮಗಳನ್ನೇ ಮಾಡಬೇಕಾಗುತ್ತದೆ. ಈ ರೀತಿಯಾಗಿ ಆತ್ಮಸಾಕ್ಷಾತ್ಕಾರವನ್ನು ಪಡೆಯಲು ಮಾಡ ಬೇಕಾದ ಅನೇಕ ವಿಧವಾದ ಯಜ್ಞಗಳು ವೇದಗಳಲ್ಲಿ ವಿಸ್ತರಿಸಿ ಹೇಳಲ್ಪಟ್ಟಿವೆ. ಅವುಗಳೆಲ್ಲವೂ ಕರ್ಮಜನ್ಯವಾದುವುಗಳೆಂದು ತಿಳಿ. ಹಾಗೆ ತಿಳಿದು ಪ್ರತಿದಿನವೂ ನೀನು ಮಾಡುವ ನಿತ್ಯ ನೈಮಿತ್ತಿಕ ಕರ್ಮಗಳನ್ನು ಯಜ್ಞ ರೂಪವಾಗಿ ಅನುಷ್ಠಿಸಿದರೆ ನೀನು ಮುಕ್ತನಾಗಿ ಪರಮಾತ್ಮನನ್ನು ಹೊಂದುತ್ತೀಯೆ.

## V ಕರ್ಮದಲ್ಲಿರುವ ಜ್ಞಾನಾಂಶದ ಪ್ರಧಾನತೆ (ಶ್ಲೋಕಗಳು 33 ರಿಂದ 42)

ಎಲ್ಲಾ ಕರ್ಮಗಳೂ ಮೋಕ್ಷಪ್ರಾಪ್ತಿಯನ್ನು ಉಂಟುಮಾಡಿದರೂ ಐಶ್ವರ್ಯವು ಮುಖ್ಯವಾಗಿರುವ ದ್ರವ್ಯ ಮೂಲವಾದ ಯಜ್ಞಕ್ಕಿಂತಲೂ, ಭಗವಂತನ ಜ್ಞಾನವನ್ನು ತಿಳಿಸುವ ಜ್ಞಾನಮಯವಾದ ಜ್ಞಾನಯಜ್ಞವು ಶ್ರೇಷ್ಠವಾದುದು. ಸಮಸ್ತ ಕರ್ಮಗಳೂ ಸಂಪೂರ್ಣವಾದ ಜ್ಞಾನದಲ್ಲಿ ಅಂದರೆ ಆತ್ಮಸಾಕ್ಷಾತ್ಕಾರ ಸ್ವರೂಪ ಜ್ಞಾನದಲ್ಲಿ ಸಮಾಪ್ತಿ ಹೊಂದುತ್ತವೆ. ಕರ್ಮದ ಅವಶ್ಯಕತೆಯನ್ನೂ ಜ್ಞಾನದ ಮಹತ್ವವನ್ನೂ ತಿಳಿದುಕೊಂಡ ಮೇಲೆ ನೀನು ತತ್ವದರ್ಶಿಗಳ ಅಂದರೆ ಆತ್ಮಸ್ವರೂಪವನ್ನು ಸಾಕ್ಷಾತ್ತರಿಸಿರುವ ಜ್ಞಾನಿಗಳ ಹತ್ತಿರ ಈ ಜ್ಞಾನವನ್ನು ಅವರಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡುತ್ತಲೂ, ಆಗಾಗ ಪ್ರಶ್ನೆಗಳನ್ನು ಕೇಳುತ್ತಲೂ, ಅವರಿಗೆ ಶುಶ್ರೂಷೆ ಮಾಡುತ್ತಲೂ, ಅವರನ್ನು ವಿನಯದಿಂದ ಪ್ರಾರ್ಥಿಸುತ್ತಲೂ ಅವರಿಂದ ಪಡೆಯಬೇಕು. ಹೀಗೆ ಜ್ಞಾನಿಗಳನ್ನು ಆಶ್ರಯಿಸಿ ಪ್ರಣಾಮಪರಿಪ್ರಶ್ನೆ ಸೇವಾದಿಗಳ ಮೂಲಕ ಅವರಿಂದ ಈ ಜ್ಞಾನವನ್ನು ಪಡೆದ ಮೇಲೆ ನಿನಗಿರುವ ಪ್ರಾಕೃತ ದೇಹವು ನಾಶವಾಗುತ್ತದೆ ಮತ್ತು ಈ ಆತ್ಮಯಥಾರ್ಥಜ್ಞಾನ ಲಾಭದಿಂದ ಸಮಸ್ತ ಚೇತನ ವರ್ಗವನ್ನೆಲ್ಲಾ ನಿನ್ನ ಆತ್ಮನಿಗೆ ಸಮನಾಗಿ ನೋಡುತ್ತೀಯೆ, ಅಂದರೆ ಪ್ರಕೃತಿ ಸಂಬಂಧದಿಂದ ಬಿಡಲ್ಪಟ್ಟ ಜೀವಾತ್ಮರೆಲ್ಲರೂ ಜ್ಞಾನಸ್ವರೂಪ ರಾಗಿಯೂ, ಜ್ಞಾನ ಗುಣಕರಾಗಿಯೂ ಇರುವುದರಿಂದ ಪರಸ್ಪರ ಸಮರು ಎಂದೂ, ಪರಮಾತ್ಮನಾದ ನಾನೂ ಜ್ಞಾನಸ್ವರೂಪನೂ, ಜ್ಞಾನಗುಣಕನೂ ಆಗಿರುವುದರಿಂದ ಅವರು ನನ್ನ ಸ್ವರೂಪದೊಂದಿಗೂ ಸಾಮ್ಯತೆ ಪಡೆದಿದ್ದಾರೆ ಎಂದೂ ತಿಳಿಯುತ್ತೀಯೆ ಎಂದು ಅಭಿಪ್ರಾಯ.

ಒಂದು ವೇಳೆ ನೀನು ಎಲ್ಲಾ ಪಾಪಿಗಳಿಗಿಂತಲೂ ಹೆಚ್ಚು ಪಾಪವನ್ನು ಮಾಡಿದವನಾಗಿ ಪಾಪವೆಂಬ ಸಾಗರದಲ್ಲಿ ಮುಳುಗಿದ್ದರೂ ಜ್ಞಾನವೆಂಬ ನಾವೆಯ ಮೂಲಕ ಈ ಸಂಸಾರವೆಂಬ ಸಾಗರವನ್ನು ದಾಟುತ್ತೀಯೆ. ಯಾವ ರೀತಿಯಲ್ಲಿ ಚೆನ್ನಾಗಿ ಪ್ರಜ್ವಲಿಸುತ್ತಿರುವ ಬೆಂಕಿಯು ಒಂದು ಕಾಡನ್ನೇ ಭಸ್ಮೀಭೂತ ಮಾಡಬಲ್ಲದೋ, ಅದೇ ರೀತಿ ಈ ಆತ್ಮವಿಷಯವಾದ ಜ್ಞಾನಾಗ್ನಿಯೂ ಜೀವಾತ್ಮರ ಅನಾದಿಕಾಲ ಪ್ರವೃತ್ತವಾದ ಸಮಸ್ತ ಕರ್ಮಗಳ ಫಲವಾದ ಅನೇಕ ಪಾಪರಾಶಿಗಳನ್ನು ಭಸ್ಮಮಾಡಿ ನಾಶಗೊಳಿಸುತ್ತದೆ. ಜಗತ್ತಿನಲ್ಲಿ ನಮ್ಮನ್ನು ಎಲ್ಲಾ ಪಾಪಗಳಿಂದಲೂ ಶುದ್ಧ ಮಾಡುವ ಪವಿತ್ರವಾದ ವಸ್ತುವಾದ ಜ್ಞಾನಕ್ಕೆ ಸಮನಾಗಿ ಮತ್ತಾವುದೂ ಇಲ್ಲ. ಯೋಗಸಂಸಿದ್ಧನು ಅಂದರೆ ಆತ್ಮಜ್ಞಾನದೊಂದಿಗೆ ಕೂಡಿದ ಕರ್ಮಯೋಗದಲ್ಲಿ ಸಿದ್ಧಿಯನ್ನು ಹೊಂದಿದವನು ತನಗೆ ತಾನೇ ಆತ್ಮ ಸ್ವರೂಪಯಥಾರ್ಥ ಜ್ಞಾನವನ್ನು ಹೊಂದುತ್ತಾನೆ. ಜ್ಞಾನ ಪಡೆಯುವುದರಲ್ಲಿಯೇ ಶ್ರದ್ಧೆಯುಳ್ಳವನಾಗಿ, ಅದರಲ್ಲಿಯೇ ಮನಸ್ಸು ಉಳ್ಳವನಾಗಿ, ಇಂದ್ರಿಯಗಳನ್ನು ಅಡಗಿಸಿ ಇರುವವನು ಅಂತಹ ಜ್ಞಾನವನ್ನು ಪಡೆಯುತ್ತಾನೆ. ಆ ಜ್ಞಾನವನ್ನು ಹೊಂದಿದ ಮೇಲೆ ಶೀಘ್ರದಲ್ಲಿಯೇ ಪರಮ ಶಾಂತಿಯನ್ನು ಅಂದರೆ ಮೋಕ್ಷವನ್ನು ಪಡೆಯುತ್ತಾನೆ. ಜ್ಞಾನರಹಿತನೂ, ಶ್ರದ್ಧಾ ರಹಿತನೂ, ಸಂಶಯದಿಂದ ಕೂಡಿರುವವನೂ ಆದ ಮೂಢನು ನಾಶವನ್ನು ಹೊಂದುತ್ತಾನೆ. ಸಂಶಯಾತ್ಮನಿಗೆ ಇಹಲೋಕವೂ ಇಲ್ಲ, ಪರಲೋಕವೂ ಇಲ್ಲ ಮತ್ತು ಸುಖವೂ ಇಲ್ಲ.

ಕರ್ಮದಲ್ಲಿ ಕರ್ತೃತ್ವ- ಮಮತಾ ತ್ಯಾಗ ಮಾಡಿರುವ ಕರ್ಮಯೋಗಿಯ ಸಂದೇಹಗಳು ಎಲ್ಲವೂ ಜ್ಞಾನದಿಂದ ನಾಶವಾಗಿ ಅವನು ದೃಢವಾದ ಮನಸ್ಸುಳ್ಳವನಾಗುತ್ತಾನೆ. ಅವನು ಕರ್ಮಬಂಧಕ್ಕೆ ಸಿಕ್ಕಿಕೊಳ್ಳುವುದೂ ಇಲ್ಲ. ಅವನನ್ನು ಅನಂತ ಕರ್ಮಗಳು ಬಂಧಿಸುವುದೂ ಇಲ್ಲ. ಆದ್ದರಿಂದ ಎಲೈ ಅರ್ಜುನನೇ! ನಿನ್ನ ಹೃದಯದಲ್ಲಿ ಅಜ್ಞಾನದಿಂದ ಉಂಟಾಗಿರುವ ಆತ್ಮ ವಿಷಯವಾದ ಈ ಸಂದೇಹವನ್ನು ನಾನು ಇದುವರೆಗೂ ಉಪದೇಶಿಸಿರುವ ಆತ್ಮಯಥಾತ್ಮಜ್ಞಾನವೆಂಬ ಕತ್ತಿಯಿಂದ ಛೇದಿಸಿ ನನ್ನಿಂದ ಉಪದೇಶಿಸಲ್ಪಟ್ಟಿರುವ ಈ ಜ್ಞಾನ ಸಾಧನವಾದ ಕರ್ಮಯೋಗವನ್ನು ಅನುಷ್ಠಿಸಲು ಸಿದ್ಧನಾಗು, ಎದ್ದೇಳು", ಎಂದು ಶ್ರೀ ಕೃಷ್ಣನು ಅರ್ಜುನನಿಗೆ ಸ್ವಧರ್ಮವಾದ ಯುದ್ಧವನ್ನು ಕರ್ಮಯೋಗವಾಗಿ ಆಚರಿಸಲು ಎದ್ದು ಸಿದ್ಧನಾಗು ಎಂದು ಹೇಳುತ್ತಾನೆ. ಅವನನ್ನು ಯುದ್ಧಮಾಡಲು ಪ್ರೇರೇಪಿಸುತ್ತಾನೆ.

ಒಟ್ಟಿನಲ್ಲಿ ಕರ್ಮದಲ್ಲಿರುವ ಕರ್ಮ ಮಾಡುವ ಕ್ರಿಯೆಯಿಂದ ಕೂಡಿರುವ ಕರ್ಮಾಂಶಕ್ಕಿಂತಲೂ, ಅದರಲ್ಲಿ ಅಂತರ್ಗತವಾಗಿರುವ ಆತ್ಮ ಪರಮಾತ್ಮ ಜ್ಞಾನಾನುಸಂಧಾನದಿಂದ ಕೂಡಿರುವ ಜ್ಞಾನಾಂಶದ ಪ್ರಧಾನತೆಯನ್ನು ತಿಳಿಸಿ, ಆತ್ಮಸ್ವರೂಪ ಯಥಾರ್ಥಜ್ಞಾನದ ಲಕ್ಷಣವನ್ನೂ, ಅದನ್ನು ಗುರು ಮುಖೇನ ಪಡೆಯುವ ಮಾರ್ಗವನ್ನೂ ತಿಳಿಸಿ, ಆತ್ಮಸ್ವರೂಪ ಜ್ಞಾನಾನುಸಂಧಾನದಿಂದ ಸಮಸ್ತ ಪಾಪಗಳೂ ನಾಶವಾಗಿ ಆತ್ಮಸ್ವರೂಪ ಸಾಕ್ಷಾತ್ಕಾರವುಂಟಾಗಿ ಪರಮಶಾಂತಿ ಲಭಿಸುತ್ತದೆ ಎಂದು ಜ್ಞಾನದ ಮಹಾತ್ಮೆಯನ್ನು ವಿವರಿಸಿ ತಿಳಿಸಿರುವುದರಿಂದ ಈ ಅಧ್ಯಾಯವು ಜ್ಞಾನಯೋಗವೆಂದು ಕರೆಯಲ್ಪಟ್ಟಿದೆ.

**ಪ್ರಸಂಗಾತ್ ಸ್ವಸ್ವಭಾವೋಕ್ತಿಃ ಕರ್ಮಣೋಽ ಕರ್ಮತಾಸ್ಯಚ**
**ಭೇದಾಜ್ಞಾನಸ್ಯ ಮಾಹಾತ್ಮ್ಯಂ ಚತುರ್ಥಾಧ್ಯಾಯ ಉಚ್ಯತೇ ॥ 8॥**

ಎಂಬ ಗೀತಾರ್ಥ ಸಂಗ್ರಹದ ಎಂಟನೆಯ ಶ್ಲೋಕದಲ್ಲಿ ಶ್ರೀಯಾಮುನಾಚಾರ್ಯರು ನಾಲ್ಕನೆಯ ಅಧ್ಯಾಯದ ಸಾರಾಂಶವನ್ನು ತಿಳಿಸಿದ್ದಾರೆ. ಪ್ರಾಸಂಗಿಕವಾಗಿ ಭಗವದವತಾರ ವಿಚಾರವೂ, ಕರ್ಮದಲ್ಲಿ ಅಂತರ್ಗತವಾಗಿ ಜ್ಞಾನಾಂಶವು ಅಡಗಿರುವಿಕೆಯೂ, ಕರ್ಮಯೋಗದ ಭೇದಗಳೂ, ಕರ್ಮಯೋಗದಲ್ಲಿ ಜ್ಞಾನ ಭಾಗದ ಪ್ರಧಾನತೆಯೂ ನಾಲ್ಕನೆಯ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿದೆ.

*****

# ಐದನೆಯ ಅಧ್ಯಾಯ

# ಕರ್ಮ ಸನ್ಯಾಸಯೋಗ

ವಿಷಯ ಸೂಚಿಕೆ :

I ಕರ್ಮಯೋಗ ಮತ್ತು ಜ್ಞಾನಯೋಗ ಇವುಗಳಲ್ಲಿ ಕರ್ಮಯೋಗದ ಶ್ರೇಷ್ಠತೆ (ಶ್ಲೋಕಗಳು 1 ರಿಂದ 7)

II ಕರ್ಮಯೋಗಾನುಷ್ಠಾನಕ್ಕೆ ಅವಶ್ಯಕವಾದ ಜ್ಞಾನಾನುಸಂಧಾನ ಪ್ರಕಾರಗಳು (ಶ್ಲೋಕಗಳು 8 ರಿಂದ 15)

1. ಅಕರ್ತೃತ್ವಾನುಸಂಧಾನ (ಶ್ಲೋಕ 8 ರಿಂದ 10)
2. ಫಲಾಸಕ್ತಿರಹಿತತ್ವ (ಶ್ಲೋಕಗಳು 11 ಮತ್ತು 12)
3. ಆತ್ಮನಾದ ತಾನು ವಶೀ, ಪ್ರಭು ಮತ್ತು ವಿಭು ಎಂಬ ಭಾವನೆ ಹೊಂದಿರಬೇಕು. (ಶ್ಲೋಕಗಳು 13 ರಿಂದ 15)
4. ಕರ್ಮಯೋಗದಿಂದ ಉಂಟಾಗುವ ಆತ್ಮಜ್ಞಾನ ವಿಚಾರ (ಶ್ಲೋಕಗಳು 16ರಿಂದ 28)
5. ಕರ್ಮಗಳನ್ನು ಭಗವದಾರಾಧನೆ ಎಂದು ಭಕ್ತಿಯಿಂದ ಮಾಡುವುದರಿಂದ ಲಭಿಸುವ ಶಾಂತಿ ಮತ್ತು ಆನಂದ (ಶ್ಲೋಕ 29)

ಕರ್ಮಯೋಗವು ಪ್ರಮಾದ ರಹಿತವಾಗಿ, ಸುಖಕರವಾಗಿ, ಇತರ ಸಾಧನೆಗಳ ಅಪೇಕ್ಷೆ ಇಲ್ಲದೆ ನಿರಪೇಕ್ಷ ಸಾಧನವಾಗಿ ಇರುವುದರಿಂದಲೂ ಮತ್ತು ಇದರಲ್ಲಿ ಆತ್ಮ ಜ್ಞಾನವು ಅಂತರ್ಗತವಾಗಿ ಇರುವುದರಿಂದಲೂ ಜ್ಞಾನಯೋಗಾಧಿಕಾರಿಗೂ ಕೂಡ ಕರ್ಮದ ಆಚರಣೆಯು ಶ್ರೇಷ್ಠವಾದುದೆಂದು ಮೂರನೆಯ ಅಧ್ಯಾಯದಲ್ಲಿಯೇ ತಿಳಿಸಲ್ಪಟ್ಟಿದೆ. ಅನಂತರ ನಾಲ್ಕನೆಯ ಅಧ್ಯಾಯದಲ್ಲಿ ಕರ್ಮಯೋಗದ ಪರಮ ಪ್ರಾಚೀನತೆಯೂ, ಪ್ರಾಸಂಗಿಕವಾಗಿ ಭಗವದವತಾರ ವಿಷಯವೂ, ಕರ್ಮಯೋಗದ ಜ್ಞಾನಾಕಾರತೆಯೂ, ಪ್ರಭೇದಗಳೂ, ಮತ್ತು ಕರ್ಮಯೋಗದಲ್ಲಿ ಜ್ಞಾನಾಂಶದ ಪ್ರಧಾನತೆಯೂ, ಮಹಾತ್ಮೆಯೂ ಹೇಳಲ್ಪಟ್ಟು ಈಗ ಐದನೆಯ ಅಧ್ಯಾಯದಲ್ಲಿ ಈ ವಿಷಯಗಳು ಮತ್ತೆ ವಿವರಿಸಲ್ಪಟ್ಟಿವೆ. ಆತ್ಮ ಪ್ರಾಪ್ತಿಯನ್ನು ಪಡೆಯಲು ಜ್ಞಾನನಿಷ್ಠೆಗಿಂತ

ಕರ್ಮಯೋಗವು ಸುಲಭವೂ, ಸುಖಕರವೂ, ಶೀಘ್ರಫಲಪ್ರದವೂ ಆಗಿದೆ ಎಂಬುದೂ, ಕರ್ಮಯೋಗದಲ್ಲಿ ಅಡಗಿರುವ ಅಕರ್ತೃತ್ವಾನುಸಂಧಾನಾದಿ ಜ್ಞಾನಾನುಸಂಧಾನ ಪ್ರಕಾರಗಳೂ, ಇವೆಲ್ಲಕ್ಕೂ ಮೂಲ ಕಾರಣವಾದ ಜ್ಞಾನವೂ ಸ್ಪಷ್ಟೀಕರಿಸಲ್ಪಟ್ಟಿವೆ ಮತ್ತು ಕರ್ಮ ಯೋಗಿಯು ಭಗವದಾರಾಧನ ರೂಪವಾಗಿ ಕರ್ಮ ಮಾಡುವುದರಿಂದ ಕರ್ಮ ಮಾಡುವ ಕಾಲದಲ್ಲೇ ನಿರತಿಶಯಸುಖರೂಪವಾದ ಮನಃಶಾಂತಿಯನ್ನು ಪಡೆಯುತ್ತಾನೆ ಎಂದೂ ಹೇಳಿದೆ.

## I ಕರ್ಮಯೋಗ ಮತ್ತು ಜ್ಞಾನಯೋಗ ಇವುಗಳಲ್ಲಿ ಕರ್ಮಯೋಗದ ಶ್ರೇಷ್ಠತೆ (ಶ್ಲೋಕಗಳು 1 ರಿಂದ 7)

ಅರ್ಜುನನಿಗೆ ಕೃಷ್ಣನ ಉಪದೇಶದಿಂದ ಕರ್ಮ ಮತ್ತು ಜ್ಞಾನಗಳ ಲಕ್ಷಣಗಳ ಅರಿವು ಉಂಟಾಗಿದ್ದರೂ ಅವನ ಮನಸ್ಸಿನಲ್ಲಿದ್ದ ಸಂದೇಹವು ಇನ್ನೂ ಪರಿಹಾರವಾಗಲಿಲ್ಲ. ಮೊದಲು ಶ್ರೀಕೃಷ್ಣನು ಕರ್ಮದ ಮಹತ್ವವನ್ನು ವಿಶದವಾಗಿ ತಿಳಿಸಿ ಅನಂತರ ಅದರಲ್ಲಿರುವ ಕರ್ಮಾಂತರ್ಗತ ಜ್ಞಾನಾಂಶದ ಮೇಲ್ಮೆಯನ್ನೂ ಪ್ರಾಮುಖ್ಯತೆಯನ್ನೂ ತಿಳಿಸಲು ಅರ್ಜುನನಿಗೆ ಮತ್ತೆ ಸಂದೇಹವು ತಲೆದೋರಿತು. ಅವನು ಶ್ರೀಕೃಷ್ಣನನ್ನು ಹಿಂದೆ ಮೂರನೆಯ ಅಧ್ಯಾಯದಲ್ಲಿ ಕೇಳಿದಂತೆ ಮತ್ತೆ ಈ ರೀತಿ "ಎಲೈ ಶ್ರೀಕೃಷ್ಣನೇ! ನೀನು ಒಂದು ಸಲ ಕರ್ಮ ಸನ್ಯಾಸವನ್ನು ಪ್ರಶಂಸೆ ಮಾಡುತ್ತೀಯೆ. ಮತ್ತೆ ಕರ್ಮಯೋಗವನ್ನು ಪ್ರಶಂಸೆ ಮಾಡುತ್ತೀಯೆ. ಇವೆರಡರಲ್ಲಿ ಯಾವುದು ಶ್ರೇಯಸ್ಕರವೋ ಅದನ್ನು ಮಾತ್ರ ನಿಶ್ಚಯಿಸಿ ನನಗೆ ತಿಳಿಸಬಾರದೆ?" ಎಂದು ಪ್ರಶ್ನಿಸುತ್ತಾನೆ. ಕರ್ಮಗಳ ಆಚರಣೆಯಲ್ಲಿ ಫಲಾಭಿಸಂಧಿರಹಿತತ್ವವೂ, ಇಂದ್ರಿಯ ನಿಗ್ರಹವೂ, ಆತ್ಮಜ್ಞಾನಾನುಸಂಧಾನವೂ ಬಹಳ ಪ್ರಧಾನವಾದುದೆಂದೂ, ದ್ರವ್ಯಮಯ ಯಜ್ಞಕ್ಕಿಂತ ಜ್ಞಾನಮಯ ಯಜ್ಞವೇ ಶ್ರೇಷ್ಠವಾದುದೆಂದೂ ಮೇಲೆ ತಿಳಿಸಿದ್ದರಿಂದ ಅರ್ಜುನನಿಗೆ ಯುದ್ಧ ರೂಪವಾದ ಘೋರ ಕರ್ಮವನ್ನು ಮಾಡಬೇಕೇ ಅಥವಾ ಪರಮ ಪದವನ್ನು ಪಡೆಯಲು ಜ್ಞಾನಮಯಯಜ್ಞವನ್ನು ಮಾಡಬೇಕೇ ಎಂಬ ವಿಷಯದಲ್ಲಿ ಮನಸ್ಸಿನಲ್ಲಿ ಕಳವಳವುಂಟಾಯಿತು.

ಆಗ ಶ್ರೀಕೃಷ್ಣನು ಅರ್ಜುನನಿಗೆ ಹೀಗೆ ಉಪದೇಶ ನೀಡುತ್ತಾನೆ. "ಕರ್ಮಗಳನ್ನು ಬಿಡುವ ಜ್ಞಾನಯೋಗವೂ ಕರ್ಮಗಳನ್ನು ಮಾಡುವ ಕರ್ಮಯೋಗವೂ ಶ್ರೇಯಸ್ಸನ್ನು ಉಂಟು ಮಾಡುವಂತಹವುಗಳಾಗಿವೆ. ಅವೆರಡರಲ್ಲಿ

ಕರ್ಮಗಳನ್ನು ಬಿಡುವ ಜ್ಞಾನಯೋಗಕ್ಕಿಂತಲೂ ಕರ್ಮಗಳನ್ನು ಆಚರಿಸುವ ಕರ್ಮಯೋಗವೇ ಸುಲಭವಾದುದು ಮತ್ತು ಶ್ರೇಷ್ಠವಾದುದು. ಕರ್ಮಯೋಗಿಯು ಯಾವಾಗಲೂ ತನ್ನ ಕರ್ತವ್ಯವನ್ನು ಮಾಡುತ್ತಿರುವಂತೆ ಸನ್ಯಾಸಿಯು ಯಾವಾಗಲೂ ಆತ್ಮಚಿಂತನೆಯಲ್ಲಿ ಮಗ್ನನಾಗಿರುತ್ತಾನೆ. ಆದರೆ ಕರ್ಮಯೋಗಿಯು ನಿಸ್ವಾರ್ಥನಾಗಿ, ನಿಸ್ಪೃಹನಾಗಿ ದ್ವಂದ್ವಗಳಾದ ಸುಖದುಃಖಗಳಲ್ಲಿಯೂ, ಜಯಾಪಜಯಗಳಲ್ಲಿಯೂ ನಿರ್ವಿಕಾರನಾಗಿದ್ದು ಅವುಗಳೆಲ್ಲವನ್ನೂ ಸಹಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆದಿದ್ದರೆ ಅವನು ನಿಜವಾದ ಜ್ಞಾನನಿಷ್ಠೆಯಲ್ಲಿ ಇರುವ ಸನ್ಯಾಸಿಗೆ ಯಾವ ವಿಧದಲ್ಲಿಯೂ ಕಡಿಮೆಯಾದವನಲ್ಲ. ಸಾಂಖ್ಯ ಅಂದರೆ ಜ್ಞಾನಯೋಗವು ಮತ್ತು ಯೋಗ ಅಂದರೆ ಕರ್ಮಯೋಗವು ಇವೆರಡರಲ್ಲಿ ಯಾವುದಾದರೂ ಒಂದನ್ನು ಚೆನ್ನಾಗಿ ಅನುಷ್ಠಿಸಿದವನೂ ಕೂಡ ಇವೆರಡರ ಫಲವನ್ನೂ ಹೊಂದುತ್ತಾನೆ. ಆದರೆ ವಿವೇಕ ಜ್ಞಾನರಹಿತರು ಸಾಂಖ್ಯ ಮತ್ತು ಯೋಗ ಇವೆರಡನ್ನೂ ಬೇರೆ ಬೇರೆ ಎಂದು ಹೇಳುತ್ತಾರೆ. ಜ್ಞಾನ ನಿಷ್ಠರು ಯಾವ ಫಲವನ್ನು ಹೊಂದುತ್ತಾರೆಯೋ ಆ ಫಲವನ್ನೇ ಕರ್ಮಯೋಗಿಗಳೂ ಹೊಂದುತ್ತಾರೆ. ಈ ಜ್ಞಾನಯೋಗವೂ, ಕರ್ಮಯೋಗವೂ ಅನುಷ್ಠಾನದಲ್ಲಿ ಬೇರೆ ಬೇರೆ ರೀತಿಯಾಗಿದ್ದರೂ ಒಂದೇ ಫಲವುಳ್ಳದೆಂಬುದನ್ನು ಯಾವನು ತಿಳಿಯುತ್ತಾನೆಯೋ ಅವನೇ ಯಥಾರ್ಥವನ್ನು ತಿಳಿದ ಪಂಡಿತನು. ಕರ್ಮಯೋಗವಿಲ್ಲದೇ ಕರ್ಮಸನ್ಯಾಸವನ್ನು ಅಂದರೆ ಜ್ಞಾನಯೋಗವನ್ನು ಹೊಂದುವುದು ಬಹಳ ಕಷ್ಟವಾದುದು ಅಲ್ಲದೆ ಕರ್ಮಯೋಗವನ್ನು ಬಿಟ್ಟು ಜ್ಞಾನಯೋಗವನ್ನು ಅಭ್ಯಾಸ ಮಾಡುವವನು ಬಹಳ ವಿಘ್ನವನ್ನು ಎದುರಿಸಬೇಕಾಗುವುದು. ಆದರೆ ಆತ್ಮಮನನ ಮಾಡುತ್ತಾ ಕರ್ಮಯೋಗದಲ್ಲಿ ನಿರತನಾದವನು ಶೀಘ್ರದಲ್ಲಿಯೇ ಬ್ರಹ್ಮನನ್ನು ಅಂದರೆ ಆತ್ಮ ಸ್ವರೂಪ ಸಾಕ್ಷಾತ್ಕಾರವನ್ನು ಪಡೆಯುವನು. ಯೋಗ ಯುಕ್ತನು ಅಂದರೆ ಕರ್ಮಯೋಗದಲ್ಲಿ ನಿಷ್ಠೆಯುಳ್ಳವನು ಪರಿಶುದ್ಧವಾದ ಮನಸ್ಸುಳ್ಳವನಾಗಿ, ಮನಸ್ಸು ಇಂದ್ರಿಯಗಳನ್ನು ಜಯಿಸಿದವನಾಗಿ, ತನ್ನ ಆತ್ಮವೂ ಎಲ್ಲಾ ಚೇತನರ ಆತ್ಮವೂ ಒಂದೇ ಎಂಬ ಜ್ಞಾನವುಳ್ಳವನಾಗಿ, ಕರ್ಮಗಳನ್ನು ಮಾಡುತ್ತಿದ್ದರೂ ಕೂಡ ಅವುಗಳಿಂದ ಬಂಧಿತನಾಗುವುದಿಲ್ಲ, ಅವನು ಕರ್ಮ ಬಂಧನವನ್ನು ಪಡೆಯುವುದಿಲ್ಲ.

## II ಕರ್ಮಯೋಗಾನುಷ್ಠಾನಕ್ಕೆ ಅವಶ್ಯಕವಾದ ಜ್ಞಾನಾನುಸಂಧಾನ ಪ್ರಕಾರಗಳು (ಶ್ಲೋಕಗಳು 8 ರಿಂದ 15)

## 1. ಅಕರ್ತೃತ್ವಾನುಸಂಧಾನ (ಶ್ಲೋಕ 8 ರಿಂದ 10)

1. ತತ್ವವನ್ನು ತಿಳಿದ ಕರ್ಮಯೋಗನಿಷ್ಠನು ಕಣ್ಣುಗಳಿಂದ ನೋಡಿದರೂ, ಕಿವಿಗಳಿಂದ ಕೇಳಿದರೂ, ತ್ವಗಿಂದ್ರಿಯಗಳಿಂದ ಮುಟ್ಟಿದರೂ, ಮೂಗಿನಿಂದ ವಾಸನಾದಿಗಳನ್ನು ಮೂಸಿ ನೋಡಿದರೂ, ಕೈಯಿಂದ ಹಿಡಿದುಕೊಂಡರೂ, ಕಣ್ಣು ತೆರೆದು ನೋಡಿದರೂ, ನಾಲಿಗೆಯಿಂದ ರುಚಿನೋಡಿದರೂ, ಕಾಲುಗಳಿಂದ ನಡೆದರೂ, ನಿದ್ದೆ ಮಾಡಿದರೂ, ಉಸಿರಾಡುತ್ತಿದ್ದರೂ, ಬಾಯಿಂದ ಕೂಗಿದರೂ, ಮಲ ವಿಸರ್ಜನೆ ಮಾಡಿದರೂ, ಇಂದ್ರಿಯಗಳು ತಮ್ಮ ತಮ್ಮ ಕಾರ್ಯದಲ್ಲಿ ತಮಗೆ ಬೇಕಾದ ಶಬ್ದಾದಿ ವಿಷಯದಲ್ಲಿ ತಾವೇ ವರ್ತಿಸುತ್ತವೆ, ಆತ್ಮನಾದ ತಾನು ಸ್ವತಃ ಏನನ್ನೂ ಮಾಡುವುದಿಲ್ಲ ಎಂದು ತಿಳಿಯುತ್ತಾನೆ. ಯಾವನು ಕರ್ಮಗಳನ್ನೆಲ್ಲಾ ಬ್ರಹ್ಮದಲ್ಲಿ ಅಂದರೆ ದೇಹ, ಇಂದ್ರಿಯ, ಪ್ರಾಣ ರೂಪವಾದ ಪ್ರಕೃತಿಯಲ್ಲಿ ಅರ್ಪಿಸಿ, ಫಲಾಪೇಕ್ಷೆಯಿಲ್ಲದೆ ಕರ್ಮಗಳನ್ನು ಮಾಡುತ್ತಾನೆಯೋ ಅವನು ನೀರಿನಲ್ಲಿರುವ ಕಮಲದ ಎಲೆಯ ಹಾಗೆ ಪಾಪದ ಸೋಂಕನ್ನು ಪಡೆಯುವುದಿಲ್ಲ, ಅಂದರೆ ನೀರಿನಲ್ಲೇ ಹುಟ್ಟಿ ಅದರಲ್ಲೇ ಬೆಳೆದು, ಅದರ ಆಹಾರದಿಂದಲೇ ಜೀವಿಸುತ್ತಾ ಇರುವ ಕಮಲದ ಎಲೆಯು ನೀರಿನ ಸಂಬಂಧ ಪಡೆದಿದ್ದರೂ ಕೂಡ ನೀರಿಗೆ ಅಂಟಿಕೊಂಡಿಲ್ಲ. ಅದೇ ರೀತಿ ಪ್ರಕೃತಿಯ ಸಂಬಂಧ ಪಡೆದು ಇದರ ಕಾರ್ಯಗಳನ್ನು ಮಾಡುತ್ತಿರುವ ಕರ್ಮಯೋಗಿಯು ಪ್ರಕೃತಿ ವಿಯುಕ್ತವಾದ ತನ್ನ ನಿಜಸ್ವರೂಪವನ್ನು ಅರಿತವನಾಗಿ ಕರ್ಮಫಲದಲ್ಲಿ ಆಸಕ್ತಿರಹಿತನಾಗಿ ಕರ್ಮಮಾಡುತ್ತಿದ್ದರೆ ಕರ್ಮವು ಅವನಿಗೆ ಅಂಟುವುದಿಲ್ಲ ಎಂದು ಅಭಿಪ್ರಾಯ.

## 2. ಫಲಾಸಕ್ತಿರಹಿತತ್ವ (ಶ್ಲೋಕಗಳು 11 ಮತ್ತು 12)

ಯೋಗಿಗಳು ಆಸಕ್ತಿ ರಹಿತರಾಗಿ ಆತ್ಮ ಶುದ್ಧಿಗಾಗಿ ಶರೀರದಿಂದಲೂ, ಮನಸ್ಸಿನಿಂದಲೂ, ಬುದ್ಧಿಯಿಂದಲೂ, ಕೇವಲ ಇಂದ್ರಿಯಗಳಿಂದಲೂ, ಕರ್ಮಗಳನ್ನು ಮಾಡುತ್ತಾರೆ. ಆತ್ಮದಲ್ಲಿ ಆಸೆಯುಳ್ಳ ಯೋಗಿಯು ಕರ್ಮ ಫಲದಲ್ಲಿ ಆಸೆಯನ್ನು ತ್ಯಜಿಸಿ ಸ್ಥಿರವಾದ ಮನಃ ಶಾಂತಿಯನ್ನು ಪಡೆಯುತ್ತಾನೆ. ಅಯುಕ್ತನೆಂದರೆ ಆತ್ಮನಲ್ಲಿ ಆಸಕ್ತಿರಹಿತನು ಕಾಮದಿಂದ ಪ್ರೇರಿತನಾಗಿ, ಕರ್ಮ ಫಲದಲ್ಲಿ ಆಸಕ್ತಿಯನ್ನು ಹೊಂದಿ ಸಂಸಾರ ಬಂಧನಕ್ಕೆ ಸಿಕ್ಕಿಕೊಳ್ಳುತ್ತಾನೆ. ಆದ್ದರಿಂದ ಮನಸ್ಸಿನಲ್ಲಿ ಕರ್ತೃತ್ವಾಭಿಮಾನವಿಲ್ಲದೆ ಕೇವಲ ಇಂದ್ರಿಯಗಳಿಂದ ಕರ್ಮವನ್ನು ಮಾಡಬೇಕು ಮತ್ತು ಮನಸ್ಸಿನಲ್ಲಿ ತಾನು ಏನೂ ಮಾಡುತ್ತಿಲ್ಲ ಎಂಬ ಭಾವನೆಯಿಂದ ಇರಬೇಕು".

**3. ಆತ್ಮನಾದ ತಾನು ವಶೀ, ಪ್ರಭು ಮತ್ತು ವಿಭು ಎಂಬ ಭಾವನೆ ಹೊಂದಿರಬೇಕು. (ಶ್ಲೋಕಗಳು 13 ರಿಂದ 15)**

ದೇಹದ ಆಕಾರವಾಗಿ ಪರಿಣಾಮ ಹೊಂದಿರುವ ಈ ಪ್ರಕೃತಿಯಲ್ಲಿ ಕರ್ತೃತ್ವವನ್ನು ಆರೋಪಿಸುವುದು ಹೇಗೆ ಎಂಬುದನ್ನು ಈ ಮೂರು ಶ್ಲೋಕಗಳು ತಿಳಿಸುತ್ತವೆ. "ಇಂದ್ರಿಯಗಳನ್ನು ಜಯಿಸಿ ಅವುಗಳನ್ನು ವಶಪಡಿಸಿಕೊಂಡು 'ವಶೀ' ಆದ ಚೇತನನು ತಾನು ಮಾಡುತ್ತಿರುವ ಸಮಸ್ತ ಕರ್ಮಗಳೂ ನವದ್ವಾರವುಳ್ಳ ತನ್ನ ಶರೀರದ ಕಾರ್ಯಗಳೆಂದು ತಿಳಿದು, ತನಗಾಗಿ ಏನನ್ನೂ ಮಾಡಲು ಪ್ರಯತ್ನಿಸದೇ ಏನನ್ನೂ ಮಾಡಿಸದೇ ನಿಶ್ಚಿಂತನಾಗಿ ಸುಖವಾಗಿ ಇರುವನು. ಅವನು ತನ್ನ ಶರೀರಕ್ಕೆ ತಾನೇ ಪ್ರಭುವಾಗಿ (ಯಜಮಾನನಾಗಿ) ಇರುತ್ತಾನೆ. ಹೀಗೆ ವಶೀ ಮತ್ತು ಪ್ರಭುವಾದ ಜೀವಾತ್ಮನು ಜಗತ್ತಿನಲ್ಲಿ ಕರ್ತೃತ್ವವನ್ನಾಗಲೀ ಕರ್ಮವನ್ನಾಗಲೀ ಉಂಟು ಮಾಡುವವನಲ್ಲ; ಆದರೆ ದೇಹ ಸಂಬಂಧದಿಂದ ಉಂಟಾಗಿರುವ ಸ್ವಭಾವಕ್ಕೆ ಅನುಗುಣವಾಗಿ ಕರ್ತೃತ್ವದಲ್ಲೂ, ಕರ್ಮದಲ್ಲೂ, ಆ ಕರ್ಮಗಳ ಫಲಾನುಭವದಲ್ಲೂ ಪ್ರವರ್ತಿಸುತ್ತಾನೆ."

ಇಲ್ಲಿ ಶ್ರೀಕೃಷ್ಣಪರಮಾತ್ಮನು ಇದಕ್ಕೆ ಲೌಕಿಕವಾದ ಒಂದು ಉದಾಹರಣೆಯನ್ನು ಸೂಚಿಸಿದ್ದಾನೆ. ಕಣ್ಣು ಕಿವಿ ಮುಂತಾಗಿ ಒಂಬತ್ತು ದ್ವಾರವುಳ್ಳ ಈ ಶರೀರವನ್ನು ನವ ದ್ವಾರವುಳ್ಳ ಒಂದು ಪಟ್ಟಣಕ್ಕೆ ಹೋಲಿಸಿದ್ದಾನೆ. "ಕರ್ಮ ಯೋಗಿಯು ನವದ್ವಾರವುಳ್ಳ ಈ ಶರೀರವೆಂಬ ಪಟ್ಟಣಕ್ಕೆ ಪರಮಾತ್ಮನೇ ಸಾರ್ವಭೌಮನೆಂದೂ, ತಾನು ಆ ಪಟ್ಟಣವನ್ನು ಪರಮಾತ್ಮನ ಪರವಾಗಿ ನೋಡಿಕೊಂಡು ಆಳುತ್ತಿರುವ ಒಬ್ಬ ಪ್ರಭು ಅಂದರೆ ಅವನ ಭೃತ್ಯನಾದ ಒಬ್ಬ ಅಧಿಕಾರಿ ಎಂದೂ ಮತ್ತು ಇಂದ್ರಿಯಗಳೆಲ್ಲವೂ ಪರಮಾತ್ಮನ ಕಾರ್ಯಗಳನ್ನು ನಡೆಸುವ ಸೇವಕರೆಂದೂ, ಆ ಪೌರರಾದ ಇಂದ್ರಿಯಗಳನ್ನು ಪರಮಾತ್ಮನ ಪರವಾಗಿ ತಾನು ಆಳುತ್ತಿದ್ದೇನೆ ಎಂಬ ಭಾವನೆ ಹೊಂದಿ ನಿರ್ಲಿಪ್ತನಾಗಿ ಭಗವದಾರಾಧನರೂಪವಾಗಿ ಕರ್ಮಗಳನ್ನು ಮಾಡುತ್ತಾನೆ. ಅಂದರೆ ಕರ್ಮಯೋಗಿಯು ಜೀವಾತ್ಮನಾದ ತನಗೆ ಪ್ರಾಚೀನ ಕರ್ಮವಾಸನೆಗಳ ಮೂಲಕವಾಗಿ ದೇಹ ಸಂಬಂಧವುಂಟಾಗಿದೆ; ಈ ದೇಹ ಸಂಬಂಧದಿಂದ ಉಂಟಾಗುವ ಕರ್ತೃತ್ವವು ಆತ್ಮನಾದ ತನಗೆ ಸ್ವರೂಪ ಪ್ರಯುಕ್ತವಾಗಿ ಬಂದುದಲ್ಲ, ಅದು ಕಣ್ಣು ಕಿವಿ ಮುಂತಾಗಿ ನವದ್ವಾರವುಳ್ಳ ತನ್ನ ದೇಹಕ್ಕೆ ಸೇರಿದ್ದು ಎಂಬ ಭಾವನೆ ಹೊಂದಿದವನಾಗಿ ಇರುತ್ತಾನೆ. ಮತ್ತು ಇಂದ್ರಿಯಗಳನ್ನು ಜಯಿಸಿ ತನ್ನ

ವಶಮಾಡಿಕೊಂಡು ವಶೀಯಾಗಿ ಇರುತ್ತಾನೆ. ಹೀಗೆ ವಶೀಯಾದ ಜೀವಾತ್ಮನಿಗೆ ತಾನಾಗಿ ಆಸೆಪಟ್ಟು ತನ್ನ ದೇಹದಲ್ಲಿ ಇಂದ್ರಿಯಗಳ ಮೂಲಕ ಅನುಭವಿಸಬೇಕಾದ ಫಲಭೋಗಗಳು ಯಾವುದೂ ಇರುವುದಿಲ್ಲ. ಆದ್ದರಿಂದ ಅವನು ಇಂದ್ರಿಯಗಳಿಂದ ಪ್ರೇರಿತನಾಗಿ ಯಾವ ಕೆಲಸವನ್ನೂ ಮಾಡದೆ ಶಾಂತಚಿತ್ತನಾಗಿರುತ್ತಾನೆ. ಅವನಿಗೆ ತಾನೇ ದೇಹದ ಒಡೆಯನೆಂಬ ಮತ್ತು ದೇಹದಿಂದ ಮಾಡಲ್ಪಟ್ಟ ಕರ್ಮಗಳೆಲ್ಲಾ ತನ್ನಿಂದಲೇ ಆದವುಗಳು ಎಂಬ ಅಹಂಕಾರ ಮಮಕಾರಗಳು ಇರುವುದಿಲ್ಲ. ಸಮಸ್ತ ಕರ್ಮಗಳ ಕರ್ತೃತ್ವಾದಿಗಳು ದೇಹಕ್ಕೆ ಸೇರಿದವುಗಳೆಂಬ ಮನೋಭಾವನೆ ಹೊಂದಿದವನಾಗಿ ಇರುತ್ತಾನೆ. ಕರ್ಮಗಳನ್ನು ತಾನು ಮಾಡಲಿಲ್ಲ ಮತ್ತು ಮಾಡಿಸಲಿಲ್ಲ; ಅವುಗಳು ತನ್ನ ದೇಹದ ಮೂಲಕ, ದೇಹದ ಗುಣಗಳಿಗೆ ಅನುಸಾರವಾಗಿ ಪರಮಾತ್ಮನ ಸಂಕಲ್ಪದಿಂದ ನಡೆಯುತ್ತವೆ ಎಂಬ ಮನೋಭಾವನೆ ಹೊಂದಿ, ಕರ್ಮ ಮತ್ತು ಕರ್ತೃತ್ವಾದಿಗಳಲ್ಲಿ ಅಹಂಕಾರ, ಮಮಕಾರ ಹೊಂದದೆ ಶಾಂತಚಿತ್ತನಾಗಿ ಸುಖವಾಗಿ ಇರುತ್ತಾನೆ.

(ಧರ್ಮಭೂತಜ್ಞಾನದ ಮೂಲಕ) ವಿಭುವಾದ ಈ ಜೀವಾತ್ಮನು ಯಾವನೊಬ್ಬನ ಪಾಪವನ್ನಾಗಲೀ, ಸುಕೃತವನ್ನಾಗಲೀ ಅಂಟಿಸಿಕೊಂಡು ಸುಖದುಃಖಗಳ ಅನುಭವ ಪಡೆದವನಾಗುವುದಿಲ್ಲ, ಅಂದರೆ ಅನೇಕ ಜನ್ಮಗಳನ್ನೆತ್ತಿ ಬೇರೆ ಬೇರೆಯಾದ ಅನೇಕ ಶರೀರಗಳಲ್ಲಿ ಪ್ರವೇಶಿಸಿದವನಾಗುವುದರಿಂದಲೂ, ವಿಭುವಾದ ಧರ್ಮಭೂತಜ್ಞಾನ ಪಡೆದಿರುವವನಾಗಿರುವುದರಿಂದಲೂ, ಈ ಅಣುಸ್ವರೂಪನಾದ ಜೀವಾತ್ಮನು ವಿಭು ಎನ್ನಿಸಿಕೊಂಡಿದ್ದಾನೆ. ಹೀಗೆ ಬೇರೆ ಬೇರೆ ಜನ್ಮಗಳಲ್ಲಿ ಬೇರೆ ಬೇರೆ ಶರೀರಗಳ ಮೂಲಕ ಬೇರೆ ಬೇರೇ ತಂದೆ, ತಾಯಿ, ಬಂಧು ಬಳಗದವರನ್ನು ಪಡೆದಿರುವುದರಿಂದ ಇವನಿಗೆ ನಿಜವಾಗಿ ಯಾವ ಸಂಬಂಧಿಗಳೂ ಇಲ್ಲ, ಯಾವ ಪ್ರತಿಕೂಲರೂ ಇಲ್ಲ. ಇವನು ಯಾರ ಸುಖದುಃಖಗಳಿಗಾಗಿಯೂ ತಾನು ಸುಖದುಃಖಗಳನ್ನು ಅನುಭವಿಸಬೇಕಾಗಿಲ್ಲ. ಆದರೆ ಇವನ ಸ್ವಯಂ ಪ್ರಕಾಶವಾದ ಧರ್ಮಭೂತ ಜ್ಞಾನವು ಕರ್ಮ ವಾಸನೆಗಳ ಮೂಲಕ ಉಂಟಾದ ಅಜ್ಞಾನದಿಂದ ಆವರಿಸಲ್ಪಟ್ಟಿರುತ್ತದೆ ಮತ್ತು ಆ ಅಜ್ಞಾನದಿಂದ ಜೀವಿಗಳೆಲ್ಲರೂ ಭ್ರಮೆ ಹೊಂದಿದವರಾಗುತ್ತಾರೆ. ಈ ಭ್ರಮೆಯಿಂದ ದೇಹಾತ್ಮಾಭಿಮಾನವಾಸನೆಯೂ, ದೇಹ ಸಂಬಂಧಿಗಳಲ್ಲಿ ಅವರೆಲ್ಲರೂ ತನ್ನವರೆಂಬ ಮೋಹವೂ, ಅದಕ್ಕೆ ಅನುಗುಣವಾದ ಅಹಂಕಾರ ಮಮಕಾರಗಳಿಂದ ಕೂಡಿದ ವಾಸನೆಗಳೂ ಉಂಟಾಗಿ, ತಾನು, ತನ್ನವರು ಎಂಬ ವಿಪರೀತ ಅಭಿಮಾನದ ಫಲವಾಗಿ, ಕರ್ಮಗಳಲ್ಲಿ ಅಹಂಕಾರ

ಮಮಕಾರ ಹೊಂದುತ್ತಾನೆ. ಆದರೆ ಕರ್ಮಯೋಗನಿಷ್ಠನಾದ ದೇಹಿಯಾದ ಜೀವಾತ್ಮನು ತನ್ನ ದೇಹದಲ್ಲಿ ಕರ್ತೃತ್ವವನ್ನು ಆರೋಪಿಸಿ, ಪರಮಾತ್ಮನೇ ಸಾರ್ವಭೌಮನೆಂದೂ, ತಾನು ಅವನ ದಾಸನೆಂದೂ ಅರಿತು ವಶೀಯಾಗಿಯೂ, ಪ್ರಭುವಾಗಿಯೂ, ವಿಭುವಾಗಿಯೂ ವರ್ತಿಸುತ್ತಾ ಸರ್ವದಾ ದೇಹದ ಮೂಲಕ ಕರ್ಮಗಳನ್ನು ಮಾಡುತ್ತಿದ್ದರೂ ಮಾನಸಿಕವಾಗಿ ಏನನ್ನೂ ಮಾಡದೆ ನಿರ್ಲಿಪ್ತವಾಗಿ ಶಾಂತಚಿತ್ತನಾಗಿ ಇರುತ್ತಾನೆ. ಹೀಗೆ ಕರ್ಮದ ಕರ್ತೃತ್ವ ಫಲಸಂಗ ತ್ಯಾಗವನ್ನು ಮಾನಸಿಕವಾಗಿ ಮಾಡುವುದೇ ಅಕರ್ತೃತ್ವಾನುಸಂಧಾನವು.

## III. ಕರ್ಮಯೋಗದಿಂದ ಉಂಟಾಗುವ ಆತ್ಮಜ್ಞಾನ ವಿಚಾರ
## (ಶ್ಲೋಕಗಳು 16ರಿಂದ 28)

ಯಾರಿಗೆ ಆತ್ಮಜ್ಞಾನವು ಪ್ರಕೃತಿ ಸಂಬಂಧದಿಂದ ಉಂಟಾಗಿರುವ ಅಜ್ಞಾನವನ್ನು ತೊಲಗಿಸುವುದೋ ಅವರಿಗೆ ಆ ಜ್ಞಾನವೇ ಸೂರ್ಯನಂತೆ ಎಲ್ಲವನ್ನೂ ಪ್ರಕಾಶಗೊಳಿಸುತ್ತದೆ. ಅಂದರೆ ಅವರು ಆ ಜ್ಞಾನದಿಂದ ಬ್ರಹ್ಮನನ್ನು ಅಂದರೆ ಆತ್ಮ ಸಾಕ್ಷಾತ್ಕಾರವನ್ನು ಹೊಂದುತ್ತಾರೆ. ಈ ಶ್ಲೋಕಗಳಲ್ಲಿ ಬ್ರಹ್ಮ ಎಂಬುದಕ್ಕೆ ಪ್ರಕೃತಿ ಸಂಬಂಧದಿಂದ ಬಿಡಲ್ಪಟ್ಟ ಆತ್ಮವಸ್ತುವು ಎಂದು ಅರ್ಥ ಮಾಡಿದ್ದಾರೆ. ಆತ್ಮನಲ್ಲಿಯೇ ಬುದ್ಧಿಯನ್ನೂ ಮನಸ್ಸನ್ನೂ ನಿಲ್ಲಿಸಿ ಆತ್ಮನನ್ನು ಹೊಂದುವುದರಲ್ಲೇ ಆಸಕ್ತಿಯುಳ್ಳವರಾಗಿ ಅದೇ ತಮಗೆ ಪರಮ ಪ್ರಯೋಜನವೆಂದು ತಿಳಿದವರು ಆ ಜ್ಞಾನದಿಂದಲೇ ಸಮಸ್ತ ಪಾಪಗಳನ್ನೂ ನೀಗಿಸಿಕೊಂಡವರಾಗಿ ಪುನರ್ಜನ್ಮವಿಲ್ಲದ ಉತ್ತಮ ಸ್ಥಾನವನ್ನು ಸೇರುವರು.

ಪಂಡಿತರು ಅಂದರೆ ಆತ್ಮಜ್ಞಾನಿಗಳು ವಿದ್ಯಾವಿನಯ ಸಂಪನ್ನರಾದವರಲ್ಲಿಯೂ, ಬ್ರಾಹ್ಮಣರಲ್ಲಿಯೂ, ಹಸುವಿನಲ್ಲಿಯೂ, ಆನೆಯಲ್ಲಿಯೂ, ನಾಯಿಮರಿಯಲ್ಲಿಯೂ, ನಾಯಿಯನ್ನೇ ತಿನ್ನುವ ಚಂಡಾಲರಲ್ಲಿಯೂ ಅವರೆಲ್ಲರಲ್ಲಿ ಇರುವ ಶುದ್ಧ ಆತ್ಮ ಸ್ವರೂಪವು ಏಕ ರೂಪವಾದುದೆಂಬುದನ್ನು ಅರಿತು ಎಲ್ಲರನ್ನೂ ಸಮದೃಷ್ಟಿಯಿಂದಲೇ ನೋಡುವರು. ಯಾರಿಗೆ ಇಂತಹ ಸಮತ್ವಭಾವನೆ ಉಂಟಾಗುವುದೋ, ಯಾರ ಮನಸ್ಸು ಆತ್ಮರುಗಳೆಲ್ಲಾ ಜ್ಞಾನೈಕಾಕಾರದಿಂದ ಸಮರು ಎಂಬ ಸಮತ್ವ ಭಾವನೆ ಪಡೆದಿದೆಯೋ ಅವರು ಈ ಲೋಕದಲ್ಲಿಯೇ ಸಂಸಾರವನ್ನು ಜಯಿಸಿದವರಾಗಿರುತ್ತಾರೆ. ಅವರಿಗೆ ಸಾಂಸಾರಿಕ ಕ್ಲೇಶ ಬಾಧೆಗಳು ಇರುವುದಿಲ್ಲ. ಪ್ರಕೃತಿ ಸಂಬಂಧವಿಲ್ಲದ

ಆತ್ಮವಸ್ತುವು ದೋಷರಹಿತವಾಗಿಯೂ, ಸಮವಾಗಿಯೂ ಇರುವುದರಿಂದ ಸಮಭಾವನೆಯುಳ್ಳ ಅವರು ಬ್ರಹ್ಮನಲ್ಲಿ ಅಂದರೆ ಆತ್ಮ ಸಾಕ್ಷಾತ್ಕಾರದಲ್ಲಿ ನೆಲೆಗೊಂಡವರಾಗುವರು. ಆತ್ಮನಲ್ಲಿ ಸ್ಥಿರಬುದ್ಧಿಯುಳ್ಳವನಾಗಿ ದೇಹಾತ್ಮ ಭ್ರಮೆಯಿಂದ ಮೋಹಗೊಳ್ಳದೆ, ಜೀವಾತ್ಮ ಸ್ವರೂಪವನ್ನು ಅರಿತವನಾಗಿ ಆತ್ಮ ಸ್ವರೂಪಾನು ಸಂಧಾನದಲ್ಲಿಯೇ ನೆಟ್ಟ ಮನಸ್ಸನ್ನು ಉಳ್ಳವನಾವನೋ ಅವನು ಇಷ್ಟಪಟ್ಟ ವಸ್ತುವನ್ನು ಪಡೆದಾಗ ಅತ್ಯಾನಂದ ಪಡುವುದೂ ಇಲ್ಲ, ಅಪ್ರಿಯವಾದುದನ್ನು ಪಡೆದಾಗ ದುಃಖಿ ಸುವುದೂ ಇಲ್ಲ, ಅವನಿಗೆ ಬ್ರಹ್ಮವು ಒಂದೇ ಸತ್ಯವು. ಯಾವಾಗ ಬಾಹ್ಯ ವಿಷಯಾನುಭವದಲ್ಲಿ ಆಸಕ್ತಿ ಇಲ್ಲದೆ, ಆತ್ಮನಲ್ಲಿಯೇ ಸುಖಾನುಭವವನ್ನು ಪಡೆಯುತ್ತಾನೆಯೋ ಆಗ ಅವನು ಬ್ರಹ್ಮಯೋಗಯುಕ್ತವಾದ ಅಂದರೆ ಆತ್ಮಾನುಸಂಧಾನಯುತವಾದ ಮನಸ್ಸುಳ್ಳವನಾಗಿ ನಾಶರಹಿತವಾದ ಅಕ್ಷಯ ಸುಖವನ್ನು (ಆತ್ಮಾನುಭವರೂಪವಾದ ಸುಖವನ್ನು) ಹೊಂದುವನು.

ವಿಷಯೇಂದ್ರಿಯಗಳ ಸಂಬಂಧದಿಂದ ಉಂಟಾಗುವ ಸುಖಗಳು ದುಃಖ ಹೇತುವಾಗಿಯೂ, ಆದಿಅಂತ್ಯಗಳಿಂದ ಕೂಡಿದುದಾಗಿಯೂ ಇರುವುದರಿಂದ ಬುದ್ಧಿವಂತರಾದವರು ಅವುಗಳಲ್ಲಿ ಆಸಕ್ತಿಹೊಂದಿ ರಮಿಸುವುದಿಲ್ಲ. ಯಾವನು ಶರೀರ ವನ್ನು ಬಿಡುವುದಕ್ಕೆ ಮೊದಲೇ ಇಲ್ಲಿಯೇ ಅಂದರೆ ಈ ಜೀವಿತ ಕಾಲದಲ್ಲಿಯೇ ಕಾಮಕ್ರೋಧಗಳಿಂದ ಉಂಟಾಗುವ ವೇಗವನ್ನು ಸಹಿಸಲು ಸಮರ್ಥನು ಆಗುತ್ತಾನೆಯೋ ಅವನು ಆತ್ಮಾನುಭವಕ್ಕೆ ಯೋಗ್ಯತೆ ಉಳ್ಳವನು. ಅವನೇ ನಿಜವಾದ ಸುಖಿ ಪುರುಷನು. ಯಾವನು ಆತ್ಮಾನುಭವದಿಂದ ಆನಂದವನ್ನು ಪಡೆದು, ಆತ್ಮನಲ್ಲಿಯೇ ನೆಲೆಗೊಂಡು ಆತ್ಮ ಜ್ಞಾನದಲ್ಲಿರುವನೋ ಅಂತಹ ಯೋಗಿಯು ತಾನು ಬ್ರಹ್ಮಭೂತನು ಎಂಬ ಜ್ಞಾನವುಳ್ಳವನಾಗಿ ಬ್ರಹ್ಮಭಾವವನ್ನು ಹೊಂದುವನು. ಸುಖದುಃಖಾದಿ ದ್ವಂದ್ವಗಳನ್ನು ಜಯಿಸಿ, ಇಂದ್ರಿಯಗಳನ್ನು ಅಡಗಿಸಿ, ಕಲ್ಮಷರಹಿತರಾಗಿ, ಸಮಸ್ತ ಭೂತಗಳ ಹಿತದಲ್ಲಿ ಯೇ ನಿರತರಾದ ಮಹರ್ಷಿಗಳು ಬ್ರಹ್ಮಾನಂದವನ್ನು ಹೊಂದುವರು. ಅಂದರೆ ಕಾಮಕ್ರೋಧರಹಿತರಾಗಿ, ನಿಯಮಿಸಲ್ಪಟ್ಟ ಮನಸ್ಸು ಉಳ್ಳವರಾಗಿ, ಆತ್ಮ ಸ್ವರೂಪವನ್ನು ತಿಳಿದ ಬ್ರಹ್ಮ ನಿಷ್ಠರಿಗೆ ಬ್ರಹ್ಮ ನಿರ್ವಾಣವೂ ಅಂದರೆ ಆತ್ಮಾನುಭವರೂಪವಾದ ಆನಂದವು ಕರಗತವಾಗುತ್ತದೆ.

ಏಕಾಗ್ರತೆಯಿಂದ ಧ್ಯಾನಮಾಡುವ ರಾಜಯೋಗದಿಂದ ಕಾಮಕ್ರೋಧಾದಿ ಗಳನ್ನು ಅಡಗಿಸಿ ಮನೋನಿಗ್ರಹ ಮಾಡಬಹುದು. ಯಾವನು ಬಾಹ್ಯ ವಿಷಯಗಳನ್ನು ಪರಿತ್ಯಜಿಸಿ, ಯೋಗ್ಯವಾದ ಆಸನದಲ್ಲಿ ಕುಳಿತು, ಕಣ್ಣಿನ ದೃಷ್ಟಿಯನ್ನು ಎರಡು

ಹುಬ್ಬುಗಳ ನಡುವೆ ಇಟ್ಟು ಮೂಗಿನಲ್ಲಿ ಸಂಚರಿಸುವ ಪ್ರಾಣವಾಯುಗಳನ್ನು ಅಂದರೆ ನಿಶ್ವಾಸ ಉಚ್ಛ್ವಾಸಗಳನ್ನು ಸಮನಾಗಿ ಮಾಡಿ, ಇಂದ್ರಿಯ ಮನೋಬುದ್ಧಿಗಳನ್ನು ವಶಮಾಡಿಕೊಂಡು, ಮೋಕ್ಷವನ್ನು ಪ್ರಯೋಜನವಾಗಿ ಹೊಂದಿ, ಇಚ್ಛಾ ಭಯಕ್ರೋಧ ರಹಿತನಾಗಿ ಮನನಶೀಲನಾಗಿ ಇರುವನೋ ಅವನು ಸದಾ ಕಾಲದಲ್ಲಿಯೂ ಮುಕ್ತನೆನಿಸಿಕೊಳ್ಳುವನು.

**IV. ಯಜ್ಞ ತಪಸ್ಸು ಮುಂತಾದ ಕರ್ಮಗಳನ್ನು ಭಗವದಾರಾಧನೆ ಎಂದು ಭಕ್ತಿಯಿಂದ ಮಾಡುವುದರಿಂದ ಲಭಿಸುವ ಶಾಂತಿ ಮತ್ತು ಆನಂದ (ಶ್ಲೋಕ 29)**

**''ಭೋಕ್ತಾರಂ ಯಜ್ಞತಪಸಾಂ ಸರ್ವಲೋಕ ಮಹೇಶ್ವರಂ ।**
**ಸುಹೃದಂ ಸರ್ವಭೂತಾನಾಂ ಜ್ಞಾತ್ವಾಮಾಂ ಶಾಂತಿಮೃಚ್ಛತಿ ॥''**

ಅಂದರೆ ನನ್ನನ್ನು ಯಜ್ಞ ತಪಸ್ಸುಗಳ ಭೋಕ್ತೃ ಎಂದೂ, ಸರ್ವಲೋಕಗಳಿಗೂ ಮಹೇಶ್ವರ ನೆಂದೂ, ಸರ್ವಭೂತಗಳಿಗೂ ಹಿತನಾದವನೆಂದೂ ತಿಳಿದು ಕರ್ಮ ಯೋಗವನ್ನು ಅನುಷ್ಠಿಸುವವನು ಮನಃಶಾಂತಿಯನ್ನು ಪಡೆಯುವನು'' ಎಂದು ಈ ಅಧ್ಯಾಯದ ಕೊನೆಯ (29) ಶ್ಲೋಕದಲ್ಲಿ ತಿಳಿಸಿದೆ. ಹಿಂದೆ ಮೂರನೆಯ ಅಧ್ಯಾಯ ದಲ್ಲಿ ''ಮಯಿಸರ್ವಾಣಿ ಕರ್ಮಾಣಿ'' ಎಂಬ ಮೂವತ್ತನೇ ಶ್ಲೋಕದಲ್ಲಿ ತಿಳಿಸಿದ ವಿಷಯವನ್ನೇ ಇಲ್ಲಿ ಮತ್ತೆ ತಿಳಿಸಿದೆ. ಕರ್ಮಮಾಡುವುದು ಸಾಧಾರಣವಾಗಿ ಮನುಷ್ಯನಿಗೆ ಕ್ಲೇಶಕರವಾದುದಾಗಿದ್ದರೂ, ಮಹಾಪುರುಷರಿಗೂ, ತಮಗೆ ಪ್ರಿಯರಾದವರಿಗೂ ಸೇವಾ ರೂಪವಾಗಿ ಕರ್ಮ ಮಾಡುವುದು ಹಿತಕರವಾಗಿಯೂ, ಆನಂದಕರ ವಾಗಿಯೂ ಇರುವುದು ಲೋಕದಲ್ಲಿ ಸಹಜವಾಗಿ ಕಾಣುತ್ತಿದೆ. ತಾವು ಮಾಡುತ್ತಿರುವ ಯಜ್ಞ, ತಪಸ್ಸು ಮುಂತಾದ ಸಮಸ್ತ ಕರ್ಮಫಲಗಳ ಭೋಕ್ತೃವು ತಮಗೆ ಅತ್ಯಂತ ಪ್ರಿಯನಾದ ಬಂಧುವಾಗಿರುವ, ಸರ್ವಲೋಕ ಮಹೇಶ್ವರನಾದ ಪರಮಾತ್ಮನೇ ಎಂಬ ಅರಿವು ಉಂಟಾದೀತಾದರೆ ಕರ್ಮಯೋಗಿಗೆ ಕರ್ಮ ಮಾಡುವುದರಲ್ಲಿ ಆಯಾಸವಾಗಲೀ ದುಃಖವಾಗಲೀ ಆಗುವುದಿಲ್ಲ. ತನಗೆ ಪ್ರಿಯನೂ, ಸ್ವಾಮಿಯೂ ಆದ ಭಗವಂತನಿಗೆ ತಾನು ಸೇವೆ ಮಾಡುತ್ತಿದ್ದೇನೆ ಎಂದು ಆ ಕರ್ಮ ಮಾಡುವುದೇ ಅತ್ಯಂತ ಸುಖಕರವಾಗಿಯೂ, ತೃಪ್ತಿಕರವಾಗಿಯೂ ಇರುತ್ತದೆ ಮತ್ತು ಆದರಿಂದ ಪರಮಶಾಂತಿಯೂ, ಆನಂದವೂ ಲಭಿಸುತ್ತದೆ.

ಒಟ್ಟಿನಲ್ಲಿ ಜ್ಞಾನಯೋಗ ಕರ್ಮಯೋಗ ಇವೆರಡರಲ್ಲಿ ಕರ್ಮಯೋಗವೇ ಶ್ರೇಷ್ಠವಾದುದು ಎಂಬುದನ್ನೂ ಕರ್ಮಯೋಗಾಚರಣೆಗೆ ಅತ್ಯವಶ್ಯಕವಾದ

ಅಕರ್ತೃತ್ವಾನುಸಂಧಾನಾದಿ ಜ್ಞಾನಾಂಶದ ಅನುಸಂಧಾನ ಪ್ರಕಾರಗಳನ್ನೂ, ಕರ್ಮ ಯೋಗಾಭ್ಯಾಸದಿಂದ ಲಭಿಸುವ ಆತ್ಮಜ್ಞಾನದ ವಿವರಣೆಯನ್ನೂ ತಿಳಿಸಿ ಕೊನೆಯಲ್ಲಿ ಕರ್ಮಗಳನ್ನು ಭಗವದರ್ಪಣವಾಗಿ ಭಕ್ತಿಯಿಂದ ಮಾಡುವುದರಿಂದ ಲಭಿಸುವ ಶಾಂತಿಯನ್ನೂ ಮತ್ತು ಆನಂದವನ್ನೂ ಶ್ರೀ ಕೃಷ್ಣಪರಮಾತ್ಮನು ತಿಳಿಸಿದ್ದಾನೆ.

ಈ ಅಧ್ಯಾಯಕ್ಕೆ ಕರ್ಮಸನ್ಯಾಸಯೋಗವೆಂದು ಹೆಸರು, ಆದರೆ ಇಲ್ಲಿ ಕರ್ಮ ಸನ್ಯಾಸವೆಂಬ ಪದಕ್ಕೆ ಕರ್ಮ ತ್ಯಾಗವೆಂದು ಅರ್ಥ ಹೇಳಿಲ್ಲ. ಕರ್ತೃತ್ವ ಫಲಮಮತಾದಿಗಳನ್ನು ತ್ಯಜಿಸಿ ಕರ್ತವ್ಯ ಕರ್ಮಗಳನ್ನು ಚೆನ್ನಾಗಿ ಆಚರಿಸುವುದೇ ಕರ್ಮ ಸನ್ಯಾಸವೆಂದು ಅರ್ಥ ಮಾಡಿದ್ದಾರೆ. ಕರ್ಮಯೋಗಿಯು ನನ್ನ ಶರೀರವು ಇಂದ್ರಿಯಗಳ ಮೂಲಕ ಕರ್ಮ ಮಾಡುತ್ತಿದೆ. 'ನೈವ-ಕಿಂಚಿತ್ ಕರೋಮಿ' ಅಂದರೆ ಆತ್ಮನಾದ ನಾನು ಯಾವ ಕರ್ಮವನ್ನೂ ಮಾಡುತ್ತಿಲ್ಲ ಎಂದು ಅನುಸಂಧಾನ ಮಾಡುತ್ತಾ ''ಸರ್ವ ಕರ್ಮಾಣಿ ಮನಸಾ ಸನ್ಯಸ್ಯ ಆಸ್ತೇ ಸುಖಂವಶೀ'' - ಅಂದರೆ ಜಿತೇಂದ್ರಿಯನಾದ ಅವನು ಶರೀರದ ಮೂಲಕ ಕರ್ಮ ಮಾಡುತ್ತಿದ್ದರೂ ಮಾನಸಿಕವಾಗಿ ಸರ್ವಕರ್ಮಗಳ ಕರ್ತೃತ್ವ ಫಲ ಮಮಕಾರರಹಿತನಾಗಿ ತಾನು ಏನನ್ನೂ ಮಾಡದೆ ಮಾಡಿಸದೆ ಸರ್ವದಾ ಶಾಂತನಾಗಿ ಸುಖವಾಗಿ ಇರುತ್ತಾನೆ ಎಂದು ಈ ಅಧ್ಯಾಯದಲ್ಲಿ ವಿವರಿಸಿ ತಿಳಿಸಿರುವುದರಿಂದ ಇದಕ್ಕೆ ಕರ್ಮ ಸನ್ಯಾಸಯೋಗ ಎಂದು ಹೆಸರು ಬಂದಿದೆ.

ಈ ಅಧ್ಯಾಯದ ಸಾರಾಂಶವನ್ನು ಶ್ರೀ ಯಾಮುನಾಚಾರ್ಯರು ಅವರ ಗೀತಾರ್ಥ ಸಂಗ್ರಹದ 9ನೇ ಶ್ಲೋಕದಲ್ಲಿ ಹೀಗೆ ತಿಳಿಸಿದ್ದಾರೆ.

**ಕರ್ಮಯೋಗಸ್ಯ ಸೌಕರ್ಯಂ ಶೈಘ್ರ್ಯಂಕಾಶ್ಚನತದ್ವಿಧಾ ।**
**ಬ್ರಹ್ಮಜ್ಞಾನ ಪ್ರಕಾರಶ್ಚ ಪಂಚಮಾಧ್ಯಾಯ ಉಚ್ಯತೇ ॥**

ಅಂದರೆ ಜ್ಞಾನಯೋಗಾಚರಣೆಗಿಂತ ಕರ್ಮಯೋಗಾಚರಣೆಯೇ ಸುಲಭವಾದುದು, ಸುಖಕರವಾದುದು ಮತ್ತು ಕರ್ಮಯೋಗದಿಂದ ಶೀಘ್ರವಾಗಿ ಫಲ ಲಭಿಸುವುದು ಎಂಬುದನ್ನೂ ಅಕರ್ತೃತ್ವಾನುಸಂಧಾನದೊಡನೆ ಕರ್ಮವನ್ನು ಮಾಡುವ ರೀತಿಯನ್ನೂ, ಬ್ರಹ್ಮಶಬ್ದವಾಚ್ಯರಾದ ಜೀವಾತ್ಮರೆಲ್ಲಾ ಪ್ರಕೃತಿ ಸಂಬಂಧಗಳಿಂದ ಬಿಡಲ್ಪಟ್ಟವರಾದಾಗ ''ಜ್ಞಾನ'' ಎಂಬ ಆಕಾರದಿಂದ ಎಲ್ಲರೂ ಸಮರು ಎಂಬುದನ್ನೂ ಐದನೆಯ ಅಧ್ಯಾಯದಲ್ಲಿ ತಿಳಿಸಿದೆ.

*****

## ಆರನೆಯ ಅಧ್ಯಾಯ

# ಆತ್ಮಸಂಯಮ ಯೋಗ

ಆರನೆಯ ಅಧ್ಯಾಯದ ವಿಷಯ ಸೂಚಿಕೆ :

I ಕರ್ಮಯೋಗಿಯು ಅನುಷ್ಠಿಸುವ ಆತ್ಮ ಚಿಂತನರೂಪ ಧ್ಯಾನಯೋಗಾಭ್ಯಾಸ ಕ್ರಮ (ಶ್ಲೋಕಗಳು 1 ರಿಂದ 28)

1. ಧ್ಯಾನಯೋಗಕ್ಕೆ ಅರ್ಹತೆ ಪಡೆಯುವ ಮೊದಲು ಕರ್ಮಯೋಗಾನುಷ್ಠಾನ ಮಾಡಬೇಕು. (ಶ್ಲೋಕಗಳು 1 ರಿಂದ 4)
2. ಧ್ಯಾನ ಯೋಗಾಭ್ಯಾಸಕ್ಕೆ ಮೊದಲು ಮನಸ್ಸನ್ನು ನಿಗ್ರಹಿಸಬೇಕು. (ಶ್ಲೋಕಗಳು 5 ರಿಂದ 6)
3. ಧ್ಯಾನಯೋಗವನ್ನು ಆರಂಭಿಸಲು ಯೋಗ್ಯವಾದ ಅವಸ್ಥೆ (ಶ್ಲೋಕಗಳು 7 ರಿಂದ 9)
4. ಧ್ಯಾನಯೋಗವನ್ನು ಅನುಷ್ಠಿಸುವ ಕ್ರಮ (ಶ್ಲೋಕಗಳು 10ರಿಂದ 18)
   i) ಶರೀರಕ್ಕೆ ಸಂಬಂಧ ಪಟ್ಟ ಅಭ್ಯಾಸಗಳು
   ii) ಮನಸ್ಸಿಗೆ ಸಂಬಂಧಪಟ್ಟ ಅಭ್ಯಾಸಗಳು
   iii) ಇತರ ಅಭ್ಯಾಸಗಳು ಮತ್ತು ನಿಯಮಗಳು
5. ಆತ್ಮ ಚಿಂತನ ಮಾಡುವ ಯೋಗಿಯಲ್ಲಿ ಉಂಟಾಗುವ ಮಾನಸಿಕ ಪರಿವರ್ತನೆ (ಶ್ಲೋಕಗಳು 19 ರಿಂದ 23)
6. ಯೋಗಿಯು ಧ್ಯೇಯ ವಸ್ತುವಿನಲ್ಲಿ ಮನಸ್ಸನ್ನು ನಿಲ್ಲಿಸುವ ಕ್ರಮ (ಶ್ಲೋಕಗಳು 24, 25, 26)
7. ಆತ್ಮ ಚಿಂತನೆ ಮಾಡುವ ಯೋಗಿಗೆ ಲಭಿಸುವ ನಿರತಿಶಯ ಆನಂದ (ಶ್ಲೋಕಗಳು 27- 28)

II ಧ್ಯಾನಯೋಗ ನಿಷ್ಠರಾದ ಕರ್ಮಯೋಗಿಗಳ ನಾಲ್ಕು ಅವಸ್ಥೆಗಳು (ಶ್ಲೋಕಗಳು 29 ರಿಂದ 32)

III ಧ್ಯಾನಯೋಗಕ್ಕಾಗಿ ಮನಸ್ಸನ್ನು ಜಯಿಸಲು ಅವಶ್ಯಕವಾದ ಸಾಧನೆಗಳು ಅಭ್ಯಾಸ ವೈರಾಗ್ಯಾದಿಗಳು (ಶ್ಲೋಕಗಳು 33 ರಿಂದ 36)

IV ಧ್ಯಾನಯೋಗದ ಮಹಾತ್ಮೆ (ಶ್ಲೋಕಗಳು 37 ರಿಂದ 46)

V ಆತ್ಮ ಚಿಂತನರೂಪ ಧ್ಯಾನಯೋಗಕ್ಕಿಂತ ಪರಮಾತ್ಮ ಚಿಂತನ ರೂಪ ಭಕ್ತಿ ಯೋಗದ ಶ್ರೇಷ್ಠತೆ (ಶ್ಲೋಕ 47)

## ಉಪೋದ್ಘಾತ

ಮೊದಲು ಐದು ಐಧ್ಯಾಯಗಳಿಂದ ಅಂಗಗಳೊಡನೆ ಕರ್ಮಯೋಗವು ಹೇಳಲ್ಪಟ್ಟಿತು. ಈಗ ಈ ಆರನೆಯ ಅಧ್ಯಾಯದಲ್ಲಿ ಜ್ಞಾನಯೋಗ ಕರ್ಮಯೋಗಗಳಿಂದ ಸಾಧಿಸಲ್ಪಡುವ ಆತ್ಮಾವಲೋಕನರೂಪವಾದ ಯೋಗಾಭ್ಯಾಸ ವಿಧಿಯು ಹೇಳಲ್ಪಟ್ಟಿದೆ. ಈ ಅಧ್ಯಾಯದಲ್ಲಿ ಮುಖ್ಯವಾಗಿ ತಿಳಿಸಿರುವ ವಿಷಯಗಳೇನೆಂದರೆ ಆತ್ಮಚಿಂತನರೂಪ ಧ್ಯಾನಯೋಗಾಭ್ಯಾಸ ವಿಧಿಯೂ, ಧ್ಯಾನಯೋಗಿಗಳ ನಾಲ್ಕು ವಿಭಾಗಗಳೂ. ಅದಕ್ಕೆ ಬೇಕಾದ ಅಭ್ಯಾಸ ವೈರಾಗ್ಯಾದಿ ಸಾಧನೆಗಳೂ, ಧ್ಯಾನಯೋಗವು ವಿಧಿಸುವ ಪ್ರಕಾರ ಮತ್ತು ಯೋಗಭ್ರಷ್ಟನಾದವನ ಗತಿ ಮತ್ತು ಪರಮಾತ್ಮ ಚಿಂತನರೂಪಭಕ್ತಿಯೋಗದ ಶ್ರೇಷ್ಠತೆ ಇವೆಲ್ಲವೂ ಈ ಅಧ್ಯಾಯದಲ್ಲಿ ವಿವರಿಸಲ್ಪಟ್ಟಿವೆ.

I ಕರ್ಮಯೋಗಿಯು ಅನುಷ್ಠಿಸುವ ಆತ್ಮ ಚಿಂತನರೂಪ ಧ್ಯಾನಯೋಗಾಭ್ಯಾಸ ಕ್ರಮ (ಶ್ಲೋಕಗಳು 1 ರಿಂದ 28)

### 1. ಧ್ಯಾನಯೋಗಕ್ಕೆ ಅರ್ಹತೆ ಪಡೆಯುವ ಮೊದಲು ಕರ್ಮ ಯೋಗಾನುಷ್ಠಾನ ಮಾಡಬೇಕು. (ಶ್ಲೋಕಗಳು 1 ರಿಂದ 4)

ಶ್ರೀಕೃಷ್ಣನು ಹೇಳುತ್ತಾನೆ– ''ಕರ್ಮ ಫಲವನ್ನು ಅಪೇಕ್ಷಿಸದೆ ಕರ್ತವ್ಯ ಕರ್ಮವನ್ನು ಯಾವನು ಮಾಡುತ್ತಾನೆಯೋ ಅವನು ಯೋಗಿಯೂ, ಸನ್ಯಾಸಿಯೂ ಆಗಿದ್ದಾನೆ. ಅಂದರೆ ಅವನು ಜ್ಞಾನಯೋಗನಿಷ್ಠನೂ ಆಗಿದ್ದಾನೆ ಮತ್ತು ಕರ್ಮಯೋಗ ನಿಷ್ಠನೂ ಆಗಿದ್ದಾನೆ. ಅಗ್ನಿಕಾರ್ಯವಾದ ಯಜ್ಞ ಯಾಗಾದಿಗಳನ್ನು ಬಿಟ್ಟವನಾಗಲೀ, ಕರ್ಮ ಮಾಡದವ ನಾಗಲೀ, ಯೋಗಿಯೂ ಸನ್ಯಾಸಿಯೂ ಆಗಲಾರನು. ಏಕೆಂದರೆ

ಜ್ಞಾನಯೋಗಿಯು ಕೇವಲ ಜ್ಞಾನಾನುಷ್ಠಾನ ಒಂದನ್ನು ಮಾತ್ರ ಆಚರಿಸುತ್ತಾನೆ. ಆದರೆ ಕರ್ಮ ಯೋಗಿಯು ಕರ್ಮಾನುಷ್ಠಾನ ಮತ್ತು ಜ್ಞಾನಾನುಸಂಧಾನ ಎರಡನ್ನೂ ಆಚರಿಸುತ್ತಾನೆ. ಯಾವುದನ್ನು ಸನ್ಯಾಸ ಅಂದರೆ ಜ್ಞಾನಯೋಗವೆಂದು ಹೇಳುತ್ತಾರೆಯೋ ಅದನ್ನು ಕರ್ಮಯೋಗವೆಂದೂ ತಿಳಿ, ಏತಕ್ಕೆಂದರೆ ಮನಸ್ಸಿನ ಆಸೆಗಳಿಂದ ಉಂಟಾಗುವ ಸಂಕಲ್ಪಗಳನ್ನು ತ್ಯಾಗ ಮಾಡದ ಯಾವ ಪುರುಷನೂ ಕರ್ಮ ಯೋಗಿಯಾಗಲಾರನು. ಅಂದರೆ ಕರ್ಮಯೋಗದಲ್ಲಿಯೂ ಜ್ಞಾನಾಭ್ಯಾಸವು ಅಂತರ್ಗತವಾಗಿದೆ. ಜ್ಞಾನಯೋಗವನ್ನು ಹೊಂದಲು ಅಪೇಕ್ಷಿಸುವ ಯೋಗಿಗೆ ಫಲಾಪೇಕ್ಷೆ ಇಲ್ಲದೆ ಕರ್ಮಯೋಗವಾಗಿಕರ್ಮ ಮಾಡುವುದೇ ಸಾಧನವಾಗಿದೆ. ಜ್ಞಾನಯೋಗವನ್ನು ದೃಢವಾಗಿ ಹೊಂದಿ ಯೋಗಾರೂಢನಾಗಿರುವವನಿಗೆ ಸರ್ವಕರ್ಮನಿವೃತ್ತಿಯು ಆತ್ಮ ಸಾಕ್ಷಾತ್ಕಾರಕ್ಕೆ ಸಾಧನವಾಗುತ್ತದೆ. ಯಾವಾಗ ಕರ್ಮಯೋಗಿಯಾದ ಪುರುಷನು ಇಂದ್ರಿಯ ವಿಷಯಗಳಲ್ಲೂ ಮತ್ತು ಕರ್ಮ ಫಲಗಳಲ್ಲೂ ನಿಶ್ಚಯವಾಗಿ ಆಸಕ್ತಿ ಹೊಂದುವುದಿಲ್ಲವೋ ಆಗ ಅವನು ಸಮಸ್ತ ಸಂಕಲ್ಪಗಳನ್ನೂ ಬಿಟ್ಟ ಯೋಗಾರೂಢನಾಗುತ್ತಾನೆ. ಅವನು ಜ್ಞಾನ ಯೋಗಿ ಎಂದು ಹೇಳಲ್ಪಡುತ್ತಾನೆ.

## 2. ಧ್ಯಾನ ಯೋಗಾಭ್ಯಾಸಕ್ಕೆ ಮೊದಲು ಮನಸ್ಸನ್ನು ನಿಗ್ರಹಿಸಬೇಕು. (ಶ್ಲೋಕಗಳು 5 ರಿಂದ 6)

ಮನಸ್ಸಿನಿಂದ ಆತ್ಮನನ್ನು ಉದ್ಧಾರ ಮಾಡು, ಅಧೋಗತಿಗೆ ತಳ್ಳಬೇಡ. ಆತ್ಮನಿಗೆ ಮನಸ್ಸೇ ಬಂಧುವು ಮತ್ತು ಮನಸ್ಸೇ ಶತ್ರುವು. ಮನಸ್ಸನ್ನು ವಿಷಯಗಳಲ್ಲಿ ನುಗ್ಗಿಸದೆ ತಡೆದು ಜಯಿಸಿ ಆತ್ಮನಲ್ಲಿ ನಿಲ್ಲಿಸಿದರೆ ಆಗ ಆ ಸಾತ್ವಿಕವಾದ ಮನಸ್ಸು ಆತ್ಮನಿಗೆ ಬಂಧುವಾಗುತ್ತದೆ. ಮನಸ್ಸು ಕಂಡದ್ದನ್ನೆಲ್ಲಾ ಹುಡುಕಿ ಅವುಗಳಲ್ಲಿ ಓಡುತ್ತಿದ್ದರೆ ಅದು ಆತ್ಮನಲ್ಲಿ ನಿಲ್ಲುವುದಿಲ್ಲ, ಅಂಥಾ ಮನಸ್ಸು ಆತ್ಮನಿಗೆ ಶತ್ರುವಾಗುತ್ತದೆ. ಯಾವನು ತನ್ನ ವಿವೇಕದಿಂದ ತನ್ನ ಮನಸ್ಸನ್ನು ಜಯಿಸುವನೋ ಅಂತಹವನಿಗೆ ಅವನ ಮನಸ್ಸೇ ಬಂಧುವು, ಮನೋಜಯವಿಲ್ಲದವನಿಗೆ ಅವನ ಮನಸ್ಸೇ ಶತ್ರುವಿನಂತೆ ವರ್ತಿಸುತ್ತದೆ.

## 3. ಧ್ಯಾನಯೋಗವನ್ನು ಆರಂಭಿಸಲು ಯೋಗ್ಯವಾದ ಅವಸ್ಥೆ (ಶ್ಲೋಕಗಳು 7 ರಿಂದ 9)

ಮನಸ್ಸನ್ನು ಪ್ರಶಾಂತವಾಗಿ ಇಟ್ಟುಕೊಂಡು ಪ್ರಾಕೃತ ವಿಷಯದಲ್ಲಿ ಭೋಗ್ಯತ್ವ ಬುದ್ಧಿ ಇಲ್ಲದವನಾಗಿ, ಎಲ್ಲರಲ್ಲೂ ಸಮ ಬುದ್ಧಿ ಹೊಂದಿದವನಾಗಿರಬೇಕು. ಮನಸ್ಸನ್ನು

ಜಯಿಸಿ ಕಾಮಕ್ರೋಧಾದಿಗಳನ್ನು ನೀಗಿದ ಶಾಂತಾತ್ಮನ ಮನಸ್ಸು ಶೀತ, ಉಷ್ಣ ಸುಖದುಃಖಗಳಲ್ಲಿಯೂ, ಮಾನ ಅವಮಾನ ಮೊದಲಾದ ದ್ವಂದ್ವದಲ್ಲಿಯೂ ಕದಲದೆ ಪ್ರಶಾಂತವಾಗಿ ಇರುತ್ತದೆ. ಅಂತಹ ಪ್ರಶಾಂತವಾದ ಮನಸ್ಸುಳ್ಳ ಪುರುಷನಲ್ಲಿ ಪ್ರತ್ಯಗಾತ್ಮನು ಚೆನ್ನಾಗಿ ನೆಲೆಸಿರುತ್ತಾನೆ. ಯಾವನು ಜ್ಞಾನ ವಿಜ್ಞಾನಗಳಲ್ಲಿ ತೃಪ್ತಿಯನ್ನು ಪಡೆದಿರುವ ಮನಸ್ಸನ್ನು ಹೊಂದಿದ್ದಾನೆಯೋ, ನಿರ್ವಿಕಾರನಾಗಿದ್ದಾನೆಯೋ, ಜಿತೇಂದ್ರಿಯನಾಗಿದ್ದಾನೆಯೋ ಮತ್ತು ಮಣ್ಣು, ಕಲ್ಲು, ಹೊನ್ನು ಇವುಗಳನ್ನು ಸಮವಾಗಿ ಭಾವಿಸುತ್ತಾನೆಯೋ ಆ ಕರ್ಮಯೋಗಿಯು ಆತ್ಮಾವಲೋಕನವೆಂಬ ಯೋಗಾಭ್ಯಾಸಕ್ಕೆ ಅರ್ಹನು ಎಂದು ಹೇಳಲ್ಪಡುತ್ತಾನೆ. ಸಹೃದಯರು ಅಂದರೆ ಹಿತವನ್ನು ಕೋರುವವರು, ಸ್ನೇಹಿತರು, ಶತ್ರುಗಳು, ಉದಾಸೀನರು, ದ್ವೇಷಿಸುವವರು, ಬಂಧುಗಳು ಇವರೆಡರಲ್ಲಿಯೂ, ಸಾಧುಗಳಲ್ಲಿಯೂ, ಪಾಪಿಗಳಲ್ಲಿಯೂ ಸಮಬುದ್ಧಿ ಯಿಂದ ಇರುವವನು ವಿಶಿಷ್ಟನಾಗುತ್ತಾನೆ. ಸಾಧಾರಣ ಜನರಂತಿಲ್ಲದೆ ಶ್ರೇಷ್ಠನಾಗುತ್ತಾನೆ

## 4. ಧ್ಯಾನಯೋಗವನ್ನು ಅನುಷ್ಠಿಸುವ ಕ್ರಮ (ಶ್ಲೋಕಗಳು 10ರಿಂದ 18)

ಧ್ಯಾನ ಮಾಡುವ ಕಾಲದಲ್ಲಿ ಅನುಷ್ಠಿಸಬೇಕಾದ ಅಭ್ಯಾಸಗಳು-

**i) ಶರೀರಕ್ಕೆ ಸಂಬಂಧ ಪಟ್ಟ ಅಭ್ಯಾಸಗಳು- ಧ್ಯಾನಕ್ಕೆ ಕುಳಿತುಕೊಳ್ಳಲು ಯೋಗ್ಯವಾದ ಸ್ಥಳ -**

ಒಂದು ದೃಢವಾದ ಆಸನದ ಮೇಲೆ ಕುಳಿತುಕೊಂಡು ಧ್ಯಾನವನ್ನು ಮಾಡಬೇಕು. ಧ್ಯಾನ ಮಾಡುವ ಸ್ಥಳವು ಜನವರ್ಜಿತವಾಗಿಯೂ, ನಿಶ್ಶಬ್ದವಾಗಿಯೂ ಶುಚಿಯಾಗಿಯೂ ಇರಬೇಕು. ಯೋಗಿಯು ಜನಗಳಿಲ್ಲದ ಜಾಗದಲ್ಲಿ ತಾನು ಒಬ್ಬನೇ ಇರುವವನಾಗಿ, ಬುದ್ಧಿಯನ್ನೂ, ಮನಸ್ಸನ್ನೂ ವಶದಲ್ಲಿ ಇಟ್ಟುಕೊಂಡು ಯಾವುದರಲ್ಲೂ ಆಸೆಯಿಲ್ಲದವನಾಗಿ, ತನ್ನದೆಂಬ ಮಮತೆ ಇಲ್ಲದವನಾಗಿ ಯಾವಾಗಲೂ ಆತ್ಮನಲ್ಲೇ ಯುಕ್ತ ಮನಸ್ಕನಾಗಿ ಆತ್ಮಧ್ಯಾನ ಮಾಡಬೇಕು. ಪವಿತ್ರವಾದ ಸ್ಥಳದಲ್ಲಿ ಕೆಳಗೆ ದರ್ಭೆಗಳನ್ನೂ ಅದರ ಮೇಲೆ ಕೃಷ್ಣಾಜಿನವನ್ನೂ ಅದರ ಮೇಲೆ ಬಟ್ಟೆಯನ್ನೂ ಹಾಸಿ ಬಹಳ ಎತ್ತರವೂ ಇಲ್ಲದ, ಬಹಳ ತಗ್ಗೂ ಇಲ್ಲದ ಸ್ಥಿರವಾದ ಆಸನ ಒಂದನ್ನು ಮಾಡಿಕೊಂಡು, ಆಸನದ ಮೇಲೆ ಕುಳಿತುಕೊಂಡು, ನಿಯಮಿಸಿದ ಮನಸ್ಸು ಮತ್ತು ಇಂದ್ರಿಯ ವ್ಯಾಪಾರ ಉಳ್ಳವನಾಗಿ ಮನಸ್ಸನ್ನು ಚಲಿಸದಂತೆ ತಡೆದು ಆತ್ಮ ಶುದ್ಧಿಗಾಗಿ ಧ್ಯಾನಯೋಗವನ್ನು ಮಾಡಬೇಕು.

**ಧ್ಯಾನಯೋಗಕ್ಕೆ ಕುಳಿತುಕೊಳ್ಳುವ ರೀತಿ:-**

ಶರೀರವನ್ನೂ ಶಿರಸ್ಸನ್ನೂ ಕಂಠವನ್ನೂ ಸಮವಾಗಿ ಅಲ್ಲಾಡದಂತೆ ನಿಲ್ಲಿಸಿ ಕೊಂಡು ಕುಳಿತುಕೊಳ್ಳಬೇಕು. ಇತರ ದಿಕ್ಕುಗಳನ್ನು ನೋಡದೆ ತನ್ನ ಮೂಗಿನ ಅಗ್ರ ಭಾಗವನ್ನು ನೋಡುತ್ತಾ ಇರಬೇಕು. ಇವೆಲ್ಲವೂ ಏತಕ್ಕೆಂದರೆ ಶರೀರ ಬಾಗಿ ಕುಳಿತರೆ ಮತ್ತು ಕಣ್ಣು ಮುಚ್ಚಿ ಕುಳಿತರೆ ನಿದ್ರೆ ಬರುವ ಸಂಭವವುಂಟು. ನಿದ್ರೆ ಧ್ಯಾನಕ್ಕೆ ಶತ್ರು. ನಾಲ್ಕು ಕಡೆ ನೋಡುತ್ತಾ ಕುಳಿತರೆ ಮನಸ್ಸು ಚಲಿಸುತ್ತದೆ. ಏಕಾಗ್ರತೆ ಹೊಂದಲು ಕಷ್ಟ ಆದ್ದರಿಂದ ಬಾಹ್ಯ ಪ್ರಪಂಚವನ್ನು ಮರೆಯಲು ಪ್ರಯತ್ನಿಸುತ್ತಾ ಮೂಗಿನ ತುದಿಯನ್ನು ನೋಡುತ್ತಾ ಕುಳಿತುಕೊಳ್ಳಬೇಕು. ಎಂದು ಅಭಿಪ್ರಾಯ.

**ii) ಮನಸ್ಸಿಗೆ ಸಂಬಂದಪಟ್ಟ ಅಭ್ಯಾಸಗಳು**

1. ಪ್ರಶಾಂತವಾದ ಮನಸ್ಸನ್ನು ಹೊಂದಿರಬೇಕು. 2. ಭಯರಹಿತನಾಗಿರಬೇಕು 3. ಬ್ರಹ್ಮಚರ್ಯವ್ರತಪಾಲಕನಾಗಿರಬೇಕು. 4. ಮನಸ್ಸನ್ನು ಪರಮಾತ್ಮನಲ್ಲಿ ನೆಲೆಗೊಳಿಸಬೇಕು. ಈ ಅಧ್ಯಾಯದ ಹದಿನಾಲ್ಕನೆಯ ಶ್ಲೋಕದಲ್ಲಿ,

"**ಮನಃ ಸಂಯಮ್ಯ ಮಚ್ಚಿತ್ತಃ ಯುಕ್ತ ಆಸೀತ ಮತ್ಪರಃ**" ಅಂದರೆ ಮನಸ್ಸನ್ನು ನಿಗ್ರಹಿಸಿ ನನ್ನನ್ನೇ ಸ್ಮರಿಸುವವನಾಗಿರು" ಎಂದು ಮನಸ್ಸನ್ನು ಶಾಂತವಾಗಿಟ್ಟುಕೊಳ್ಳಲು ಒಂದು ಮುಖ್ಯವಾದ ಅಭ್ಯಾಸವನ್ನು ಶ್ರೀಕೃಷ್ಣನು ಉಪದೇಶಿಸಿದ್ದಾನೆ. "ಮನಸ್ಸನ್ನು ನಿಗ್ರಹಿಸಿ, ನನ್ನನ್ನೇ ಸ್ಮರಿಸುವವನಾಗಿ, ಜಾಗರೂಕನಾಗಿ, ನಾನೇ ಅತ್ಯಂತ ಶ್ರೇಷ್ಠ ಸಹಾಯಕನೆಂದು ನಂಬಿದವನಾಗಿ ನನ್ನನ್ನೇ ಚಿಂತಿಸುತ್ತಿರು.

ಈ ಪ್ರಕಾರವಾಗಿ ಸರ್ವದಾ ಮನಸ್ಸನ್ನು ನನ್ನೊಂದಿಗೆ ಸೇರಿಸಿ ನಿಶ್ಚಲ ಮನಸ್ಕನಾದ ಯೋಗಿಯು ಅಂದರೆ ಆತ್ಮಧ್ಯಾನಯೋಗ ನಿರತನಾದ ಪುರುಷನು ನನ್ನಲ್ಲೇ ನೆಲೆಯಾಗಿ ಇರುವ ಮೋಕ್ಷದ ಪರಾಕಾಷ್ಠರೂಪವಾದ ಶಾಂತಿಯನ್ನು ಅಂದರೆ ಪರಮ ಸುಖವನ್ನು ಹೊಂದುತ್ತಾನೆ" – ಎಂದು ಶ್ರೀಕೃಷ್ಣಪರಮಾತ್ಮನು ಹೇಳಿದ್ದಾನೆ.

**iii) ಧ್ಯಾನಯೋಗಿಯು ಸರ್ವ ಕಾಲದಲ್ಲೂ ಅನುಷ್ಠಿಸಬೇಕಾದ ಇತರ ಅಭ್ಯಾಸಗಳು**

ಇದಲ್ಲದೆ "ಆಹಾರ, ವಿಹಾರ, ಕರ್ಮ, ನಿದ್ರೆ, ಎಚ್ಚರ ಮುಂತಾದವುಗಳಲ್ಲೆಲ್ಲಾ ಮಿತವಾಗಿರಬೇಕು. ಹೆಚ್ಚಾಗಿ ಭೋಜನ ಮಾಡುವವನಿಗೂ, ಸ್ವಲ್ಪವೂ ಭೋಜನ

ಮಾಡದವನಿಗೂ, ಅತಿಯಾಗಿ ನಿದ್ರೆಮಾಡುವ ಸ್ವಭಾವವುಳ್ಳವನಿಗೂ, ಹಾಗೆಯೇ ಸದಾ ಜಾಗರಣೆಯಲ್ಲಿ ಇರುವವನಿಗೂ ಯೋಗವು ಸಿದ್ಧಿಸುವುದಿಲ್ಲ. ಆಹಾರ ವಿಹಾರಗಳಲ್ಲಿ ಮಿತವಾಗಿ, ಕರ್ಮಗಳಲ್ಲಿಯೂ ಮಿತವಾಗಿ, ನಿದ್ರೆ ಮತ್ತು ಎಚ್ಚರಗಳಲ್ಲಿ ಮಿತವಾಗಿ ಇರತಕ್ಕ ಯೋಗಿಗೆ ದುಃಖನಿವಾರಕವಾದ ಯೋಗವು ಸಿದ್ಧಿಸುವುದು.

### 5. ಆತ್ಮ ಚಿಂತನ ಮಾಡುವ ಯೋಗಿಯಲ್ಲಿ ಉಂಟಾಗುವ ಮಾನಸಿಕ ಪರಿವರ್ತನೆ (ಶ್ಲೋಕಗಳು 19 ರಿಂದ 23)

ಮನಸ್ಸು ಆತ್ಮನಲ್ಲಿಯೇ ವಿಶೇಷವಾಗಿ ನೆಲೆಸಿ ಯಾವಾಗ ಚಲಿಸದೇ ಇರುತ್ತದೆಯೋ ಆಗ ಅವನಿಗೆ ಸಮಸ್ತ ಕಾಮಗಳಲ್ಲಿಯೂ ಆಸೆಯು ಹೋಗಿ ಅವನು ಯೋಗಾರ್ಹನಾಗುತ್ತಾನೆ. ಹೇಗೆ ಗಾಳಿ ಬೀಸದಿರುವ ಸ್ಥಳದಲ್ಲಿರುವ ದೀಪವು ಅಲ್ಲಾಡದೆ ಚೆನ್ನಾಗಿ ಪ್ರಕಾಶಿಸುತ್ತದೆಯೋ ಹಾಗೆ ಯೋಗಾಭ್ಯಾಸದಲ್ಲಿ ನಿರತನಾಗಿರುವ, ನಿಯಮಿಸಲ್ಪಟ್ಟ ಮನಸ್ಸುಳ್ಳ ಯೋಗಿಯ ಆತ್ಮಸ್ವರೂಪವು ಚೆನ್ನಾಗಿ ಪ್ರಕಾಶಿಸುತ್ತದೆ. ಗಾಳಿ ಇಲ್ಲದಿರುವುದರಿಂದ ಅಲ್ಲಾಡದೆ ಕಾಂತಿಯಿಂದ ಪ್ರಕಾಶಿಸುತ್ತಿರುವ ದೀಪದ ಹಾಗೆ ಆತ್ಮನು ಸಕಲ ವ್ಯಾಪಾರಗಳನ್ನೂ ಬಿಟ್ಟು ಮನಸ್ಸಿನೊಂದಿಗೆ ಕೂಡಿರುವುದರಿಂದ ಇತರ ವ್ಯಾಪಾರಗಳು ಅವನ ಧರ್ಮಭೂತಜ್ಞಾನವನ್ನು ಕದಲಿಸುವುದಿಲ್ಲ. ಆದ್ದರಿಂದ ಅವನ ಆತ್ಮಸ್ವರೂಪವು ಕಾಂತಿಯಿಂದ ಕೂಡಿ ಪ್ರಕಾಶಿಸುತ್ತದೆ ಎಂದು ಅಭಿಪ್ರಾಯ. ಬಾಹ್ಯ ವಿಷಯಗಳಿಂದ ನಿರೋಧಿಸಲ್ಪಟ್ಟ ಯೋಗಿಯ ಮನಸ್ಸು ಆತ್ಮಚಿಂತನ ಯೋಗದಲ್ಲಿ ಏಕಾಗ್ರತೆಯಿಂದ ಇರುತ್ತದೆ. ಆ ಯೋಗಿಯು ಮನಸ್ಸಿನಲ್ಲಿ ಆತ್ಮನನ್ನು ಸಾಕ್ಷಾತ್ಕರಿಸುತ್ತಿರುವವನಾಗಿ ಆತ್ಮಚಿಂತನೆಯಲ್ಲೇ ಸಂತೋಷ ಹೊಂದುತ್ತಾನೆ. ಇಂದ್ರಿಯಗಳಿಗೆ ಗೋಚರಿಸದ ಮತ್ತು ಬುದ್ಧಿಯಿಂದ ಗ್ರಹಿಸಲು ಯೋಗ್ಯವಾದ ಸುಖವನ್ನು ಅರಿತವನಾಗಿ ಆತ್ಮಚಿಂತನ ಯೋಗಾಭ್ಯಾಸದಲ್ಲಿ ನಿರತನಾದ ಅವನು ಮತ್ತೆ ಆ ಯೋಗದಿಂದ ಚಲಿಸದೆ ಇರುತ್ತಾನೆ. ಯೋಗವನ್ನು ಹೊಂದಿದ ಮೇಲೆ ಅದಕ್ಕಿಂತ ಅಧಿಕವಾದ ಲಾಭವು ಮತ್ತೊಂದಿಲ್ಲವೆಂದು ತಿಳಿದು, ಯೋಗದಲ್ಲಿ ನಿರತನಾಗಿರುವ ಯೋಗಿಯು ಅತ್ಯಂತ ಅಧಿಕವಾದ ದುಃಖದಿಂದಲೂ ಅಲ್ಲಾಡಿಸಲ್ಪಡುವುದಿಲ್ಲ. ಹೀಗೆ ದುಃಖಸಂಬಂಧ ವಿಲ್ಲದ ಅದನ್ನು ಯೋಗವೆಂಬ ಹೆಸರುಳ್ಳದ್ದಾಗಿ ತಿಳಿದುಕೊಳ್ಳುವವನಾಗು. ಅಂತಹ ಯೋಗವನ್ನು ಉತ್ಸಾಹ, ಸಂತೋಷಗಳಿಂದ ಕೂಡಿದ ಮನಸ್ಸಿನಿಂದ ಆಚರಿಸಬೇಕು.

## 6. ಯೋಗಿಯು ಧ್ಯೇಯ ವಸ್ತುವಿನಲ್ಲಿ ಮನಸ್ಸನ್ನು ನಿಲ್ಲಿಸುವ ಕ್ರಮ (ಶ್ಲೋಕಗಳು 24, 25, 26)

ಮೇಲೆ ವಿವರಿಸಿರುವಂತೆ ಸಂತೋಷದಿಂದ ಈ ಯೋಗವನ್ನು ಆಚರಿಸಿ ಮನಸ್ಸು ಆತ್ಮಚಿಂತನೆಯಲ್ಲಿಯೇ ರಮಿಸಬೇಕಾದರೆ ಮೊದಲು ಇಂದ್ರಿಯಗಳನ್ನು ನಿಗ್ರಹಿಸಿ ಬಾಹ್ಯವಿಷಯಗಳಲ್ಲಿ ಹೋಗದಂತೆ ತಡೆದು, ಅದನ್ನು ಅಂತರ್ಮುಖವನ್ನಾಗಿ ಮಾಡಬೇಕಾಗುತ್ತದೆ. ಇದು ಬಹಳ ಕಷ್ಟಸಾಧ್ಯವಾದುದು. ಆದರೂ ಸ್ವಲ್ಪಸ್ವಲ್ಪವಾಗಿ ಅಭ್ಯಾಸ ಮಾಡುತ್ತಾ ಇದನ್ನು ಸಾಧಿಸಬೇಕೆಂದು ಈ ಶ್ಲೋಕಗಳಲ್ಲಿ ತಿಳಿಸಿದೆ. ಸಂಕಲ್ಪಜನ್ಯವಾದ ಸಕಲ ಕಾಮನೆಗಳನ್ನು ಸಂಪೂರ್ಣವಾಗಿ ಮನಸ್ಸಿನಿಂದ ತ್ಯಜಿಸಿ, ಇಂದ್ರಿಯಗಳನ್ನು ಬಾಹ್ಯವಿಷಯಗಳಲ್ಲಿ ಪ್ರವರ್ತಿಸದಂತೆ ಮನಸ್ಸಿನಿಂದ ನಿಗ್ರಹಿಸಬೇಕು. ವಿವೇಕಜ್ಞಾನದಿಂದ ನಿಧಾನವಾಗಿ ಮನಸ್ಸನ್ನು ತಡೆದು ಅದು ಆತ್ಮಚಿಂತನೆಯಲ್ಲಿ ನೆಲೆಗೊಳ್ಳುವಂತೆ ಮಾಡಿ ಮತ್ತಾವುದನ್ನೂ ಚಿಂತಿಸದೆ ಇರಬೇಕು. ಕಾಮಗಳನ್ನು ಶೀತೋಷ್ಣಾದಿಗಳ ಸ್ಪರ್ಶದಿಂದ ಉಂಟಾಗುವ ಸ್ಪರ್ಶಪ್ರಭವ ಕಾಮಗಳೆಂದೂ, ಪುತ್ರ ಕಳತ್ರ ಕ್ಷೇತ್ರಾದಿಗಳ ಕಾಮವನ್ನು ಸಂಕಲ್ಪಪ್ರಭವ ಕಾಮಗಳೆಂದೂ ಎರಡು ವಿಧವಾಗಿ ವಿಂಗಡಿಸಿ ತಿಳಿಸಿದ್ದಾರೆ. ಸ್ಪರ್ಶಜನಿತವಾದ ಶೀತೋಷ್ಣಾದಿಗಳ ಕಾಮವು ಶರೀರಕ್ಕೆ ಸಂಬಂಧಪಟ್ಟವುಗಳಾಗಿರುವುದರಿಂದ ಅವುಗಳ ಮೂಲಕ ಉಂಟಾಗುವ ಸುಖದುಃಖ ಗಳನ್ನು ಮನಸ್ಸಿನಿಂದ ತ್ಯಜಿಸಿ, ಸಮಸ್ತ ವಿಷಯಗಳಿಂದ ಇಂದ್ರಿಯಗಳನ್ನು ನಿರೋಧಿಸಲು ಪ್ರಯತ್ನಿಸಬೇಕು. ಸಂಕಲ್ಪಪ್ರಭವ ಕಾಮಗಳನ್ನು ಅಂದರೆ ಹೆಂಡತಿ, ಮಕ್ಕಳು, ಮನೆ ಬಾಗಿಲು ಮುಂತಾದವುಗಳಲ್ಲಿ ತನಗಿರುವ ಆಸೆ ಆಕಾಂಕ್ಷೆಗಳನ್ನು ಅವರಿಗೂ ತನಗೂ ಏನೂ ಸಂಬಂಧವಿಲ್ಲವೆಂಬ ಬುದ್ಧಿಯ ಮೂಲಕ ಮನಸ್ಸಿನಿಂದ ತ್ಯಜಿಸಲು ಪ್ರಯತ್ನಿಸಬೇಕು ಎಂದು ಅಭಿಪ್ರಾಯ. ಆದರೆ ಮನಸ್ಸು ಚಂಚಲ ಸ್ವಭಾವವನ್ನು ಹೊಂದಿರುವುದರಿಂದ ಅದು ಆತ್ಮಚಿಂತನದಲ್ಲಿ ಸ್ಥಿರವಾಗಿ ನಿಲ್ಲದೆ ವಿಷಯ ಚಿಂತನದಲ್ಲಿ ಚಲಿಸುತ್ತಾ ಇರುತ್ತದೆ. ಆದ್ದರಿಂದ ಯಾವ ಯಾವ ವಿಷಯಾನುಭವ ಸುಖಕ್ಕಾಗಿ ಚಂಚಲವಾದ ಮನಸ್ಸು ಆತ್ಮನಲ್ಲಿ ನಿಲ್ಲದೆ ಚಲಿಸುತ್ತದೆಯೋ ಆ ವಿಷಯಗಳಿಂದ ಮನಸ್ಸನ್ನು ಮೆಲ್ಲಮೆಲ್ಲನೆ ಬಲಾತ್ಕಾರದಿಂದ ಸೆಳೆದು, ಅವುಗಳ ಕಡೆ ಓಡದಂತೆ ತಡೆದು, ಅದು ಆತ್ಮನಲ್ಲಿಯೇ ವಶವಾಗುವಂತೆ ಮಾಡಬೇಕು.

## 7. ಆತ್ಮ ಚಿಂತನೆ ಮಾಡುವ ಯೋಗಿಗೆ ಲಭಿಸುವ ನಿರತಿಶಯ ಆನಂದ (ಶ್ಲೋಕಗಳು 27- 28)

ಹೀಗೆ ಮನಸ್ಸನ್ನು ವಿಷಯ ಚಿಂತನದಿಂದ ತಪ್ಪಿಸಿ ಆತ್ಮ ಚಿಂತನದಲ್ಲಿ ನಿಲ್ಲಿಸುವವನಿಗೆ ನಿರತಿಶಯ ಆನಂದವು ಲಭಿಸುತ್ತದೆ. ಮನಸ್ಸನ್ನು ಆತ್ಮನಲ್ಲಿಯೇ ಚಲಿಸದೆ ನಿಲ್ಲಿಸಿ ಅದರಿಂದ ಸಕಲಪಾಪಗಳನ್ನೂ ತೊಲಗಿಸಿ, ರಜೋಗುಣವನ್ನು ಬಿಟ್ಟು ಸ್ವಸ್ವರೂಪದಲ್ಲಿ ನಿಲ್ಲುವಂತಹ ಈ ಯೋಗಿಗೆ ಆತ್ಮಾನುಭವವೆಂಬುವ ಉತ್ತಮವಾದ ಸುಖವು ಸಿಕ್ಕುತ್ತದೆ. ಹೀಗೆ ಆತ್ಮಯೋಗದಲ್ಲಿರುವಂತಹವನು ಹಿಂದಿನ ಪಾಪಗಳೆಲ್ಲ ವನ್ನೂ ತೊಲಗಿಸಿಕೊಂಡು ಅದರಿಂದ ನಾಶವಿಲ್ಲದ ಸುಖವಾದ ಬ್ರಹ್ಮಾನುಭವ ರೂಪವಾದ ಆನಂದವನ್ನು ಸುಖವಾಗಿ ಹೊಂದುತ್ತಾನೆ."

## II ಧ್ಯಾನಯೋಗ ನಿಷ್ಠರಾದ ಕರ್ಮಯೋಗಿಗಳ ನಾಲ್ಕು ಅವಸ್ಥೆಗಳು (ಶ್ಲೋಕಗಳು 29 ರಿಂದ 32)

ಶ್ರೀಕೃಷ್ಣನು ಈ ನಾಲ್ಕು ಶ್ಲೋಕಗಳಲ್ಲಿ ಯೋಗಸಿದ್ಧಿ ಉಂಟಾದವನ ನಾಲ್ಕು ವಿಧವಾದ ಅವಸ್ಥೆಗಳನ್ನು ತಿಳಿಸುತ್ತಾನೆ. ಅವುಗಳಲ್ಲಿ ಒಂದಕ್ಕಿಂತ ಒಂದು ಉತ್ಕೃಷ್ಟವಾದ ಅವಸ್ಥೆಯಾಗಿದೆ.

**1.** "ಯೋಗದಿಂದ ಕೂಡಿದ ಮನಸ್ಸುಳ್ಳವನು ಸರ್ವತ್ರ ಸಮದೃಷ್ಟಿ ಪಡೆದವನಾಗಿ ತನ್ನನ್ನು ಸರ್ವಜೀವಿಗಳಲ್ಲಿರುವಂತೆ ಅಂದರೆ ಸರ್ವಜೀವಿಗಳಲ್ಲಿರುವ ಆತ್ಮನಿಗೆ ಸಮನಾಗಿ ನೋಡುತ್ತಾನೆ ಮತ್ತು ಸಮಸ್ತ ಜೀವಿಗಳಲ್ಲಿರುವ ಆತ್ಮರುಗಳನ್ನು ತನ್ನಲ್ಲಿರುವಂತೆ ಅಂದರೆ ತನ್ನಲ್ಲಿರುವ ಆತ್ಮನಿಗೆ ಸಮನಾಗಿ ನೋಡುತ್ತಾನೆ. ಇದು ಯೋಗ ಸಿದ್ಧಿಯ ಮೊದಲನೆಯ ಅವಸ್ಥೆಯು. ಇದರಲ್ಲಿ ಪ್ರಕೃತಿ ವಿಯುಕ್ತ ದೆಶೆಯಲ್ಲಿ ಆತ್ಮನಾದ ತಾನೂ, ಇತರರಲ್ಲಿ ಇರುವ ಆತ್ಮರುಗಳೂ ಎಲ್ಲರೂ ಜ್ಞಾನಾಕಾರತೆಯಿಂದ ಸಮಾನರು ಎಂದು ಅನುಸಂಧಾನ ಮಾಡುತ್ತಾ ಅದರ ಅನುಭವ ಪಡೆಯುವನು.

2. ಯಾವ ಆತ್ಮಾವಲೋಕವನ್ನು ಹೊಂದಿದ ಕರ್ಮಯೋಗಿಯು ಸಮಸ್ತ ಚೇತನರಲ್ಲೂ ಪರಮಾತ್ಮನಾದ ನನ್ನನ್ನು ನೋಡುವನೋ ಅಂದರೆ ನನಗೆ ಸಮಾನವಾದ ಆಕಾರವನ್ನು ನೋಡುವನೋ ಮತ್ತು ನನ್ನಲ್ಲಿ ಸಮಸ್ತ ಚೇತನರನ್ನು ನೋಡುವನೋ (ಸಮಸ್ತ ಚೇತನರಿಗೆ ಸಮವಾದ ಆಕಾರವನ್ನು ನೋಡುವನೋ) ಅವನಿಗೆ ನಾನು ಅದೃಶ್ಯನಾಗಿ ಇರುವುದಿಲ್ಲ. ಅಂದರೆ ಅವನಿಗೆ ನಾನು ಜೀವಿಗಳಲ್ಲಿ ಕಾಣಿಸುವುದರಿಂದ

ಅವನು ನನ್ನ ಭಕ್ತನಾಗುತ್ತಾನೆ. ಅಲ್ಲದೆ ನನಗೆ ಅವನು ಕಾಣಿಸುತ್ತಿರುವುದರಿಂದ ಅವನ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತೇನೆ. ಇದು ಎರಡನೆಯ ಅವಸ್ಥೆಯು. ಇದರಲ್ಲಿ ಪ್ರಕೃತಿ ವಿಯುಕ್ತ ದೆಶೆಯಲ್ಲಿ ಪುಣ್ಯ ಪಾಪರಹಿತರಾದ ಆತ್ಮರಿಗೂ ಪರಮಾತ್ಮನಿಗೂ ಇರುವ ಸಾಮ್ಯತೆಯನ್ನು ಅನುಸಂಧಾನ ಮಾಡುತ್ತಾ ಅದರ ಅನುಭವ ಪಡೆಯುವನು.

3. ಸಮಸ್ತ ಪ್ರಾಣಿವರ್ಗಕ್ಕೂ ಅಂತರಾತ್ಮನಾಗಿರುವ ಎಂದರೆ ಸಮಸ್ತ ಚೇತನರುಗಳನ್ನೂ ತನ್ನ ಶರೀರವಾಗಿ ಹೊಂದಿ ಅವರುಗಳಿಗೆಲ್ಲ ಆತ್ಮವಾಗಿ ಇರುವ ವಿಶ್ವವ್ಯಾಪಿಯಾದ ನನ್ನನ್ನು (ಪ್ರಕೃತಿ ವಿಯುಕ್ತ ದೆಶೆಯಲ್ಲಿ) ಅಕರ್ಮವಶ್ಯತೆ ಮತ್ತು ಜ್ಞಾನೈಕಾಕಾರತೆಗಳಿಂದ ಸಮತ್ವದೊಂದಿಗೆ ಏಕತ್ವವನ್ನು ಬದ್ಧ ದೆಶೆಯಲ್ಲೂ ಮುಕ್ತ ದೆಶೆಯಲ್ಲೂ, ಯಾವನು ಧ್ಯಾನಿಸುವನೋ ಅವನು ಯಾವ ಪ್ರಕಾರದಲ್ಲಿ ಇದ್ದರೂ ಅಂದರೆ ಧ್ಯಾನಕಾಲದಲ್ಲೂ ಮತ್ತು ಧ್ಯಾನವಿಲ್ಲದ ಕಾಲದಲ್ಲೂ ನನ್ನಲ್ಲಿಯೇ ಇರುತ್ತಾನೆ. ಅಂದರೆ ನನ್ನನ್ನು ತನ್ನಲ್ಲಿ ಮತ್ತು ಇತರರಲ್ಲಿ ಅಂತರಾತ್ಮನಾಗಿ ಸೇರಿ ಇರುವವನಾಗಿ ನೋಡುತ್ತಾನೆ. ಇದು ಮೂರನೆಯ ಅವಸ್ಥೆಯು. ಇದರಲ್ಲಿ ಎಲ್ಲಾ ಆತ್ಮರುಗಳಲ್ಲಿಯೂ ಪರಮಾತ್ಮನು ಅಂತರ್ಯಾಮಿಯಾಗಿರುವುದರಿಂದ ತನ್ನಲ್ಲೂ ಇತರರಲ್ಲೂ ಪರಮಾತ್ಮನ ಅಂತರ್ಯಾಮಿತ್ವವನ್ನು ಅನುಸಂಧಾನ ಮಾಡುತ್ತಾ ಶರೀರಾತ್ಮಭಾವದಿಂದ ಪರಮಾತ್ಮನೊಂದಿಗೆ ಐಕ್ಯತೆಯ ಅನುಭವ ಪಡೆಯುತ್ತಾನೆ.

4. ಎಲ್ಲರ ಸುಖವನ್ನಾಗಲೀ, ದುಃಖವನ್ನಾಗಲೀ ತನಗೇ ಸಂಭವಿಸಿದಂತೆ ಯಾವನು ಸಮಬುದ್ಧಿಯಿಂದ ನೋಡುತ್ತಾನೆಯೋ ಅವನು ಎಲ್ಲರಿಗಿಂತ ಶ್ರೇಷ್ಠನು. ಅಂದರೆ ಯೋಗದ ಅತ್ಯಂತ ಮೇಲಾದ ದೆಶೆಯನ್ನು ಹೊಂದಿದ ಸರ್ವಶ್ರೇಷ್ಠನು. ಇದೇ ನಾಲ್ಕನೆಯ ಅವಸ್ಥೆಯು, ಪ್ರಕೃತಿ ವಿಯುಕ್ತ ದೆಶೆಯಲ್ಲಿ ಜೀವಾತ್ಮರಿಗೂ, ಅವರ ಪ್ರಕೃತಿಗೆ (ಶರೀರಕ್ಕೆ) ಸಂಬಂಧಪಟ್ಟ ಚೇತನಾಚೇತನ ವಸ್ತುಗಳಿಗೂ ಯಾವ ಸಂಬಂಧವೂ ಇಲ್ಲವೆಂದು ಅನುಸಂಧಾನ ಮಾಡುತ್ತಾ, ಅದರ ಅನುಭವ ಪಡೆದ ಯೋಗಿಯು ಬಂಧುಗಳ ಹುಟ್ಟುಸಾವುಗಳಿಂದಲೂ, ಹೊಲ, ಗದ್ದೆ, ಮನೆ ಮುಂತಾದ ಸಂಪತ್ತುಗಳ ಲಾಭನಷ್ಟಗಳಿಂದಲೂ ಉಂಟಾಗುವ ಸುಖದುಃಖಗಳ ಗಂಧವೇ ಇಲ್ಲದ ನಿರ್ವಿಕಾರ ದೆಶೆ ಹೊಂದುತ್ತಾನೆ. ಆತ್ಮರುಗಳ ಸುಖದುಃಖಸಂಬಂಧರಹಿತವಾದ ಸಾಮ್ಯಾನುಸಂಧಾನ ಮಾಡುವ ಅವನು ತನ್ನ ಮತ್ತು ಇತರರ ಸುಖದುಃಖಗಳಲ್ಲಿ ತಾರತಮ್ಯ ಹೊಂದದೆ ಸಮನಾಗಿ ನೋಡುವವನಾಗುತ್ತಾನೆ."

## III ಧ್ಯಾನಯೋಗಕ್ಕಾಗಿ ಮನಸ್ಸನ್ನು ಜಯಿಸಲು ಅವಶ್ಯಕವಾದ ಸಾಧನೆಗಳು - ಅಭ್ಯಾಸ ವೈರಾಗ್ಯಾದಿಗಳು (ಶ್ಲೋಕಗಳು 33 ರಿಂದ 36)

ಯೋಗಸಿದ್ಧಿಯಿಂದ ಉಂಟಾಗುವ ಈ ನಾಲ್ಕು ಅವಸ್ಥೆಗಳನ್ನೂ ಕೇಳಿದ ಮೇಲೆ ಅರ್ಜುನನಿಗೆ ತಾನು ಇನ್ನೂ ಮೊದಲಿನ ಅವಸ್ಥೆಯನ್ನೇ ಹೊಂದಿಲ್ಲವೆಂಬ ಅರಿವುಂಟಾಗಿ ಅವನು ಶ್ರೀಕೃಷ್ಣನನ್ನು ''ಮಧುಸೂದನ! ನೀನು ಉಪದೇಶಿಸಿದ, ಸಮಸ್ತ ಜೀವಿಗಳಲ್ಲಿ ಸಮದರ್ಶನತ್ವವನ್ನು ಉಂಟುಮಾಡುವ ಸಮತ್ವದಿಂದ ಕೂಡಿದ ಈ ಯೋಗವು ನಮ್ಮಂಥಹವರಿಗೆ ನೆಲೆ ನಿಲ್ಲುವಂತೆ ನನಗೆ ತೋರಲಿಲ್ಲ. ಏಕೆಂದರೆ ಚಂಚಲವಾಗಿರುವ ಮನಸ್ಸನ್ನು ಪ್ರತ್ಯಕ್ಷವಾದ ವಿಷಯಗಳಲ್ಲಿ ನಿಲ್ಲಿಸುವಾಗಲೇ ಅದು ಒಂದನ್ನು ನೆನೆಯುವಾಗ, ಮತ್ತೊಂದಕ್ಕೆ ದಾಟುತ್ತದೆ. ಹೀಗಿರುವಾಗ ಪ್ರತ್ಯಕ್ಷವಾಗಿ ಕಾಣಿಸದ ಆತ್ಮನಲ್ಲಿ ಮನಸ್ಸನ್ನು ನೆಲೆಯಾಗಿ ನಿಲ್ಲಿಸಲು ಪ್ರಯತ್ನಪಡುವುದು ಸಾಧ್ಯವಾಗಬಲ್ಲುದೇ? ಅದು ಎದುರು ಗಾಳಿಯನ್ನು (ಒಂದು ಚಿಕ್ಕ ಬೀಸಣಿಗೆಯಿಂದ) ತಡೆಯುವ ಹಾಗೆ ತುಂಬಕಷ್ಟ ಸಾಧ್ಯವಾದುದೆಂದು ನಾನು ತಿಳಿಯುತ್ತೇನೆ. ಆದ್ದರಿಂದ ಮನಸ್ಸನ್ನು ತಡೆಯಲು ಅಥವಾ ಅಡಗಿಸಲು ಉಪಾಯವನ್ನು ತಿಳಿಸು'' ಎಂದು ಹೇಳಿದನು.

ಅರ್ಜುನನ ಮನಸ್ಸಿನ ಅಶಕ್ತತೆಯನ್ನು ಅರಿತ ಶ್ರೀ ಕೃಷ್ಣನು ಅವನಿಗೆ ಧೈರ್ಯ ಕೊಟ್ಟು ಹುರಿದುಂಬಿಸುತ್ತಾ ಈ ರೀತಿ ಹೇಳುತ್ತಾನೆ. ''ಎಲೈ ಅರ್ಜುನನೇ! ಚಂಚಲವಾದ ಮನಸ್ಸನ್ನು ಅಡಗಿಸುವುದು ಪ್ರಯಾಸವೇ! ಆದರೂ **ಅಭ್ಯಾಸ ವೈರಾಗ್ಯಾ**ದಿಗಳಿಂದ ಅದನ್ನು ಅಡಗಿಸಬಹುದು. ಆತ್ಮನು ಜ್ಞಾನಾನಂದ ಸ್ವರೂಪನು ಎಂದು ಸದಾ ಚಿಂತನೆ ಮಾಡುವ ಅಭ್ಯಾಸದಿಂದ ಅವನಲ್ಲಿ ಪ್ರೀತಿಯು ಉಂಟಾಗಿ ಅವನಲ್ಲಿಯೇ ಮನಸ್ಸು ನೆಲೆಸುತ್ತದೆ. ಇತರ ವಿಷಯಗಳು ಅಲ್ಪವೂ, ಅಸ್ಥಿರವೂ ಆಗಿ ದೋಷಭರಿತವಾಗಿವೆ ಎಂಬುದನ್ನು ಮನನ ಮಾಡುವ ಅಭ್ಯಾಸದಿಂದ ಅವುಗಳಲ್ಲಿ ವೈರಾಗ್ಯವು ಉಂಟಾಗಬಲ್ಲದು. ಮನಸ್ಸನ್ನು ಜಯಿಸದೇ ಇದ್ದರೆ ಯೋಗವು ಸಿದ್ಧಿಸುವುದು ಅತ್ಯಂತ ದುರ್ಲಭವು. ಆದ್ದರಿಂದ ಆತ್ಮನಲ್ಲಿ ಪ್ರೀತಿಯನ್ನೂ ಇತರ ವಿಷಯಗಳಲ್ಲಿ ವೈರಾಗ್ಯವನ್ನೂ ಬೆಳಸಿಕೊಳ್ಳುವ ಅಭ್ಯಾಸದಿಂದ ಮನಸ್ಸನ್ನು ಸ್ವಾಧೀನಪಡಿಸಿಕೊಳ್ಳಬೇಕು. ಭಗವಂತನ ಆರಾಧನ ರೂಪವಾಗಿ ಕರ್ಮ ಮಾಡುವುದರ ಮೂಲಕ ಉಪಾಯವಾಗಿ ಮನಸ್ಸನ್ನು ಜಯಿಸಿದವನಿಗೆ ಎಲ್ಲವನ್ನೂ ಸಮನಾಗಿ ನೋಡುವಂಥಾ ಈ ಸಮದರ್ಶನಯೋಗವು ಸುಲಭವಾಗಿ ಸಿದ್ಧಿಸುವುದು''.

## IV ಧ್ಯಾನಯೋಗದ ಮಹಾತ್ಮೆ (ಶ್ಲೋಕಗಳು 37 ರಿಂದ 46)

ಯೋಗಾಭ್ಯಾಸವನ್ನು ಆರಂಭಿಸಿ ಯೋಗ ಭ್ರಷ್ಟನಾದವನ ಗತಿ ಏನು ಎಂಬ ಶಂಕೆ ಹೊಂದಿದವನಾಗಿ ಅರ್ಜುನನು ಶ್ರೀ ಕೃಷ್ಣನನ್ನು ಪ್ರಶ್ನೆಮಾಡಿ ಕೇಳುತ್ತಾನೆ. ''ಎಲೈ ಸ್ವಾಮಿಯೇ, ಅತ್ಯಂತ ಶ್ರದ್ಧೆಯಿಂದ ಯೋಗ ಸಾಧನೆಯಲ್ಲಿ ನಿರತನಾದ ಸಾಧಕನು ಅದನ್ನು ದೃಢವಾಗಿ ಅಭ್ಯಾಸ ಮಾಡಲು ಅಶಕ್ತನಾಗಿ ಅದರಿಂದ ಯೋಗ ಸಿದ್ಧಿಯನ್ನು ಹೊಂದದೆ ಯೋಗದಿಂದ ವಿಚಲಿತ ಮನಸ್ಸುಳ್ಳವನಾದರೆ ಅವನ ಗತಿ ಏನು? ಒಂದು ದೊಡ್ಡ ಮೇಘದಿಂದ ಕತ್ತರಿಸಲ್ಪಟ್ಟ ಒಂದು ಸಣ್ಣ ಮೇಘವು ಮತ್ತೊಂದು ದೊಡ್ಡ ಮೇಘವನ್ನು ಹೊಂದಲಾರದೆ ಮಧ್ಯದಲ್ಲಿ ನಾಶ ಹೊಂದುವ ಹಾಗೆ ಯೋಗಭ್ರಷ್ಟನಾದ ಈ ಸಾಧಕನೂ ಉಭಯಭ್ರಷ್ಟನಾಗಿ ನಾಶ ಹೊಂದುತ್ತಾನೆಯೇ? ಅಥವಾ ಇವನ ಕ್ಷೇಮಕ್ಕೆ ಮಾರ್ಗವುಂಟೇ? ಈ ಸಂಶಯವನ್ನು ಚೆನ್ನಾಗಿ ಹೋಗಲಾಡಿಸಬೇಕೆಂದು ಪ್ರಾರ್ಥಿಸುತ್ತೇನೆ. ನಿನ್ನ ಹೊರತು ಮತ್ತಾರಿಂದಲೂ ಈ ಸಂಶಯವು ಹೋಗಲಾಡಿಸಲ್ಪಡಲಾರದು. ಆದ್ದರಿಂದ ಕೃಪೆ ಮಾಡಿ ನೀನೇ ಹೇಳಬೇಕು'' ಎಂದು ಪ್ರಾರ್ಥಿಸುತ್ತಾನೆ. ಇದಕ್ಕೆ ಉತ್ತರವಾಗಿ, ಯೋಗಭ್ರಷ್ಟನು ಉತ್ತಮ ಜನ್ಮಹೊಂದಿ ಉತ್ತಮ ಗತಿಯನ್ನೇ ಹೊಂದುತ್ತಾನೆ ಎಂದು ಶ್ರೀ ಕೃಷ್ಣನು ತಿಳಿಸುತ್ತಾನೆ. ''ಎಲೈ ಅರ್ಜುನನೇ ಆಸ್ಥೆಯಿಂದ ಯೋಗದಲ್ಲಿಳಿದವನು ಅದರಿಂದ ಜಾರಿದವನಾದರೆ ಅವನಿಗೆ ಈ ಲೋಕದಲ್ಲಾಗಲೀ, ಪರಲೋಕದಲ್ಲಾಗಲೀ ವಿನಾಶವೆಂಬುದಿಲ್ಲ. ಒಳ್ಳೆಯ ಕೆಲಸ ಮಾಡುವವನಿಗೆ ಎಂದೂ ದುರ್ಗತಿ ಉಂಟಾಗುವುದಿಲ್ಲ. ಯೋಗಭ್ರಷ್ಟನಾದವನು, ಪುಣ್ಯ ಮಾಡಿದವನಿಗೆ ಲಭಿಸಲು ಯೋಗ್ಯವಾದ ಸ್ವರ್ಗಾದಿ ಲೋಕಗಳನ್ನು ಹೊಂದಿ ಅಲ್ಲಿ ಶಾಶ್ವತವಾಗಿ ಬಹಳ ವರ್ಷಗಳ ಕಾಲ ವಾಸ ಮಾಡುತ್ತಾನೆ. ಅನಂತರ ಯೋಗ ಸಾಧನೆಗೆ ಯೋಗ್ಯವಾದ ಶೀಲವಂತರ ಮತ್ತು ಶ್ರೀಮಂತರ ಮನೆಯಲ್ಲಿ ಹುಟ್ಟುತ್ತಾನೆ. ಯೋಗವು ಕೈಗೂಡುವ ಸಮಯದಲ್ಲಿ ಅವನು ಚ್ಯುತಿಯನ್ನು ಹೊಂದಿದರೆ ಯೋಗ ಸಾಧನೆ ಮಾಡುತ್ತಿರುವ ಮತ್ತು ಇತರರಿಗೆ ಯೋಗದ ಉಪದೇಶ ಮಾಡುತ್ತಿರುವ ಯೋಗಿಗಳಾದ ಮಹಾತ್ಮರ ಕುಲದಲ್ಲಿ ಹುಟ್ಟುತ್ತಾನೆ. ಹೀಗೆ ಯೋಗ ಸಾಧನೆಗೆ ಉಪಯುಕ್ತರಾದ ಶೀಲವಂತರ ಮನೆಗಳಲ್ಲೂ ಯೋಗ ಮಾಡುತ್ತಿರುವ ಯೋಗಿಗಳ ಕುಲದಲ್ಲೂ ಹುಟ್ಟುವುದೆಂಬುದು ಲೋಕದಲ್ಲಿ ಸಾಧಾರಣವಾಗಿ ಎಲ್ಲರಿಗೂ ಲಭಿಸತಕ್ಕದ್ದಲ್ಲ. ಇದು ಕೇವಲ ಯೋಗ ಮಹಾತ್ಮೆಯಿಂದ ಲಭಿಸತಕ್ಕದ್ದಾಗಿದೆ. ಇವನು ಹಿಂದಿನ

ಜನ್ಮದಲ್ಲಿ ಅಭ್ಯಾಸ ಮಾಡಿದ ಯೋಗ ಬುದ್ಧಿಯನ್ನೇ ಇಟ್ಟುಕೊಂಡು ನಿದ್ರೆಯಿಂದ ಎಚ್ಚರಗೊಂಡವನ ಹಾಗೆ ಪುನಃ ಆ ಯೋಗ ಸಿದ್ಧಿಗಾಗಿಯೇ ಪ್ರಯತ್ನ ಮಾಡುತ್ತಾನೆ. ಇವನು ಹಿಂದಿನ ಜನ್ಮದಲ್ಲಿ ಮಾಡಿದ ಅಭ್ಯಾಸವೇ ಮುಂದಿನ ಜನ್ಮದಲ್ಲಿ ಇವನನ್ನು ಪುನಃ ಆ ಮಾರ್ಗದಲ್ಲಿಯೇ ತಾನಾಗಿಯೇ ಎಳೆಯುತ್ತದೆ. ಯೋಗದ ಮಹಾತ್ಮೆಯನ್ನು ತಿಳಿಯಬೇಕೆಂದು ಆಸೆ ಉಳ್ಳವನೂ ಕೂಡ ಪ್ರಕೃತಿಯನ್ನು ದಾಟಲು ಶಕ್ತನಾಗುತ್ತಾನೆ. ಯೋಗದ ಮಹಾತ್ಮೆಯನ್ನು ಚಿಂತಿಸಿದ ಅವನಿಗೂ ಶ್ರೇಯಸ್ಸುಂಟು. ಅವನೂ ಕಾಲಕ್ರಮದಲ್ಲಿ ಯೋಗಾಭ್ಯಾಸದಲ್ಲಿ ನಿರತನಾಗಿ ಉತ್ತಮ ಗತಿಯನ್ನು ಹೊಂದುವನು. ಹೀಗೆ ಇಂಥಾ ಯೋಗದ ಮಹಿಮೆಯು ಎಲ್ಲೆಲ್ಲೂ ಪ್ರಸಿದ್ಧವು. ಯೋಗಭ್ರಷ್ಟನು ತಾನು ಅನುಷ್ಠಿಸಿದ ಅಲ್ಪಯೋಗಾಭ್ಯಾಸದ ಮಹಾತ್ಮೆಯಿಂದಲೇ ಉತ್ತಮ ಗತಿ ಹೊಂದುತ್ತಾನೆ.

ಯೋಗಾಭ್ಯಾಸವನ್ನು ಪ್ರಾರಂಭಿಸಿದವನು ಜನ್ಮಜನ್ಮಾಂತರದಲ್ಲಿಯಾದರೂ ಯೋಗಸಿದ್ಧಿಯನ್ನು ಹೊಂದುವನು. ಪ್ರಯತ್ನಪೂರ್ವಕವಾಗಿ ಸಾಧನೆ ಮಾಡುತ್ತಾ ಪಾಪಗಳಿಂದ ಸಂಪೂರ್ಣವಾಗಿ ಬಿಡಲ್ಪಟ್ಟು ಪರಿಶುದ್ಧನಾದ ಯೋಗಿಯು ಅನೇಕ ಜನ್ಮಗಳಲ್ಲಿ ಯೋಗ ಸಿದ್ಧಿಯನ್ನು ಹೊಂದಿ ಉತ್ತಮ ಗತಿಯನ್ನು ಹೊಂದುವನು. ಫಲಾಸಕ್ತಿ ರಹಿತವಾದ ಕರ್ಮಯೋಗದಿಂದ ಸಾಧಿಸಲ್ಪಡುವ ಆತ್ಮಚಿಂತನರೂಪವಾದ ಧ್ಯಾನಯೋಗವು ಶ್ರೇಷ್ಠವಾದುದು. ಆತ್ಮಧ್ಯಾನನಿರತನಾದ ಕರ್ಮಯೋಗಿಯು ಫಲಾಪೇಕ್ಷೆಯಿಂದ ಕೂಡಿದ ತಪಸ್ವಿಗಳಿಗಿಂತ ಶ್ರೇಷ್ಠನು, ಜ್ಞಾನಿಗಳಿಗಿಂತ ಶ್ರೇಷ್ಠನು ಮತ್ತು ಕಾಮ್ಯಕರ್ಮಿಗಳಿಗಿಂತ ಶ್ರೇಷ್ಠನು. ಆದುದರಿಂದ ಅರ್ಜುನನೇ ! ನೀನು ಆತ್ಮಧ್ಯಾನ ಪರನಾದ ಕರ್ಮಯೋಗಿಯಾಗು''

## V ಆತ್ಮ ಚಿಂತನರೂಪ ಧ್ಯಾನಯೋಗಕ್ಕಿಂತ ಪರಮಾತ್ಮ ಚಿಂತನ ರೂಪ ಭಕ್ತಿ ಯೋಗದ ಶ್ರೇಷ್ಠತೆ (ಶ್ಲೋಕ 47)

ಎಲ್ಲ ಯೋಗಿಗಳೂ ಶ್ರೇಷ್ಠರು ಎಂಬುದು ನಿಜವು. ಆದರೆ ಅವರಲ್ಲಿ ಶ್ರದ್ಧಾವಂತನಾಗಿ, ಪರಮಾತ್ಮನಾದ ನನ್ನಲ್ಲಿ ಆಸಕ್ತವಾದ ಮನಸ್ಸುಳ್ಳವನಾಗಿ ಯಾವನು ನನ್ನನ್ನು ಭಜಿಸುತ್ತಾನೆಯೋ ಅವನು ಶ್ರೇಷ್ಠತಮನು ಅಂದರೆ ಭಕ್ತಿಯೋಗಿಯೇ ಅತ್ಯಂತ ಶ್ರೇಷ್ಠನಾದ ಯೋಗಿಯೆಂದು ನನ್ನ ಅಭಿಪ್ರಾಯ. ಆದುದರಿಂದ ನೀನು ಯೋಗಿಗಳಲ್ಲೆಲ್ಲಾ ಶ್ರೇಷ್ಠನಾದ ಭಕ್ತಿಯೋಗಿಯಾಗುವ ಮಾರ್ಗವನ್ನು ಹೊಂದಲು ಪ್ರಯತ್ನಿಸು'' ಎಂದು ಅರ್ಜುನನಿಗೆ ಶ್ರೀ ಕೃಷ್ಣನು ಉಪದೇಶ ನೀಡಿದ್ದಾನೆ.

ಎರಡನೆಯ ಅಧ್ಯಾಯದಲ್ಲಿ ಪ್ರಾರಂಭಿಸಿ ಆರನೆಯ ಅಧ್ಯಾಯ ಪೂರ್ತಿ ಭಗವತ್ ಸ್ವರೂಪ ಜ್ಞಾನಪ್ರಾಪ್ತಿಗೆ ಅಂಗವಾಗಿ ಪ್ರತ್ಯಗಾತ್ಮದರ್ಶನವು ಹೇಳಲ್ಪಟ್ಟಿತು. ಮುಂದಿನ ಆರು ಅಧ್ಯಾಯಗಳಿಂದ ಭಕ್ತಿಯೋಗವು ಹೇಳಲ್ಪಡುತ್ತದೆ. ಅದರ ಪ್ರಸ್ತಾವನೆಯು ಆರನೆಯ ಅಧ್ಯಾಯದ ಈ ಕೊನೆಯ ಶ್ಲೋಕದಲ್ಲಿಯೇ ಮಾಡಲ್ಪಟ್ಟಿದೆ. ಇತರ ಯೋಗಿಗಳಿಗೂ, ಭಗವಂತನಲ್ಲಿ ಧ್ಯಾನಪರನಾಗಿರುವ ಭಕ್ತಿ ಯೋಗಿಗೂ ಇರುವ ಅಂತರ ಅಷ್ಟಿಷ್ಟಲ್ಲ. ಮೇರುಪರ್ವತಕ್ಕೂ ಸಾಸುವೆ ಕಾಳಿಗೂ ಇರುವಷ್ಟು ಅಂತರವಿದೆ. ಇಷ್ಟೊಂದು ಅಂತರವಿರಲು ಕಾರಣವೇನೆಂದರೆ ಸರ್ವೇಶ್ವರನಾದ ಪರಮಾತ್ಮನು ಜೀವಾತ್ಮನಿಗಿಂತ ಅತ್ಯಂತ ಮೇಲಾದವನಾಗಿದ್ದಾನೆ. ಆದ್ದರಿಂದ ಪರಮಾತ್ಮಸಾಕ್ಷಾತ್ಕಾರವು ಜೀವಾತ್ಮಸಾಕ್ಷಾತ್ಕಾರಕ್ಕಿಂತ ಅತ್ಯಂತ ಮೇಲಾದುದು. ಯಾರು ಪರಮಾತ್ಮನಲ್ಲೇ ಸಕ್ತವಾದ ಮನಸ್ಸನ್ನು ಉಳ್ಳವನಾಗಿ, ಅವನಲ್ಲಿ ಭಕ್ತಿ ಹೊಂದಿ, ಅತ್ಯಂತ ಶ್ರದ್ಧೆಯಿಂದ ಅವನನ್ನು ಉಪಾಸಿಸುತ್ತಾನೆಯೋ ಅವನೇ ಎಲ್ಲಾ ಯೋಗಿಗಳಿಗಿಂತ ಶ್ರೇಷ್ಠತಮನೆಂದು ಅಭಿಪ್ರಾಯ. ಹೀಗೆ ಶ್ರೀಕೃಷ್ಣ ಪರಮಾತ್ಮನು ಶ್ರೇಷ್ಠವಾದ ಆತ್ಮಚಿಂತನ ರೂಪ ಧ್ಯಾನ ಯೋಗಕ್ಕಿಂತ ಪರಮಾತ್ಮಚಿಂತನ ರೂಪ ಭಕ್ತಿಯೋಗವೇ ಅತ್ಯಂತ ಶ್ರೇಷ್ಠವಾದುದು ಎಂದು ಹೇಳಿ ಆರನೆಯ ಅಧ್ಯಾಯವನ್ನು ಮುಕ್ತಾಯಗೊಳಿಸಿ ಮುಂದಿನ ಆರು ಅಧ್ಯಾಯಗಳಲ್ಲಿ ಭಕ್ತಿಯೋಗವನ್ನು ವಿವರವಾಗಿ ಪ್ರತಿಪಾದಿಸಿದ್ದಾನೆ.

ಈ ಆರನೆಯ ಅಧ್ಯಾಯದಲ್ಲಿ ಕರ್ಮಯೋಗಿಯು ಅಭ್ಯಾಸ, ವೈರಾಗ್ಯ, ಭಗವತ್‌ಚಿಂತನೆಗಳ ಮೂಲಕ ಸಾಧಿಸುವ ಮನೋನಿಗ್ರಹವೂ ಮತ್ತು ಅವನು ಅನುಷ್ಠಿಸುವ ಆತ್ಮಚಿಂತನರೂಪ ಧ್ಯಾನ ಯೋಗವೂ ವಿವರಿಸಲ್ಪಟ್ಟಿರುವುದರಿಂದ ಇದಕ್ಕೆ ಆತ್ಮಸಂಯಮಯೋಗವೆಂದು ಹೆಸರು. ಈ ಅಧ್ಯಾಯದ ಸಾರಾರ್ಥವನ್ನು ಶ್ರೀ ಯಾಮುನಾಚಾರ್ಯರು ಅವರ ಗೀತಾರ್ಥ ಸಂಗ್ರಹದ ಹತ್ತನೆಯ ಶ್ಲೋಕದಲ್ಲಿ ಹೀಗೆ ವಿವರಿಸಿ ತಿಳಿಸಿದ್ದಾರೆ.

**"ಯೋಗಾಭ್ಯಾಸ ವಿಧಿರ್ಯೋಗೀ ಚತುರ್ಧಾ ಯೋಗ ಸಾಧನಮ್।"**
**ಯೋಗ ಸಿದ್ಧಿಸ್ಸ್ವಯೋಗಸ್ಯ ಪಾರಮ್ಯಂ ಷಷ್ಠ ಉಚ್ಯತೇ ॥**

ಅಂದರೆ ಯೋಗಾಭ್ಯಾಸದ ಕ್ರಮವೂ, ಯೋಗಿಗಳ ನಾಲ್ಕು ವಿಧವಾದ ಅವಸ್ಥೆಯೂ, ಯೋಗಸಾಧನೆಗಳೂ, ಯೋಗಸಿದ್ಧಿಯೂ, ಆತ್ಮಸಾಕ್ಷಾತ್ಕಾರ ಯೋಗಕ್ಕಿಂತ ಭಗವತ್‌ಸಾಕ್ಷಾತ್ಕಾರವನ್ನು ಉಂಟು ಮಾಡುವ ಭಕ್ತಿಯೋಗದ ಶ್ರೇಷ್ಠತೆಯೂ ಆರನೆಯ ಅಧ್ಯಾಯದಲ್ಲಿ ತಿಳಿಸಿದೆ.

*****

## ಏಳನೆಯ ಅಧ್ಯಾಯ

# ಜ್ಞಾನ ವಿಜ್ಞಾನ ಯೋಗ

**ವಿಷಯ ಸೂಚಿಕೆ :**

**ಉಪೋದ್ಘಾತ :**

I ಪರಮಾತ್ಮನ ನಿಜಸ್ವರೂಪ (ಶ್ಲೋಕಗಳು 1 ರಿಂದ 12)

1. ಭಕ್ತಿಯೋಗಾಭ್ಯಾಸದಲ್ಲಿ ನಿರತನಾಗು (ಶ್ಲೋಕಗಳು 1 ರಿಂದ 3)
2. ಪರಮ ಪುರುಷನ ನಿಜಸ್ವರೂಪ (ಶ್ಲೋಕಗಳು 4 ರಿಂದ 12)
3. ಪ್ರಕೃತಿ ಸಂಬಂಧದಿಂದ ಪರಮಾತ್ಮನ ನಿಜಸ್ವರೂಪವು ಮರೆಯಾಗಿ ಹೋಗಿರುವಿಕೆ (ಶ್ಲೋಕ 13)
4. ಮಾಯಾ ನಿವೃತ್ತಿಗಾಗಿ ಭಗವಂತನದಲ್ಲಿ ಶರಣಾಗತಿ (ಶ್ಲೋಕ 14)
5. ಭಗವದುಪಾಸಕರಬೇಧಗಳು (ಶ್ಲೋಕಗಳು 15-16)

   1)ಭಗವಂತನನ್ನು ಭಜಿಸದವರು (ಶ್ಲೋಕ 15)

   2)ಭಗವಂತನನ್ನು ಭಜಿಸುವ ಭಕ್ತರು (ಶ್ಲೋಕ 16)

II ಉಪಾಸಕರಲ್ಲಿ ಜ್ಞಾನಿಯ ಸರ್ವೋತ್ಕೃಷ್ಟತೆ (ಶ್ಲೋಕಗಳು 17 ರಿಂದ 30)

1. ಜ್ಞಾನಿಯ ಮಹಿಮೆ
2. ಜ್ಞಾನಿಯದುರ್ಲಭತೆ
3. ಜ್ಞಾನಿಯ ದುರ್ಲಭತೆಗೆ ಕಾರಣ

   i) ಅನ್ಯದೇವತಾ ಪ್ರಾರ್ಥನೆ

   ii) ಭಗವಂತನ ವಿಭವ ಸ್ವರೂಪವನ್ನು ಅರಿಯದಿರುವಿಕೆ

   iii) ಪೂರ್ವಜನ್ಮದ ವಾಸನೆಯಿಂದ ಹುಟ್ಟುವಾಗಲೇ ಸಂಮೋಹ ಹೊಂದಿರುವಿಕೆ

4. ಪೂರ್ವಜನ್ಮದ ವಾಸನೆಯು ಹೋಗಿ ಜ್ಞಾನಿಯಾಗಲು ಉಪಾಯ-ಪುಣ್ಯ ಕರ್ಮಗಳನ್ನು ಮಾಡುವುದು.

**ಉಪೋದ್ಘಾತ :**

ಜಗತ್ತಿನಲ್ಲಿ ಶ್ರೀಮನ್ನಾರಾಯಣನನ್ನು ಸಾಕ್ಷಾತ್ಕರಿಸಬೇಕೆಂಬುದೇ ಸಮಸ್ತ ಮಾನವರ ಮುಖ್ಯಧ್ಯೇಯವಾಗಿರಬೇಕು. ಈ ಧ್ಯೇಯ ಸಾಧನೆಗೆ ಉಪಾಯವು ಯಾವುದೆಂದರೆ ಶ್ರೀಮನ್ನಾರಾಯಣನನ್ನು ಭಕ್ತಿಯಿಂದ ಉಪಾಸನೆ ಮಾಡುವುದು. ಶ್ರೀಮನ್ನಾರಾಯಣನು ಯಾರು ಎಂದರೆ - ಜಗತ್ತಿನಲ್ಲಿ ಮಾನವರು ಹೊಂದಬೇಕಾದ ಸರ್ವೋತ್ಕೃಷ್ಟವಾದ ಫಲವೂ, ಪರಬ್ರಹ್ಮನೂ, ನಿತ್ಯನೂ, ಸಕಲ ಜಗತ್ತಿಗೂ ಕಾರಣಭೂತನೂ, ಸಕಲವನ್ನು ಅರಿತವನೂ, ಸರ್ವಶರೀರಕನೂ, ಸಂಕಲ್ಪಿಸಿದ್ದನ್ನೆಲ್ಲಾ ಸಫಲಗೊಳಿಸುವವನೂ, ಮಹತ್ತಾದ ವಿಭೂತಿಯುಳ್ಳವನೂ ಆಗಿರುವ ಪರಮೇಶ್ವರನು. ಈ ಪರಮೇಶ್ವರನನ್ನು ಭಕ್ತಿಯಿಂದ ಉಪಾಸಿಸುವುದೇ ಅವನನ್ನು ಹೊಂದಬೇಕೆಂಬ ಸರ್ವೋತ್ಕೃಷ್ಟವಾದ ಧ್ಯೇಯ ಸಾಧನೆಗೆ ಉಪಾಯವು. ಇದೇ ಭಕ್ತಿಯೋಗವು. ಈ ಭಕ್ತಿಯೋಗಕ್ಕೆ ಅಂಗವಾಗಿ ಮೊದಲನೆಯ ಆರು ಅಧ್ಯಾಯದಿಂದ ಕೂಡಿದ ಪ್ರಥಮ ಷಟ್ಕದಲ್ಲಿ ಜೀವಾತ್ಮದರ್ಶನವು ಹೇಳಲ್ಪಟ್ಟಿತು. ಇದು ಆತ್ಮಜ್ಞಾನದಿಂದ ಕೂಡಿದ ಕರ್ಮಾನುಷ್ಠಾನದಿಂದ ಅಂದರೆ ಆತ್ಮಜ್ಞಾನದಿಂದ ಕೂಡಿ ಕರ್ಮ ಮಾಡುವುದರಿಂದ ಲಭಿಸುತ್ತದೆ. ಈ ಕರ್ಮಯೋಗ ಮತ್ತು ಜ್ಞಾನ ಯೋಗಗಳು ಮೊದಲಿನ ಆರು ಅಧ್ಯಾಯಗಳಲ್ಲಿ ಚೆನ್ನಾಗಿ ವಿವರಿಸಲ್ಪಟ್ಟಿವೆ.

ಮುಂದಿನ ಆರು ಅಧ್ಯಾಯಗಳಲ್ಲಿ ಅಂದರೆ ಏಳನೆಯ ಅಧ್ಯಾಯದಿಂದ ಹನ್ನೆರಡನೆಯ ಅಧ್ಯಾಯದವರೆಗಿನ ಮಧ್ಯಮಷಟ್ಕದಲ್ಲಿ ಪರಬ್ರಹ್ಮನಾದ ಪರಮ ಪುರುಷನ ಸ್ವರೂಪವೂ, ಭಕ್ತಿಯೆಂಬ ಅವನ ಉಪಾಸನೆಯೂ ಹೇಳಲ್ಪಡುತ್ತದೆ. ಉಪಾಸನೆಯು ಭಕ್ತಿರೂಪವನ್ನು ಹೊಂದಿದರೇನೇ ಅದು ಪರಮಪ್ರಾಪ್ಯನಾದ ಬ್ರಹ್ಮನನ್ನು ಹೊಂದಲು ಉಪಾಯವಾಗುತ್ತದೆಯೆಂದು ವೇದಾಂತ ವಾಕ್ಯಗಳಿಂದ ಸಿದ್ಧವಾಗುತ್ತದೆ. ಹಾಗಾದರೆ ಭಕ್ತಿರೂಪಾಪನ್ನವಾದ ಉಪಾಸನೆ ಎಂದರೇನು? ''ನಾಯಮಾತ್ಮಾ'' ಎಂಬ ಉಪನಿಷತ್ ವಾಕ್ಯದ ''ಯಮೇವೈಷ ವೃಣುತೇ ತೇನ ಲಭ್ಯಃ''- ಅಂದರೆ ಮಾನವನು ಮಾಡುವ ಸ್ತೋತ್ರ ಪ್ರವಚನ, ವೇದಾಧ್ಯಯನ ಮುಂತಾದವುಗಳಿಂದ ಮಾತ್ರ ಪರಮಾತ್ಮನ ಸಾಕ್ಷಾತ್ಕಾರವು ಸಾಧ್ಯವಿಲ್ಲ, ಭಗವಂತನಿಗೆ ಇವನ ಮೇಲೆ ಪ್ರೀತಿ ಉಂಟಾದರೆ ಆಗ ಇವನು ಅವನ ಕೃಪೆಗೆ ಪಾತ್ರನಾಗುವುದರಲ್ಲಿ ಸಂದೇಹವಿಲ್ಲ ಎಂದು ಹೇಳಿದೆ. ಆದ್ದರಿಂದ ಭಗವಂತನ ಪ್ರೀತಿಯನ್ನು ಸಂಪಾದಿಸಬೇಕು. ಅದರ ಸಲುವಾಗಿ ಮಾನವನು ಸರ್ವದಾ ಎಡೆಬಿಡದೆ ಅವನನ್ನು

ಸ್ಮರಿಸುತ್ತಿರಬೇಕು ಮತ್ತು ಈ ಸ್ಮರಣೆಯು ಅವನಲ್ಲಿ ಪ್ರೀತಿಯಿಂದ ಕೂಡಿದುದಾಗಿ ಇರಬೇಕು. ಹೀಗೆ ಅವನನ್ನು ಪ್ರೀತಿಯಿಂದ ಸ್ಮರಿಸಬೇಕಾದರೆ ಸ್ಮರಣೆಗೆ ವಿಷಯನಾದ ಪರಮಾತ್ಮನಲ್ಲಿ ಮಾನವನಿಗೆ ಎಲ್ಲಕ್ಕಿಂತಲೂ ಅಧಿಕವಾದ ಪ್ರೀತಿಯು ಉಂಟಾಗಬೇಕು. ಅನಂತರ ಸರ್ವದಾ ತೈಲಧಾರೆಯ ಹಾಗೆ ಅವಿಚ್ಛಿನ್ನವಾಗಿ ಅಂದರೆ ಎಡೆ ಬಿಡದೆ ಅವನನ್ನು ಪ್ರೀತಿಯಿಂದ ಸ್ಮರಿಸುತ್ತಿರಬೇಕು. ಅಲ್ಲದೆ ಅವನು ಇವನನ್ನು ಪ್ರೀತಿಸುವಂತೆ ಇವನು ಜೀವನದಲ್ಲಿ ನಡೆಯಬೇಕು. ಇಂತಹ ಪ್ರೀತಿಯುತವಾದ ನಿರಂತರವಾದ ಭಗವಂತನ ಸ್ಮರಣೆಯನ್ನೇ ಧ್ರುವಾಸ್ಮತಿಯೆಂದೂ, ಧ್ಯಾನವೆಂದೂ, ಉಪಾಸನೆ ಎಂದೂ ಕರೆದಿದ್ದಾರೆ. ಸದಾ ಕಾಲದಲ್ಲಿಯೂ ಈ ಸ್ಮೃತಿ ಸಂತಾನ ರೂಪವಾದ ಅಂದರೆ ಪ್ರೀತಿಯಿಂದ ಭಗವಂತನನ್ನು ಎಡೆಬಿಡದೆ ಸ್ಮರಿಸುತ್ತಾ ಮಾಡುವ ಉಪಾಸನೆಯೇ ಭಕ್ತಿಯು. ಈ ಭಕ್ತಿ ಮಾರ್ಗವೇ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಉಪಾಯವು.

ಈ ಭಕ್ತಿಮಾರ್ಗವನ್ನೇ ಶ್ರೀ ಕೃಷ್ಣನು ಗೀತೆಯ ಮಧ್ಯಮ ಷಟ್ಕದಲ್ಲಿ ಬೋಧಿಸುತ್ತಾನೆ. ಅದರಲ್ಲಿ ಮೊದಲನೆಯದಾದ ಈ ಏಳನೆಯ ಅಧ್ಯಾಯದಲ್ಲಿ ಉಪಾಸ್ಯನಾದ ಪರಮ ಪುರುಷನ ನಿಜಸ್ವರೂಪವೂ, ಅದು ಪ್ರಕೃತಿ ಸಂಬಂಧದಿಂದ ಮುಚ್ಚಲ್ಪಟ್ಟು ಮರೆಯಾಗಿಹೋಗಿದೆ ಎಂದೂ, ಅದರ ನಿವೃತ್ತಿಗೆ (ಅಂದರೆ ಆ ಪರಮಾತ್ಮನ ಯಾಥಾತ್ಮ್ಯ ಸ್ವರೂಪದ ತಿರೊಧಾನದ ನಿವೃತ್ತಿಗೆ) ಭಗವಂತನಲ್ಲಿ ಶರಣಾಗತಿಯೇ ಉಪಾಯವೆಂದೂ, ಭಗವಂತನ ಉಪಾಸಕರಲ್ಲಿ ಭೇದಗಳಿವೆಯೆಂದೂ, ಅವರಲ್ಲಿ ಜ್ಞಾನಿಗಳು ಸರ್ವೋತ್ಕೃಷ್ಟರೆಂದೂ ಹೇಳಲ್ಪಟ್ಟಿದೆ.

## I ಪರಮಾತ್ಮನ ನಿಜಸ್ವರೂಪ (ಶ್ಲೋಕಗಳು 1 ರಿಂದ 16)

### 1. ಭಕ್ತಿಯೋಗಾಭ್ಯಾಸದಲ್ಲಿನಿರತನಾಗು (ಶ್ಲೋಕಗಳು 1 ರಿಂದ 3)

ಎಲೈ ಅರ್ಜುನನೇ! ನಾನು ನಿನಗೆ ಈಗ ನನ್ನ ವಿಷಯವಾದ ಜ್ಞಾನವನ್ನು ತಿಳಿಸುವೆನು. ಈ ಜ್ಞಾನವನ್ನು ಪಡೆಯಬೇಕಾದರೆ ನೀನು ಒಂದು ಹೊಸ ಯೋಗವನ್ನು ಕೈಗೊಳ್ಳಬೇಕು. ನಿನ್ನ ಮನಸ್ಸನ್ನು ನನ್ನಲ್ಲಿ ನೆಲೆಸುವಂತೆ ಮಾಡು. ನನ್ನನ್ನು ಹೆಚ್ಚಾಗಿ ಪ್ರೀತಿಸಿದರೆ ಆಗ ನನ್ನ ಸ್ವರೂಪದಿಂದಲೂ, ಗುಣಗಳಿಂದಲೂ, ದಿವ್ಯ ಚೇಷ್ಟಿತಗಳಿಂದಲೂ, ಮತ್ತು ನನ್ನ ವಿಭೂತಿ ಮೊದಲಾದವುಗಳಿಂದಲೂ ನಿನ್ನ ಮನಸ್ಸಿಗೆ ವಿಚ್ಛೇದವುಂಟಾದಾಗಲೆಲ್ಲಾ ತಕ್ಷಣ ನೀನೇ ನಷ್ಟವಾದಂತೆ ನಿನಗೆ ತೋರುತ್ತದೆ. ಇಂತಹ ಸ್ವಭಾವವು ನಿನ್ನಲ್ಲಿ ಉಂಟಾದೀತಾದರೆ ಆಗ ನನ್ನಲ್ಲೇ ಸ್ಥಿರವಾಗಿ ಬಂಧಿಸಲ್ಪಟ್ಟ ಅಂದರೆ

ನನ್ನಲ್ಲೇ ಆಸಕ್ತವಾದ ಮನಸ್ಸುಳ್ಳವನಾಗುವೆ. ಅದರೊಂದಿಗೆ ನೀನು ನನ್ನನ್ನೇ ಆಶ್ರಯವಾಗಿ ಹೊಂದಬೇಕು. ನಾನು ಇಲ್ಲದಿದ್ದರೆ ನೀನು ನಷ್ಟವಾಗಿ ಹೋಗುವೆ ಎಂಬುದನ್ನು ಅರಿತರೆ ಆಗ ನನ್ನೊಬ್ಬನನ್ನೇ ಆಧಾರವಾಗಿ ಉಳ್ಳವನಾಗುವೆ. ಈ ರೀತಿಯಾದ ಮನೋಭಾವನೆಗಳನ್ನು ಹೊಂದಿ ಭಕ್ತಿಯೋಗವನ್ನು ಮಾಡಿ ನನ್ನ ಉಪಾಸನೆ ಮಾಡು. ಹೀಗೆ ಮಾಡಿದೆಯಾದರೆ ನಿನ್ನ ಯೋಗಕ್ಕೆ ವಿಷಯನಾದ ನನ್ನನ್ನು ನಿಸ್ಸಂಶಯವಾಗಿಯೂ, ಸಂಪೂರ್ಣವಾಗಿಯೂ ತಿಳಿಯುತ್ತೀಯೆ. ನಾನು ನಿನಗೆ ನನ್ನ ವಿಷಯವಾಗಿರುವ ಈ ಜ್ಞಾನವನ್ನು ವಿಜ್ಞಾನದೊಡನೆ ಸಂಪೂರ್ಣವಾಗಿ ಹೇಳುತ್ತೇನೆ. ಸಾವಧಾನ ಚಿತ್ತವುಳ್ಳವನಾಗಿ ಕೇಳು. ವಿಜ್ಞಾನವೆಂದರೆ ವಿವಿಕ್ತಾಕಾರ ವಿಷಯಜ್ಞಾನವು, ನಾನು ಸಮಸ್ತ ಚಿದಚಿದ್ವಸ್ತುಸಮೂಹಗಳಿಗಿಂತ ವ್ಯತಿರಿಕ್ತನಾಗಿ ವಿಲಕ್ಷಣ ನಾಗಿದ್ದೇನೆಂದು ತಿಳಿಸುವ ವಿಲಕ್ಷಣವಾದ ಜ್ಞಾನವೇ ವಿಜ್ಞಾನವು. ಅಂತಹ ವಿವಿಕ್ತವಿಷಯ ಜ್ಞಾನದೊಡನೆ ನನ್ನ ಸ್ವರೂಪ ವಿಷಯಜ್ಞಾನವನ್ನೂ ಹೇಳುತ್ತೇನೆ. ಯಾವ ಜ್ಞಾನವನ್ನು ತಿಳಿದನಗೆ ನನ್ನ ವಿಷಯದಲ್ಲಿ ಪುನಃ ಬೇರೆ ತಿಳಿಯತಕ್ಕ ಅಂಶವು ಯಾವುದೂ ಉಳಿದಿರುವುದಿಲ್ಲವೋ ಅಂತಹ ಈ ಜ್ಞಾನವನ್ನು ಹೇಳುತ್ತೇನೆ.

ಆದರೆ ನಾನು ಈಗ ಹೇಳುವ ಈ ಜ್ಞಾನವನ್ನು ಹೊಂದಲು ನೀನು ಬಹಳ ಆಸಕ್ತಿಯಿಂದಲೂ, ಶ್ರದ್ಧೆಯಿಂದಲೂ ಪ್ರಯತ್ನಿಸಬೇಕಾಗುತ್ತದೆ. ಸಾವಿರಾರು ಮನುಷ್ಯರಲ್ಲಿ ಯಾವನೋ ಒಬ್ಬನು ಸಿದ್ಧಿಹೊಂದಲು ಪ್ರಯತ್ನಿಸುವನು. ಹಾಗೆ ಪ್ರಯತ್ನ ಮಾಡುವ ಕೆಲವರೂ ಸಿದ್ಧಿಯನ್ನು ಮುಟ್ಟುವವರೆಗೂ ತಮ್ಮ ಪ್ರಯತ್ನವನ್ನು ಮುಂದುವರಿಸುವುದಿಲ್ಲ. ಸಿದ್ಧಿಪರ್ಯಂತವಾಗಿ ಪ್ರಯತ್ನಮಾಡುವ ಸಹಸ್ರಾರು ಮಂದಿಗಳಲ್ಲಿ ಯಾವನೋ ಒಬ್ಬನು ನನ್ನನ್ನು ಯಥಾರ್ಥವಾಗಿ ತಿಳಿಯುವನು. ಅಂದರೆ ನನ್ನ ನಿಜ ಸ್ವರೂಪವನ್ನು ನಿಶ್ಚಯವಾಗಿ ತಿಳಿಯುವವನು ಲಭಿಸುವುದು ದುರ್ಲಭವೆಂದು ಅಭಿಪ್ರಾಯ.

## 2. ಪರಮಪುರುಷನ ನಿಜಸ್ವರೂಪ (ಶ್ಲೋಕಗಳು 4 ರಿಂದ 12)

ವಿಚಿತ್ರಗಳಾದ ಮತ್ತು ಅನಂತಗಳಾದ ಭೋಗ್ಯವಸ್ತುಗಳೂ, ಭೋಗಕ್ಕೆ ಬೇಕಾದ ಸಹಕಾರಿದ್ರವ್ಯಗಳೂ, ಅನುಕೂಲವಾದ ಪ್ರದೇಶಗಳೂ, ಇವುಗಳಿಂದ ಕೂಡಿರುವ ಈ ಜಗತ್ತು ಪ್ರಕೃತಿಯಿಂದ ಉಂಟಾಗಿರುತ್ತದೆ. ಈ ಪ್ರಕೃತಿಯು ಪೃಥ್ವಿ, ಅಪ್ಪು, ತೇಜಸ್ಸು ವಾಯು, ಆಕಾಶ, ಮನಸ್ಸು ಮಹತ್ತು ಮತ್ತು ಅಹಂಕಾರ ಎಂದು ಎಂಟು ಪ್ರಕಾರವಾಗಿ ಭಿನ್ನವಾಗಿದೆ. ಈ ಪ್ರಕೃತಿಯೂ ಅಂದರೆ ಎಂಟು ವಿಧ

ವಿಕಾರಗಳೂ ಸಹ ನನ್ನ ಸಂಬಂಧವಾದುದೆಂದು ಅಂದರೆ ನನ್ನ ಶರೀರಗಳು ಮತ್ತು ನನ್ನ ಸ್ವತ್ತುಗಳೆಂದು ತಿಳಿ.

ಆದರೆ ಇದು ನನ್ನ ಉತ್ಕೃಷ್ಟವಲ್ಲದ ಪ್ರಕೃತಿಯು. ನನಗೆ ಇದಕ್ಕಿಂತಲೂ ಬೇರೆಯಾದ ಇದನ್ನು ಭೋಗಿಸುವ ಇನ್ನೂ ಉತ್ಕೃಷ್ಟವಾದ ಇನ್ನೊಂದು ಪ್ರಕೃತಿ ಇದೆ. ಅದೇ ಚೇತನರೂಪವಾದ ಪ್ರಕೃತಿಯು. ಅದು ಮೇಲೆ ಹೇಳಿದ ಅಚೇತನ ಪ್ರಕೃತಿಗಿಂತ ಉತ್ತಮವಾದುದು. ಏಕೆಂದರೆ ಈ ಜೀವರೂಪ ಪ್ರಕೃತಿಯು ಆ ಅಚೇತನ ವಸ್ತುಗಳನ್ನು ಭೋಗಿಸುತ್ತದೆ. ಹೀಗೆ ಚೇತನವಸ್ತುವು ಭೋಕ್ತಾವಾಗಿಯೂ, ಅಚೇತನ ವಸ್ತುವು ಅದಕ್ಕೆ ಭೋಗ್ಯವಸ್ತುವಾಗಿಯೂ ಇರುವುದರಿಂದ, ಅಚೇತನತತ್ತ್ವಕ್ಕಿಂತ ಚೇತನತತ್ತ್ವವು ಮುಖ್ಯವಾದುದಾಗಿದೆ. ಇದೂ ಅಲ್ಲದೆ ಈ ಚೇತನತತ್ತ್ವದಿಂದಲೇ ಸಮಸ್ತ ಅಚೇತನ ದ್ರವ್ಯದಿಂದ ಕೂಡಿದ ಜಗತ್ತು ಧರಿಸಲ್ಪಟ್ಟಿದೆ. ಅಚಿತ್ತಿಗೆ ಚಿತ್ತು ಸತ್ತಾದಾಯಕ ವಸ್ತುವಾಗಿದೆ. ಈ ಕಾರಣಗಳಿಂದ ನನ್ನ ಜೀವರೂಪವಾದ ಈ ಪ್ರಕೃತಿಯು ಮೇಲೆ ಹೇಳಿದ ಅಚೇತನ ಪ್ರಕೃತಿಗಿಂತ ಶ್ರೇಷ್ಠವಾದುದಾಗಿದೆ. ಆದ್ದರಿಂದ ಇದು ನನ್ನ ಉತ್ಕೃಷ್ಟವಾದ ಪ್ರಕೃತಿಯಾಗಿದೆ.

ಈ ಜಗತ್ತಿನಲ್ಲಿ ಬ್ರಹ್ಮನಿಂದ ಹಿಡಿದು ಸ್ತಂಭದವರೆಗಿನ ಸಮಸ್ತ ವಸ್ತುಗಳೂ ಚೇತನ ಮತ್ತು ಅಚೇತನ ವಸ್ತುಗಳಿಂದ ಆಗಿವೆ. ಅಂದರೆ ಚಿತ್ ಮತ್ತು ಅಚಿತ್ ಮಿಶ್ರವಾದ ವಸ್ತುಗಳಿಂದ ಉಂಟಾಗಿವೆ. ಆದ್ದರಿಂದ ನನ್ನ ಈ ಎರಡು ಪರಾ ಮತ್ತು ಅಪರಾ ಅಂದರೆ ಚೇತನ ಮತ್ತು ಅಚೇತನ ಪ್ರಕೃತಿಗಳಿಂದ ಜಗತ್ತಿನ ಸಮಸ್ತ ವಸ್ತುಗಳೂ ಉಂಟಾಗಿವೆ. ಈ ಪ್ರಕೃತಿ ದ್ವಯದಿಂದಲೇ ಸಮಸ್ತ ಜಗತ್ತೂ ಉಂಟಾಗಿರುವುದರಿಂದ ಸಮಸ್ತ ಜಗತ್ತಿನ ಉತ್ಪತ್ತಿ ಮತ್ತು ನಾಶಕ್ಕೆ ನಾನೇ ಕಾರಣನೂ ಮತ್ತು ನಾನೇ ಅವುಗಳಿಗೆ ಸ್ವಾಮಿಯೂ ಆಗಿರುವೆನೆಂಬುದನ್ನು ತಿಳಿದುಕೊ.

ಸರ್ವ ಅಚೇತನ ವಸ್ತುಗಳಿಗೆ ಚೇತನ ವಸ್ತುಗಳು ಸ್ವಾಮಿಯಾಗಿವೆ. ಆದರೆ ನಾನು ಆ ಚೇತನ ವಸ್ತುವಿಗೇ ಸ್ವಾಮಿಯಾಗಿರುವುದರಿಂದ ಸಮಸ್ತ ವಸ್ತುಗಳಿಗೂ ನಾನೇ ಸ್ವಾಮಿಯಾಗಿದ್ದೇನೆ. ಇಷ್ಟು ಮಾತ್ರವಲ್ಲದೆ ನಾನು ಎಲ್ಲಕ್ಕಿಂತಲೂ ಶ್ರೇಷ್ಠನಾಗಿದ್ದೇನೆ. ನನಗಿಂತ ಶ್ರೇಷ್ಠತರವಾದ ವಸ್ತುವು ಯಾವುದೂ ಇಲ್ಲ. ಆದ್ದರಿಂದ ಚಿದಚಿದ್ವಸ್ತುಗಳಿಂದ ಉಂಟಾಗಿರುವ ಈ ಸಮಸ್ತ ಜಗತ್ತು ಕಾರ್ಯಾವಸ್ಥೆ ಯಲ್ಲಿಯೂ, ಕಾರಣಾವಸ್ಥೆಯಲ್ಲಿಯೂ ನನ್ನ ಶರೀರ ಭೂತವಾಗಿದೆ. ದಾರದಲ್ಲಿ

ಪೋಣಿಸಿರುವ ಮಣಿಗಳ ಸಮೂಹದಂತೆ ಅವುಗಳಲ್ಲಿ ಆತ್ಮನಾಗಿ ನಿಂತಿರುವ ನನ್ನಲ್ಲಿ ಅವು ಪೋಣಿಸಲ್ಪಟ್ಟಿವೆ. ಅಂದರೆ ಆಶ್ರಯವನ್ನು ಹೊಂದಿವೆ.

ಹೀಗೆ ಸಮಸ್ತವೂ ಪರಮಪುರುಷನಾದ ನನಗೆ ಶರೀರವಾಗಿ ಇರುವುದರಿಂದ, ಸಮಸ್ತ ವಸ್ತುಗಳೂ ಆತ್ಮನಾದ ನನ್ನ ಸ್ವರೂಪಗಳಾಗಿವೆ, ಸಮಸ್ತ ಶಬ್ದಗಳೂ ನನ್ನ ವರ್ಣನೆಯೇ ಆಗಿವೆ. ಮತ್ತು ಸಮಸ್ತ ವಸ್ತುಗಳ ಸಾರವೂ ನಾನೇ ಆಗಿದ್ದೇನೆ. ಪ್ರತಿಯೊಂದು ವಸ್ತುವಿನಲ್ಲಿರುವ ಮುಖ್ಯವಾದ ಗುಣವೂ ನಾನೇ ಆಗಿದ್ದೇನೆ. ಹೇಗೆಂದರೆ ಜಲದಲ್ಲಿರುವ ಮುಖ್ಯಾಂಶವಾದ ರಸವು ನಾನೇ ಆಗಿರುವೆನು. ನಾನು ಚಂದ್ರ ಸೂರ್ಯರಲ್ಲಿ ಪ್ರಕಾಶವೂ, ಸಮಸ್ತ ವೇದಗಳಲ್ಲಿ ಓಂಕಾರವೂ, ಆಕಾಶದಲ್ಲಿ ಶಬ್ದವೂ, ಪುರುಷರಲ್ಲಿ ಪೌರುಷತ್ವವೂ ಆಗಿದ್ದೇನೆ. ಭೂಮಿಯಲ್ಲಿರುವ ಶ್ರೇಷ್ಠವಾದ ಗಂಧವೂ, ಅಗ್ನಿಯಲ್ಲಿರುವ ತೇಜಸ್ಸೂ, ಸಮಸ್ತ ಪ್ರಾಣಿಗಳಲ್ಲಿ ಇರುವ ಪ್ರಾಣರೂಪನೂ, ತಪಸ್ವಿಗಳ ತಪಸ್ಸೂ, ಸರ್ವ ಪ್ರಾಣಿಗಳ ಅನಾದಿಯಾದ ಬೀಜವೂ ನಾನೇ ಎಂಬುದನ್ನು ತಿಳಿದುಕೋ. ನಾನು ಬುದ್ಧಿವಂತರ ಬುದ್ಧಿಯೂ, ತೇಜಸ್ವಿಗಳ ತೇಜಸ್ಸೂ, ಬಲಿಷ್ಠರ ಕಾಮರಾಗರಹಿತವಾದ ಬಲವೂ, ಧರ್ಮಕ್ಕೆ ವಿರೋಧವಿಲ್ಲದ ಕಾಮವೂ ಆಗಿದ್ದೇನೆ.

ಪ್ರಕೃತಿಯ ಸಮಸ್ತ ವಸ್ತುಗಳಲ್ಲಿಯೂ ಸತ್ವ ರಜಸ್ತಮೋ ಗುಣಗಳೆಂಬ ಮೂರು ವಿಧವಾದ ಭಾವಗಳಿವೆ. ಈ ಮೂರು ಭಾವಗಳೂ ಕೂಡ ನನ್ನಿಂದಲೇ ಉತ್ಪನ್ನವಾಗಿವೆ. ಪ್ರಕೃತಿಯೇ ನನ್ನ ಶರೀರವಾಗಿರುವುದರಿಂದ ಅದರಲ್ಲಿ ಇರುವ ಈ ಭಾವಗಳೂ ನನ್ನ ಶರೀರಗಳಾಗಿ ನನ್ನಲ್ಲಿ ಇರುವುದಲ್ಲದೆ ನನ್ನ ಅಧೀನಕ್ಕೆ ಒಳಪಟ್ಟಿರುವುದರಿಂದ ಅವುಗಳ ಮೇಲೆ ನನ್ನ ಅಧಿಕಾರವಿದೆ. ಆದರೆ ನಾನು ಅವುಗಳಲ್ಲಿ ಇಲ್ಲ. ಇದರ ಅರ್ಥವು ಏನೆಂದರೆ ಅವುಗಳಿಂದ ನನಗೆ ಯಾವ ಉಪಕಾರವೂ ಇಲ್ಲ. ಆ ತ್ರಿಗುಣಗಳು ನನ್ನಲ್ಲಿ ಇದ್ದರೂ ಅವುಗಳನ್ನು ನಾನು ಆಳುತ್ತೇನೆಯೇ ಹೊರತು ಆ ಗುಣಗಳು ನನ್ನನ್ನು ಆಳುತ್ತಿಲ್ಲ.

### 3. ಪ್ರಕೃತಿ ಸಂಬಂಧದಿಂದ ಪರಮಾತ್ಮನ ನಿಜಸ್ವರೂಪವು ಮರೆಯಾಗಿ ಹೋಗಿರುವಿಕೆ (ಶ್ಲೋಕ 13)

ಈ ರೀತಿಯಾಗಿ ಚೇತನಾಚೇತನವಾದ ಈ ಸಮಸ್ತ ಜಗತ್ತೂ ನನ್ನದಾಗಿದೆ. ಕಾಲಕಾಲದಲ್ಲಿಯೂ ನನ್ನಿಂದಲೇ ಉತ್ಪನ್ನವಾಗುತ್ತದೆ ಮತ್ತು ನನ್ನಲ್ಲೇ ಲಯವನ್ನು

ಹೊಂದುತ್ತದೆ. ಇದು ನನ್ನಲ್ಲೇ ಇರುವಂತಹದೂ, ನನಗೆ ಶರೀರಭೂತವಾದುದೂ ಮತ್ತು ನನ್ನನ್ನು ಆತ್ಮವಾಗಿ ಹೊಂದಿರುವುದೂ ಆಗಿದೆ. ಹೀಗೆ ಕಾರಣತ್ವದಿಂದಲೂ, ಸ್ವಾಮಿತ್ವದಿಂದಲೂ ಮತ್ತು ಜ್ಞಾನಾದಿ ಸಮಸ್ತ ಕಲ್ಯಾಣಗುಣಗಳಿಂದಲೂ ನಾನೇ ಸರ್ವಪ್ರಕಾರಗಳಿಂದಲೂ ಶ್ರೇಷ್ಠತಮನಾಗಿದ್ದೇನೆ. ಬೇರೆ ಯಾವುದೂ ನನಗಿಂತ ಶ್ರೇಷ್ಠತರವಾದುದಲ್ಲ ಎಂಬ ವಿಷಯವನ್ನು ಮೇಲೆ ವಿವರಿಸಿದ್ದೇನೆ. ಹೀಗಿರುವಂತಹ ನನ್ನನ್ನು ಅಂದರೆ ಸಮಸ್ತ ವಸ್ತುಗಳಿಗಿಂತ ಶ್ರೇಷ್ಠತಮನೂ, ಸದಾ ಏಕರೂಪನೂ, ಅವಿನಾಶಿಯೂ ಆಗಿರುವ ನನ್ನನ್ನು ಈ ಸಮಸ್ತ ಜಗತ್ತೂ ತಿಳಿಯುವುದಿಲ್ಲ. ನಿಕೃಷ್ಟಗಳಾದ, ಅಲ್ಪಕಾಲದಲ್ಲಿ ನಾಶವಾಗುವ, ಅನಿತ್ಯಗಳಾದ, ಸತ್ವರಜಸ್ತಮೋ ಗುಣಗಳಿಂದ ಕೂಡಿರುವ, ಪೂರ್ವಕರ್ಮಕ್ಕೆ ಅನುಗುಣವಾಗಿ ಉಂಟಾದ ದೇಹ ಮತ್ತು ಇಂದ್ರಿಯಗಳ ಮೂಲಕ ಪದಾರ್ಥಗಳಲ್ಲಿ ಭೋಗ್ಯಬುದ್ಧಿಯನ್ನು ಹೊಂದಿ ಮೋಹವನ್ನು ಹೊಂದಿರುವ ದೇವತೆಗಳ, ಪ್ರಾಣಿಗಳ, ಮನುಷ್ಯರ ಮತ್ತು ಗಿಡಗಳ ರೂಪದಲ್ಲಿ ಇರುವ ಈ ಜಗತ್ತು ನಾಶರಹಿತನಾದ, ಶ್ರೇಷ್ಠನಾದ ನನ್ನನ್ನು ತಿಳಿಯುವುದಿಲ್ಲ.

ಇದು ನಿನಗೆ ವಿಚಿತ್ರವಾಗಿ ಕಾಣಬಹುದು. ಸ್ವಾಭಾವಿಕವಾಗಿಯೇ ಅನವಧಿಕ ಅತಿಶಯ ಆನಂದ ಸ್ವರೂಪನೂ, ನಿತ್ಯನೂ, ಸದಾ ಏಕರೂಪನೂ ಮತ್ತು ಎಲ್ಲಾ ಲೌಕಿಕ ವಸ್ತುಗಳ ಭೋಗ್ಯತಾ ಪ್ರಕಾರಕ್ಕಿಂತಲೂ ಶ್ರೇಷ್ಠತಮನಾದಂತಹ ನಾನು ಇರುವಾಗ ನನ್ನನ್ನು ಬಿಟ್ಟು ಸಕಲ ಚೇತನರೂ ಅತ್ಯಂತ ನಿಕೃಷ್ಟವಾದ, ಗುಣಮಯಗಳಾದ, ಅಸ್ಥಿರಗಳಾದ ವಸ್ತುಗಳಲ್ಲಿ ಏತಕ್ಕೆ ಭೋಗ್ಯತ್ವ ಬುದ್ಧಿಯನ್ನು ಹೊಂದಿದ್ದಾರೆ ಎಂದು ನಿನಗೆ ತೋರಬಹುದು. ಅದಕ್ಕೆ ಕಾರಣವು ಏನೆಂದರೆ ಸತ್ವರಜಸ್ತಮೋಗುಣಗಳಿಂದ ಕೂಡಿದ ಈ ಪ್ರಕೃತಿಯು ನನ್ನಿಂದ ನಿರ್ಮಿಸಲ್ಪಟ್ಟದ್ದಾಗಿದೆ. ಇದು ಒಂದು ವಿಚಿತ್ರವಾದ ಕಾರ್ಯವನ್ನು ಮಾಡುತ್ತಿದೆ. ಅದೇನೆಂದರೆ ಭಗವಂತನ ಶಾಶ್ವತ ಸ್ವರೂಪವನ್ನು ಮರೆಮಾಡಿ ತನ್ನ ನಶ್ವರವಾದ ಸ್ವರೂಪದಲ್ಲಿ ಭೋಗ್ಯತ್ವಬುದ್ಧಿಯನ್ನು ಸರ್ವ ಚೇತನರಿಗೂ ಉಂಟುಮಾಡುತ್ತಿದೆ. ಹೀಗೆ ಇದು ಸುಳ್ಳಾದ ವಿಷಯದಲ್ಲಿ ಸತ್ಯ ಬುದ್ಧಿಯನ್ನು ಉಂಟುಮಾಡುತ್ತಿರುವುದರಿಂದ ಇದನ್ನೇ ಮಾಯೆ ಎಂದು ಕರೆಯಬಹುದು. ಇದು ನನ್ನಿಂದ ಹುಟ್ಟಿದ್ದಾಗಿದೆ. ಆದ್ದರಿಂದ ಇದನ್ನು ದಾಟುವುದು ಬಹಳ ಕಷ್ಟಸಾಧ್ಯವಾದುದು. ದಾಟಲಶಕ್ಯವಾದ, ತ್ರಿಗುಣಗಳಿಂದ ಕೂಡಿದ ಮತ್ತು ನನ್ನ ದೈವಿಕ ಸಂಬಂಧವನ್ನು ಹೊಂದಿರುವ ಈ ನನ್ನ ಮಾಯೆ ಎಂಬ ಪ್ರಕೃತಿಯಿಂದ ಸಮಸ್ತ ಜಗತ್ತೂ ಮೋಹಿಸಲ್ಪಟ್ಟಿರುವುದರಿಂದ ಅದು ನನ್ನ ಅನವಧಿಕ ಅತಿಶಯ ಆನಂದ ಸ್ವರೂಪವನ್ನು ತಿಳಿಯುವುದಿಲ್ಲ.

### 4. ಮಾಯಾ ನಿವೃತ್ತಿಗಾಗಿ ಭಗವಂತನದಲ್ಲಿ ಶರಣಾಗತಿ (ಶ್ಲೋಕ 14)

ಆದರೂ ನೀನು ಧೈರ್ಯಗೆಡಬೇಡ. ಈ ದಾಟಲಶಕ್ಯವಾದ ಮಾಯೆಯನ್ನು ದಾಟುವುದಕ್ಕೂ ಉಪಾಯವುಂಟು.

**ದೈವೀಹ್ಯೇಷಾ ಗುಣಮಯೀ ಮಮಮಾಯಾದುರತ್ಯಯಾ ।**
**ಮಾಮೇವಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿತೇ ॥**

ಅಂದರೆ ನಾನು ಸತ್ಯ ಸಂಕಲ್ಪನೂ, ಪರಮ ಕಾರುಣಿಕನೂ, ಜನರ ತಾರತಮ್ಯ ಸ್ಥಿತಿಗತಿಗಳನ್ನು ಲೆಕ್ಕಿಸದೆ ಸರ್ವರಿಗೂ ಶರಣ್ಯನೂ ಆಗಿದ್ದೇನೆ. ನನ್ನನ್ನು ನೀನು ಮೊರೆಹೊಕ್ಕರೆ ಆಗ ನೀನು ಈ ಗುಣಮಯಿಯಾದ, ಪ್ರಬಲವಾದ ಮಾಯೆಯನ್ನು ದಾಟಲು ಶಕ್ತನಾಗುವೆ. ಅಂದರೆ ಈ ಮಾಯಾ ಪ್ರಪಂಚವನ್ನು ಬಿಟ್ಟು ನನ್ನನ್ನು ಉಪಾಸನೆ ಮಾಡುವವನಾಗುವೆ ಎಂದು ಪರಮಾತ್ಮನು ಸರ್ವರಿಗೂ ಭರವಸೆ ನೀಡಿದ್ದಾನೆ.

### 5. ಭಗವದುಪಾಸಕರಬೇಧಗಳು

#### 1) ಭಗವಂತನನ್ನು ಭಜಿಸದವರು (ಶ್ಲೋಕ 15)

ಆದರೆ ನನ್ನ ಉಪಾಸನೆಯನ್ನು ಸಂಪಾದಿಸಿಕೊಡುವ ಪ್ರಪತ್ತಿಯನ್ನು ನನ್ನಲ್ಲಿ ಯಾರೂ ಮಾಡುತ್ತಿಲ್ಲವಲ್ಲಾ, ಇದು ಏಕೆ ಎಂದರೆ – ಅದಕ್ಕೆ ಜನರು ಮಾಡುತ್ತಿರುವ ದುಷ್ಕರ್ಮಗಳೇ ಕಾರಣವೆನ್ನಬಹುದು. ಈ ದುಷ್ಕರ್ಮಿಗಳನ್ನು ಅವರವರ ಕೆಲಸಗಳ ತಾರತಮ್ಯದಿಂದ ನಾಲ್ಕು ವಿಧವಾಗಿ ವಿಂಗಡಿಸಿ ಹೇಳಬಹುದು. ಅವರು ಯಾರೆಂದರೆ ಮೂಢರು, ನರಾಧಮರು, ಮಾಯೆಯಿಂದ ಅಪಹರಿಸಲ್ಪಟ್ಟ ಜ್ಞಾನವುಳ್ಳವರು ಮತ್ತು ಆಸುರಭಾವವನ್ನು ಆಶ್ರಯಿಸಿದವರು. ಈ ನಾಲ್ಕು ವಿಧದವರೂ ನನ್ನನ್ನು ಹೊಂದುವುದಿಲ್ಲ.

**ಮೂಢರು** - ಯಾರೆಂದರೆ ವಿಪರೀತ ಜ್ಞಾನವುಳ್ಳವರು. ಅಂದರೆ ನನ್ನ ಸ್ವರೂಪವನ್ನು ತಿಳಿದುಕೊಳ್ಳದೆ, ಪ್ರಕೃತಿಯ ವಿಷಯದಲ್ಲೇ ಆಸಕ್ತರಾಗಿರುವವರು ಮತ್ತು ಭಗವಂತನಿಗೆ ಶೇಷಭೂತವಾದ ಆತ್ಮನನ್ನೂ, ಭೋಗ್ಯವಸ್ತುಗಳನ್ನೂ ತಮಗೇ ಶೇಷಭೂತವೆಂದು ತಿಳಿದುಕೊಳ್ಳುವವರು.

**ನರಾಧಮರು** - ನನ್ನ ಸ್ವರೂಪದ ಸಾಮಾನ್ಯಜ್ಞಾನವನ್ನು ಹೊಂದಿಯೂ ನನ್ನನ್ನು ಆಶ್ರಯಿಸದವರು.

**ಮಾಯೆಯಿಂದ ಅಪಹರಿಸಲ್ಪಟ್ಟ ಜ್ಞಾನವುಳ್ಳವರು** - ನನ್ನ ವಿಷಯವಾದ ಸರ್ವಜ್ಞಾನವನ್ನು ಹೊಂದಿದ್ದರೂ ಕೂಡ ಕುತರ್ಕ ಮತ್ತು ಕುಯುಕ್ತಿಗಳಿಂದ ಆ ಜ್ಞಾನವನ್ನು ಹಾಳುಮಾಡಿಕೊಂಡವರು.

**ಆಸುರಭಾವವನ್ನು ಆಶ್ರಯಿಸಿದವರು** - ನನ್ನ ವಿಷಯವಾದ ಸಮಸ್ತ ಜ್ಞಾನವನ್ನೂ ನನ್ನನ್ನು ದ್ವೇಷಿಸಲು ಕಾರಣವನ್ನಾಗಿ ಹೊಂದಿದವರು, ಈ ದುಷ್ಕರ್ಮಿಗಳು ಕ್ರಮವಾಗಿ ಒಬ್ಬರಿಗಿಂತ ಒಬ್ಬರು ಹೆಚ್ಚಾಗಿ ಪಾಪಿಷ್ಠರಾಗಿದ್ದಾರೆ. ಇವರು ನನ್ನನ್ನು ಮೊರೆಹೋಗುವುದಿಲ್ಲ.

## 2) ಭಗವಂತನನ್ನು ಭಜಿಸುವ ಭಕ್ತರು (ಶ್ಲೋಕ 16)

ಆದರೆ ಲೋಕದಲ್ಲಿ ದುಷ್ಕರ್ಮಿಗಳು ಮಾತ್ರವಲ್ಲದೆ ಪುಣ್ಯಕೆಲಸಗಳನ್ನು ಮಾಡುವ ಸುಕೃತಿಗಳೂ ಇದ್ದಾರೆ. ಅವರು ನನ್ನನ್ನು ಶರಣುಹೊಂದಿ ಭಜಿಸುತ್ತಾರೆ. ಅವರೂ ಕೂಡ ಸುಕೃತದ ತಾರತಮ್ಯದಿಂದ ಆರ್ತರೆಂದೂ, ಅರ್ಥಾರ್ಥಿಗಳೆಂದೂ. ಜಿಜ್ಞಾಸುಗಳೆಂದೂ ಮತ್ತು ಜ್ಞಾನಿಗಳೆಂದೂ ನಾಲ್ಕು ವಿಧವಾಗಿ ವಿಂಗಡಿಸಲ್ಪಟ್ಟಿದ್ದಾರೆ.

**ಆರ್ತನು** - ಪ್ರತಿಷ್ಠೆಯನ್ನೂ, ಭೋಗಗಳನ್ನೂ ಪಡೆಯಲು ಐಶ್ವರ್ಯಾದಿಗಳನ್ನು ಹೊಂದಿದವನಾಗಿ, ಮತ್ತೆ ಅವುಗಳನ್ನು ಕಳೆದುಕೊಂಡು ಅದರ ಪ್ರಾಪ್ತಿಗಾಗಿ ನನ್ನನ್ನು ಮೊರೆಹೋಗುವವನು.

**ಅರ್ಥಾರ್ಥೀ**- ಐಶ್ವರ್ಯವನ್ನು ಹೊಂದದೆ ಅದನ್ನು ಹೊಂದಲು ಅಪೇಕ್ಷೆಯನ್ನು ಹೊಂದಿ ಅದಕ್ಕಾಗಿ ನನ್ನಲ್ಲಿ ಶರಣಾಗುವವನು. ಆರ್ತ ಮತ್ತು ಅರ್ಥಾರ್ಥಿಗಳ ಪ್ರಾಪ್ಯ ವಿಷಯದಲ್ಲಿ ಏಕತೆ ಇದೆ. ಇಬ್ಬರು ಕೋರುವುದೂ ಐಹಿಕಾದಿ ಐಶ್ವರ್ಯಭೋಗಗಳನ್ನೇ, ಆದ್ದರಿಂದ ಇಬ್ಬರು ಕೋರುವ ಫಲವೂ ಒಂದೇ ಆಗಿದೆ.

**ಜಿಜ್ಞಾಸು** - ಪ್ರಕೃತಿ ವಿಮುಕ್ತವಾದ ಅಂದರೆ ಪ್ರಕೃತಿ ಸಂಬಂಧದಿಂದ ಬಿಡಲ್ಪಟ್ಟ ಆತ್ಮಸ್ವರೂಪವನ್ನು ಸಾಕ್ಷಾತ್ಕರಿಸಲು ಇಚ್ಛೆಹೊಂದಿದವನಾಗಿ ಅದಕ್ಕಾಗಿ ನನ್ನನ್ನು ಭಜಿಸುವವನು.

**ಜ್ಞಾನೀ**- ಕೇವಲ ಆತ್ಮ ಪ್ರಾಪ್ತಿಯಲ್ಲಿ ತೃಪ್ತಿಹೊಂದದೆ ಪರಮಪ್ರಾಪ್ಯನಾದ ಭಗವಂತನ ಸಾಕ್ಷಾತ್ಕಾರದಲ್ಲಿ ಇಚ್ಛೆಹೊಂದಿದವನಾಗಿ ಅದಕ್ಕಾಗಿ ನನ್ನನ್ನು

ಮೊರೆಹೋಗುವವನು. -ಈ ನಾಲ್ವರಲ್ಲಿಯೂ ಸತ್ಕಾರ್ಯದ ಅಧಿಕತೆಯಿಂದ ಶರಣಾಗತಿಯಲ್ಲಿ ವಿಶೇಷತೆ ಉಂಟಾಗುವುದರಿಂದ ಕ್ರಮಶಃ ಒಬ್ಬರಿಗಿಂತ ಒಬ್ಬರು ಅಧಿಕರಾಗಿದ್ದಾರೆ.

## II ಉಪಾಸಕರಲ್ಲಿ ಜ್ಞಾನಿಯ ಸರ್ವೋತ್ಕೃಷ್ಟತೆ (ಶ್ಲೋಕಗಳು 17 ರಿಂದ 30)

### 1) ಜ್ಞಾನಿಯ ಮಹಿಮೆ

ಮೇಲೆ ವಿವರಿಸಿದ ನಾಲ್ಕುವಿಧ ಭಕ್ತರಲ್ಲಿ ಜ್ಞಾನಿಯಾದವನು ಶ್ರೇಷ್ಠನಾಗಿದ್ದಾನೆ. ಏಕೆಂದರೆ ಅವನು ನಿತ್ಯಯುಕ್ತನೂ, ಏಕಭಕ್ತಿಯುತನೂ ಆಗಿದ್ದಾನೆ. ಮೊದಲಿನ ಮೂರುವಿಧ ಭಕ್ತರುಗಳು ತಾವು ಇಚ್ಛಿಸಿದ ಫಲಪ್ರಾಪ್ತಿಗಾಗಿ ನನ್ನನ್ನು ಆಶ್ರಯಿಸಿ ಪೂಜಿಸುವುದರಿಂದ, ಆ ಫಲವು ಲಭಿಸುವವರೆಗೆ ಮಾತ್ರ ಅವರು ನನ್ನಲ್ಲಿ ಭಕ್ತಿ ಮಾಡುವುದರಿಂದ, ಅವರ ಭಕ್ತಿಯು ತಮ್ಮ ಇಚ್ಛಿತ ಫಲಗಳಿಗೆ ಸಾಧನವಾಗಿದೆಯೇ ಹೊರತು ನನ್ನ ಪ್ರೀತಿಯಿಂದ ಉಂಟಾದುದಲ್ಲ. ಆದರೆ ಜ್ಞಾನಿಯ ರೀತಿಯೇ ಬೇರೆ. ಅವನು ಸದಾ ನನ್ನಲ್ಲಿ ನೆಟ್ಟಮನಸ್ಸುಳ್ಳವನಾಗಿ, ಸರ್ವದಾ ನನ್ನೊಂದಿಗೆ ಸೇರಿದ್ದಾನೆ. ಅಂದರೆ ನಿತ್ಯಯುಕ್ತನಾಗಿದ್ದಾನೆ. ಮತ್ತು ಅವನು ಭಕ್ತಿಯನ್ನು ಸಾಧನವಾಗಿಯಲ್ಲದೆ ಫಲವಾಗಿಯೂ ಹೊಂದಿದ್ದಾನೆ. ಇದೂ ಅಲ್ಲದೆ ಅವನು ನನ್ನೊಬ್ಬನಲ್ಲೇ ಭಕ್ತಿಯನ್ನು ಹೊಂದಿದವನಾಗಿದ್ದಾನೆ. ಹೀಗೆ ಅವನು **ಏಕಭಕ್ತನಾಗಿದ್ದಾನೆ.** ಅವನ ಭಕ್ತಿಯು ನನ್ನ ಮೇಲಿನ ಪ್ರೀತಿಯಿಂದ ಉಂಟಾಗಿದೆಯೇ ಹೊರತು ಫಲಾಪೇಕ್ಷೆಯಿಂದಾದುದಲ್ಲ. ಆದ್ದರಿಂದ ಅವನಿಗೆ ನನ್ನ ಮೇಲೆ ಅತ್ಯಧಿಕವಾದ ಪ್ರೀತಿಯಿದೆ ಮತ್ತು ಅವನು ನನಗೂ ಕೂಡ ಪ್ರಿಯನಾಗುತ್ತಾನೆ. ಅಂದರೆ ನನಗೂ ಅವನ ಮೇಲೆ ಅತ್ಯಧಿಕವಾದ ಪ್ರೀತಿಯು ಉಂಟಾಗುತ್ತದೆ.

ಮೇಲೆ ಹೇಳಿದ ನಾಲ್ಕುವಿಧ ಭಕ್ತರೆಲ್ಲರೂ ನನ್ನನ್ನೇ ಉಪಾಸಿಸುವುದರಿಂದ ಶ್ಲಾಘ್ಯರಾದವರೇ ಸರಿ. ಆದರೆ ಜ್ಞಾನಿಯನ್ನು ನನ್ನ ಆತ್ಮವನ್ನಾಗಿ ತಿಳಿಯುತ್ತೇನೆ. ಅದು ಏಕೆಂದರೆ ಅವನು ನನ್ನಲ್ಲೇ ನೆಟ್ಟಮನಸ್ಸುಳ್ಳವನಾಗಿ ನನ್ನನ್ನೇ ಸರ್ವೋತ್ತಮವಾದ ಗತಿಯಾಗಿ ಹೊಂದಿರುವುದರಿಂದ ನಾನಿಲ್ಲದಿದ್ದರೆ ಅವನಿಗೆ ಆತ್ಮಧಾರಣೆಯು ಅಸಂಭವವಾಗುವಂತೆ ಅವನಿಲ್ಲದಿದ್ದರೆ ನನ್ನ ಆತ್ಮಧಾರಣೆಯೂ ಅಸಂಭವವಾಗುವ ಹಾಗೆ ನನಗೆ ತೋರುತ್ತದೆ. ಆದ್ದರಿಂದ ನನ್ನ ಆತ್ಮನೇ ಆಗಿ, ನನ್ನೊಂದಿಗೆ

ನಿತ್ಯಯುಕ್ತನೂ, ಏಕಭಕ್ತಿಯುತನೂ ಆಗಿರುವ ಈ ಜ್ಞಾನಿಯ ಮಹಾತ್ಮ್ಯವು ಎಷ್ಟು ಎಂಬುದನ್ನು ನೀನು ತಿಳಿಯಬಹುದು.

## 2) ಜ್ಞಾನಿಯದುರ್ಲಭತೆ

ಆದರೆ ಈ ವಿಧವಾದ ಜ್ಞಾನಿಯು ಲಭಿಸುವುದು ಬಹಳ ಕಷ್ಟ. ಅನೇಕ ಪುಣ್ಯಜನ್ಮಗಳ ಫಲದಿಂದ ಕೊನೆಯಲ್ಲಿ ಸಮಸ್ತ ಜಗತ್ತೂ ವಾಸುದೇವನಲ್ಲದೆ ಬೇರೆಯಲ್ಲವೆಂಬ ಜ್ಞಾನದಿಂದ ಕೂಡಿದವನಾಗಿ, ನನ್ನನ್ನೇ ಪ್ರಾಪ್ಯನನ್ನಾಗಿಯೂ, ಪ್ರಾಪಕನನ್ನಾಗಿಯೂ ಪರಿಗಣಿಸುತ್ತಾ ಕೊನೆಗೆ ತನ್ನ ಮನೋರಥವೆಲ್ಲವೂ ನಾನೇ ಆಗಿ ನನ್ನನ್ನೇ ಶರಣು ಹೋಗುವ ಮಹಾ ಮನಸ್ಸುಳ್ಳ ಮಹಾತ್ಮನಾಗುವನು. ಆದರೆ "**ವಾಸುದೇವಃ ಸರ್ವಮಿತಿ ಸಮಹಾತ್ಮಾ ಸುದುರ್ಲಭಃ**"- ಅಂದರೆ ಪರಮಾತ್ಮನೇ ತನಗೆ ಪ್ರಾಪ್ಯನೂ, ಪ್ರಾಪಕನೂ ಮತ್ತು ಸಮಸ್ತ ಮನೋರಥವೂ ಆಗಿದ್ದಾನೆ ಎಂದಿರುವ ಮಹಾ ಮನಸ್ಸುಳ್ಳ ಮಹಾತ್ಮನು ಪರಮ ದುರ್ಲಭನು.

## 3) ಜ್ಞಾನಿಯ ದುರ್ಲಭತೆಗೆ ಕಾರಣ

i) **ಅನ್ಯದೇವತಾ ಪ್ರಾರ್ಥನೆ ಮಾಡುವವರು ನನ್ನನ್ನು ಆಶ್ರಯಿಸುವುದಿಲ್ಲ** - ಸಾಮಾನ್ಯ ಜನರು ಅವರವರ ಪ್ರಕೃತಿಯಿಂದ ಬಂದಿರುವ ವಾಸನೆಗಳಿಂದ ನಿತ್ಯವೂ ಬಂಧಿಸಲ್ಪಟ್ಟವರಾಗಿದ್ದಾರೆ. ಅವುಗಳ ಪ್ರಭಾವವು ಅವರಲ್ಲಿ ಅನೇಕ ಇಚ್ಛೆಗಳನ್ನು ಹುಟ್ಟಿಸುತ್ತದೆ. ಈ ಇಚ್ಛೆಗಳಿಗೆ ವಿಷಯಗಳಾದ ಕಾಮಗಳಿಂದ ಅವರ ಜ್ಞಾನವು ಅಪಹರಿಸಲ್ಪಡುತ್ತದೆ. ಅವರು ತಮ್ಮ ಕಾಮಸಿದ್ಧಿಗಾಗಿ ಇತರ ಅನ್ಯ ದೇವತೆಗಳನ್ನು ಪೂಜಿಸಲು ಉದ್ಯುಕ್ತರಾಗುತ್ತಾರೆ. ಅವರ ಪ್ರೀತಿಯನ್ನು ಸಂಪಾದಿಸುವ ಸಲುವಾಗಿ ಅನೇಕ ನಿಯಮಗಳನ್ನು ಪಾಲಿಸುತ್ತಾ ಅವರನ್ನು ಶರಣು ಹೋಗುತ್ತಾರೆ. ಇದರಿಂದ ಅವರು ನನ್ನ ಸ್ವರೂಪವನ್ನು ತಿಳಿಯುವುದಿಲ್ಲ.

ಯಾವ ಯಾವ ಭಕ್ತರು ಯಾವ ಯಾವ ದೇವತಾ ಶರೀರಗಳನ್ನು ವಿಶ್ವಾಸದಿಂದ ಪೂಜಿಸುತ್ತಾರೆಯೋ, ಅವರ ಆ ಶ್ರದ್ಧೆಯು ನಿರ್ವಿಘ್ನವಾಗಿ ಸ್ಥಿರವಾಗಿರುವಂತೆ ನಾನೇ ಮಾಡುವೆನು. ಆ ಶ್ರದ್ಧೆಯಿಂದ ಕೂಡಿದವನಾದ ಆ ಭಕ್ತನು ಆ ದೇವತೆಯ ಆರಾಧನೆಯನ್ನು ಮಾಡಲು ತೊಡಗುತ್ತಾನೆ ಮತ್ತು ಆ ದೇವತೆಯ ಮೂಲಕ ನನ್ನಿಂದ ಕೊಡಲ್ಪಟ್ಟ ತನ್ನ ಇಚ್ಛಾವಿಷಯಗಳನ್ನು ಹೊಂದುತ್ತಾನೆ. ಆದರೆ ಈ ಅಲ್ಪಬುದ್ಧಿಯುಳ್ಳ ಮನುಷ್ಯರು ದೇವತೆಗಳ ಆರಾಧನೆಯಿಂದ ಹೊಂದುವ ಫಲವು

ಕ್ಷಣಿಕವಾದುದು, ಅಶಾಶ್ವತವಾದುದು, ಅಂದರೆ ಕೆಲವು ಕಾಲದ ನಂತರ ನಾಶಹೊಂದುವಂತಹುದಾಗಿದೆ.

ಅದೂ ಅಲ್ಲದೆ ದೇವತೆಗಳನ್ನು ಪೂಜಿಸುವವರು ದೇವತೆಗಳನ್ನೇ ಹೊಂದುತ್ತಾರೆ. ನನ್ನ ಭಕ್ತರಾದರೋ ನನ್ನನೇ ಹೊಂದುತ್ತಾರೆ. ಆದರೆ ಆ ದೇವತೆಗಳೆಲ್ಲಾ ಪರಿಮಿತಿಯುಳ್ಳ ಭೋಗವುಳ್ಳವರೂ, ಪರಿಮಿತ ಕಾಲದವರೆಗೆ ಜೀವಿಸುವವರೂ ಆಗಿರುವುದರಿಂದ ಅವರನ್ನು ಆಶ್ರಯಿಸುವವರು ಅವರೊಂದಿಗೆ ತಾವೂ ನಾಶಹೊಂದುತ್ತಾರೆ. ಆದರೆ ನನ್ನ ಭಕ್ತರಾದರೋ ನನ್ನನ್ನೇ ಹೊಂದುತ್ತಾರೆ. ಅಂದರೆ ಅದೇ ಕರ್ಮಗಳನ್ನೇ ನನ್ನ ಆರಾಧನೆಯ ರೂಪವೆಂದು ತಿಳಿದು, ಅಲ್ಪ ಫಲಗಳ ಆಸಕ್ತಿಯನ್ನು ತೊರೆದು, ನನ್ನನ್ನು ಪ್ರೀತಿಗೊಳಿಸುವುದೊಂದನ್ನೇ ಮುಖ್ಯ ಪ್ರಯೋಜನವಾಗಿ ಇಟ್ಟುಕೊಂಡು ಇರುವ ಅವರು ನನ್ನನ್ನೇ ಹೊಂದುತ್ತಾರೆ.

**ii) ನನ್ನ ವಿಭವಸ್ವರೂಪವನ್ನು ಅರಿಯದೇ ಇರುವವರು ನನ್ನನ್ನು ಆಶ್ರಯಿಸುವುದಿಲ್ಲ.**

ಸರ್ವರೂ ಆಶ್ರಯಿಸಲಿ ಎಂದು ನಾನು ಮನುಷ್ಯಾದಿ ಅವತಾರಗಳನ್ನು ಎತ್ತಿದರೂ ಕೂಡ ನನ್ನ ಪರಸ್ವರೂಪವನ್ನು ತಿಳಿಯದೆ ಇರುವವರು ನನ್ನನ್ನು ಆಶ್ರಯಿಸುವುದಿಲ್ಲ. ನಾನು ಪರಮ ಕರುಣೆಯಿಂದಲೂ, ಆಶ್ರಿತರ ಮೇಲಿನ ವ್ಯಾಮೋಹದಿಂದಲೂ, ಸರ್ವರೂ ನನ್ನನ್ನು ಸುಲಭವಾಗಿ ಆಶ್ರಯಿಸಲಿ ಎಂದೂ ವಸುದೇವ ಪುತ್ರನಾಗಿ ಜನಿಸಿದ್ದೇನೆ. ಆದಾಗ್ಯೂ ನನ್ನ ನಾಶರಹಿತ ಮತ್ತು ಸರ್ವೋತ್ಕೃಷ್ಟವಾದ ಪರಮಾತ್ಮ ಸ್ವಭಾವವನ್ನು ತಿಳಿಯದ ಬುದ್ಧಿಹೀನ ಜನರು ಅವ್ಯಕ್ತನಾದ ನನ್ನನ್ನು ವ್ಯಕ್ತನಾದವನಂತೆ ಅಂದರೆ ಜಗತ್ತಿನ ಇತರ ರಾಜಕುಮಾರರಿಗೆ ಸಮನಾಗಿ ಕಾಣುತ್ತಾರೆ.

ಆದರೆ ನಾನು ಏಕೆ ಒಬ್ಬರಿಗೂ ನನ್ನ ನಿಜಸ್ವರೂಪದೊಂದಿಗೆ ಕಾಣಿಸುವುದಿಲ್ಲ ಎಂದರೆ - ನನ್ನ ಅವತಾರ ಕಾಲದಲ್ಲಿ ಯೋಗಮಾಯೆಯಿಂದ ಆವರಿಸಲ್ಪಟ್ಟಿರುವ ನಾನು ಸರ್ವರಿಗೂ ಪ್ರತ್ಯಕ್ಷನಲ್ಲವು. ವಿವೇಕಶೂನ್ಯವಾದ ಈ ಪ್ರಪಂಚವು ನನ್ನನ್ನು ಉತ್ಪತ್ತಿರಹಿತನೆಂದೂ, ನಾಶರಹಿತನೆಂದೂ ತಿಳಿಯುವುದಿಲ್ಲ. ಭೂತ ವರ್ತಮಾನ ಭವಿಷ್ಯತ್ತೆಂಬ ತ್ರಿಕಾಲವರ್ತಿಗಳಾದ ಸರ್ವ ಪ್ರಾಣಿಗಳ ವಿಷಯವೆಲ್ಲವೂ ನನಗೆ ಗೊತ್ತು. ಅವುಗಳಲ್ಲಿ ಯಾರೂ ನನ್ನನ್ನು ತಿಳಿಯುವುದಿಲ್ಲ. ಅಂದರೆ ಪರವಾಸುದೇವನೆಂದು ನನ್ನನ್ನು ಅರಿತು ನನ್ನನ್ನು ಆಶ್ರಯಿಸುವವನು ಯಾರೂ ಲಭಿಸುವುದಿಲ್ಲ. ಆದ್ದರಿಂದ ಜ್ಞಾನಿಯು ಬಹಳ ದುರ್ಲಭನು.

**iii) ಪೂರ್ವಜನ್ಮದ ವಾಸನೆಯಿಂದ ಹುಟ್ಟುವಾಗಲೇ ಭೂತಗಳು ಸಂಮೋಹ ಹೊಂದಿರುವುದರಿಂದ ನನ್ನನ್ನು ಆಶ್ರಯಿಸುವುದಿಲ್ಲ.**

ಪ್ರಾಣಿಗಳೆಲ್ಲರೂ ಅವರವರ ಪೂರ್ವಜನ್ಮಗಳಲ್ಲಿ ಅವರವರು ಅಂದು ಹೊಂದಿದ ಪ್ರಕೃತಿಯ ಸ್ವರೂಪಗಳಿಗೆ ಅನುಗುಣವಾದ ವಾಸನೆಗಳನ್ನು ಹೊಂದಿರುತ್ತಾರೆ. ಆದ್ದರಿಂದ ಅವರು ಪೂರ್ವಜನ್ಮದ ಇಚ್ಛೆ ಮತ್ತು ದ್ವೇಷಗಳಿಂದ ಉಂಟಾದ ಶೀತೋಷ್ಣ ಸುಖದುಃಖಾದಿ ದ್ವಂದ್ವಗಳೆಂಬ ಮೋಹಜನಕ ವಸ್ತುಗಳಿಂದ ಜನ್ಮಕಾಲದಲ್ಲೇ ಭ್ರಮೆಯನ್ನು ಹೊಂದಿ ಹುಟ್ಟುತ್ತಾರೆ. ಅಂದರೆ ಹಿಂದಿನ ಜನ್ಮದಲ್ಲಿ ಅಭ್ಯಸಿಸಿದ ಆಯಾಯಾ ವಿಷಯದಲ್ಲಿ ಇಚ್ಛೆಯನ್ನೂ ದ್ವೇಷವನ್ನೂ ಮಾಡುವ ಸ್ವಭಾವವುಳ್ಳವರಾಗಿ ಹುಟ್ಟುತ್ತಾರೆ. ಆದ್ದರಿಂದ ಅವರು ನನ್ನ ಸಂಯೋಗ ವಿಯೋಗದಲ್ಲಿ ಸುಖದುಃಖವುಳ್ಳ ಸ್ವಭಾವದವರಾಗುವುದಿಲ್ಲ. ಆದರೆ ಜ್ಞಾನಿಯಾದವನು ನನ್ನ ಸಂಯೋಗ ವಿಯೋಗ ಒಂದರಲ್ಲೇ ಸುಖದುಃಖಹೊಂದುವ ಸ್ವಭಾವದವನಾಗಿರುವನು. ಈ ವಿಧವಾದ ಸ್ವಭಾವವುಳ್ಳವನಾಗಿ ಹುಟ್ಟುವುದು ದುರ್ಲಭ

**4. ಪೂರ್ವಜನ್ಮದ ವಾಸನೆಯು ಹೋಗಿ, ಜ್ಞಾನಿಯಾಗಲು ಉಪಾಯ.**

ಹೀಗೆ ಎಲ್ಲರೂ ಹುಟ್ಟುವಾಗಲೇ ಪೂರ್ವಜನ್ಮದ ಇಚ್ಛಾದ್ವೇಷಗಳೆಂಬ ದ್ವಂದ್ವರೂಪ ಮೋಹದಿಂದ ಕೂಡಿದ ವಾಸನೆಯುಳ್ಳವರಾಗಿ ಸಂಮೋಹವನ್ನು ಹೊಂದುವವರು ಎಂದಮೇಲೆ ನನ್ನನ್ನು ಆಶ್ರಯಿಸಿ ಉಪಾಸಿಸುವವರೇ ಇಲ್ಲವೇ ಎಂದರೆ ನನ್ನನ್ನು ಉಪಾಸಿಸುವ ನಾಲ್ಕು ವಿಧ ಭಕ್ತರು ಇದ್ದಾರೆ ಎಂದು ಮೇಲೆ ಹೇಳಿದೆ. ಅವರು ನನ್ನನ್ನು ಭಜಿಸುವ ಮನುಸ್ಸನ್ನು ಹೊಂದುವ ಬಗೆ ಹೇಗೆ ಎಂದರೆ, ಪುಣ್ಯಕರ್ಮಗಳನ್ನು ಮಾಡುತ್ತಿದ್ದರೆ ಅದು ಸಾಧ್ಯವಾಗಬಲ್ಲದು. ಪೂರ್ವಜನ್ಮದವಾಸನೆಗಳನ್ನು ಹೋಗಲಾಡಿಸಿಕೊಳ್ಳಬೇಕಾದರೆ ಪುಣ್ಯಕರ್ಮಗಳನ್ನು ಮಾಡುತ್ತಾ ಜನ್ಮ ಜನ್ಮಗಳನ್ನು ಕಳೆಯಬೇಕು. ಹೀಗೆ ಅನೇಕ ಜನ್ಮಗಳಿಂದ ಆರ್ಜಿಸಲ್ಪಟ್ಟ ಪುಣ್ಯಕರ್ಮಗಳಿಂದ ಜನರ ಹಿಂದಿನ ವಾಸನಾರೂಪವಾದ ಪಾಪಗಳೆಲ್ಲಾ ನಾಶವಾಗುತ್ತವೆ. ಮತ್ತು ಅವರು ಸುಖದುಃಖಾದಿ ದ್ವಂದ್ವಮೋಹದಿಂದ ಬಿಡುಗಡೆ ಹೊಂದಿದವರಾಗಿ ದೃಢವ್ರತರಾಗಿ ನನ್ನನ್ನು ಭಜಿಸುತ್ತಾರೆ. ಆದ್ದರಿಂದ ಜ್ಞಾನಿಯಾಗಬೇಕಾದರೆ ಅನೇಕ ಜನ್ಮಗಳನ್ನು ಪುಣ್ಯಕರ್ಮಗಳನ್ನು ಮಾಡುತ್ತಾ ಕಳೆಯಬೇಕು ಎಂದು ಅಭಿಪ್ರಾಯ.

ಈ ಜರಾ ಮರಣದಿಂದ ಬಿಡುಗಡೆ ಹೊಂದುವುದಕ್ಕಾಗಿ ಅಂದರೆ ಪ್ರಕೃತಿ ರಹಿತ ಆತ್ಮಸ್ವರೂಪದರ್ಶನದ ಆಸೆಯಿಂದ ಜಿಜ್ಞಾಸುಗಳಾಗಿ ನನ್ನನ್ನು

ಆಶ್ರಯಿಸುವವರು ಬ್ರಹ್ಮವನ್ನೂ ಆಧ್ಯಾತ್ಮಸ್ವರೂಪವನ್ನೂ ಮತ್ತು ಸಮಸ್ತ ಕರ್ಮವನ್ನೂ ಸಂಪೂರ್ಣವಾಗಿ ತಿಳಿಯುವರು, ಯಾರು ಆದಿಭೂತದೊಂದಿಗೂ ಆದಿದೈವದೊಂದಿಗೂ, ಆದಿಯಜ್ಞದೊಂದಿಗೂ ನನ್ನನ್ನು ತಿಳಿಯುವರೋ, ಅವರೆಲ್ಲರೂ ಕೂಡ ಸಾವಧಾನ ಮನಸ್ಕರಾಗಿ ಮರಣ ಕಾಲದಲ್ಲಿಯೂ ಅವರ ಪ್ರಾಪ್ಯಕ್ಕೆ ಅನುಗುಣವಾಗಿ ನನ್ನನ್ನು ತಿಳಿಯುವರು.'' ''ಹೀಗೆ ಅಂತ್ಯಕಾಲದಲ್ಲಿ ನನ್ನನ್ನು ಸ್ಮರಿಸುವವನು ಮುಂದಿನ ಜನ್ಮದಲ್ಲಿಯೂ ನನ್ನ ಸ್ಮರಣೆಯನ್ನೇ ಹೊಂದಿ ಜ್ಞಾನಿಯಾಗುವನು'' ಎಂದೂ. ''ಅಂತ್ಯಕಾಲದಲ್ಲಿ ನನ್ನ ಸ್ಮೃತಿ ಉಂಟಾಗಬೇಕಾದರೆ ಜೀವಿಸಿರುವ ಇತರಕಾಲದಲ್ಲೆಲ್ಲಾ ತೈಲಧಾರೆಯಂತೆ ಅವಿಚ್ಛಿನ್ನವಾಗಿ ನನ್ನನ್ನೇ ಪ್ರೀತಿಯಿಂದಲೂ, ಭಕ್ತಿಯಿಂದಲೂ ಸರ್ವದಾಸ್ಮರಿಸುತ್ತಿರು'' ಎಂದೂ ಮುಂದಿನ ಅಧ್ಯಾಯದಲ್ಲಿ ಅಂದರೆ ಎಂಟನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ವಿಶದವಾಗಿ ತಿಳಿಸಿದ್ದಾನೆ

ಈ ಏಳನೆಯ ಅಧ್ಯಾಯದಲ್ಲಿ ಪರಮಾತ್ಮನು ಸಮಸ್ತದೋಷರಹಿತನೂ, ಅಸಂಖ್ಯೇಯ ಕಲ್ಯಾಣಗುಣಗಣಭರಿತನೂ. ಅನಂತ ಮಹಾವಿಭೂತಿಯಿಂದ ಕೂಡಿರುವವನೂ ಆಗಿರುವುದರಿಂದ, ತನಗಿಂತ ಬೇರೆಯಾಗಿರುವ ಸಮಸ್ತ ಚಿದಚಿದ್ವಸ್ತುಗಳಿಗಿಂತ ವಿಲಕ್ಷಣನಾಗಿರುವನು ಎಂಬ ವಿವಿಕ್ತ ವಿಷಯಜ್ಞಾನದೊಂದಿಗೆ ಆವನ ನಿಜ ಸ್ವರೂಪ ಜ್ಞಾನವನ್ನು ತಿಳಿಸಿರುವುದರಿಂದ ಇದಕ್ಕೆ ಜ್ಞಾನ ವಿಜ್ಞಾನ ಯೋಗವೆಂದು ಹೆಸರು. ಇದರ ಅರ್ಥವನ್ನು ಶ್ರೀ ಯಾಮುನಾಚಾರ್ಯರು ಗೀತಾರ್ಥಸಂಗ್ರಹದ ಹನ್ನೊಂದನೆಯ ಶ್ಲೋಕದಲ್ಲಿ ಹೀಗೆ ಹೇಳಿದ್ದಾರೆ.

**''ಸ್ವಯಾಥಾತ್ಮ್ಯಂ ಪ್ರಕೃತ್ಯಾಸ್ಯ ತಿರೋಧಿಶ್ಶರಣಾಗತಿಃ''**
**ಭಕ್ತಭೇದಃ ಪ್ರಬುದ್ಧಸ್ಯಶ್ರೈಷ್ಠ್ಯಂ ಸಪ್ತಮ ಉಚ್ಯತೇ ॥**

ಪರಮಾತ್ಮನ ನಿಜಸ್ವರೂಪವೂ, ಪ್ರಕೃತಿಯಿಂದ ಅದು ಮರೆಸಿ ಹೋಗಿರುವಿಕೆಯೂ, ಅದರ ನಿವೃತ್ತಿಗಾಗಿ ಪರಮಾತ್ಮನಲ್ಲಿ ಶರಣಾಗತಿಯೂ, ನಾಲ್ಕು ವಿಧಭಕ್ತರ ವಿಚಾರವೂ, ಅವರಲ್ಲಿ ಜ್ಞಾನಿಯಾದ ಭಕ್ತನ ಪರಮ ಶ್ರೇಷ್ಠತೆಯೂ ಏಳನೆಯ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿದೆ.

*****

## ಎಂಟನೆಯ ಅಧ್ಯಾಯ

# ಅಕ್ಷರ ಬ್ರಹ್ಮಯೋಗ

ವಿಷಯ ಸೂಚಿಕೆ :

ಉಪೋದ್ಘಾತ :


I. ಭಕ್ತರು ಅರಿಯಬೇಕಾದ ವಿಷಯಗಳು
(ಬ್ರಹ್ಮ ಅಧ್ಯಾತ್ಮ ಕರ್ಮ, ಅಧಿಭೂತ, ಅಧಿದೈವ ಮತ್ತು ಅಧಿಯಜ್ಞ - ಎಂಬ ಪದಗಳ ಅರ್ಥ ವಿವರಣೆ) (ಶ್ಲೋಕಗಳು 1 ರಿಂದ 4)

II. ಭಕ್ತರ ಅಂತ್ಯಕಾಲ ಸ್ಮೃತಿಯ ಪ್ರಭಾವ (ಶ್ಲೋಕಗಳು 5 ರಿಂದ 8)

III. ತ್ರಿವಿಧಭಕ್ತರ ಉಪಾಸನ ಕ್ರಮ (ಶ್ಲೋಕಗಳು 9 ರಿಂದ 15)

1) ಐಶ್ವರ್ಯಾರ್ಥಿಯು ಧ್ಯಾನಿಸುವ ಕ್ರಮ (ಶ್ಲೋಕಗಳು 9ರಿಂದ 10)

2) ಕೈವಲ್ಯಾರ್ಥಿಯು (ಜಿಜ್ಞಾಸುವು) ಧ್ಯಾನಿಸುವ ಕ್ರಮ (ಶ್ಲೋಕಗಳು 11 ರಿಂದ 13)

3) ಜ್ಞಾನಿಯಾದ ಭಕ್ತನ ಭಗವದುಪಾಸನ ಕ್ರಮ (ಶ್ಲೋಕಗಳು 14 ಮತ್ತು 15)

IV. ತ್ರಿವಿಧ ಭಕ್ತರು ಹೊಂದುವ ಫಲ (ಶ್ಲೋಕಗಳು 16 ರಿಂದ 22)

1) ಐಶ್ವರ್ಯಾರ್ಥಿಗಳು ಹೊಂದುವ ಫಲ (ಶ್ಲೋಕಗಳು 16ರಿಂದ19)

2) ಜಿಜ್ಞಾಸುಗಳು ಹೊಂದುವ ಫಲ (ಶ್ಲೋಕಗಳು 20 ಮತ್ತು 21)

3) ಜ್ಞಾನಿಯಾದ ಭಕ್ತನು ಪಡೆಯುವ ಸರ್ವೋತ್ಕೃಷ್ಟವಾದ ಫಲ (ಶ್ಲೋಕ 22)

V. ಯೋಗಿಗಳು ಕಾಲವಾದ ಮೇಲೆ ಹೋಗುವ ಎರಡು ವಿಧವಾದ ಮಾರ್ಗಗಳು (ಶ್ಲೋಕಗಳು 23 ರಿಂದ 26)
ಶುಕ್ಲಗತಿ - ಅರ್ಚಿರಾದಿ ಮಾರ್ಗ
ಕೃಷ್ಣಗತಿ - ಧೂಮಾದಿ ಮಾರ್ಗ

## VI. ಭಕ್ತನಾದ ಯೋಗಿಯ ಪರಮಪದ ಪ್ರಾಪ್ತಿ (ಶ್ಲೋಕಗಳು 27 ಮತ್ತು 28)

ಉಪೋದ್ಘಾತ:-

ಏಳನೆಯ ಅಧ್ಯಾಯದಲ್ಲಿ, ಪರಮಾತ್ಮನಾದ ತಾನು ಸಮಸ್ತ ಚಿದಚಿದ್ವಸ್ತುಗಳಿಗೆಲ್ಲಾ ಸ್ವಾಮಿಯೂ, ಕಾರಣನೂ, ಆಧಾರನೂ, ನಿಯಾಮಕನೂ ಆಗಿರುವನೆಂದೂ, ತನ್ನ ಈ ಸ್ವರೂಪವನ್ನು ಪ್ರಕೃತಿಯೆಂಬ ಪ್ರಬಲವಾದ ದೈವೀಮಾಯೆಯು ಮರೆಮಾಡಿದೆಯೆಂದೂ, ಆದರೆ ಪರಮಾತ್ಮನಾದ ತನ್ನಲ್ಲಿ ಶರಣಾದವರು ಅದನ್ನು ದಾಟಬಲ್ಲರು ಎಂದೂ ಶ್ರೀಕೃಷ್ಣನು ಉಪದೇಶಮಾಡಿದ್ದಾನೆ ಮತ್ತು ಜಗತ್ತಿನಲ್ಲಿ ಪರಮಾತ್ಮನನ್ನು ಭಜಿಸುವ ಭಕ್ತರು ನಾಲ್ಕುವಿಧವಾಗಿ ಇರುವರೆಂದೂ ಅವರಲ್ಲಿ ಜ್ಞಾನಿಯಾದ ಭಕ್ತನೇ ಪರಮಶ್ರೇಷ್ಠನೆಂದೂ ತಿಳಿಸಿದ್ದಾನೆ. ಅಲ್ಲಿ ತಿಳಿಸಿರುವ ಆರ್ತ, ಅರ್ಥಾರ್ಥೀ, ಜಿಜ್ಞಾಸು, ಜ್ಞಾನಿ ಎಂಬ ನಾಲ್ಕುವಿಧ ಭಕ್ತರಲ್ಲಿ ಆರ್ತ ಮತ್ತು ಅರ್ಥಾರ್ಥೀ ಎಂಬ ಭಕ್ತರಿಬ್ಬರೂ ಐಶ್ವರ್ಯಾರ್ಥಿಗಳಾಗಿರುವುದರಿಂದ ಅವರಿಬ್ಬರನ್ನೂ ಒಟ್ಟಿಗೆ ಸೇರಿಸಿ ಐಶ್ವರ್ಯಾರ್ಥೀ ಎಂದು ಕರೆಯಬಹುದು. ಆಗ ಐಶ್ವರ್ಯಾರ್ಥೀ, ಜಿಜ್ಞಾಸು ಮತ್ತು ಜ್ಞಾನಿ ಎಂದು ಭಕ್ತರನ್ನು ಮೂರು ವಿಧವಾಗಿ ವಿಂಗಡಿಸಬಹುದು. ಎಂಟನೆಯ ಅಧ್ಯಾಯದಲ್ಲಿ ಈ ತ್ರಿವಿಧ ಭಕ್ತರೂ ಅರಿಯಬೇಕಾದ ಅಂಶಗಳಾವುವು ಎಂಬುದನ್ನೂ, ಅವರು ಪರಮಾತ್ಮನನ್ನು ಯಾವ ಯಾವ ರೀತಿಯಲ್ಲಿ ಧ್ಯಾನ ಮಾಡುತ್ತಾರೆ ಎಂಬುದನ್ನೂ ಮತ್ತು ಕಾಲವಾದ ಮೇಲೆ ಅವರು ಯಾವಯಾವ ಫಲಹೊಂದುತ್ತಾರೆ. ಎಂಬುದನ್ನೂ ತಿಳಿಸುತ್ತಾನೆ.

## I. ಭಕ್ತರು ಅರಿಯಬೇಕಾದ ವಿಷಯಗಳು

### (ಬ್ರಹ್ಮ, ಅಧ್ಯಾತ್ಮ, ಕರ್ಮ, ಅಧಿಭೂತ, ಅಧಿದೈವ ಮತ್ತು ಅಧಿಯಜ್ಞ - ಎಂಬ ಪದಗಳ ಅರ್ಥ ವಿವರಣೆ) (ಶ್ಲೋಕಗಳು 1 ರಿಂದ 4)

ಶ್ರೀ ಕೃಷ್ಣನು ಅರ್ಜುನನಿಗೆ ಜರಾಮರಣಾದಿಗಳಿಂದ (ಮುಪ್ಪು ಸಾವುಗಳಿಂದ) ತಪ್ಪಿಸಿಕೊಳ್ಳಬೇಕಾದರೆ ಭಕ್ತನು ಬ್ರಹ್ಮ ಅಧ್ಯಾತ್ಮ ಕರ್ಮ, ಅಧಿಭೂತ, ಅಧಿ ದೈವ ಮತ್ತು ಅಧಿಯಜ್ಞ ಇವುಗಳ ಸ್ವರೂಪವನ್ನು ತಿಳಿದುಕೊಳ್ಳಬೇಕೆಂದೂ, ಮರಣಕಾಲದಲ್ಲಿ ಭಗವಂತನ ಸ್ಮರಣೆಮಾಡಬೇಕೆಂದೂ ತಿಳಿಸಿದನು. ಈ ವಿಷಯಗಳನ್ನೆಲ್ಲಾ ವಿಶದವಾಗಿ ತಿಳಿಸುವಂತೆ ಶ್ರೀಕೃಷ್ಣನನ್ನು ಅರ್ಜುನನು ಕೇಳಿಕೊಳ್ಳಲು ಶ್ರೀ ಕೃಷ್ಣನು ಅವನಿಗೆ ತಿಳಿಯಪಡಿಸುತ್ತಾನೆ. "ಬ್ರಹ್ಮವೆಂಬುದು ಪ್ರಕೃತಿವಿಯುಕ್ತ

ಅಂದರೆ ಪ್ರಕೃತಿ ಸಂಬಂಧದಿಂದ ಬಿಡಲ್ಪಟ್ಟ ಪರಿಶುದ್ಧವಾದ ಆತ್ಮ ಸ್ವರೂಪವು. ಅಧ್ಯಾತ್ಮವೆಂಬುದು ಪ್ರಕೃತಿಯು ಸಮಸ್ತ ಉತ್ಪತ್ತಿಗೆ ಕಾರಣವಾದ ಕಾರ್ಯವೇ ಕರ್ಮವು. ಅಧಿಭೂತ ವೆಂಬುದು ಆಕಾಶ ಮೊದಲಾದವುಗಳಲ್ಲಿ ಇರುವ ಪರಿಣಾಮ ವಿಶೇಷಗಳಾದ ಶಬ್ದಸ್ಪರ್ಶರೂಪರಸ ಗಂಧಗಳು. ಅಧಿದೈವ ಎಂಬುದು ಶಬ್ದಾದಿಗಳ ಭೋಕ್ತೃವಾದ ಪುರುಷನನ್ನು ತಿಳಿಸುತ್ತದೆ. ಇವುಗಳ ಸ್ವರೂಪವನ್ನೆಲ್ಲಾ ಅರಿತರೆ ಆಗ ನಾವು ಹೊಂದಬೇಕಾದ ವಿಷಯಗಳಾವುವು ಎಂಬುದರ ಅರಿವು ಉಂಟಾಗುತ್ತದೆ. ಅಂದರೆ ಪರಮ ಪುರುಷನನ್ನು ಹೊಂದಬೇಕು, ಇತರ ಪ್ರಾಕೃತ ವಿಷಯಗಳನ್ನು ತ್ಯಜಿಸಬೇಕು ಎಂಬ ಅರಿವು ಉಂಟಾಗುತ್ತದೆ. ಸಮಸ್ತರಲ್ಲಿಯೂ ಅಂತರ್ಯಾಮಿಯಾಗಿ ಇದ್ದುಕೊಂಡು ಯಜ್ಞಗಳಿಂದ ಆರಾಧಿಸಲ್ಪಡುವ ತಾನೇ ಅಧಿಯಜ್ಞನು' ಎನ್ನುತ್ತಾನೆ ಶ್ರೀಕೃಷ್ಣ

## II. ಭಕ್ತರ ಅಂತ್ಯಕಾಲ ಸ್ಮೃತಿಯ ಪ್ರಭಾವ (ಶ್ಲೋಕಗಳು 5 ರಿಂದ 8)

ಮರಣಕಾಲದಲ್ಲಿ ನನ್ನ ಸ್ಮರಣೆಯು ಬಹಳ ಮುಖ್ಯವಾದುದು. ಯಾವನು ತನ್ನ ಕೊನೆಯ ಕಾಲದಲ್ಲಿ ನನ್ನನ್ನೇ ಸ್ಮರಿಸುತ್ತಾ ದೇಹವನ್ನು ತ್ಯಾಗಮಾಡುವನೋ ಅವನು ನನ್ನ ಸ್ವಭಾವವನ್ನು ಹೊಂದಿ ನನ್ನನ್ನೇ ಸೇರುತ್ತಾನೆ. ಈ ವಿಷಯದಲ್ಲಿ ಸಂದೇಹವೇ ಇಲ್ಲ. ಒಬ್ಬನು ಅವನ ಕೊನೆಯಕಾಲದಲ್ಲಿ ಯಾವಯಾವ ಸ್ವಭಾವವನ್ನು ಸ್ಮರಿಸಿಕೊಂಡು ದೇಹವನ್ನು ಬಿಡುವನೋ, ಅವನು ಮರಣಾನಂತರ ಅವನ ಸಂಸ್ಕಾರದಿಂದ ಆಯಾ ಸ್ವಭಾವವನ್ನೇ ಹೊಂದುತ್ತಾನೆ. ಆದುದರಿಂದ ಎಲೈ ಅರ್ಜುನನೇ! ನೀನು ಎಲ್ಲಾ ಕಾಲದಲ್ಲಿಯೂ ನನ್ನನ್ನೇ ನೆನೆಯುತ್ತಾ, ನಿನ್ನ ಮನಸ್ಸನ್ನೂ ಬುದ್ಧಿಯನ್ನೂ ನನ್ನಲ್ಲೇ ನೆಲೆಗೊಳಿಸಿದ್ದರೆ ನೀನು ನನ್ನನ್ನೇ ಸೇರುವುದರಲ್ಲಿ ಸಂದೇಹವೇ ಇಲ್ಲ. ಆದರೆ ಅಂತ್ಯಕಾಲದಲ್ಲಿ ಭಗವಂತನ ಸ್ಮರಣೆ ಬರಬೇಕಾದರೆ, ಜೀವಿತಕಾಲದಲ್ಲಿ ಸದಾ ಅವನನ್ನು ಸ್ಮರಿಸುತ್ತಾ ಕರ್ಮಮಾಡುವ ಅಭ್ಯಾಸ ಮಾಡುತ್ತಿದ್ದರೆ ಆಗ ತಾನಾಗಿಯೇ ಅಂತ್ಯಕಾಲದಲ್ಲಿ ಭಗವಂತನಸ್ಮರಣೆ ಉಂಟಾಗಬಲ್ಲದು. ಆದ್ದರಿಂದ ಸದಾಕಾಲವೂ ನನ್ನನ್ನೇ ಸ್ಮರಿಸುತ್ತಾ ನೀನು ಯುದ್ಧಮಾಡು. ಅಂದರೆ ನಿನ್ನ ಕರ್ತವ್ಯ ಕರ್ಮಗಳನ್ನು ಮಾಡು. ಹೀಗೆ ಅಭ್ಯಾಸಯೋಗದಿಂದ ಕೂಡಿದವನಾಗಿ, ಉಪಾಸ್ಯ ವಸ್ತುವನ್ನು ನೆನೆಯುತ್ತಾ. ಧ್ಯಾನದಿಂದ ಕೂಡಿ, ಬೇರೆ ವಿಷಯಕ್ಕೆ ತಿರುಗದ ಮನಸ್ಸಿನಿಂದ ಪರಮಪುರುಷನಾದ ನನ್ನನ್ನು ಯಾವಾಗಲೂ ಚಿಂತಿಸತಕ್ಕ ಮನುಷ್ಯನು

ಸಾಯುವಕಾಲದಲ್ಲಿಯೂ ಕೂಡ ನನ್ನನ್ನೇ ಹೊಂದುವನು. ಅಂದರೆ ನನ್ನ ಆಕಾರವನ್ನೇ ಪಡೆಯುವನು. ಅಂತಿಮಕಾಲದಲ್ಲಿ ತಾನು ಪ್ರೀತಿಸುತ್ತಿದ್ದ ಜಿಂಕೆಯಮರಿಯನ್ನೇ ಚಿಂತಿಸುತ್ತಿದ್ದುದರಿಂದ ಕಾಲವಾದ ಮೇಲೆ ಮರುಜನ್ಮದಲ್ಲಿ ಜಡಭರತನು ಜಿಂಕೆಯಮರಿಯ ಆಕಾರವನ್ನೇ ಪಡೆದನೆಂದು ಪುರಾಣದಲ್ಲಿದೆ.

## III. ತ್ರಿವಿಧಭಕ್ತರ ಉಪಾಸನ ಕ್ರಮ (ಶ್ಲೋಕಗಳು 9 ರಿಂದ 15)

### 1) ಐಶ್ವರ್ಯಾರ್ಥಿಯು ಧ್ಯಾನಿಸುವ ಕ್ರಮ (ಶ್ಲೋಕಗಳು 9 ರಿಂದ 10)

ಸರ್ವಜ್ಞನೂ, ಪುರಾಣಪುರುಷನೂ, ಸರ್ವಲೋಕನಿಯಾಮಕನೂ, ಅಣುವಿಗಿಂತ ಅಣುವೂ, ಎಲ್ಲವನ್ನೂ ಸೃಷ್ಟಿಮಾಡುವವನೂ, ಮನಸ್ಸಿನ ಆಲೋಚನೆಗೆ ಎಟುಕದ ರೂಪವುಳ್ಳವನೂ, ಸೂರ್ಯನಂತೆ ಪ್ರಕಾಶವುಳ್ಳವನೂ ಮತ್ತು ಕತ್ತಲೆಯಿಂದ ಆಚೆ ಇರುವವನೂ ಆಗಿರುವ ಭಗವಂತನನ್ನು ಸದಾಕಾಲದಲ್ಲಿಯೂ ಸ್ಮರಿಸುವ ಐಶ್ವರ್ಯಾರ್ಥಿಯಾದ ಭಕ್ತನು ಭಕ್ತಿಯಿಂದ ಕೂಡಿದವನಾಗಿ, ತನ್ನ ಯೋಗಫಲವೆಂಬ ದೃಢಸಂಸ್ಕಾರದಿಂದ ಉಂಟಾದ ನಿಶ್ಚಲವಾದ ಮನಸ್ಸನ್ನು ಪಡೆದವನಾಗಿ, ತನ್ನ ಹುಬ್ಬುಗಳ ಮಧ್ಯದಲ್ಲಿ ಪ್ರಾಣವನ್ನು ನಿಲ್ಲಿಸಿ ಆ ದಿವ್ಯ ರೂಪನಾದ ಪರಮ ಪುರುಷನನ್ನು ಸೇರುವನು.

### 2) ಕೈವಲ್ಯಾರ್ಥಿಯು (ಜಿಜ್ಞಾಸುವು) ಧ್ಯಾನಿಸುವ ಕ್ರಮ (ಶ್ಲೋಕಗಳು 11 ರಿಂದ 13)

ವೇದವನ್ನು ಅರಿತವರು ಯಾವ ಪರಿಶುದ್ಧವಾದ ಆತ್ಮಸ್ವರೂಪವನ್ನು ಹೇಳುವರೋ, ರಾಗದ್ವೇಷಗಳನ್ನು ತ್ಯಜಿಸಿದ ಯತಿಗಳು ಯಾವ ಅಕ್ಷರವನ್ನು ಪ್ರವೇಶಿಸುವರೋ, ಯಾವುದನ್ನು ಕೋರಿ ಬ್ರಹ್ಮಚರ್ಯವನ್ನು ನಡೆಸುವರೋ ಆ ಅಕ್ಷರ ಸ್ವರೂಪವನ್ನು ಸಂಗ್ರಹವಾಗಿ ನಿನಗೆ ತಿಳಿಸುತ್ತೇನೆ. ಕೇಳು! ಎಲ್ಲಾ ಇಂದ್ರಿಯಗಳನ್ನು ಅಡಗಿಸಿ, ತನ್ನ ಹೃದಯ ಕಮಲದಲ್ಲಿ ಇರುವ ಅಕ್ಷರನಾದ ನನ್ನಲ್ಲಿ ಮನಸ್ಸನ್ನು ನಿಲ್ಲಿಸಿ, ಯೋಗಾಭ್ಯಾಸದಲ್ಲಿ ನಿರತನಾಗಿ, ತನ್ನ ಪ್ರಾಣವಾಯುವನ್ನು ಶಿರಸ್ಸಿನಲ್ಲಿ ನಿಲ್ಲಿಸಿದವನಾಗಿ, ಬ್ರಹ್ಮವನ್ನು ಬೋಧಿಸುವ "ಓಂ" ಎಂಬ ಒಂದೇ ಅಕ್ಷರವನ್ನು ಉಚ್ಚರಿಸುತ್ತಾ, ಆ ಪ್ರಣವಕ್ಕೆ ವಾಚ್ಯನಾದ ನನ್ನನ್ನು ಸ್ಮರಿಸುತ್ತಿರುವವನಾಗಿ, ಯಾವನು ದೇಹವನ್ನು ಬಿಟ್ಟು ಹೋಗುವನೋ, ಅವನು ನನಗೆ ಸಮನಾದ, ಪುನರಾವೃತ್ತಿ ಇಲ್ಲದ, ಪ್ರಕೃತಿ ವಿಯುಕ್ತವಾದ ಪರಿಶುದ್ಧ ಆತ್ಮಸ್ವರೂಪವನ್ನು ಹೊಂದುತ್ತಾನೆ

### 3) ಜ್ಞಾನಿಯಾದ ಭಕ್ತನ ಭಗವದುಪಾಸನ ಕ್ರಮ (ಶ್ಲೋಕಗಳು 14 ಮತ್ತು 15)

ಯಾವನು ನಿತ್ಯವೂ ಎಲ್ಲಾ ಕಾಲದಲ್ಲಿಯೂ ಮತ್ತೊಂದರಲ್ಲಿ ಮನಸ್ಸನ್ನು ಇಡದೆ, ನಾನು ಅತ್ಯಂತ ಪ್ರಿಯನಾದ ಕಾರಣ ನನ್ನ ಸ್ಮರಣೆಯಿಲ್ಲದೆ ಬದುಕಲು ಅಸಮರ್ಥನಾಗಿ, ನನ್ನನ್ನೇ ನಿರತಿಶಯ ಪ್ರೀತಿಯಿಂದ ಸ್ಮರಣೆಮಾಡುತ್ತಾನೆಯೋ ನಿತ್ಯೋಪಾಸಕನಾದ ಆ ಜ್ಞಾನಿಯು ನನ್ನನ್ನು ಸುಲಭವಾಗಿ ಪಡೆಯುತ್ತಾನೆ. ಅವನ ವಿಯೋಗವನ್ನು ಸಹಿಸದೇ ನಾನೇ ಅವನನ್ನು ಅನುಗ್ರಹಿಸುತ್ತೇನೆ. ಆದ್ದರಿಂದ ಸರ್ವಕಾಲದಲ್ಲಿಯೂ ನನ್ನ ಸ್ಮರಣೆಯು ಬಹಳ ಮುಖ್ಯವಾದುದು. ಯಥಾವಸ್ಥಿತವಾದ ಆತ್ಮಜ್ಞಾನವುಳ್ಳ ಮಹಾತ್ಮರೂ, ನನ್ನಲ್ಲಿಯೇ ಮನಸ್ಸಿಟ್ಟ ಜ್ಞಾನಿಗಳೂ, ನನ್ನನ್ನು ಆಶ್ರಯಿಸಿ ಉತ್ಕೃಷ್ಟವಾದ ಪುರುಷಾರ್ಥವನ್ನು ಅಂದರೆ ನನ್ನನ್ನು ಹೊಂದುವರು. ನನ್ನನ್ನು ಸೇರಿದ ಮೇಲೆ ಇವರು ದುಃಖಮಯವೂ ಅಸ್ಥಿರವೂ ಆದ ಪುನರ್ಜನ್ಮವನ್ನು ಪಡೆಯುವುದಿಲ್ಲ.

## IV. ತ್ರಿವಿಧ ಭಕ್ತರು ಹೊಂದುವ ಫಲ (ಶ್ಲೋಕಗಳು 16 ರಿಂದ 22)

### 1) ಐಶ್ವರ್ಯಾರ್ಥಿಗಳು ಹೊಂದುವ ಫಲ (ಶ್ಲೋಕಗಳು 16ರಿಂದ 19)

ಐಶ್ವರ್ಯಗತಿಯನ್ನು ಹೊಂದಿದವರು ಬ್ರಹ್ಮಲೋಕದವರೆಗಿನ ಯಾವ ಲೋಕಕ್ಕೆ ಹೋದರೂ ಅವರಿಗೆ ತಿರುಗಿ ಪುನರ್ಜನ್ಮ ಉಂಟಾಗುವುದು. ನನ್ನನ್ನು ಹೊಂದಿದವರಿಗೆ ಪುನರ್ಜನ್ಮವಿಲ್ಲ. ಬ್ರಹ್ಮಲೋಕದಿಂದ ಮೊದಲಾಗಿ ಬ್ರಹ್ಮಾಂಡದಲ್ಲಿರುವ ಲೋಕಗಳಲ್ಲಿ ಇರುವ ಆತ್ಮನು ಬಹಳಕಾಲ ಸುಖವನ್ನು ಅನುಭವಿಸಿದರೂ ಕೊನೆಗೆ ಪುನರ್ಜನ್ಮವನ್ನು ಹೊಂದಲೇಬೇಕು. ಆದರೆ ಸರ್ವಜ್ಞನೂ, ಸತ್ಯಸಂಕಲ್ಪನೂ, ನಿಖಿಲಜಗತ್ ಸೃಷ್ಟಿಸ್ಥಿತಿ ಲಯಗಳಿಗೆ ಕಾರಣನೂ, ಸದಾ ಏಕರೂಪನೂ ಆದ ನನ್ನನ್ನು ಸೇರಿದವರಿಗೆ ವಿನಾಶವೇ ಇಲ್ಲದ ಕಾರಣ ಪುನರ್ಜನ್ಮವಿಲ್ಲ.

ಲೋಕಗಳ ಉತ್ಪತ್ತಿ ವಿನಾಶ ಕಾಲಗಳ ವ್ಯವಸ್ಥೆಯು ಏನೆಂದರೆ - ಕಾಲಪ್ರಮಾಣವನ್ನು ತಿಳಿದವರು ಈ ಭೂಲೋಕದ ನಾಲ್ಕು ಯುಗಗಳ ಸಹಸ್ರಕಾಲವು ಬ್ರಹ್ಮದೇವನ ಒಂದು ಹಗಲೆಂದೂ, ಅದೇ ರೀತಿ ನಾಲ್ಕು ಯುಗಗಳ ಸಹಸ್ರಕಾಲವು ಅವನ ಒಂದು ರಾತ್ರಿಯೆಂದೂ ತಿಳಿಯುತ್ತಾರೆ. ಬ್ರಹ್ಮದೇವನ ಹಗಲಿನ ಆರಂಭದಲ್ಲಿ ತ್ರೈಲೋಕ್ಯದಲ್ಲಿರುವ ದೇಹೇಂದ್ರಿಯಾದಿ ವಸ್ತುಗಳೆಲ್ಲವೂ ಬ್ರಹ್ಮನ ದೇಹಾವಸ್ಥೆ ಎಂಬ

ಅವ್ಯಕ್ತದಿಂದ ಹುಟ್ಟಿ ರಾತ್ರಿಯು ಆರಂಭವಾದಾಗ ಮತ್ತೆ ಅವೆಲ್ಲವೂ ಆ ಬ್ರಹ್ಮನ ದೇಹದಲ್ಲಿ ಲಯವಾಗುತ್ತವೆ. ಹೀಗೆ ಕರ್ಮವಶವಾದ ಮತ್ತು ಪ್ರಕೃತಿ ಸಂಬಂಧ ಪಡೆದಿರುವ ಪ್ರಾಣಿವರ್ಗವು ಬ್ರಹ್ಮನ ಹಗಲಿನ ಆರಂಭಕಾಲದಲ್ಲಿ ಹುಟ್ಟುತ್ತಲೂ, ರಾತ್ರಿ ಆರಂಭವಾದಾಗ ಲಯಹೊಂದುತ್ತಲೂ ಇರುತ್ತವೆ ಮತ್ತು ಹಗಲು ಆರಂಭವಾದಾಗ ಮತ್ತೆ ಹುಟ್ಟುತ್ತವೆ. ಆದ್ದರಿಂದ ಐಶ್ವರ್ಯಗತಿ ಪಡೆದವರಿಗೆ ಪುನರಾವರ್ತಿ ತಪ್ಪಿದ್ದಲ್ಲ.

### 2) ಜಿಜ್ಞಾಸುಗಳು ಹೊಂದುವ ಫಲ (ಶ್ಲೋಕಗಳು 20 ಮತ್ತು 21)

ಅಚೇತನ ಪ್ರಕೃತಿಗಿಂತ ಉತ್ಕೃಷ್ಟವಾದ, ಅದಕ್ಕಿಂತಲೂ ಬೇರೆಯಾದ ಇಂದ್ರಿಯಗಳಿಗೆ ಗೋಚರವಾಗದ, ನಿತ್ಯವಾದ ಆತ್ಮಸ್ವರೂಪವು, ಎಲ್ಲಾ ಜಡವಸ್ತುಗಳು ನಾಶಹೊಂದುತ್ತಿದ್ದರೂ ನಾಶಹೊಂದುವುದಿಲ್ಲ. ಆದುದರಿಂದಲೇ ಅದು ಅವ್ಯಕ್ತ, ಅಕ್ಷರ ಎಂದೂ ಕರೆಯಲ್ಪಡುತ್ತದೆ. ಪ್ರಕೃತಿ ಸಂಸರ್ಗದಿಂದ ಬೇರೆಯಾಗಿ ತನ್ನ ಸ್ವರೂಪದಲ್ಲಿ ನೆಲೆಸಿರುವ ಆತ್ಮನು ಪರಮಗತಿಯನ್ನು ಹೊಂದಿ ಈ ಲೋಕದಲ್ಲಿ ಮತ್ತೆ ಹುಟ್ಟುವುದಿಲ್ಲ. ಇದು ಪರಮಾತ್ಮನ ಪರಮಧಾಮವಾಗಿದೆ.

### 3) ಜ್ಞಾನಿಯಾದ ಭಕ್ತನು ಪಡೆಯುವ ಸರ್ವೋತ್ಕೃಷ್ಟವಾದ ಫಲ (ಶ್ಲೋಕ 22)

ಅರ್ಥಾರ್ಥಿಯು ಐಶ್ವರ್ಯವನ್ನೂ ಜಿಜ್ಞಾಸುವು ತನಗೆ ಸದೃಶವಾದ ಪರಿಶುದ್ಧಾತ್ಮ ಸ್ವರೂಪವನ್ನೂ ಪಡೆಯುವರು. ಆದರೆ ಜ್ಞಾನಿಯು ಪಡೆಯುವ ಪ್ರಾಪ್ಯವು ಇವುಗಳಿಗಿಂತ ಮೇಲಾದುದಾಗಿರುವುದು. ಸಮಸ್ತ ಭೂತಗಳು ಯಾವನಲ್ಲಿ ಅಡಗಿವೆಯೋ, ಯಾವನಿಂದ ಸಮಸ್ತ ಪ್ರಪಂಚವೂ ವ್ಯಾಪ್ತವಾಗಿದೆಯೋ ಅಂತಹ ಪರಮಾತ್ಮನಾದ ಪರಮಪುರುಷನನ್ನು ಅನನ್ಯವಾದ ಭಕ್ತಿಯಿಂದ ಜ್ಞಾನಿಯು ಪಡೆಯುತ್ತಾನೆ

## V. ಯೋಗಿಗಳು ಕಾಲವಾದ ಮೇಲೆ ಹೋಗುವ ಎರಡು ವಿಧವಾದ ಮಾರ್ಗಗಳು (ಶ್ಲೋಕಗಳು 23 ರಿಂದ 26)

### 1) ಶುಕ್ಲಗತಿ - ಅರ್ಚಿರಾದಿ ಮಾರ್ಗ

ಯೋಗಿಗಳು ಯಾವಕಾಲದಲ್ಲಿ, ಯಾವ ಮಾರ್ಗದಲ್ಲಿ ಹೋಗಿ ಹಿಂತಿರುಗುವುದಿಲ್ಲವೋ ಮತ್ತು ಪುಣ್ಯಕರ್ಮಗಳನ್ನು ಮಾಡಿದವರು ಯಾವ ಕಾಲದಲ್ಲಿ, ಯಾವ ಮಾರ್ಗದಲ್ಲಿ ಹೋಗಿ ಹಿಂತಿರುಗುವರೋ ಆ ಮಾರ್ಗವನ್ನೂ, ಕಾಲವನ್ನೂ ತಿಳಿಸುವೆನು ಕೇಳು. ಅರ್ಚಿರಾದಿ ಮಾರ್ಗದಲ್ಲಿ ಅಗ್ನಿ, ತೇಜಸ್ಸು, ಹಗಲು,

ಶುಕ್ಲಪಕ್ಷ, ಉತ್ತರಾಯಣ ಮೊದಲಾದ ಮಾರ್ಗದಲ್ಲಿ ಹೋಗುವ ಬ್ರಹ್ಮೋಪಾಸಕರಾದ ಜನಗಳು ಬ್ರಹ್ಮವನ್ನು ಅಂದರೆ ಕೈವಲ್ಯಪದವಿಯನ್ನು ಹೊಂದಿ ತಿರುಗಿ ಜನಿಸುವುದಿಲ್ಲ.

**2) ಕೃಷ್ಣಗತಿ - ಧೂಮಾದಿ ಮಾರ್ಗ**

ಪುಣ್ಯಕರ್ಮವನ್ನು ಮಾಡಿದವರು ಧೂಮಾದಿ ಮಾರ್ಗದಲ್ಲಿ ಪ್ರಯಾಣ ಮಾಡುತ್ತಾರೆ. ಮತ್ತು ಚಂದ್ರನನ್ನು ಸೇರುತ್ತಾರೆ. ಇವರು ಮತ್ತೆ ಹಿಂದಿರುಗುತ್ತಾರೆ. ಇದು ಧೂಮಾದಿ ಮಾರ್ಗವು. ಶ್ರುತಿಗಳು ಜ್ಞಾನಿಗಳಿಗೆ ಶುಕ್ಲಗತಿ ಎಂಬ ಅರ್ಚಿರಾದಿ ಮಾರ್ಗವನ್ನೂ ಪುಣ್ಯಕರ್ಮಮಾಡಿದವರಿಗೆ ಕೃಷ್ಣಗತಿ ಎಂಬ ಧೂಮಾದಿ ಮಾರ್ಗವನ್ನೂ ಕ್ರಮವಾಗಿ ತಿಳಿಸಿವೆ. ಶುಕ್ಲಗತಿಯಿಂದ ಹೋದವರಿಗೆ ಪುನರ್ಜನ್ಮವಿಲ್ಲ. ಆದರೆ ಕೃಷ್ಣಗತಿಯಿಂದ ಹೋದವರಿಗೆ ಪುನರ್ಜನ್ಮವುಂಟು.

## VI. ಭಕ್ತನಾದ ಯೋಗಿಯ ಪರಮಪದಪ್ರಾಪ್ತಿ (ಶ್ಲೋಕಗಳು 27 ಮತ್ತು 28)

ಅರ್ಜುನಾ! ಈ ಎರಡು ಮಾರ್ಗವನ್ನು ತಿಳಿದಯೋಗಿಯು ಮರಣಕಾಲದಲ್ಲೂ ಮೋಹಕ್ಕೆ ಒಳಗಾಗುವುದಿಲ್ಲ. ಆದುದರಿಂದ ಎಲ್ಲಾ ಕಾಲದಲ್ಲೂ ಅರ್ಚಿರಾದಿಗತಿಚಿಂತನಯೋಗದಿಂದ ಕೂಡಿರುವವನಾಗು. ಇದನ್ನು ಅಂದರೆ ಈ ಎರಡು ಅಧ್ಯಾಯಗಳಲ್ಲಿ ತಿಳಿಸಿರುವ ಭಗವನ್ಮಹಾತ್ಮೆಯನ್ನು ತಿಳಿದ ಯೋಗಿಯು ವೇದಾಭ್ಯಾಸಗಳಲ್ಲಿಯೂ, ಯಾಗಾದಿಗಳಲ್ಲಿಯೂ, ತಪಸ್ಸುಗಳಲ್ಲಿಯೂ ಯಾವ ಯಾವ ಪುಣ್ಯಫಲವು ಹೇಳಲ್ಪಟ್ಟಿರುವುದೋ ಅವುಗಳನ್ನು ತೃಣಸಮಾನವಾಗಿ ಕಾಣುತ್ತಾನೆ. ಅಂತಹ ಯೋಗಿಯು ಜ್ಞಾನಿಯಾದ ಭಕ್ತನಾಗಿ ಜ್ಞಾನಿಗಳು ಹೊಂದುವ ಅನಾದಿಯಾದ ಪರಮಪದವನ್ನು ಪಡೆಯುತ್ತಾನೆ''

ಈ ಅಧ್ಯಾಯದ ವಿಷಯವನ್ನು ಶ್ರೀ ಯಾಮುನಾಚಾರ್ಯರು ಗೀತಾರ್ಥ ಸಂಗ್ರಹದ ಹನ್ನೆರಡನೆಯ ಶ್ಲೋಕದಲ್ಲಿ ಈ ರೀತಿ ತಿಳಿಸಿರುತ್ತಾರೆ.

**ಐಶ್ವರ್ಯಾಕ್ಷರಯಾಥಾತ್ಮ್ಯ ಭಗವತ್‌ಚರಣಾರ್ಥಿ ನಾಂ।**
**ವೇದ್ಯೋಪಾದೇಯ ಭಾವಾನಾಂ ಅಷ್ಟಮೇ ಭೇದ ಉಚ್ಯತೇ॥**

ಐಶ್ವರ್ಯವನ್ನೂ ಆತ್ಮಸಾಕ್ಷಾತ್ಕಾರವನ್ನೂ ಭಗವತ್ ಪ್ರಾಪ್ತಿಯನ್ನೂ ಅಪೇಕ್ಷಿಸುವ ತ್ರಿವಿಧ ಭಕ್ತರು ಅರಿಯಬೇಕಾದ ವಿಷಯ, ಧ್ಯಾನಮಾಡುವ ರೀತಿ ಮತ್ತು ಹೊಂದುವ ಫಲ ಇವುಗಳ ಭೇದಗಳನ್ನು ಎಂಟನೇ ಅಧ್ಯಾಯದಲ್ಲಿ ಶ್ರೀ ಕೃಷ್ಣನು ತಿಳಿಸಿದ್ದಾನೆ.

*****

# ಒಂಬತ್ತನೆಯ ಅಧ್ಯಾಯ

# ರಾಜ ವಿದ್ಯಾರಾಜಗುಹ್ಯ ಯೋಗ

**ವಿಷಯ ಸೂಚಿಕೆ :**

**ಉಪೋದ್ಘಾತ :**

**I** ಭಕ್ತಿಯೋಗವು ಒಂದು ಶ್ರೇಷ್ಠವಾದ ರಾಜವಿದ್ಯೆಯು. (ಶ್ಲೋಕಗಳು 1 ರಿಂದ 3)

**II** ಉಪಾಸ್ಯನಾದ ಪರಮಾತ್ಮನ ಮಹಾತ್ಮೆ (ಶ್ಲೋಕಗಳು 4 ರಿಂದ 10)

**III** ಪರಮಾತ್ಮನ ಅವತಾರಗಳ ಶ್ರೇಷ್ಠತೆ (ಶ್ಲೋಕಗಳು 11 ರಿಂದ 13)

**IV** ಭಗವದ್ಭಕ್ತರಾದ ಮಹಾತ್ಮರ ವಿಶೇಷತೆ (ಶ್ಲೋಕಗಳು 14 ರಿಂದ 33)

**V** ಭಕ್ತಿಯೋಗದ (ಭಕ್ತಿರೂಪ ಉಪಾಸನೆಯ) ನಿರೂಪಣೆಯು (25ನೇ ಶ್ಲೋಕ ಮತ್ತು 34ನೆಯ ಶ್ಲೋಕ)

**ಉಪೋದ್ಘಾತ :**

ಏಳನೆಯ ಅಧ್ಯಾಯದಲ್ಲಿ ಪರಮಾತ್ಮನ ಯಥಾರ್ಥ ಸ್ವರೂಪವೂ, ಅವನನ್ನು ಭಜಿಸುವ ಭಕ್ತರು ನಾಲ್ಕು ವಿಧವಾಗಿರುವರೆಂಬುದೂ, ಅವರಲ್ಲಿ ಜ್ಞಾನಿಯಾದ ಭಕ್ತನೇ ಶ್ರೇಷ್ಠನೆಂಬುದೂ ತಿಳಿಸಲ್ಪಟ್ಟು ಈ ಚತುರ್ವಿಧ ಉಪಾಸಕರ ಭಿನ್ನತೆಗೆ ಸಂಬಂಧಿಸಿರುವ ಭೇದಗಳು ಎಂಟನೆಯ ಅಧ್ಯಾಯದಲ್ಲಿ ವಿವರಿಸಲ್ಪಟ್ಟಿವೆ. ಈಗ ಒಂಬತ್ತನೆಯ ಅಧ್ಯಾಯದಲ್ಲಿ ಉಪಾಸ್ಯನಾದ ಪರಮಾತ್ಮನ ಮಹಾತ್ಮೆಯೂ, ಭಕ್ತರಾದ ಜ್ಞಾನಿಗಳ ವೈಶಿಷ್ಟ್ಯವೂ ಮತ್ತು ಭಕ್ತಿರೂಪವಾದ ಉಪಾಸನೆಯೂ ಪ್ರತಿಪಾದಿಸಲ್ಪಟ್ಟಿವೆ.

## I ಭಕ್ತಿಯೋಗವು ಒಂದು ಶ್ರೇಷ್ಠವಾದ ರಾಜವಿದ್ಯೆಯು. (ಶ್ಲೋಕಗಳು 1 ರಿಂದ 3)

ಶ್ರೀಕೃಷ್ಣನು ಅರ್ಜುನನಿಗೆ ಹೇಳುತ್ತಾನೆ - "ಅಸೂಯಾರಹಿತನಾಗಿರುವ ನೀನು ಯಾವ ಜ್ಞಾನವನ್ನು ತಿಳಿದರೆ ಅಶುಭದಿಂದಮುಕ್ತಿ ಹೊಂದುವೆಯೋ ಅಂತಹ

ಪರಮ ರಹಸ್ಯವಾದ ವಿಶೇಷ ಜ್ಞಾನಗಳೊಡನೆ ಕೂಡಿದ ಈ ಜ್ಞಾನವನ್ನು (ಭಕ್ತಿ ರೂಪವಾದ ಉಪಾಸನೆ ಎಂಬ ಜ್ಞಾನವನ್ನು) ತಿಳಿಸುತ್ತೇನೆ. ಇದು ಅಂದರೆ ಈ ಜ್ಞಾನವು ವಿದ್ಯೆಗಳಿಗೆಲ್ಲಾ ರಾಜನಾದುದು, ಮಹಾತ್ಮರ ವಿದ್ಯೆಯು, ಗೋಪ್ಯವಾದುದು. ಸಮಸ್ತ ಪಾಪಗಳನ್ನೂ ನಿರಸನ ಮಾಡುವಂತಹ ಅತಿ ಪವಿತ್ರವಾದುದು, ಅತ್ಯುತ್ತಮವೂ. ಪ್ರತ್ಯಕ್ಷಕ್ಕೆ ಗೋಚರಿಸುವಂತ ವಿಷಯವುಳ್ಳದ್ದು ಇದು ಧರ್ಮಮಯವೂ, ಆಚರಿಸಲು ಸುಖಕರವೂ ಮತ್ತು ನಾಶರಹಿತವಾದುದೂ ಆಗಿದೆ. ಆದರೆ ಈ ಧರ್ಮದಲ್ಲಿ ಶ್ರದ್ಧೆಯಿಲ್ಲದ ಮನುಷ್ಯರು ನನ್ನನ್ನು ಹೊಂದದೆ, ಮೃತ್ಯುರೂಪವಾದ ಸಂಸಾರದಲ್ಲಿ ನಿರಂತರವೂ ಸುತ್ತುತ್ತಿರುತ್ತಾರೆ"

## II ಉಪಾಸ್ಯನಾದ ಪರಮಾತ್ಮನ ಮಹಾತ್ಮೆ (ಶ್ಲೋಕಗಳು 4 ರಿಂದ 10)

ಮುಂದೆ ಶ್ರೀಕೃಷ್ಣನು ಅರ್ಜುನನಿಗೆ ಚಿಂತಿಸಲು ಅಸದಳವಾದ ತನ್ನ ಮಹಿಮೆಗಳನ್ನು ತಿಳಿಸುತ್ತಾನೆ. "ಈ ಸಮಸ್ತ ಜಗತ್ತೂ ಅವ್ಯಕ್ತ ಮೂರ್ತಿಯಾದ, ಅಂತರ್ಯಾಮಿಯಾದ ನನ್ನಿಂದಲೇ ವ್ಯಾಪಿಸಲ್ಪಟ್ಟಿದೆ. ಸಮಸ್ತ ಭೂತಗಳೂ ನನ್ನ ಆಧಾರದ ಮೇಲೆ ನಿಂತಿವೆ. ಆದರೆ ನಾನು ಅವುಗಳ ಆಧಾರದ ಮೇಲೆ ನಿಂತಿಲ್ಲ. ಸಮಸ್ತ ವಸ್ತುಗಳೂ ನನ್ನನ್ನು ಆಶ್ರಯಿಸಿವೆ. ನಾನು ಯಾವುದನ್ನೂ ಆಶ್ರಯಿಸಬೇಕಾಗಿಲ್ಲ. ನನ್ನ ಈಶ್ವರ ಸಂಬಂಧವಾದ ಸಂಕಲ್ಪ ಶಕ್ತಿಯನ್ನು ನೋಡು. ಸಮಸ್ತ ಭೂತಗಳನ್ನೂ ಧರಿಸಿರುವವನು ನಾನಾಗಿದ್ದಾಗ್ಯೂ ನಾನು ಅವುಗಳಲ್ಲಿ ನಿಂತಿರುವವನಲ್ಲ. ಸಮಸ್ತ ಭೂತಗಳಿಗೂ ನಾನು ಸ್ವಾಮಿಯಾಗಿದ್ದಾಗ್ಯೂ ಅವುಗಳಿಂದ ನನಗೆ ಯಾವ ಉಪಕಾರವೂ ಇಲ್ಲ. ನೀರನ್ನು ಕೊಡವು ಧರಿಸಿರುವ ರೀತಿಯಲ್ಲಿ ನಾನು ಲೋಕವನ್ನು ಧರಿಸಿಲ್ಲ. ನನ್ನ ಮನೋಮಯವಾದ ಸಂಕಲ್ಪವೇ ಭೂತವನ್ನು ಉತ್ಪನ್ನ ಮಾಡುವಂತಹುದಾಗಿಯೂ, ಧಾರಣಮಾಡುವಂತಹುದಾಗಿಯೂ ಮತ್ತು ನಿಯಮನಮಾಡುವಂತಹುದಾಗಿಯು ಇದೆ. ಹೇಗೆ ಸರ್ವ ಕಡೆಯಲ್ಲಿಯೂ ಸಂಚರಿಸುತ್ತಾ ಇರುವ ಅಗಾಧವಾದ ಶಕ್ತಿಯುಳ್ಳ ವಾಯುವು ಎಲ್ಲಾ ಭೂತಗಳನ್ನೂ ಆವರಿಸಿಕೊಂಡಿರುವುದೋ ಹಾಗೆಯೇ ಸಮಸ್ತ ಭೂತಗಳೂ ನನ್ನ ಆಧಾರದಿಂದ ನಿಂತಿವೆ, ನನ್ನಿಂದಲೇ ಧರಿಸಲ್ಪಟ್ಟಿವೆ ಎಂದು ತಿಳಿ. ಕಲ್ಪದ ಆದಿಯಲ್ಲಿ ನಾನೇ ಪ್ರಪಂಚವನ್ನು ಸೃಷ್ಟಿಸುವೆನು ಮತ್ತು ಪ್ರಳಯ ಕಾಲದಲ್ಲಿ ಸಮಸ್ತ ವಸ್ತುಗಳೂ ನನ್ನ ಶರೀರ ಭೂತವಾದ ಪ್ರಕೃತಿಯನ್ನು ಹೊಂದುತ್ತವೆ. ಆ ಭೂತಗಳನ್ನು ಕಲ್ಪದ ಆದಿಯಲ್ಲಿ ಮತ್ತೆ ನಾನು ವಿಧವಿಧವಾಗಿ ಸೃಷ್ಟಿಸುವೆನು. ಪ್ರಕೃತಿ

ವಶದಿಂದ ವಿವಶರಾಗಿರುವ ಈ ಸಮಸ್ತ ಭೂತ ಸಮುದಾಯಗಳನ್ನು ನಾನು ನನ್ನದಾದ, ವಿಚಿತ್ರ ಪರಿಣಾಮವನ್ನು ಹೊಂದಿರುವ ಪ್ರಕೃತಿಯನ್ನು ಮೂಲ ಮಾಡಿಕೊಂಡು ಮತ್ತೆ ಮತ್ತೆ ವಿಧವಿಧವಾದ ವಿಚಿತ್ರವಾದ ಸೃಷ್ಟಿಯನ್ನು ಮಾಡುವೆನು. ಎಲೈ ಧನಂಜಯನೇ! ಈ ಸೃಷ್ಟಿ, ಸ್ಥಿತಿ, ಲಯಗಳನ್ನು ಉಂಟುಮಾಡುವ ಕರ್ಮಗಳಲ್ಲಿ ನಾನು ಉದಾಸೀನನಾಗಿಯೂ, ಆಸಕ್ತಿರಹಿತನಾಗಿಯೂ ಇರುವುದರಿಂದ ನನ್ನನ್ನು ಈ ಸೃಷ್ಟ್ಯಾದಿ ಕರ್ಮಗಳಾವುವೂ ಬಂಧಿಸಲಾರವು, ಅಂದರೆ ವಿಷಮಸೃಷ್ಟಿ ಮೊದಲಾದ ಕರ್ಮಗಳು, ನನ್ನಲ್ಲಿ ನಿರ್ದಯತೆ ಮೊದಲಾದ ದೋಷಗಳನ್ನು ಆರೋಪಿಸುವುದಿಲ್ಲ, ಜೀವಾತ್ಮರ ಪೂರ್ವಕೃತ ಕರ್ಮಗಳೇ ದೇವತಾದಿ ವಿಷಮಸೃಷ್ಟಿಗೆ ಕಾರಣವಾಗಿವೆ. ಅಧ್ಯಕ್ಷನಾದ ನನ್ನಿಂದ ಪ್ರೇರೇಪಿಸಲ್ಪಟ್ಟ ಪ್ರಕೃತಿಯು ಚರಾಚರವಾದ ಈ ಜಗತ್ತನ್ನು ಉತ್ಪತ್ತಿ ಮಾಡುತ್ತದೆ. ಈ ಕಾರಣದಿಂದ ಜಗತ್ತು ಉತ್ಪತ್ತಿಯಾಗುತ್ತದೆ. ಈ ಕಾರಣದಿಂದ ಜಗತ್ತು ನಡೆಯುತ್ತಿದೆ ಅಂದರೆ ಸೃಷ್ಟಿ ಸ್ಥಿತಿ ಪ್ರಳಯಗಳಲ್ಲಿ ತಿರುಗುತ್ತಿದೆ – ಒಟ್ಟಿನಲ್ಲಿ ಇತರ ಯಾವ ಸಹಾಯವನ್ನೂ ಅಪೇಕ್ಷಿಸದೆ ಭಗವಂತನ ಸಂಕಲ್ಪದಿಂದ ಸಮಸ್ತ ವಸ್ತುಗಳ ಸ್ಥಿತಿ ಪ್ರವೃತ್ತಿಗಳೂ ಮತ್ತು ಉತ್ಪತ್ತಿ ಪ್ರಳಯಗಳೂ ಆಗುತ್ತವೆ' ಎಂಬುದನ್ನು ತಿಳಿಸಿದ್ದಾನೆ

## III ಪರಮಾತ್ಮನ ಅವತಾರಗಳ ಶ್ರೇಷ್ಠತೆ (ಶ್ಲೋಕಗಳು 11 ರಿಂದ 13)

"ನನ್ನ ಸೌಶೀಲ್ಯ ವಾತ್ಸಲ್ಯಗಳ ಕಾರಣದಿಂದ ಸರ್ವರೂ ನನ್ನನ್ನು ಆಶ್ರಯಿಸಲಿ ಎಂದು ಮನುಷ್ಯ ಶರೀರವನ್ನು ಧರಿಸಿರುವ ನನ್ನನ್ನು, ತಮ್ಮ ಪಾಪ ಕರ್ಮಗಳ ಕಾರಣ ಮೂಢರಾದ ಲೋಕದ ಜನರು ಅರಿಯದೆ ತಪ್ಪಾಗಿ ತಿಳಿದು ನನ್ನನ್ನು ಸಾಧಾರಣ ಮನುಷ್ಯರೊಡನೆ ಸಮವಾಗಿ ಭಾವಿಸಿ ಉದಾಸೀನ ಮಾಡುವರು, (ಉದಾಹರಣೆಗೆ, ದುರ್ಯೋಧನನೂ ಅವನ ಸಹೋದರರೂ ಈ ರೀತಿಯಾದ ಅಜ್ಞಾನದಿಂದ ಕಷ್ಟಪಟ್ಟರು.) ನನ್ನ ಕಾರುಣ್ಯತ್ವಾದಿಗಳನ್ನು ಮರೆಮಾಡುವಂತಹ ತಾಮಸ ಪ್ರಕೃತಿಯನ್ನು ಹೊಂದಿರುವ ಅಸುರ ಸ್ವಭಾವವುಳ್ಳವರೂ, ರಾಜಸ ಪ್ರಕೃತಿಯನ್ನು ಆಶ್ರಯಿಸಿರುವ ರಾಕ್ಷಸ ಸ್ವಭಾವವುಳ್ಳವರೂ ಅದರ ಕಾರಣದಿಂದ ಮೋಹಕ್ಕೆ ಒಳಗಾದವರಾಗಿರುತ್ತಾರೆ. ಅವರು ವ್ಯರ್ಥವಾದ ಆಸೆಯುಳ್ಳವರೂ, ವ್ಯರ್ಥವಾದ ಕರ್ಮಗಳನ್ನು ಮಾಡುವವರೂ, ವ್ಯರ್ಥವಾದ ಜ್ಞಾನ ಉಳ್ಳವರೂ ಮತ್ತು ನಾಶ ಹೊಂದಿದ ಚಿತ್ತವೃತ್ತಿ ಉಳ್ಳವರೂ ಆಗುತ್ತಾರೆ. ಸತ್ವಗುಣಗಳ ಆಧಿಕ್ಯತೆಯುಳ್ಳ ಸಾತ್ವಿಕ ಪ್ರಕೃತಿಯನ್ನು ಆಶ್ರಯಿಸಿದ ಮಹಾತ್ಮರಾದರೋ ನನ್ನನ್ನು ಭೂತಗಳಿಗೆ

ಆದಿಕಾರಣನೆಂದೂ, ನಾಶರಹಿತನೆಂದೂ ತಿಳಿದವರಾಗಿ ಅನನ್ಯ ಮನಸ್ಕರಾಗಿ ನನ್ನ ಭಜನೆಯೊಂದನ್ನೇ ಪ್ರಯೋಜನವಾಗಿ ಹೊಂದಿದವರಾಗಿ ಭಜಿಸುತ್ತಾರೆ.

## IV ಭಗವದ್ಭಕ್ತರಾದ ಮಹಾತ್ಮರ ವಿಶೇಷತೆ (ಶ್ಲೋಕಗಳು 14 ರಿಂದ 33)

### 1) ಭಕ್ತರ ರಕ್ಷಣೆಯ ಭಾರವನ್ನು ಪರಮಾತ್ಮನೇ ವಹಿಸಿಕೊಳ್ಳುವುದಾಗಿ ಭರವಸೆ ನೀಡಿದ್ದಾನೆ. (ಶ್ಲೋಕಗಳು 14 ರಿಂದ 22)

ನನ್ನಲ್ಲಿ ಅತ್ಯಧಿಕವಾದ ಪ್ರೀತಿಯನ್ನು ಹೊಂದಿರುವುದರಿಂದ ಭಗವದ್ಭಕ್ತರು ನನ್ನನ್ನು ಆರಾಧಿಸದೆ ಕ್ಷಣ ಮಾತ್ರವೂ ಉಳಿಯಲಾರರು. ಹರ್ಷ ದಿಂದ ಗದ್ಗದಿತರಾಗಿ 'ನಾರಾಯಣ' 'ಕೃಷ್ಣ' 'ವಾಸುದೇವ' ಮೊದಲಾದ ನನ್ನ ನಾಮಗಳನ್ನು ಸರ್ವದಾ ಕೀರ್ತನೆ ಮಾಡುತ್ತಾ, ದೃಢವ್ರತರಾಗಿ ಸರ್ವದಾ ಪ್ರಯತ್ನ ಮಾಡುತ್ತಾ, ನನ್ನನ್ನು ಭಕ್ತಿಯಿಂದ ನಮಸ್ಕರಿಸುತ್ತಾ, ಸರ್ವದಾ ನನ್ನೊಂದಿಗೆ ಸೇರಿ, ನಿತ್ಯ ಸಂಬಂಧವನ್ನು ಕೋರಿ ನನ್ನನ್ನು ಪೂಜಿಸುತ್ತಾರೆ. ಇನ್ನೂ ಕೆಲವು ಮಹಾತ್ಮರು ಜ್ಞಾನಯಜ್ಞದಿಂದ ನನ್ನನ್ನು ಭಜಿಸುತ್ತಾರೆ. ಅಲ್ಲದೆ ಬೇರೆ ಬೇರೆ ರೂಪಗಳಿಂದ ಕೂಡಿ ಜಗದಾಕಾರದಿಂದ ವಿಶ್ವಪ್ರಕಾರವಾಗಿ ನಿಂತಿರುವ ನನ್ನನ್ನು ಏಕರೂಪಿ ಎಂದು ಉಪಾಸನೆ ಮಾಡುತ್ತಾರೆ. ಅಂದರೆ ವಿಶ್ವವನ್ನು ಶರೀರವಾಗಿ ಹೊಂದಿ ಅದಕ್ಕೆ ಆತ್ಮನಾಗಿ ನಿಂತಿರುವ ನಾನು ಒಬ್ಬನೇ ಎಂದು ಉಪಾಸಿಸುತ್ತಾರೆ.

ಈ ರೀತಿಯಾಗಿ ನನ್ನನ್ನು ಪೂಜಿಸುವ ಜ್ಞಾನಿಗಳಿಗೆ ನಾನೇ ಎಲ್ಲವೂ ಆಗಿದ್ದೇನೆ. ಈ ವಿಶ್ವದಲ್ಲಿ ಪ್ರತಿಯೊಂದಕ್ಕೂ ನಾನೇ ಆತ್ಮನಾಗಿ ಅವುಗಳನ್ನು ಶರೀರವಾಗಿ ಹೊಂದಿದ್ದೇನೆ. ನಾನೇ ಜ್ಯೋತಿಷ್ಟೋಮಾದಿಕ್ರತುವು, ನಾನೇ ಯಜ್ಞವು ಮತ್ತು ಪಿತೃಗಣಕ್ಕೆ ತೃಪ್ತಿಯನ್ನು ಉಂಟುಮಾಡುವ ಹವಿಸ್ಸಿನ ರೂಪವು, ನಾನೇ ಔಷಧವು, ನಾನೇ ಮಂತ್ರವು. ತುಪ್ಪರೂಪವಾದ ಹವಿಸ್ಸೂ ಅಗ್ನಿಯೂ ಮತ್ತು ಹೋಮ ಮಾಡುವುದೂ ನಾನೇ ಆಗಿದ್ದೇನೆ.

ಹೋಮ ಮಾಡುವ ಸಮಿತ್ತುಗಳು ಮೊದಲಾದವು ನಾನೇ, ಮತ್ತೆ ಹೋಮ ಮಾಡುವ ಕಾರ್ಯವೂ ನಾನೇ, ಸ್ಥಾವರ ಜಂಗಮಾತ್ಮಕವಾದ ಈ ಜಗತ್ತನ್ನು ಸೃಷ್ಟಿಸಿದ ತಂದೆ, ಹಡೆದ ತಾಯಿ, ಪೋಷಕನು ಮತ್ತು ಪಿತಾಮಹನೂ ನಾನೇ ಆಗಿದ್ದೇನೆ. ವೇದಗಳಿಂದ ಉಂಟಾಗುವ ಪವಿತ್ರಜ್ಞಾನವೂ ಕೂಡ ನಾನೇ, ಓಂಕಾರವೂ, ಋಕ್ಸಾಮ

ಯಜುರಾತ್ಮಕವಾದ ವೇದವೂ ಸಹ ನಾನೇ ಆಗಿದ್ದೇನೆ. ಸರ್ವರಿಗೂ ಗತಿಯಾಗಿಯೂ, ರಕ್ಷಕನಾಗಿಯೂ, ಸ್ವಾಮಿಯಾಗಿಯೂ, ಸಾಕ್ಷಿಯಾಗಿಯೂ, ವಾಸಸ್ಥಾನವಾಗಿಯೂ, ಆಶ್ರಯಿಸಲು ಯೋಗ್ಯನಾದ ಶರಣ್ಯನಾಗಿ, ಹಿತೈಷಿಯಾಗಿಯೂ, ಉತ್ಪತ್ತಿ ಪ್ರಳಯಗಳಿಗೆ ಸ್ಥಾನವಾಗಿಯೂ, ಮುಂದಿನ ಉಪಯೋಗಕ್ಕಾಗಿ ಕೂಡಿಡುವ ನಿಕ್ಷೇಪಾದಿಗಳಾಗಿಯೂ, ನಾಶರಹಿತವಾದ ಬೀಜ (ಕಾರಣ)ವಾಗಿಯೂ ನಾನೇ ಇದ್ದೇನೆ'' ಅಂದರೆ ಎಲ್ಲ ಜೀವಿಗಳ ಸರ್ವವಿಧ ಪ್ರವೃತ್ತಿ ಭೋಗಾದಿಗಳಿಗೆಲ್ಲಾ ತಾನೇ ಕಾರಣ ಭೂತನಾಗಿದ್ದೇನೆ ಎಂದು ಶ್ರೀಕೃಷ್ಣನು ತಿಳಿಸಿದ್ದಾನೆ.

''ನಾನು ಅಗ್ನಿ, ಆದಿತ್ಯ ಮೊದಲಾದ ರೂಪದಲ್ಲಿ ತಾಪವನ್ನು ಉಂಟು ಮಾಡುತ್ತೇನೆ. ಗ್ರೀಷ್ಮಾದಿ ಕಾಲದಲ್ಲಿ ಮಳೆಯನ್ನು ತಡೆಯುವವನೂ, ವರ್ಷಾದಿಗಳಲ್ಲಿ ಮಳೆಯನ್ನು ಸುರಿಸುವವನೂ ನಾನೇ. ಲೋಕವು ಯಾವುದರಿಂದ ಜೀವಿಸುತ್ತದೆಯೋ ಆ ಅಮೃತವೂ ನಾನೇ, ಲೋಕವು ಯಾವುದರಿಂದ ಸಾಯುತ್ತದೆಯೋ ಆ ಮೃತ್ಯುವೂ ನಾನೇ ಆಗಿದ್ದೇನೆ. ಸತ್ತೂ ಮತ್ತು ಅಸತ್ತೂ ಕೂಡ ನಾನೇ ಅಂದರೆ ಈ ವರ್ತಮಾನ ಕಾಲದಲ್ಲಿ ಯಾವುದು ಇದೆಯೋ ಮತ್ತು ಯಾವುದು ಈಗ ಇಲ್ಲದೆ, ಹಿಂದೆ ಇದ್ದು ಮುಂದೆ ಇರುವುದೋ ಆ ಎಲ್ಲಾ ಅವಸ್ಥೆಗಳಲ್ಲಿ ಇರುವ ಚಿತ್ ಅಚಿತ್ ವಸ್ತುಗಳನ್ನು ಶರೀರವಾಗಿ ಹೊಂದಿರುವುದರಿಂದ ಆಯಾ ಪ್ರಕಾರಗಳಲ್ಲಿ ನಾನೇ ಇರುವೆನು. ಹೀಗೆ ಬಹು ವಿಧವಾಗಿ ಬೇರೆ ಬೇರೆಯಾದ ನಾಮ ರೂಪಗಳ ವಿಭಾಗವನ್ನು ಹೊಂದಿ ಅನೇಕ ಪ್ರಕಾರವಾಗಿರುವ ಈ ಸಮಸ್ತ ಜಗತ್ತೂ ನನ್ನ ಶರೀರವಾಗಿ ನನ್ನ ಪ್ರಕಾರವಾಗಿದೆ. ಮಹಾತ್ಮರು ಆ ಪ್ರಕಾರಗಳಲ್ಲಿ (ರೂಪಗಳಲ್ಲಿ) ನಾನೇ ಇದ್ದೇನೆ ಎಂಬ ಏಕತ್ವಜ್ಞಾನದಿಂದ ಅನುಸಂಧಾನ ಮಾಡಿ ನನ್ನನ್ನು ಉಪಾಸನೆ ಮಾಡುವರು.

ಆದರೆ ಕಾಮಕಾಮಿಗಳು ಅಂದರೆ ವೇದಾಂತ ಜ್ಞಾನವಿಲ್ಲದೆ, ಮೂರು ವೇದಗಳಲ್ಲಿ ಹೇಳಿರುವ ಕೇವಲ ಕರ್ಮ ವಿಷಯಗಳಲ್ಲಿಯೇ ಆಸಕ್ತರಾದವರು ಇಂದ್ರಾದಿ ದೇವತೆಗಳನ್ನು ಕುರಿತು ಯಾಗಗಳನ್ನು ಮಾಡಿ ಸೋಮ ರಸವನ್ನು ಪಾನ ಮಾಡಿದವರಾಗಿ, ಸ್ವರ್ಗಾದಿ ಫಲಗಳಿಗೋಸ್ಕರ ಯಾಗಾದಿಗಳನ್ನು ಮಾಡಿ, ಪಾಪಗಳನ್ನು ಕಳೆದುಕೊಂಡು ಪರಿಶುದ್ಧರಾಗಿ ನನ್ನನ್ನು ಆರಾಧಿಸಿದವರಾಗಿ, ಸ್ವರ್ಗಲೋಕ ಪ್ರಾಪ್ತಿಯನ್ನು ಪ್ರಾರ್ಥಿಸುತ್ತಾರೆ. ಅವರು ಸ್ವರ್ಗಲೋಕವನ್ನು ಹೊಂದಿ ದಿವ್ಯವಾದ ದೇವತೆಗಳ ಭೋಗಗಳನ್ನೆಲ್ಲಾ ಅನುಭವಿಸುತ್ತಾರೆ. ಆ ವಿಶಾಲವಾದ ಸ್ವರ್ಗಲೋಕವನ್ನು ಅನುಭವಿಸಿ, ಪುಣ್ಯವು ಕಳೆದಮೇಲೆ ಪುನಃ ಭೂಲೋಕದಲ್ಲಿ ಜನ್ಮವೆತ್ತುವರು. ಹೀಗೆ ಭೋಗಾಸಕ್ತರೂ, ಸ್ವರ್ಗಾದಿಗಳನ್ನು ಬಯಸುವವರೂ,

ಮೂರು ವೇದಗಳ ಕರ್ಮ ಮಾರ್ಗವನ್ನು ನಂಬಿದವರೂ ಆದ ಇವರು ಅಲ್ಪವೂ, ಅಸ್ಥಿರವೂ ಆದ ಸ್ವರ್ಗವನ್ನು ಅನುಭವಿಸಿ ಮತ್ತೆ ಹಿಂತಿರುಗುತ್ತಾರೆ ಅಂದರೆ ಜನನ ಮರಣಗಳಲ್ಲಿಯೇ ಸುತ್ತುತ್ತಿರುತ್ತಾರೆ.

ಮಹಾತ್ಮರಾದರೋ ನಿರತಿಶಯಪ್ರಿಯರೂಪನಾದ ನನ್ನ ಚಿಂತನೆಯನ್ನು ಮಾಡುತ್ತಾ, ಅನವಧಿಕಾತಿಶಯ ಆನಂದ ಸ್ವರೂಪನಾದ ನನ್ನನ್ನು ಹೊಂದಿ ಮತ್ತೆ ಹಿಂತಿರುಗುವುದಿಲ್ಲ. "**ಅನನ್ಯಾಶ್ಚಿಂತಯಂತೋ ಮಾಂ ಯೇಜನಾಃ ಪರ್ಯುಪಾಸತೇ। ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ॥**" ಅಂದರೆ ಯಾವ ಮಹಾತ್ಮರು ಬೇರೆ ಯಾವ ಪ್ರಯೋಜನವೂ ಇಲ್ಲದವರಾಗಿ, ನನ್ನ ಚಿಂತನೆ ಇಲ್ಲದೆ ತಮ್ಮ ಆತ್ಮಧಾರಣೆಯನ್ನೇ ಹೊಂದಲಾರದವರಾಗಿ, ನನ್ನ ಚಿಂತನೆಯನ್ನೇ ಪ್ರಯೋಜನವಾಗಿ ಹೊಂದಿ, ಸರ್ವ ಕಲ್ಯಾಣಯುತನೂ, ಸರ್ವವಿಭೂತಿಯುಕ್ತನೂ ಆದ ನನ್ನನ್ನು ಪರಿಪೂರ್ಣವಾಗಿ ಭಜಿಸುತ್ತಾರೆಯೋ ಆ ಭಕ್ತರಿಗೆ ನಾನು ನನ್ನ ಪ್ರಾಪ್ತಿ ಎಂಬ ಯೋಗವನ್ನು ಕೊಟ್ಟು ಅದು ಶಾಶ್ವತವಾಗಿರುವಂತೆ ಅವರ ಕ್ಷೇಮವನ್ನೂ ನಾನು ವಹಿಸಿಕೊಂಡು ನೋಡಿಕೊಳ್ಳುತ್ತೇನೆ' ಎಂದು ಶ್ರೀ ಕೃಷ್ಣನು ಭಕ್ತರಿಗೆ ಭರವಸೆ ನೀಡಿದ್ದಾನೆ.

**2) ಭಗವಂತನನ್ನು ಭಜಿಸುವ ಭಕ್ತರು ಭಗವಂತನನ್ನು ಹೊಂದುತ್ತಾರೆ. ಅವರಿಗೆ ಪುನರ್ಜನ್ಮವಿಲ್ಲ. (ಶ್ಲೋಕಗಳು 23 ರಿಂದ 25)**

"ಅರ್ಜುನ! ಇಂದ್ರಾದಿದೇವತೆಗಳ ಭಕ್ತರೂ ಶ್ರದ್ಧೆಯಿಂದ ಕೂಡಿದವರಾಗಿ ಆ ದೇವತೆಗಳನ್ನು ಪೂಜಿಸುತ್ತಾರೆ. ಅವರೂ ವಾಸ್ತವವಾಗಿ ನನ್ನನ್ನೇ ಪೂಜಿಸಿದರೂ ಆ ದೇವತೆಗಳಿಗೆಲ್ಲಾ ಆತ್ಮನಾಗಿರುವ ನನ್ನನ್ನು ಆರಾಧಿಸುವೆವೆಂಬ ಅರಿವಿನಿಂದ ಅವರು ಪೂಜಿಸದೆ ಇರುವುದರಿಂದ ಅವರ ಆರಾಧನೆಯು ವಿಧಿ ಪೂರ್ವಕವಾದುದಲ್ಲ. ಸಮಸ್ತ ಯಜ್ಞಗಳಿಂದ ಆರಾಧಿಸಲ್ಪಡತಕ್ಕವನೂ ನಾನೇ, ಅಲ್ಲದೆ ಅವುಗಳಿಗೆ ಫಲಕೊಡತಕ್ಕವನೂ ನಾನೇ. ಆದರೆ ಕೆಲವರು ಈ ತತ್ವವನ್ನು ತಿಳಿಯದೆ ಇರುವುದರಿಂದ ಪರಿಮಿತವಾದ ಫಲವನ್ನು ಹೊಂದಿ ಅಲ್ಲಿಂದ ಜಾರಿ ಪುನರ್ಜನ್ಮಕ್ಕೆ ಈಡಾಗುವರು. ಒಂದೇ ಕರ್ಮವನ್ನು ಮಾಡುವ ಇಬ್ಬರಲ್ಲಿ ಒಬ್ಬನಿಗೆ ಸ್ವರ್ಗಭೋಗಾದಿಗಳೂ, ಮತ್ತೊಬ್ಬನಿಗೆ ಮೋಕ್ಷವೂ ಉಂಟಾಗುವುದಕ್ಕೆ ಅವರವರ ಸಂಕಲ್ಪದಲ್ಲಿ ವ್ಯತ್ಯಾಸ ಇರುವುದೇ ಕಾರಣವು. ದರ್ಶಪೂರ್ಣ ಮಾಸ ಮುಂತಾದ

ಕರ್ಮಗಳಿಂದ ದೇವತೆಗಳನ್ನು ಆರಾಧಿಸಬೇಕೆಂಬ ಸಂಕಲ್ಪ ಹೊಂದಿ ಅವುಗಳನ್ನು ಮಾಡುವವರು ಪಿತೃಗಳನ್ನು ಸೇರುತ್ತಾರೆ. ಯಕ್ಷ ರಾಕ್ಷಸ ಮೊದಲಾದ ಭೂತಗಳನ್ನು ಆರಾಧಿಸಬೇಕೆಂಬ ಸಂಕಲ್ಪ ಹೊಂದಿ ಅವುಗಳನ್ನು ಮಾಡುವವರು ಆ ಭೂತಗಳನ್ನು ಸೇರುವರು. ಆದರೆ ಅದೇ ಯಜ್ಞಗಳಿಂದ ದೇವ ಪಿತೃಭೂತ ಶರೀರಕನಾದ, ಅವುಗಳಿಗೆ ಆತ್ಮನಾದ, ವಾಸುದೇವನಾದ ನನ್ನನ್ನು ಆರಾಧಿಸುವ ಸಂಕಲ್ಪ ಹೊಂದಿ ಅವುಗಳನ್ನು ಮಾಡುವವರು ನನ್ನನ್ನೇ ಹೊಂದುತ್ತಾರೆ.

ಆಯಾ ದೇವತೆಗಳನ್ನೂ, ಪಿತೃಗಳನ್ನೂ ಪೂಜಿಸಿ ಅವರನ್ನು ಹೊಂದಿದವರು ಅವರೊಂದಿಗೆ ಪರಿಮಿತವಾದ ಭೋಗಗಳನ್ನು ಅನುಭವಿಸಿ ಅವರ ವಿನಾಶ ಕಾಲದಲ್ಲಿ ಅವರೊಂದಿಗೆ ನಾಶ ಹೊಂದುವರು, ಆದರೆ ನನ್ನನ್ನು ಪೂಜಿಸುವವರಾದರೋ ಆದಿ ಅಂತ್ಯರಹಿತನೂ, ಸರ್ವಜ್ಞನೂ, ಸತ್ಯಸಂಕಲ್ಪನೂ, ಅವಧಿಯಿಲ್ಲದಷ್ಟು ಅತಿಶಯವಾದ ಅಸಂಖ್ಯೇಯಗಳಾದ ಕಲ್ಯಾಣಗುಣಗಳ ಸಮೂಹಕ್ಕೆ ಸಮುದ್ರಪ್ರಾಯನೂ, ಆನಂದ ಸ್ವರೂಪನೂ ಆದ ನನ್ನನ್ನು ಹೊಂದಿ ಮತ್ತೆ ಹಿಂತಿರುಗುವುದಿಲ್ಲ, ಅಂದರೆ ಅವರು ಪುನಃ ಜನ್ಮವನ್ನು ಹೊಂದುವುದಿಲ್ಲ.

### 3) ಭಕ್ತರು ಭಕ್ತಿಯಿಂದ ಏನನ್ನು ಸಮರ್ಪಿಸಿದರೂ ಅದನ್ನು ಪರಮಾತ್ಮನು ಸಂತೋಷದಿಂದ ಸ್ವೀಕರಿಸುತ್ತಾನೆ. (ಶ್ಲೋಕ 26 ಮತ್ತು 27)

ಅಲ್ಲದೆ ನನ್ನನ್ನು ಆರಾಧಿಸುವವರಿಗೆ ಮತ್ತೊಂದು ವಿಶೇಷತೆ ಉಂಟು. ನನ್ನಲ್ಲಿ ಅತಿಶಯ ಪ್ರೀತಿಯಿಂದ ಯಾರು ಯಾವ ಪ್ರಯೋಜನವನ್ನೂ ಬಯಸದೆ ಅತ್ಯಂತ ಸುಲಭವಾಗಿ ಲಭಿಸುವ ತುಳಸೀಎಲೆ ಮುಂತಾದ ಪತ್ರವನ್ನಾಗಲೀ, ಅಥವಾ ಪುಷ್ಪವನ್ನಾಗಲೀ, ಅಥವಾ ಹಣ್ಣನ್ನಾಗಲೀ, ಅಥವಾ ಕೊನೆಗೆ ಒಂದಿಷ್ಟು ಪರಿಶುದ್ಧವಾದ ಜಲವನ್ನಾಗಲೀ ಭಕ್ತಿ ಪೂರ್ವಕವಾಗಿ ನನಗೆ ಅರ್ಪಿಸುತ್ತಾರೆಯೋ ಅಂತಹ ಪರಿಶುದ್ಧ ಮನಸ್ಕರು ಸಮರ್ಪಿಸಿದುದನ್ನು ಸರ್ವೇಶ್ವರನೂ, ಸಮಸ್ತ ಭೋಗಗಳನ್ನು ಹೊಂದಿದವನೂ, ಸತ್ಯಸಂಕಲ್ಪನೂ ಆದ ನಾನು ಅಲಭ್ಯವಾದ ಪರಮಪ್ರೀತಿಯ ವಸ್ತುವು ಲಭಿಸಿದಂತೆ ಭಾವಿಸಿ ಸಂತೋಷದಿಂದ ಸ್ವೀಕರಿಸುತ್ತೇನೆ. ಆದುದರಿಂದ ನೀನು ಜ್ಞಾನಿಯಾಗಿ, ನೀನು ಮಾಡುವ ತಾಂತ್ರಿಕ, ವೈದಿಕ ಕರ್ಮಗಳನ್ನು ಈ ಸಮರ್ಪಣಾ ಭಾವದಿಂದ ಮಾಡು, ಅಂದರೆ ನೀನು ಶರೀರ ಯಾತ್ರೆಯ ನಿರ್ವಹಣೆಗೆ ಅವಶ್ಯಕವಾದ ಯಾವ ಲೌಕಿಕ ಕರ್ಮಗಳನ್ನು ಮಾಡುತ್ತೀಯೋ, ದೇಹ ಧಾರಣೆಗೆ

ಏನನ್ನು ತಿನ್ನುತ್ತೀಯೋ, ವೈದಿಕ ನಿತ್ಯನೈಮಿತ್ತಿಕಕರ್ಮಗಳಾದ ಯಾವ ಹೋಮ, ದಾನ, ತಪಸ್ಸುಗಳನ್ನು ಮಾಡುತ್ತೀಯೋ ಅವೆಲ್ಲವನ್ನೂ ನನಗೆ ಸಮರ್ಪಣ ಮಾಡು, ನೀನು ಮಾಡುವ ಸಮಸ್ತ ಕರ್ಮಗಳನ್ನೂ ನನ್ನಲ್ಲಿ ಸಮರ್ಪಿಸು. "ಭಗವಂತನಿಗೆ ನಾನು ದಾಸನು, ಅವನೇ ನನಗೆ ಸ್ವಾಮಿಯು, ನಿಯಾಮಕನು" ಎಂದು ಅನುಸಂಧಾನ ಮಾಡುತ್ತಾ ಸಮಸ್ತ ಲೌಕಿಕ ಮತ್ತು ವೈದಿಕ ಕರ್ಮಗಳನ್ನು ಭಗವತ್ ಸಮರ್ಪಣ ಮನೋಭಾವದಿಂದ ಮಾಡುವವನು ಶುಭಾಶುಭ ಫಲವನ್ನು ಕೊಡುವ ಅನಂತ ಪ್ರಾಚೀನ ಕರ್ಮಗಳ ಬಂಧನದಿಂದ ಬಿಡುಗಡೆ ಹೊಂದಿ, ಕರ್ಮಗಳಿಂದ ಮುಕ್ತನಾಗಿ ನನ್ನನ್ನು ಸೇರುತ್ತಾನೆ. ಅಂದರೆ ನೀನು ಮಾಡುವ ಸಮಸ್ತ ಕರ್ಮಗಳನ್ನೂ ನನ್ನಲ್ಲಿ ಸಮರ್ಪಣೆ ಮಾಡುವ ಬುದ್ಧಿಯಿಂದ ಮಾಡಿದರೆ ಅವೆಲ್ಲಾ ನನ್ನ ಆರಾಧನೆಯಾಗುವುದು. ಆದ್ದರಿಂದ ಭಗವದರ್ಪಣವಾಗಿ ಸಮಸ್ತ ಕರ್ಮಗಳನ್ನೂ ಮಾಡು" ಎಂದು ಉಪದೇಶ ಮಾಡಿದ್ದಾನೆ.

**4) ಭಕ್ತನ ಜಾತಿ, ಆಕಾರ, ಸ್ವಭಾವಗಳು ಏನೇ ಆಗಿದ್ದರೂ ಅದನ್ನು ಲೆಕ್ಕಿಸದೆ ಭಗವಂತ ಅವನನ್ನು ರಕ್ಷಿಸುತ್ತಾನೆ. (ಶ್ಲೋಕ 28 ಮತ್ತು 29)**

ಶ್ರೀಕೃಷ್ಣನು ಪರಮಾತ್ಮನಾದ ತನ್ನಲ್ಲಿರುವ ಲೋಕಾತೀತವಾದ ಶ್ರೇಷ್ಠವಾದ ಸ್ವಭಾವವನ್ನು ತಿಳಿಸುತ್ತಾನೆ. "ದೇವತೆಗಳು, ಮನುಷ್ಯರು, ಜಂತುಗಳು ಮತ್ತು ಗಿಡಗಳು, ಇವುಗಳ ರೂಪದಲ್ಲಿರುವ ಜಾತಿ, ಆಕಾರ, ಸ್ವಭಾವ ಮತ್ತು ಜ್ಞಾನ ಇವುಗಳ ತಾರತಮ್ಯದಿಂದ ಅತ್ಯಂತ ಉತ್ಕೃಷ್ಟವಾದ ಅಥವಾ ನಿಕೃಷ್ಟವಾದ ರೂಪದಲ್ಲಿರುವ ಸಮಸ್ತ ಭೂತಗಳಲ್ಲಿಯೂ ಅವುಗಳಿಗೆ ಆಶ್ರಯ ನೀಡುವ ವಿಷಯದಲ್ಲಿ ನಾನು ಯಾರನ್ನೂ ಇವನು ನಿಕೃಷ್ಟನೆಂದು ದ್ವೇಷಿಸುವುದೂ ಇಲ್ಲ; ಹಾಗೆಯೇ ಯಾರನ್ನೂ ಇವನು ಉತ್ಕೃಷ್ಟನೆಂದು ಪ್ರೀತಿಸುವುದೂ ಇಲ್ಲ. ಆದರೆ ಯಾರು ನನ್ನಲ್ಲಿ ನಿರತಿಶಯವಾದ ಪ್ರೀತಿ ಉಳ್ಳವರಾಗಿ, ನನ್ನ ಭಜನೆಯು ಇಲ್ಲದೆ ಆತ್ಮ ಧಾರಣೆಯನ್ನೇ ಹೊಂದಲಾರದವರಾಗಿ, ನನ್ನನ್ನು ಭಜಿಸುವುದೇ ಪರಮ ಪ್ರಯೋಜನವೆಂದು ತಿಳಿದು ಭಕ್ತಿಪೂರ್ಣರಾಗಿ ಭಜಿಸುತ್ತಾರೆಯೋ ಅವರು ಜಾತ್ಯಾದಿಗಳಲ್ಲಿ ಶ್ರೇಷ್ಠರೇ ಆಗಿರಲಿ ಅಥವಾ ನಿಕೃಷ್ಟರೇ ಆಗಿರಲಿ ನನಗೆ ಸಮಾನವಾದ ಗುಣವನ್ನು ಹೊಂದಿದವರಾಗಿ ನನ್ನಲ್ಲೇ ಇರುವರು. ನಾನು ಕೂಡ ನನ್ನ ಶ್ರೇಷ್ಠರಾದ ಭಕ್ತರಲ್ಲಿ ಹೇಗೆ ವರ್ತಿಸುವೆನೋ ಹಾಗೆ ಅವರಲ್ಲಿಯೂ ಇರುವೆನು. ನನ್ನನ್ನು ಆಶ್ರಯಿಸಿದವರನ್ನು ನಾನು ಸ್ವೀಕರಿಸುವಾಗ ಅವರ ಜಾತಿ ನನಗೆ ಮುಖ್ಯವಲ್ಲ.

### 5) ದುರಾಚಾರಿಯೂ ಭಕ್ತನಾದರೆ ಭಗವಂತನಿಂದ ರಕ್ಷಿಸಲ್ಪಡುತ್ತಾನೆ. (ಶ್ಲೋಕಗಳು 30 ರಿಂದ 33)

ನನ್ನನ್ನು ಅನನ್ಯಭಕ್ತನಾಗಿ ಭಜಿಸುವ ಅತಿ ದುರಾಚಾರಿಯೂ ಕೂಡ ಸಾಧುವೆಂದೇ ಪರಿಗಣಿಸಲ್ಪಡತಕ್ಕವನಾಗಿ ಇರುತ್ತಾನೆ. ನಿಖಿಲ ಜಗದೇಕ ಕಾರಣನೂ, ಚರಾಚರ ಪತಿಯೂ ಆದ ಶ್ರೀಮನ್ನಾರಾಯಣನೇ ತನಗೆ ಸ್ವಾಮಿಯೂ, ಗುರುವೂ, ಪರಮಗತಿಯೂ ಆಗಿದ್ದಾನೆ ಎಂಬ ನಿಶ್ಚಯದಿಂದ ಕೂಡಿದ ಮನಃ ಪರಿಪಾಕವನ್ನು ಹೊಂದಿರುವುದರಿಂದ ಅವನು ವೈಷ್ಣವಾಗ್ರೇಸರನೆಂದು ಪರಿಗಣಿಸಿ, ಸನ್ಮಾನಿಸಿ, ಗೌರವಿಸಲು ಅರ್ಹನು. ಆದರೆ ಬಹಳ ದುರಾಚಾರಿಯಾದವನ ಆಚಾರವ್ಯತಿಕ್ರಮವು ಅವನನ್ನು ಭಗವದ್ಭಜನೆಯನ್ನು ಮಾಡದಂತೆ ತಡೆದು ಅಧೋಗತಿಗೆ ಎಳೆಯುವುದಿಲ್ಲವೆ ಎಂದರೆ – ನನ್ನ ಮೇಲಿನಪ್ರೀತಿಯಿಂದಲೂ, ನನ್ನನ್ನು ಭಜಿಸುವುದರಿಂದಲೂ ಅವನ ಪಾಪವೆಲ್ಲವೂ ಕಳೆದುಹೋಗಿ ರಜೋಗುಣ, ತಮೋಗುಣಗಳು ಬೇರುಸಹಿತ ನಷ್ಟವಾಗಿ ಶೀಘ್ರದಲ್ಲಿಯೇ ಅವನು ಧರ್ಮಾತ್ಮನಾಗುವನು ಮತ್ತು ನನ್ನನ್ನು ಪಡೆಯಲು ಅಡ್ಡಿಯಾಗಿರುವ ಪಾಪಾಚರಣೆಯನ್ನು ಕಳೆದುಕೊಂಡು, ನನ್ನ ಭಜನೆ ಒಂದರಲ್ಲೇ ಮನಸ್ಸು ಹೊಂದಿದವನಾಗಿ ಸ್ಥಿರವಾದ ಮನಃಶಾಂತಿಯನ್ನು ಹೊಂದುವನು. **"ನಮೇ ಭಕ್ತಃ ಪ್ರಣಶ್ಯತಿ"** ಅಂದರೆ ನನ್ನ ಭಕ್ತನು ಎಂದಿಗೂ ನಾಶವನ್ನು ಹೊಂದುವುದಿಲ್ಲವೆಂದು ಶ್ರೀಕೃಷ್ಣ ಎಲ್ಲರಿಗೂ ಭರವಸೆ ನೀಡಿದ್ದಾನೆ. ನನ್ನ ಭಕ್ತಿಯ ಮಹಾತ್ಮೆಯಿಂದ ಅವನು ಸಮಸ್ತ ವಿರೋಧಿಗಳಿಂದ ಬಿಡಲ್ಪಟ್ಟು ನನ್ನ ಭಜನೆ ಒಂದರಲ್ಲೇ ಮನಸ್ಸುಳ್ಳವನಾಗುವನು ಮತ್ತು ಬೇಗನೇ ಪರಿಪೂರ್ಣನಾದ ಭಕ್ತನಾಗುವನು. ಅರ್ಜುನನೇ! ನನ್ನ ಭಕ್ತರು ಎಂದಿಗೂ ನಾಶಹೊಂದುವುದಿಲ್ಲ ಎಂಬುದನ್ನು ದೃಢವಾಗಿ ನಂಬು" ಎಂದು ತಿಳಿಸಿದ್ದಾನೆ.

"ಅರ್ಜುನ! ಆಗಂತುಕವಾಗಿ ಪಾಪಮಾಡುವವರು ನನ್ನನ್ನು ಭಜಿಸುವುದರಿಂದ ನನ್ನ ಭಕ್ತರಾಗುವುದಿರಲಿ, ಜನ್ಮತಃ ಪಾಪಸಂಬಂಧವಿದ್ದವರೂ ನನ್ನನ್ನು ಭಕ್ತಿ ಮಾಡುವುದರಿಂದ ಉತ್ತಮವಾದ ಗತಿಯನ್ನು ಹೊಂದುತ್ತಾರೆ. ನನ್ನನ್ನು ವಿಶೇಷವಾಗಿ ಆಶ್ರಯಿಸುವ ಹೆಂಗಸರೂ, ವೈಶ್ಯರೂ ಹಾಗೆಯೇ ಶೂದ್ರರೂ ಕೂಡ ಶ್ರೇಷ್ಠವಾದ ಗತಿಯನ್ನು ಹೊಂದುವಾಗ, ಪುಣ್ಯಶಾಲಿಗಳಾಗಿ ಬ್ರಾಹ್ಮಣಕುಲದಲ್ಲಿ ಹುಟ್ಟಿ ಭಕ್ತರಾಗಿರುವ ರಾಜರ್ಷಿಗಳು ಪರಾಂಗತಿಯನ್ನು ಹೊಂದುವ ವಿಷಯದಲ್ಲಿ

ಹೇಳಬೇಕಾದುದು ಏನೂ ಇಲ್ಲ. ಆದುದರಿಂದ ನೀನೂ ಸಹ ಅನಿತ್ಯವೂ ಸುಖರಹಿತವೂ ಆದ ಈ ಲೋಕವನ್ನು ಹೊಂದಿರುವನಾಗಿರುವುದರಿಂದ ನನ್ನನ್ನು ಭಜಿಸುವವನಾಗು." ಇಲ್ಲಿ ಶ್ರೀಕೃಷ್ಣನು "ಭಜಸ್ವಮಾಂ" ಎಂದು ಈ ಲೋಕದಲ್ಲಿರುವ ಎಲ್ಲರಿಗೂ, ನನ್ನನ್ನು ಭಜಿಸಿರಿ ಎಂದು ಸಂದೇಶ ನೀಡಿದ್ದಾನೆ.

## V ಭಕ್ತಿಯೋಗದ ನಿರೂಪಣೆ – 25ನೇ ಶ್ಲೋಕ ಮತ್ತು 34ನೇ ಶ್ಲೋಕ

### 1. ಶ್ಲೋಕ 25

**ಯತ್ಕರೋಷಿಯದಶ್ನಾಸಿಯಜ್ಜುಹೋಷಿ ದದಾಸಿಯತ್।**
**ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವಮದರ್ಪಣಂ ॥**

ಅಂದರೆ ನೀನು ಶರೀರ ಯಾತ್ರೆಯ ನಿರ್ವಹಣೆಗಾಗಿ ಅತ್ಯವಶ್ಯಕವಾದ ಯಾವ ಯಾವ ಲೌಕಿಕ ಕರ್ಮಗಳನ್ನು ಮಾಡುತ್ತೀಯೋ, ದೇಹಧಾರಣೆಗಾಗಿ ಯಾವುದನ್ನು ತಿನ್ನುತ್ತೀಯೋ, ಯಾವ ಯಾವ ಹೋಮ, ದಾನ, ತಪಸ್ಸು ಮೊದಲಾದ ವೈದಿಕ ನಿತ್ಯ ನೈಮಿತ್ತಿಕ ಕರ್ಮಗಳನ್ನು ಮಾಡುತ್ತೀಯೋ ಅವೆಲ್ಲವನ್ನೂ ನನಗೆ ಸಮರ್ಪಿಸಲ್ಪಟ್ಟುದ್ದಾಗಿ ಮಾಡು ಎಂದು ಉಪದೇಶ ನೀಡಿದ್ದಾನೆ. ಇದರ ಅಭಿಪ್ರಾಯವು ಏನೆಂದರೆ ನೀನು ಮಾಡುವ ಸಮಸ್ತ ಕರ್ತವ್ಯ ಕರ್ಮಗಳನ್ನೂ ನನ್ನ ಆರಾಧನೆ, ಪೂಜೆ ಎಂಬ ಭಾವನೆಯಿಂದ ಪ್ರೀತಿಯಿಂದಲೂ, ಭಕ್ತಿಯಿಂದಲೂ ಮಾಡು ಮತ್ತು ನೀನು ದೇಹಧಾರಣೆಗಾಗಿ ತಿನ್ನುವ ಸಮಸ್ತ ಆಹಾರಗಳನ್ನೂ ನನ್ನ ಪ್ರಸಾದ ಎಂಬ ಭಾವನೆಯಿಂದ ಸ್ವೀಕರಿಸು. ಏತಕ್ಕೆಂದರೆ ಕರ್ಮದ ಅಂದರೆ ಯಜ್ಞ, ದಾನ, ತಪಸ್ಸು ಮುಂತಾದ ಸಮಸ್ತ ಕರ್ಮಗಳ ಕರ್ತೃವೂ, ಭೋಕ್ತೃವೂ, ಆರಾಧಕನೂ ಆದ ನೀನೂ, ನೀನು ಮಾಡುವ ಆ ಕರ್ಮಗಳಿಗೆ ಆರಾಧ್ಯವಾದ ದೇವತಾದಿಗಳೂ, ಎಲ್ಲರೂ ಸಹ ಪರಮಾತ್ಮನಾದ ನನಗೆ ಶೇಷಭೂತರಾಗಿರುವುದರಿಂದ ಕರ್ಮಗಳನ್ನೂ, ಕರ್ಮಗಳ ಕರ್ತೃತ್ವ, ಭೋಕ್ತೃತ್ವ, ಆರಾಧ್ಯತ್ವ ಎಲ್ಲವನ್ನೂ ನನಗೆ ಸೇರಿದವು ಎಂದು ಅರಿತವನಾಗಿ ಎಲ್ಲವನ್ನೂ ನನ್ನ ಪವಿತ್ರವಾದ ಕೈಂಕರ್ಯವು, ಸೇವೆಯು ಎಂಬ ಭಾವನೆಯಿಂದ ಪ್ರೀತಿಯಿಂದಲೂ, ಭಕ್ತಿಯಿಂದಲೂ ಮಾಡು" ಎಂದು ಶ್ರೀಕೃಷ್ಣನು ಇಲ್ಲಿ ಉಪದೇಶ ಮಾಡಿದ್ದಾನೆ. ಸಮಸ್ತ ಕರ್ಮಗಳನ್ನೂ ಭಗವದಾರಾಧನ ರೂಪವಾಗಿ ಭಕ್ತಿಯಿಂದಲೂ, ಸಂತೋಷದಿಂದಲೂ ಮಾಡುವುದರಿಂದ ಕರ್ಮದೊಂದಿಗೆ ಭಕ್ತಿಯು ಮಿಳಿತವಾಗುತ್ತದೆ. ಕರ್ಮವು ಬರಿಯ ಕರ್ಮವಾಗಿರದೆ ಭಗವದಾರಾಧನರೂಪ ಹೊಂದಿ ಭಕ್ತಿ ಭರಿತವೂ, ಪವಿತ್ರವೂ ಆಗುತ್ತದೆ.

**2. ಶ್ಲೋಕ 34**

**ಮನ್ಮನಾಭವ ಮದ್ಭಕ್ತೋ ಮದ್ಯಾಜೀ ಮಾಂನಮಸ್ಕುರು।**
**ಮಾಮೇವೈಷ್ಯಸಿ ಯುಕ್ತ್ವೈವಂ ಆತ್ಮಾನಂ ಮತ್ಪರಾಯಣಃ ॥**

ಅಂದರೆ ನನ್ನಲ್ಲಿ ಅತಿಶಯವಾದ ಪ್ರೀತಿಯನ್ನು ಹೊಂದಿ ನಿನ್ನ ಮನಸ್ಸನ್ನು ನನ್ನಲ್ಲಿ ಇಡು. ನಿರತಿಶಯವಾದ ಪ್ರೇಮದಿಂದ ನನ್ನನ್ನು ಭಜಿಸು, ನನಗೆ ಸೇವೆ (ಕೈಂಕರ್ಯ) ಯನ್ನು ಮಾಡಿ ನನ್ನನ್ನು ನಮಸ್ಕರಿಸು, ಆಗ ನೀನು ನನ್ನನ್ನೇ ಶ್ರೇಷ್ಠಗತಿ ಎಂದು ತಿಳಿದವನಾಗಿ, ಮನಸ್ಸನ್ನು ನನ್ನಲ್ಲೇ ನೆಲೆಗೊಳಿಸಿ ನನ್ನನ್ನೇ ಹೊಂದುತ್ತೀಯೆ ಎಂದು ಶ್ರೀ ಕೃಷ್ಣನು ಅರ್ಜುನನಿಗೆ ಅವನು ಆಚರಿಸಬೇಕಾದ ಭಕ್ತಿಯ ಅಭ್ಯಾಸವನ್ನು ವಿವರಿಸಿದ್ದಾನೆ.

1) **ಮನ್ಮನಾಭವ** (ನಿನ್ನ ಮನಸ್ಸನ್ನು ನನ್ನಲ್ಲಿ ನೆಲೆಗೊಳಿಸು) - ಸರ್ವೇಶ್ವರನೂ, ಸರ್ವಜ್ಞನೂ, ಕಲ್ಯಾಣ ಗುಣಭರಿತನೂ, ದೋಷರಹಿತನೂ, ಪರಬ್ರಹ್ಮನೂ, ಪುರುಷೋತ್ತಮನೂ, ಸರ್ವಸ್ವಾಮಿಯೂ ಆದ ನನ್ನಲ್ಲಿ ನಿನ್ನ ಮನಸ್ಸನ್ನು ನೆಲೆಗೊಳಿಸು - ಅಂದರೆ ತೈಲಧಾರೆಯಂತೆ ಅವಿಚ್ಛಿನ್ನವಾಗಿ ಅಂದರೆ ನಿರಂತರವಾಗಿ ನನ್ನ ಸ್ಮರಣೆಯನ್ನು ಮಾಡುತ್ತಿರುವವನಾಗು.

2) **ಮದ್ಭಕ್ತಃ** (ನನ್ನನ್ನು ಅತ್ಯಂತ ಪ್ರೀತಿಯಿಂದ ಸ್ಮರಿಸಿ ನನ್ನ ಭಕ್ತನಾಗು.) - ಮೇಲಿನ ಅಭ್ಯಾಸವನ್ನೇ ಅಂದರೆ ನನ್ನನ್ನು ಸರ್ವದಾ ಸ್ಮರಿಸುವ ಅಭ್ಯಾಸವನ್ನೇ ಮುಂದುವರಿಸು, ಅದು ಪ್ರೀತಿಯಿಂದಲೂ, ಭಕ್ತಿಯಿಂದಲೂ ಕೂಡಿದ ಸ್ಮರಣೆಯಾಗಲಿ, ಅಂದರೆ ನನ್ನ ಸ್ಮರಣೆಯು ಬೇಜಾರಿನಿಂದಲೂ, ಜಿಗುಪ್ಸೆಯಿಂದಲೂ ಕೂಡಿದ ಕೇವಲ ಬರಡುಸ್ಮರಣೆಯಾಗಿರದೆ ಪ್ರೀತಿಯುತವಾದುದೂ, ಸಂತೋಷಕರವಾದುದೂ ಆಗಲಿ. ಆಗ ನೀನು ನನ್ನಲ್ಲಿ ಪ್ರೀತಿ, ಭಕ್ತಿಗಳನ್ನು ಹೊಂದಿದವನಾಗಿ ನನ್ನ ಭಕ್ತನಾಗುವೆ.

3) **ಮದ್ಯಾಜೀ** (ನನ್ನನ್ನು ಪೂಜಿಸುವವನಾಗು) - ನನ್ನ ಮೇಲಿನ ಪ್ರೀತಿ ಭಕ್ತಿಗಳು ವೃದ್ಧಿಯಾದರೆ ಆಗ ನೀನು ನನ್ನನ್ನು ಪೂಜಿಸುವವನಾಗುವೆ. ಅಂದರೆ ನನ್ನಲ್ಲಿ ಪ್ರೀತಿ ಭಕ್ತಿಗಳನ್ನು ಹೊಂದಿದ ನೀನು ಕೇವಲ ನನ್ನ ಪ್ರೀತಿಯುತ ಸ್ಮರಣೆಯಲ್ಲಿ ನಿಂತವನಾಗಿರದೆ ಅದನ್ನು ಮುಂದುವರೆಸಿ ನನ್ನ ಸೇವೆ ಮಾಡಲು ಪ್ರಯತ್ನಿಸುತ್ತೀಯೆ. ಯಾರನ್ನು ನಾವು ಪ್ರೀತಿಸುತ್ತೇವೆಯೋ ಅವರಿಗೆ ಸೇವೆ ಸಲ್ಲಿಸುವುದು ಲೋಕದಲ್ಲಿ ಅನುಭವ ವೇದ್ಯವಾಗಿದೆ. ಆದ್ದರಿಂದ ಯಾವಾಗ ನನ್ನ ಸ್ಮರಣೆಯು ಪ್ರೀತಿ ಭಕ್ತಿಗಳಿಂದ

ಕೂಡಿದ್ದು ಆಗುತ್ತದೆಯೋ ಆಗ ನನ್ನಲ್ಲಿ ನಿನಗೆ ಪ್ರೀತಿಯೂ, ಭಕ್ತಿಯೂ ಅಧಿಕವಾಗಿ ಅದು ತಾನಾಗಿ ನಿನ್ನನ್ನು ನನ್ನ ಸೇವೆಯಲ್ಲಿ ನಿರತನಾಗುವಂತೆ ಮಾಡುತ್ತದೆ.

**4) ಮಾಂ ನಮಸ್ಕುರು** (ನನ್ನನ್ನು ನಮಸ್ಕರಿಸುವವನಾಗು) - ನನ್ನ ಪ್ರೀತಿಯುತ ಸ್ಮರಣೆ ಯಿಂದ ನನ್ನ ಮೇಲಿನ ಪ್ರೀತಿ ಅಧಿಕವಾಗಿ ನನ್ನ ಕೈಂಕರ್ಯದಲ್ಲಿ ನಿರತನಾದ ನೀನು ಅಂತರಾತ್ಮನೂ, ಪರಮೇಶ್ವರನೂ ಆದ ನನ್ನಲ್ಲಿ ನಮ್ರಭಾವವನ್ನು ಹೊಂದಿದವನಾಗಿ ನನ್ನನ್ನು ನಮಸ್ಕರಿಸುವವನಾಗುತ್ತೀಯೆ.

**ಏವಂ ಆತ್ಮಾನಂ ಯುಕ್ತ್ವಾ ಮತ್ಪರಾಯಣಃ** - ಈ ರೀತಿಯಾಗಿರುವ ನೀನು ನನ್ನನ್ನೇ ಪರಮಗತಿಯಾಗಿ ಹೊಂದಿದವನಾಗಿ ಸರ್ವದಾ ನನ್ನಲ್ಲೇ ನೆಟ್ಟ ಮನಸ್ಸುಳ್ಳವನಾಗಿ, ನನ್ನನ್ನು ಪ್ರೀತಿಯಿಂದ ಸ್ಮರಿಸುತ್ತಾ, ನನಗೆ ಪ್ರೀತಿಯಿಂದ ಸೇವೆ ಸಲ್ಲಿಸುತ್ತಾ, ನನ್ನಲ್ಲಿ ನಮ್ರಭಾವ ಹೊಂದಿ ನನ್ನನ್ನು ನಮಸ್ಕರಿಸುತ್ತಾ ಇರುವ ನೀನು ನನ್ನನ್ನೇ ಪರಮಗತಿ ಎಂದು ತಿಳಿದವನಾಗಿ, ನನ್ನ ಆಶ್ರಯವಿಲ್ಲದೆ ಜೀವಧಾರಣೆ ಮಾಡಲು ಅಸಮರ್ಥನಾಗಿ ಮತ್ಪರಾಯಣನು ಆಗುತ್ತೀಯೆ ಮತ್ತು ಅತ್ಯಂತ ಪ್ರೀತಿಯಿಂದ ನೀನು ನನ್ನ ಅನುಭವ ಪಡೆಯಲು ಯೋಗ್ಯವಾದ ಮನಸ್ಸನ್ನು ಪಡೆದವನಾಗುವೆ.

**ಮಾಂ ಏವ ಏಷ್ಯಸಿ** (ನನ್ನನ್ನೇ ಹೊಂದುವೆ) ಮೊದಲು ನನ್ನನ್ನು ಸರ್ವದಾ ಮನಸ್ಸಿನಲ್ಲಿ ಧ್ಯಾನಿಸುತ್ತಿರು, ಅದು ನನ್ನಲ್ಲಿ ಪ್ರೀತಿಯುತವಾದ ಸ್ಮರಣೆಯಾಗಿ ಪರಿಣಮಿಸಿ ನೀನು ನನ್ನ ಭಕ್ತನಾಗುವೆ. ಅನಂತರ ಭಕ್ತನಾದ ನೀನು ನನ್ನನ್ನು ಪೂಜಿಸಲು ಸೇವಿಸಲು ನಿರತನಾಗುತ್ತೀಯೆ ಮತ್ತು ನನಗೆ ವಿನಯದಿಂದಲೂ ಭಕ್ತಿಯಿಂದಲೂ ನಮಸ್ಕಾರವನ್ನು ಮಾಡುವವನಾಗಿ ನನ್ನನ್ನೇ ಹೊಂದುತ್ತೀಯೆ.

ಈ ರೀತಿಯಾಗಿ ಮನಸ್ಸಿನಲ್ಲಿ ನನ್ನನ್ನು ಸರ್ವದಾ ಪ್ರೀತಿಯಿಂದ ಧ್ಯಾನಿಸುತ್ತಾ, ಭಕ್ತಿಯಿಂದ ಅನುಭವಿಸುತ್ತಾ, ನನ್ನನ್ನು ಕಾಯೇನ ವಾಚಾ ಮನಸಾ ಪೂಜಿಸುತ್ತಾ, ನಮಸ್ಕರಿಸುತ್ತಾ ಇದ್ದರೆ ನನ್ನನ್ನೇ ಪರಮ ಗತಿಯಾಗಿ ಹೊಂದಿದವನಾಗುತ್ತೀಯೆ ಮತ್ತು ಕೊನೆಗೆ ನನ್ನನ್ನೇ ಹೊಂದುತ್ತೀಯೆ. ಒಟ್ಟಿನಲ್ಲಿ ಶರೀರ ಧಾರಣಾದಿ - ಲೌಕಿಕ, ವೈದಿಕ ಮತ್ತು ನಿತ್ಯ ನೈಮಿತ್ತಿಕ ಕರ್ಮಗಳನ್ನೆಲ್ಲಾ ಭಗವಂತನ ಪ್ರೀತಿಗಾಗಿ ಅವನ ಸೇವೆಯೆಂದೂ, ಅವನಿಂದಲೇ ಮಾಡಲ್ಪಟ್ಟವುಗಳೆಂದೂ, ಅಹಂಕಾರ ಮಮಕಾರ ಫಲಾಸಕ್ತಿ ರಹಿತರಾಗಿ ಮಾಡುತ್ತಲೂ, ಸರ್ವದಾ ಭಗವಂತನ ಕೀರ್ತನೆ ಪೂಜೆ

ನಮಸ್ಕಾರಾದಿಗಳನ್ನು ಪ್ರೀತಿಯಿಂದ ಆಚರಿಸುತ್ತಲೂ, ಸಕಲ ಜಗತ್ತೂ ಅವನ ಅಧೀನವಾದುದೆಂದು ಅನುಸಂಧಾನ ಮಾಡುತ್ತಲೂ, ಅವನ ಅನಂತವಾದ ಕಲ್ಯಾಣ ಗುಣಗಳನ್ನು ಅತ್ಯಂತ ಪ್ರೀತಿಯಿಂದ ಮನನ ಮಾಡುತ್ತಲೂ, ಪ್ರತಿ ದಿನವೂ ಈ ರೀತಿಯಾಗಿ ಭಕ್ತಿಯಿಂದ ಭಗವಂತನನ್ನು ಉಪಾಸನೆ ಮಾಡುತ್ತಿದ್ದರೆ ಅವನು ಭಗವಂತನನ್ನೇ ಹೊಂದುವನು – ಎಂದು ಶ್ರೀ ಕೃಷ್ಣ ಪರಮಾತ್ಮನು, ಭಕ್ತಿಯೋಗವನ್ನು ವಿವರಿಸಿ ತಿಳಿಸಿದ್ದಾನೆ.

ಈ ಒಂಭತ್ತನೆಯ ಅಧ್ಯಾಯದ ತಾತ್ಪರ್ಯವನ್ನು ಶ್ರೀ ಯಾಮುನಾಚಾರ್ಯರು ಗೀತಾಭಾಷ್ಯದ ಶ್ಲೋಕದಲ್ಲಿ ಈ ರೀತಿ ತಿಳಿಸಿದ್ದಾರೆ.

**ಸ್ವಮಾಹಾತ್ಮ್ಯಂ ಮನುಷ್ಯತ್ವೇ ಪರತ್ವಂಚ ಮಹಾತ್ಮನಾಂ ।**
**ವಿಶೇಷೋ ನವಮೇ ಯೋಗೋ ಭಕ್ತಿರೂಪಃ ಪ್ರಕೀರ್ತಿತಃ ॥**

ಶ್ರೀ ಕೃಷ್ಣನು ತನ್ನ ಮಹಾತ್ಮೆಯನ್ನೂ, ಮನುಷ್ಯನಾಗಿ ಅವತರಿಸಿದ್ದರೂ ತನ್ನ ಪರತ್ವಸ್ವಭಾವವನ್ನು ಬಿಡದಿರುವಿಕೆಯನ್ನೂ, ಮಹಾತ್ಮರಾದ ಭಕ್ತರ ವಿಶೇಷತೆಯನ್ನೂ, ಪರಮಾತ್ಮನ ನಿರಂತರ ಧ್ಯಾನ, ಕೀರ್ತನೆ, ಅರ್ಚನೆ ನಮಸ್ಕಾರಾದಿಗಳನ್ನು ಪ್ರೀತಿಯಿಂದ ಮಾಡುವುದೇ ಭಕ್ತಿ ಯೋಗವು ಎಂಬುದನ್ನೂ ಒಂಭತ್ತನೆಯ ಅಧ್ಯಾಯದಲ್ಲಿ ತಿಳಿಸಿದ್ದಾನೆ.

*****

# ಹತ್ತನೆಯ ಅಧ್ಯಾಯ

# ವಿಭೂತಿ ಯೋಗ

ವಿಷಯ ಸೂಚಿಕೆ :

ಉಪೋದ್ಘಾತ :

I ಭಗವಂತನ ಅನಂತವಾದ ಕಲ್ಯಾಣಗುಣಗಳ ವಿವರಣೆ. (ಶ್ಲೋಕಗಳು 1 ರಿಂದ 41)

1. ಭಗವತ್ ಸ್ವಭಾವ ಅನುಸಂಧಾನದಿಂದ ಪಾಪಗಳು ನಿರಸನವಾಗಿ ಭಕ್ತಿಯು ಉತ್ಪನ್ನವಾಗುತ್ತದೆ. (ಶ್ಲೋಕಗಳು 1 ರಿಂದ 3)
2. ಉತ್ಪನ್ನವಾದ ಭಕ್ತಿಯು ಭಗವಂತನ ವಿಸ್ತಾರವಾದ ಐಶ್ವರ್ಯ ಮತ್ತು ಅನಂತವಾದ ಕಲ್ಯಾಣಗುಣಗಳ ಚಿಂತನದಿಂದ ವೃದ್ಧಿಯಾಗುತ್ತದೆ. (ಶ್ಲೋಕಗಳು 4 ರಿಂದ 7)
3. ಭಕ್ತಿಯು ವೃದ್ಧಿಯಾಗಿ, ಭಗವಂತನನ್ನು ಅನವರತ ಪ್ರೀತಿಯಿಂದ ಭಜಿಸುವ ಭಕ್ತರಿಗೆ ಪರಮಾತ್ಮನೇ ಬುದ್ಧಿಯೋಗವನ್ನು (ಭಕ್ತಿರೂಪಾಪನ್ನ ಜ್ಞಾನವನ್ನು) ಕೊಟ್ಟು ಅನುಗ್ರಹಿಸುತ್ತಾನೆ. (ಶ್ಲೋಕಗಳು 8 ರಿಂದ 11)
4. ಭಗವಂತನ ವಿಭೂತಿಗಳನ್ನು ವಿಸ್ತಾರವಾಗಿ ತಿಳಿಸುವಂತೆ ಅರ್ಜುನನ ಪ್ರಾರ್ಥನೆ (ಶ್ಲೋಕಗಳು 12 ರಿಂದ 18)
5. ಭಗವಂತನು ತನ್ನ ಕೆಲವು ಮುಖ್ಯವಾದ ವಿಭೂತಿಗಳನ್ನು ತಿಳಿಸುತ್ತಾನೆ. (ಶ್ಲೋಕಗಳು 19 ರಿಂದ 41)

II ಜಗತ್ತಿನಲ್ಲಿರುವ ಸಮಸ್ತ ಚಿದಚಿದ್ವಸ್ತುಗಳೆಲ್ಲವೂ ಭಗವಂತನ ಅಧೀನದಲ್ಲಿವೆ ಎಂಬುದನ್ನು ತಿಳಿಸುತ್ತಾನೆ. (ಶ್ಲೋಕ 42)

ಉಪೋದ್ಘಾತ :

ಒಂಬತ್ತನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಪರಿಕರದೊಂದಿಗೆ ಭಕ್ತಿಯೋಗ ವನ್ನು ವಿವರಿಸಿ ಉಪದೇಶಿಸಿದ್ದಾನೆ. ಈಗ ಹತ್ತನೆಯ ಅಧ್ಯಾಯದಲ್ಲಿ ಭಕ್ತಿಯು

ಉತ್ಪನ್ನವಾಗುವುದಕ್ಕಾಗಿಯೂ, ಮತ್ತು ಅಭಿವೃದ್ಧಿಯನ್ನು ಹೊಂದುವುದಕ್ಕಾಗಿಯೂ ತನ್ನ (ಭಗವಂತನ) ನಿರಂಕುಶ ಐಶ್ವರ್ಯವೇ ಮೊದಲಾದ ಅನಂತವಾದ ಕಲ್ಯಾಣಗುಣಗಳನ್ನೂ ಮತ್ತು ಸಮಸ್ತ ಜಗತ್ತೂ ಅವನ ಶರೀರವಾಗಿ ಅವನು ಅವುಗಳಿಗೆ ಅಂತರಾತ್ಮನಾಗಿ ಇರುವುದರಿಂದ ಅವನ ಅಧೀನವಾಗಿವೆ ಎಂಬುದನ್ನೂ ತಿಳಿಸುತ್ತಾನೆ. ಭಗವಂತನು ತನ್ನ ಕೆಲವು ಮುಖ್ಯವಾದ ವಿಭೂತಿಗಳನ್ನೆಲ್ಲಾ ತಿಳಿಸಿರುವುದರಿಂದ ಈ ಅಧ್ಯಾಯಕ್ಕೆ ವಿಭೂತಿ ಯೋಗವೆಂದು ಹೆಸರು.

## I ಭಗವಂತನ ಅನಂತವಾದ ಕಲ್ಯಾಣಗುಣಗಳ ವಿವರಣೆ. (ಶ್ಲೋಕಗಳು 1 ರಿಂದ 41)

### 1. ಭಗವತ್ ಸ್ವಭಾವ ಅನುಸಂಧಾನದಿಂದ ಪಾಪಗಳು ನಿರಸನವಾಗಿ ಭಕ್ತಿಯು ಉತ್ಪನ್ನವಾಗುತ್ತದೆ. (ಶ್ಲೋಕಗಳು 1 ರಿಂದ 3)

ತನ್ನನ್ನು ಬಹಳವಾಗಿ ಪ್ರೀತಿಸುವ ಅರ್ಜುನನು ತನ್ನ ಮಹಿಮೆಯನ್ನು ಅಕ್ಕರೆಯಿಂದ ಕೇಳಿ ಸಂತೋಷ ಪಡಲೆಂದೂ ಅವನಲ್ಲಿ ಭಕ್ತಿಯು ಹುಟ್ಟಿ ವೃದ್ಧಿಯಾಗಬೇಕು ಎಂಬ ಹಿತ ಕಾಮನೆಯಿಂದಲೂ, ಶ್ರೀ ಕೃಷ್ಣನು ತನ್ನ ಪ್ರಭಾವವನ್ನೂ, ಮಹಿಮೆಯನ್ನೂ ಪ್ರಕಾಶ ಪಡಿಸುವಂಥಹ ಉತ್ತಮವಾದ ಉಪದೇಶವನ್ನು ಅವನಿಗೆ, ಚಂಚಲ ಮನಸ್ಸಿಲ್ಲದೆ ಗಮನವಿಟ್ಟು ಕೇಳುವಂತೆ ತಿಳಿಸಿ, ಮುಂದೆ ಹೇಳುವ ರೀತಿಯಲ್ಲಿ ತಿಳಿಸುತ್ತಾನೆ.

"ದೇವತೆಗಳಿಗೂ, ಮಹರ್ಷಿಗಳಿಗೂ ನಾನೇ ಮೊದಲನೆಯವನು, ನನ್ನ ಆದಿಯನ್ನು ಯಾರೂ ತಿಳಿಯಲಾರರು. ಅತ್ಯಧಿಕವಾದ ಜ್ಞಾನವುಳ್ಳ ದೇವತೆಗಳೂ ಮಹರ್ಷಿಗಳೂ ಕೂಡ ನನ್ನ ಆದಿಯನ್ನಾಗಲಿ, ಪ್ರಭಾವವನ್ನಾಗಲೀ ತಿಳಿಯಲಾರರು. ಆದರೆ ಮೋಹವಿಲ್ಲದ, ಜ್ಞಾನಿಯಾದ ಮನುಷ್ಯನು ಮಾತ್ರ ನನ್ನ ಸ್ವರೂಪ, ರೂಪ, ವಿಭೂತಿ ಮತ್ತು ಐಶ್ವರ್ಯಗಳನ್ನು ಯಥಾವತ್ತಾಗಿ ತಿಳಿಯಬಲ್ಲನು. ಯಾವನು ನನ್ನನ್ನು ಜನ್ಮವಿಲ್ಲದವನೆಂದೂ, ಅನಾದಿ ಎಂದೂ, ಸರ್ವಲೋಕೇಶ್ವರನೆಂದೂ ತಿಳಿಯುವನೋ ಅವನೇ ಮನುಷ್ಯರಲ್ಲಿ ಅಜ್ಞಾನರಹಿತನು. ಅವನು ನನ್ನ ಸ್ವಭಾವವನ್ನು ಈ ರೀತಿ ಅನುಸಂಧಾನ ಮಾಡುವುದರಿಂದ, ನನ್ನಲ್ಲಿ ಭಕ್ತಿಯುಂಟಾಗಲು ಅಡ್ಡಿಯಾಗಿರುವ ಸಮಸ್ತ ಪಾಪಗಳಿಂದಲೂ ಅವನು ಬಿಡಲ್ಪಡುತ್ತಾನೆ. ಅಲ್ಲದೆ ಅವನಿಗೆ ನನ್ನಲ್ಲಿ ತಾನಾಗಿಯೇ ಭಕ್ತಿಯು ವೃದ್ಧಿಯಾಗುತ್ತದೆ.

2. ಉತ್ಪನ್ನವಾದ ಭಕ್ತಿಯು ಭಗವಂತನ ವಿಸ್ತಾರವಾದ ಐಶ್ವರ್ಯ ಮತ್ತು ಅನಂತವಾದ ಕಲ್ಯಾಣಗುಣಗಳ ಚಿಂತನದಿಂದ ವೃದ್ಧಿಯಾಗುತ್ತದೆ. (ಶ್ಲೋಕಗಳು 4 ರಿಂದ 7)

ಮೋಹದಿಂದ ಬಿಡಲ್ಪಟ್ಟಿರುವ ಯಾವ ಭಕ್ತನು ನನ್ನ ಐಶ್ವರ್ಯ, ವಿಭೂತಿ ಮತ್ತು ಕಲ್ಯಾಣ ಗುಣಗಳನ್ನು ಅನುಸಂಧಾನ ಮಾಡುವನೋ ಅವನು ನನ್ನಲ್ಲಿ ಸ್ಥಿರವಾದ ಭಕ್ತಿಯನ್ನು ಹೊಂದುವನು. ಜ್ಞಾನಿಯಾದವನು ಜಗತ್ತಿನಲ್ಲಿರುವ ಎಲ್ಲಾ ಪ್ರಾಣಿಗಳ ಮನೋವೃತ್ತಿಗಳೆಲ್ಲವೂ ನನ್ನ ಸಂಕಲ್ಪದಿಂದ ಹುಟ್ಟುತ್ತವೆ ಮತ್ತು ನನ್ನ ಅಧೀನಕ್ಕೆ ಒಳಪಟ್ಟಿವೆ ಎಂಬುದನ್ನು ಅನುಸಂಧಾನ ಮಾಡುತ್ತಾನೆ. ಆ ಮನೋವೃತ್ತಿಗಳು ಯಾವುವು ಎಂಬುದನ್ನು ಮುಂದೆ ತಿಳಿಸುತ್ತೇನೆ.

**ಬುದ್ಧಿ** ಅಂದರೆ ವಿವೇಚನಾಶಕ್ತಿಯು, **ಜ್ಞಾನ** - ನಿಶ್ಚಯ ಜ್ಞಾನವು, ಅಸಂಮೋಹ -ಭ್ರಮೆ ಇಲ್ಲದಿರುವಿಕೆ, **ಕ್ಷಮೆ** - ಕೋಪಾದಿಗಳಿಗೆ ಆಸ್ಪದ ಕೊಡದ ಮನಸ್ಸಿನಲ್ಲಿ ವಿಕಾರರಹಿತವಾಗಿರುವ ಸ್ಥಿತಿಯು, **ಸತ್ಯ** - ಕಂಡದ್ದನ್ನು ಕಂಡ ಹಾಗೆ ಮತ್ತು ಪ್ರಾಣಿಗಳಿಗೆ ಹಿತವಾಗುವ ಹಾಗೆ ಹೇಳುವುದು, **ದಮ**- ಬಹಿರಿಂದ್ರಿಯಗಳನ್ನು ಅನರ್ಥ ವಿಷಯಗಳ ಕಡೆಗೆ ಹೋಗದ ಹಾಗೆ ನಿಗ್ರಹಿಸುವುದು, **ಶಮ**– ಅಂತರಿಂದ್ರಿಯಗಳನ್ನು ಅನರ್ಥದ ಚಿಂತನೆಯಿಂದ ನಿಗ್ರಹಿಸುವುದು, ಸುಖ- ತನಗೆ ಅನುಕೂಲವಾದ ಅನುಭವವು, **ದುಃಖ** - ತನಗೆ ಪ್ರತಿಕೂಲವಾದ ಅನುಭವವು, **ಭಾವ** - ಸುಖಾನುಭವದಿಂದ ಮನಸ್ಸಿನಲ್ಲಿ ಉಂಟಾಗುವ ಉತ್ಸಾಹ, **ಅಭಾವ** - ದುಃಖಾನುಭವದಿಂದ ಮನಸ್ಸಿನಲ್ಲಿ ಉಂಟಾಗುವ ವೇದನೆ, **ಭಯ** - ಮುಂದೆ ಒದಗಬಹುದಾದ ದುಃಖ ಸೂಚನೆ ಕಂಡು ಮನಸ್ಸಿನಲ್ಲಿ ಉಂಟಾಗುವ ಭಾವನೆಯೇ ಭಯವು, ಮನಸ್ಸಿನಲ್ಲಿ ಅದಿಲ್ಲದಿರುವಿಕೆಯೇ ಧೈರ್ಯವು, ಇವುಗಳೆಲ್ಲವೂ ಪ್ರಾಣಿಗಳಿಗೆ ನನ್ನಿಂದಲೇ ಉಂಟಾಗುವುವು.

ಅಲ್ಲದೆ, **ಅಹಿಂಸೆ** - ಇತರರಿಗೆ ದುಃಖವನ್ನು ಉಂಟುಮಾಡದಿರುವಿಕೆ, **ಸಮತೆ**-ಮಿತ್ರರಲ್ಲೂ, ಶತ್ರುಗಳಲ್ಲೂ ಎಲ್ಲರಲ್ಲಿಯೂ ಸಮಬುದ್ಧಿಯಿಂದ ಇರುವುದು, **ತುಷ್ಟಿ** - ತನ್ನ ದೃಷ್ಟಿಗೆ ಗೋಚರಿಸುವ ಸರ್ವಜೀವಿಗಳೊಡನೆಯೂ ಸಂತೋಷದಿಂದ ವರ್ತಿಸುವುದು, **ತಪಸ್ಸು** - ಶಾಸ್ತ್ರೀಯವಿಧಿಗೆ ಅನುಗುಣವಾಗಿ ಭೋಗಗಳನ್ನು ತ್ಯಜಿಸುವುದರಿಂದ ಉಂಟಾಗುವ ಕಾಯಕ್ಲೇಶರೂಪವಾದ ತಪಸ್ಸು, **ದಾನ**-ತನ್ನ ಭೋಗ್ಯ ವಸ್ತುಗಳನ್ನು ಇತರರಿಗೆ ಕೊಡುವುದು, **ಯಶಸ್ಸು** -

ಗುಣವಂತಿಕೆಯಿಂದ ಉಂಟಾಗುವ ಯಶಸ್ಸು, **ಅಯಶಃ** - ದೋಷಗಳ ಪ್ರಚಾರದಿಂದ ಉಂಟಾಗುವ ಅಪಯಶಸ್ಸು ಹೀಗೆ ಪ್ರವೃತ್ತಿ ನಿವೃತ್ತಿ ಕಾರಣರೂಪವಾದ ಬೇರೆ ಬೇರೆ ರೀತಿಯ ಮನೋವೃತ್ತಿಗಳು ಎಲ್ಲಾ ಪ್ರಾಣಿಗಳಿಗೂ ನನ್ನ ಸಂಕಲ್ಪದಿಂದಲೇ ಉಂಟಾಗುತ್ತವೆ. (ಅಂದಮೇಲೆ ಭಕ್ತಿರೂಪವಾದ ಮನೋವೃತ್ತಿಯೂ ನನ್ನ ಸಂಕಲ್ಪದಿಂದಲೇ ಉಂಟಾಗಬೇಕು ಎಂಬುದನ್ನು ತಿಳಿಯಬೇಕು.)

ಲೋಕದಲ್ಲಿರುವ ಸಮಸ್ತ ಪ್ರಾಣಿಗಳ ಸೃಷ್ಟಿಸ್ಥಿತಿಗಳನ್ನು ಉಂಟುಮಾಡುವ ದೇವತಾದಿಗಳೂ ಕೂಡ ನನ್ನ ಸಂಕಲ್ಪಾಧೀನರಾಗಿಯೇ ಇದ್ದಾರೆ. ಕಳೆದ ಮನ್ವಂತರದಲ್ಲಿ ನಿತ್ಯಜಗತ್ತಿನ ರಚನೆಗಾಗಿ ಬ್ರಹ್ಮದೇವನ ಮಾನಸ ಪುತ್ರರಾದ ಭೃಗು ಆದಿಯಾಗಿ ಸಪ್ತಋಷಿಗಳೂ ಸೃಜಿಸಲ್ಪಟ್ಟರು. ಅಲ್ಲದೆ ಈ ಜಗತ್ತನ್ನು ನಿತ್ಯವಾಗಿ ಪಾಲನೆ ಮಾಡುವುದಕ್ಕಾಗಿ ಸಾವರ್ಣಿಕರೆಂಬ ನಾಲ್ಕು ಮನುಗಳೂ ಸೃಜಿಸಲ್ಪಟ್ಟರು. ಇವರುಗಳೂ, ಇವರ ಸಂತಾನವಾಗಿ ಲೋಕದಲ್ಲಿ ಜನಿಸಿದ ಸಮಸ್ತ ಪ್ರಜೆಗಳೂ ನನ್ನ ಸಂಕಲ್ಪವನ್ನು ಅನುಸರಿಸಿ ನಡೆಯುವವರಾಗಿದ್ದಾರೆ. ನನ್ನ ಈ ವಿಭೂತಿಯನ್ನೂ ಮತ್ತು ಸಮಸ್ತ ಕಲ್ಯಾಣಗುಣ ರೂಪವಾದ ಯೋಗವನ್ನೂ ಅಂದರೆ ನನ್ನ ಸಂಕಲ್ಪಕ್ಕೆ ಈ ಲೋಕದಲ್ಲಿ ಇರುವವರ ಉತ್ಪತ್ತಿಯೂ, ಸ್ಥಿತಿಯೂ, ಪ್ರವೃತ್ತಿಯೂ ಅಧೀನವಾಗಿ ಇರುವುದರಿಂದ ಇವೆಲ್ಲವೂ ನನ್ನ ಯೋಗವೆಂದು ತಿಳಿಯುವವರು ಎಷ್ಟು ವಿಘ್ನಗಳು ಬಂದರೂ ನನ್ನಲ್ಲಿ ಕದಲಿಸಲಾಗದಂತಹ ನಿಶ್ಚಯವಾದ ಮತ್ತು ದೃಢವಾದ ಭಕ್ತಿಯನ್ನು ಹೊಂದಿ ಬಾಳುವರು. ಇದರಲ್ಲಿ ಸಂಶಯವೇ ಇಲ್ಲ. ಅಲ್ಲದೆ ಅವರಲ್ಲಿ ಭಕ್ತಿಯೋಗವೂ ವೃದ್ಧಿಯಾಗುತ್ತದೆ.

**3. ಭಕ್ತಿಯು ವೃದ್ಧಿಯಾಗಿ, ಭಗವಂತನನ್ನು ಅನವರತ ಪ್ರೀತಿಯಿಂದ ಭಜಿಸುವ ಭಕ್ತರಿಗೆ ಪರಮಾತ್ಮನೇ ಬುದ್ಧಿಯೋಗವನ್ನು (ಭಕ್ತಿರೂಪಾಪನ್ನ ಜ್ಞಾನವನ್ನು) ಕೊಟ್ಟು ಅನುಗ್ರಹಿಸುತ್ತಾನೆ. (ಶ್ಲೋಕಗಳು 8 ರಿಂದ 11)**

ಇಂಥಾ ಭಕ್ತಿಯೋಗನಿಷ್ಠರು ನಾನೇ ಚಿದಚಿತ್‌ಗಳಿಂದ ಕೂಡಿರುವ ಪ್ರಪಂಚದ ಉತ್ಪತ್ತಿಗೆ ಕಾರಣನೆಂದೂ, ನನ್ನಿಂದಲೇ ಪ್ರಪಂಚದ ಸ್ಥಿತಿಗತಿಗಳೆಲ್ಲವೂ ನಡೆಯುತ್ತಿರುವುದೆಂದೂ ತಿಳಿಯುತ್ತಾರೆ. ಅಲ್ಲದೆ ಇವುಗಳೆಲ್ಲವೂ ನನ್ನ ಐಶ್ವರ್ಯಗಳಾಗಿರುವುದರಿಂದಲೂ, ನಾನು ಸೌಶೀಲ್ಯ, ವಾತ್ಸಲ್ಯ, ಸೌಂದರ್ಯ

ಮೊದಲಾದ ಎಣಿಸಲಾರದಷ್ಟು ಕಲ್ಯಾಣ ಗುಣಗಳಿಂದ ಕೂಡಿರುವುದರಿಂದಲೂ ನನಗೆ ಸಮಾನರಾದವರು ಯಾರೂ ಇಲ್ಲ ಎಂಬುದನ್ನು ಅರಿತು ಅವರು ನನ್ನನ್ನು ಅನುಸಂಧಾನ ಮಾಡುತ್ತಾ ನನ್ನಲ್ಲೇ ಆಸೆಯುಳ್ಳವರಾಗಿ, ನನ್ನಲ್ಲೇ ತನ್ಮಯರಾಗಿ, ನನ್ನನ್ನು ಸದಾ ಭಕ್ತಿಯಿಂದ ಭಜಿಸುತ್ತಾರೆ. ಇಂತಹ ಜ್ಞಾನಿಗಳಾದ ಭಕ್ತರು ನನ್ನಲ್ಲೇ ನೆಟ್ಟ ಮನಸ್ಸುಳ್ಳವರಾಗಿ ನನ್ನಲ್ಲಿಯೇ ತಮ್ಮ ಪ್ರಾಣವನ್ನು ನೆಲೆಗೊಳಿಸಿ ಅಂದರೆ ನಾನಿಲ್ಲದೆ ಬದುಕಲಾರದವರಾಗಿ ತಮ್ಮ ತಮ್ಮ ಅನುಭವಕ್ಕೆ ಬಂದಿರುವ ನನ್ನ ಕಲ್ಯಾಣ ಗುಣಗಳನ್ನೂ, ನನ್ನ ಕಥೆಗಳನ್ನೂ ಪರಸ್ಪರವಾಗಿ ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಾ, ನನ್ನ ದಿವ್ಯವಾಗಿಯೂ, ರಮಣೀಯವಾಗಿಯೂ ಇರುವ ಲೀಲಾಚೇಷ್ಟಿತಗಳನ್ನು ವರ್ಣಿಸುತ್ತಾ, ಹೇಳುವವರು ನನ್ನ ಗುಣ ಪ್ರವಚನದಿಂದಲೂ, ಕೇಳುವವರು ನನ್ನ ಗುಣ ಶ್ರವಣದಿಂದಲೂ, ಅತ್ಯಂತ ಪ್ರೀತಿಯಿಂದ ಸಂತೋಷಪಡುವರು.

ಈ ರೀತಿಯಾದ ನನ್ನ ವಿಭೂತಿಜ್ಞಾನವು ಅವರ ಭಕ್ತಿಯ ಉತ್ಪತ್ತಿಗೂ, ಉತ್ಪತ್ತಿಯಾದ ಭಕ್ತಿಯ ವೃದ್ಧಿಗೂ ಕಾರಣವಾಗುತ್ತದೆ. **"ತೇಷಾಂ ಸತತ ಯುಕ್ತಾನಾಂಭಜತಾಂ ಪ್ರೀತಿಪೂರ್ವಕಂ। ದದಾಮಿಬುದ್ಧಿಯೋಗಂತಂ ಯೇನಮಾಮುಪಯಾಂತಿತೇ ॥"** ಅಂದರೆ ಯಾವಾಗಲೂ ನನ್ನೊಡನೆ ಯೋಗವನ್ನು ಬಯಸಿ ನನ್ನನ್ನು ಭಕ್ತಿಯಿಂದ ಭಜಿಸುವವರಿಗೆ ನನ್ನನ್ನು ಹೊಂದಲು ಉಪಾಯವಾದ ಬುದ್ಧಿಯೋಗವನ್ನು ನಾನೇ ಪ್ರೀತಿಪೂರ್ವಕವಾಗಿ ಕೊಡುತ್ತೇನೆ ಮತ್ತು ಬುದ್ಧಿಯೋಗದ ಪ್ರತಿಬಂಧಕಗಳನ್ನು ನಾನೇ ಕಳೆಯುತ್ತೇನೆ. ಅಂದರೆ ಮುಂದೆ ಅವರ ಮನಸ್ಸಿನಲ್ಲಿ ನಾನೇ ನೆಲೆಗೊಂಡು ನನ್ನ ಕಲ್ಯಾಣಗುಣಗಳನ್ನು ಪ್ರಕಟಗೊಳಿಸಿ, ಅವರನ್ನು ಅನುಗ್ರಹಿಸುವುದಕ್ಕೋಸ್ಕರವಾಗಿಯೇ ಪ್ರಕಾಶವಾದ, ನನ್ನ ವಿಷಯವೆಂಬ ದೀಪದಿಂದ ಅವರ ಅಜ್ಞಾನವೆಂಬ ಕತ್ತಲೆಯನ್ನು ಅಂದರೆ ಪ್ರಾಚೀನ ಕರ್ಮರೂಪ ಅಜ್ಞಾನದಿಂದ ಉಂಟಾದ, ನನಗಿಂತ ಬೇರೆಯಾದ ಲೌಕಿಕವಿಷಯ ಪ್ರೀತಿರೂಪವಾದ ಕತ್ತಲೆಯನ್ನು ನಾಶಪಡಿಸುತ್ತೇನೆ" ಎಂದು ಪರಮಾತ್ಮನು ಭರವಸೆ ನೀಡಿದ್ದಾನೆ.

### 4. ಭಗವಂತನ ವಿಭೂತಿಗಳನ್ನು ವಿಸ್ತಾರವಾಗಿ ತಿಳಿಸುವಂತೆ ಅರ್ಜುನನ ಪ್ರಾರ್ಥನೆ (ಶ್ಲೋಕಗಳು 12 ರಿಂದ 18)

ಶ್ರೀಕೃಷ್ಣನು ತನ್ನ ವಿಸ್ತಾರವಾದ ವಿಭೂತಿಗಳನ್ನೂ, ಸಮಸ್ತಕ್ಕೂ ವಿಸಜಾತೀಯವಾದ, ಕೇಳುವವರಿಗೆ ಅತ್ಯಂತ ಆನಂದದಾಯಕವಾದ ಕಲ್ಯಾಣಗುಣ

ಯೋಗವನ್ನೂ ಸಂಕ್ಷೇಪವಾಗಿ ಅರ್ಜುನನಿಗೆ ತಿಳಿಸಲು ಅವುಗಳನ್ನು ವಿಸ್ತಾರವಾಗಿ ತಿಳಿದುಕೊಳ್ಳುವ ತ್ವರೆಯು ಅವನಿಗೆ ಉಂಟಾಯಿತು. ಆಗ ಅವನು ಶ್ರೀಕೃಷ್ಣನನ್ನು ಈ ರೀತಿ ಪ್ರಾರ್ಥಿಸುತ್ತಾನೆ "ದೇವ, ಶ್ರುತಿಗಳು ನೀನು ಜಗತ್ಕಾರಣನಾದ ಪರಬ್ರಹ್ಮನೆಂದೂ, ಪರಮತೇಜೋರೂಪನಾದ ಪರಂಜ್ಯೋತಿ ಎಂದೂ, ಪರಮ ಪವಿತ್ರವಾದ ವಸ್ತುವು ನೀನೇ ಎಂದೂ ಸಾರುತ್ತವೆ. ನಾರದರು, ಅಸಿತರು, ದೇವಲರು, ವ್ಯಾಸರು ಮುಂತಾದ ಋಷಿಗಳೂ, ದೇವಋಷಿಗಳೂ ನೀನು ಶಾಶ್ವತವಾದ ದಿವ್ಯಪುರುಷನು, ಆದಿದೇವನು, ಹುಟ್ಟುವಿಕೆ ಇಲ್ಲದವನು, ವಿಭುವಾಗಿ ವ್ಯಾಪಿಸಿರುವವನು ಮತ್ತು ಎಲ್ಲರಿಗೂ ಸ್ವಾಮಿ ಯಾದ ಭಗವಂತನು ಎಂದು ಹೇಳಿದ್ದಾರೆ. ಅಲ್ಲದೆ ನೀನೂ ಕೂಡ ನಿನ್ನ ಸ್ವರೂಪವು ಹೀಗೆಯೇ ಇದೆ ಎಂಬುದನ್ನು ನನಗೆ ಉಪದೇಶಮಾಡಿರುತ್ತೀಯೆ. ಆದುದರಿಂದ ವೇದಗಳಿಂದಲೂ, ಋಷಿಗಳಿಂದಲೂ ಮತ್ತು ನಿನ್ನಿಂದಲು ಹೇಳಲ್ಪಟ್ಟಿರುವ ಈ ವಿಷಯವು ಉತ್ಪ್ರೇಕ್ಷೆಯಾಗಿರದೆ ಸತ್ಯವಾದುದು ಎಂದು ತಿಳಿಯುತ್ತೇನೆ. ಏತಕ್ಕೆಂದರೆ ಪರಿಮಿತಜ್ಞಾನವುಳ್ಳ ದೇವತೆಗಳಾಗಲೀ, ದಾನವರಾಗಲೀ ಯಾರೂ ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸು ಇವುಗಳಿಗೆಲ್ಲಾ ನಿಧಿಯಾದ, ಭಗವಂತನಾದ ನಿನ್ನ ವೈಭವದ ಪ್ರಕಾರವನ್ನು ಅರಿಯಲಾರರು. ಪುರುಷೋತ್ತಮನಾದ ನೀನೇ ಸಕಲ ಪ್ರಾಣಿಗಳನ್ನು ಉಂಟುಮಾಡುವ ಕಾರಣವಸ್ತುವೂ, ಸರ್ವಭೂತೇಶ್ವರನೂ, ದೇವದೇವನೂ, ಲೋಕನಾಯಕನೂ ಆಗಿರುವುದರಿಂದ ನಿನ್ನ ಅಸಾಧಾರಣ ಜ್ಞಾನದಿಂದ ನಿನ್ನ ಸ್ವರೂಪವನ್ನು ನೀನು ತಿಳಿಯಬಲ್ಲೆ. ಯಾವ ವಿಭೂತಿಗಳಿಂದ ನೀನು ಹೀಗೆ ಲೋಕಗಳನ್ನೆಲ್ಲಾ ವ್ಯಾಪಿಸಿರುವೆಯೋ ಅಂತಹ ನಿನ್ನ ಅಪ್ರಾಕೃತ ಮಹಿಮೆಗಳನ್ನು ನನಗೆ ವಿವರಿಸಲು ನೀನೇ ಸಮರ್ಥನು. ನೀನು ಆ ವಿಭೂತಿಗಳನ್ನೆಲ್ಲಾ ನನಗೆ ಕರುಣೆಯಿಂದ ತಿಳಿಸಬೇಕು. ಭಕ್ತಿಯೋಗನಿಷ್ಠನಾಗಿ ಸದಾ ನಿನ್ನನ್ನು ಚಿಂತಿಸುತ್ತಿರುವ ನಾನು, ಅನಂತ ಕಲ್ಯಾಣ ಗುಣಗಳಿಂದ ಕೂಡಿ ಪರಿಪೂರ್ಣನಾಗಿರುವ ನಿನ್ನನ್ನು ಹೇಗೆ ತಿಳಿದುಕೊಳ್ಳಲಿ ಮತ್ತು ಯಾವಾಗಲೂ ಹೇಗೆ ಧ್ಯಾನಿಸಲಿ? ಅಂದರೆ ಯಾವ ಯಾವ ಭಾವಗಳಲ್ಲಿ ನಿನ್ನನ್ನು ಚಿಂತನೆ ಮಾಡಬೇಕು, ಧ್ಯಾನಿಸಬೇಕು ಎಂಬುದನ್ನು ತಿಳಿಸು, ನಿನ್ನ ಸೃಷ್ಟಿ ಕಾರಣತ್ವವನ್ನೂ, ನಿನ್ನ ಪ್ರಭಾವವನ್ನೂ ದಯವಿಟ್ಟು ಇನ್ನೂ ವಿವರವಾಗಿ ನನಗೆ ತಿಳಿಸುವವನಾಗು. ನನಗೆ ನಿನ್ನ ವಿಷಯಗಳನ್ನು ಇನ್ನೂ ಹೆಚ್ಚಾಗಿ ಕೇಳಿ ಸಂತೋಷಪಡಬೇಕೆಂಬ ಆಸೆಯು ಇರುವುದರಿಂದ. ಅಮೃತ ಸಮನಾದ ನಿನ್ನ ಮಹಾತ್ಮ್ಯೆಯನ್ನು ನಿನ್ನಿಂದ ಎಷ್ಟು ಕೇಳಿದರೂ ನನಗೆ ತೃಪ್ತಿಯೇ ಆಗುವುದಿಲ್ಲ."

## 5. ಭಗವಂತನು ತನ್ನ ಕೆಲವು ಮುಖ್ಯವಾದ ವಿಭೂತಿಗಳನ್ನು ತಿಳಿಸುತ್ತಾನೆ. (ಶ್ಲೋಕಗಳು 19 ರಿಂದ 41)

ಅರ್ಜುನನ ಪ್ರಾರ್ಥನೆಯನ್ನು ಕೇಳಿ ಶ್ರೀಕೃಷ್ಣನು ಮುಂದೆ ಅವನ ಪ್ರಶ್ನೆಗೆ ಉತ್ತರವನ್ನು ತಿಳಿಸುತ್ತಾನೆ "ಅರ್ಜುನ! ನನ್ನ ವಿಭೂತಿಗಳು ಅಸಂಖ್ಯಾತಗಳಾಗಿರುವುದರಿಂದ ಅವುಗಳನ್ನು ಸಮಗ್ರವಾಗಿ ಹೇಳುವುದೂ, ಕೇಳುವುದೂ ಸಾಧ್ಯವಿಲ್ಲ. ಆದುದರಿಂದ ನನ್ನ ವಿಭೂತಿಗಳಲ್ಲಿ ಪ್ರಧಾನವಾದ ಮತ್ತು ಪ್ರಸಿದ್ಧವಾದ ವಿಭೂತಿಗಳನ್ನು ಮಾತ್ರ ತಿಳಿಸುತ್ತೇನೆ. ನಾನು ಎಲ್ಲಾ ಪ್ರಾಣಿಗಳಿಗೂ ಆಧಾರನೂ, ನಿಯಾಮಕನೂ ಸ್ವಾಮಿಯೂ ಆಗಿ ಅವರ ಹೃದಯ ಪ್ರದೇಶದಲ್ಲಿ ಅಂತರಾತ್ಮನಾಗಿರುವೆನು ಮತ್ತು ಅವುಗಳಿಗೆ ಉತ್ಪತ್ತಿಕಾರಣನೂ, ಸ್ಥಿತಿಕಾರಣನೂ, ಮತ್ತು ನಾಶಕಾರಣನೂ ನಾನೇ ಆಗಿರುವೆನು. ಅಂದರೆ ನಾನೇ ಆ ಪ್ರಾಣಿಗಳ ಆದಿಯೂ, ಮಧ್ಯವೂ ಮತ್ತು ಅಂತ್ಯವೂ ಆಗಿರುವುದರಿಂದ ಸಮಸ್ತ ಶಬ್ದಗಳೂ ಅಂತರಾತ್ಮನಾಗಿರುವ ನನ್ನನ್ನೇ ತಿಳಿಸುತ್ತವೆ. ಮುಂದೆ ಅವುಗಳನ್ನು ಸ್ವಲ್ಪ ವಿಶದೀಕರಿಸಿ ತಿಳಿಸುವೆನು.

ದ್ವಾದಶಾದಿತ್ಯರಲ್ಲಿ ಹನ್ನೆರಡನೆಯವನಾದ ವಿಷ್ಣುವು ನಾನೇ, ಜ್ಯೋತಿರ್ಮಂಡಲದೊಳಗೆಲ್ಲಾ ಅಧಿಕಪ್ರಕಾಶವುಳ್ಳ ಸೂರ್ಯನೂ ನಾನೇ, ಮರುತ್ತುಗಳಲ್ಲಿರುವ ಮರೀಚಿಯೂ, ನಕ್ಷತ್ರಗಳಲ್ಲಿ ನಕ್ಷತ್ರಗಳ ಪತಿಯಾದ ಚಂದ್ರನೂ ನಾನೇ, ಋಕ್, ಯಜು, ಸಾಮ, ಅಥರ್ವಣ ಎಂಬ ವೇದಗಳಲ್ಲಿ ಉತ್ತಮವಾದ ಸಾಮವೇದವು ನಾನೇ, ದೇವತೆಗಳಲ್ಲಿ ನಾನು ಇಂದ್ರನೂ, ಹನ್ನೊಂದು ಇಂದ್ರಿಯಗಳಲ್ಲಿ ಮನಸ್ಸೂ, ಭೂತಗಳಲ್ಲಿ ಅವುಗಳಿಗೆ ನಿಯಾಮಕವಾದ ಬುದ್ಧಿಯೂ ನಾನೇ ಆಗಿರುತ್ತೇನೆ. ಹನ್ನೊಂದು ಮಂದಿ ರುದ್ರರಲ್ಲಿ ಶಂಕರನೂ, ಯಕ್ಷರಾಕ್ಷಸರಲ್ಲಿ ಕುಬೇರನೂ, ಅಷ್ಟವಸುಗಳಲ್ಲಿ ಅಗ್ನಿಯೂ, ಶಿಖರಗಳಿಂದ ಶೋಭಿಸುತ್ತಿರುವ ಪರ್ವತಗಳಲ್ಲಿ ಮೇರು ಪರ್ವತವೂ ನಾನೇ ಆಗಿರುತ್ತೇನೆ. ಪುರೋಹಿತರೊಳಗೆ ಮುಖ್ಯನಾದ ಬೃಹಸ್ಪತಿಯೂ, ಸೇನಾಪತಿಗಳೊಳಗೆ ಸ್ಕಂದನೂ, ಜಲಾಶಯಗಳಲ್ಲಿ ಸಮುದ್ರವೂ, ಮಹರ್ಷಿಗಳಲ್ಲಿ ಭೃಗುವೂ ನಾನೇ ಆಗಿರುತ್ತೇನೆ. ವಾಕ್ಯಗಳಲ್ಲಿ ಪ್ರಣವವೂ, ಯಜ್ಞಗಳಲ್ಲಿ ಶ್ರೇಷ್ಠವಾದ ಜಪಯಜ್ಞವೂ, ಸಮಸ್ತ ಪರ್ವತಗಳಲ್ಲಿ ಹಿಮಾಲಯ ಪರ್ವತವೂ, ಪೂಜ್ಯವಾದ ಅಶ್ವತ್ಥವೃಕ್ಷವೂ ನಾನೇ ಆಗಿರುತ್ತೇನೆ. ದೇವ-ಋಷಿಗಳೊಳಗೆ ಪರಮಭಕ್ತನಾದ ನಾರದನೂ, ದೇವಗಾಯಕರಾದ

ಗಂಧರ್ವರಲ್ಲಿ ಚಿತ್ರರಥನೂ, ಯೋಗನಿಷ್ಠರಾದ ಸಿದ್ಧಪುರುಷರಲ್ಲಿ ಕಪಿಲಮುನಿಯೂ ನಾನೇ ಆಗಿರುವೆನು.

ಕುದುರೆಗಳಲ್ಲಿ ಉಚ್ಚೈಶ್ರವಸ್ಸೆಂಬ ಇಂದ್ರನ ದಿವ್ಯಾಶ್ವವೂ, ಅಷ್ಟದಿಗ್ಗಜಗಳಲ್ಲಿ ಐರಾವತವೂ, ಮನುಷ್ಯರೊಳಗೆ ರಾಜನೂ, ಆಯುಧಗಳಲ್ಲಿ ವಜ್ರಾಯುಧವೂ ನಾನೇ ಆಗಿರುತ್ತೇನೆ. ಕರೆಯುವ ಹಸುಗಳಲ್ಲಿ ದಿವ್ಯವಾದ ಕಾಮಧೇನುವೂ, ಸಂತಾನೋತ್ಪತ್ತಿಗೆ ಮೂಲವಾದ ಮನ್ಮಥನೂ, ಒಂದು ಹೆಡೆಯುಳ್ಳ ಸರ್ಪಗಳಲ್ಲಿ ವಾಸುಕಿಯೂ, ಅನೇಕ ಹೆಡೆಗಳುಳ್ಳ ಸರ್ಪಗಳಲ್ಲಿ ಆದಿಶೇಷನೂ ನಾನೇ ಆಗಿರುತ್ತೇನೆ. ಜಲಚರ ಪ್ರಾಣಿಗಳಿಗೆ ರಾಜನಾದ ವರುಣನೂ, ಪಿತೃಗಳಲ್ಲಿ ಪಿತೃರಾಜನಾದ ಅರ್ಯಮನೂ, ದಂಡಿಸುವವರೊಳಗೆ ವೈವಸ್ವತನೆಂಬ ಯಮನೂ, ದೈತ್ಯರೊಳಗೆ ಪ್ರಹ್ಲಾದನೂ, ಇತರರಿಗೆ ಕೇಡನ್ನು ಎಣಿಸುವವರಿಗೆ ಕಾಲನೂ, ಮೃಗಗಳಲ್ಲಿ ಸಿಂಹವೂ, ಪಕ್ಷಿಗಳಲ್ಲಿ ಗರುಡನೂ ನಾನೇ ಆಗಿರುತ್ತೇನೆ. ಸಂಚರಿಸುವುದೇ ಸ್ವಭಾವವಾಗಿ ಉಳ್ಳ ವಾಯುವೂ, ಶಸ್ತ್ರಧಾರಿಗಳಲ್ಲಿ ರಾಮನೂ, ಜಲಚರಗಳಲ್ಲಿ ಮತ್ಸ್ಯರಾಜನಾದ ತಿಮಿಂಗಲವೂ, ನದಿಗಳಲ್ಲಿ ಶ್ರೇಷ್ಠವಾದ ಗಂಗಾನದಿಯೂ ನಾನೇ ಆಗಿರುತ್ತೇನೆ. ಸೃಷ್ಟಿಸಲ್ಪಡುವ ಪದಾರ್ಥಗಳ ಆದಿಯೂ, ಮಧ್ಯವೂ, ಅಂತ್ಯವೂ ಅಂದರೆ ಸಕಲ ಪ್ರಾಣಿಗಳನ್ನು ಸೃಷ್ಟಿಸಿ, ಪರಿಪಾಲಿಸಿ, ನಾಶಮಾಡುವವನು ನಾನೇ ಆಗಿರುತ್ತೇನೆ. ಶ್ರೇಯಸ್ಸಾಧನವಾದ ವಿದ್ಯೆಗಳೊಳಗೆ ಪರಮ ಶ್ರೇಯಸ್ಸಾಧನಭೂತವಾದ ಅಧ್ಯಾತ್ಮವಿದ್ಯೆಯೂ, ವಾದಜಲ್ಪವಿತಂಡ ಮೊದಲಾದವುಗಳಲ್ಲಿ ತತ್ವನಿರ್ಣಯಕ್ಕಾಗಿ ಹೊರಟ ವಾದಶಕ್ತಿಯೂ, ಅನೇಕ ಅಕ್ಷರಗಳಲ್ಲಿ ಎಲ್ಲಾ ಅಕ್ಷರಗಳಿಗೂ ಆದಿಕಾರಣವಾದ "ಅಕಾರವೂ", ಸಮಾಸಗಳಲ್ಲಿ ಸರ್ವಪದಾರ್ಥ ಪ್ರಧಾನವಾದ ದ್ವಂದ್ವ ಸಮಾಸವೂ ನಾನೇ ಆಗಿರುತ್ತೇನೆ. ಕಲಾಮುಹೂರ್ತವೇ ಮುಂತಾದ ನಾಶವಿಲ್ಲದ ಕಾಲವೂ, ಸಕಲಪ್ರಾಣಿಗಳನ್ನೂ ಸೃಷ್ಟಿಸುವಂತಹ ಚತುರ್ಮುಖ ಬ್ರಹ್ಮನೂ, ಸಕಲ ಪ್ರಾಣಿಗಳನ್ನೂ ಸಂಹರಿಸುವ ಮೃತ್ಯುವೂ, ಜನಿಸತಕ್ಕವರ ಉದ್ಭವವೂ ನಾನೇ ಆಗಿರುತ್ತೇನೆ.

ಸ್ತ್ರೀಯರಲ್ಲಿರುವ ಲಕ್ಷ್ಮಿಯೂ, ಕೀರ್ತಿಯೂ, ವಾಣಿಯೂ, ಸ್ಮರಣಶಕ್ತಿಯೂ, ಬುದ್ಧಿಶಕ್ತಿಯೂ, ಧೈರ್ಯವೂ ಮತ್ತು ತಾಳ್ಮೆಯೂ ನಾನೇ ಆಗಿರುತ್ತೇನೆ. ಸಾಮಗಳಲ್ಲಿ ಬೃಹತ್ತೆಂಬ ಸಾಮವೂ, ಛಂದಸ್ಸುಗಳೊಳಗೆ ಗಾಯತ್ರಿಯೂ, ಮಾಸಗಳಲ್ಲಿ ಮಾರ್ಗಶಿರ ಮಾಸವೂ, ಋತುಗಳಲ್ಲಿ ಹೂವುಗಳನ್ನು ಬಿಡುವ ವಸಂತಋತುವೂ

ನಾನೇ ಆಗಿರುತ್ತೇನೆ. ಮೋಸಗಾರರಲ್ಲಿರುವ ಜೂಜೂ, ತೇಜಸ್ವಿಗಳಲ್ಲಿ ಇರುವ ತೇಜಸ್ಸೂ, ಜಯಶೀಲರಲ್ಲಿರುವ ಜಯವೂ, ಪ್ರಯತ್ನಪರರಲ್ಲಿರುವ ಪ್ರಯತ್ನವೂ, ಸಾತ್ವಿಕರಲ್ಲಿರುವ ಸತ್ವಗುಣವೂ ನಾನೇ ಆಗಿರುತ್ತೇನೆ.

ವೃಷ್ಣಿವಂಶದ ವಸುದೇವನಮಗನಾದ ವಾಸುದೇವನೂ, ಪಾಂಡವರಲ್ಲಿ ಒಬ್ಬನಾದ ಅರ್ಜುನನೂ ಅಂದರೆ ನೀನೂ, ಸತ್ಯಸ್ವರೂಪವನ್ನು ಮನನಮಾಡುವ ವ್ಯಾಸಮುನಿಯೂ, ಕವಿಗಳಲ್ಲಿ ಉಶನಾಸ್ ಎಂಬ ಕವಿಯೂ ನಾನೇ ಆಗಿದ್ದೇನೆ. ಆಜ್ಞೆಯನ್ನು ಉಲ್ಲಂಘಿಸಿದವರಿಗೆ ದಂಡಿಸುವ ವಿಷಯದಲ್ಲಿ ದಂಡ ನಿಯಾಮಕನೂ, ಜಯಾಪೇಕ್ಷೆಯುಳ್ಳವರ ಜಯಸಾಧಕವಾದ ರಾಜನೀತಿಯೂ, ರಹಸ್ಯಗಳಿಗೆ ಬೇಕಾದ ಮೌನವೂ, ಜ್ಞಾನವಂತರೊಳಗೆ ಇರುವ ತತ್ವಜ್ಞಾನವೂ ನಾನೇ ಆಗಿರುತ್ತೇನೆ.

ಹೆಚ್ಚೇಕೆ, ಎಲ್ಲಾ ಅವಸ್ಥೆಗಳಲ್ಲಿರುವ ಎಲ್ಲಾ ಪ್ರಾಣಿಗಳಿಗೂ ಅವುಗಳ ಅವಸ್ಥೆಗೆ ಕಾರಣವಾದ ಆದಿಬೀಜವು ನಾನೇ ಆಗಿರುವೆನು. ನಾನು ಅಂತರಾತ್ಮನಾಗಿ ಇಲ್ಲದಿರುವ ಒಂದು ವಸ್ತುವೂ ಸ್ಥಾವರ ಜಂಗಮಗಳಾದ ಭೂತಗಳೊಳಗೆ ಇಲ್ಲ. ಅರ್ಜುನ! ದಿವ್ಯವಾಗಿಯೂ, ಕಲ್ಯಾಣ ತಮವಾಗಿಯೂ ಇರುವ ನನ್ನ ವಿಭೂತಿಗಳಿಗೆ ಕೊನೆಯೇ ಇಲ್ಲದೆ ಇರುವುದರಿಂದ ನನ್ನ ಆ ವಿಸ್ತಾರವಾದ ವಿಭೂತಿಗಳಲ್ಲಿ ಕೆಲವನ್ನು ಮಾತ್ರ ಪ್ರಧಾನವಾಗಿ ಇಟ್ಟುಕೊಂಡು ಅವುಗಳ ವಿಷಯವನ್ನು ನಿನಗೆ ಸಂಕ್ಷೇಪವಾಗಿ ತಿಳಿಸಿದ್ದೇನೆ. ಲೋಕದಲ್ಲಿ ಯಾವ ಯಾವ ವಸ್ತುಗಳಲ್ಲಿ ಏನೇನು ಮಹಿಮೆಗಳು ಉಂಟೋ, ಯಾವು ಯಾವುದು ಸಮೃದ್ಧಿಯಾಗಿ ಮತ್ತು ಶುಭಾಸ್ಪದವಾಗಿ ಇರುವುವೋ ಆ ಪದಾರ್ಥಗಳೆಲ್ಲವೂ ನನ್ನ ತೇಜಸ್ಸಿನ ಅಚಿಂತ್ಯವಾದ ಶಕ್ತಿಯಿಂದ ಉಂಟಾಗಿವೆಯೆಂದು ತಿಳಿದುಕೊಳ್ಳುವವನಾಗು.

**II ಜಗತ್ತಿನಲ್ಲಿರುವ ಸಮಸ್ತ ಚಿದಚಿದ್ವಸ್ತುಗಳೆಲ್ಲವೂ ಭಗವಂತನ ಅಧೀನದಲ್ಲಿವೆ ಎಂಬುದನ್ನು ತಿಳಿಸುತ್ತಾನೆ. (ಶ್ಲೋಕ 42)**

ಅರ್ಜುನಾ! ಇಷ್ಟು ದೂರ ಹೇಳಬೇಕಾದುದೇನು? ಬಹುವಿವರಣೆಗಳಿಂದ ಕೂಡಿದ ಈ ಜ್ಞಾನಗಳಿಂದ ನಿನಗೇನು ಪ್ರಯೋಜನ? ಒಂದೇ ಮಾತಿನಲ್ಲಿ ನಿನಗೆ ನಾನು ತಿಳಿಸುವುದು ಇಷ್ಟೆ. ಈ ಒಟ್ಟು ಜಗತ್ತೂ, ಅದರ ಕಟ್ಟಳೆಗಳೂ, ಮತ್ತು ಪ್ರವೃತ್ತಿಗಳೂ ಎಲ್ಲವೂ ನನ್ನ ಸಂಕಲ್ಪವನ್ನು ಸ್ವಲ್ಪವೂ ಮೀರಲಾರವು. ನನ್ನ ಮಹಿಮೆಯ ಸ್ವಲ್ಪ ಅಂಶದಿಂದ ಈ ಸಮಸ್ತ ಜಗತ್ತನ್ನೂ ನಾನು ವ್ಯಾಪಿಸಿ ಧರಿಸಿದ್ದೇನೆ ಎಂಬುದನ್ನು

ತಿಳಿದುಕೊಳ್ಳುವವನಾಗು.

ಹತ್ತನೆಯ ಅಧ್ಯಾಯದಲ್ಲಿ ಪ್ರತಿಪಾದಿಸಿರುವ ಅರ್ಥವನ್ನು ಶ್ರೀಯಾಮುನಾಚಾರ್ಯರು ಗೀತಾರ್ಥ ಸಂಗ್ರಹದ ಹದಿನಾಲ್ಕನೆಯ ಶ್ಲೋಕದಲ್ಲಿ ಹೀಗೆ ಸಂಗ್ರಹಿಸಿ ತಿಳಿಸಿದ್ದಾರೆ.

**ಸ್ವಕಲ್ಯಾಣ ಗುಣಾನಂತ್ಯ ಕೃತ್ಸ್ನಸ್ವಾಧೀನತಾಮತಿಃ**
**ಭಕ್ತ್ಯುತ್ಪತ್ತಿ ವಿವೃದ್ಧ್ಯರ್ಥಾ ವಿಸ್ತೀರ್ಣಾ ದಶಮೋದಿತಾ ॥**

ಪರಮಾತ್ಮನಲ್ಲಿ ಭಕ್ತಿಯು ಉತ್ಪನ್ನವಾಗುವುದಕ್ಕಾಗಿ ಮತ್ತು ಉತ್ಪನ್ನವಾದ ಭಕ್ತಿಯು ವೃದ್ಧಿಯಾಗುವುದಕ್ಕಾಗಿ ಪರಮಾತ್ಮನ ಅನಂತವಾದ ಕಲ್ಯಾಣಗುಣಗಳೂ, ಸಮಸ್ತವೂ ಅವನ ಸ್ವತ್ತಾಗಿ, ಅವನ ಶರೀರವಾಗಿ, ಅವನ ಅಧೀನವಾಗಿವೆ ಎಂಬ ವಿಷಯವೂ ಹತ್ತನೆಯ ಅಧ್ಯಾಯದಲ್ಲಿ ವಿಸ್ತಾರವಾಗಿ ತಿಳಿಸಲ್ಪಟ್ಟಿವೆ.

*****

# ಹನ್ನೊಂದನೆಯ ಅಧ್ಯಾಯ

# ವಿಶ್ವರೂಪ ದರ್ಶನ ಯೋಗ

ವಿಷಯ ಸೂಚಿಕೆ :

ಉಪೋದ್ಘಾತ :

I ಅರ್ಜುನನಿಗೆ ಪರಮಾತ್ಮನ ಅನುಗ್ರಹದಿಂದ ದಿವ್ಯಚಕ್ಷುಸ್ಸಿನ ಮೂಲಕ ವಿಶ್ವರೂಪದರ್ಶನ ಪ್ರಾಪ್ತಿ. (ಶ್ಲೋಕಗಳು 1 ರಿಂದ 51)

1. ವಿಶ್ವರೂಪದರ್ಶನಕ್ಕಾಗಿ ಅರ್ಜುನನ ಪ್ರಾರ್ಥನೆ (ಶ್ಲೋಕಗಳು 1 ರಿಂದ 4)
2. ವಿಶ್ವರೂಪ ದರ್ಶನ (ಶ್ಲೋಕಗಳು 5 ರಿಂದ 8)
3. ವಿಶ್ವರೂಪದ ವರ್ಣನೆ (ಶ್ಲೋಕಗಳು 9 ರಿಂದ 13)
4. ವಿಶ್ವರೂಪದರ್ಶನದಿಂದ ಭೀತನಾದ ಅರ್ಜುನನ ಪ್ರಾರ್ಥನೆ (ಶ್ಲೋಕಗಳು 14 ರಿಂದ 31)
5. ಭಗವಂತನ ಉಪದೇಶ (ಶ್ಲೋಕಗಳು 32 ರಿಂದ 34)
6. ಪರಮಾತ್ಮನ ಸೌಮ್ಯರೂಪ ದರ್ಶನಕ್ಕಾಗಿ ಅರ್ಜುನನ ಪ್ರಾರ್ಥನೆ (ಶ್ಲೋಕಗಳು 35 ರಿಂದ 46)
7. ಪರಮಾತ್ಮನು ತನ್ನ ಮೊದಲಿನ ರೂಪವನ್ನು ತೋರಿಸುವುದು (ಶ್ಲೋಕಗಳು 47 ರಿಂದ 51)

II ತನ್ನನ್ನು ಅರಿಯಲು ಮತ್ತು ಹೊಂದಲು ಭಕ್ತಿ ಒಂದೇ ಉಪಾಯ - ಎಂಬ ಪರಮಾತ್ಮನ ಸಾರವಾದ ಉಪದೇಶ (ಶ್ಲೋಕಗಳು 52 ರಿಂದ 55)

ಉಪೋದ್ಘಾತ :

ಹತ್ತನೆಯ ಅಧ್ಯಾಯದಲ್ಲಿ ಭಗವಂತನಲ್ಲಿ ಭಕ್ತಿಯು ಉತ್ಪನ್ನವಾಗುವುದಕ್ಕೂ ಮತ್ತು ಉತ್ಪನ್ನವಾದ ಭಕ್ತಿಯು ವೃದ್ಧಿಯಾಗುವುದಕ್ಕೂ ಭಗವಂತನು ತನ್ನ ಅನಂತ ಕಲ್ಯಾಣ ಗುಣಗಳ ವೈಭವವನ್ನೂ ತಾನು ಸಮಸ್ತ ವಸ್ತುಗಳಲ್ಲಿ ಅಂತರಾತ್ಮನಾಗಿದ್ದುಕೊಂಡು ಅವುಗಳನ್ನೆಲ್ಲಾ ನಿಯಮಿಸುತ್ತಿರುವ ತನ್ನ ಐಶ್ವರ್ಯ

ವಿಭೂತಿಗಳನ್ನೆಲ್ಲಾ ತಿಳಿಸುತ್ತಾನೆ. ಅದನ್ನೆಲ್ಲಾ ಕೇಳಿದ ಮೇಲೆ ಅರ್ಜುನನಿಗೆ ಪರಮಾತ್ಮನ ವಿಶ್ವರೂಪವನ್ನು ಸಾಕ್ಷಾತ್ತರಿಸಬೇಕೆಂಬ ಆಸೆಯು ಉಂಟಾಗಲು ಅವನು ಪರಮಾತ್ಮನನ್ನು ಅವನ ವಿಶ್ವರೂಪವನ್ನು ತನಗೆ ತೋರಿಸಬೇಕೆಂದು ಪ್ರಾರ್ಥಿಸುತ್ತಾನೆ. ಪರಮಾತ್ಮನು ಅವನಿಗೆ ತನ್ನ ವಿಶ್ವರೂಪವನ್ನು ತೋರಿಸಿ ತನ್ನನ್ನು ಪಡೆಯಲು ಭಕ್ತಿಯೊಂದೇ ಉಪಾಯವೆಂಬುದನ್ನು ಈ 11ನೆಯ ಅಧ್ಯಾಯದಲ್ಲಿ ತಿಳಿಸುತ್ತಾನೆ. ಆದ್ದರಿಂದ ಇದಕ್ಕೆ ವಿಶ್ವರೂಪದರ್ಶನಯೋಗ ಎಂದು ಹೆಸರು ಬಂದಿದೆ.

## I ಅರ್ಜುನನಿಗೆ ಪರಮಾತ್ಮನ ಅನುಗ್ರಹದಿಂದ ದಿವ್ಯಚಕ್ಷುಸ್ಸಿನ ಮೂಲಕ ವಿಶ್ವರೂಪದರ್ಶನ ಪ್ರಾಪ್ತಿ. (ಶ್ಲೋಕಗಳು 1 ರಿಂದ 51)

### 1. ವಿಶ್ವರೂಪದರ್ಶನಕ್ಕಾಗಿ ಅರ್ಜುನನ ಪ್ರಾರ್ಥನೆ (ಶ್ಲೋಕಗಳು 1 ರಿಂದ 4)

ಶ್ರೀಕೃಷ್ಣನಿಂದ ಅವನ ಅಸಾಧಾರಣ ಮಹಿಮೆಯನ್ನೂ ವೈಭವವನ್ನೂ ಕೇಳಿದ ಅರ್ಜುನನಿಗೆ ಒಂದು ರೀತಿಯಾದ ಭಯವೂ, ಆಶ್ಚರ್ಯವೂ ಉಂಟಾಯಿತು. ಅವನಿಗೆ ಇದನ್ನೆಲ್ಲಾ ಕೇಳಿದ ಮಾತ್ರದಿಂದಲೇ ತೃಪ್ತಿಯು ಉಂಟಾಗದೆ ಭಗವಂತನನ್ನು ಸಾಕ್ಷತ್ತರಿಸಬೇಕೆಂಬ ಆಸೆಯೂ ಮತ್ತು ಭಗವಂತನ ವಿಶ್ವರೂಪವನ್ನು ದರ್ಶನ ಮಾಡುವ ಆಕಾಂಕ್ಷೆಯೂ ಉಂಟಾಯಿತು. ಆಗ ಅವನು ಭಗವಂತನಾದ ಶ್ರೀಕೃಷ್ಣನನ್ನು ಮುಂದೆ ಹೇಳುವ ರೀತಿಯಲ್ಲಿ ಪ್ರಾರ್ಥಿಸುತ್ತಾನೆ.

''ಹೇ ಕೃಷ್ಣ! ದೇಹಾತ್ಮಭ್ರಮೆಯಿಂದ ಕೂಡಿದ ನನ್ನನ್ನು ನೀನು ಅನುಗ್ರಹಿಸಿ ದಯೆಯಿಂದಲೂ, ನನ್ನ ಹಿತಕಾಮನೆಯಿಂದಲೂ ಪರಮರಹಸ್ಯವಾದ ಆತ್ಮಸ್ವರೂಪ ಜ್ಞಾನವನ್ನು ಉಪದೇಶ ಮಾಡಿದುದರಿಂದ ನನಗೆ ಈಗ ಆತ್ಮಸ್ವರೂಪದ ವಿಷಯದಲ್ಲಿದ್ದ ಅಜ್ಞಾನವು ತೊಲಗಿತು. ಸಮಸ್ತ ಭೂತಗಳಿಗೂ ಉಂಟಾಗತಕ್ಕ ಉತ್ಪತ್ತಿಲಯಗಳ ರೀತಿಯೂ, ಎಂದೆಂದೂ ಕುಂದದ ಅಪರಿಮಿತವಾದ ನಿನ್ನ ಮಹಿಮೆಯೂ ಈಗ ನಿನ್ನಿಂದ ನನಗೆ ವಿವರವಾಗಿ ತಿಳಿಯಿತು. ನೀನು ನಿನ್ನ ವಿಭೂತಿಗಳನ್ನೂ, ಐಶ್ವರ್ಯಗಳನ್ನೂ ಮತ್ತು ಕಲ್ಯಾಣಗುಣಗಳೆಲ್ಲವನ್ನೂ ವರ್ಣಿಸಿರುವುದೆಲ್ಲವೂ ಸತ್ಯವು. ಆದಾಗ್ಯೂ ನಿನ್ನ ವಿಭೂತಿ, ಐಶ್ವರ್ಯಗಳಿಂದ ಕೂಡಿದ ಅಸಾಧಾರಣವಾಗಿರುವ ನಿನ್ನ ಅದ್ವಿತೀಯ ರೂಪವನ್ನು ನಾನು ಕಣ್ಣಾರೆ ನೋಡಬೇಕೆಂದು ಬಯಸುತ್ತೇನೆ. ಪ್ರಭುವೇ!, ಸರ್ವ ಕಲ್ಯಾಣಗುಣಗಳಿಂದ ಕೂಡಿದ

ಸರ್ವೇಶ್ವರನೇ! ನಿನ್ನ ದಿವ್ಯರೂಪವನ್ನು ನೋಡಲು ನಾನು ಶಕ್ಯನು ಎಂದು ನೀನು ತಿಳಿಯುವುದಾದರೆ. ಆ ನಿನ್ನ ನಿಜಸ್ವರೂಪವನ್ನು ನಾನು ಸಂಪೂರ್ಣವಾಗಿ ಕಂಡು ಅನುಭವಿಸುವ ಹಾಗೆ ಕೃಪೆಮಾಡಿ ದಯಪಾಲಿಸಬೇಕು."

## 2. ವಿಶ್ವರೂಪ ದರ್ಶನ (ಶ್ಲೋಕಗಳು 5 ರಿಂದ 8)

ಅರ್ಜುನನ ಈ ಪ್ರಾರ್ಥನೆಯನ್ನು ಕೇಳಿ ಶ್ರೀಕೃಷ್ಣನು ಅವನಿಗೆ ಈ ರೀತಿಯಾಗಿ ತಿಳಿಸುತ್ತಾನೆ - "ನನ್ನ ಅಸಾಧಾರಣ ರೂಪವನ್ನು ನಿನಗೆ ನಾನು ತೋರಿಸುತ್ತೇನೆ. ಆ ರೂಪವು ನೂರು ಸಾವಿರ ವಿಧಿಗಳಿಂದ ನಾನಾಪ್ರಕಾರಗಳಾಗಿ, ಅಪ್ರಾಕೃತಗಳಾಗಿ, ನಾನಾ ವರ್ಣಗಳಿಂದಲೂ, ವಿವಿಧ ಆಕೃತಿಗಳಿಂದಲೂ ತೋರುತ್ತದೆ. ನನ್ನ ರೂಪವೊಂದರಲ್ಲೇ ದ್ವಾದಶಾದಿತ್ಯರೂ, ಅಷ್ಟವಸುಗಳೂ, ಏಕಾದಶರುದ್ರರೂ, ಇಬ್ಬರು ಅಶ್ವಿನೀ ದೇವತೆಗಳೂ, ಸಪ್ತಮರುತ್ತುಗಳೂ ಮುಂತಾಗಿ ಇವರೆಲ್ಲರುಗಳನ್ನೂ ಮತ್ತು ಹಿಂದೆ ನೀನು ಎಂದೂ ನೋಡದ ಆಶ್ಚರ್ಯಗಳನ್ನೂ ನೋಡುವೆ. ಎಲೈ ಗುಡಾಕೇಶನೇ! ಆ ನನ್ನ ಶರೀರದ ಒಂದೇ ಒಂದು ಭಾಗದಲ್ಲಿ ಚರಾಚರಗಳಿಂದ ಕೂಡಿದ ಸಮಸ್ತಲೋಕಗಳೂ ಅಡಗಿರುವುದನ್ನು ನೋಡು ಮತ್ತು ನೀನು ನೋಡಬೇಕೆಂದು ಇಚ್ಛಿಸುವ ಬೇರೆ ಯಾವ ವಸ್ತುವನ್ನಾದರೂ ಅದರಲ್ಲಿ ನೀನು ನೋಡಬಹುದು. ಆದರೆ ಎಲೈ ಅರ್ಜುನನೇ! ನೀನು ಈ ಪ್ರಾಕೃತವಾದ ಕಣ್ಣುಗಳಿಂದ ವಿಸಜಾತೀಯವೂ ಅಪ್ರಮೇಯವೂ ಆದ ನನ್ನ ಆ ರೂಪವನ್ನು ನೋಡಲು ಶಕ್ತನಲ್ಲ, ಅದಕ್ಕೋಸ್ಕರ ನಾನು ನಿನಗೆ ಅಪ್ರಾಕೃತವಾದ ದಿವ್ಯಚಕ್ಷುಸ್ಸನ್ನು ಕೊಡುವೆನು. ಅದರಿಂದ ನೀನು ನನ್ನ ಈ ಅಸಾಧಾರಣವಾದ, ಜ್ಞಾನಾನಂದಮಯವಾದ ಈಶ್ವರ ಸ್ವರೂಪವನ್ನೂ ನನ್ನ ವಿಭೂತಿಗಳನ್ನೂ ನೋಡಬಹುದು."

## 3. ವಿಶ್ವರೂಪದ ವರ್ಣನೆ (ಶ್ಲೋಕಗಳು 9 ರಿಂದ 13)

ಸಂಜಯನು ಧೃತರಾಷ್ಟ್ರನಿಗೆ ಹೇಳುತ್ತಾನೆ - "ಮಹಾಯೋಗೇಶ್ವರನಾದ ಪರಬ್ರಹ್ಮನಾದ ಶ್ರೀಕೃಷ್ಣನು ಹೀಗೆಂದು ಹೇಳಿ ತನ್ನ ಅತ್ಯುತ್ತಮವಾದ, ಐಶ್ವರ್ಯಯುಕ್ತವಾದ, ಅಸಾಧಾರಣವಾದ ರೂಪವನ್ನು ಅರ್ಜುನನಿಗೆ ಕೃಪೆಯಿಂದ ತೋರಿಸಿದನು. ನಿರತಿಶಯವಾದ, ಪ್ರಕಾಶದಿಂದ ಕೂಡಿದ, ಅದ್ಭುತವಾದ ಆ ವಿಶ್ವರೂಪದಲ್ಲಿ ಅರ್ಜುನನು ಕಂಡದ್ದೇನು? ಪರಮೇಶ್ವರನ ಸ್ವಭಾವಕ್ಕೆ ಅನುರೂಪವಾದ ಆ ದಿವ್ಯ ರೂಪವು ಅನೇಕ ಮುಖಗಳು ಮತ್ತು ಕಣ್ಣುಗಳಿಂದ

ಕೂಡಿದ್ದೂ, ಅನೇಕ ಅದ್ಭುತಗಳನ್ನು ತೋರುವುದೂ, ಅನೇಕ ದಿವ್ಯಾಭರಣಗಳಿಂದ ಅಲಂಕೃತವಾದದ್ದೂ, ಮೇಲಕ್ಕೆ ಎತ್ತಿ ಹಿಡಿದಿರುವ ದಿವ್ಯವಾದ ಅನೇಕ ಶಸ್ತ್ರಾಸ್ತ್ರಗಳಿಂದ ಕೂಡಿದ್ದೂ, ದಿವ್ಯಮಾಲೆ ಮತ್ತು ವಸ್ತ್ರಗಳನ್ನು ಧರಿಸಿದ್ದೂ, ದಿವ್ಯಗಂಧವನ್ನು ಲೇಪಿಸಿದ್ದೂ ಆಗಿ ಅತ್ಯಾಶ್ಚರ್ಯಕರವಾದ ತೋರಿಕೆಯಾಗಿದ್ದಿತು. ದಿವ್ಯತೇಜಸ್ಸು ಕೊನೆ ಮೊದಲಿಲ್ಲದ ಅನಂತವಾದ ರೂಪ ಮತ್ತು ಸಮಸ್ತ ಕಡೆಗಳಲ್ಲೂ ನಾನಾತರದ ಮುಖಗಳು ಇವುಗಳಿಂದ ಕೂಡಿದ ಅದ್ಭುತಾಕೃತಿಯು ಅರ್ಜುನನಿಗೆ ಕಾಣಿಸಿತು. ಆಕಾಶದಲ್ಲಿ ಏಕಕಾಲದಲ್ಲಿ ಸಾವಿರ ಸೂರ್ಯರು ಉದಯಿಸಿದ್ದೇಆದರೆ ಅವರಿಂದ ಹೊರಹೊಮ್ಮುವ ತೇಜಸ್ಸು ಹೇಗಿರುವುದೋ ಅದನ್ನು ಮಹಾತ್ಮನಾದ ಭಗವಂತನ ವಿಶ್ವರೂಪದ ದಿವ್ಯ ತೇಜಸ್ಸಿಗೆ ಹೋಲಿಸಬಹುದು. ಆಗ ಅರ್ಜುನನು ಭಗವಂತನ ದಯೆಯಿಂದ ಪಡೆದುಕೊಂಡ ದಿವ್ಯಚಕ್ಷುಸ್ಸಿನಿಂದ ದೇವದೇವನಾದ ಆ ಭಗವಂತನ ದಿವ್ಯ ಶರೀರದ ದಿವ್ಯರೂಪದ ಏಕದೇಶದಲ್ಲಿ ಅನೇಕ ವಿಭಾಗಗಳಿಂದ ಕೂಡಿದ ಅಖಂಡ ಪ್ರಪಂಚವನ್ನು ನೋಡಿದನು. ಅಂದರೆ ಚತುರ್ಮುಖ ಬ್ರಹ್ಮನು ಮೊದಲ್ಗೊಂಡು ಅನೇಕ ವಿಚಿತ್ರವಾದ ದೇವತೆಗಳು, ಮನುಷ್ಯರು, ತಿರ್ಯಕ್ಕುಗಳು ಮುಂತಾದ ಭೋಗಪಡುವವರ ಗುಂಪನ್ನೂ ಭೂಮಿ, ಆಕಾಶ, ಸ್ವರ್ಗ, ನರಕ, ಅತಲ, ವಿತಲ, ಸುತಲ ಎಂಬ ಭೋಗಸ್ಥಾನಗಳನ್ನು ಒಳಗೊಂಡ ಸಮಸ್ತ ಜಗತ್ತನ್ನೂ ದರ್ಶನ ಮಾಡಿದನು.

## 4. ವಿಶ್ವರೂಪದರ್ಶನದಿಂದ ಭೀತನಾದ ಅರ್ಜುನನ ಪ್ರಾರ್ಥನೆ (ಶ್ಲೋಕಗಳು 14 ರಿಂದ 31)

ಅನಂತರ ಸಮಸ್ತ ಜಗತ್ತನ್ನೂ ತನ್ನ ಶರೀರದ ಏಕದೇಶ ಭಾಗದಲ್ಲಿ ಧರಿಸಿದವನಾಗಿ, ಅತ್ಯಂತ ಆಶ್ಚರ್ಯ ಪೂರ್ಣನಾಗಿ, ಅಸಂಖ್ಯಾತವಾದ ಜ್ಞಾನ ಮುಂತಾದ ಕಲ್ಯಾಣಗುಣಗಳಿಂದ ಕೂಡಿದವನಾಗಿ ಸರ್ವರಿಗೂ ನಿಯಾಮಕನಾದ ಭಗವಂತನನ್ನು ಅರ್ಜುನನು ನೋಡಿ ವಿಸ್ಮಯಾವಿಷ್ಟನಾಗಿ, ರೋಮಾಂಚನವನ್ನು ಹೊಂದಿ ಮಹಾಮಹಿಮನಾದ ಭಗವಂತನಿಗೆ ತಲೆಬಗ್ಗಿ ನಮಸ್ಕರಿಸಿ, ಭಕ್ತಿಯಿಂದ ಬದ್ಧಾಂಜಲಿಯಾಗಿ ನಿಂತು ಹೀಗೆ ಹೇಳಿದನು:- "ಎಲೈ ಸ್ವಾಮಿಯೆ! ನಿನ್ನ ಶರೀರದಲ್ಲಿ ಸಮಸ್ತದೇವತೆಗಳನ್ನೂ, ವಿಭಿನ್ನವಾಗಿರುವ ಪ್ರಾಣಿಗಳ ಸಮಸ್ತ ಸಮುದಾಯವನ್ನೂ ಅಂಡಾಧಿಪತಿಯಾದ ಚತುರ್ಮುಖ ಬ್ರಹ್ಮನನ್ನೂ, ಕಮಲಾಸನಸ್ಥನಾದ ಈಶ್ವರನನ್ನೂ, ದೇವ ಋಷಿಗಳೇ ಮುಂತಾದ ಸಕಲ ಋಷಿಗಳನ್ನೂ, ವಾಸುಕೀ ತಕ್ಷಕಾದಿ

ದಿವ್ಯನಾಗಗಳನ್ನೂ ನೋಡುತ್ತಿರುವೆನು. ಪ್ರಪಂಚಕ್ಕೆಲ್ಲಾ ಒಡೆಯನೇ! ವಿಶ್ವರೂಪನೇ! ಅನೇಕ ಬಾಹುಗಳು, ಉದರಗಳು, ಕಣ್ಣುಬಾಯಿಗಳು ಇವುಗಳಿಂದ ಕೂಡಿದ ಅನಂತ ರೂಪನಾದ ನಿನ್ನನ್ನು ಎಲ್ಲೆಲ್ಲಿಯೂ ನೋಡುತ್ತಿರುವುದರಿಂದ ನಿನ್ನ ರೂಪದ ಅಂತ್ಯವನ್ನಾಗಲೀ, ಮಧ್ಯವನ್ನಾಗಲೀ, ಆದಿಯನ್ನಾಗಲೀ ನಾನು ತಿಳಿಯಲು ಅಶಕ್ಯನಾಗಿದ್ದೇನೆ. ಕಿರೀಟ, ಚಕ್ರಾಯುಧ, ಗದೆ ಇವುಗಳನ್ನು ಧರಿಸಿರುವವನಾಗಿ, ಎಲ್ಲಾ ಕಡೆಗಳನ್ನೂ ಬೆಳಗುವ ತೇಜೋರಾಶಿಯಾಗಿ, ಕಣ್ಣಿನಿಂದ ನೋಡುವುದಕ್ಕೂ ಸಾಧ್ಯವಲ್ಲದ ಜ್ವಲಿಸುತ್ತಿರುವ ಅಗ್ನಿ ಸೂರ್ಯಾದಿಗಳಿಗೆ ಸಮಾನವಾದ ತೇಜಸ್ಸಿನಿಂದ ಕೂಡಿರುವ ನಿನ್ನ ಅಪ್ರಮೇಯ ಸ್ವರೂಪವನ್ನು ನೋಡುತ್ತಿದ್ದೇನೆ''

''ಉಪನಿಷತ್ತುಗಳಲ್ಲಿ ತಿಳಿಯಬೇಕಾದುದಾಗಿ ಹೇಳಲ್ಪಟ್ಟ ಪರಮ ಅಕ್ಷರವೂ ನೀನೇ! ಈ ಜಗತ್ತಿಗೆ ಮುಖ್ಯವಾದ ಆಧಾರನೂ ನೀನೇ! ನಾಶವಿಲ್ಲದವನೂ, ಶಾಶ್ವತವಾದ ಧರ್ಮವನ್ನು ರಕ್ಷಿಸುವವನೂ ನೀನೇ! ನೀನೇ ಸನಾತನ ಪುರುಷನೆಂದು ನನ್ನ ಅಭಿಪ್ರಾಯವು. ಆದಿಮಧ್ಯಾಂತರಹಿತನೂ, ಅನಂತ ಶಕ್ತಿ ಶಾಲಿಯೂ, ಅನಂತ ಬಾಹುಗಳುಳ್ಳವನೂ, ಆಶ್ರಯಿಸಿದವರನ್ನು ಕಾಪಾಡಲು ಚಂದ್ರನ ಹಾಗೆ ಪ್ರಸನ್ನತೆ ಮತ್ತು ಎದುರು ಬಿದ್ದವರನ್ನು ದಹಿಸಲು ಸೂರ್ಯನ ಹಾಗೆ ಪ್ರಖರತೆಗಳನ್ನುಳ್ಳ ನೇತ್ರಗಳುಳ್ಳವನೂ, ಪ್ರಜ್ವಲಿಸುವ ಅಗ್ನಿಯಂತೆ ಮುಖವುಳ್ಳವನೂ ಮತ್ತು ತನ್ನ ತೇಜಸ್ಸಿನಿಂದ ಈ ವಿಶ್ವವನ್ನೇ ತಪಿಸುವಂತಿರುವವನೂ ಆದ ನಿನ್ನನ್ನು ನಾನು ಸಾಕ್ಷಾತ್ಕರಿಸುತ್ತಿದ್ದೇನೆ. ಎಲೈ ಮಹಾತ್ಮನೇ! ಭೂಮಿಯೂ, ಆಕಾಶವೂ, ಅವುಗಳ ನಡುವೆ ಇರುವ ಈ ಅಂತರಾಳವೂ, ಸಮಸ್ತ ದಿಕ್ಕುಗಳೂ ನಿನ್ನೊಬ್ಬನಿಂದಲೇ ವ್ಯಾಪಿಸಲ್ಪಟ್ಟಿವೆ. ಈ ಅದ್ಭುತವೂ ಉಗ್ರವೂ ಆದ ರೂಪವನ್ನು ನೋಡಿ ಮೂರುಲೋಕದವರೂ ಅತ್ಯಂತ ಭಯಗ್ರಸ್ತರಾಗಿದ್ದಾರೆ. ಈ ಶ್ರೇಷ್ಠರಾದ ದೇವತೆಗಳ ಸಮೂಹವು ನಿನ್ನಲ್ಲಿಯೇ ಸೇರುತ್ತದೆ. ಅವರಲ್ಲಿ ಕೆಲವರು ನಿನ್ನ ಭಯಂಕರವಾದ ರೂಪವನ್ನು ನೋಡಿ ಭಯಪಟ್ಟವರಾಗಿ ಕೈಗಳನ್ನು ಮುಗಿದು ಸ್ತೋತ್ರಮಾಡುತ್ತಿದ್ದಾರೆ. ತತ್ವಜ್ಞರಾದ ಮಹರ್ಷಿಗಳ ಸಮೂಹವೂ, ಸಿದ್ಧರ ಸಮೂಹವೂ ''ಲೋಕಕ್ಕೆ ಕ್ಷೇಮವಾಗಲಿ'' ಎಂದು ಹೇಳಿಕೊಂಡು ನಿನಗೆ ಅನುರೂಪವಾದ ಸ್ತುತಿವಾಕ್ಯಗಳಿಂದ ನಿನ್ನನ್ನು ಸ್ತುತಿಸುತ್ತಿವೆ. ರುದ್ರರೂ, ಆದಿತ್ಯರೂ, ಅಷ್ಟವಸುಗಳೂ, ಸಾಧ್ಯರೂ, ವಿಶ್ವದೇವತೆಗಳೂ, ಅಶ್ವಿನೀ ದೇವತೆಗಳೂ, ಮರುತ್ತುಗಳೂ, ಪಿತೃಗಳೂ, ಗಂಧರ್ವರ ಸಮೂಹವೂ, ಯಕ್ಷರೂ, ಅಸುರರ ಮತ್ತು ಸಿದ್ಧರ ಸಮೂಹವೂ, ಎಲ್ಲರೂ ಪರಮ

ಆಶ್ಚರ್ಯದಿಂದ ಬೆರಗಾಗಿ ನಿನ್ನನ್ನು ನೋಡುತ್ತಿದ್ದಾರೆ. ಎಲೈ ಮಹಾಬಾಹುವೇ! ಅನೇಕ ಮುಖಗಳು, ಕಣ್ಣುಗಳು, ಭುಜಗಳು, ತೊಡೆಗಳು, ಪಾದಗಳು, ಉದರಗಳು ಇವುಗಳನ್ನುಳ್ಳ ಮತ್ತು ಕೋರೆಹಲ್ಲುಗಳಿಂದ ಕೂಡಿರುವ ಭಯಂಕರವಾದ ನಿನ್ನ ಮಹಾದ್ಭುತವಾದ ರೂಪವನ್ನು ನೋಡಿ ಈ ಲೋಕದಲ್ಲಿ ಇರುವವರೆಲ್ಲರೂ, ನಾನೂ ಭೀತರಾಗಿದ್ದೇವೆ. ಎಲ್ಲವನ್ನೂ ವ್ಯಾಪಿಸಿರುವ ವಿಷ್ಣುವೇ! ಆಕಾಶವನ್ನು ಮುಟ್ಟುತ್ತಿರುವ, ಮಹಾಪ್ರಕಾಶದಿಂದ ಹೊಳೆಯುತ್ತಿರುವ, ಅನೇಕವರ್ಣಗಳಿಂದ ಕೂಡಿರುವ, ತೆರೆದಿರುವ ಬಾಯಿಗಳಿಂದಲೂ, ಪ್ರಕಾಶಮಾನವಾದ ವಿಶಾಲನೇತ್ರಗಳಿಂದಲೂ ಕೂಡಿರುವ ಈ ನಿನ್ನ ರೂಪವನ್ನು ಕಂಡು ಅತ್ಯಂತ ಭಯಗೊಂಡ ಮನಸ್ಸುಳ್ಳವನಾಗಿರುವ ನನಗೆ ಧೈರ್ಯವೂ, ಮನಃಶಾಂತಿಯೂ ಇಲ್ಲದಂತೆ ಆಗಿದೆ.

"ಲೋಕಕ್ಕೆಲ್ಲಾ ವಾಸಸ್ಥಾನವಾಗಿ ಬ್ರಹ್ಮಾದಿದೇವತೆಗಳಿಗೆಲ್ಲಾ ಸ್ವಾಮಿಯಾಗಿರುವ ಭಗವಂತನೇ! ಪ್ರಳಯ ಕಾಲದಲ್ಲಿ ಅಗ್ನಿಯಂತೆ ಸಕಲವನ್ನೂ ನಾಶಮಾಡುವ ಕೋರೆದಾಡೆಗಳಿಂದ ಅತಿ ಘೋರವಾಗಿರುವ ನಿನ್ನ ಮುಖಗಳನ್ನು ನೋಡಿ ನನಗೆ ದಿಕ್ಕೇ ತೋಚದಂತೆ ಆಗಿದೆ. ನನಗೆ ಸ್ವಲ್ಪವೂ ಮನಃ ಸ್ವಾಸ್ಥ್ಯವಿಲ್ಲ. ನೀನು ನನ್ನಲ್ಲಿ ಕೃಪೆ ಮಾಡಿ ನನ್ನ ಮನಸ್ಸಿನಲ್ಲಿ ಶಾಂತಿಯು ಉಂಟಾಗುವ ಹಾಗೆ ಕಟಾಕ್ಷಿಸಿ ಪ್ರಸನ್ನನಾಗು. ತಮ್ಮ ಕಡೆಯ ಎಲ್ಲಾ ರಾಜರ ಸಮೂಹದೊಂದಿಗೆ ಈ ಧೃತರಾಷ್ಟ್ರನ ಪುತ್ರರೂ, ಭೀಷ್ಮ ದ್ರೋಣ ಮತ್ತು ಕರ್ಣ ಇವರುಗಳೂ, ಹಾಗೆಯೇ ನಮ್ಮ ಕಡೆಯ ಪ್ರಧಾನ ಯೋಧರೂ, ಎಲ್ಲರೂ ಸಹ ಕೋರೆಹಲ್ಲುಗಳಿಂದ ವಿಕಾರವಾಗಿ ಇರುವ ಮತ್ತು ಭಯವನ್ನು ಉಂಟುಮಾಡುವ ನಿನ್ನ ಬಾಯೊಳಗೆ ವಿನಾಶಹೊಂದಲು ಆತುರದಿಂದ ನುಗ್ಗುತ್ತಿದ್ದಾರೆ. ಅವರಲ್ಲಿ ಕೆಲವರು ಪುಡಿಪುಡಿಯಾದ ಶಿರಸ್ಸುಗಳೊಡನೆ ನಿನ್ನ ಹಲ್ಲುಗಳ ಸಂದಿಗಳಲ್ಲಿ ಸಿಕ್ಕಿಕೊಂಡಿರುವಂತೆ ಕಾಣುತ್ತಿದೆ. ಹೇಗೆ ನದಿಗಳ ಅಧಿಕವಾದ ನೀರಿನ ಪ್ರವಾಹಗಳು ಒಂದಾಗಿ ಸಮುದ್ರದ ಕಡೆ ವೇಗವಾಗಿ ಹರಿಯುವುವೋ ಹಾಗೆಯೇ ಈ ರಾಜರ ಸಮೂಹವೆಲ್ಲವೂ ಉರಿಯುತ್ತಾ ಇರುವ ನಿನ್ನ ಮುಖದಲ್ಲಿ ತಾವಾಗಿಯೇ ಪ್ರವೇಶಿಸುತ್ತಿವೆ. ಹೇಗೆ ಪತಂಗದ ಹುಳುಗಳು ನಾಶವನ್ನು ಹೊಂದುವುದಕ್ಕೋಸ್ಕರ ಬಹಳ ಆತುರದಿಂದ ಹೋಗಿ ಉರಿಯುವ ಬೆಂಕಿಯಲ್ಲಿ ಬೀಳುತ್ತವೆಯೋ ಹಾಗೆಯೇ ಈ ರಾಜರ ಸಮೂಹಗಳು ಕೂಡ ತಮ್ಮ ನಾಶಕ್ಕಾಗಿ ಬಹಳ ವೇಗದಿಂದ ನಿನ್ನ ಭಯಂಕರವಾದ ಬಾಯಿಯೊಳಗೆ ಬಂದು ಬೀಳುತ್ತಿವೆ. ಎಲೈ ಪ್ರಭುವೇ! ಸಮಗ್ರವಾದ ಈ ರಾಜರ ಸಮೂಹವನ್ನು ನೀನು ನಿನ್ನ ಜ್ವಲಿಸುತ್ತಿರುವ

ಬಾಯಿಂದ ನುಂಗುತ್ತಾ ಕೋಪಾವೇಗದಿಂದ ಅವರ ರಕ್ತದಿಂದ ಸಿಕ್ತವಾದ ನಿನ್ನ ತುಟಿಗಳನ್ನು ಮತ್ತೆ ಮತ್ತೆ ಸವರುತ್ತಿದ್ದೀಯೆ. ಎಲೈ ವಿಷ್ಣುವೇ! ಅತಿ ಘೋರವಾದ ನಿನ್ನ ಕಿರಣಗಳು ತನ್ನ ಪ್ರಕಾಶದಿಂದ ಲೋಕಗಳನ್ನೆಲ್ಲಾ ವ್ಯಾಪಿಸಿ ಅವೆಲ್ಲವನ್ನೂ ಸುಡುತ್ತಿವೆ. ದೇವತೆಗಳಲ್ಲೆಲ್ಲಾ ಶ್ರೇಷ್ಠನಾದವನೇ! ಘೋರರೂಪವುಳ್ಳ ನೀನು ಯಾರು? ಆದಿ ಪುರುಷನಾದ ನಿನ್ನ ತತ್ವವನ್ನು ಅಂದರೆ ಈಗ ನೀನು ಈ ರೂಪದಿಂದ ಏನನ್ನು ಮಾಡಲು ತೊಡಗಿರುವೆ ಎಂಬುದನ್ನು ನಾನು ತಿಳಿದುಕೊಳ್ಳಬೇಕೆಂದು ಬಯಸುತ್ತೇನೆ. ನೀನು ನನಗೆ ದಯಿಯಿಟ್ಟು ಎಲ್ಲವನ್ನೂ ತಿಳಿಸಿ ಪ್ರಸನ್ನನಾಗು. ನಿನಗೆ ನನ್ನ ಅನೇಕ ನಮಸ್ಕಾರಗಳು.''

## 5. ಭಗವಂತನ ಉಪದೇಶ (ಶ್ಲೋಕಗಳು 32 ರಿಂದ 34)

ಅರ್ಜುನನು ಶ್ರೀಕೃಷ್ಣನನ್ನು ಅವನು ಈ ಭಯಂಕರವಾದ ರೂಪವನ್ನು ಧರಿಸಿ ಎಲ್ಲವನ್ನೂ ನಾಶಮಾಡುವ ಕಾರಣವನ್ನು ತಿಳಿಸಬೇಕೆಂದು ಪ್ರಾರ್ಥಿಸಲು ಶ್ರೀಕೃಷ್ಣನು ಅವನಿಗೆ ಮುಂದೆ ತಿಳಿಸುತ್ತಾನೆ. ''ಎಲೈ ಅರ್ಜುನನೇ! ಈ ಲೋಕವನ್ನೆಲ್ಲಾ ನಾಶಮಾಡುವುದಕ್ಕಾಗಿ ವೃದ್ಧಿಸುತ್ತಿರುವ ಕಾಲನಾದ ನಾನು ಲೋಕಗಳನ್ನೆಲ್ಲಾ ಸಂಹರಿಸಲು ಈಗ ಉದ್ಯುಕ್ತನಾಗಿದ್ದೇನೆ. ನೀನು ಈಗ ಇಲ್ಲದೇ ಇದ್ದರೂ ನಿಮ್ಮ ಶತ್ರು ಸೈನ್ಯದಲ್ಲಿ ಬಂದು ನಿಂತಿರುವ. ಈ ಯೋಧರುಗಳಾರೂ ಬದುಕಿ ಉಳಿಯಲಾರರು. ಆದುದರಿಂದ ಎಲೈ ಸವ್ಯಸಾಚಿಯೇ! ಅರ್ಜುನನೇ! ನೀನು ಎದ್ದೇಳು. ಯುದ್ಧಮಾಡು. ಶತ್ರುಗಳನ್ನು ಜಯಿಸಿ, ಯಶಸ್ಸನ್ನು ಪಡೆದು ಐಶ್ವರ್ಯ ಸಮೃದ್ಧವಾದ ರಾಜ್ಯವನ್ನು ಅನುಭವಿಸು. ಅಪರಾಧ ಮಾಡಿರುವ ಇವರೆಲ್ಲರೂ ಮೊದಲೇ ನನ್ನಿಂದ ಹತರಾಗಿದ್ದಾರೆ. ನೀನು ನೆಪಮಾತ್ರಕ್ಕೆ ಯುದ್ಧಕ್ಕೆ ನಿಲ್ಲುವವನಾಗು, ಅಷ್ಟೆ''

ಅಲ್ಲದೆ ನನ್ನಿಂದ ಮೊದಲೇ ಹತರಾಗಿರುವ ದ್ರೋಣ, ಭೀಷ್ಮ, ಜಯದ್ರಥ, ಕರ್ಣ ಮುಂತಾದ ವೀರರನ್ನು ನೀನು ಕೊಲ್ಲು, ಗಾಬರಿಹೊಂದಬೇಡ. ಯುದ್ಧಮಾಡು - ನೀನು ಯುದ್ಧದಲ್ಲಿ ಶತ್ರುಗಳನ್ನು ಜಯಿಸುತ್ತೀಯೆ (ಇಲ್ಲಿ ''ನಿಮಿತ್ತ ಮಾತ್ರಂ ಭವಸವ್ಯಸಾಚಿನ್'' ಎಂದು ಶ್ರೀಕೃಷ್ಣನು ಅರ್ಜುನನಿಗೆ ಒಂದು ಮಹತ್ತರವಾದ ಉಪದೇಶ ನೀಡಿದ್ದಾನೆ. ಈ ಘೋರವಾದ ಯುದ್ಧಕ್ಕೆ ಅರ್ಜುನನು ಕೇವಲ ನಿಮಿತ್ತಮಾತ್ರದವನೇ ಏಕೆ: ನಿಜವಾಗಿಯೂ ಅವನು ಯಾರನ್ನೂ ಕೊಲ್ಲುತ್ತಿಲ್ಲ

ಎಂಬುದನ್ನು ತಿಳಿಸಿದ್ದಾನೆ). ಅಪರಾಧಿಗಳಾದ ನಿನ್ನ ಈ ಶತ್ರುಗಳು ನನ್ನ ಸಂಕಲ್ಪದಿಂದಲೇ ಕೊಲ್ಲಲ್ಪಡುವುದರಿಂದ ನೀನು ಬಂಧುಗಳು, ಆಚಾರ್ಯರು, ಇವರುಗಳನ್ನು ಹೇಗೆ ಕೊಲ್ಲುವುದು ಎಂಬ ಯೋಚನೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ವ್ಯಾಕುಲಪಡದೆ ಯುದ್ಧಮಾಡಿ ಗೆಲ್ಲುವವನಾಗು. ಇವರುಗಳನ್ನು ಕೊಲ್ಲುವ ವಿಷಯದಲ್ಲಿ ಧರ್ಮಾಧರ್ಮದ ಭಯವನ್ನಾಗಲೀ, ಬಂಧು ಸ್ನೇಹವನ್ನಾಗಲೀ, ದಯೆಯನ್ನಾಗಲೀ ಹೊಂದಬೇಡ. ಅಪರಾಧಿಗಳಾದ ಇವರು ನನ್ನಿಂದಲೇ ನಿಸ್ಸಂಶಯವಾಗಿ ಕೊಲ್ಲಲ್ಪಡುವುದರಿಂದ, ನೀನು ಯಾವ ಶಂಕೆಯನ್ನೂ ಹೊಂದದೆ ಯುದ್ಧಮಾಡಿದರೆ ಖಂಡಿತವಾಗಿಯೂ ನಿನ್ನ ಶತ್ರುಗಳನ್ನು ಜಯಿಸುತ್ತೀಯೆ'' ಎಂದು ಶ್ರೀಕೃಷ್ಣನು ತಿಳಿಸುತ್ತಾನೆ.

## 6. ಪರಮಾತ್ಮನ ಸೌಮ್ಯರೂಪ ದರ್ಶನಕ್ಕಾಗಿ ಅರ್ಜುನನ ಪ್ರಾರ್ಥನೆ (ಶ್ಲೋಕಗಳು 35 ರಿಂದ 46)

ಸಂಜಯನು ಧೃತರಾಷ್ಟ್ರನಿಗೆ ತಿಳಿಸುತ್ತಾನೆ – ಆಶ್ರಿತ ವತ್ಸಲನಾದ ಶ್ರೀಕೃಷ್ಣನ ಈ ಮಾತುಗಳನ್ನು ಕೇಳಿದ ಅರ್ಜುನನು ನಡುಗುತ್ತಾ, ನಮಸ್ಕರಿಸುತ್ತಾ, ಅತ್ಯಂತ ಭಯಗೊಂಡವನಾಗಿ ಮತ್ತೆ ಮತ್ತೆ ಅವನಿಗೆ ಪ್ರಣಾಮ ಮಾಡುತ್ತಾ ಎರಡು ಕೈಗಳನ್ನೂ ಜೋಡಿಸಿ ಕೈಮುಗಿದುಕೊಂಡು ಅವನನ್ನು ಈ ರೀತಿ ಪ್ರಾರ್ಥಿಸುತ್ತಾನೆ. ''ಎಲೈ ಹೃಷಿಕೇಶನೇ! ಈ ಯುದ್ಧವನ್ನು ನೋಡಲು ಬಂದಿರುವ ದೇವ, ಗಂಧರ್ವ, ಸಿದ್ಧ ಯಕ್ಷ, ವಿದ್ಯಾಧರರು, ಕಿನ್ನರ ಕಿಂಪುರುಷರು ಇವರೇ ಮುಂತಾದ ಎಲ್ಲರೂ ನಿನ್ನ ಕೃಪೆಯಿಂದ ನಿನ್ನ ದರ್ಶನ ಪಡೆದು ನಿನ್ನ ಕೀರ್ತನೆ ಮಾಡುವುದರಿಂದ ಅತ್ಯಂತ ಸಂತುಷ್ಟರಾಗಿದ್ದಾರೆ. ರಾಕ್ಷಸರು ನಿನ್ನನ್ನು ಕಂಡು ಭಯದಿಂದ ಎಲ್ಲಾ ದಿಕ್ಕುಗಳಿಗೂ ಓಡುತ್ತಿದ್ದಾರೆ. ಸಮಸ್ತಸಿದ್ಧಸಮೂಹವೂ ನಿನಗೆ ನಮಸ್ಕರಿಸುತ್ತಿದೆ. ಎಲೈ ಮಹಾತ್ಮನೇ! ಎಲ್ಲರಿಗೂ ಮೇಲಾದವನೂ, ಬ್ರಹ್ಮದೇವನಿಗೂ ಆದಿಕರ್ತನೂ ಆಗಿರುವ ನಿನಗೆ ಯಾರು ತಾನೇ ನಮಸ್ಕರಿಸದೇ ಇರುವರು. ಹೇ ಅನಂತ, ದೇವೇಶ! ಜಗನ್ನಿವಾಸ! ನಾಶವು ಇಲ್ಲದ ಜೀವಸ್ವರೂಪವೂ, ಕಾರ್ಯಕಾರಣರೂಪವಾದ ಪ್ರಕೃತಿಯೂ, ಪ್ರಕೃತಿ ಯೊಡನೆ ಸೇರಿದ ಜೀವಾತ್ಮತತ್ವವೂ ಮತ್ತು ಇವೆಲ್ಲಕ್ಕಿಂತ ಮೇಲಾದವನೂ ನೀನೇ ಆಗಿರುವೆ.

ಹೇ ಅನಂತರೂಪಾ! ಆದಿದೇವನೂ, ಪುರಾಣಪುರುಷನೂ ನೀನೇ, ಸಮಸ್ತ ಜಗತ್ತಿಗೂ ಪರಮ ಆಧಾರಭೂತನೂ ನೀನೇ, ಈ ಜಗತ್ತಿನಲ್ಲಿ ತಿಳಿಯುವವನೂ

ನೀನೇ, ತಿಳಿಯಬೇಕಾದ ವಸ್ತುವೂ ನೀನೇ ಮತ್ತು ಪರಮಪ್ರಾಪ್ಯಸ್ಥಾನವೂ ನೀನೇ ಆಗಿದ್ದೀಯೆ. ಈ ಜಗತ್ತಿಗೆಲ್ಲಾ ಆತ್ಮನಾಗಿರುವ ನಿನ್ನಿಂದ ಎಲ್ಲವೂ ವ್ಯಾಪಿಸಲ್ಪಟ್ಟಿದೆ. ವಾಯುವೂ, ಯಮನೂ, ಅಗ್ನಿಯೂ, ವರುಣನೂ, ಚಂದ್ರನೂ, ಸೃಷ್ಟಿಕರ್ತನಾದ ಪ್ರಜಾಪತಿಯೂ, ಅವನಿಗೆ ತಂದೆಯಾದ ಪ್ರಪಿತಾಮಹನೂ ಎಲ್ಲರೂ ನೀನೇ ಆಗಿರುವೆ. ನಿನಗೆ ಮತ್ತೆ ಮತ್ತೆ ನಮಸ್ಕಾರ ಮಾಡುತ್ತೇನೆ. ಸರ್ವರೂಪನೇ, ನಿನಗೆ ಮುಂದೆಯೂ ಹಿಂದೆಯೂ ನಮಸ್ಕಾರ. ನಿನಗೆ ಸರ್ವ ಕಡೆಯೂ ಮತ್ತೆ ಮತ್ತೆ ನಮಸ್ಕಾರ. ಅನಂತ ಶಕ್ತಿಯುತನೂ, ಅಮಿತ ಪರಾಕ್ರಮಿಯೂ ಆದ ನೀನು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡು ಇರುವುದರಿಂದ ಸರ್ವವೂ ನೀನೇ ಆಗಿರುವೆ. (ಸರ್ವಶಬ್ದವಾಚ್ಯನೂ ನೀನೇ ಆಗಿರುವೆ ಎಂದು ಅಭಿಪ್ರಾಯ)". ಹೀಗೆ ಅತ್ಯಂತ ಅದ್ಭುತವಾದ ಭಗವಂತನ ರೂಪವನ್ನು ದರ್ಶಿಸಿ ಅರ್ಜುನನು ಹರ್ಷ, ಆಶ್ಚರ್ಯ, ಭಯಭೀತಿ ಉಳ್ಳವನಾಗಿ ಭಗವಂತನನ್ನು ಎಲ್ಲ ಕಡೆಗಳಿಂದಲೂ ಮತ್ತೆ ಮತ್ತೆ ನಮಸ್ಕಾರ ಮಾಡುತ್ತಾ ಹೇಳುತ್ತಾನೆ.

"ಅಪರಿಮಿತವಾದ ಪರಾಕ್ರಮವುಳ್ಳವನೂ, ಸಕಲ ಪ್ರಾಣಿಗಳಿಗೂ ಆತ್ಮನಾಗಿರುವವನೂ, ಸೃಷ್ಟ್ಯಾದಿಗಳನ್ನು ಮಾಡುವವನೂ ಆದ ನಿನ್ನ ಮಹಿಮೆಯನ್ನು ಅರಿಯದವನಾಗಿ ನಾನು ಅಜ್ಞಾನದಿಂದಲೂ, ಮೋಹದಿಂದಲೂ, ಚಿರಪರಿಚಯದಿಂದ ಉಂಟಾದ ಸ್ವಾತಂತ್ರ್ಯದಿಂದಲೂ ನಿನ್ನನ್ನು ನನ್ನ ಸ್ನೇಹಿತನೆಂದು ತಿಳಿದು "ಹೇ ಕೃಷ್ಣ ಹೇ ಮಾಧವ, ಹೇ ಮಿತ್ರನೇ" ಎಂದು ಸ್ವಲ್ಪವೂ ವಿನಯವಿಲ್ಲದೆ ಏನೇನು ಹೇಳಿದೆನೋ ಅದನ್ನೆಲ್ಲಾ ದಯೆಯಿಟ್ಟು ಕ್ಷಮಿಸು. ಓ ಅಚ್ಯುತ! ಸದಾ ಗೌರವಿಸಬೇಕಾದ ನಿನ್ನನ್ನು ಪರಿಹಾಸಕ್ಕಾಗಿ ಆಟಗಳಲ್ಲಿಯೂ, ಶಯನ ಭೋಜನ ಕಾಲಗಳಲ್ಲಿಯೂ, ನಿನ್ನೊಡನೆ ನಾನು ಏಕಾಂತವಾಗಿಯೂ, ಅಥವಾ ಇತರ ಜನಗಳ ಮುಂದೆಯೂ ಅಗೌರವದಿಂದ ವರ್ತಿಸಿರುವ ಅಪಚಾರಗಳೆಲ್ಲವನ್ನೂ ಅಪ್ರಮೇಯನಾದ ನೀನು ಕರುಣೆಯಿಂದ ಕ್ಷಮಿಸಬೇಕೆಂದು ಬೇಡಿಕೊಳ್ಳುತ್ತೇನೆ. ಅಪ್ರತಿಮ ಪ್ರಭಾವವುಳ್ಳವನೇ! ಚರಾಚರಾತ್ಮಕವಾದ ಈ ಸಮಸ್ತ ಜಗತ್ತಿಗೂ ನೀನೇ ತಂದೆಯೂ, ಗುರುವೂ, ಪರಮಪೂಜ್ಯನೂ ಆಗಿರುವೆ. ತ್ರಿಲೋಕದಲ್ಲಿಯೂ ಕಾರುಣ್ಯವೇ ಮೊದಲಾದ ನಿನ್ನ ಯಾವ ಒಂದು ಗುಣದಲ್ಲೂ ನಿನಗೆ ಸಮಾನರಾದವರು ಬೇರೆ ಯಾರೂ ಇಲ್ಲ. ಇನ್ನು ನಿನಗಿಂತ ಅಧಿಕರು ಯಾರೂ ಇಲ್ಲವೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಆದುದರಿಂದ ನಾನು ಸ್ತುತಿಸಲು

ಯೋಗ್ಯನಾದ, ಸರ್ವೇಶ್ವರನಾದ ನಿನ್ನ ಪಾದಗಳಿಗೆ ಮೈಬಗ್ಗಿ ನಮಸ್ಕರಿಸಿ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಶರಣಾರ್ಥಿಯಾಗಿ ಪ್ರಾರ್ಥಿಸುತ್ತೇನೆ. ತಪ್ಪನ್ನು ಮಾಡಿದ ಮಗನು ತಂದೆಗೆ ನಮಸ್ಕಾರ ಮಾಡಿ ತಪ್ಪನ್ನು ಕ್ಷಮಿಸಬೇಕೆಂದು ಬೇಡಿಕೊಂಡಾಗ ತಂದೆಯು ಪ್ರಸನ್ನನಾಗುವಂತೆ ಮತ್ತು ತಪ್ಪನ್ನು ಮಾಡಿದ ಪ್ರೀತಿ ಪಾತ್ರನಾದ ಸ್ನೇಹಿತನು ನಮಸ್ಕರಿಸಿ ತಪ್ಪನ್ನು ಕ್ಷಮಿಸಬೇಕೆಂದು ಬೇಡಿಕೊಂಡಾಗ ಅವನ ಸ್ನೇಹಿತನು ಪ್ರಸನ್ನನಾಗುವಂತೆ ನನ್ನಲ್ಲಿ ವಿಶೇಷವಾದ ಕಟಾಕ್ಷವುಳ್ಳ ನೀನು ನಿನಗೆ ಪ್ರಿಯನಾದ ನನ್ನಲ್ಲಿ ಪ್ರೀತಿಯಿಟ್ಟು ದಯೆತೋರಿ ನನ್ನ ಅಪರಾಧಗಳೆಲ್ಲವನ್ನೂ ಕ್ಷಮಿಸಬೇಕೆಂದು ನಮಿಸಿ ಬೇಡಿಕೊಳ್ಳುತ್ತೇನೆ. (ಶ್ರೀರಾಮಾನುಜರು ಅವರು ರಚಿಸಿರುವ ಗದ್ಯತ್ರಯವೆಂಬ ಶರಣಾಗತಿ ಸ್ತೋತ್ರದಲ್ಲಿ ಭಗವದ್ಗೀತೆಯ ಈ 44 ಮತ್ತು 45ನೇ ಶ್ಲೋಕಗಳ ಮೂಲಕ ಪರಮಾತ್ಮನಲ್ಲಿ ಪ್ರಾರ್ಥನೆಯನ್ನು ಸಲ್ಲಿಸಿ ಶರಣಾಗತಿ ಮಾಡಿದ್ದಾರೆ.)

''ಜಗದಂತರ್ಯಾಮಿಯೇ! ಹಿಂದೆ ಎಂದೂ ಯಾರಿಂದಲೂ ನೋಡಲ್ಪಡದ ಅತ್ಯದ್ಭುತವೂ, ಅತ್ಯುಗ್ರವೂ ಆದ ನಿನ್ನ ಈ ವಿಶ್ವರೂಪವನ್ನು ನಾನು ಈಗ ನೋಡಿ ಸಂತೋಷಿಸಿದೆನು. ಆದರೆ ಅದನ್ನು ನೋಡಿದಾಗಿನಿಂದ ನನ್ನ ಮನಸ್ಸು ಭಯದಿಂದ ನಡುಗಿ ತತ್ತಳಿಸುತ್ತಿದೆ. ಆದುದರಿಂದ ಸಕಲ ಲೋಕಕ್ಕೂ ವಾಸಸ್ಥಾನವಾಗಿರುವವನೂ, ಬ್ರಹ್ಮಾದಿಗಳಾದ ಸಕಲ ದೇವತೆಗಳಿಗೂ ಈಶನೂ ಆದ ನನ್ನ ಸ್ವಾಮಿಯೇ! ಸುಪ್ರಸನ್ನವಾದ ನಿನ್ನ ಆ ಮೊದಲಿನ ರೂಪವನ್ನೇ ನನಗೆ ತೋರಿಸು. ಹೇ ದೇವೇಶ! ನನ್ನಲ್ಲಿ ಪ್ರಸನ್ನನಾಗಿ ಕೃಪೆ ಮಾಡು. ವಿಶ್ವಮೂರ್ತಿಯೇ! ಸಹಸ್ರಬಾಹುವೇ! ಹಿಂದಿನ ಹಾಗೆ ಕಿರೀಟವನ್ನು ಧರಿಸಿ, ಚಕ್ರವನ್ನೂ ಗದೆಯನ್ನು ಕೈಯಲ್ಲಿ ಹಿಡಿದಿರುವ ಆ ನಿನ್ನ ರೂಪವನ್ನು ನೋಡಲು ನಾನು ಇಷ್ಟಪಡುತ್ತೇನೆ. ಆದ್ದರಿಂದ ನೀನು ಕೃಪೆ ಮಾಡಿ ಅದೇ ಚತುರ್ಭುಜರೂಪನಾಗಿ ದರ್ಶನ ನೀಡಬೇಕೆಂದು ಪ್ರಾರ್ಥಿಸುತ್ತೇನೆ.''

## 7. ಪರಮಾತ್ಮನು ತನ್ನ ಮೊದಲಿನ ರೂಪವನ್ನು ತೋರಿಸುವುದು (ಶ್ಲೋಕಗಳು 47 ರಿಂದ 51)

ಶ್ರೀಕೃಷ್ಣನು ಅರ್ಜುನನಿಗೆ ಮುಂದೆ ಹೇಳುತ್ತಾನೆ – ''ಅರ್ಜುನಾ! ನನ್ನ ಈ ತೇಜೋಮಯವಾದ, ವಿಶ್ವವ್ಯಾಪಕವಾದ, ಅದ್ಯಂತರಹಿತವಾದ, ಆದಿಕಾರಣವಾದ ಈ ಅದ್ಭುತರೂಪವನ್ನು ನಿನ್ನ ಹೊರತು ಮತ್ತೆ ಯಾರೂ ಇಂದಿನವರೆಗೆ ನೋಡಿಲ್ಲ. ನೀನು ನನ್ನಲ್ಲಿ ವಿಶೇಷವಾಗಿ ಭಕ್ತಿಯಿಂದ ಕೂಡಿರುವವನಾಗಿ ಇರುವುದರಿಂದ

ಪ್ರಸನ್ನನಾದ ನಾನು ನನ್ನ ಸತ್ಯ ಸಂಕಲ್ಪ ಯೋಗದಿಂದ ನಿನಗೆ ಈ ದುರ್ಲಭವಾದ ದರ್ಶನವನ್ನು ದಯೆಯಿಂದ ತೋರಿಸಿದೆನು. ಎಲೈ ಕುರು ಶ್ರೇಷ್ಠನೇ! ಮನುಷ್ಯ ಲೋಕದಲ್ಲಿ ಕೇವಲ ವೇದಗಳಿಂದಾಗಲೀ, ಯಜ್ಞಗಳಿಂದಾಗಲೀ, ಸ್ವಾಧ್ಯಾಯಗಳಿಂದಾಗಲೀ, ದಾನಗಳಿಂದಾಗಲೀ, ಕರ್ಮಾನುಷ್ಠಾನಗಳಿಂದಾಗಲೀ, ಉಗ್ರವಾದ ತಪಸ್ಸುಗಳಿಂದಲಾಗಲೀ ನಿನ್ನನ್ನು ಬಿಟ್ಟು ಬೇರೆ ಯಾರೂ ಈ ಪ್ರಕಾರವಾದ ವಿಶ್ವರೂಪದ ದರ್ಶನವನ್ನು ಪಡೆಯಲಾರರು. (ಅಂದರೆ ಈ ವಿಶ್ವರೂಪದರ್ಶನವನ್ನು ಪಡೆಯುವುದಕ್ಕೆ ನಿರತಿಶಯವಾದ ಅನನ್ಯಭಕ್ತಿಯು ಒಂದೇ ಮಾರ್ಗವು ಎಂದು ಅಭಿಪ್ರಾಯ.)

ಈ ವಿಧವಾದ ನನ್ನ ಈ ಘೋರ ರೂಪವನ್ನು ನೋಡಿ ನಿನಗೆ ಭಯವೂ, ಭ್ರಾಂತಿಯೂ ಉಂಟಾಗದಿರಲಿ. ನಿರ್ಭಯನಾಗಿ ಪ್ರಸನ್ನಚಿತ್ತನಾಗಿ ನೀನು, ನಿನಗೆ ಹಿಂದಿನಿಂದ ಅಭ್ಯಾಸವಾಗಿರುವ ನನ್ನ ಸೌಮ್ಯರೂಪವನ್ನೇ ಮತ್ತೆ ನೋಡು. ಅಂದರೆ ನಾನು ನಿನಗೆ ಚಿರಪರಿಚಿತವಾದ ಮೊದಲಿನ ಸೌಮ್ಯರೂಪವನ್ನು ತೋರಿಸುವುದರಿಂದ ನಿರ್ಭಯನಾಗಿ ಅದನ್ನು ನೋಡು.'' ಹೀಗೆಂದು ಹೇಳಿ ಸತ್ಯಸಂಕಲ್ಪನಾದ ಶ್ರೀ ಕೃಷ್ಣನು ಅರ್ಜುನನಿಗೆ ತನ್ನ ಸೌಮ್ಯರೂಪವನ್ನು ಧರಿಸಿ ತೋರಿಸಿದನು. ಈ ರೀತಿ ಮಹಾತ್ಮನಾದ ಶ್ರೀ ಕೃಷ್ಣನು ತನ್ನ ಘೋರವಾದ ವಿಶ್ವರೂಪವನ್ನು ಕಂಡು ಹೆದರಿದ್ದ ಈ ಅರ್ಜುನನನ್ನು ಸಮಾಧಾನ ಪಡಿಸಿದನು. ಅನಂತರ ಅರ್ಜುನನು ''ಜನಾರ್ದನನೇ! ನಿನ್ನ ಸೌಮ್ಯವಾದ ಮನುಷ್ಯರೂಪವನ್ನು ನೋಡಿದ ಮೇಲೆ ನನ್ನ ಮನಸ್ಸು ಸಮಾಧಾನ ಸ್ಥಿತಿಗೆ ಬಂದಿದೆ ಮತ್ತು ನನ್ನಲ್ಲಿ ಸಹಜಸ್ಥಿತಿಯು ಉಂಟಾಗಿ ನನ್ನ ಶರೀರದಲ್ಲಿ ಚೈತನ್ಯವು ತುಂಬಿತು'' ಎಂದು ಶ್ರೀ ಕೃಷ್ಣನಿಗೆ ತಿಳಿಸುತ್ತಾನೆ.

## II ತನ್ನನ್ನು ಅರಿಯಲು ಮತ್ತು ಹೊಂದಲು ಭಕ್ತಿಯು ಒಂದೇ ಉಪಾಯ - ಎಂಬ ಪರಮಾತ್ಮನ ಸಾರವಾದ ಉಪದೇಶ (ಶ್ಲೋಕಗಳು 52 ರಿಂದ 55)

ಅರ್ಜುನನ ಅಶಾಂತಿಯನ್ನೂ ಆತುರವನ್ನೂ ಸಾಂತ್ವನಗೊಳಿಸಿ ಶ್ರೀಕೃಷ್ಣನು ತನ್ನಲ್ಲಿ ಅತ್ಯಂತ ಭಕ್ತಿಯನ್ನು ಪಡೆದಲ್ಲದೆ ಈ ವಿಶ್ವರೂಪ ಸಾಕ್ಷಾತ್ಕಾರವನ್ನು ಪಡೆಯಲು ಸಾಧ್ಯವಿಲ್ಲವೆಂಬ ವಿಷಯವನ್ನು ಮುಂದೆ ತಿಳಿಸುತ್ತಾನೆ. ''ಅರ್ಜುನಾ! ನಾನು ಈಗ ನಿನಗೆ ತೋರಿಸಿದ ಸರ್ವಾಶ್ರಯವೂ ಸರ್ವಕಾರಣಭೂತವೂ ಆದ ಈ ನನ್ನ ವಿಶ್ವರೂಪವನ್ನು ದರ್ಶನ ಮಾಡುವುದು ಅಸಾಧ್ಯವಾದುದು. ದೇವತೆಗಳೂ

ಕೂಡ ಈ ದಿವ್ಯರೂಪವನ್ನು ದರ್ಶನ ಮಾಡಲು ಆಸೆ ಪಡುತ್ತಿದ್ದಾರೆ. ನೀನು ಪಡೆದ ದಿವ್ಯ ದರ್ಶನವನ್ನು ಯಾವ ಉಪಾಯದಿಂದ ಪಡೆಯಬಹುದು ಎಂಬುದನ್ನು ವಿಶದವಾಗಿ ತಿಳಿಸುತ್ತೇನೆ. ಕೇವಲ ವೇದದ ಅಧ್ಯಯನ, ಶ್ರವಣ, ಜಪಾದಿಗಳಿಂದಾಗಲಿ, ಕೇವಲ ತಪಸ್ಸಿನಿಂದಾಗಲೀ, ದಾನದಿಂದಾಗಲಿ, ಕೇವಲ ಯಜ್ಞಯಾಗಾದಿ ಕರ್ಮಗಳಿಂದಾಗಲೀ ನೀನು ಸಂದರ್ಶಿಸಿದ ದಿವ್ಯ ರೂಪದ ದರ್ಶನವನ್ನು ಯಾರೂ ಪಡೆಯಲು ಆಗುವುದಿಲ್ಲ. ಆದರೆ ಅರ್ಜುನನೇ! ನಾನು ಎಷ್ಟು ದುರ್ಲಭನಾಗಿದ್ದರೂ ಈ ರೂಪದಿಂದ ಕೂಡಿದ ನನ್ನನ್ನು ಅನನ್ಯ ಭಕ್ತಿಯಿಂದ ಯಥಾರ್ಥವಾಗಿ ತಿಳಿಯಲೂ, ನೋಡಲೂ ಮತ್ತು ಅನುಭವಿಸಲೂ ಸಾಧ್ಯವಾಗುತ್ತದೆ. ಅನನ್ಯ ಭಕ್ತರಿಗೆ ನಾನು ಅತ್ಯಂತ ಸುಲಭನೂ ಆಗಿರುವೆನು.

**ಮತ್ಕರ್ಮಕೃತ್ ಮತ್ಪರಮೋ ಮದ್ಭಕ್ತಸ್ಸಂಗವರ್ಜಿತಃ ।**
**ನಿರ್ವೈರಸ್ಸರ್ವ ಭೂತೇಷು ಯಸ್ಸಮಾಮೇತಿ ಪಾಂಡವ ॥**

ಅಂದರೆ ಎಲೈ ಪಾಂಡು ಕುಮಾರನೇ! ಯಾವನು ಸಮಸ್ತ ಕರ್ಮಗಳನ್ನೂ ನನ್ನ ಆರಾಧನಾ ರೂಪವಾಗಿ ಮಾಡುತ್ತಾ, ನನ್ನನ್ನೇ ಪರಮ ಪ್ರಾಪ್ಯವೆಂದು ತಿಳಿದು, ನನ್ನಲ್ಲಿ ಭಕ್ತಿಯಿಟ್ಟು, ಇತರ ವಿಷಯಗಳ ಆಸೆಯನ್ನು ತ್ಯಜಿಸಿ, ಸಮಸ್ತ ಭೂತಗಳಲ್ಲಿಯೂ ದ್ವೇಷವಿಲ್ಲದೆ ಪ್ರೀತಿಯಿಂದ ಇರುವನೋ ಅವನೇ ನನ್ನನ್ನು ಹೊಂದುವನು.

**'ಮತ್‌ಕರ್ಮಕೃತ್'** ಎಂಬ ಈ ಶ್ಲೋಕದಲ್ಲಿ ಪರಮಾತ್ಮನಾದ ತನ್ನನ್ನು ಹೊಂದಲು ಆಚರಿಸಬೇಕಾದ ಭಕ್ತಿಯೋಗದ ಮುಖ್ಯವಾದ ಐದು ಅಭ್ಯಾಸಗಳನ್ನು ಶ್ರೀಕೃಷ್ಣನು ತಿಳಿಸಿದ್ದಾನೆ.

**ಮತ್ಕರ್ಮಕೃತ್** - ವೇದಾಧ್ಯಯನಾದಿ ಸಮಸ್ತ ಕರ್ಮಗಳನ್ನೂ ಭಗವದಾರಾಧನೆ - ಎಂದು ಮಾಡುವವನು (ಇಲ್ಲಿ "ಯತ್ಕರೋಷಿ" ಎಂಬ 9ನೆಯ ಅಧ್ಯಾಯದ ಶ್ಲೋಕವನ್ನು ಸ್ಮರಿಸತಕ್ಕದು) ಭಗವತ್ಪ್ರೀತ್ಯರ್ಥಂ - ಭಗವತ್ಕೈಂಕರ್ಯರೂಪಂ - ಅಂದರೆ ಕರ್ತೃತ್ವ ಮಮತಾ ಫಲತ್ಯಾಗ ಪೂರ್ವಕವಾಗಿ ಭಗವದರ್ಪಣ ಬುದ್ಧಿಯಿಂದ ಭಗವತ್‌ಕೈಂಕರ್ಯವಾಗಿ ಕರ್ಮಗಳನ್ನು ಮಾಡಬೇಕೆಂದು ಅಭಿಪ್ರಾಯ.

**ಮತ್ಪರಮ:-** ಸಮಸ್ತ ಕರ್ಮಗಳಿಗೂ ಭಗವಂತನನ್ನೇ ಉದ್ದೇಶವಾಗಿ ಹೊಂದಿರುವವನು.

**ಮದ್ಭಕ್ತ:-** ಭಗವಂತನಲ್ಲಿ ಅತ್ಯಂತ ಪ್ರೀತಿ ಉಳ್ಳವನಾಗಿ ಭಗವತ್ ಕೀರ್ತನ,

ಸ್ತುತಿ, ಧ್ಯಾನ, ಅರ್ಚನೆ, ಪ್ರಣಾಮಾದಿಗಳಲ್ಲೇ ಸರ್ವದಾ ನಿರತನಾಗಿರುವವನು.

**ಸಂಗವರ್ಜಿತ:-** ಭಗವಂತನೊಬ್ಬನೇ ತನಗೆ ಅತ್ಯಂತ ಪ್ರಿಯವಾದ ವಸ್ತುವಾಗಿರುವುದರಿಂದ ಇತರ ಐಹಿಕ ಸುಖಭೋಗಗಳಲ್ಲಿ ಸಂಗವಿಲ್ಲದವನು.

**ನಿರ್ವೈರಸ್ಸರ್ವಭೂತೇಷು :-** ಸರ್ವಪ್ರಾಣಿಗಳಲ್ಲೂ ದ್ವೇಷವಿಲ್ಲದವನು. (ಇದಕ್ಕೆ ರಾಮಾನುಜಾಚಾರ್ಯರು ಮೂರು ಕಾರಣಗಳನ್ನು ತಿಳಿಸಿದ್ದಾರೆ.

1) ಆವನು ಭಗವಂತನೊಬ್ಬನಲ್ಲೇ ಆಸಕ್ತವಾದ ಮನಸ್ಸನ್ನು ಹೊಂದಿ ಇತರ ವಿಷಯಗಳಲ್ಲಿ ಸಂಗರಹಿತನಾಗಿರುವುದರಿಂದಲೂ.

2) ತನಗೆ ಪ್ರಾಪ್ತವಾಗುವ ಸುಖದುಃಖಗಳು ಎಲ್ಲವೂ ತಾನು ಮಾಡಿರುವ ಅಪರಾಧದ ಮೂಲಕ ತನಗೆ ಉಂಟಾಗುತ್ತದೆ ಎಂಬ ಅನುಸಂಧಾನದಿಂದಲೂ.

3) ಸರ್ವರೂ ಪರಮಾತ್ಮನಿಗೆ ಪರತಂತ್ರರು ಎಂಬ ಅನುಸಂಧಾನದಿಂದಲೂ ಭಗವದ್ಭಕ್ತನಾದವನಿಗೆ ಯಾರ ಮೇಲೂ ದ್ವೇಷಕ್ಕೆ ಕಾರಣವಿಲ್ಲ.)

**ಯಃ** - ಯಾವನೋ

**ಸಃ ಮಾಂ ಏತಿ:-** ಅಂತಹ ಭಕ್ತಿಯೋಗನಿಷ್ಠನು ಭಗವಂತನ ಅನುಭವವನ್ನು ಪಡೆಯುವನು.

ಹೀಗೆ ಭಕ್ತಿಯೋಗದ ಅಭ್ಯಾಸಗಳು ಈ ಅಧ್ಯಾಯದ ಕೊನೆಯಲ್ಲಿ ಚೆನ್ನಾಗಿ ತಿಳಿಸಲ್ಪಟ್ಟಿವೆ.

ಹನ್ನೊಂದನೆಯ ಅಧ್ಯಾಯದಲ್ಲಿ ಪ್ರತಿಪಾದಿಸಿರುವ ಅರ್ಥವನ್ನು ಶ್ರೀ ಯಾಮುನಾಚಾರ್ಯರು ಗೀತಾರ್ಥ ಸಂಗ್ರಹದ 15ನೆಯ ಶ್ಲೋಕದಲ್ಲಿ ಹೀಗೆ ಸಂಗ್ರಹಿಸಿ ತಿಳಿಸಿದ್ದಾರೆ.

**ಏಕಾದಶೇ ಸ್ವಯಾಥಾತ್ಮ್ಯ ಸಾಕ್ಷಾತ್ಕಾರಾವಲೋಕನಂ ।**
**ದತ್ತಮುಕ್ತಂ ವಿಧಿಪ್ರಾಪ್ತ್ಯೋರ್ಭಕ್ತ್ಯೇಕೋಪಾಯತಾತಥಾ -॥**

ತನ್ನ ನಿಜವಾದ ಸ್ವರೂಪ ದರ್ಶನಕ್ಕೆ ಬೇಕಾದ ದಿವ್ಯ ಚಕ್ಷುಸ್ಸು ಭಗವಂತನಿಂದ ಅರ್ಜುನನಿಗೆ ಕೊಡಲ್ಪಟ್ಟು ವಿಶ್ವರೂಪದರ್ಶನ ಸಾಕ್ಷಾತ್ಕಾರ ಪ್ರಾಪ್ತಿ ಉಂಟಾಗಿದ್ದುದೂ, ಪರಮಾತ್ಮನ ಜ್ಞಾನ ದರ್ಶನಗಳನ್ನು ಹೊಂದಲು ಭಕ್ತಿಯೊಂದೇ ಉಪಾಯ ಎಂದು ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದ್ದುದೂ ಹನ್ನೊಂದನೆಯ ಅಧ್ಯಾಯದಲ್ಲಿ ತಿಳಿಸಿದೆ.

*****

# ಹನ್ನೆರಡನೆಯ ಅಧ್ಯಾಯ

# ಭಕ್ತಿಯೋಗ

ವಿಷಯ ಸೂಚಿಕೆ :

I ಭಕ್ತಿಯೋಗದ ಶ್ರೇಷ್ಠತೆ (ಶ್ಲೋಕಗಳು 1 ರಿಂದ 7)

II ಭಕ್ತಿಯೋಗದ ಅಭ್ಯಾಸಗಳು (ಶ್ಲೋಕಗಳು 8 ರಿಂದ 10)

III ಭಕ್ತಿಯೋಗಾಚರಣೆಗೆ ಅಶಕ್ತನಾದವನಿಗೆ ಆತ್ಮ ಚಿಂತನೆಯಿಂದ ಕೂಡಿದ ಕರ್ಮಯೋಗಾಭ್ಯಾಸವೇ ಉಚಿತವಾದುದು. (ಶ್ಲೋಕಗಳು 11-12)

IV ಕರ್ಮಯೋಗನಿಷ್ಠನಾದ ಭಕ್ತನಿಗೆ ಇರಬೇಕಾದ ಗುಣಪ್ರಕಾರಗಳು (ಶ್ಲೋಕಗಳು 13ರಿಂದ 19)

V ಭಕ್ತರಲ್ಲಿ ಭಗವಂತನಿಗಿರುವ ಅತ್ಯಂತ ಪ್ರೀತಿ (ಶ್ಲೋಕ 20)

ಉಪೋದ್ಘಾತ :

ಹನ್ನೊಂದನೆಯ ಅಧ್ಯಾಯದಲ್ಲಿ ಪರಮಾತ್ಮನು ಅರ್ಜುನನಿಗೆ ದಿವ್ಯ ಚಕ್ಷುಸ್ಸನ್ನು ಕೊಟ್ಟು ತನ್ನ ಐಶ್ವರ್ಯವನ್ನೂ ವಿಶ್ವರೂಪವನ್ನೂ ತೋರಿಸಿ ತನ್ನನ್ನು ಅರಿಯಲು, ಸಾಕ್ಷಾತ್ಕರಿಸಲು ಮತ್ತು ಹೊಂದಲು ಅನನ್ಯ ಭಕ್ತಿಯೊಂದೇ ಉಪಾಯವೆಂದು ತಿಳಿಸಿದ್ದಾನೆ. ಈಗ ಹನ್ನೆರಡನೆಯ ಅಧ್ಯಾಯದಲ್ಲಿ ಆತ್ಮೋಪಾಸನೆಗಿಂತ ಭಕ್ತಿರೂಪವಾದ ಭಗವದುಪಾಸನೆಯು ಶೀಘ್ರಫಲವನ್ನು ಕೊಡುವಂತಹುದಾಗಿಯೂ ಆಚರಿಸಲು ಸುಖ ರೂಪವಾಗಿಯೂ ಇರುವುದರಿಂದ ಶ್ರೇಷ್ಠವಾದುದಾಗಿದೆ ಎಂದೂ, ಆದರೆ ಭಕ್ತಿಯೋಗಕ್ಕೆ ಅಸಮರ್ಥನಾದವನು ಮೊದಲು ಆತ್ಮಚಿಂತನೆಯಿಂದ ಕೂಡಿ ಫಲಾಸಕ್ತಿರಹಿತನಾಗಿ ಕರ್ಮವನ್ನು ಮಾಡಬೇಕೆಂದೂ, ಭಗವದುಪಾಸನೆಯಿಂದ ಪ್ರಾಪ್ಯಭೂತನಾದ ಪರಮಾತ್ಮನೇ ಸರ್ವಶ್ರೇಷ್ಠನಾದುದರಿಂದ ಭಗವತ್‌ಭಕ್ತಿಯೇ ಸರ್ವಶ್ರೇಷ್ಠವು ಎಂದೂ, ಭಗವದ್ಭಕ್ತನೇ ಭಗವಂತನಿಗೆ ಅತ್ಯಂತ ಪ್ರಿಯನು ಎಂದೂ ತಿಳಿಸಿದೆ.

## I ಭಕ್ತಿಯೋಗದ ಶ್ರೇಷ್ಠತೆ (ಶ್ಲೋಕಗಳು 1 ರಿಂದ 7)

ಭಗವಂತನಾದ ಶ್ರೀ ಕೃಷ್ಣನಿಂದ ಉಪದೇಶಗಳನ್ನು ಪಡೆದನಂತರ ಅರ್ಜುನನಿಗೆ ಆತ್ಮಸಾಕ್ಷಾತ್ಕಾರವನ್ನು ಪಡೆಯುವುದಕ್ಕೆ ಸಹಕಾರಿಯಾದ ಜ್ಞಾನಯೋಗವು ಉತ್ತಮವೇ ಅಥವಾ ಭಕ್ತಿಯೋಗವು ಉತ್ತಮವೇ ಎಂಬ ವಿಷಯದಲ್ಲಿ ಮನಸ್ಸಿನಲ್ಲಿ ಸಂದೇಹವು ಉಂಟಾಯಿತು. ಆಗ ಅವನು ಶ್ರೀ ಕೃಷ್ಣನನ್ನು, ನಿರಂತರವೂ ಪ್ರಯತ್ನಶೀಲರಾಗಿ ಸರ್ವದಾ ಭಗವಂತನನ್ನು ಉಪಾಸನೆ ಮಾಡುವ ಭಕ್ತಿಯೋಗನಿಷ್ಠರು ಮತ್ತು ಕಣ್ಣು ಮುಂತಾದ ಇಂದ್ರಿಯಗಳಿಗೆ ಗೋಚರಿಸದೆ ಅವ್ಯಕ್ತವಾಗಿರುವ ಪ್ರತ್ಯಗಾತ್ಮ ಸ್ವರೂಪವನ್ನು ಉಪಾಸನೆ ಮಾಡುವವರು ಇವರಿಬ್ಬರಲ್ಲಿ ಯಾರು ಪ್ರಾಜ್ಞರಾದ ಯೋಗಿಗಳು ಅಂದರೆ ಯಾರು ಅವರವರ ಗುರಿಯನ್ನು ಬೇಗನೆ ಪಡೆಯುತ್ತಾರೆ ಎಂಬ ವಿಷಯವನ್ನು ತನಗೆ ಸಂದೇಹ ರಹಿತವಾಗಿ ತಿಳಿಸುವಂತೆ ಪ್ರಾರ್ಥಿಸುತ್ತಾನೆ. ಆಗ ಶ್ರೀಕೃಷ್ಣನು ಅರ್ಜುನನಿಗೆ ಈ ರೀತಿ ತಿಳಿಸುತ್ತಾನೆ. "ಅರ್ಜುನಾ! ಯಾರು ನನ್ನಲ್ಲಿ ನಿತ್ಯ ಸಂಬಂಧವನ್ನು ಇಚ್ಛಿಸಿ, ಹೆಚ್ಚಾದ ಪ್ರೀತಿಯಿಂದ ನನ್ನಲ್ಲಿಯೇ ತಮ್ಮ ಮನಸ್ಸನ್ನು ನೆಲೆಗೊಳಿಸಿ, ಶ್ರದ್ಧೆಯಿಂದ ನನ್ನನ್ನು ಉಪಾಸನೆ ಮಾಡುತ್ತಾರೆಯೋ, ಅವರೇ ಉತ್ತಮರಾದ ಯೋಗಿಗಳು ಮತ್ತು ಅವರು ಸುಖವಾಗಿ ಶೀಘ್ರವಾಗಿ ನನ್ನನ್ನು ಪಡೆಯುತ್ತಾರೆ. ಪ್ರತ್ಯಗಾತ್ಮ ಸ್ವರೂಪವು ದೇವ ಮತ್ತು ಮನುಷ್ಯ ಮುಂತಾದ ಶಬ್ದಗಳಿಂದ ನಿರ್ದೇಶಿಸಲಾಗದೆ ಅನಿರ್ದೇಶ್ಯವಾಗಿದೆ. ಕಣ್ಣು ಮುಂತಾದ ಇಂದ್ರಿಯಗಳಿಗೆ ಅಗೋಚರವಾಗಿ ಅವ್ಯಕ್ತವಾಗಿದೆ. ಎಲ್ಲಾ ಶರೀರಗಳಲ್ಲಿ ನೆಲೆಗೊಂಡು ಸರ್ವತ್ರಾಗಮವೂ, ಆಯಾರೂಪಗಳಲ್ಲಿ ಚಿಂತಿಸುವುದಕ್ಕೆ ಆಗದೆ ಅಚಿಂತ್ಯವೂ ಆಗಿದೆ. ಯಾವ ಬದಲಾವಣೆಯನ್ನೂ ಹೊಂದದೆ ಕೂಟಸ್ಥವೂ ಮತ್ತು ವಿಕಾರವಿಲ್ಲದೆ ಅಚಲವಾಗಿ ಧ್ರುವವೂ ಆಗಿದೆ. ಇಂತಹ ಪ್ರತ್ಯಗಾತ್ಮ ಸ್ವರೂಪವನ್ನು ಉಪಾಸಿಸುವವರೂ ಕೂಡ ನನ್ನನ್ನೇ ಹೊಂದುತ್ತಾರೆ. ಯಾರು ತಮ್ಮ ಇಂದ್ರಿಯ ಗಳನ್ನೆಲ್ಲಾ ಅವುಗಳ ವ್ಯಾಪಾರದಿಂದ ಅಡಗಿಸಿ, ಸಮಸ್ತ ಭೂತಗಳಲ್ಲಿಯೂ ಸಮಬುದ್ಧಿ ಯುಳ್ಳವರಾಗಿ, ಸರ್ವಭೂತಗಳ ಹಿತದಲ್ಲಿಯೇ ನಿರತರಾಗಿ ಮೇಲೆ ಹೇಳಿದ ಪ್ರತ್ಯಗಾತ್ಮ ಸ್ವರೂಪವನ್ನು ಉಪಾಸನೆ ಮಾಡುತ್ತಾರೆಯೋ ಅವರು ನನ್ನನ್ನೇ ಹೊಂದುತ್ತಾರೆ. ಅಂದರೆ ನನಗೆ ಸಮಾನವಾದ ಆಕಾರವುಳ್ಳ ಅವರವರ ಪರಿಶುದ್ಧವಾದ ಆತ್ಮ ಸ್ವರೂಪವನ್ನು ಸಾಕ್ಷಾತ್ಕರಿಸುತ್ತಾರೆ ಎಂದು ಅಭಿಪ್ರಾಯ. ಆದರೆ ಬಹುಮಂದಿಗೆ ಇಂದ್ರಿಯಗಳಿಗೆ ಗೋಚರವಲ್ಲದ ಆ ಅವ್ಯಕ್ತವಾದ ಆತ್ಮ ಸ್ವರೂಪವನ್ನು

ಮನಸ್ಸಿನಲ್ಲಿ ನೆಲೆಗೊಳಿಸಿ ಉಪಾಸನೆ ಮಾಡಲು ಆಗುವುದಿಲ್ಲ. ಏತಕ್ಕೆಂದರೆ ಅವರು ದೇಹಾಭಿಮಾನವನ್ನು ಉಳ್ಳವರಾಗಿದ್ದಾರೆ. ಅವರಿಗೆ ಇಂದ್ರಿಯ ಗೋಚರವಲ್ಲದ ಆತ್ಮ ವಸ್ತುವನ್ನು ತಿಳಿಯುವುದು ಬಹಳ ಕಷ್ಟಸಾಧ್ಯವಾದುದು. ಆದರೆ ಭಗವಂತನ ಉಪಾಸನೆ ಮಾಡುವವರಿಗೆ ಅದು ಸಾಧ್ಯವಾಗಬಲ್ಲದು. ಯಾವ ಮುಮುಕ್ಷುಗಳು ತಮ್ಮ ದೇಹವನ್ನು ಧರಿಸುವುದಕ್ಕೋಸ್ಕರ ಮಾಡಬೇಕಾದ ಲೌಕಿಕ ಕರ್ಮಗಳನ್ನೂ ಮತ್ತು ಯಜ್ಞ, ದಾನ, ತಪಸ್ಸು, ಹೋಮ ಮುಂತಾದ ವೈದಿಕ ಕರ್ಮಗಳನ್ನೂ ಅವುಗಳ ಪ್ರಯತ್ನ, ಫಲ, ಉದ್ದೇಶ ಎಲ್ಲವನ್ನೂ ಭಗವಂತನಾದ ನನ್ನಲ್ಲಿ ಸಮರ್ಪಿಸುತ್ತಾರೆಯೋ, ನಾನೇ ಎಲ್ಲಕ್ಕೂ ಮುಖ್ಯನಾದವನು ಎಂದು ಭಾವಿಸಿ, ಬೇರೆ ಯಾವುದನ್ನೂ ಇಚ್ಛಿಸದೆ, ನನ್ನನ್ನು ಧ್ಯಾನ ಮಾಡುತ್ತಲೂ, ಅರ್ಚನೆ, ಪ್ರಣಾಮ, ಸ್ತುತಿ, ಕೀರ್ತನೆ ಮುಂತಾದವುಗಳಿಂದ ಉಪಾಸನೆ ಮಾಡುತ್ತಾರೆಯೋ ಅವರು, ನನ್ನಲ್ಲೇ ನೆಟ್ಟ ಮನಸ್ಸುಳ್ಳವರಾಗುತ್ತಾರೆ. ಅಂತಹವರಿಗೆ ನಾನು, ಅವರ ಸಂಸಾರ ಬಂಧವನ್ನು ಕತ್ತರಿಸಿ ಬಹುಶೀಘ್ರದಲ್ಲಿಯೇ ಅವರನ್ನು ಜನನ ಮರಣ ಎಂಬ ಮೃತ್ಯುರೂಪವಾದ ಸಂಸಾರ ಸಮುದ್ರದಿಂದ ಹೊರತಂದು ಉದ್ಧಾರ ಮಾಡುವೆನು.''

## II ಭಕ್ತಿಯೋಗದ ಅಭ್ಯಾಸಗಳು (ಶ್ಲೋಕಗಳು 8 ರಿಂದ 10)

ಈ ಮೂರು ಶ್ಲೋಕಗಳಿಂದ ಶ್ರೀಕೃಷ್ಣನು ಭಕ್ತಿಯೋಗ ಅಭ್ಯಾಸದ ಮೆಟ್ಟಿಲುಗಳನ್ನು ಮೇಲಿಂದ ಕೆಳಕ್ಕೆ ಹಂತಹಂತವಾಗಿ ವಿವರಿಸಿ ತಿಳಿಸಿದ್ದಾನೆ.

**''ಮಯ್ಯೇವ ಮನ ಆಧತ್ಸ್ವ ಮಯಿಬುದ್ಧಿಂ ನಿವೇಶಯ ।**
**ನಿವಸಿಷ್ಯಸಿಮಯ್ಯೇವ ಅತ ಊರ್ಧ್ವಂನ ಸಂಶಯಃ ॥**

ಅಂದರೆ ಸುಲಭವಾಗಿ ಶೀಘ್ರದಲ್ಲಿಯೇ ಲಭಿಸುವ ಉತ್ತಮ ಪುರುಷಾರ್ಥ ವಾಗಿರುವ ಭಗವಂತನಾದ ನನ್ನಲ್ಲಿಯೇ ಮನಸ್ಸನ್ನು ಸ್ಥಿರವಾಗಿ ನೆಲೆಗೊಳಿಸು. ನೀನು ಹೊಂದಬೇಕಾದ ಪರಮ ಪ್ರಯೋಜನವು ನಾನೇ ಎಂಬ ಅಧ್ಯವಸಾಯ ಹೊಂದಿ ನಿನ್ನ ಬುದ್ಧಿಯನ್ನೂ ನನ್ನಲ್ಲಿ ಇಡು. ಆಗ ನೀನು ನನ್ನಲ್ಲಿಯೇ ನಿತ್ಯವಾಗಿದ್ದು ಬಾಳುತ್ತೀಯೆ. ಇದರಲ್ಲಿ ಸಂದೇಹವೇ ಇಲ್ಲ. ಆದರೆ ಚಂಚಲವಾದ ಮನಸ್ಸನ್ನು ನನ್ನಲ್ಲೇ ಸ್ಥಿರವಾಗಿ ನಿಲ್ಲಿಸಲು ನಿನಗೆ ಸಾಧ್ಯವಿಲ್ಲದಿದ್ದರೆ ಅಭ್ಯಾಸ ಯೋಗದಿಂದ ಅಂದರೆ ಸ್ವಭಾವವಾಗಿಯೇ ಎಲ್ಲೆ ಇಲ್ಲದ, ಅತಿಶಯದಿಂದ ಕೂಡಿದ, ಸಕಲಕಲ್ಯಾಣಗುಣ ಪೂರ್ಣನೂ, ಸಕಲ ಹೇಯಗಳಿಗೂ ಪ್ರತಿಭಟನೂ ಆಗಿರುವ ನನ್ನನ್ನು ಹೊಂದಲು

ಇಚ್ಛಿಸಿ ನಿರತಿಶಯ ಪ್ರೇಮದಿಂದ ನನ್ನನ್ನು ಸ್ಮರಿಸುವ ಅಭ್ಯಾಸದ ಮೂಲಕ ಮನಸ್ಸನ್ನು ನನ್ನಲ್ಲಿ ನಿಲ್ಲಿಸಿ, ಧ್ಯಾನಿಸುವ ಅಭ್ಯಾಸವನ್ನು ಮಾಡುತ್ತಾ ನನ್ನನ್ನು ಹೊಂದಲು ಇಚ್ಛಿಸು. ಹೀಗೆ ಈ ವಿಧವಾದ ಸ್ಮೃತಿರೂಪವಾದ ಅಭ್ಯಾಸವನ್ನು ಮಾಡಲು ಕೂಡ ನಿನಗೆ ಶಕ್ತಿಯು ಇಲ್ಲದ ಪಕ್ಷದಲ್ಲಿ ಮತ್ಕರ್ಮಪರಮನಾಗಿರು ಅಂದರೆ ಶ್ರೇಷ್ಠವಾದ ನನ್ನ ಕೈಂಕರ್ಯ ರೂಪವಾದ ಕರ್ಮಗಳನ್ನು ಪ್ರೀತಿಯಿಂದ ಮಾಡಲು ಪ್ರಯತ್ನಿಸು. ಕೆಲವು ಭಗವತ್ ಕೈಂಕರ್ಯಗಳನ್ನು ಶ್ರೀ ರಾಮಾನುಜರು ಇಲ್ಲಿ ವಿವರಿಸಿದ್ದಾರೆ. ದೇವಾಲಯ ನಿರ್ಮಾಣ, ನಂದನವನವನ್ನು ಬೆಳೆಸುವುದು, ದೀಪಗಳನ್ನು ಸಮರ್ಪಿಸುವುದು, ಪುಷ್ಪಗಳನ್ನು ಸಮರ್ಪಿಸುವುದು, ನನ್ನ ಆರಾಧನೆಯನ್ನೂ ನಾಮ ಸಂಕೀರ್ತನೆಯನ್ನೂ ಮಾಡುವುದು, ಪ್ರದಕ್ಷಿಣೆ ಮಾಡುವುದು, ನಮಸ್ಕಾರ ಮಾಡುವುದು ಇವೇ ಮುಂತಾದ ಅನೇಕ ಕೈಂಕರ್ಯಗಳನ್ನು ಅತ್ಯಂತ ಪ್ರೀತಿಯಿಂದ ಮಾಡು. ಹೀಗೆ ನನ್ನನ್ನು ಉದ್ದೇಶಿಸಿ ಪ್ರೀತಿಯಿಂದ ಕರ್ಮವನ್ನು ಮಾಡುತ್ತಿದ್ದರೆ, ಅದರಿಂದ ನೀನು ಅತಿಶೀಘ್ರದಲ್ಲಿ ಅಭ್ಯಾಸಯೋಗವನ್ನು ಹೊಂದಿ, ನನ್ನಲ್ಲಿ ನೆಲೆಸಿದ ಮನಸ್ಸಿನಿಂದ ಕೂಡಿದವನಾಗಿ, ನನ್ನ ಪ್ರಾಪ್ತಿ ರೂಪವಾದ ಸಿದ್ಧಿಯನ್ನು ಪಡೆಯುತ್ತೀಯೆ.

### III ಭಕ್ತಿಯೋಗಾಚರಣೆಗೆ ಅಶಕ್ತನಾದವನಿಗೆ ಆತ್ಮ ಚಿಂತನೆಯಿಂದ ಕೂಡಿದ ಕರ್ಮಯೋಗಾಭ್ಯಾಸವೇ ಉಚಿತವಾದುದು. (ಶ್ಲೋಕಗಳು 11-12)

ಆದರೆ ನಿನ್ನಿಂದ ನನ್ನ ಗುಣಗಳ ಚಿಂತನೆಯ ಅಭ್ಯಾಸ ಮಾಡಿ, ಪ್ರೇಮರೂಪವಾದ ಭಕ್ತಿಯೋಗವನ್ನು ಆಶ್ರಯಿಸಿ ಅಂದರೆ ಭಗವದ್ಭಕ್ತಿಯನ್ನು ಉಂಟುಮಾಡುವ ಕೈಂಕರ್ಯ ಕರ್ಮಗಳನ್ನೂ ಮಾಡುವುದಕ್ಕೆ ಆಗದ ಪಕ್ಷದಲ್ಲಿ, ಪರಭಕ್ತಿಯನ್ನು ಉಂಟುಮಾಡುವ, ಆತ್ಮಸ್ವಭಾವಾನುಸಂಧಾನರೂಪವಾದ, ಗೀತೆಯ ಮೊದಲನೆಯ ಷಟ್ಕದಲ್ಲಿ ತಿಳಿಸಿರುವ ಅಕ್ಷರಯೋಗವನ್ನು ಆಶ್ರಯಿಸಿದವನಾಗಿ ಅದಕ್ಕೆ ಉಪಾಯವಾಗಿ ಕರ್ಮಯೋಗವನ್ನು ಅಂದರೆ ಸರ್ವಕರ್ಮಫಲತ್ಯಾಗವನ್ನು ಮಾಡುವವನಾಗು. ಇದೇ ಭಕ್ತಿಯೋಗಕ್ಕೆ ಮೊದಲನೆಯ ಮೆಟ್ಟಿಲು. ಇದರಿಂದ ಆತ್ಮಧ್ಯಾನವು ಸಿದ್ಧಿಸಿ ಅವಿದ್ಯೆ ಮುಂತಾದ ತಡೆಗಳು ನೀಗಿ ಆತ್ಮಸಾಕ್ಷಾತ್ಕಾರ ಉಂಟಾಗುತ್ತದೆ. ಅನಂತರ ಭಗವತ್ ಶೇಷತ್ವವೊಂದನ್ನೇ ರಸವಾಗಿ ಪಡೆದಿರುವ ಪ್ರತ್ಯಗಾತ್ಮಸಾಕ್ಷಾತ್ಕಾರದಿಂದ ನಿನ್ನ ಹೃದಯದಲ್ಲಿ ಪರಭಕ್ತಿಯು ತಾನಾಗಿಯೇ ಉಂಟಾಗುತ್ತದೆ.

ಮನಸ್ಸಿನಲ್ಲಿ ಅಧಿಕವಾದ ಪ್ರೀತಿ ಇಲ್ಲದೆ ಇರುವುದರಿಂದ ಕಠಿಣವಾಗಿ ತೋರುವ ಭಗವಂತನ ಸ್ಮರಣೆಯ ಅಭ್ಯಾಸಕ್ಕಿಂತಲೂ ಆತ್ಮನ ಯತಾರ್ಥರೂಪದ ವಿಚಾರಪೂರ್ವಕ ಜ್ಞಾನವು ಉತ್ತಮವು. ಆದರೆ ಚೆನ್ನಾಗಿ ಪರಿಪಕ್ವವಾಗದ ಪ್ರತ್ಯಗಾತ್ಮ ಸಾಕ್ಷಾತ್ಕಾರ ಜ್ಞಾನಕ್ಕಿಂತಲೂ ಅದಕ್ಕೆ ಉಪಾಯವಾದ ಆತ್ಮಸ್ವರೂಪ ಧ್ಯಾನವು ಆತ್ಮ ಕಲ್ಯಾಣಕ್ಕೆ ಉತ್ತಮವಾದದ್ದು. ಸಿದ್ಧಿಯಾಗದ ಆತ್ಮಸ್ವರೂಪ ಧ್ಯಾನಕ್ಕಿಂತಲೂ ಅದಕ್ಕೆ ಉಪಾಯವಾದ ಫಲಾಪೇಕ್ಷೆರಹಿತವಾದ ಸತ್ಕರ್ಮಾನುಷ್ಠಾನವೇ ಆತ್ಮನಿಗೆ ಶ್ರೇಯಸ್ಕರವು. ಫಲಾಪೇಕ್ಷೆಯು ಇಲ್ಲದೆ ಕರ್ತವ್ಯ ಕರ್ಮವನ್ನು ಅನುಷ್ಠಿಸಿದರೆ ಸಕಲ ಪಾಪವೂ ನಶಿಸಿ ಮನಸ್ಸಿಗೆ ತಾನಾಗಿಯೇ ಶಾಂತಿಯು ಲಭಿಸುತ್ತದೆ. ಶಾಂತವಾದ ಮನಸ್ಸಿನಲ್ಲಿ ಆತ್ಮಧ್ಯಾನವು ತಾನಾಗಿಯೇ ಕೈಸೇರಿ ಆತ್ಮ ಸಾಕ್ಷಾತ್ಕಾರವುಂಟಾಗುತ್ತದೆ. ಭಗವತ್ ಶೇಷತ್ವೈಕ ಸ್ವರೂಪನಾದ ಆತ್ಮನ ಸಾಕ್ಷಾತ್ಕಾರದಿಂದ ಭಗವಂತನಾದ ನನ್ನಲ್ಲಿ ಪರಭಕ್ತಿಯು ತಾನಾಗಿಯೇ ಅಂಕುರಿಸುತ್ತದೆ. ಒಟ್ಟಿನಲ್ಲಿ ಭಕ್ತಿಯೋಗದ ಅಭ್ಯಾಸಗಳನ್ನು ಕೈಗೊಳ್ಳಲು ಅಶಕ್ತನಾದ ಮುಮುಕ್ಷುವಿಗೆ ಯಾಥಾತ್ಮ್ಯಾನುಸಂಧಾನ ಪೂರಕವಾದ ಆತ್ಮ ಜ್ಞಾನವೇ ಶ್ರೇಯಸ್ಕರವು. ಶಾಂತಮನಸ್ಕನಾದ ಆತ್ಮನಿಷ್ಠನಿಗೆ ಭಕ್ತಿನಿಷ್ಠೆಯನ್ನು ಪಡೆಯಲು ಆತ್ಮಜ್ಞಾನವನ್ನು ಅಂತರ್ಗತವಾಗಿ ಹೊಂದಿ ಫಲಾಸಕ್ತಿ ರಹಿತವಾಗಿ ಆಚರಿಸುವ ಕರ್ಮನಿಷ್ಠೆಯೇ ಶ್ರೇಷ್ಠವು."

## IV ಕರ್ಮಯೋಗನಿಷ್ಠನಾದ ಭಕ್ತನಿಗೆ ಇರಬೇಕಾದ ಗುಣಪ್ರಕಾರಗಳು (ಶ್ಲೋಕಗಳು 13ರಿಂದ 19)

ಭಗವದನುಭವವನ್ನು ಪಡೆಯಲು ಸಾಧನವಾದ ಕರ್ಮ, ಜ್ಞಾನ, ಭಕ್ತಿ ಸಮುಚ್ಚಯ ಯೋಗದಲ್ಲಿ ಅನೇಕ ಮೆಟ್ಟಲುಗಳು ಇವೆ ಎಂಬುದನ್ನು ಇಲ್ಲಿಯವರೆಗೆ ಶ್ರೀ ಕೃಷ್ಣನು ಅರ್ಜುನನಿಗೆ ಉಪದೇಶ ಮಾಡಿದನು. ಅದರಲ್ಲಿ ಮೊದಲನೆಯ ಮೆಟ್ಟಲಾದ ಫಲಾಪೇಕ್ಷೆ ಇಲ್ಲದೆ ಕರ್ಮಯೋಗವನ್ನು ಮಾಡುವವನಿಗೆ ಇರಬೇಕಾದ ಗುಣಗಳು ಅಂದರೆ ಅವನು ತನ್ನ ಜೀವನದಲ್ಲಿ ಅನುಸರಿಸಬೇಕಾದ ನೈತಿಕ ಧರ್ಮಗಳು ಯಾವುವು ಎಂಬುದನ್ನು ಮುಂದೆ ಶ್ರೀಕೃಷ್ಣನು ಅರ್ಜುನನಿಗೆ ತಿಳಿಸುತ್ತಾನೆ. **'ಅದ್ವೇಷ್ಟಾ ಸರ್ವಭೂತಾನಾಂ'**- ಸರ್ವಪ್ರಾಣಿಗಳಲ್ಲಿಯೂ ದ್ವೇಷವಿಲ್ಲದೆ ಇರುವವನು, **ಮೈತ್ರಃ ಕರುಣ ಏವಚ** – ಅಷ್ಟೇ ಅಲ್ಲದೆ ತನ್ನನ್ನು ದ್ವೇಷಿಸುವ ಪ್ರಾಣಿಗಳಲ್ಲಿಯೂ ಮೈತ್ರಿಯನ್ನು ತೋರಿಸುವವನು. ಅಂದರೆ ತಮ್ಮ ಅಪರಾಧಗಳಿಗೆ ಅನುಸಾರವಾಗಿ ಈಶ್ವರನಿಂದ ಪ್ರೇರಿತರಾಗಿ, ಈ ಪ್ರಾಣಿಗಳು ತನ್ನನ್ನು ದ್ವೇಷಿಸುತ್ತಾರೆ, ತನಗೆ ತೊಂದರೆ ಕೊಡುತ್ತಾರೆ

ಎಂಬ ಅನುಸಂಧಾನ ಹೊಂದಿ ಅವರನ್ನು ದ್ವೇಷಿಸದವನಾಗಿ, ಅವರಲ್ಲಿ ಮಿತ್ರಭಾವದಿಂದ ವರ್ತಿಸುವವನು. ಅಷ್ಟು ಮಾತ್ರವಲ್ಲದೆ ಅವರು ದುಃಖಿತರಾದಾಗ ಅವರಲ್ಲಿ ಕರುಣೆಯುನ್ನು ಹೊಂದಿರುವವನು; **ನಿರ್ಮಮಃ**- ಶರೀರ ಇಂದ್ರಿಯ ಮುಂತಾಗಿ ತನಗೆ ಸೇರಿದವುಗಳೆಲ್ಲದರಲ್ಲಿಯೂ ನನ್ನದು ಎಂಬ ಅಹಂಕಾರ ಮಮಕಾರಗಳು ಇಲ್ಲದೆ ಇರುವವನು; **ನಿರಹಂಕಾರ**: - ದೇಹವೇ ಆತ್ಮನೆಂಬ ಭ್ರಾಂತಿ ಇಲ್ಲದವನಾಗಿ ದೇಹಾತ್ಮಾಭಿಮಾನ ರಹಿತನಾಗಿ ಇರುವವನು; **ಸಮದುಃಖಸುಖಃ** - ಸುಖದುಃಖಗಳು ಒದಗಿದಾಗ ಹರ್ಷವನ್ನಾಗಲೀ, ಉದ್ವೇಗವನ್ನಾಗಲೀ ಹೊಂದದೆ ಸಮಚಿತ್ತನಾಗಿರುವವನು; **ಕ್ಷಮೀ** - ತನ್ನಿಂದ ಹೋಗಲಾಡಿಸಿಕೊಳ್ಳಲು ಆಗದ, ತಾವಾಗಿಯೇ ಬರುವ, ಶೀತೋಷ್ಣ ಸುಖದುಃಖಾದಿಗಳನ್ನು ತಾಳ್ಮೆಯಿಂದ ಸಹಿಸುವವನೂ ಆದ ಭಕ್ತನು ನನಗೆ ಪ್ರಿಯನಾದವನು. **ಸಂತುಷ್ಟಃ** - ತಾನಾಗಿಯೇ ಲಭಿಸಿದ್ದನ್ನು ಇಟ್ಟುಕೊಂಡು ಸಂತೋಷ ಪಡುವವನು; **ಸತತಂಯೋಗೀ** - ಯಾವಾಗಲೂ ಪ್ರಕೃತಿಗಿಂತಲೂ ಬೇರೆಯಾಗಿರುವ ಆತ್ಮವನ್ನು ಸ್ಮರಿಸುತ್ತಿರುವವನು; **ಯತಾತ್ಮಾ** - ಮನಸ್ಸನ್ನು ತನ್ನ ಇಚ್ಛೆಯ ಪ್ರಕಾರ ಓಡಲು ಬಿಡದೆ ತಡೆಯುವವನು; **ದೃಢನಿಶ್ಚಯಃ** - ಅಧ್ಯಾತ್ಮಶಾಸ್ತ್ರಗಳಲ್ಲಿ ದೃಢನಿಶ್ಚಯವುಳ್ಳವನು; **ಮಯ್ಯರ್ಪಿತಮನೋ ಬುದ್ಧಿಃ** - ನನ್ನಲ್ಲಿಯೇ ಮನಸ್ಸನ್ನೂ ಬುದ್ಧಿಯನ್ನೂ ನೆಲೆಗೊಳಿಸುವವನೂ ಆದ ಭಕ್ತನು ಯಾವನೋ ಅವನು ನನಗೆ ಪ್ರಿಯನಾದವನು.

**ಯಸ್ಮಾನ್ನೋದ್ವಿಜತೇ ಲೋಕಃ** - ಕರ್ಮಯೋಗ ನಿಷ್ಠನಾದವನು ಲೋಕಕ್ಕೆ ಪ್ರತಿಕೂಲವಾಗಿಲ್ಲದಂತೆ ಅಂದರೆ ತನ್ನಿಂದ ಇತರರಿಗೆ ತೊಂದರೆ, ಭಯವಿಲ್ಲದಂತೆ ನಡೆಯುವವನು; **ಲೋಕಾನ್ನೋದ್ವಿಜತೇಚಯಃ** - ಇತರರಾರೂ ಅವನನ್ನು ವಿರೋಧಿಸಿ ಅವನಿಗೆ ತೊಂದರೆ ಉಂಟುಮಾಡದಂತಿರುವನು; **ಹರ್ಷಾಮರ್ಷ ಭಯೋದ್ವೇಗೈ ಮುಕ್ತಃ** - ಸಂತೋಷ, ಕೋಪ, ಭಯಾದಿಗಳಲ್ಲಿಯೂ ಮನಸ್ಸು ಕಲಕದೆ ಇರುವವನೂ ಆದ ಅವನು ನನಗೆ ಪ್ರಿಯನಾದವನು. **ಅನಪೇಕ್ಷಃ** - ಆತ್ಮವನ್ನು ಹೊರತು ಇತರ ವಸ್ತುಗಳಲ್ಲಿ ಅಪೇಕ್ಷೆಯಿಲ್ಲದವನು; **ಶುಚಿಃ** - ಶಾಸ್ತ್ರವಿದಿತ ದ್ರವ್ಯದಿಂದ ಶರೀರವನ್ನು ಪೋಷಿಸಿ ಪರಿಶುದ್ಧನಾಗಿರುವವನು; **ದಕ್ಷಃ** - ಶಾಸ್ತ್ರೀಯ ಕರ್ಮಾಚರಣೆಯಲ್ಲಿ ಸಮರ್ಥನು; **ಉದಾಸೀನಃ** - ಇತರ ವಿಷಯಗಳಲ್ಲಿ ಉದಾಸೀನನಾಗಿರುವವನು; **ಗತವ್ಯಥಃ** - ಶಾಸ್ತ್ರೋಕ್ತವಾದ ಕ್ರಿಯೆಗಳನ್ನು ಮಾಡುವಾಗ ತನ್ನಿಂದ ಹೋಗಲಾಡಿಸಿಕೊಳ್ಳಲು ಆಗದ, ಶೀತೋಷ್ಣಗಳಿಂದ

ಉಂಟಾಗುವ ಸುಖದುಃಖಗಳ ಬಗೆಗೆ ವ್ಯಸನ ಪಡದವನು; **ಸರ್ವಾರಂಭ ಪರಿತ್ಯಾಗೀ** – ಶಾಸ್ತ್ರ ವಿದಿತಗಳಲ್ಲದ ಕರ್ಮಗಳನ್ನು ಆರಂಭಿಸದೆ ಇರುವವನೂ ಆದ ಭಕ್ತನು ನನಗೆ ಪ್ರಿಯನು. **ಯೋನಹೃಷ್ಯತಿನದ್ವೇಷ್ಟಿ** – ಪ್ರಾಪಂಚಿಕ ವಿಷಯಗಳಲ್ಲಿ ಸಂತೋಷವೂ ದ್ವೇಷವೂ ಇಲ್ಲದವನು; **ನಶೋಚತಿ ನಕಾಂಕ್ಷತಿ** – ಸಾಮಾನ್ಯ ಮನುಷ್ಯನಿಗೆ ದುಃಖಕ್ಕೆ ಕಾರಣವಾದ ವಿಷಯಗಳಲ್ಲಿ ದುಃಖಪಡದೆ ಇರುವವನು, ತನಗೆ ಅಲಭ್ಯವಾದ ಪದಾರ್ಥಗಳನ್ನು ಹೊಂದಬೇಕೆಂಬ ಆಸೆ ಇಲ್ಲದೆ ಇರುವವನು; **ಶುಭಾಶುಭಪರಿತ್ಯಾಗೀ** – ಬಂಧಕ್ಕೆ ಕಾರಣವಾದ ಪುಣ್ಯ ಪಾಪಗಳೆರಡೂ ಸಂಸಾರ ಹೇತುವಾದುದರಿಂದ ಎರಡನ್ನೂ ತ್ಯಾಗ ಮಾಡಿದವನು, ಈ ಗುಣಗಳೆಲ್ಲವನ್ನೂ ಪಡೆದು ನನ್ನಲ್ಲಿ ಭಕ್ತಿಯುಳ್ಳ ಭಕ್ತಿಯೋಗಿಯು ನನಗೆ ಪ್ರಿಯನಾಗಿರುವನು.

**ಶತ್ರೌಚ ಮಿತ್ರೇಚಸಮಃ, ಮಾನಾಪಮಾನಯೋಃ ಸಮಃ, ಶೀತೋಷ್ಣ ಸುಖದುಃಖೇಷುಸಮಃ** – ಶತ್ರು ಮಿತ್ರರಲ್ಲಿಯೂ, ಮಾನಾಪಮಾನಗಳಲ್ಲಿಯೂ, ಶೀತೋಷ್ಣ ಸುಖದುಃಖಗಳಲ್ಲಿಯೂ ಒಂದೇ ರೀತಿಯಾದ ಸಮಚಿತ್ತತ್ವವನ್ನು ಹೊಂದಿರುವವನು; **ಸಂಗವಿವರ್ಜಿತಃ**– ಯಾವ ವಸ್ತುವಿನಲ್ಲಿಯೂ ಆಸಕ್ತಿ ಇಡದವನೂ ಆಗಿರುವ ಕರ್ಮಯೋಗಿಯಾದ ಭಕ್ತನು ನನಗೆ ಪ್ರಿಯನು. ಅಲ್ಲದೆ **ತುಲ್ಯನಿಂದಾಸ್ತುತಿಃ** – ನಿಂದೆ ಮತ್ತು ಪ್ರಶಂಸೆಗಳನ್ನು ಸಮವಾಗಿ ಭಾವಿಸುವವನು; **ಮೌನೀ** – ತಾನು ಯಾರನ್ನೂ ನಿಂದಿಸದೆ ಮೌನವಾಗಿ ಇರುವವನು; **ಸಂತುಷ್ಟೋ ಯೇನಕೇನಚಿತ್** – ತನಗೆ ದೊರಕಿದಷ್ಟರಲ್ಲಿಯೇ ತೃಪ್ತನಾಗಿ ಇರುವವನು; **ಅನಿಕೇತಃ** – ಆತ್ಮವಿಷಯದಲ್ಲಿ ಸ್ಥಿರಬುದ್ಧಿ ಹೊಂದಿದವನಾಗಿ, ಈ ಗೃಹಾದಿ ವಿಷಯಗಳಲ್ಲಿ ಮನಸ್ಸಿನಲ್ಲಿ ಮಮಕಾರ ಭಾವನೆಯನ್ನು ಇಟ್ಟುಕೊಳ್ಳದೆ ಆಸಕ್ತಿರಹಿತನಾಗಿ ಇರುವವನು; **ಸ್ಥಿರಮತಿಃ** – ಆಧ್ಯಾತ್ಮಿಕ ತತ್ವ, ಹಿತ, ಪುರುಷಾರ್ಥ ವಿಷಯಗಳನ್ನು ತಿಳಿಯುವುದರಲ್ಲೂ, ಆಚರಿಸುವುದರಲ್ಲೂ ತನ್ನ ಬುದ್ಧಿಯನ್ನು ಸ್ಥಿರವಾಗಿ ಹೊಂದಿರುವವನೂ ಆದ ಕರ್ಮಯೋಗಿಯಾದ ಭಕ್ತನು ನನಗೆ ಪ್ರಿಯನು.

## V ಭಕ್ತರಲ್ಲಿ ಭಗವಂತನಿಗಿರುವ ಅತ್ಯಂತ ಪ್ರೀತಿ (ಶ್ಲೋಕ 20)

ಯಾರು ನನ್ನನ್ನೇ ಪರಮಗತಿ ಎಂದು ನಂಬಿ ಮತ್ಪರಾಯಣರಾಗಿ, ಶ್ರದ್ಧೆಯುಳ್ಳವರಾಗಿ ಮೇಲೆ ಹೇಳಿರುವ "**ಮಯ್ಯೇವಮನ ಆಧತ್ಸ್ವ – ಮಯಿಬುದ್ಧಿಂ ನಿವೇಶಯ**" – ಎಂಬ ಧರ್ಮವೂ, ಅಮೃತವೂ ಆದ ಭಕ್ತಿಯೋಗದ ಅನುಷ್ಠಾನ

ಮಾಡುವವರೋ ಅಂತಹ ಭಕ್ತರು ನನಗೆ ಅತ್ಯಂತ ಪ್ರಿಯರು ಎನ್ನುತ್ತಾನೆ ಶ್ರೀಕೃಷ್ಣ. ಹಿಂದಿನ ಅಂದರೆ ಹದಿಮೂರರಿಂದ ಹತ್ತೊಂಬನೆಯ ಶ್ಲೋಕಗಳಲ್ಲಿ ಕರ್ಮಯೋಗನಿಷ್ಠನಾದ ಭಕ್ತನ ಗುಣಗಳನ್ನು ತಿಳಿಸಿ, ಅವನು ತನಗೆ (ಭಗವಂತನಿಗೆ) ಪ್ರಿಯನು ಎಂದು ಮಾತ್ರ ಹೇಳಿದ್ದಾನೆ. ಆದರೆ ನನ್ನನ್ನು ಅತ್ಯಂತ ಪ್ರೀತಿಸುವ ಭಕ್ತಿಯೋಗ ನಿಷ್ಠನಾದ ಭಕ್ತನು ನನಗೆ ಅತ್ಯಂತ ಪ್ರಿಯನು ಎಂದು ಈ 30ನೆಯ ಶ್ಲೋಕದಲ್ಲಿ ವ್ಯಕ್ತವಾಗಿ ತಿಳಿಸಿದ್ದಾನೆ. ಹೀಗೆ ಆತ್ಮಯೋಗನಿಷ್ಠನಿಗಿಂತ ಭಕ್ತಿಯೋಗನಿಷ್ಠನೇ ಶ್ರೇಷ್ಠನೆಂದೂ, ಭಕ್ತಿಯೋಗವೇ ಶ್ರೇಷ್ಠವಾದ ಧರ್ಮವೂ ಮತ್ತು ಅಮೃತವೂ ಆಗಿದೆ ಎಂದೂ ಪ್ರತಿಪಾದಿಸಿ ಶ್ರೀಕೃಷ್ಣನು ಈ ಅಧ್ಯಾಯದಲ್ಲಿ ಆರಂಭಿಸಿದ ಪ್ರಸಂಗವನ್ನು ವಿವರಿಸಿ ಮುಕ್ತಾಯಗೊಳಿಸಿದ್ದಾನೆ.

ಭಗವದ್ಗೀತೆಯಲ್ಲಿ ತಿಳಿಸಿರುವ ಯೋಗಸಾಧನೆಗಳ ವಿಚಾರವು ಈ ಅಧ್ಯಾಯದಲ್ಲಿ ಪರಮಾವಧಿಯನ್ನು ಮುಟ್ಟಿದೆ ಎನ್ನಬಹುದು. ಎರಡನೆಯ ಅಧ್ಯಾಯದಲ್ಲಿ ಆತ್ಮಸ್ವರೂಪ ಜ್ಞಾನಾನುಸಂಧಾನದೊಂದಿಗೆ ಕೂಡಿರುವ ಕರ್ಮಯೋಗ ವಿಚಾರದಿಂದ ಪ್ರಾರಂಭಿಸಲ್ಪಟ್ಟ ಗೀತೋಪದೇಶವು 6ನೆಯ ಅಧ್ಯಾಯದವರೆಗೆ ಜ್ಞಾನಯೋಗ ವಿಚಾರದೊಂದಿಗೆ ಮುಂದುವರೆಯಲ್ಪಟ್ಟಿದೆ. ಏಳನೆಯ ಅಧ್ಯಾಯದಲ್ಲಿ ಕರ್ಮಜ್ಞಾನ ಯೋಗಗಳೆರಡರಿಂದ ಸಾಧಿಸಲ್ಪಡುವ ಭಕ್ತಿಯೋಗ ವಿಚಾರವು ಪ್ರಾರಂಭಿಸಲ್ಪಟ್ಟು ಹನ್ನೆರಡನೆಯ ಅಧ್ಯಾಯದಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ. ಇಲ್ಲಿ ಭಕ್ತಿಯೋಗದ ಅಭ್ಯಾಸಗಳನ್ನು ಶ್ರೀಕೃಷ್ಣನು ಹಂತಹಂತವಾಗಿ ವಿವರಿಸಿ ತಿಳಿಸಿದ್ದಾನೆ. ಆತ್ಮಸ್ವರೂಪಾನುಸಂಧಾನ ಪೂರ್ವಕವಾಗಿ, ಫಲಾಸಕ್ತಿ ರಹಿತವಾಗಿ ಕರ್ತವ್ಯಕರ್ಮಗಳನ್ನು ಆಚರಿಸುವುದೇ ಮೊದಲನೆಯ ಹಂತವು; ಆ ಕರ್ಮಗಳೆಲ್ಲವೂ ಭಗವಂತನ ಆರಾಧನೆ ಎಂಬ ಪವಿತ್ರಭಾವನೆಯನ್ನು ಹೊಂದಿ, ಭಗವತ್ ಕೈಂಕರ್ಯವೆಂದು ಪ್ರೀತಿಯಿಂದಲೂ, ಭಕ್ತಿಯಿಂದಲೂ ಮಾಡುವುದೇ ಎರಡನೆಯ ಹಂತವು; ಹೀಗೆ ಕರ್ಮಗಳನ್ನು ಮಾಡುವಾಗಲೆಲ್ಲಾ ಭಗವಂತನ ಗುಣಚೇಷ್ಟಿತ ವಿಭೂತಿಗಳನ್ನು ಮನಸ್ಸಿನಲ್ಲಿ ಸ್ಮರಿಸುವ ಅಭ್ಯಾಸ ಮಾಡುತ್ತಾ ಇರಬೇಕು. ಈ ಭಗವತ್ ಗುಣಚಿಂತನ ಅಭ್ಯಾಸಯೋಗವೇ ಮೂರನೆಯ ಹಂತವು; ಇದರಿಂದ ಕೊನೆಗೆ ಪ್ರಾಪ್ತವಾಗುವ, ಭಗವಂತನಲ್ಲೇ ಮನಸ್ಸನ್ನೂ ಬುದ್ಧಿಯನ್ನೂ ಸರ್ವದಾ ನೆಲೆಗೊಳಿಸುವ ಅಭ್ಯಾಸವೇ ನಾಲ್ಕನೆಯ ಹಂತವು. ಅಂದರೆ ಭಗವಂತನಲ್ಲಿ ಅತ್ಯಂತ ಪ್ರೀತಿ ಮತ್ತು ಭಕ್ತಿಗಳಿಂದ ಕೂಡಿದವನಾಗಿ, ತೈಲಧಾರೆಯಂತೆ ಅವಿಚ್ಛಿನ್ನವಾಗಿ

ಭಗವಂತನ ಸ್ವರೂಪ, ರೂಪ, ಗುಣ, ವಿಭೂತಿಗಳ ಚಿಂತನೆಯಲ್ಲಿ ಮನಸ್ಸನ್ನೂ ಬುದ್ಧಿಯನ್ನೂ ನೆಲೆಗೊಳಿಸುವುದೇ ಭಕ್ತಿಯೋಗವು. ಭಕ್ತಿಯೋಗವೇ ಪರಮಶ್ರೇಷ್ಠವು, ಭಕ್ತಿಯೋಗ ನಿಷ್ಠನಾದ ಭಕ್ತನೇ ತನಗೆ (ಪರಮಾತ್ಮನಿಗೆ) ಅತ್ಯಂತ ಪ್ರಿಯನು ಎಂದು ಹೇಳಿರುವುದರಿಂದ ಈ ಅಧ್ಯಾಯಕ್ಕೆ ಭಕ್ತಿಯೋಗ ಎಂದು ಹೆಸರು ಬಂದಿದೆ.

ಹನ್ನೆರಡನೆಯ ಅಧ್ಯಾಯದಲ್ಲಿ ಪ್ರತಿಪಾದಿಸಿರುವ ಅರ್ಥವನ್ನು ಶ್ರೀ ಯಾಮುನಾಚಾರ್ಯರು ಗೀತಾರ್ಥ ಸಂಗ್ರಹದ 16ನೆಯ ಶ್ಲೋಕದಲ್ಲಿ ಹೀಗೆ ತಿಳಿಸಿದ್ದಾರೆ.

**ಭಕ್ತೇಃ ಶ್ರೈಷ್ಠ್ಯಮುಪಾಯೋಕ್ತಿಃ ಅಶಕ್ತಸ್ಯಾತ್ಮ ನಿಷ್ಠತಾ।**
**ತತ್ಪ್ರಕಾರಾಸ್ತ್ವತಿಪ್ರೀತಿಃ ಭಕ್ತೇದ್ವಾದಶ ಉಚ್ಯತೇ॥**

ಆತ್ಮೋಪಾಸನೆಗಿಂತ ಭಗವಂತನ ಉಪಾಸನೆ ಎಂಬ ಭಕ್ತಿಯೇ ಶೀಘ್ರ ಫಲಪ್ರದವೂ, ಸುಖಕರವೂ ಆಗಿ ಶ್ರೇಷ್ಠವಾದುದಾಗಿದೆ ಎಂಬುದೂ, ಭಕ್ತಿಯೋಗದ ಅಭ್ಯಾಸಗಳೂ, ಭಕ್ತಿಯೋಗಾಭ್ಯಾಸಕ್ಕೆ ಅಶಕ್ತನಾದವನಿಗೆ ಆತ್ಮಚಿಂತನೆಯಿಂದ ಕೂಡಿದ ಕರ್ಮಯೋಗಾಭ್ಯಾಸವೂ, ಕರ್ಮಯೋಗಿಯಾದ ಭಕ್ತನಗುಣಗಳೂ, ಭಕ್ತನ ಮೇಲೆ ಭಗವಂತನಿಗೆ ಇರುವ ಅತ್ಯಂತ ಪ್ರೀತಿಯೂ ಹನ್ನೆರಡನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ.

*****

# ಹದಿಮೂರನೆಯ ಅಧ್ಯಾಯ

# ಕ್ಷೇತ್ರಕ್ಷೇತ್ರಜ್ಞಯೋಗ

ವಿಷಯ ಸೂಚಿಕೆ :

I ಶರೀರ ಮತ್ತು ಜೀವಾತ್ಮರ, ಕ್ಷೇತ್ರ ಮತ್ತು ಕ್ಷೇತ್ರಜ್ಞರ, ವಿಚಾರ
(ಶ್ಲೋಕಗಳು 1 ರಿಂದ 4)

II ಕ್ಷೇತ್ರದ ಸ್ವರೂಪ (ಶ್ಲೋಕಗಳು 5 ರಿಂದ 6)

III ಆತ್ಮಸ್ವರೂಪಜ್ಞಾನ ಪಡೆಯಲು ಬೇಕಾದ ಜ್ಞಾನಾಭ್ಯಾಸಗಳು.
(ಶ್ಲೋಕಗಳು 7ರಿಂದ 11)

IV ಆತ್ಮಸ್ವರೂಪ ಶೋಧನೆ. (ಶ್ಲೋಕಗಳು 12ರಿಂದ 18)

V ಆತ್ಮನಿಗೆ ಶರೀರ ಸಂಬಂಧವು ಉಂಟಾಗಿ ಬಂಧನ ಬರುವುದಕ್ಕೆ ಕಾರಣ (ಸತ್ವರಜ ಸ್ತಮೋಗುಣಗಳ ಸಂಬಂಧವೇ ಕಾರಣ) (ಶ್ಲೋಕಗಳು 19ರಿಂದ 23)

VI ದೇಹವೇ ಬೇರೆ, ಆತ್ಮನೇ ಬೇರೆ ಎಂಬ ವಿವೇಕ ಅನುಸಂಧಾನ ಕ್ರಮ.
(ಶ್ಲೋಕಗಳು 24 ರಿಂದ 34)

ಉಪೋದ್ಘಾತ :

ಈ ಅಧ್ಯಾಯದಿಂದ ಗೀತೆಯ ಮೂರನೆಯ ಷಟ್ಕವು ಪ್ರಾರಂಭವಾಗುತ್ತದೆ. ಇದರಲ್ಲಿ ಹಿಂದಿನ 12 ಅಧ್ಯಾಯಗಳ ಮೂಲಕ ಇಲ್ಲಿಯವರೆಗೆ ತಿಳಿಸಿದ ವಿಚಾರಗಳು ಎಲ್ಲವೂ ಮತ್ತೆ ವಿವರವಾಗಿ ವಿವರಿಸಲ್ಪಡುತ್ತವೆ. ಮೊದಲನೆಯ ಆರು ಅಧ್ಯಾಯಗಳಲ್ಲಿ (1 ರಿಂದ 6) ಪ್ರತ್ಯಗಾತ್ಮನ ಸ್ವರೂಪವೂ, ಅದನ್ನು ಸಾಕ್ಷಾತ್ಕರಿಸಲು ಉಪಾಯವಾಗಿ ಕರ್ಮಯೋಗ, ಜ್ಞಾನಯೋಗ ಅಭ್ಯಾಸಗಳೂ, ಅವುಗಳ ಮೂಲಕ ಹೊಂದಲ್ಪಡುವ ಪ್ರತ್ಯಗಾತ್ಮ ಸ್ವರೂಪ ದರ್ಶನವೂ ಮತ್ತು ಈ ಕರ್ಮಯೋಗ, ಜ್ಞಾನಯೋಗಗಳು ಎರಡೂ ಭಕ್ತಿಯೋಗಾಭ್ಯಾಸಕ್ಕೆ ಅಂಗಗಳಾಗಿವೆ ಎಂಬುದೂ ತಿಳಿಸಲ್ಪಟ್ಟಿದೆ. ಎರಡನೆಯ ಆರು ಅಧ್ಯಾಯಗಳಲ್ಲಿ (7ರಿಂದ 12) ಪರಮ

ಪ್ರಾಪ್ಯಭೂತನಾದ ಪರಮಾತ್ಮನ ನಿಜಸ್ವರೂಪವೂ, ಐಶ್ವರ್ಯ ವಿಭೂತಿಗಳಿಂದ ಕೂಡಿರುವ ಅವನ ಮಹಾತ್ಮೆಯೂ, ಅವನನ್ನು ಅರಿಯಲು ಮತ್ತು ಪಡೆಯಲು ಆಚರಿಸಬೇಕಾದ ಭಕ್ತಿಯೋಗನಿಷ್ಠೆಯೂ ಮತ್ತು ಐಶ್ವರ್ಯ ಕೈವಲ್ಯ ಭಗವಲ್ಲಾಭಾದಿ ತ್ರಿವಿದ ಪುರುಷಾರ್ಥಗಳಿಗೂ ಭಕ್ತಿಯೋಗವೇ ಸಾಧನವೆಂಬುದೂ ತಿಳಿಸಲ್ಪಟ್ಟಿವೆ. ಕೊನೆಯಲ್ಲಿ ಅರ್ಜುನನಿಗೆ ಅನುಗ್ರಹಿಸಲ್ಪಟ್ಟ ವಿಶ್ವರೂಪದರ್ಶನವೂ ಮತ್ತು ಭಕ್ತಿಯೋಗದ ಅಭ್ಯಾಸಗಳೂ ವಿವರಿಸಲ್ಪಟ್ಟಿವೆ.

ಈಗ ಈ ಕೊನೆಯ ಷಟ್ಕದಲ್ಲಿ ಅಂದರೆ ಮುಂದಿನ 6 ಅಧ್ಯಾಯಗಳಲ್ಲಿ (13ರಿಂದ 18) ಹಿಂದಿನ 12 ಅಧ್ಯಾಯಗಳಲ್ಲಿ ತಿಳಿಸಿರುವ ಪ್ರಕೃತಿಯ, ಆತ್ಮನ, ಪ್ರಕೃತಿ ಪುರುಷರಿಂದ ಕೂಡಿರುವ ಈ ಜಗತ್ತಿನ ಮತ್ತು ಪರಮಾತ್ಮನ ಸ್ವರೂಪಗಳೂ, ಕರ್ಮ ಜ್ಞಾನ ಭಕ್ತಿಯೋಗಗಳ ಸ್ವರೂಪಗಳೂ, ಅವುಗಳನ್ನು ಆಚರಿಸುವ ಪ್ರಕಾರಗಳೂ ಎಲ್ಲವೂ ಮತ್ತೆ ಸಮನ್ವಯ ಮಾಡಿ ತಿಳಿಸಲ್ಪಟ್ಟಿವೆ.

ಈಗ ಈ 13ನೆಯ ಅಧ್ಯಾಯದಲ್ಲಿ ದೇಹ ಮತ್ತು ಆತ್ಮರ ಸ್ವರೂಪವೂ, ಆತ್ಮಪ್ರಾಪ್ತಿಗೆ ಬೇಕಾದ ಜ್ಞಾನಾಭ್ಯಾಸಗಳೂ, ಪ್ರತ್ಯಗಾತ್ಮಸ್ವರೂಪದ ವಿವರಣೆಯೂ, ಶುದ್ಧ ಆತ್ಮನಿಗೆ ಪ್ರಕೃತಿ ಸಂಬಂಧವುಂಟಾಗಲು ಕಾರಣವೂ ಮತ್ತು ಪ್ರಕೃತಿ ಪುರುಷರ ವಿವೇಕ ಜ್ಞಾನಾನುಸಂಧಾನ ಪ್ರಕಾರವೂ ತಿಳಿಸಲ್ಪಡುತ್ತದೆ.

## I ಶರೀರ ಮತ್ತು ಜೀವಾತ್ಮರ, ಕ್ಷೇತ್ರ ಮತ್ತು ಕ್ಷೇತ್ರಜ್ಞರ ವಿಚಾರ (ಶ್ಲೋಕಗಳು 1 ರಿಂದ 4)

ಶ್ರೀಕೃಷ್ಣನು ಅರ್ಜುನನಿಗೆ ಇವೆಲ್ಲವನ್ನೂ ವಿಶದವಾಗಿ ತಿಳಿಸುತ್ತಾನೆ "ಎಲೈ ಕುಂತೀ ಕುಮಾರನೇ! ಆತ್ಮಕ್ಕೆ ಭೋಗ ಸ್ಥಾನವಾಗಿರುವುದರಿಂದ ಈ ಶರೀರವು ಕ್ಷೇತ್ರವೆಂದು ಕರೆಯಲ್ಪಟ್ಟಿದೆ. ಶರೀರಾತ್ಮ ಸ್ವರೂಪವನ್ನು ತಿಳಿದವರು ಈ ಕ್ಷೇತ್ರವನ್ನು ತಿಳಿಯುವವನು ಕ್ಷೇತ್ರಜ್ಞನು ಎಂದು ಹೇಳುವರು. ಯಾವ ರೀತಿ ಉಳುವ ಭೂಮಿಯು ಸಾಧಾರಣವಾದ ಮನುಷ್ಯನ ಕೆಲಸಗಳಿಗೆ ಉಪಯೋಗವಾಗುತ್ತದೆಯೋ ಅದೇ ರೀತಿ ಶರೀರವು ಆತ್ಮನ ಸಂತೋಷಕ್ಕೆ ಸಹಕರಿಸುತ್ತದೆ. ಆದಕ್ಕೋಸ್ಕರವೇ ಶರೀರವನ್ನು ಕ್ಷೇತ್ರವೆಂದೂ, ಆತ್ಮನನ್ನು ಕ್ಷೇತ್ರಜ್ಞನೆಂದೂ ಕರೆಯುತ್ತಾರೆ. ಶರೀರ ಮತ್ತು ಆತ್ಮನಿಂದ ಭಿನ್ನವಾಗಿ ಅಂತರಾತ್ಮನಾಗಿರುವ ಈಶ್ವರನಾದ ನಾನೇ ಎಲ್ಲಾ ಕ್ಷೇತ್ರಗಳಲ್ಲಿಯೂ ಇರುವ ಕ್ಷೇತ್ರಜ್ಞನು ಎಂಬುದನ್ನು

ತಿಳಿದು ಕೊಳ್ಳುವವನಾಗು. ಎಲ್ಲಾ ಕ್ಷೇತ್ರಗಳೂ, ಅದರೊಳಗಿರುವ ಕ್ಷೇತ್ರಜ್ಞರೂ ನನ್ನನ್ನು ಅಂತರಾತ್ಮನಾಗಿ ಹೊಂದಿ ನನ್ನ ಸಂತೋಷಕ್ಕೋಸ್ಕರವೇ ಇರುತ್ತಾರೆ. ಶರೀರ, ಜೀವಾತ್ಮ ಮತ್ತು ಎಲ್ಲರಿಗೂ ಅಂತರಾತ್ಮನಾಗಿರುವ ನನ್ನನ್ನು ಕುರಿತ ಈ ವಿವೇಕಜ್ಞಾನವೇ ನಿಜವಾಗಿ ಪಡೆಯಬೇಕಾದ ಜ್ಞಾನವೆಂದು ನನ್ನ ಮತವು. ಈ ಕ್ಷೇತ್ರವು ಯಾವ ದ್ರವ್ಯವೋ, ಎಂತಹ ಗುಣಗಳಿಂದ ಕೂಡಿ ಹೇಗೆ ಇರುತ್ತದೆಯೋ, ಅದರ ವಿಕಾರವು ಯಾವುದೋ, ಯಾವ ಪರಿಣಾಮವುಳ್ಳದ್ದೋ, ಯಾವ ಕಾರಣದಿಂದ ಉಂಟಾಗಿದೆಯೋ, ಯಾವ ಪ್ರಯೋಜನಕ್ಕಾಗಿ ಹುಟ್ಟಿದೆಯೋ, ಯಾವ ಸ್ವರೂಪವುಳ್ಳದ್ದೋ ಎಂಬುದನ್ನೂ, ಹಾಗೆಯೇ ಕ್ಷೇತ್ರಜ್ಞನು ಅಂದರೆ ಜೀವಾತ್ಮನು ಎಂತಹ ಮಹಿಮೆಯನ್ನು ಉಳ್ಳವನು ಮತ್ತು ಅವನ ಸಾಮರ್ಥ್ಯವೇನು ಎಂಬ ವಿಚಾರಗಳನ್ನೂ ನನ್ನಿಂದ ಕೇಳು. ಈ ವಿಷಯಗಳು ಪರಾಶರಾದಿ ಋಷಿಗಳಿಂದಲೂ, ಋಗ್ಯಜುಸ್ಸಾಮಾಥರ್ವಣಾದಿ ನಾಲ್ಕು ವೇದಗಳಿಂದಲೂ, ಬ್ರಹ್ಮಸೂತ್ರ ವಾಕ್ಯಗಳಿಂದಲೂ ವಿಧವಿಧವಾದ ರೀತಿಯಿಂದ ನಿರೂಪಿಸಲ್ಪಟ್ಟಿವೆ. ಹೀಗೆ ನಿರೂಪಿಸಲ್ಪಟ್ಟಿರುವ ಕ್ಷೇತ್ರದ ಸ್ವರೂಪವನ್ನೂ ಕ್ಷೇತ್ರಜ್ಞನ ಸ್ವರೂಪವನ್ನೂ ನಿನಗೆ ಸಂಕ್ಷೇಪವಾಗಿ ತಿಳಿಸುತ್ತೇನೆ.

## II ಕ್ಷೇತ್ರದ (ದೇಹದ) ಸ್ವರೂಪ (ಶ್ಲೋಕಗಳು 5 ರಿಂದ 6)

ಮಹಾಭೂತಗಳು, ಅಹಂಕಾರ, ಬುದ್ಧಿ, ಅವ್ಯಕ್ತ ಇವೆಲ್ಲವೂ ಶರೀರದ ಉತ್ಪತ್ತಿಗೆ ಕಾರಣವಾದವುಗಳಾಗಿವೆ. ಪೃಥವೀ, ಅಪ್ಪು, ತೇಜಸ್ಸು ವಾಯು ಮತ್ತು ಆಕಾಶ ಎಂಬ ಪಂಚಮಹಾಭೂತಗಳೂ, ಭೂತಗಳ ಆದಿಕಾರಣವಾದ ಅಹಂಕಾರವೂ, ಮಹತ್ತತ್ವವೆಂಬ ಬುದ್ಧಿಯೂ, ಅವ್ಯಕ್ತವೆಂಬ ಪ್ರಕೃತಿಯೂ, ಶರೀರವನ್ನು ಆಶ್ರಯಿಸಿಕೊಂಡಿರುವ ಮೂಗು, ಕಣ್ಣು, ಕಿವಿ, ಚರ್ಮ, ನಾಲಿಗೆ ಎಂಬ ಐದು ಜ್ಞಾನೇಂದ್ರಿಯಗಳೂ, ವಾಕ್ಕು, ಕೈಗಳು, ಕಾಲ್ಗಳು, ಪಾಯು, ಉಪಸ್ಥ ಎಂಬ ಐದು ಕರ್ಮೇಂದ್ರಿಯಗಳೂ ಮತ್ತು ಮನಸ್ಸು - ಒಟ್ಟು ಹನ್ನೊಂದು ಇಂದ್ರಿಯಗಳೂ, ಕಿವಿ ಮುಂತಾದ ಪಂಚೇಂದ್ರಿಯಗಳಿಗೆ ಗೋಚರಿಸುವ ಶಬ್ದ, ಸ್ಪರ್ಶ, ರೂಪ, ರಸ, ಗಂಧವೆಂಬ ವಿಷಯಗಳೂ, ಇಚ್ಛೆ, ದ್ವೇಷ, ಸುಖ ದುಃಖಾದಿ ಕ್ಷೇತ್ರಕಾರ್ಯಗಳಾದ ಕ್ಷೇತ್ರ ವಿಕಾರಗಳೂ ಇವೆಲ್ಲವುಗಳ ಸೇರುವಿಕೆಯಿಂದ ಉಂಟಾಗುವ ಪರಿಣಾಮವೇ ಕ್ಷೇತ್ರ ಅಂದರೆ ಶರೀರವೆಂದು ಸಂಗ್ರಹವಾಗಿ ಹೇಳಲ್ಪಟ್ಟಿದೆ.

**III ಆತ್ಮಸ್ವರೂಪಜ್ಞಾನ ಪಡೆಯಲು ಬೇಕಾದ ಜ್ಞಾನಾಭ್ಯಾಸಗಳು.**
**(ಶ್ಲೋಕಗಳು 7 ರಿಂದ 11)**

**ಅಮಾನಿತ್ವಂ** - ಉತ್ತಮ ಪುರುಷರನ್ನು ಅಗೌರವದಿಂದ ಕಾಣುವ ಗರ್ವವು ಇಲ್ಲದಿರುವಿಕೆ, **ಅದಂಭಿತ್ವಂ** - ತಾನು ಧರ್ಮಾನುಷ್ಠಾನ ಮಾಡುವವನು ಎಂದು ಇತರರಿಗೆ ತೋರಿಸಿಕೊಳ್ಳಲೆಂದೇ ಧರ್ಮಾಚರಣೆ ಮಾಡುವ ಢಂಬವಿಲ್ಲದೇ ಇರುವಿಕೆ, **ಅಹಿಂಸೆ** - ಕಾಯಾವಾಚಾಮನಸಾ ಇತರರಿಗೆ ಹಿಂಸೆಯನ್ನು ಮಾಡದೆ ಇರುವಿಕೆ, **ಕ್ಷಾಂತಿ** - ಇತರರು ತನ್ನನ್ನು ಹಿಂಸೆ ಮಾಡಿದರೂ ಅವರ ವಿಷಯದಲ್ಲಿ ಚಿತ್ತವಿಕಾರವನ್ನು ಹೊಂದದೆ ತಾಳ್ಮೆಯಿಂದ ಇರುವಿಕೆ, **ಆರ್ಜವಂ** - ಇತರರ ವಿಚಾರದಲ್ಲಿ ಮನಸ್ಸು, ವಾಕ್ಕು ಮತ್ತು ಶರೀರಗಳ ಪ್ರವೃತ್ತಿಯು ಒಂದೇ ರೀತಿಯಾಗಿ ಇರುವ ಋಜು ಸ್ವಭಾವವನ್ನು ಹೊಂದಿರುವಿಕೆ, **ಆಚಾರ್ಯೋಪಾಸನಂ** - ಆತ್ಮಜ್ಞಾನವನ್ನು ತಿಳಿಸುವ ಆಚಾರ್ಯರನ್ನು ಸೇವೆ, ನಮಸ್ಕಾರ, ಪರಿಪ್ರಶ್ನೆ ಮುಂತಾದವುಗಳಿಂದ ಉಪಾಸನೆ ಮಾಡುವಿಕೆ, **ಶೌಚಂ** - ಆತ್ಮಜ್ಞಾನ ಮತ್ತು ಅದರ ಸಾಧನಗಳನ್ನು ಪಡೆಯಲು ಬೇಕಾದ ಶಾಸ್ತ್ರಸಿದ್ಧವಾದ ಮನೋವಾಕ್ಕಾಯಶುದ್ಧಿ **ಸ್ಥೈರ್ಯಂ** - ಅಧ್ಯಾತ್ಮ ಶಾಸ್ತ್ರಗಳು ಹೇಳಿರುವ ತತ್ತ್ವಾರ್ಥಗಳಲ್ಲಿ ನಿಶ್ಚಲವಾದ ಬುದ್ಧಿಯನ್ನು ಹೊಂದಿರುವುದು **ಆತ್ಮವಿನಿಗ್ರಹ** - ಆತ್ಮಸ್ವರೂಪ ವ್ಯತಿರಿಕ್ತವಾದ ವಿಷಯಗಳ ಚಿಂತನೆಯಲ್ಲಿಯೇ ಹರಿಯುತ್ತಿರುವ ಮನಸ್ಸನ್ನು ತಡೆಗಟ್ಟಿ ಅದನ್ನು ಆಧ್ಯಾತ್ಮದಾರಿಯಲ್ಲಿ ತಿರುಗಿಸುವ ಜ್ಞಾನಾಭ್ಯಾಸವು.

**ಇಂದ್ರಿಯಾರ್ಥೇಷು ವೈರಾಗ್ಯಂ** - ಇಂದ್ರಿಯಗಳಲ್ಲಿ ವೈರಾಗ್ಯ; **ಅನಹಂಕಾರ** -ಅಹಂಕಾರವು ಇಲ್ಲದಿರುವಿಕೆ, **ಜನ್ಮಮೃತ್ಯುಜರಾವ್ಯಾಧಿದುಃಖ ದೋಷಾನು ದರ್ಶನಂ** - ಹುಟ್ಟು, ಸಾವು, ಮುಪ್ಪು, ವ್ಯಾಧಿ ಮತ್ತು ಚಿಂತೆ ಮೊದಲಾದುವುಗಳು ಅನಿವಾರ್ಯಗಳು ಎಂಬುದನ್ನು ಅನುಸಂಧಾನ ಮಾಡುತ್ತಾ ಇರುವುದು; **ಅಸಕ್ತಿರನಭಿಷ್ವಂಗಃ ಪುತ್ರದಾರಗೃಹಾದಿಷು** - ಆತ್ಮವ್ಯತಿರಿಕ್ತವಾದ ವಿಷಯದಲ್ಲಿ ಆಸಕ್ತಿ ಇಲ್ಲದೇ ಇರುವುದು; ಹೆಂಡತಿ, ಮಕ್ಕಳು, ಮನೆಮಠಗಳಲ್ಲಿ ತನ್ನದೆಂಬ ಮೋಹವು ಇಲ್ಲದೇ ಇರುವುದು; **ನಿತ್ಯಂಚ ಸಮಚಿತ್ತತ್ವಂ ಇಷ್ಟಾನಿಷ್ಟೋಪಪತ್ತಿಷು** - ಪ್ರಾಪ್ತವಾದ ಇಷ್ಟಾನಿಷ್ಟಗಳೆರಡರಲ್ಲಿಯೂ ಮನಸ್ಸಿನಲ್ಲಿ ಸಂತೋಷವಾಗಲೀ, ಉದ್ವೇಗವಾಗಲೀ ಇಲ್ಲದೆ ಯಾವಾಗಲೂ ಸಮಚಿತ್ತನಾಗಿ ಇರುವುದು; **ಮಯಿ ಅನನ್ಯ ಯೋಗೇನ ಅವ್ಯಭಿಚಾರಿಣೀ ಭಕ್ತಿಃ** -ಸರ್ವೇಶ್ವರನಾದ ನನ್ನಲ್ಲಿ ಏಕನಿಷ್ಠೆಯಿಂದ ಕೂಡಿದ

ಸ್ಥಿರಭಕ್ತಿಯನ್ನು ಹೊಂದಿರುವುದು; ವಿವಿಕ್ತದೇಶಸೇವಿತ್ವಂ - ಏಕಾಂತ ಸ್ಥಳದಲ್ಲಿ ವಾಸ ಮಾಡುವುದು; **ಅರತಿರ್ಜನಸಂಸದಿ** - ಜನಸಮೂಹದೊಡನೆ ಕಲೆತಿರುವುದರಲ್ಲಿ ಆಸೆ ಇಲ್ಲದಿರುವುದು;

**ಅಧ್ಯಾತ್ಮಜ್ಞಾನ ನಿತ್ಯತ್ವಂ** - ಆತ್ಮಜ್ಞಾನದಲ್ಲಿ ಸ್ಥಿರಬುದ್ಧಿಯನ್ನು ಹೊಂದಿರುವುದು; **ತತ್ವಜ್ಞಾನಾರ್ಥದರ್ಶನಂ** - ತತ್ವಜ್ಞಾನಕ್ಕಾಗಿ ಶಾಸ್ತ್ರಾರ್ಥಗಳನ್ನು ತಿಳಿಯುವುದು; ಇವೆಲ್ಲವೂ ಜ್ಞಾನವೆಂದೂ, ಇದಕ್ಕೆ ವಿರುದ್ಧವಾದವುಗಳೆಲ್ಲವೂ ಜ್ಞಾನಕ್ಕೆ ವಿರೋಧಿಯಾದ ಅಜ್ಞಾನವೆಂದೂ ಹೇಳಲ್ಪಟ್ಟಿದೆ.

## IV ಆತ್ಮಸ್ವರೂಪ ಶೋಧನೆ. (ಶ್ಲೋಕಗಳು 12ರಿಂದ 18)

ಅರ್ಜುನಾ, ಯಾವುದು ಅಮಾನಿತ್ವಾದಿ ಸಾಧನಗಳ ಮೂಲಕ ತಿಳಿಯಬೇಕಾದುದೋ, ಯಾವುದನ್ನು ತಿಳಿದರೆ ಅಮೃತತ್ವವು ಲಭಿಸುವುದೋ ಆ ಪ್ರತ್ಯಗಾತ್ಮ ಸ್ವರೂಪವನ್ನು ನಿನಗೆ ತಿಳಿಸುವೆನು. ಅದು ಆದಿ ಇಲ್ಲದ್ದು, ನನ್ನನ್ನೇ ಆಧಾರವಾಗಿ ಉಳ್ಳದ್ದು. ಈ ಆತ್ಮನಿಗೆ ಕಾರ್ಯ ಕಾರಣಾವಸ್ಥೆಗಳು ಇಲ್ಲದೇ ಇರುವುದರಿಂದ ಈ ಪರಿಶುದ್ಧವಾದ ಆತ್ಮ ಸ್ವರೂಪವು ಸತ್ ಅಸತ್ ಶಬ್ದಗಳಿಂದ ವ್ಯವಹರಿಸಲ್ಪಡಲು ಅಯೋಗ್ಯವಾದುದು. ಈ ಶುದ್ಧಾತ್ಮ ಸ್ವರೂಪವು ದೇಶಾದಿಗಳ ಪರಿಚ್ಛೇದ ರಹಿತವಾಗಿ ಲೋಕದಲ್ಲಿ ಸರ್ವವನ್ನೂ ವ್ಯಾಪಿಸಿಕೊಂಡಿದೆ.

ಇದು ಎಲ್ಲಾ ವಸ್ತುಗಳಲ್ಲಿಯೂ ಕೈಕಾಲುಗಳಿಂದಲೂ, ಕಣ್ಣು, ತಲೆ, ಮುಖ, ಕಿವಿ ಇವುಗಳಿಂದಲೂ ಮಾಡಬಲ್ಲ ಕಾರ್ಯವನ್ನು ಮಾಡಬಲ್ಲದು. ಅಂದರೆ ಎಲ್ಲಾ ಇಂದ್ರಿಯಗಳಿಂದ ಮಾಡಲಾಗುವ ಕಾರ್ಯಗಳನ್ನು ಮಾಡಬಲ್ಲದು. ಇದು ಇಂದ್ರಿಯಗಳ ಪ್ರವೃತ್ತಿಗಳ ಮೂಲಕ ವಿಷಯಗಳನ್ನು ಗ್ರಹಿಸಬಲ್ಲದು. ಆದರೆ ಯಾವ ಇಂದ್ರಿಯವೂ ಇಲ್ಲದುದು. ಸ್ವಭಾವದಿಂದಲೇ ತಾನಾಗಿಯೇ ಎಲ್ಲವನ್ನು ಅರಿಯುವ ಶಕ್ತಿ ಉಳ್ಳದ್ದು. ದೇವಾದಿ ಶರೀರಗಳಲ್ಲಿ ಅಭಿಮಾನವು ಇಲ್ಲದೇ ಇದ್ದರೂ ದೇವಾದಿ ಶರೀರಗಳೆಲ್ಲವನ್ನೂ ಧರಿಸುವ ಶಕ್ತಿ ಉಳ್ಳದ್ದು. ತನ್ನ ಸ್ವಭಾವದಲ್ಲಿ ಸತ್ತ್ವರಜಸ್ತಮೋಗುಣಗಳು ಇಲ್ಲದಿದ್ದರೂ ಆ ಗುಣಗಳನ್ನು ಅನುಭವಿಸುವ ಸಾಮರ್ಥ್ಯವುಳ್ಳದ್ದು. ಪೃಥಿವೀ ಮೊದಲಾದ ಪಂಚಭೂತಗಳನ್ನು ಪರಿತ್ಯಜಿಸಿ ಶರೀರದ ಹೊರಗೆ ಮತ್ತು ಒಳಗೆ ಇರುವಂತಹುದೂ ಆಗಿದೆ. ಸ್ವಾಭಾವಿಕವಾಗಿ ಚಲನ ಸ್ವಭಾವವು ಇಲ್ಲದಿದ್ದರೂ ಶರೀರ ಸಂಬಂಧದ ಮೂಲಕ ಚಲನಸ್ವಭಾವವುಳ್ಳದ್ದು.

ಆತ್ಮವು ಅತಿಸೂಕ್ಷ್ಮವಾಗಿರುವುದರಿಂದ ಅದನ್ನು ಶರೀರದಿಂದ ಬೇರೆಯಾಗಿ ಯಾರೂ ತಿಳಿದುಕೊಳ್ಳಲು ಆಗುವುದಿಲ್ಲ. ಅದು ಅಮಾನಿತ್ವ ಮೊದಲಾದ ಗುಣಗಳಿಲ್ಲದೆ ವಿಪರೀತ ಗುಣವುಳ್ಳ ಚೇತನರಿಗೆ ಅವರ ದೇಹದಲ್ಲಿ ಇದ್ದರೂ ಅತಿ ದೂರವಾಗಿ ಇರುತ್ತದೆ. ಆದರೆ ಆ ಗುಣಗಳನ್ನೆಲ್ಲಾ ಹೊಂದಿರುವ ಜ್ಞಾನಿಗಳಾದ ಯೋಗಿಗಳಿಗೆ ಅವರ ಸಮೀಪದಲ್ಲಿಯೇ ಇರುತ್ತದೆ. ದೇವ, ಮನುಷ್ಯ ಮೊದಲಾದ ಎಲ್ಲಾ ಭೂತಗಳಲ್ಲಿಯೂ ಇರತಕ್ಕ ಆತ್ಮವು ಏಕಾಕಾರವಾಗಿದ್ದರೂ ಅಜ್ಞಾನಿಗಳಿಗೆ ಅವನು ದೇವನು, ಇವನು ಮನುಷ್ಯನು ಎಂಬುದಾಗಿ ಬೇರೆ ಬೇರೆಯಾಗಿ ತೋರುತ್ತದೆ. ಜ್ಞಾನವಿಷಯವಾದ ಈ ಆತ್ಮವು ದೇಹರೂಪದಲ್ಲಿರುವ ಪಂಚಭೂತಗಳನ್ನು ಭರಣಮಾಡತಕ್ಕದ್ದೂ ಅನ್ನಾದಿ ಭೌತಿಕಪದಾರ್ಥಗಳನ್ನು ಭಕ್ಷಿಸುವಂತಹದೂ ಮತ್ತು ಉತ್ಪತ್ತಿಗೆ ಕಾರಣವಾದುದೂ ಆಗಿದೆ. ಮೃತ ಶರೀರದಲ್ಲಿ ಭಕ್ಷಿಸುವ ಮತ್ತು ಉತ್ಪತ್ತಿಮಾಡುವ ಶಕ್ತಿಯು ಕಾಣುವುದಿಲ್ಲ. ಆದ್ದರಿಂದ ಪಂಚಭೂತಗಳ ಸಮುದಾಯ ರೂಪವಾದ ಶರೀರಕ್ಕೆ ಭಕ್ಷಿಸುವ, ಉತ್ಪನ್ನ ಮಾಡುವ ಮತ್ತು ಭರಣಮಾಡುವ ಶಕ್ತಿಯಿಲ್ಲ, ಅದೆಲ್ಲವೂ ಅದನ್ನು ಭರಿಸುವ ಆತ್ಮನ ಕಾರ್ಯವಾಗಿದೆ.

ಆತ್ಮಸ್ವರೂಪವು ದೀಪ, ಸೂರ್ಯ, ಮಣಿ ಮುಂತಾದ ಜ್ಯೋತಿಗಳಿಗೆಲ್ಲಾ ಜ್ಯೋತಿಯಾಗಿರುವುದು. ದೀಪವೇ ಮೊದಲಾದವುಗಳು ಕತ್ತಲೆಯನ್ನು ಹೋಗಲಾಡಿಸುತ್ತವೆ ಆದರೆ ಆತ್ಮನ ಪ್ರಭೆಯಾದ ಜ್ಞಾನವು ದೀಪಾದಿಗಳನ್ನು ಪ್ರಕಾಶಪಡಿಸುತ್ತದೆ. ತಮಸ್ಸೆಂದು ಹೇಳಲ್ಪಡುವ ಸೂಕ್ಷ್ಮ ಅವಸ್ಥೆಯಲ್ಲಿರುವ ಪ್ರಕೃತಿಗಿಂತ ಈ ಆತ್ಮವು ಶ್ರೇಷ್ಠವಾದುದು ಇದು ಜ್ಞಾನವೆಂದು ತಿಳಿಯತಕ್ಕುದಾಗಿದೆ. ಅಂದರೆ ಜ್ಞಾನವೊಂದನ್ನೇ ಆಕಾರವಾಗಿ ಹೊಂದಿರುವಂತಹು ದಾಗಿದೆ. ಮತ್ತು ಅಮಾನಿತ್ವವೇ ಮೊದಲಾದ ಜ್ಞಾನಸಾಧನದಿಂದ ಪ್ರಾಪ್ಯವಾಗ ತಕ್ಕದ್ದಾಗಿ ಜ್ಞಾನಗಮ್ಯವಾಗಿದೆ. ಮನುಷ್ಯಾದಿ ಎಲ್ಲಾ ಪ್ರಾಣಿಗಳ ಹೃದಯದಲ್ಲಿಯೂ ವಿಶೇಷ ರೂಪದಲ್ಲಿ ನೆಲೆಸಿದೆ. ಹೀಗೆ ಕ್ಷೇತ್ರವಾದ ಶರೀರದ ಸ್ವರೂಪವೂ, ಆತ್ಮ ತತ್ವವನ್ನು ತಿಳಿಯಲು ಬೇಕಾದ ಜ್ಞಾನದ ಸ್ವರೂಪವೂ, ಆ ಜ್ಞಾನದಿಂದ ತಿಳಿಯಬಹುದಾದ ಕ್ಷೇತ್ರಜ್ಞನ ಅಥವಾ ಜೀವಾತ್ಮನ ಸ್ವರೂಪವೂ ನನ್ನಿಂದ ನಿನಗೆ ಸಂಗ್ರಹವಾಗಿ ಹೇಳಲ್ಪಟ್ಟಿತು. ಹೀಗೆ ಕ್ಷೇತ್ರವಾದ ಶರೀರದ ಸ್ವರೂಪವನ್ನೂ, ಜ್ಞೇಯ ವಸ್ತುವಾದ ಆತ್ಮನ ಸ್ವರೂಪವನ್ನೂ ಆತ್ಮಸಾಕ್ಷಾತ್ಕಾರಕ್ಕೆ ಉಪಾಯವಾದ ಅಮಾನಿತ್ವಾದಿ ಜ್ಞಾನ ಸಾಧನವನ್ನೂ ಚೆನ್ನಾಗಿ

ಅರಿತುಕೊಂಡು ನನ್ನ ಭಕ್ತನು ನನ್ನ ಸ್ವಭಾವವನ್ನು ಅಂದರೆ ಅಸಂಸಾರಿಭಾವವನ್ನು ಹೊಂದಲು ಅರ್ಹನಾಗುವನು.

**V ಆತ್ಮನಿಗೆ ಶರೀರ ಸಂಬಂಧವು ಉಂಟಾಗಿ ಬಂಧನ ಬರುವುದಕ್ಕೆ ಕಾರಣ (ಸತ್ವರಜಸ್ತಮೋಗುಣಗಳ ಸಂಬಂಧವೇ ಕಾರಣ) (ಶ್ಲೋಕಗಳು 19 ರಿಂದ 23)**

ಪ್ರಕೃತಿಯೂ ಅನಾದಿಯಾದುದು, ಪುರುಷನೂ ಅನಾದಿಯಾದವನು; ಬೇರೆ ಬೇರೆ ಸ್ವಭಾವವುಳ್ಳ ಪ್ರಕೃತಿ ಮತ್ತು ಪುರುಷರ ಸಂಸರ್ಗವೂ ಅನಾದಿಯಾದುದು. ಈ ಪ್ರಕೃತಿ ಸಂಬಂಧದಿಂದಲೇ ಆತ್ಮನಿಗೆ ಇಚ್ಛೆ ದ್ವೇಷ ಮೊದಲಾದ ಬಂಧಕ್ಕೆ ಕಾರಣಗಳಾದ ಮನೋವಿಕಾರಗಳೂ, ಮೋಕ್ಷಕ್ಕೆ ಹೇತುವಾದ ಅಮಾನಿತ್ವಾದಿ ಗುಣಗಳೂ ಉಂಟಾಗತಕ್ಕವುಗಳೆಂದು ತಿಳಿ. ಪುರುಷನೊಡನೆ ಸೇರಿದ ಶರೀರದ ಆಕಾರದಲ್ಲಿರುವ ಈ ಪ್ರಕೃತಿಯು ತನ್ನ ವಿಕಾರಗಳಾದ ಇಚ್ಛಾ ದ್ವೇಷಗಳಿಂದ ಪುರುಷನಿಗೆ ಬಂಧವನ್ನು ಉಂಟುಮಾಡುತ್ತದೆ. ಅದೇ ತನ್ನ ವಿಕಾರಗಳಾದ ಅಮಾನಿತ್ವಾದಿಗಳಿಂದ ಪುರುಷನಿಗೆ ಮೋಕ್ಷವನ್ನೂ ಉಂಟುಮಾಡುತ್ತದೆ. ಪುರುಷನಿಂದ ಅಧಿಷ್ಠಿತವಾದ ಪ್ರಕೃತಿಯೇ ಕಾರ್ಯಕಾರಣ ಕರ್ತೃತ್ವಾದಿಗಳಿಗೆಲ್ಲಾ ಕಾರಣವಾಗಿದೆ. ಆ ಪ್ರಕೃತಿಯೊಂದಿಗೆ ಸೇರಿರುವ ಪುರುಷನು ಅದರಿಂದ ಆಗುವ ಸುಖ ದುಃಖಗಳ ಅನುಭವಕ್ಕೆ ಆಶ್ರಯನಾಗಿದ್ದಾನೆ. ಅಂದರೆ ಆ ಪ್ರಕೃತಿಯ ಕಾರ್ಯಗಳಿಂದ ಉಂಟಾಗುವ ಸುಖ ದುಃಖಾದಿಗಳನ್ನು ಅನುಭವಿಸುವವನಾಗಿದ್ದಾನೆ. ಹೀಗೆ ಪರಸ್ಪರ ಸೇರಿಕೊಂಡಿರುವ ಈ ಪ್ರಕೃತಿ ಮತ್ತು ಪುರುಷರ (ಶರೀರ ಮತ್ತು ಜೀವಾತ್ಮರ) ಕಾರ್ಯಗಳು ಬೇರೆ ಬೇರೆಯಾಗಿವೆ. ಸತ್ವರಜಸ್ತಮಸ್ಸುಗಳೆಂಬ ಪ್ರಕೃತಿಯ ಗುಣಗಳ ಸಂಬಂಧವೇ ಪುರುಷನು ಒಳ್ಳೆಯ ಮತ್ತು ಕೆಟ್ಟ ಯೋನಿಗಳಲ್ಲಿ ಹುಟ್ಟುವುದಕ್ಕೆ ಕಾರಣವಾಗಿದೆ. ಅದು ಹೇಗೆಂದರೆ ದೇವ ಮನುಷ್ಯಾದಿ ಬೇರೆ ಬೇರೆ ಶರೀರಗಳಲ್ಲಿ ನೆಲೆಸಿರುವ ಈ ಪುರುಷನು ಆಯಾ ಶರೀರಗಳಲ್ಲಿ ಪ್ರಾಪ್ತವಾಗುವ ಸತ್ವಾದಿ ಗುಣಗಳಿಂದ ಉಂಟಾಗುವ ಸುಖದುಃಖಾದಿಗಳಲ್ಲಿ ಆಸಕ್ತನಾಗಿ ಪುಣ್ಯಪಾಪ ಕರ್ಮಗಳನ್ನು ಮಾಡುತ್ತಾನೆ. ಆ ಪುಣ್ಯ ಪಾಪ ಫಲಗಳಿಗೆ ಅನುಗುಣವಾಗಿ ಒಳ್ಳೆಯ ಮತ್ತು ಕೆಟ್ಟ ಅಂದರೆ ಶುಭಾಶುಭ ಯೋನಿಗಳಲ್ಲಿ ಮತ್ತೆ ಜನ್ಮ ಹೊಂದುತ್ತಾನೆ. ಮತ್ತೆ ಆ ಯೋನಿಯಲ್ಲಿ ಕರ್ಮ ಮಾಡುತ್ತಾನೆ. ಮತ್ತೆ ಹುಟ್ಟುತ್ತಾನೆ. ಈ ರೀತಿ ಎಂದಿನವರೆಗೆ ಅವನು ಅಮಾನಿತ್ವಾದಿ ಗುಣಗಳನ್ನು ಆಚರಿಸುವುದಿಲ್ಲವೋ ಅಂದಿನವರೆಗೆ ಜನ್ಮ ಜನ್ಮಗಳಲ್ಲಿ ಹುಟ್ಟುವ, ಸಾಯುವ ಚಕ್ರದಲ್ಲಿ ತಿರುಗುತ್ತಿರುತ್ತಾನೆ.

ಹೀಗೆ ಉತ್ತಮವಾದ ಮತ್ತು ನಿಕೃಷ್ಟವಾದ ಜನ್ಮಗಳನ್ನು ಹೊಂದಿರುವ ಪುರುಷನ ಅಂದರೆ ಆತ್ಮನ ಮೇಲಾದ ಸ್ವಭಾವವನ್ನು, ದೇಹವೇ ಬೇರೆ ಆತ್ಮನೇ ಬೇರೆ ಎಂಬ ವಿವೇಕಾನುಸಂಧಾನದ ಕ್ರಮವನ್ನು ಮತ್ತು ಅದರ ಫಲವನ್ನು ತಿಳಿಸುತ್ತೇನೆ ಕೇಳು. ಆತ್ಮನು ದೇಹಕ್ಕಿಂತ ಬೇರೆಯಾದವನಾಗಿ ಆ ದೇಹದಲ್ಲಿದ್ದು ಆಯಾ ದೇಹಗಳಿಗೆ ಅನುಗುಣವಾಗಿ ಪ್ರೀತಿಯಿಂದ ಅವುಗಳನ್ನು ಧರಿಸುತ್ತಾನೆ ಮತ್ತು ತಾನು ಧರಿಸಿಕೊಂಡಿರುವ ಶರೀರಕ್ಕೆ ತಾನೇ ಉಪದ್ರಷ್ಟಾ, ಅನುಮಂತಾ, ಭರ್ತಾ, ಭೋಕ್ತಾ, ಮಹೇಶ್ವರ ಮತ್ತು ಪರಮೇಶ್ವರನೂ ಸಹ ಆಗಿದ್ದಾನೆ. ಅದು ಹೇಗೆಂದರೆ ದೇಹಕ್ಕಿಂತ ಬೇರೆಯಾದ ಈ ಆತ್ಮನು ದೇಹದ ವ್ಯವಹಾರಾದಿಗಳನ್ನು ಸಾಕ್ಷಿಯಾಗಿ ನೋಡುತ್ತಿರುವುದರಿಂದ **ಉಪದ್ರಷ್ಟಾ** ಆಗಿದ್ದಾನೆ. ಶರೀರದ ವ್ಯಾಪಾರಗಳನ್ನು ಮುಂದುವರಿಸಲು ಅನುಮತಿಸುವವನಾಗಿ **ಅನುಮಂತಾ** ಆಗಿದ್ದಾನೆ. ಶರೀರದ ಧಾರಕನಾಗಿ ಶರೀರಕ್ಕೆ **ಭರ್ತಾ** ಅಂದರೆ ಯಜಮಾನನಾಗಿದ್ದಾನೆ. ಅದರಿಂದ ಉಂಟಾಗುವ ಸುಖ-ದುಃಖಗಳನ್ನು ಅನುಭವಿಸುವವನಾಗಿ **ಭೋಕ್ತಾ** ಆಗಿದ್ದಾನೆ. ಹೀಗೆ ದೇಹವನ್ನು ನಿಯಮಿಸುವವನೂ, ದೇಹವನ್ನು ಧರಿಸುವವನೂ, ಪೋಷಿಸುವವನೂ, ದೇಹಕ್ಕೆ ಶೇಷಿಯೂ (ಸ್ವಾಮಿ) ಆಗಿ ದೇಹೇಂದ್ರಿಯ ಮನಗಳಿಗೆಲ್ಲಾ **ಮಹೇಶ್ವರನಾಗಿದ್ದಾನೆ.** ಅದೇ ರೀತಿ ಈ ಪುರುಷನು ತನ್ನ ದೇಹೇಂದ್ರಿಯ ಮನಸ್ಸು ಇವುಗಳಿಗೆಲ್ಲಾ ಪರಮಾತ್ಮನೂ ಆಗಿದ್ದಾನೆಂದು ಹೇಳಿದೆ "ಅನಾದಿಮತ್ ಪರಂಬ್ರಹ್ಮ" ಎಂದು ಮೇಲೆ ವರ್ಣಿಸಿ ತಿಳಿಸಿರುವ ಅಪರಿಚ್ಛಿನ್ನವಾದ ಜ್ಞಾನಶಕ್ತಿಗಳನ್ನು ಪಡೆದಿರುವ ಈ ಪುರುಷನು ತನ್ನ ಈ ಶರೀರಕ್ಕೆ ಮಾತ್ರ ಪರಮೇಶ್ವರನೂ, ಪರಮಾತ್ಮನೂ ಆಗಿದ್ದಾನೆ. ಯಾವನು ಮೇಲೆ ತಿಳಿಸಿದ ಸ್ವಭಾವವನ್ನು ಪಡೆದಿರುವ ಈ ಪುರುಷನನ್ನೂ (ಆತ್ಮನನ್ನೂ). ಸತ್ವಾದಿಗುಣಗಳಿಂದ ಕೂಡಿದ ಈ ಪ್ರಕೃತಿಯನ್ನೂ ತಿಳಿಯುವನೋ ಅವನು ಶರೀರದಲ್ಲಿ ಎಂತಹ ಸ್ಥಿತಿಯಲ್ಲಿದ್ದರೂ ಅಂದರೆ ಎಂತಹ ಕಷ್ಟವಾದ ಪರಿಸ್ಥಿತಿಯಲ್ಲಿದ್ದರೂ ಕೂಡ ತಿರುಗಿ ಜನ್ಮವನ್ನು ಪಡೆಯುವುದಿಲ್ಲ. ದೇಹಾವಸಾನ ಸಮಯದಲ್ಲಿ ಅಪರಿಚ್ಛಿನ್ನ ಜ್ಞಾನ ಸ್ವರೂಪವಾದ ಆತ್ಮ ಸ್ವರೂಪವನ್ನು ಪಡೆಯುತ್ತಾನೆ.

## VI ದೇಹವೇ ಬೇರೆ, ಆತ್ಮನೇ ಬೇರೆ ಎಂಬ ವಿವೇಕ ಅನುಸಂಧಾನ ಕ್ರಮ.
**(ಶ್ಲೋಕಗಳು 24 ರಿಂದ 34)**

ಯೋಗಸಿದ್ಧಿ ಪಡೆದಿರುವ ಕೆಲವರು ದೇಹದಲ್ಲಿರುವ ಆತ್ಮನನ್ನು ಧ್ಯಾನದ

ಮೂಲಕ ಅಂದರೆ ಭಕ್ತಿಯೋಗದ ಮೂಲಕ ಮನಸ್ಸಿನಲ್ಲಿ ನೋಡುತ್ತಾರೆ. ಇನ್ನು ಕೆಲವರು ಜ್ಞಾನಯೋಗದಿಂದ ಮನಸ್ಸನ್ನು ಯೋಗಕ್ಕೆ ಯೋಗ್ಯವಾಗಿ ಮಾಡಿ ಆತ್ಮನನ್ನು ನೋಡುತ್ತಾರೆ. ಜ್ಞಾನ ಯೋಗಕ್ಕೂ ಅರ್ಹರಲ್ಲದವರು ಕರ್ಮಯೋಗದಿಂದ, ಆದರಲ್ಲಿ ಅಂತರ್ಗತವಾಗಿರುವ ಜ್ಞಾನಬಲದಿಂದ ಮನಃ ಪರಿಪಾಕ ಹೊಂದಿ ಆತ್ಮನನ್ನು ನೋಡುತ್ತಾರೆ. ಕರ್ಮಯೋಗದಲ್ಲಿಯೂ ಅಧಿಕಾರವಿಲ್ಲದ ಮತ್ತೆ ಕೆಲವರು ಏನೂ ತಿಳಿಯದವರಾಗಿ, ಜ್ಞಾನಿಗಳಿಂದ ಕೇಳಿ ತಿಳಿದು ಆತ್ಮನನ್ನು ಉಪಾಸಿಸುತ್ತಾರೆ. ಶ್ರವಣ ಮಾಡುವುದರಲ್ಲಿ ಅಂದರೆ ಹೀಗೆ ಕೇಳುವುದರಲ್ಲಿಯೇ ಆಸೆಯುಳ್ಳುವರೂ ಕೂಡ, ಪಾಪದಿಂದ ಮುಕ್ತರಾಗಿ ಕಾಲಕ್ರಮದಲ್ಲಿ ಕರ್ಮಯೋಗಾದಿಗಳನ್ನು ಆಚರಿಸಲು ಪ್ರಾರಂಭಿಸಿ ಕೊನೆಗೆ ಸಂಸಾರರೂಪವಾದ ಮೃತ್ಯುವನ್ನು ದಾಟಿಯೇ ದಾಟುತ್ತಾರೆ.

ಎಲೈ ಅರ್ಜುನನೇ! ಚರಾಚರರೂಪವಾದ ಯಾವುದೊಂದು ಜಂತುವು ಹುಟ್ಟಿದರೂ ಅದು ಪ್ರಕೃತಿ ಮತ್ತು ಆತ್ಮ ಇವೆರಡರ ಸಂಪರ್ಕದಿಂದಲೇ ಹುಟ್ಟಿದುದಾಗಿ ತಿಳಿಯುವವನಾಗು. ಸಮಸ್ತ ಪ್ರಾಣಿಗಳಲ್ಲಿಯೂ ಸಮವಾಗಿ ಇರುವಂತಹ ಮತ್ತು ದೇಹೇಂದ್ರಿಯಾದಿಗಳಿಗೆಲ್ಲಾ ನಿಯಾಮಕನಾದ ಆತ್ಮನು ತನಗೆ ಆಶ್ರಯವಾಗಿರುವ ತನ್ನ ಶರೀರವು ನಾಶವಾದರೂ ತಾನು ನಾಶವನ್ನು ಹೊಂದುವುದಿಲ್ಲ ಎಂಬುದನ್ನು ಯಾವನು ತಿಳಿಯುತ್ತಾನೆಯೋ ಅವನೇ ಜ್ಞಾನಿಯು. ಆದರೆ ಆತ್ಮನನ್ನು ದೇವಮನುಷ್ಯಾದಿ ವಿಷಮಾಕಾರ ಉಳ್ಳವನನ್ನಾಗಿಯೂ, ಜನ್ಮ ಮರಣಗಳನ್ನು ಉಳ್ಳವನನ್ನಾಗಿಯೂ ನೋಡುವವನು ಸಂಸಾರಚಕ್ರದಲ್ಲಿ ಸುತ್ತುತ್ತಿರುತ್ತಾನೆ. ಆತ್ಮಜ್ಞಾನಿಯು ಸಮಸ್ತ ಶರೀರಗಳಲ್ಲಿಯೂ ಅವುಗಳಿಗೆ ಸ್ವಾಮಿಯೂ, ನಿಯಾಮಕನೂ ಆಗಿ ನೆಲೆಸಿರುವ ಆತ್ಮನನ್ನು ದೇಹಾದಿ ವಿಷಮಾಕಾರವುಳ್ಳವನನ್ನಾಗಿ ತಿಳಿಯದೆ, ಜ್ಞಾನಾಕಾರದಿಂದ ಸಮನಾಗಿ ತಿಳಿದುಕೊಂಡು ಪರಮಗತಿಯನ್ನು ಹೊಂದುವನು ಮತ್ತು ಆತ್ಮನನ್ನು ಭವಸಾಗರದಲ್ಲಿ ತಳ್ಳಿ ಕೆಡಿಸಲಾರನು. ಸಮಸ್ತ ಕರ್ಮಗಳೂ ಪ್ರಕೃತಿಯಿಂದ ಮಾಡಲ್ಪಟ್ಟವುಗಳು ಎಂದೂ, ಜ್ಞಾನ ಸ್ವರೂಪನಾದ ಆತ್ಮನು ಅವುಗಳಿಗೆ ಕರ್ತೃವಲ್ಲ ಎಂದೂ ತಿಳಿಯುವವನು ಯಥಾರ್ಥವನ್ನು ನೋಡುತ್ತಾನೆ. ಪ್ರಾಣಿಗಳಲ್ಲಿರುವ ವಿಷಮಭಾವಗಳೆಲ್ಲಾ ಪ್ರಕೃತಿತತ್ವ ಒಂದಕ್ಕೇ ಸೇರಿದ್ದೆಂದೂ, ಹಾಗೆಯೇ ಪ್ರಾಪ್ತವಾಗುವ ಪುತ್ರ ಪೌತ್ರಾದಿ ಜೀವಿಗಳ ವಿಸ್ತಾರಗಳೂ ಪ್ರಕೃತಿಗೇ ಸೇರಿದ್ದೆಂದೂ ತಿಳಿಯುವವನು ಸಂಸಾರವನ್ನು ತಪ್ಪಿಸಿಕೊಂಡು ಜ್ಞಾನ ಸ್ವರೂಪನಾದ ಆತ್ಮನನ್ನು ಹೊಂದುತ್ತಾನೆ.

ಹೀಗೆ ಉತ್ತಮವಾದ ಮತ್ತು ನಿಕೃಷ್ಟವಾದ ಜನ್ಮಗಳನ್ನು ಹೊಂದಿರುವ ಪುರುಷನ ಅಂದರೆ ಆತ್ಮನ ಮೇಲಾದ ಸ್ವಭಾವವನ್ನು, ದೇಹವೇ ಬೇರೆ ಆತ್ಮನೇ ಬೇರೆ ಎಂಬ ವಿವೇಕಾನುಸಂಧಾನದ ಕ್ರಮವನ್ನು ಮತ್ತು ಅದರ ಫಲವನ್ನು ತಿಳಿಸುತ್ತೇನೆ ಕೇಳು. ಆತ್ಮನು ದೇಹಕ್ಕಿಂತ ಬೇರೆಯಾದವನಾಗಿ ಆ ದೇಹದಲ್ಲಿದ್ದು ಆಯಾ ದೇಹಗಳಿಗೆ ಅನುಗುಣವಾಗಿ ಪ್ರೀತಿಯಿಂದ ಅವುಗಳನ್ನು ಧರಿಸುತ್ತಾನೆ ಮತ್ತು ತಾನು ಧರಿಸಿಕೊಂಡಿರುವ ಶರೀರಕ್ಕೆ ತಾನೇ ಉಪದ್ರಷ್ಟಾ, ಅನುಮಂತಾ, ಭರ್ತಾ, ಭೋಕ್ತಾ, ಮಹೇಶ್ವರ ಮತ್ತು ಪರಮೇಶ್ವರನೂ ಸಹ ಆಗಿದ್ದಾನೆ. ಅದು ಹೇಗೆಂದರೆ ದೇಹಕ್ಕಿಂತ ಬೇರೆಯಾದ ಈ ಆತ್ಮನು ದೇಹದ ವ್ಯವಹಾರಾದಿಗಳನ್ನು ಸಾಕ್ಷಿಯಾಗಿ ನೋಡುತ್ತಿರುವುದರಿಂದ **ಉಪದ್ರಷ್ಟಾ** ಆಗಿದ್ದಾನೆ. ಶರೀರದ ವ್ಯಾಪಾರಗಳನ್ನು ಮುಂದುವರಿಸಲು ಅನುಮತಿಸುವವನಾಗಿ **ಅನುಮಂತಾ** ಆಗಿದ್ದಾನೆ. ಶರೀರದ ಧಾರಕನಾಗಿ ಶರೀರಕ್ಕೆ **ಭರ್ತಾ** ಅಂದರೆ ಯಜಮಾನನಾಗಿದ್ದಾನೆ. ಅದರಿಂದ ಉಂಟಾಗುವ ಸುಖ-ದುಃಖಗಳನ್ನು ಅನುಭವಿಸುವವನಾಗಿ **ಭೋಕ್ತಾ** ಆಗಿದ್ದಾನೆ. ಹೀಗೆ ದೇಹವನ್ನು ನಿಯಮಿಸುವವನೂ, ದೇಹವನ್ನು ಧರಿಸುವವನೂ, ಪೋಷಿಸುವವನೂ, ದೇಹಕ್ಕೆ ಶೇಷಿಯೂ (ಸ್ವಾಮಿ) ಆಗಿ ದೇಹೇಂದ್ರಿಯ ಮನಗಳಿಗೆಲ್ಲಾ **ಮಹೇಶ್ವರನಾಗಿದ್ದಾನೆ.** ಅದೇ ರೀತಿ ಈ ಪುರುಷನು ತನ್ನ ದೇಹೇಂದ್ರಿಯ ಮನಸ್ಸು ಇವುಗಳಿಗೆಲ್ಲಾ ಪರಮಾತ್ಮನೂ ಆಗಿದ್ದಾನೆಂದು ಹೇಳಿದೆ "ಅನಾದಿಮತ್ ಪರಂಬ್ರಹ್ಮ" ಎಂದು ಮೇಲೆ ವರ್ಣಿಸಿ ತಿಳಿಸಿರುವ ಅಪರಿಚ್ಛಿನ್ನವಾದ ಜ್ಞಾನಶಕ್ತಿಗಳನ್ನು ಪಡೆದಿರುವ ಈ ಪುರುಷನು ತನ್ನ ಈ ಶರೀರಕ್ಕೆ ಮಾತ್ರ ಪರಮೇಶ್ವರನೂ, ಪರಮಾತ್ಮನೂ ಆಗಿದ್ದಾನೆ. ಯಾವನು ಮೇಲೆ ತಿಳಿಸಿದ ಸ್ವಭಾವವನ್ನು ಪಡೆದಿರುವ ಈ ಪುರುಷನನ್ನೂ (ಆತ್ಮನನ್ನೂ). ಸತ್ವಾದಿಗುಣಗಳಿಂದ ಕೂಡಿದ ಈ ಪ್ರಕೃತಿಯನ್ನೂ ತಿಳಿಯುವನೋ ಅವನು ಶರೀರದಲ್ಲಿ ಎಂತಹ ಸ್ಥಿತಿಯಲ್ಲಿದ್ದರೂ ಅಂದರೆ ಎಂತಹ ಕಷ್ಟವಾದ ಪರಿಸ್ಥಿತಿಯಲ್ಲಿದ್ದರೂ ಕೂಡ ತಿರುಗಿ ಜನ್ಮವನ್ನು ಪಡೆಯುವುದಿಲ್ಲ. ದೇಹಾವಸಾನ ಸಮಯದಲ್ಲಿ ಅಪರಿಚ್ಛಿನ್ನ ಜ್ಞಾನ ಸ್ವರೂಪವಾದ ಆತ್ಮ ಸ್ವರೂಪವನ್ನು ಪಡೆಯುತ್ತಾನೆ.

## VI ದೇಹವೇ ಬೇರೆ, ಆತ್ಮನೇ ಬೇರೆ ಎಂಬ ವಿವೇಕ ಅನುಸಂಧಾನ ಕ್ರಮ. (ಶ್ಲೋಕಗಳು 24 ರಿಂದ 34)

ಯೋಗಸಿದ್ಧಿ ಪಡೆದಿರುವ ಕೆಲವರು ದೇಹದಲ್ಲಿರುವ ಆತ್ಮನನ್ನು ಧ್ಯಾನದ

ಮೂಲಕ ಅಂದರೆ ಭಕ್ತಿಯೋಗದ ಮೂಲಕ ಮನಸ್ಸಿನಲ್ಲಿ ನೋಡುತ್ತಾರೆ. ಇನ್ನು ಕೆಲವರು ಜ್ಞಾನಯೋಗದಿಂದ ಮನಸ್ಸನ್ನು ಯೋಗಕ್ಕೆ ಯೋಗ್ಯವಾಗಿ ಮಾಡಿ ಆತ್ಮನನ್ನು ನೋಡುತ್ತಾರೆ. ಜ್ಞಾನ ಯೋಗಕ್ಕೂ ಅರ್ಹರಲ್ಲದವರು ಕರ್ಮಯೋಗದಿಂದ, ಅದರಲ್ಲಿ ಅಂತರ್ಗತವಾಗಿರುವ ಜ್ಞಾನಬಲದಿಂದ ಮನಃ ಪರಿಪಾಕ ಹೊಂದಿ ಆತ್ಮನನ್ನು ನೋಡುತ್ತಾರೆ. ಕರ್ಮಯೋಗದಲ್ಲಿಯೂ ಅಧಿಕಾರವಿಲ್ಲದ ಮತ್ತೆ ಕೆಲವರು ಏನೂ ತಿಳಿಯದವರಾಗಿ, ಜ್ಞಾನಿಗಳಿಂದ ಕೇಳಿ ತಿಳಿದು ಆತ್ಮನನ್ನು ಉಪಾಸಿಸುತ್ತಾರೆ. ಶ್ರವಣ ಮಾಡುವುದರಲ್ಲಿ ಅಂದರೆ ಹೀಗೆ ಕೇಳುವುದರಲ್ಲಿಯೇ ಆಸೆಯುಳ್ಳವರೂ ಕೂಡ, ಪಾಪದಿಂದ ಮುಕ್ತರಾಗಿ ಕಾಲಕ್ರಮದಲ್ಲಿ ಕರ್ಮಯೋಗಾದಿಗಳನ್ನು ಆಚರಿಸಲು ಪ್ರಾರಂಭಿಸಿ ಕೊನೆಗೆ ಸಂಸಾರರೂಪವಾದ ಮೃತ್ಯುವನ್ನು ದಾಟಿಯೇ ದಾಟುತ್ತಾರೆ.

ಎಲೈ ಅರ್ಜುನನೇ! ಚರಾಚರರೂಪವಾದ ಯಾವುದೊಂದು ಜಂತುವು ಹುಟ್ಟಿದರೂ ಅದು ಪ್ರಕೃತಿ ಮತ್ತು ಆತ್ಮ ಇವೆರಡರ ಸಂಪರ್ಕದಿಂದಲೇ ಹುಟ್ಟಿದುದಾಗಿ ತಿಳಿಯುವವನಾಗು. ಸಮಸ್ತ ಪ್ರಾಣಿಗಳಲ್ಲಿಯೂ ಸಮವಾಗಿ ಇರುವಂತಹ ಮತ್ತು ದೇಹೇಂದ್ರಿಯಾದಿಗಳಿಗೆಲ್ಲಾ ನಿಯಾಮಕನಾದ ಆತ್ಮನು ತನಗೆ ಆಶ್ರಯವಾಗಿರುವ ತನ್ನ ಶರೀರವು ನಾಶವಾದರೂ ತಾನು ನಾಶವನ್ನು ಹೊಂದುವುದಿಲ್ಲ ಎಂಬುದನ್ನು ಯಾವನು ತಿಳಿಯುತ್ತಾನೆಯೋ ಅವನೇ ಜ್ಞಾನಿಯು. ಆದರೆ ಆತ್ಮನನ್ನು ದೇವಮನುಷ್ಯಾದಿ ವಿಷಮಾಕಾರ ಉಳ್ಳವನನ್ನಾಗಿಯೂ, ಜನ್ಮ ಮರಣಗಳನ್ನು ಉಳ್ಳವನನ್ನಾಗಿಯೂ ನೋಡುವವನು ಸಂಸಾರಚಕ್ರದಲ್ಲಿ ಸುತ್ತುತ್ತಿರುತ್ತಾನೆ. ಆತ್ಮಜ್ಞಾನಿಯು ಸಮಸ್ತ ಶರೀರಗಳಲ್ಲಿಯೂ ಅವುಗಳಿಗೆ ಸ್ವಾಮಿಯೂ, ನಿಯಾಮಕನೂ ಆಗಿ ನೆಲೆಸಿರುವ ಆತ್ಮನನ್ನು ದೇಹಾದಿ ವಿಷಮಾಕಾರವುಳ್ಳವನನ್ನಾಗಿ ತಿಳಿಯದೆ, ಜ್ಞಾನಾಕಾರದಿಂದ ಸಮನಾಗಿ ತಿಳಿದುಕೊಂಡು ಪರಮಗತಿಯನ್ನು ಹೊಂದುವನು ಮತ್ತು ಆತ್ಮನನ್ನು ಭವಸಾಗರದಲ್ಲಿ ತಳ್ಳಿ ಕೆಡಿಸಲಾರನು. ಸಮಸ್ತ ಕರ್ಮಗಳೂ ಪ್ರಕೃತಿಯಿಂದ ಮಾಡಲ್ಪಟ್ಟವುಗಳು ಎಂದೂ, ಜ್ಞಾನ ಸ್ವರೂಪನಾದ ಆತ್ಮನು ಅವುಗಳಿಗೆ ಕರ್ತೃವಲ್ಲ ಎಂದೂ ತಿಳಿಯುವವನು ಯಥಾರ್ಥವನ್ನು ನೋಡುತ್ತಾನೆ. ಪ್ರಾಣಿಗಳಲ್ಲಿರುವ ವಿಷಮಭಾವಗಳೆಲ್ಲಾ ಪ್ರಕೃತಿತತ್ತ್ವ ಒಂದಕ್ಕೇ ಸೇರಿದ್ದೆಂದೂ, ಹಾಗೆಯೇ ಪ್ರಾಪ್ತವಾಗುವ ಪುತ್ರ ಪೌತ್ರಾದಿ ಜೀವಿಗಳ ವಿಸ್ತಾರಗಳೂ ಪ್ರಕೃತಿಗೇ ಸೇರಿದ್ದೆಂದೂ ತಿಳಿಯುವವನು ಸಂಸಾರವನ್ನು ತಪ್ಪಿಸಿಕೊಂಡು ಜ್ಞಾನ ಸ್ವರೂಪನಾದ ಆತ್ಮನನ್ನು ಹೊಂದುತ್ತಾನೆ.

ನಾಶರಹಿತನಾದ ಈ ಜೀವಾತ್ಮನು ಅನಾದಿಯಾದವನಾಗಿಯೂ ಗುಣರಹಿತನಾಗಿಯೂ ಇರುವುದರಿಂದ, ಶರೀರದಲ್ಲಿದ್ದರೂ ಅವನು ಕರ್ಮಗಳನ್ನು ಮಾಡುವವನೂ ಅಲ್ಲ ಮತ್ತು ದೇಹದ ಸ್ವಭಾವಗಳು ಅವನಿಗೆ ಅಂಟುವುದೂ ಇಲ್ಲ ಮತ್ತು ಅವನನ್ನು ಬಂಧಿಸುವುದೂ ಇಲ್ಲ. ಆಕಾಶವು ಎಲ್ಲಾ ವಸ್ತುಗಳೊಂದಿಗೆ ಸೇರಿಕೊಂಡಿದ್ದರೂ, ಅತ್ಯಂತ ಸೂಕ್ಷ್ಮವಾಗಿರುವುದರಿಂದ ಆ ವಸ್ತುಗಳ ಸ್ವಭಾವಗಳು ಅದಕ್ಕೆ ಹೇಗೆ ಅಂಟುವುದಿಲ್ಲವೋ ಅದರಂತೆ ಈ ಜೀವಾತ್ಮನೂ ಅತ್ಯಂತ ಸೂಕ್ಷ್ಮವಾಗಿ ಇರುವುದರಿಂದ ದೇವಮನುಷ್ಯಾದಿ ಸಮಸ್ತ ಶರೀರಗಳಲ್ಲಿ ಇರುವವನಾದರೂ ಆಯಾ ಶರೀರಗಳ ಸ್ವಭಾವಗಳಿಂದ ಅಂಟಲ್ಪಡುವವನಲ್ಲ. ಸೂರ್ಯನು ತನ್ನ ಪ್ರಭೆಯಿಂದ ಸಮಸ್ತ ಲೋಕಗಳನ್ನೂ ಪ್ರಕಾಶಪಡಿಸುವಂತೆ ಶರೀರದೊಳಗೆ ಇರುವ ಕ್ಷೇತ್ರಜ್ಞನು (ಆತ್ಮನು) ತನ್ನ ಧರ್ಮಭೂತಜ್ಞಾನದಿಂದ ಸಮಸ್ತ ಕ್ಷೇತ್ರವನ್ನೂ (ದೇಹವನ್ನೂ) ಪ್ರಕಾಶಪಡಿಸುತ್ತಾನೆ. ಆದುದರಿಂದ ಪ್ರಕಾಶಪಡಿಸಲ್ಪಡತಕ್ಕ ಲೋಕಗಳಿಗಿಂತ ಅದನ್ನು ಪ್ರಕಾಶಪಡಿಸುವ ಸೂರ್ಯನು ಹೇಗೆ ಬೇರೆಯಾದವನೋ ಅದರಂತೆ ತಿಳಿಯಲ್ಪಡತಕ್ಕ ಶರೀರಕ್ಕಿಂತ ಅದನ್ನು ತಿಳಿದುಕೊಳ್ಳತಕ್ಕ ಆತ್ಮನು ಬೇರೆಯಾದವನು.

ಹೀಗೆ ಜ್ಞಾನ ಚಕ್ಷುಸ್ಸಿನಿಂದ ಕ್ಷೇತ್ರಕ್ಕೂ ಕ್ಷೇತ್ರಜ್ಞನಿಗೂ (ಶರೀರಕ್ಕೂ ಜೀವಾತ್ಮನಿಗೂ) ಇರುವ ಭೇದವನ್ನು ಅರಿತವರೂ ಮತ್ತು ಪಂಚಭೂತಗಳಾಗಿ ಪರಿಣಮಿಸಿರುವ ಪ್ರಕೃತಿಯಿಂದ ಬಿಡುಗಡೆಹೊಂದಲು ಅಮಾನಿತ್ವಾದಿ ಗುಣಗಳು ಉಪಾಯವೆಂದು ಅರಿತು ಆಚರಿಸುವವರೂ, ಸಂಸಾರಬಂಧದಿಂದ ಬಿಡುಗಡೆ ಹೊಂದಿ, ಜ್ಞಾನ ಸ್ವರೂಪನಾದ ಆತ್ಮನನ್ನು ಹೊಂದುವರು ಎಂಬುದು ಹದಿಮೂರನೆಯ ಅಧ್ಯಾಯದ ಸಾರವಾದ ಅರ್ಥ. ಈ ಅಧ್ಯಾಯದಲ್ಲಿ ಕ್ಷೇತ್ರ ಮತ್ತು ಕ್ಷೇತ್ರಜ್ಞರ (ಶರೀರ ಮತ್ತು ಆತ್ಮರ) ವಿಚಾರವು ವಿವರಿಸಲ್ಪಟ್ಟು ಇರುವುದರಿಂದ ಇದಕ್ಕೆ ಕ್ಷೇತ್ರಕ್ಷೇತ್ರಜ್ಞ ವಿಭಾಗ ಯೋಗವೆಂದು ಹೆಸರು.

ಗೀತಾರ್ಥ ಸಂಗ್ರಹದ ಹದಿನೇಳನೆಯ ಶ್ಲೋಕದಲ್ಲಿ ಶ್ರೀ ಯಾಮುನಾಚಾರ್ಯರು ಈ ಅಧ್ಯಾಯದ ವಿಷಯಗಳನ್ನು ಹೀಗೆ ತಿಳಿಸಿದ್ದಾರೆ.

**''ದೇಹಸ್ವರೂಪಮಾತ್ಮಾಪ್ತಿ ಹೇತುರಾತ್ಮ ವಿಶೋಧನಂ ।**
**ಬಂಧಹೇತು ರ್ವಿವೇಕಶ್ಚತ್ರಯೋದಶ ಉದೀರ್ಯತೇ ॥**

ದೇಹದ ಸ್ವರೂಪವೂ, ಆತ್ಮಜ್ಞಾನಪ್ರಾಪ್ತಿಗೆ ಸಾಧನವಾದ ಅಮಾನಿತ್ವಾದಿ ಗುಣಗಳೂ, ಆತ್ಮಸ್ವರೂಪವೂ, ಆತ್ಮನಿಗೆ ಶರೀರಸಂಬಂಧವು ಉಂಟಾಗಲು ಕಾರಣವೂ; ಆತ್ಮನು ಶರೀರಕ್ಕಿಂತ ಬೇರೆಯಾದವನು ಎಂಬ ವಿವೇಕ ಜ್ಞಾನವೂ ಹದಿಮೂರನೆಯ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿವೆ.

*****

## ಹದಿನಾಲ್ಕನೆಯ ಅಧ್ಯಾಯ

# ಗುಣತ್ರಯ ವಿಭಾಗ ಯೋಗ

**ವಿಷಯ ಸೂಚಿಕೆ :**

**I** ಸತ್ತ್ವರಜಸ್ತಮೋ ಗುಣಗಳು ಚೇತನನಿಗೆ ಶರೀರ ಸಂಬಂಧದ ಮೂಲಕ ಬಂಧನವನ್ನು ಉಂಟುಮಾಡುವ ಪ್ರಕಾರ (**ಶ್ಲೋಕಗಳು 1 ರಿಂದ 8**)

**II** ಸತ್ತ್ವರಜಸ್ತಮೋ ಗುಣಗಳು ಕರ್ತೃತ್ವಕ್ಕೆ ಕಾರಣವಾಗಿರುವಿಕೆ (**ಶ್ಲೋಕಗಳು 9 ರಿಂದ 20**)

**III** ಗುಣಾತೀತನಾದ ಪುರುಷನ ಆಚಾರ ವ್ಯವಹಾರಾದಿಗಳು (**ಶ್ಲೋಕಗಳು 21 ರಿಂದ 25**)

**IV** ಸತ್ತ್ವಾದಿ ತ್ರಿಗುಣಗಳ ನಿವೃತ್ತಿಗೂ, ಗತಿತ್ರಯಗಳ ಪ್ರಾಪ್ತಿಗೂ ಪರಮಾತ್ಮನಲ್ಲಿ ಶರಣಾಗತಿಯೇ ಉಪಾಯ (**ಶ್ಲೋಕಗಳು 26 ಮತ್ತು 27**)

**ಉಪೋದ್ಘಾತ :**

ಹದಿಮೂರನೆಯ ಅಧ್ಯಾಯದಲ್ಲಿ ಪರಸ್ಪರ ಸಂಬಂಧ ಹೊಂದಿ ಒಂದರೊಳಗೆ ಒಂದು ಕಲೆತಿರುವ ಪ್ರಕೃತಿ ಪುರುಷರ ಯಥಾರ್ಥ ಸ್ವರೂಪವೂ; ಅಮಾನಿತ್ವಾದಿ ಗುಣಗಳನ್ನು ಬೆಳೆಸಿಕೊಂಡು ಭಗವದ್ಭಕ್ತಿಯನ್ನು ಪಡೆದವರು ಪ್ರಕೃತಿ ಬಂಧನದಿಂದ ಮುಕ್ತರಾಗುವರು ಎಂಬುದೂ; ಪೂರ್ವಜನ್ಮಗಳಲ್ಲಿ ಪ್ರಾಪ್ತವಾದ ಸತ್ತ್ವರಜಸ್ತಮೋ ಗುಣಗಳಿಂದ ಉಂಟಾದ ಸುಖ-ದುಃಖಗಳೇ ಬಂಧಕ್ಕೆ ಕಾರಣವೆಂಬುದೂ ಹೇಳಲ್ಪಟ್ಟಿತು. ಈಗ ಹದಿನಾಲ್ಕನೆಯ ಅಧ್ಯಾಯದಲ್ಲಿ ಈ ತ್ರಿಗುಣಗಳು ಆತ್ಮನನ್ನು

ಬಂಧಿಸುವ ಪ್ರಕಾರವೂ, ಆ ಬಂಧಗಳನ್ನು ಹೋಗಲಾಡಿಸಿಕೊಳ್ಳಲು ಮತ್ತು ಐಶ್ವರ್ಯ, ಕೈವಲ್ಯ ಭಗವದನುಭವಾದಿ ಮೂರು ಗತಿಗಳನ್ನು ಪಡೆಯಲು ಭಗವಂತನಲ್ಲಿ ಶರಣಾಗತಿಯೇ ಉಪಾಯವೆಂಬ ವಿಷಯಗಳೆಲ್ಲವೂ ಹೇಳಲ್ಪಟ್ಟಿವೆ.

## I ಸತ್ವರಜಸ್ತಮೋ ಗುಣಗಳು ಚೇತನನಿಗೆ ಶರೀರ ಸಂಬಂಧದ ಮೂಲಕ ಬಂಧನವನ್ನು ಉಂಟುಮಾಡುವ ಪ್ರಕಾರ (ಶ್ಲೋಕಗಳು 1 ರಿಂದ 8)

ಶ್ರೀ ಕೃಷ್ಣನು ಅರ್ಜುನನಿಗೆ ಹೇಳುತ್ತಾನೆ "ಅರ್ಜುನನೇ ! ಪ್ರಕೃತಿ ಪುರುಷ ವಿಷಯಜ್ಞಾನದಲ್ಲಿ ಅಂತರ್ಗತವಾದ ಸತ್ವಾದಿಗುಣಗಳ ವಿಷಯವಾದ ಅತ್ಯುತ್ತಮವಾದ ಜ್ಞಾನವನ್ನು ನಾನು ನಿನಗೆ ಪುನಃ ವಿಸ್ತಾರವಾಗಿ ಹೇಳುತ್ತೇನೆ. ಈ ಜ್ಞಾನವನ್ನು ಪಡೆದು ಮಹರ್ಷಿಗಳೆಲ್ಲರೂ ಪರಮ ಸಿದ್ಧಿಯನ್ನು ಹೊಂದಿದರು. ಮುಂದೆ ಹೇಳುವ ಈ ಜ್ಞಾನವನ್ನು ಪಡೆದು ನನ್ನೊಡನೆ ಸಮಾನ ಧರ್ಮವನ್ನು ಹೊಂದಿದವರು ಜನನ ಮರಣಗಳನ್ನು ದಾಟಿದವರಾಗಿ, ಸೃಷ್ಟಿಯಲ್ಲಿ ಜನಿಸುವುದೂ ಇಲ್ಲ, ಪ್ರಳಯದಲ್ಲಿ ಸಾಯುವುದೂ ಇಲ್ಲ. ಪುರುಷನು ಪ್ರಕೃತಿಯ ಗುಣಗಳಾದ ಸತ್ವ, ರಜಸ್ಸು ಮತ್ತು ತಮಸ್ಸುಗಳಿಂದ ಹೇಗೆ ಬಂಧಿಸಲ್ಪಡುತ್ತಾನೆಂಬ ವಿಷಯವನ್ನು ತಿಳಿಸುತ್ತೇನೆ. ಜಗತ್ಕಾರಣವೆನಿಸಿದ ಪ್ರಕೃತಿಯೇ ನನ್ನ ಶರೀರವಾಗಿದೆ. ಅದರಲ್ಲಿ ನಾನೇ ಗರ್ಭವನ್ನು ಇಡುತ್ತೇನೆ. ಅಂದರೆ ಭೋಗಸ್ಥಾನವಾದ ಅಚೇತನ ಪ್ರಕೃತಿಯೊಂದಿಗೆ ಭೋಕ್ತಾವಾಗಿರುವ ಚೇತನ ಪ್ರಕೃತಿಯನ್ನು ಸೇರಿಸಿ ಇಡುತ್ತೇನೆ. ಅದರಿಂದ ಸಮಸ್ತ ಭೂತಗಳ ಉತ್ಪತ್ತಿಯು ಆಗುತ್ತದೆ. ದೇವತೆಗಳು, ಗಂಧರ್ವರು, ಯಕ್ಷರು, ರಾಕ್ಷಸರು ಮನುಷ್ಯರು, ಪಶು, ಮೃಗ, ಪಕ್ಷಿ, ಹಾವು ಮುಂತಾಗಿ ಜನಿಸುವ ಶರೀರಗಳೆಲ್ಲಕ್ಕೂ ಈ ಪ್ರಕೃತಿಯೇ ಉತ್ಪತ್ತಿ ಸ್ಥಾನವು. ನಾನೇ ಅವುಗಳಿಗೆ ಬೀಜಪ್ರದನಾದ ತಂದೆಯು. ಅಂದರೆ ಚೇತನ ವರ್ಗಗಳನ್ನು ಅವರವರ ಕರ್ಮಕ್ಕೆ ತಕ್ಕ ಹಾಗೆ ಆಯಾ ಯೋನಿಗಳಲ್ಲಿ ಜಡ ಪ್ರಕೃತಿಯೊಂದಿಗೆ ಸೇರಿಸುವವನು ನಾನೇ.

ಸತ್ವ, ರಜಸ್ಸು ಮತ್ತು ತಮಸ್ಸು ಎಂಬ ಮೂರೂ ಪ್ರಕೃತಿಯ ಗುಣಗಳು. ಇವು ಸ್ವತಃ ವಿಕಾರವಿಲ್ಲದ, ನಾಶವಿಲ್ಲದ ಆತ್ಮನನ್ನು ಬೇರೆ ಬೇರೆ ಶರೀರಗಳಿಗೆ ತಂದು ಸೇರಿಸಿ ಬಂಧಿಸುತ್ತವೆ. ಸತ್ವ ರಜಸ್ಸು ತಮಸ್ಸು ಇವುಗಳಲ್ಲಿ ಸತ್ವದ ಸ್ವರೂಪವು ನಿರ್ಮಲ ವಾದುದರಿಂದ ಪ್ರಕಾಶಕವೂ, ರೋಗರಹಿತವೂ, ನಿಷ್ಪಾಪವಾದುದೂ ಆಗಿದೆ. ಸತ್ವಗುಣವು ಜ್ಞಾನ ಸಂಗವನ್ನೂ ಸುಖಸಂಗವನ್ನೂ ಉಂಟುಮಾಡುತ್ತದೆ. ಅಂದರೆ ಅವುಗಳಲ್ಲಿ ಆಸಕ್ತಿಯನ್ನು ಹುಟ್ಟಿಸುತ್ತದೆ, ರಜೋಗುಣವು

ಕಾಮರೂಪವಾದುದಾಗಿದೆ. ಇದು ಶಬ್ದಾದಿ ವಿಷಯಗಳಲ್ಲಿ ತೃಷೆಯನ್ನು ಅಂದರೆ ಆಸೆಯನ್ನು ಉಂಟುಮಾಡಿ ಪುತ್ರ ಮಿತ್ರಾದಿ ಬಂಧುಗಳ ವಿಷಯದಲ್ಲಿ ಸಂಶ್ಲೇಷ ಹೊಂದಬೇಕೆಂಬ ಆಸೆಯಿಂದ ಉಂಟಾಗುವ ಮೋಹಕ್ಕೆ ಕಾರಣವಾಗಿದೆ. ಇದು ಕರ್ಮದಲ್ಲಿ ಆಸೆಯನ್ನು ಉಂಟುಮಾಡಿ ಆತ್ಮನನ್ನು ಬಂಧಿಸುತ್ತದೆ. ಅಂದರೆ ರಜೋಗುಣವು ರಾಗ, ತೃಷ್ಣೆ ಮತ್ತು ಸಂಗಗಳಿಗೆ ಕಾರಣವಾಗಿರುವುದಲ್ಲದೆ ಕರ್ಮಾಸಕ್ತಿಗೂ ಕಾರಣವಾಗಿದೆ. ತಮಸ್ಸೆಂಬುದು ಅಜ್ಞಾನ ಜನ್ಯವಾದುದೆಂದು ತಿಳಿ, ಇದು ಸಮಸ್ತ ಪ್ರಾಣಿಗಳ ಮೋಹಕ್ಕೆ ಅಂದರೆ ಭ್ರಮೆಗೆ ಕಾರಣವಾದುದಾಗಿದೆ. ಇದು ಪ್ರಮಾದ, ಆಲಸ್ಯ, ನಿದ್ರೆ ಇವುಗಳನ್ನು ಉಂಟುಮಾಡಿ ಆತ್ಮನನ್ನು ಬಂಧಿಸುತ್ತದೆ.

## II ಸತ್ವರಜಸ್ತಮೋ ಗುಣಗಳು ಕರ್ತೃತ್ವಕ್ಕೆ ಕಾರಣವಾಗಿರುವಿಕೆ (ಶ್ಲೋಕಗಳು 9 ರಿಂದ 20)

ನಿರ್ಮಲವೂ, ಪ್ರಕಾಶಕವೂ, ನಿರುಪದ್ರವವೂ ಆಗಿರುವ ಸತ್ವಗುಣವು ಸುಖದಲ್ಲಿ ಸಂಗವನ್ನು ಉಂಟುಮಾಡುತ್ತದೆ. ರಜೋಗುಣವು ಕರ್ಮದಲ್ಲಿ ಸಂಗವನ್ನು ಉಂಟು ಮಾಡುತ್ತದೆ. ತಮೋಗುಣವು ವಸ್ತುವಿನ ಯಥಾರ್ಥ ಜ್ಞಾನವನ್ನು ಮರೆಸಿ ವಿಪರೀತ ಜ್ಞಾನವನ್ನು ಉಂಟುಮಾಡಿ ಕರ್ತವ್ಯ ವಿರುದ್ಧವಾದ ನಿಷಿದ್ಧ ಕರ್ಮಗಳಲ್ಲಿ ಆಸಕ್ತಿಯನ್ನು ಉಂಟುಮಾಡುತ್ತದೆ. ಪ್ರಕೃತಿಯ ಧರ್ಮಗಳಾದ ಸತ್ವರಜಸ್ತಮೋ ಗುಣಗಳು ಪ್ರಕೃತಿಯೊಂದಿಗೆ ಸೇರಿರುವ ಆತ್ಮನಿಗೆ ಯಾವಾಗಲೂ ಸ್ವರೂಪಾನುಬಂಧಿ ಗಳಾಗಿ ಸೇರಿಕೊಂಡು ಇದ್ದಾಗ್ಯೂ, ಜೀವರುಗಳ ಪ್ರಾಚೀನ ಕರ್ಮದಿಂದಲೂ, ಶರೀರವನ್ನು ಬೆಳೆಸುವ ಆಹಾರ ವೈಷಮ್ಯದಿಂದಲೂ ಒಂದು ಗುಣವು ಅಡಗಿಯೂ ಮತ್ತೊಂದು ಗುಣವು ತಲೆ ಎತ್ತಿಯೂ, ಹೀಗೆ ವ್ಯತ್ಯಾಸಗಳು ಆಗುತ್ತಿರುತ್ತವೆ. ಕೆಲವು ವೇಳೆ ರಜಸ್ಸೂ ತಮಸ್ಸೂ ಅಡಗಿ ಸತ್ವವು ತಲೆ ಎತ್ತಿರುತ್ತದೆ. ಅದೇ ರೀತಿ ಕೆಲವು ವೇಳೆ ತಮಸ್ಸೂ ಸತ್ವವೂ ಅಡಗಿ ರಜೋಗುಣವು ತಲೆ ಎತ್ತಿರುತ್ತದೆ. ಹಾಗೆಯೇ ಮತ್ತೆ ಕೆಲವು ವೇಳೆ ಸತ್ವವೂ ರಜಸ್ಸೂ ಅಡಗಿ ತಮಸ್ಸು ತಲೆ ಎತ್ತಿರುತ್ತದೆ. ಹೀಗೆ ಒಂದು ಗುಣವು ಇತರ ಎರಡು ಗುಣಗಳನ್ನು ಅಡಗಿಸಿ ತಲೆ ಎತ್ತಿರುವಿಕೆಯನ್ನು ಅವುಗಳ ಕೆಲಸದಲ್ಲಿ ನೋಡಿ ತಿಳಿದುಕೊಳ್ಳಬೇಕು.

ಎಲೈ ಅರ್ಜುನನೇ! ಯಾವ ಯಾವ ಕಾರ್ಯಗಳು ಯಾವಯಾವ ಸಮಯದಲ್ಲಿ ಶರೀರದಲ್ಲಿ ಆಗುವುವು ಎಂಬುದನ್ನು ಆ ಸಮಯದಲ್ಲಿ ಯಾವ ಗುಣವು ತಲೆ ಎತ್ತಿದೆ ಎಂಬುದರಿಂದ ತಿಳಿಯಬೇಕು. ಯಾವಾಗ ದೇಹದಲ್ಲಿರುವ

ಇಂದ್ರಿಯಗಳಾದ ಕಣ್ಣು ಮುಂತಾದ ಜ್ಞಾನೇಂದ್ರಿಯಗಳಲ್ಲಿ ವಸ್ತುವಿನ ನಿಜಸ್ಥಿತಿಯನ್ನು ಪ್ರಕಾಶ ಪಡಿಸತಕ್ಕ ಜ್ಞಾನವು ಉಂಟಾಗುವುದೋ, ಆಗ ಆ ದೇಹದಲ್ಲಿ ಸತ್ವಗುಣವು ಪ್ರಬಲಿಸಿದೆ ಎಂದು ತಿಳಿಯಬೇಕು. ತನ್ನದೆಂಬ ಪದಾರ್ಥವನ್ನು ಇತರರಿಗೆ ದಾನ ಮಾಡದೇ ಇರುವ ಲೋಭ ಸ್ವಭಾವವೂ, ಯಾವ ಪ್ರಯೋಜನವೂ ಇಲ್ಲದೆ ವ್ಯರ್ಥವಾಗಿ ಕರ್ಮ ಮಾಡುವ ಪ್ರವೃತ್ತಿಯೂ, ಫಲ ಸಾಧನವಾದ ಕರ್ಮಗಳನ್ನು ಮಾಡಲು ಪ್ರಾರಂಭಿಸುವ ಇಚ್ಛೆಯೂ, ಆಶಮ ಅಂದರೆ ಇಂದ್ರಿಯ ವ್ಯಾಪಾರಗಳು ಅಡಗದೇ ಇರುವುದೂ, ಸ್ಪೃಹೇ ಅಂದರೆ ವಿಷಯಗಳಲ್ಲಿ ಆಸಕ್ತಿಯೂ ಇವುಗಳೆಲ್ಲವೂ ಯಾವಾಗ, ಉಂಟಾಗುವುದೋ ಆಗ ಆ ದೇಹದಲ್ಲಿ ರಜೋಗುಣವು ಪ್ರಬಲಿಸಿದೆ ಎಂದು ಅರಿಯಬೇಕು.

ದೇಹದಲ್ಲಿ ಸತ್ವಗುಣವು ವೃದ್ಧಿಯಾಗಿದ್ದಾಗ ಜೀವನು ಮರಣ ಹೊಂದಿದರೆ ಅಜ್ಞಾನ ರಹಿತರಾಗಿದ್ದು ಆತ್ಮನ ನಿಜಸ್ವರೂಪವನ್ನು ಅರಿತವರ ಲೋಕವನ್ನು ಸೇರುತ್ತಾನೆ. ಅಂದರೆ ಆತ್ಮಜ್ಞಾನಿಗಳ ಕುಲದಲ್ಲಿ ಹುಟ್ಟಿ ಆತ್ಮಯಾಥಾತ್ಮ್ಯಜ್ಞಾನಕ್ಕೆ ಸಾಧನೆಗಳಾದ ಪುಣ್ಯಕರ್ಮಗಳನ್ನು ಮಾಡಲು ಅರ್ಹನಾಗುತ್ತಾನೆ. ರಜೋಗುಣವು ವೃದ್ಧಿಯಾಗಿರುವಾಗ ಮರಣವನ್ನು ಹೊಂದಿದವನು ಕರ್ಮದಲ್ಲಿ ಆಸಕ್ತಿ ಇರುವವರ ಕುಲದಲ್ಲಿ ಜನಿಸುತ್ತಾನೆ. ಅಲ್ಲಿ ಹುಟ್ಟಿದವನಾಗಿ, ಸ್ವರ್ಗ ಮುಂತಾದ ಫಲಾಪೇಕ್ಷೆಯಿಂದ ಕೂಡಿ ಕರ್ಮಗಳನ್ನು ಮಾಡಲು ಪ್ರವರ್ತಿಸುತ್ತಾನೆ. ಕರ್ಮಫಲಗಳನ್ನು ಅನುಭವಿಸುವುದಕ್ಕಾಗಿ ಪುನರ್ಜನ್ಮ ಹೊಂದುವನು. ಮತ್ತೆ ಫಲಾಸಕ್ತಿಯೊಂದಿಗೆ ಕರ್ಮಮಾಡಿ ಮತ್ತೆ ಜನ್ಮ ಹೊಂದುವನು. ಇದೇ ರೀತಿ ಜನ್ಮ ಪರಂಪರೆಗಳನ್ನು ಹೊಂದಿ ಸಾಂಸಾರಿಕ ದುಃಖ ಪರಂಪರೆಗಳನ್ನು ಅನುಭವಿಸುವನು. ತಮೋಗುಣವು ವೃದ್ಧಿಯಾಗಿರುವಾಗ ಮೃತನಾದವನು ನಾಯಿ, ನರಿ, ಹಂದಿ ಮೊದಲಾದ ಹೀನ ಜಂತುಗಳ ಯೋನಿಯಲ್ಲಿ ಜನಿಸಿ ಪುರುಷಾರ್ಥಗಳನ್ನು ಸಾಧಿಸಲು ಅಯೋಗ್ಯನಾಗುತ್ತಾನೆ. ಸತ್ವಗುಣದ ಫಲವು ನಿರ್ಮಲವಾದ ದುಃಖ ಸಂಬಂಧವಿಲ್ಲದ ಸಾತ್ವಿಕಫಲವು, ರಜೋಗುಣದ ಫಲವು ದುಃಖಾನುಭವವು ಮತ್ತು ತಮೋಗುಣದ ಫಲವು ಅಜ್ಞಾನ ಪ್ರಾಪ್ತಿ. ಸತ್ವಗುಣದಿಂದ ಆತ್ಮಯಾಥಾತ್ಮ್ಯ ಸಾಕ್ಷಾತ್ಕಾರ ಜ್ಞಾನವೂ, ರಜೋಗುಣದಿಂದ ಸ್ವರ್ಗಾದಿಫಲದಲ್ಲಿ ಲೋಭದಿಂದ ಕೂಡಿದ ಆಸೆಯೂ, ತಮೋಗುಣದಿಂದ ಕೆಟ್ಟ ಕಾರ್ಯಗಳಲ್ಲಿ ಪ್ರವೃತ್ತಿಯುಂಟಾಗಿ ಪ್ರಮಾದವೂ ಅದರಿಂದ ವಿಪರೀತ ಜ್ಞಾನವೂ, ಮೋಹವೂ ಉಂಟಾಗಿ ಅದರಿಂದ ತಮಸ್ಸು ಇನ್ನೂ ಅಧಿಕವಾಗಿ ಅಜ್ಞಾನ ಉಂಟಾಗುವುದು.

ಅರ್ಜುನನೇ! ಮೇಲೆ ಹೇಳಿದ ರೀತಿಯಲ್ಲಿ ಸತ್ವಗುಣವುಳ್ಳವರು ಸಂಸಾರ ಬಂಧನದಿಂದ ಬಿಡುಗಡೆಯನ್ನು ಹೊಂದಿ, ಮೇಲಿನ ಲೋಕಗಳನ್ನು ಹೊಂದಿ, ಕ್ರಮೇಣ ಮೋಕ್ಷವನ್ನು ಪಡೆಯುವರು. ರಜೋಗುಣವುಳ್ಳವರು ಪುನರಾವೃತ್ತಿಯುಳ್ಳ ದೇವ ಮನುಷ್ಯಾದಿ ಜನ್ಮಗಳಲ್ಲಿ ಫಲಾಸಕ್ತಿಯೊಂದಿಗೆ ಕರ್ಮಮಾಡುತ್ತಾ, ಕರ್ಮ ಫಲಾನುಭವಕ್ಕಾಗಿ ಜನ್ಮ ಪರಂಪರೆಗಳನ್ನು ಹೊಂದುತ್ತಾ, ದುಃಖಮಯವಾದ ಸಂಸಾರ ಬಂಧನದಲ್ಲಿ ಸಿಲುಕಿ, ದೇವಮನುಷ್ಯಾದಿ ಜನ್ಮಗಳ ಮಧ್ಯದಲ್ಲಿ ಅಲೆಯುತ್ತಿರುವರು. ತಮೋಗುಣವುಳ್ಳವರು ನಿಕೃಷ್ಟವಾದ ನಡತೆಯನ್ನು ಉಳ್ಳವರಾಗಿ ಕ್ರಮಕ್ರಮವಾಗಿ ಕೆಳಕ್ಕೆ ಇಳಿಯುತ್ತಾ ಅಂದರೆ ಮನುಷ್ಯ ಜನ್ಮದಲ್ಲಿ ಚಂಡಾಲರಾಗಿಯೂ, ಅನಂತರ ಕ್ರಮವಾಗಿ ಪ್ರಾಣಿಗಳಾಗಿಯೂ, ಕ್ರಿಮಿಕೀಟಗಳಾಗಿಯೂ, ಸ್ಥಾವರಗಳಾಗಿಯೂ, ಗುಲ್ಮಲತೆಗಳಾಗಿಯೂ ಹುಟ್ಟುತ್ತಾ ಕೊನೆಗೆ ಶಿಲೆ, ಕಡ್ಡಿ, ಹುಲ್ಲು ಮುಂತಾದ ರೂಪಗಳನ್ನು ಹೊಂದಿ ಅಧೋಗತಿಯನ್ನು ಹೊಂದುತ್ತಾರೆ. ಮಾನವನು ಸಾತ್ವಿಕವಾದ ಆಹಾರ ಸೇವನೆಯಿಂದಲೂ, ಫಲಾಪೇಕ್ಷೆಯಿಲ್ಲದೆ ಭಗವಂತನ ಆರಾಧನರೂಪವಾಗಿ ಕರ್ಮವನ್ನು ಮಾಡುವುದರಿಂದಲೂ ಸತ್ವಗುಣದಲ್ಲಿ ನೆಲೆಸುವುದರಿಂದ ಅವನಿಗೆ ಜ್ಞಾನವು ಉಂಟಾಗುವುದು. ಆಗ ಅವನು, ಆತ್ಮನು ಪರಿಶುದ್ಧವಾದ ಸ್ವಭಾವವನ್ನು ಉಳ್ಳವನು; ಪೂರ್ವ ಕರ್ಮಗಳ ಫಲವಾಗಿ ಉತ್ಪನ್ನವಾದ ಸತ್ವಾದಿಗುಣಗಳಿಂದ ಕರ್ಮಗಳು ಮಾಡಲ್ಪಡುತ್ತಿವೆ; ಆತ್ಮನು ಏನನ್ನು ಮಾಡುತ್ತಿಲ್ಲ; ಕರ್ತೃತ್ವವು ಗುಣಗಳಿಗೆ ಸೇರಿದ್ದೇ ವಿನಹ ಆತ್ಮನಿಗೆ ಸೇರಿದ್ದಲ್ಲ ಎಂದು ಅರಿತವನಾಗುವನು. ಹೀಗೆ ಗುಣಗಳನ್ನು ಕರ್ಮಗಳ ಕರ್ತೃವಾಗಿಯೂ, ಆತ್ಮನನ್ನು ಅಕರ್ತೃವಾಗಿಯೂ ತಿಳಿಯುವವನು ಪರಿಶುದ್ಧವಾದ ಆತ್ಮಾನುಭವವನ್ನು ಪಡೆದು ನನ್ನೊಡನೆ ಸಾಮ್ಯವನ್ನು ಹೊಂದುತ್ತಾನೆ. ದೇಹಿಯಾದ ಜೀವಾತ್ಮನು ದೇಹವನ್ನು ಆಶ್ರಯಿಸಿರುವ ಸತ್ವ, ರಜಸ್ಸು ಮತ್ತು ತಮಸ್ಸು ಈ ಮೂರು ಗುಣಗಳನ್ನೂ ದಾಟಿ ಅವುಗಳಿಗಿಂತ ಬೇರೆಯಾಗಿ ಜ್ಞಾನೈಕಾಕಾರನಾಗಿರುವ ಆತ್ಮನ ಸಾಕ್ಷಾತ್ಕಾರವನ್ನು ಹೊಂದುತ್ತಾನೆ. ಅಲ್ಲದೆ ಜನ್ಮ ಮೃತ್ಯು, ಜರೆ ಇವುಗಳಿಂದ ಉಂಟಾಗುವ ದುಃಖದಿಂದ ಬಿಡಲ್ಪಟ್ಟವನಾಗಿ ಅಮೃತರೂಪವಾದ ಶುದ್ಧಾತ್ಮನ ಅನುಭವವನ್ನು ಹೊಂದುತ್ತಾನೆ."

## III ಗುಣಾತೀತನಾದ ಪುರುಷನ ಆಚಾರ ವ್ಯವಹಾರಾದಿಗಳು

**(ಶ್ಲೋಕಗಳು 21 ರಿಂದ 25)**

ಪ್ರಕೃತಿಯ ಈ ಮೂರು ಗುಣಗಳ ವಿಷಯಗಳನ್ನೆಲ್ಲಾ ಶ್ರೀಕೃಷ್ಣನಿಂದ ಕೇಳಿದ ಮೇಲೆ ಅರ್ಜುನನು ತ್ರಿಗುಣಾತ್ಮಕವಾದ ಪ್ರಕೃತಿಯನ್ನು ಅತಿಕ್ರಮಿಸಿದವನ ಅಂದರೆ

ತ್ರಿಗುಣಾತೀತನಾದವನ ಲಕ್ಷಣಗಳು ಏನು? ಅವನ ನಡತೆಯ ಪ್ರಕಾರವು ಯಾವ ರೀತಿಯದು? ಅವನ ಆಚಾರವು ಎಂತಹುದು? ಚೇತನನು ಯಾವ ಉಪಾಯದಿಂದ ಸತ್ವಾದಿಮೂರು ಗುಣಗಳನ್ನು ದಾಟಲು ಶಕ್ತನಾಗುತ್ತಾನೆ? ಮುಂತಾದ ವಿಷಯಗಳನ್ನು ಅವನಿಗೆ ವಿಶದವಾಗಿ ತಿಳಿಸುವಂತೆ ಕೃಷ್ಣನನ್ನು ಪ್ರಾರ್ಥಿಸುತ್ತಾನೆ. ಭಗವಂತನು ಅವೆಲ್ಲವನ್ನೂ ಮುಂದೆ ತಿಳಿಸುತ್ತಾನೆ.

ಆತ್ಮನಿಗಿಂತ ಬೇರೆಯಾದ ವಸ್ತುಗಳಲ್ಲಿ ಇಷ್ಟವಸ್ತುಗಳೆಂದೂ, ಅನಿಷ್ಟ ವಸ್ತುಗಳೆಂದೂ ಎರಡು ಬಗೆಯಾಗಿ ಇರುತ್ತವೆ. ಸಾಮಾನ್ಯ ಜನರು ಇಷ್ಟವಾದವುಗಳು ತಪ್ಪಿಹೋದಾಗ ಅವುಗಳನ್ನು ಬಯಸುತ್ತಾರೆ. ಮತ್ತು ಅನಿಷ್ಟವಾದವುಗಳು ಒದಗಿದರೆ ಅವುಗಳನ್ನು ದ್ವೇಷಿಸುತ್ತಾರೆ. ಆದರೆ ತ್ರಿಗುಣಾತೀತನು ತನಗೆ ಬೇಕಿಲ್ಲದ ಆತ್ಮ ವ್ಯತಿರಿಕ್ತವಾದ ವಸ್ತುವು ಪ್ರಾಪ್ತವಾದಾಗ ಸತ್ತ್ವರಜಸ್ತಮೋ ಗುಣಗಳಿಂದ ಉಂಟಾಗತಕ್ಕ ಪ್ರಕಾಶ, ಪ್ರಕೃತಿ ಮತ್ತು ಮೋಹಗಳಿಂದ ಬೇಸರಗೊಳ್ಳುವುದಿಲ್ಲ ಮತ್ತು ತನಗೆ ಬೇಕಾದ ವಸ್ತು ಕೈತಪ್ಪಿ ಹೋದಾಗ ಅದಕ್ಕೆ ಆಸೆ ಪಡುವುದಿಲ್ಲ. ಅಂದರೆ ಆತ್ಮನಿಗಿಂತ ಬೇರೆಯಾದ ಇಷ್ಟ ಪ್ರಾಪ್ತಿ ಮತ್ತು ಅನಿಷ್ಟನಿವೃತ್ತಿಗಳಲ್ಲಿ ಪ್ರಯೋಜನ ಬುದ್ಧಿಯನ್ನು ಬಿಟ್ಟಿರುತ್ತಾನೆ. ಅಲ್ಲದೆ ತ್ರಿಗುಣಾತೀತನು ಆತ್ಮಾವಲೋಕನದಿಂದ ತೃಪ್ತನಾಗಿರುವುದರಿಂದ ಇತರ ವಿಷಯಗಳಲ್ಲಿ ಉದಾಸೀನನಾಗಿ ಇರುವನು, ದ್ವೇಷ ಆಕಾಂಕ್ಷೆಗಳಿಂದ ಕೂಡಿದ ಸತ್ವಾದಿಗುಣಗಳಿಂದ ಕದಲಿಸಲ್ಪಡದೆ ಸತ್ವಾದಿಗುಣಗಳು ತಮ್ಮ ಕರ್ಮಗಳಾದ ಪ್ರಕಾಶಾದಿಗಳಲ್ಲಿ ಪ್ರವರ್ತಿಸುತ್ತವೆ ಎಂದು ತಿಳಿದು ಸುಮ್ಮನಿರುವನು. ಆದರೆ ಗುಣಗಳಿಗೆ ಅನುರೂಪವಾದ ಕಾರ್ಯಗಳಲ್ಲಿ ನಿರತನಾಗುವುದಿಲ್ಲ.

ತ್ರಿಗುಣಾತೀತನು ತನ್ನ ಆತ್ಮವೊಂದನ್ನೇ ಪ್ರೀತಿಮಾಡುವುದರಿಂದ ಪುತ್ರನ ಜನನ, ಮರಣ ಮುಂತಾದ ತೀವ್ರತರವಾದ ಸುಖದುಃಖಗಳಲ್ಲಿ ಮನಸ್ಸಿನಲ್ಲಿ ವಿಕಾರವನ್ನು ಹೊಂದದೆ ಸಮಚಿತ್ತನಾಗಿ ಇರುತ್ತಾನೆ. ಆತ್ಮನಲ್ಲಿಯೇ ಅವನ ಮನಸ್ಸು ನೆಲೆನಿಂತಿರುವ ಕಾರಣ ಮನಸ್ಸಿನಲ್ಲಿ ಗೋಡೆ, ಕಲ್ಲು, ಬಂಗಾರ ಇವುಗಳೆಲ್ಲವನ್ನೂ ಸಮನಾಗಿ ಕಾಣುತ್ತಾನೆ. ಅದೇ ರೀತಿ ಪ್ರಿಯ ಮತ್ತು ಅಪ್ರಿಯ ವಿಷಯಗಳನ್ನು ಸಮನಾಗಿ ಭಾವಿಸುತ್ತಾನೆ. ನಿಂದೆಗೆ ಕುಗ್ಗದೆ, ಸ್ತೋತ್ರಕ್ಕೆ ಹಿಗ್ಗದೆ ಸಮಚಿತ್ತ ಉಳ್ಳವನಾಗಿ ಸ್ಥಿರಬುದ್ಧಿಯಿಂದ ಇರುತ್ತಾನೆ. ತ್ರಿಗುಣಾತೀತನು ಮಾನಾಪಮಾನಗಳಲ್ಲಿಯೂ, ಶತ್ರುಮಿತ್ರರ ವಿಷಯದಲ್ಲಿಯೂ ಸಮವಾದ ಬುದ್ಧಿ ಉಳ್ಳವನಾಗಿರುತ್ತಾನೆ. ಶರೀರ ಸಂಬಂಧದಿಂದ ಉಂಟಾಗುವ ಸಾಂಸಾರಿಕವಾದ ಸಕಲ ಕಾರ್ಯಾರಂಭಪ್ರವೃತ್ತಿಯನ್ನು

ತ್ಯಾಗ ಮಾಡುತ್ತಾನೆ. ಸತ್ವರಜಸ್ತಮೋ ಗುಣಗಳನ್ನು ಅತಿಕ್ರಮಿಸುವ ತ್ರಿಗುಣಾತೀತನು ಈ ಎಲ್ಲ ಗುಣಗಳಿಂದ ಕೂಡಿರುತ್ತಾನೆ.

**IV ಸತ್ವಾದಿ ತ್ರಿಗುಣಗಳ ನಿವೃತ್ತಿಗೂ, ಗತಿತ್ರಯಗಳ ಪ್ರಾಪ್ತಿಗೂ ಪರಮಾತ್ಮನಲ್ಲಿ ಶರಣಾಗತಿಯೇ ಉಪಾಯ (ಶ್ಲೋಕಗಳು 26 ಮತ್ತು 27)**

ಅನಾದಿ ಕಾಲದಿಂದ ಉಂಟಾಗಿರುವ ಪ್ರಕೃತಿಯ ವಾಸನೆಗಳು ಅಡ್ಡಿಪಡಿಸುವುದರಿಂದ ಕೇವಲ ಪ್ರಕೃತಿ ಆತ್ಮರುಗಳ ವಿವೇಕ ಜ್ಞಾನಾನುಸಂಧಾನದಿಂದ ಮಾತ್ರ ತ್ರಿಗುಣಾತೀತನಾಗಲು ಸಾಧ್ಯವಿಲ್ಲ. ಹಿಂದೆ ಏಳನೆಯ ಅಧ್ಯಾಯದಲ್ಲಿಯೇ **''ದೈವೀಹ್ಯೇಷಾಗುಣಮಯೀ ಮಮ ಮಾಯಾದುರತ್ಯಯಾ''** ಅಂದರೆ ತ್ರಿಗುಣಗಳಿಂದ ಕೂಡಿದ ಈ ಪ್ರಕೃತಿಯು ಭಗವಂತನಾದ ನನ್ನಿಂದ ಉಂಟಾಗಿರುವುದರಿಂದ ಇದನ್ನು ದಾಟುವುದು ಬಹಳ ಕಷ್ಟ. ಆದರೆ **"ಮಾಂ ಏವಯೇ ಪ್ರಪದ್ಯಂತೇ ಮಾಯಮೇತಾಂ ತರಂತಿತೇ"** ಅಂದರೆ ಯಾರು ನನ್ನಲ್ಲಿ ಶರಣರಾಗುತ್ತಾರೆಯೋ ಅವರು ಇದನ್ನು ದಾಟಬಲ್ಲರು - ಎಂದು ಶ್ರೀ ಕೃಷ್ಣನು ತಿಳಿಸಿದ್ದಾನೆ. ಅದನ್ನೇ ಇಲ್ಲಿ ಮತ್ತೆ ವಿವರಿಸಿ ತಿಳಿಸಿದ್ದಾನೆ. ಆಶ್ರಿತವತ್ಸಲನಾದ, ಪರಮಾತ್ಮನಾದ ನನ್ನನ್ನು ಅವ್ಯಭಿಚಾರೀ ಭಕ್ತಿಯಿಂದ ಅಂದರೆ ಏಕಾಂತಿಕ ಸರ್ವಶ್ರೇಷ್ಠವಾದ ಭಕ್ತಿಯೋಗದಿಂದ ಸೇವೆಯನ್ನು ಮಾಡುವವನು ದುಸ್ತರವಾದ ಈ ಸತ್ವರಜಸ್ತಮೋ ಗುಣಗಳನ್ನು ದಾಟಿ ಬ್ರಹ್ಮಭಾವವನ್ನು ಹೊಂದುತ್ತಾನೆ, ಅಂದರೆ ಅವ್ಯಕ್ತವೂ ಅವ್ಯಯವೂ ಆದ ಪ್ರತ್ಯಗಾತ್ಮ ಸಾಕ್ಷಾತ್ಕಾರವನ್ನು ಪಡೆಯುತ್ತಾನೆ. ಆದ್ದರಿಂದ ತ್ರಿಗುಣಗಳನ್ನು ದಾಟಲು ನನ್ನಲ್ಲಿ (ಭಗವಂತನಲ್ಲಿ) ಶರಣಾಗತಿಯೇ ಉಪಾಯವು. ಶುದ್ಧವಾದ ನಾಶರಹಿತವಾದ ಆತ್ಮ ಸಾಕ್ಷಾತ್ಕಾರಕ್ಕೂ, ಶಾಶ್ವತ ಧರ್ಮಕ್ಕೂ ಏಕಾಂತಿಕ ಆತ್ಯಂತಿಕ ಸುಖರೂಪವಾದ ಮೋಕ್ಷಕ್ಕೂ ನಾನೇ ಕಾರಣನು. ತ್ರಿಗುಣಗಳನ್ನು ಅತಿಕ್ರಮಿಸಿ ತ್ರಿಗುಣಾತೀತನಾಗಿ ಐಶ್ವರ್ಯ, ಕೈವಲ್ಯ ಭಗವದನುಭವಾದಿ ಗತಿತ್ರಯಗಳನ್ನು ಹೊಂದಲು ನಾನೇ ಉಪಾಯನಾಗಿದ್ದೇನೆ. ಆದ್ದರಿಂದ ತ್ರಿಗುಣಗಳನ್ನು ದಾಟಲು ಮತ್ತು ತ್ರಿಗುಣಾತೀತನಾಗಿ ಬ್ರಹ್ಮಭಾವವನ್ನು ಹೊಂದಲು ನನ್ನಲ್ಲಿ ಅವ್ಯಭಿಚಾರೀ ಭಕ್ತಿಯಿಂದ ಕೂಡಿದ ಪ್ರಪತ್ತಿ ಒಂದೇ ಮಾರ್ಗವು ಎಂಬುದನ್ನು ತಿಳಿದುಕೊಳ್ಳುವವನಾಗು."

ಈ ಅಧ್ಯಾಯದಲ್ಲಿ ತಿಳಿಸಿರುವ ವಿಷಯಗಳನ್ನು ಶ್ರೀ ಯಾಮುನಾ ಚಾರ್ಯರು ಅವರ ಗೀತಾರ್ಥ ಸಂಗ್ರಹದ 18ನೆಯ ಶ್ಲೋಕದಲ್ಲಿ ಹೀಗೆ ವಿವರಿಸಿದ್ದಾರೆ.

ಗುಣಬಂಧ ವಿಧಾಂತೇಷಾಂ ಕರ್ತೃತ್ವಂ ತನ್ನಿವರ್ತನಂ ।
ಗತಿತ್ರಯ ಸ್ವಮೂಲತ್ವಂ ಚತುರ್ದಶ ಉದೀರ್ಯತೇ ॥

ಅಂದರೆ ಸತ್ವರಜಸ್ತಮೋಗುಣಗಳು ಜೀವಾತ್ಮನಿಗೆ ಶರೀರ ಸಂಬಂಧಗಳನ್ನು ಉಂಟುಮಾಡಿ ಬಂಧಿಸುವ ರೀತಿಯನ್ನೂ, ಆ ಗುಣಗಳು ಮಾಡುವ ಕಾರ್ಯಗಳ ಪ್ರಕಾರವನ್ನೂ, ತ್ರಿಗುಣಗಳ ನಿವೃತ್ತಿಗೆ ಪರಮಾತ್ಮನಲ್ಲಿ ಶರಣಾಗತಿಯೇ ಮಾರ್ಗವೆಂಬುದನ್ನೂ ಮತ್ತು ಗತಿತ್ರಯಗಳ ಪ್ರಾಪ್ತಿಗೂ ಪರಮಾತ್ಮನೇ ಉಪಾಯವೆಂಬುದನ್ನೂ ಹದಿನಾಲ್ಕನೆಯ ಅಧ್ಯಾಯದಲ್ಲಿ ತಿಳಿಸಿದೆ.

*****

## ಹದಿನೈದನೆಯ ಅಧ್ಯಾಯ

# ಪುರುಷೋತ್ತಮ ಯೋಗ

ವಿಷಯ ಸೂಚಿಕೆ :

I ಸಂಸಾರಕ್ಕೂ ಅಶ್ವತ್ಥ ವೃಕ್ಷಕ್ಕೂ ಇರುವ ಹೋಲಿಕೆ :- (ಸಂಸಾರವು ಅಶ್ವತ್ಥ ವೃಕ್ಷದಂತೆ ಮೇಲೆ ಹುಟ್ಟಿ ಅಲ್ಲಿಂದ ಇಳಿದು ಕೆಳಗೆ ಹರಡಿಕೊಂಡಿದೆ) (ಶ್ಲೋಕಗಳು 1 ಮತ್ತು 2)

II ಸಂಸಾರವೆಂಬ ಅಶ್ವತ್ಥವೃಕ್ಷವನ್ನು ಕತ್ತರಿಸಲು ಉಪಾಯ – ಭಗವಂತನಲ್ಲಿ ಶರಣಾಗತಿ (ಶ್ಲೋಕಗಳು 3 ರಿಂದ 6)

III ಬದ್ಧ, ಮುಕ್ತ, ಜೀವಾತ್ಮರವರ್ಣನೆ (ಶ್ಲೋಕಗಳು 7 ರಿಂದ 11)

(ಪ್ರಕೃತಿ ಸಂಬಂಧದಿಂದ ಕೂಡಿದವರಾಗಿ ಸಂಸಾರದಲ್ಲಿ ಬಂಧಿತರಾಗಿರುವವರೇ ಬದ್ಧರು – ಪ್ರಕೃತಿ ಸಂಬಂಧವನ್ನು ಕಳೆದುಕೊಂಡು ಸಂಸಾರದಿಂದ ಬಿಡುಗಡೆ ಹೊಂದಿರುವವರೇ ಮುಕ್ತರು.)

IV ಉತ್ತಮ ಪುರುಷನಾದ ಪರಮಾತ್ಮನ ಸ್ವರೂಪದ ನಿರೂಪಣೆ (ಶ್ಲೋಕಗಳು 12 ರಿಂದ 20)

(ಪರಮಾತ್ಮನು ಬದ್ಧ ಮತ್ತು ಮುಕ್ತ ಪುರುಷರಿಗಿಂತ ಅನ್ಯನೂ, ಅವರನ್ನು

**ವಿಭೂತಿಯಾಗಿ ಹೊಂದಿ ಅವರನ್ನು ಆಳುವವನೂ ಆಗಿ ಉತ್ತಮಪುರುಷನೆನಿಸಿ ಕೊಂಡಿದ್ದಾನೆ).**

ಹದಿಮೂರನೆಯ ಅಧ್ಯಾಯದಲ್ಲಿ ಕ್ಷೇತ್ರ ಕ್ಷೇತ್ರಜ್ಞರ ಅಂದರೆ ಪ್ರಕೃತಿ (ದೇಹ) ಮತ್ತು ಪುರುಷರ (ಆತ್ಮರ) ಸ್ವರೂಪವೂ, ಪುರುಷನು (ಆತ್ಮನು) ಪ್ರಕೃತಿಯ ಗುಣಸಂಗದಿಂದ ಅದಕ್ಕೆ ಅನುಗುಣವಾದ ದೇವ ಮನುಷ್ಯಾದಿ ಜನ್ಮಪಡೆಯುತ್ತಾನೆ ಎಂಬುದೂ ತಿಳಿಸಿದೆ. ಹದಿನಾಲ್ಕನೆಯ ಅಧ್ಯಾಯದಲ್ಲಿ ಭಗವದ್ಭಕ್ತಿಯ ಮೂಲಕ ಈ ಗುಣಸಂಗದ ನಿವೃತ್ತಿಯನ್ನು ಮಾಡಿಕೊಳ್ಳಬಹುದು ಎಂದು ಹೇಳಿದೆ.

ಈಗ ಹದಿನೈದನೆಯ ಅಧ್ಯಾಯದಲ್ಲಿ ಭಜಿಸಲು ಯೋಗ್ಯನಾದ ಭಗವಂತನು ಬದ್ಧ ಮತ್ತು ಮುಕ್ತ ಜೀವಿಗಳನ್ನು ವಿಭೂತಿಗಳನ್ನಾಗಿ ಹೊಂದಿದ್ದಾನೆ. ಮತ್ತು ಅಖಿಲ ಹೇಯ ಪ್ರತ್ಯನೀಕನಾಗಿ, ಕಲ್ಯಾಣೈಕತಾನನಾಗಿರುವುದರಿಂದ ತನ್ನ ವಿಭೂತಿಗಳಾದ ಕ್ಷರಾಕ್ಷರ ರೂಪಿಗಳಾದ ಬದ್ಧ ಮತ್ತು ಮುಕ್ತ ಜೀವಿಗಳಿಗಿಂತ ಅತ್ಯಂತ ಉತ್ಕೃಷ್ಟರೂಪದಿಂದ ವಿಜಾತೀಯನಾಗಿ ಪುರುಷೋತ್ತಮನಾಗಿ ಇದ್ದಾನೆಂದು ತಿಳಿಸಿದೆ.

ಈ ಜಗತ್ತು ಬಹಳ ದೊಡ್ಡದಾದ ಅಶ್ವತ್ಥವೃಕ್ಷದಂತೆ ವಿಸ್ತಾರವಾಗಿ ಎಲ್ಲೆಲ್ಲಿಯೂ ಹರಡಿಕೊಂಡು ಚೇತನನನ್ನು ಬಂಧಿಸುತ್ತದೆ. ಚೇತನನು ಈ ಜಗತ್ತನ್ನು ಅಸಂಗಶಸ್ತ್ರದ ಮೂಲಕ ಅಂದರೆ ಸಂಗರಹಿತನಾಗಿ ಕರ್ಮವನ್ನು ಮಾಡುವುದರ ಮೂಲಕ ಭಗವಂತನಲ್ಲಿ ಭಕ್ತಿಯನ್ನು ಹೊಂದಿ ಅವನಲ್ಲಿ ಶರಣಾಗಿ ಅವನ ಕೃಪೆಯಿಂದ ಬಂಧಮುಕ್ತನಾಗಬಹುದು ಎಂಬುದನ್ನು ತಿಳಿಸಲು - ಮೊದಲು ಜಗತ್ತೆಂಬ ಚೇತನ - ವಸ್ತುವಿನ ಪರಿಣಾಮ ವಿಶೇಷವನ್ನು ಅಶ್ವತ್ಥವೃಕ್ಷರೂಪದಲ್ಲಿ ಕಲ್ಪನೆ ಮಾಡಿಕೊಂಡು ಅದನ್ನು ಅಸಂಗಶಸ್ತ್ರದಿಂದ ಕತ್ತರಿಸು ಎಂದು ಶ್ರೀಕೃಷ್ಣನು ಈ ಅಧ್ಯಾಯದಲ್ಲಿ ಉಪದೇಶಿಸಿದ್ದಾನೆ.

**I ಸಂಸಾರಕ್ಕೂ ಅಶ್ವತ್ಥವೃಕ್ಷಕ್ಕೂ ಇರುವ ಹೋಲಿಕೆ :- (ಸಂಸಾರವು ಅಶ್ವತ್ಥ ವೃಕ್ಷದಂತೆ ಮೇಲೆ ಹುಟ್ಟಿ ಅಲ್ಲಿಂದ ಇಳಿದು ಕೆಳಗೆ ಹರಡಿಕೊಂಡಿದೆ.)**

**(ಶ್ಲೋಕಗಳು 1 ಮತ್ತು 2)**

ಶ್ರೀಕೃಷ್ಣನು ಅರ್ಜುನನಿಗೆ ತಿಳಿಸುತ್ತಾನೆ - "ಮೇಲುಗಡೆ ಬೇರು ಬಿಟ್ಟುಕೊಂಡು ಕೆಳಗಡೆ ಶಾಖೋಪಶಾಖೆಗಳಾಗಿ ಕೊನೆಮೊದಲಿಲ್ಲದಂತೆ

ಹರಡಿಕೊಂಡು ಬೆಳೆದಿರುವ ಒಂದು ಅಶ್ವತ್ಥವೃಕ್ಷವು ಉಂಟೆಂದು ಶ್ರುತಿಗಳು ತಿಳಿಸುತ್ತವೆ. ಪ್ರಪಂಚ ರೂಪವಾದ ಈ ಸಂಸಾರವೆಂಬುದು ಸ್ಥಿರವಲ್ಲವಾದುದರಿಂದ ಇದನ್ನು ಒಂದು ಅಶ್ವತ್ಥವೃಕ್ಷಕ್ಕೆ ಹೋಲಿಸಬಹುದೆಂದು ವೇದಗಳು ಹೇಳುತ್ತವೆ. ಮೇಲಿನ ಲೋಕದಲ್ಲಿರುವ ಚತುರ್ಮುಖ ಬ್ರಹ್ಮನಿಂದ ಈ ಸಂಸಾರವು ಸೃಷ್ಟಿಸಲ್ಪಟ್ಟಿರುವುದರಿಂದ ಇದರ ಬೇರು ಮೇಲಿನ ಲೋಕದಲ್ಲಿದೆ. ಇದಕ್ಕೆ ಕೆಳಗಿನ ಲೋಕವಾದ ಭೂಲೋಕದಲ್ಲಿ ಇರುವ ಮನುಷ್ಯ, ಪಶು, ಪಕ್ಷಿ ಮತ್ತು ಸ್ಥಾವರಗಳು ಕೊಂಬೆಗಳಾಗಿವೆ. ಅನಾಸಕ್ತಿಯನ್ನು ಉಂಟುಮಾಡುವ ಸತ್ಯದ ಜ್ಞಾನವು ಉದಯವಾಗುವವರೆಗೂ ಇದನ್ನು ಛೇದಿಸಲು ಆಗದೇ ಇರುವುದರಿಂದ ಇದನ್ನು ಅವ್ಯಯವೆಂದು ಹೇಳಿದ್ದಾರೆ. ವೇದಗಳಲ್ಲಿ ಅಲ್ಲಲ್ಲಿ ಪ್ರತಿಪಾದಿಸಿರುವ ಪುತ್ರ, ಪಶು, ಅನ್ನ ಮೊದಲಾದವುಗಳಿಗೆ ಸಾಧನವಾದ ಕಾಮ್ಯಕರ್ಮಗಳಿಂದ ಈ ಮರವು ವೃದ್ಧಿ ಆಗುವುದರಿಂದ ವೇದಗಳು ಇದರ ಎಲೆಗಳಾಗಿವೆ. ಇಂತಹ ಸಂಸಾರವೆಂಬ ಅಶ್ವತ್ಥವೃಕ್ಷವನ್ನು ಯಾವನು ತಿಳಿದುಕೊಳ್ಳುತ್ತಾನೆಯೋ ಅವನು ವೇದಜ್ಞನು ಏತಕ್ಕೆಂದರೆ ವೇದಗಳೇ ಈ ಸಂಸಾರ ವೃಕ್ಷದ ಸ್ವರೂಪಜ್ಞಾನವನ್ನೂ ಮತ್ತು ಅದನ್ನು ಕತ್ತರಿಸುವ ಉಪಾಯಜ್ಞಾನವನ್ನೂ ತಿಳಿಸುತ್ತವೆ. ಅದನ್ನು ಅರಿಯುವವನು ವೇದವಿತ್ ಎಂದು ಕರೆಯಲ್ಪಡುವನು.

ಈ ಸಂಸಾರವೆಂಬ ವೃಕ್ಷದ ಶಾಖೆಗಳು ಕೆಳಗಿನ ಲೋಕಗಳಲ್ಲೂ ಮೇಲಿನ ಲೋಕಗಳಲ್ಲೂ ಹರಡಿಕೊಂಡಿವೆ. ಕೆಳಗಿನ ಲೋಕಗಳಲ್ಲಿ ಮನುಷ್ಯ, ಪಶು ಮುಂತಾದ ರೂಪಗಳಲ್ಲಿ ಹರಡಿಕೊಂಡಿದೆ. ಮೇಲಿನ ಲೋಕಗಳಲ್ಲಿ ಗಂಧರ್ವ, ಯಕ್ಷ ಮೊದಲಾದ ರೂಪಗಳಲ್ಲಿ ಹರಿಡಿಕೊಂಡಿದೆ. ಈ ಶಾಖೆಗಳು ಸತ್ತ್ವರಜಸ್ತಮೋಗುಣಗಳ ಮೂಲಕ ವೃದ್ಧಿ ಹೊಂದುತ್ತವೆ ಮತ್ತು ಶಬ್ದಾದಿ ವಿಷಯಗಳೆಂಬ ಚಿಗುರುಗಳನ್ನು ಹೊಂದುತ್ತವೆ. ಮತ್ತು ಅದರ ಕಳೆಗಳು ಮೇಲಕ್ಕೂ ಕೆಳಕ್ಕೂ ಪ್ರಸರಿಸಿ ಅದರ ಬೇರು ಎಲ್ಲಕಡೆಗಳಲ್ಲಿಯೂ ಹರಡಿಕೊಂಡಿವೆ. ಮಹಡಿಯಲ್ಲಿ ನೆಟ್ಟಿರುವ ಲತೆಯು ಭೂಮಿಗೆ ಇಳಿಬಿದ್ದು ಪುನಃ ಭೂಮಿಯಲ್ಲಿ ಬೇರುಬಿಟ್ಟು ಮೇಲ್ಗಡೆಗೆ ಹಬ್ಬುವ ರೀತಿಯಲ್ಲಿ ಮನುಷ್ಯಲೋಕಕ್ಕೆ ಬಂದ ಬೇರು ಕರ್ಮದ ಮೂಲಕ ಸ್ವರ್ಗಲೋಕದವರೆಗೂ ಹರಡಿಕೊಂಡಿದೆ ಎಂಬುದು ಇದರ ಭಾವವು.

## II ಸಂಸಾರವೆಂಬ ಅಶ್ವತ್ಥವೃಕ್ಷವನ್ನು ಕತ್ತರಿಸಲು ಉಪಾಯ - ಭಗವಂತನಲ್ಲಿ ಶರಣಾಗತಿ ( ಶ್ಲೋಕಗಳು 3 ರಿಂದ 6)

ಆದರೆ ಈ ವೃಕ್ಷದ ರೂಪವಾಗಲೀ, ಆದಿಯಾಗಲೀ, ಅದು ನಿಲ್ಲಲು ಆಧಾರವಾದ ಬುಡವಾಗಲೀ, ಅದರ ನೆಲೆಯಾಗಲೀ, ಕೊನೆಯಾಗಲೀ, ಯಾವುದೂ ತಿಳಿಯುವುದಿಲ್ಲ. ಸಂಸಾರಿಯಾದ ಮನುಷ್ಯನು ''ನಾನು ಮನುಷ್ಯನು, ದೇವದತ್ತನ ಮಗನು, ಯಜ್ಞದತ್ತನ ತಂದೆ, ಇದಕ್ಕೆ ಅನುಗುಣವಾಗಿ ಇದ್ದೇನೆ' ಎಂದು ಇಷ್ಟು ಮಾತ್ರ ಅರಿಯಬಲ್ಲನೇ ವಿನಃ ಅವುಗಳಿಂದ ಬೇರೆಯಾದ ಆದಿಅಂತ್ಯವನ್ನು ಅರಿಯಲಾರನು. ಆದುದರಿಂದ ವಾಚಿಕ, ಕಾಯಿಕ, ಮಾನಸಿಕ ಕರ್ಮಗಳಿಂದ ಬೆಳೆದು ಭದ್ರವಾಗಿ, ಧೃಡವಾಗಿ ಬೇರೂರಿರುವ ಈ ಸಂಸಾರವೆಂಬ ಅಶ್ವತ್ಥವೃಕ್ಷವನ್ನು ವಿಷಯ ವೈರಾಗ್ಯವೆಂಬ ಧೃಡವಾದ ಅಸಂಗರೂಪ ಶಸ್ತ್ರದಿಂದ ಕಡಿದು ಪುನರಾವರ್ತಿ ಇಲ್ಲದೇ ಇರುವ ಸ್ಥಾನವನ್ನು ಹೊಂದುವ ಅಂದರೆ ಮುಂದೆ ಎಲ್ಲಿಗೆ ಹೋದರೆ ಪುನಃರ್ಜನ್ಮವಿಲ್ಲವೋ ಅಂತಹ ಪ್ರಾಪ್ಯಸ್ಥಾನವನ್ನು ಹೊಂದುವ ಮಾರ್ಗವನ್ನು ಹುಡುಕಬೇಕು. ಪರಮಾತ್ಮನಲ್ಲಿ ಶರಣಾಗತಿ ಮಾಡುವುದೇ ಅದಕ್ಕೆ ಉಪಾಯವು (ಮಾರ್ಗವು) ಎಂದು ಈ ಅಧ್ಯಾಯದ 4ನೇ ಶ್ಲೋಕವಾದ **''ತಮೇವಚಾದ್ಯಂ ಪುರುಷಂ ಪ್ರಪದ್ಯೇಯತಃ ಪ್ರವೃತ್ತಿಃ ಪ್ರಸೃತಾಪುರಾಣೀ''** ಎಂಬುದರಲ್ಲಿ ತಿಳಿಸಿದೆ. ಅಂದರೆ ಎಲ್ಲವನ್ನೂ ಸೃಷ್ಟಿಸಿರುವ ಪರಮಾತ್ಮನಿಂದ ಈ ಗುಣಮಯವಾದ ಭೋಗಾಸಕ್ತಿಯು ಪ್ರಸರಿಸಲ್ಪಟ್ಟಿದೆ. ಆದ್ದರಿಂದ ಅದರ ನಿವೃತ್ತಿಗಾಗಿ ಆ ಆದಿ ಪುರುಷನನ್ನೇ ಶರಣಾಗತಿ ಮಾಡುತ್ತೇನೆ ಎಂದು ಅರ್ಥ.

ಪ್ರಾಚೀನ ಮುಮುಕ್ಷುಗಳು ಶರಣಾಗತಿಯನ್ನು ಆಚರಿಸಿ ಈ ಸಂಸಾರದ ಬಂಧನದಿಂದ ಮುಕ್ತರಾಗಿದ್ದಾರೆ ಎಂಬ ಅಭಿಪ್ರಾಯವೂ ಇದರಲ್ಲಿ ಸೂಚಿತವಾಗಿದೆ. ಇದೇ ಅಭಿಪ್ರಾಯವು ಹಿಂದೆ 7ನೇಯ ಅಧ್ಯಾಯದಲ್ಲಿ **''ದೈವೀಹ್ಯೇಷಾ ಗುಣಮಯೀ''** ಎಂಬ ಶ್ಲೋಕದಲ್ಲಿ ವಿವರಿಸಲ್ಪಟ್ಟಿದೆ. ಹೀಗೆ ಪರಮ ಪುರುಷನನ್ನು ಶರಣು ಹೊಂದಿದವರು ದೇಹವೇ ಆತ್ಮವೆಂಬ ಅಭಿಮಾನರೂಪವಾದ ಮೋಹವನ್ನೂ ಸತ್ವರಜಸ್ತಮೋಗುಣಮಯವಾದ ಭೋಗಗಳಲ್ಲಿ ಆಸಕ್ತಿ ಎಂಬ ದೋಷವನ್ನೂ ಹೋಗಲಾಡಿಸಿಕೊಂಡು, ಆತ್ಮಜ್ಞಾನನಿರತರಾಗಿ, ಇತರ ವಿಷಯಗಳಲ್ಲಿ ಆಸೆಯನ್ನು ತೊರೆದು, ಸುಖ- ದುಃಖಾದಿ ದ್ವಂದ್ವಗಳಿಂದ ಬಿಡಲ್ಪಟ್ಟವರಾಗಿ, ಆತ್ಮಾನಾತ್ಮ ವಿವೇಕವುಳ್ಳ ಜ್ಞಾನಿಗಳಾಗಿ ನಾಶರಹಿತವಾದ ಪದವನ್ನು ಹೊಂದುವರು. ಅಂದರೆ

ಅಪರಿಚ್ಛಿನ್ನ ಜ್ಞಾನಾಕಾರನಾದ ಅಂದರೆ ಯಥಾವಸ್ಥಿತನಾದ ಆತ್ಮನನ್ನು ಹೊಂದುವರು. ನನ್ನನ್ನು ಶರಣು ಹೊಂದಿದವರು ಸಿದ್ಧಿ ಹೊಂದಲು ಬೇಕಾದ ಸಮಸ್ತ ಪ್ರವೃತ್ತಿಗಳನ್ನೂ ನನ್ನ ಕೃಪೆಯಿಂದ ಸುಖವಾಗಿ ಹೊಂದುವರು. ಯಾವ ಆತ್ಮನ ಸ್ವರೂಪವನ್ನು ಹೊಂದಿದವರು ತಿರುಗಿ ಪುನಃ ಹಿಂತಿರುಗುವುದಿಲ್ಲವೋ ಆ ಆತ್ಮನ ಜ್ಞಾನಜ್ಯೋತಿಯು ನಿರತಿಶಯ ವಾದುದು. ಸೂರ್ಯನಾಗಲೀ, ಚಂದ್ರನಾಗಲೀ, ಅಗ್ನಿಯಾಗಲೀ, ಆ ಆತ್ಮ ಜ್ಯೋತಿ ಯನ್ನು ಪ್ರಕಾಶ ಪಡಿಸಲಾರದು. ಆ ಆತ್ಮನೆಂಬ ವಸ್ತುವು ನನ್ನದೇ ಆಗಿದೆ. ಅಂದರೆ ನನ್ನ ವಿಭೂತಿರೂಪವಾಗಿ ನನ್ನ ಅಂಶವಾಗಿದೆ.

## III ಬದ್ಧ, ಮುಕ್ತ, ಜೀವಾತ್ಮರವರ್ಣನೆ (ಶ್ಲೋಕಗಳು 7ರಿಂದ 11)

**ಪ್ರಕೃತಿ ಸಂಬಂಧದಿಂದ ಕೂಡಿದವರಾಗಿ ಸಂಸಾರದಲ್ಲಿ ಬಂಧಿತ ರಾಗಿರುವವರೇ ಬದ್ಧರು - ಪ್ರಕೃತಿ ಸಂಬಂಧವನ್ನು ಕಳೆದುಕೊಂಡು ಸಂಸಾರದಿಂದ ಬಿಡುಗಡೆ ಹೊಂದಿರುವವರೇ ಮುಕ್ತರು.**

ಮೇಲೆ ತಿಳಿಸಿದಂತೆ ಈ ಜೀವಾತ್ಮರು ನನ್ನ ಸನಾತನವಾದ ಅಂಶವಾಗಿದ್ದರೂ ಕೂಡ ಕೆಲವರು ಅನಾದಿಕರ್ಮರೂಪವಾದ ಅವಿದ್ಯೆಯಿಂದ ಆವರಿಸಲ್ಪಟ್ಟು ಅತಿ ಸಂಕುಚಿತವಾದ ಜ್ಞಾನವುಳ್ಳವರಾಗಿ ಕರ್ಮಕ್ಕೆ ಅನುಸಾರವಾಗಿ ದೇವ ಮನುಷ್ಯಾದಿ ಶರೀರಗಳನ್ನು ಪಡೆದು ಪಂಚೇಂದ್ರಿಯಗಳನ್ನೂ ಮನಸ್ಸನ್ನೂ ತಮ್ಮ ಭೋಗಕ್ಕಾಗಿ ಪ್ರೇರೇಪಿಸುವರು. ಮತ್ತೆ ಕೆಲವರು ಮೇಲೆ ಹೇಳಿದಂತೆ ಶರಣಾಗತಿ ಮಾರ್ಗದಿಂದ ಸಂಸಾರದಿಂದ ಮುಕ್ತರಾಗಿ ಸ್ವಸ್ವರೂಪದಿಂದ ಇರುವರು. ಆತ್ಮವು ಒಂದು ಶರೀರವನ್ನು ಬಿಟ್ಟು ಮತ್ತೊಂದು ಶರೀರವನ್ನು ಸೇರುವಾಗ ವಾಯುವು ಪುಷ್ಪಾದಿಗಳಲ್ಲಿರುವ ಗಂಧದ ಪರಿಮಳವನ್ನು ತೆಗೆದುಕೊಂಡು ಹೋಗುವ ಹಾಗೆ ಶರೀರದಲ್ಲಿ ಇರುವ ತನಗೆ ಅಧೀನವಾದ ಇಂದ್ರಿಯಗಳನ್ನು ಭೂತಸೂಕ್ಷ್ಮಗಳೊಡನೆ ಎಳೆದುಕೊಂಡು ಹೋಗುತ್ತದೆ. ಆ ಆತ್ಮವು ಶ್ರೋತ್ರೇಂದ್ರಿಯವನ್ನೂ, ನೇತ್ರೇಂದ್ರಿಯ ವನ್ನೂ, ತ್ವಗಿಂದ್ರಿಯವನ್ನೂ, ಜಿಹ್ವೇಂದ್ರಿಯವನ್ನೂ ಮತ್ತು ಘ್ರಾಣೇಂದ್ರಿಯವನ್ನೂ ಅಂದರೆ ಕಿವಿ, ಕಣ್ಣು, ಚರ್ಮ, ನಾಲಿಗೆ ಮತ್ತು ಮೂಗು ಎಂಬ ಪಂಚೇಂದ್ರಿಯ ಗಳನ್ನೂ, ಮನಸ್ಸೆಂಬ ಅಂತರಿಂದ್ರಿಯವನ್ನೂ, ಆಧಾರವಾಗಿ ಮಾಡಿಕೊಂಡು ಶಬ್ದಾದಿ ವಿಷಯಗಳನ್ನು ಅನುಭವಿಸುತ್ತದೆ.

ಆತ್ಮಜ್ಞಾನವಿಲ್ಲದೆ ದೇಹವೇ ಆತ್ಮವೆಂಬ ಅಭಿಮಾನವುಳ್ಳವರಿಗೆ

ಮನುಷ್ಯಾಕಾರದ ಶರೀರದೊಡನೆ ಕೂಡಿರುವಾಗಲೂ, ಆ ಶರೀರವನ್ನು ಬಿಟ್ಟು ಹೊರಡುವಾಗಲೂ, ಆ ಶರೀರದಲ್ಲಿ ಬಂಧಿತರಾಗಿ ಇರುವ ಕಾಲದಲ್ಲಿ ಶಬ್ದಾದಿ ವಿಷಯಗಳನ್ನು ಅನುಭವಿಸುವಾಗಲೂ, ಆ ಶರೀರಕ್ಕಿಂತ ವಿಲಕ್ಷಣನಾಗಿ ಜ್ಞಾನೈಕಾಕಾರನಾಗಿರುವ ಆತ್ಮನ ಅನುಭವವು ಉಂಟಾಗುವುದಿಲ್ಲ. ಆದರೆ ಆತ್ಮಜ್ಞಾನವುಳ್ಳವರು ತಮ್ಮ ಜ್ಞಾನದೃಷ್ಟಿಯಿಂದ ಈ ಎಲ್ಲಾ ಅವಸ್ಥೆಗಳಲ್ಲಿಯೂ ಜ್ಞಾನೈಕಾಕಾರನಾದ ಆತ್ಮನನ್ನು ಸಾಕ್ಷಾತ್ಕರಿಸುವರು. ಭಗವಂತನನ್ನು ಶರಣು ಹೊಂದಿ ಕರ್ಮಯೋಗವನ್ನು ಆಶ್ರಯಿಸಿರುವ ನಿರ್ಮಲವಾದ ಮನಸ್ಸುಳ್ಳ ಯೋಗಿಗಳು ಜ್ಞಾನದೃಷ್ಟಿಯ ಮೂಲಕ ತಮ್ಮ ಶರೀರದಲ್ಲಿರುವ ಆತ್ಮನನ್ನು ಶರೀರದಿಂದ ಬೇರೆಯಾದ ಅದರ ನಿಜಸ್ವರೂಪದಲ್ಲಿ ಸಾಕ್ಷಾತ್ಕರಿಸುತ್ತಾರೆ. ಆದರೆ ಭಗವಂತನನ್ನು ಶರಣು ಹೊಂದದೆ ಅಶುದ್ಧವಾದ ಮನಸ್ಸುಳ್ಳವರು ಆತ್ಮನನ್ನು ಸಾಕ್ಷಾತ್ಕರಿಸಲು ಯೋಗ್ಯವಾದ ಮನಸ್ಸನ್ನು ಪಡೆಯದವರಾಗಿ, ಎಷ್ಟು ಪ್ರಯತ್ನಪಟ್ಟರೂ ಈ ಆತ್ಮನನ್ನು ಸಾಕ್ಷಾತ್ಕರಿಸಲಾರರು.

## IV ಉತ್ತಮ ಪುರುಷನಾದ ಪರಮಾತ್ಮನ ಸ್ವರೂಪದ ನಿರೂಪಣೆ (ಶ್ಲೋಕಗಳು 12 ರಿಂದ 20)

**ಪರಮಾತ್ಮನು ಬದ್ಧ ಮತ್ತು ಮುಕ್ತ ಪುರುಷರಿಗಿಂತ ಅನ್ಯನೂ, ಅವರನ್ನು ವಿಭೂತಿಯಾಗಿ ಹೊಂದಿ ಅವರನ್ನು ಆಳುವವನೂ ಆಗಿ ಉತ್ತಮ ಪುರುಷನೆನಿಸಿ ಕೊಂಡಿದ್ದಾನೆ.**

ಶ್ರೀಕೃಷ್ಣನು ಸೂರ್ಯ, ಚಂದ್ರ, ಅಗ್ನಿ ಇವುಗಳಿಗಿಂತ ಪ್ರಕಾಶಕವಾಗಿರುವ ಆತ್ಮನ ಜ್ಞಾನಜ್ಯೋತಿಯು ತನ್ನ ಅಂಶವೂ, ವಿಭೂತಿಯೂ ಆಗಿದೆ ಎಂದು ತಿಳಿಸಿದನು. ಈಗ ಭೂತಗಳನ್ನು ಧರಿಸಿರುವ ಪೃಥಿವಿಯ ಧಾರಣ ಶಕ್ತಿಯೂ ತನ್ನದೇ ಎಂದು ತಿಳಿಸುತ್ತಾನೆ. "ಸಮಸ್ತವಾದ ಜಗತ್ತನ್ನೂ ಪ್ರಕಾಶಗೊಳಿಸುವ ಸೂರ್ಯನಲ್ಲಿರುವ ತೇಜಸ್ಸೂ - ಹಾಗೆಯೇ ಚಂದ್ರ ಮತ್ತು ಅಗ್ನಿಗಳಲ್ಲಿರುವ ತೇಜಸ್ಸೂ ಎಲ್ಲವೂ ನನ್ನ ತೇಜಸ್ಸು ಮತ್ತು ವಿಭೂತಿಗಳಾಗಿವೆ. ನಾನು ಭೂಮಿ ಮೊದಲಾದ ಭೂತಗಳಲ್ಲಿ ಸೇರಿ ಎಲ್ಲಾ ವಸ್ತುಗಳನ್ನೂ ನನ್ನ ಶಕ್ತಿಯಿಂದ ಧರಿಸಿದ್ದೇನೆ. ನಾನೇ ಅಮೃತರಸಮಯವಾದ ಚಂದ್ರನಲ್ಲಿ ಸೇರಿ ಎಲ್ಲಾ ಔಷಧಿಗಳನ್ನೂ ವನಸ್ಪತಿಗಳನ್ನೂ ವೃದ್ಧಿಪಡಿಸುತ್ತೇನೆ. ನಾನೇ ಪ್ರಾಣಿಗಳ ದೇಹದಲ್ಲಿ ಇರುವ ವೈಶ್ವಾನರ ಅಂದರೆ ಜಠರಾಗ್ನಿಯಾಗಿ ಇದ್ದುಕೊಂಡು

ಪ್ರಾಣಾಪಾನಗಳ ಸಹಾಯದಿಂದ ಪ್ರಾಣಿಗಳು ಊಟಮಾಡುವ ಭೋಜ್ಯ, ಚೋಷ್ಯ, ಲೇಹ್ಯ, ಪಾನೀಯಗಳೆಂಬ ನಾಲ್ಕು ಬಗೆಯ ಅನ್ನವನ್ನು ಪಚನಮಾಡುವ ಶಕ್ತಿಯನ್ನು ಉಂಟುಮಾಡುತ್ತೇನೆ. ನಾನೇ ಸಮಸ್ತ ಭೂತಗಳ ಹೃದಯದಲ್ಲಿ ಆತ್ಮರೂಪವಾಗಿ ಪ್ರವೇಶಿಸಿ ನನ್ನ ಸಂಕಲ್ಪದಿಂದ ನಿಯಮನಮಾಡುತ್ತಾ ಇದ್ದೇನೆ. ಆದುದರಿಂದ ಎಲ್ಲರಿಗೂ ನನ್ನಿಂದಲೇ ಸ್ಮರಣವೂ, ಜ್ಞಾನವೂ ಜ್ಞಾನನಿವೃತ್ತಿಯೂ ಅಥವಾ ವಿತರ್ಕವೂ ಉಂಟಾಗುತ್ತದೆ. ಸಮಸ್ತ ವೇದಗಳಿಂದ ತಿಳಿಯಲ್ಪಡುವವನು ನಾನೇ ಆಗಿದ್ದೇನೆ. ಅಂದರೆ ದೇವ ಮನುಷ್ಯಾದಿ ಶಬ್ದಗಳು ಜೀವಾತ್ಮನನ್ನು ತಿಳಿಸುವಂತೆ ಸಮಸ್ತ ವೇದ ವಾಕ್ಯಗಳೂ ಸಮಸ್ತ ವಸ್ತುಗಳಲ್ಲಿ ಅಂತರಾತ್ಮನಾಗಿರುವ ನನ್ನನ್ನೇ ತಿಳಿಸುತ್ತವೆ. ಆದ್ದರಿಂದ ಸರ್ವವೇದಗಳಿಂದ ನಾನೇ ತಿಳಿಯಲ್ಪಡತಕ್ಕವನು ಆಗಿದ್ದೇನೆ. ವೇದಗಳಲ್ಲಿ ಹೇಳಿರುವ ಕರ್ಮಫಲವನ್ನು ಕೊಡತಕ್ಕವನೂ, ವೇದವನ್ನು ಚೆನ್ನಾಗಿ ಅರಿತಿರುವವನೂ ನಾನೇ ಆಗಿದ್ದೇನೆ' ಎಂದು ಹೇಳಿ ಸಮಸ್ತ ವೇದಗಳ ಸಾರಭೂತವಾದ ಅರ್ಥವನ್ನು ಮುಂದೆ ತಿಳಿಸುತ್ತಾನೆ.

ಜಗತ್ತಿನಲ್ಲಿ ಎರಡು ವಿಧವಾದ ಪುರುಷರಿದ್ದಾರೆ. ಅವರಿಗೆ **ಕ್ಷರ ಪುರುಷರು** ಮತ್ತು **ಅಕ್ಷರ ಪುರುಷರು** ಎಂದು ಹೆಸರು. ಶರೀರ ಸಂಬಂಧದಿಂದ ತಮ್ಮ ಪ್ರಕಾಶ ಸ್ವರೂಪವನ್ನು ಕಳೆದು ಕೊಂಡಿರುವ, ಸಮಸ್ತ ಬದ್ಧ ಜೀವರು ಕ್ಷರ ಪುರುಷರು. ಅಚಿತ್ ಸಂಬಂಧದಿಂದ ವಿಮುಕ್ತರಾಗಿ, ಆತ್ಮಜ್ಞಾನಿಗಳಾಗಿ ತಮ್ಮ ನಿಜಸ್ವರೂಪದಲ್ಲಿ ಇರುವ ಮುಕ್ತಾತ್ಮರು ಅಕ್ಷರ ಪುರುಷರು, ಆದರೆ **ಉತ್ತಮ ಪುರುಷನು** ಈ ಬದ್ಧ ಮುಕ್ತರಿಗಿಂತ ಬೇರೆಯಾದವನಾಗಿ, ನಾಶ ರಹಿತನಾಗಿ ಮೂರು ಲೋಕಗಳನ್ನೂ ಪ್ರವೇಶಿಸಿ ಅವುಗಳಿಗೆ ಅಂತರಾತ್ಮನಾಗಿ ಧರಿಸಿ ನಿಯಮಿಸುತ್ತಿದ್ದಾನೆ. ಅವನು ಕ್ಷರ ಎಂದು ಹೇಳಲ್ಪಡುವ ಬದ್ಧಾತ್ಮರಿಗಿಂತಲೂ, ಅಕ್ಷರ ಎಂದು ಹೇಳಲ್ಪಡುವ ಮುಕ್ತಾತ್ಮರಿಗಿಂತಲೂ ಬೇರೆಯವನಾದ ಉತ್ತಮ ಪುರುಷನಾಗಿ ಪರಮಾತ್ಮನೆಂದು ಕರೆಯಲ್ಪಟ್ಟಿದ್ದಾನೆ. ಅವನು ಚೇತನ ವಸ್ತುಗಳಿಗೂ, ಬದ್ಧರಿಗೂ, ಮುಕ್ತರಿಗೂ, ಅಂತರಾತ್ಮನಾಗಿ ವ್ಯಾಪಿಸಿ ಧರಿಸಿದ್ದಾನೆ ಮತ್ತು ಇವರುಗಳಿಗೆ ಸ್ವಾಮಿಯೂ, ಆಧಾರನೂ, ನಿಯಾಮಕನೂ ಆಗಿದ್ದಾನೆ. ಬದ್ಧ ಪುರುಷನಿಗಿಂತ ಮುಕ್ತ ಪುರುಷನು ಉತ್ಕೃಷ್ಟನು. ಆ ಮುಕ್ತ ಪುರುಷನಿಗಿಂತ ಭಗವಂತನು ಸರ್ವಾಂತರಾತ್ಮನಾಗಿ ರುವುದರಿಂದ ಉತ್ಕೃಷ್ಟತಮನು, ಹೀಗೆ ಕ್ಷರಾಕ್ಷರ ಜೀವಿಗಳಿಗಿಂತಲೂ ನಾನು ಉತ್ಕೃಷ್ಟತಮನಾಗಿ ಇರುವುದರಿಂದ

ಶ್ರುತಿಸ್ಮೃತಿಗಳಲ್ಲಿ **ಪುರುಷೋತ್ತಮನೆಂದು** ಕರೆಯಲ್ಪಟ್ಟು ಪ್ರಸಿದ್ಧಿ ಹೊಂದಿದ್ದೇನೆ. ಮೋಹರಹಿತನಾಗಿ ನನ್ನನ್ನು ಈ ರೀತಿ ಅಂದರೆ ಕ್ಷರ ಅಕ್ಷರ ಪುರುಷರಿಗಿಂತ ಅನ್ಯನಾಗಿಯೂ, ಉತ್ತಮನಾಗಿಯೂ ತಿಳಿದುಕೊಳ್ಳುವವನು ಸರ್ವವನ್ನೂ ಅರಿತವನಾಗಿ ನನ್ನನ್ನು ಸರ್ವ ರೀತಿಯಲ್ಲಿ ಭಜಿಸುತ್ತಾನೆ. ಅಂದರೆ ಭಗವಂತನಾದ ನನ್ನನ್ನು ಹೊಂದಲು ಮಾಡಬೇಕಾದ ಸಾಧನೆಗಳನ್ನು ಅರಿತವನಾಗಿ ಅತ್ಯಂತ ಪ್ರೀತಿಯಿಂದಲೂ, ಭಕ್ತಿಯಿಂದಲೂ ನನ್ನನ್ನು ಭಜಿಸುತ್ತಾನೆ.

ಸರ್ವಜ್ಞನಾದ ಭಗವಂತನು ರಹಸ್ಯಗಳಲ್ಲಿ ರಹಸ್ಯವೆನಿಸಿದ ಈ ಪುರುಷೋತ್ತಮತ್ವವನ್ನು ಪ್ರತಿಪಾದಿಸುವ ಜ್ಞಾನವನ್ನು ಅರ್ಜುನನಿಗೆ ತಿಳಿಯಪಡಿಸಿದ್ದಾನೆ. ಇದನ್ನು ಶಾಸ್ತ್ರರೀತ್ಯಾ ತಿಳಿದುಕೊಂಡವನು ಮೋಕ್ಷಸಾಧನವಾದ ಜ್ಞಾನವನ್ನು ಪಡೆದುಕೊಂಡು ಸಮಸ್ತ ಕರ್ತವ್ಯಗಳನ್ನು ಮಾಡಿದವನಾಗಿ ಕೃತಕೃತ್ಯನಾಗುತ್ತಾನೆ. ಅಂದರೆ ಅವನಿಗೆ ಪುರುಷೋತ್ತಮ ವಿಷಯವಾದ ಸಾಕ್ಷಾತ್ಕಾರವು ಉಂಟಾಗದಿದ್ದರೂ ಶಾಸ್ತ್ರಜನ್ಯವಾದ ಜ್ಞಾನವೇ ಸಮಸ್ತ ಫಲವನ್ನು ಕೊಡಬಲ್ಲದು ಎಂಬ ಅಭಿಪ್ರಾಯವು ಇಲ್ಲಿ ಸೂಚಿತವಾಗಿದೆ. ಈ ಅಧ್ಯಾಯದಲ್ಲಿ ಪರಮಾತ್ಮನು ಉತ್ತಮ ಪುರುಷನೂ, **ಪುರುಷೋತ್ತಮನೂ** ಆಗಿದ್ದಾನೆ ಎಂಬ ವಿಷಯವು ತಿಳಿಸಲ್ಪಟ್ಟಿರುವುದರಿಂದ ಇದಕ್ಕೆ ಪುರುಷೋತ್ತಮಯೋಗವೆಂದು ಹೆಸರು.

ಈ ಅಧ್ಯಾಯದಲ್ಲಿ ತಿಳಿಸಿರುವ ವಿಷಯಗಳನ್ನು ಶ್ರೀ ಯಾಮುನಾಚಾರ್ಯರು ಗೀತಾರ್ಥ ಸಂಗ್ರಹದ ಹತ್ತೊಂಬತ್ತನೆಯ ಶ್ಲೋಕದಲ್ಲಿ ಹೀಗೆ ತಿಳಿಸಿದ್ದಾರೆ

**"ಅಚಿನ್ಮಿಶ್ರಾದ್ವಿಶುದ್ಧಾಚ್ಚ ಚೇತನಾತ್ಪುರುಷೋತ್ತಮಃ।**
**ವ್ಯಾಪನಾದ್ಭರಣಾತ್ಸ್ವಾಮ್ಯಾದನ್ಯಃ ಪಂಚದಶೋದಿತಃ ॥"**

ಪರಮಾತ್ಮನು ಪ್ರಕೃತಿ ಸಂಬಂಧ ಹೊಂದಿ ಸಂಸಾರದಲ್ಲಿ ಬಂಧಿತರಾಗಿರುವ ಬದ್ಧ ಜೀವಾತ್ಮರನ್ನೂ ಮತ್ತು ಪ್ರಕೃತಿ ಸಂಬಂಧದಿಂದ ಬಿಡುಗಡೆ ಹೊಂದಿರುವ ಮುಕ್ತ ಜೀವಾತ್ಮರನ್ನೂ ಒಳಗೂ ಹೊರಗೂ ವ್ಯಾಪಿಸಿ ಧರಿಸಿ ಅವರೆಲ್ಲರಿಗೂ ಸ್ವಾಮಿಯಾಗಿರುವ ಪುರುಷೋತ್ತಮನಾಗಿ ಇರುವುದರಿಂದ ಅವರೆಲ್ಲರಿಗಿಂತಲೂ ಬೇರೆಯಾದವನಾಗಿದ್ದಾನೆ ಎಂದು ಹದಿನೈದನೆಯ ಅಧ್ಯಾಯದಲ್ಲಿ ತಿಳಿಸಿದೆ.

*****

## ಹದಿನಾರನೆಯ ಅಧ್ಯಾಯ

# ದೈವಾಸುರ ಸಂಪದ್ವಿಭಾಗಯೋಗ

ವಿಷಯ ಸೂಚಿಕೆ :

I ದೈವೀ ಸಂಪತ್ತನ್ನು ಪಡೆದಿರುವವರ ಗುಣಗಳು (ಶ್ಲೋಕಗಳು 1 ರಿಂದ 3)

II ಆಸುರೀ ಸಂಪತ್ತನ್ನು ಪಡೆದಿರುವವರ ಗುಣಗಳು. (ಶ್ಲೋಕಗಳು 4ರಿಂದ 18)

III ಪರಮಾತ್ಮನು ಅಸುರ ಸ್ವಭಾವವುಳ್ಳವರನ್ನು ಅಸುರಯೋನಿಗಳಲ್ಲಿ ಹುಟ್ಟಿಸಿ ಅಧೋಗತಿ ಹೊಂದುವಂತೆ ಮಾಡುತ್ತಾನೆ. (ಶ್ಲೋಕಗಳು 19 ಮತ್ತು 20)

IV ಅಸುರ ಸ್ವಭಾವಕ್ಕೆ ಮೂಲಕಾರಣ ಕಾಮ, ಕ್ರೋಧ, ಲೋಭಾದಿಗಳು ಮತ್ತು ಶಾಸ್ತ್ರಗಳ ಅನಾದರಣೆ (ಶ್ಲೋಕಗಳು 21 ರಿಂದ 23)

V ಕಾರ್ಯ ಅಕಾರ್ಯ ವ್ಯವಸ್ಥೆಗಳಿಗೆಲ್ಲಾ ಶಾಸ್ತ್ರವೇ ಪ್ರಮಾಣವು (ಶ್ಲೋಕ 24) (ಶಾಸ್ತ್ರಗಳಲ್ಲಿ ತಿಳಿಸಿರುವುದನ್ನು ಸರಿಯಾಗಿ ಅರಿತು ಕರ್ಮಗಳನ್ನು ಆಚರಿಸಬೇಕು)

ಹಿಂದಿನ ಮೂರು ಅಧ್ಯಾಯಗಳಲ್ಲಿ ಅಂದರೆ ಹದಿಮೂರು, ಹದಿನಾಲ್ಕು ಮತ್ತು ಹದಿನೈದನೆಯ ಅಧ್ಯಾಯಗಳಲ್ಲಿ ಪ್ರಕೃತಿ, ಪುರುಷ, ದೇಹ, ಆತ್ಮ ಮತ್ತು ಪ್ರಕೃತಿಯೊಂದಿಗೆ ಸೇರಿರುವ ಬದ್ಧ ಪುರುಷ (ಬದ್ಧ ಜೀವಾತ್ಮ)ರುಗಳ ಯಥಾರ್ಥ ಸ್ವರೂಪವು ಹೇಳಲ್ಪಟ್ಟಿತು. ಪ್ರಕೃತಿ ಪುರುಷರ ಸಂಸರ್ಗಕ್ಕೆ ಅಂದರೆ ಜೀವನು ಪ್ರಕೃತಿಯೊಂದಿಗೆ ಸೇರುವುದಕ್ಕೆ ಸತ್ವರಜಸ್ತಮೋಗುಣಗಳ ಸಂಸರ್ಗವೇ ಕಾರಣವೆಂದೂ, ಅವನು ಪ್ರಕೃತಿಯೊಂದಿಗೆ ಸೇರದೆ ಮುಕ್ತಜೀವನಾಗಿರಲು ಗುಣಗಳ ಸಂಸರ್ಗವಿಲ್ಲದಿರುವಿಕೆಯೇ ಕಾರಣವೆಂದೂ, ಪ್ರಕೃತಿಪುರುಷರಿಬ್ಬರೂ ಭಗವಂತನ ವಿಭೂತಿಗಳೆಂದೂ, ಅವನ ಪರಾ ಪ್ರಕೃತಿಯಾದ ಪುರುಷರು, ಅವನ ಅಪರಾ ಪ್ರಕೃತಿವಿಭೂತಿಯಾದ ಅಚೇತನ ವಸ್ತುಗಳೊಂದಿಗೆ ಸೇರಿ ಬದ್ಧ ಪುರುಷರೆಂದೂ, ಅಚೇತನ ವಸ್ತುಗಳ ಸಂಬಂಧದಿಂದ ಮುಕ್ತರಾಗಿ ಮುಕ್ತ ಪುರುಷರೆಂದೂ ಎರಡು ವಿಧವಾಗಿ ಇರುವರೆಂದೂ, ಪರಮಾತ್ಮನು ಈ ಎರಡು ವಿಧವಾದ ಅಂದರೆ ಬದ್ಧ ಮುಕ್ತ ಆತ್ಮರುಗಳಿಗಿಂತ ಅವ್ಯಯನೂ, ವ್ಯಾಪಕನೂ ಮತ್ತು ಅವುಗಳಿಗೆ ಸ್ವಾಮಿಯಾಗಿ

ಅವುಗಳಿಗಿಂತ ಭಿನ್ನವಸ್ತುವಾಗಿ ಪುರುಷೋತ್ತಮನಾಗಿದ್ದಾನೆ ಎಂದೂ ಹೇಳಿ ಅವನ ಯಥಾರ್ಥವಾದ ಸ್ವರೂಪವು ಹೇಳಲ್ಪಟ್ಟಿತು. ಈಗ ಹದಿನಾರನೆಯ ಅಧ್ಯಾಯದಲ್ಲಿ ಮೇಲೆ ಹೇಳಿರುವ ಅಭಿಪ್ರಾಯಗಳನ್ನು ದೃಢಪಡಿಸಲು ಶಾಸ್ತ್ರವು ಅವಶ್ಯಕವಾಗಿದೆ ಎಂದು ತಿಳಿಸುವ ಸಲುವಾಗಿ ಕ್ರಮವಾಗಿ ಶಾಸ್ತ್ರಕ್ಕೆ ಅನುಕೂಲವಾಗಿ ನಡೆಯುವ ದೈವ ಮತ್ತು ಪ್ರತಿಕೂಲವಾಗಿ ನಡೆಯುವ ವಿಪರೀತ ಆಚರಣೆಯುಳ್ಳ ಆಸುರ ಸೃಷ್ಟಿ ವಿಭಾಗವನ್ನು ತಿಳಿಸುತ್ತಾನೆ.

**I ದೈವೀ ಸಂಪತ್ತನ್ನು ಪಡೆದಿರುವವರ ಗುಣಗಳು (ಶ್ಲೋಕಗಳು 1 ರಿಂದ 3)**

ಈ ಅಧ್ಯಾಯದಲ್ಲಿ ಮೊದಲು ದೈವೀಸಂಪತ್ತನ್ನು ಹೊಂದಿ ಜನ್ಮ ಪಡೆದಿರುವವರ ಗುಣಗಳನ್ನು ತಿಳಿಸುತ್ತಾನೆ. **ಅಭಯಂ** – ತನಗೆ ಇಷ್ಟವಾದ ವಸ್ತುಗಳ ನಾಶಕ್ಕೂ, ಅನಿಷ್ಟ ವಸ್ತುಗಳ ಪ್ರಾಪ್ತಿಗೂ ಕಾರಣವನ್ನು ಕಂಡಾಗ ಉಂಟಾಗುವ ದುಃಖವೇ ಭಯವು, ಅಂತಹ ಸಮಯದಲ್ಲಿ ಭಯಪಡದಿರುವಿಕೆ; **ಸತ್ವಸಂಶುದ್ಧಿಃ** – ರಜೋಗುಣ, ತಮೋಗುಣಗಳ ಸ್ಪರ್ಶವಿಲ್ಲದೆ ಅಂತಃಕರಣದಲ್ಲಿ ಕೇವಲ ಸತ್ವ ಗುಣದ ಇರುವಿಕೆ; **ಜ್ಞಾನಯೋಗವ್ಯವಸ್ಥಿತಿಃ** – ಪ್ರಕೃತಿಗಿಂತ ಬೇರೆಯಾದ ಆತ್ಮ ಸ್ವರೂಪದ ವಿವೇಕವನ್ನು ಪಡೆದು ಆ ಆತ್ಮ ಸ್ವರೂಪವನ್ನು ಮನಸ್ಸಿನಲ್ಲಿ ನಿಲ್ಲಿಸುವುದು; **ದಾನಂ** – ನ್ಯಾಯಮಾರ್ಗದಿಂದ ಸಂಪಾದಿಸಿದ ಧನವನ್ನು ಸತ್ಪಾತ್ರರಿಗೆ ಕೊಡುವುದು; **ದಮ** – ಮನಸ್ಸನ್ನು ವಿಷಯಗಳ ಹಿಂದೆ ಹೋಗದಂತೆ ತಡೆಯುವ ಸ್ವಭಾವ; **ಯಜ್ಞ** – ಫಲಾಸಕ್ತಿರಹಿತನಾಗಿ ಭಗವದಾರಾಧನ ರೂಪವಾಗಿ ಪಂಚಮಹಾ ಯಜ್ಞಾದಿಗಳನ್ನು ಅನುಷ್ಠಿಸುವುದು; **ಸ್ವಾಧ್ಯಾಯಃ** – ಈಶ್ವರನನ್ನೂ, ಅವನ ಐಶ್ವರ್ಯವನ್ನೂ, ಅವನ ಆರಾಧನ ಪ್ರಕಾರವನ್ನೂ ತಿಳಿಸುವ ಸಮಸ್ತ ವೇದಗಳ ಅಧ್ಯಯನ ಮತ್ತು ಅಭ್ಯಾಸಗಳಲ್ಲಿ ನಿಷ್ಠೆಯಿಂದ ಇರುವುದು; **ತಪಃ** – ಭಗವಂತನಿಗೆ ಸಂತೋಷವನ್ನು ಉಂಟುಮಾಡುವ ಕರ್ಮಗಳನ್ನು ಮಾಡಲು ಯೋಗ್ಯತೆಯನ್ನು ಉಂಟುಮಾಡುವ ಕೃಚ್ಛ್ರ, ಚಾಂದ್ರಾಯಣ, ದ್ವಾದಶೀ, ಉಪವಾಸಾದಿ ವ್ರತಗಳನ್ನು ಅನುಷ್ಠಿಸುವುದು; **ಆರ್ಜವಂ** – ಇತರರೊಡನೆ ವ್ಯವಹಾರಾದಿಗಳನ್ನು ನಡೆಸುವಾಗ ಕಾಯಾ, ವಾಚಾ, ಮನಸಾ ಏಕರೂಪವಾಗಿರುವುದು; **ಅಹಿಂಸಾ** – ಇತರರಿಗೆ ಕಾಯಾ, ವಾಚಾ, ಮನಸಾ ಯಾವ ವಿಧವಾದ ಹಿಂಸೆಯನ್ನು ಉಂಟುಮಾಡದೆ ಇರುವುದು; **ಸತ್ಯಂ** – ತಾನು ನೋಡಿದ್ದನ್ನು ನೋಡಿದ ಹಾಗೆಯೂ, ಕೇಳಿದ್ದನ್ನು ಕೇಳಿದ ಹಾಗೆಯೂ, ತಿಳಿದಿದ್ದನ್ನು ತಿಳಿದ ಹಾಗೆಯೂ ಮತ್ತು ಪ್ರಾಣಿಗಳಿಗೆ ಹಿತವಾಗಿಯೂ

ಮಾತನಾಡುವುದು; **ಅಕ್ರೋಧಃ** - ಕೋಪವಿಲ್ಲದೇ ಇರುವುದು, ಅಂದರೆ ಅನ್ಯರಿಗೆ ಕೇಡನ್ನು ಮಾಡಬೇಕೆಂಬುವ ಮನಸ್ಸಿನ ವಿಕಾರವಿಲ್ಲದಿರುವಿಕೆ; **ತ್ಯಾಗಃ** - ಆತ್ಮಹಿತಕ್ಕೆ ವಿರೋಧಿಯಾದವುಗಳನ್ನು ಸ್ವೀಕರಿಸುವುದನ್ನು ಬಿಡುವುದು; **ಶಾಂತಿಃ** - ಇಂದ್ರಿಯಗಳನ್ನು ವಿಷಯಗಳಲ್ಲಿ ಪ್ರವೇಶಿಸದಂತೆ ತಡೆಯಲು ಪ್ರಯತ್ನಿಸಿ ಶಾಂತವಾಗಿ ಇರುವುದು; **ಅಪೈಶುನಂ** - ಇತರರಿಗೆ ಅನರ್ಥವನ್ನು ಉಂಟುಮಾಡುವಂತಹ ಮಾತುಗಳನ್ನು ಹೇಳದೇ ಇರುವುದು; **ಭೂತೇಷುದಯಾ** - ಸರ್ವ ಭೂತಗಳ ದುಃಖವನ್ನು ಕಂಡು ಸಹಿಸದೇ ಇರುವಿಕೆಯು; **ಅಲೋಲುಪ್ತ್ವಂ** - ವಿಷಯಾನುಭವಗಳಲ್ಲಿ ಇಚ್ಛೆ ಇಲ್ಲದೇ ಇರುವುದು; **ಮಾರ್ದವಂ** - ಸಾಧು ಜನಗಳ ಸಂಗವನ್ನು ಸೇರಲು ಯೋಗ್ಯವಾದ ಮೃದು ಸ್ವಭಾವದಿಂದ ಇರುವುದು; **ಹ್ರೀ** - ಮಾಡಬಾರದ ಅಯೋಗ್ಯವಾದ ಕೆಲಸವನ್ನು ಮಾಡುವುದರಲ್ಲಿ ನಾಚಿಕೆಯನ್ನು ಹೊಂದಿರುವುದು; **ಅಚಾಪಲಂ** - ಆಸೆ ಪಡುವಂತಹ ವಿಷಯಗಳು ಹತ್ತಿರದಲ್ಲಿ ಇದ್ದರೂ ಅದರಲ್ಲಿ ಮನಸ್ಸು ಚಲಿಸದೇ ಇರುವಿಕೆಯು; **ತೇಜಃ** - ದುರ್ಜನರಿಂದ ಸೋಲಿಸಲ್ಪಡದಂತಹ ಶಕ್ತಿಯು; **ಕ್ಷಮಾ** - ಇತರರಿಂದ ತೊಂದರೆಯನ್ನು ಅನುಭವಿಸುತ್ತಾ ಇದ್ದರೂ ಅವರ ವಿಷಯದಲ್ಲಿ ಮನೋವಿಕಾರವು ಇಲ್ಲದೇ ಇರುವುದು; **ಧೃತಿ** - ಎಂಥಾ ವಿಪತ್ತಿನಲ್ಲಿಯೂ ತನ್ನ ಕರ್ತವ್ಯವನ್ನು ಮಾಡಿಯೇ ತೀರಬೇಕೆಂಬ ನಿಶ್ಚಯದಿಂದ ಇರುವ ಶಕ್ತಿಯು; **ಶೌಚಂ** - ಇಂದ್ರಿಯಗಳನ್ನೂ ಮನಸ್ಸನ್ನೂ ಶಾಸ್ತ್ರಾನುಸಾರವಾದ ಕರ್ಮಾಚರಣೆಗೆ ಯೋಗ್ಯವನ್ನಾಗಿ ಮಾಡಿ ಕೊಳ್ಳುವುದು; **ಅದ್ರೋಹ** - ಇತರರೊಂದಿಗೆ ವಿರೋಧ ಮಾಡಿಕೊಳ್ಳದಿರುವಿಕೆಯು ಅಂದರೆ ಇತರರ ಸ್ವಾತಂತ್ರ್ಯಕ್ಕೆ ಅಡ್ಡಿ ಮಾಡದೇ ಇರುವಿಕೆಯು; **ನಾತಿಮಾನಿತಾ** - ಅನುಚಿತ ಸ್ಥಾನಗಳಲ್ಲಿ ಅಂದರೆ ಹಿರಿಯರ ಮುಂದೆ ಗರ್ವ ಪಡದೇ ಇರುವುದು. ಈ ಇಪ್ಪತ್ತಾರು ಗುಣಗಳೂ ಭಗವಂತನ ಆಜ್ಞೆಗೆ ಅನುಸಾರವಾಗಿ ಆಚರಿಸಬೇಕೆಂಬ ಸಂಕಲ್ಪವನ್ನು ಹೊಂದಿ ದೈವೀ ಸಂಪತ್ತುಳ್ಳವರಾಗಿ ಹುಟ್ಟಿರುವವರಲ್ಲಿ ಉಂಟಾಗುವುವು.

**II ಆಸುರೀ ಸಂಪತ್ತನ್ನು ಪಡೆದಿರುವವರ ಗುಣಗಳು. (ಶ್ಲೋಕಗಳು 4ರಿಂದ 18)**

**ದಂಭಃ** - ತನ್ನನ್ನು ಧಾರ್ಮಿಕನೆಂದು ಹೊಗಳಿಕೊಳ್ಳಬೇಕೆಂಬುದಕೋಸ್ಕರ ಧರ್ಮವನ್ನು ಅನುಷ್ಠಿಸುವುದು; **ದರ್ಪಃ** - ಇದನ್ನು ಮಾಡಬಹುದು, ಇದನ್ನು ಮಾಡಬಾರದು ಎಂಬ ಕರ್ತವ್ಯಾಕರ್ತವ್ಯ ವಿವೇಕವನ್ನು ನಾಶ ಮಾಡತಕ್ಕ, ವಿಷಯಾನುಭವದಿಂದ ಬರುವ ಸಂತೋಷವು; **ಅಭಿಮಾನಃ** - ತನ್ನ ವಿದ್ಯೆ, ಕುಲ,

ಇವುಗಳನ್ನು ಅನುಸರಿಸಿ ಬರುವ ಗರ್ವವು; **ಕ್ರೋಧಃ** - ಅನ್ಯರಿಗೆ ಕೇಡನ್ನು ಉಂಟುಮಾಡಲು ಕಾರಣವಾದ ಮನಸ್ಸಿನ ವಿಕಾರವು; **ಪಾರುಷ್ಯಂ** - ಸಾಧುಗಳಿಗೆ ಮನಕ್ಲೇಶವನ್ನು ಉಂಟುಮಾಡುವ ಕಠಿಣ ಸ್ವಭಾವವು; **ಅಜ್ಞಾನಂ** - ಇಹಪರ ಲೋಕಗಳ ತತ್ತ್ವಗಳನ್ನೂ ಕರ್ತವ್ಯಾಕರ್ತವ್ಯಗಳನ್ನೂ ವಿವೇಕಪೂರ್ವಕವಾಗಿ ಅರಿಯದಿರುವಿಕೆ.

ಇವೆಲ್ಲವೂ ಆಸುರೀ ಸಂಪತ್ತನ್ನು ಹೊಂದಿ ಹುಟ್ಟಿರುವವರಲ್ಲಿ ಉಂಟಾಗುವ ಗುಣಗಳಾಗಿವೆ. ದೈವೀ ಸಂಪತ್ತು ಮೋಕ್ಷವನ್ನು ಅಂದರೆ ಆತ್ಮ ಪ್ರಾಪ್ತಿಯನ್ನು ಉಂಟುಮಾಡುತ್ತದೆ. ಆಸುರೀ ಸಂಪತ್ತು ಸಂಸಾರಬಂಧವನ್ನು ಹೆಚ್ಚಿಸಿ ಅಧೋಗತಿಯನ್ನು ಉಂಟುಮಾಡುತ್ತದೆ. ಆದರೆ ಅರ್ಜುನನೇ! ಧಾರ್ಮಿಕರಲ್ಲಿ ಅಗ್ರಗಣ್ಯನಾದ ಪಾಂಡುವಿನ ಪುತ್ರನಾದ ನೀನು ದೈವೀ ಸಂಪತ್ತಿನಲ್ಲಿಯೇ ಹುಟ್ಟಿದ್ದೀಯೆ. ಆದ್ದರಿಂದ ನೀನು ಶೋಕಿಸಬೇಡ ಎಂದು ಶ್ರೀಕೃಷ್ಣನು ಅರ್ಜುನನಿಗೆ ಧೈರ್ಯವನ್ನು ಹೇಳುತ್ತಾನೆ.

ಇಲ್ಲಿಯವರೆಗೆ ಈ ಜಗತ್ತಿನಲ್ಲಿ ಪ್ರಾಣಿಗಳ ಸೃಷ್ಟಿಯು ದೈವೀ ಮತ್ತು ಆಸುರೀ ಎಂದು ಎರಡು ವಿಧದಲ್ಲಿ ಇದೆ ಎಂದೂ, ಅವರವರ ಪ್ರಾಚೀನ ಪುಣ್ಯಪಾಪರೂಪ ಕರ್ಮಗಳಿಗೆ ಅನುಸಾರವಾಗಿ, ಅವರವರು ಹುಟ್ಟುವಾಗಲೇ ದೈವೀ ಅಥವಾ ಆಸುರೀ ಪ್ರಕೃತಿಯನ್ನು ಉಳ್ಳವರಾಗಿ ಹುಟ್ಟುತ್ತಾರೆ ಎಂದೂ ಹೇಳಿ ಅವರಿಬ್ಬರ ಲಕ್ಷಣವೂ ವಿವರಿಸಲ್ಪಟ್ಟಿದೆ. ದೈವೀ ಪ್ರಕೃತಿ ಉಳ್ಳವರ ಆಚಾರವಾದ ಕರ್ಮಜ್ಞಾನ ಭಕ್ತಿಯೋಗಗಳೆಲ್ಲವೂ ಹಿಂದೆಯೇ ವಿಸ್ತಾರವಾಗಿ ಹೇಳಲ್ಪಟ್ಟಿರುವುದರಿಂದ ಈಗ ಮುಂದೆ ಆಸುರ ಸ್ವಭಾವದವರ ನಡತೆಯ ವಿಷಯವನ್ನು ಅರ್ಜುನನಿಗೆ ವಿವರಿಸಿ ತಿಳಿಸುತ್ತಾನೆ.

ಅಸುರ ಸ್ವಭಾವದವರು ತಮ್ಮ ಲೌಕಿಕ ಉನ್ನತಿಗೆ ಸಾಧನವಾದ ಪ್ರವೃತ್ತಿ ಧರ್ಮವನ್ನೂ, ಮೋಕ್ಷಕ್ಕೆ ಸಾಧನವಾದ ನಿವೃತ್ತಿಧರ್ಮವನ್ನೂ ತಿಳಿದಿಲ್ಲ, ವೈದಿಕ ಕರ್ಮಕ್ಕೆ ಯೋಗ್ಯತೆಯನ್ನು ಪಡೆಯಲು ಬೇಕಾದ ಬಾಹ್ಯಶುದ್ಧಿಕ್ರಿಯೆಗಳೂ, ಆಂತರಿಕ (ಮಾನಸಿಕ) ಶುದ್ಧಿಗೆ ಬೇಕಾದ ಆತ್ಮಗುಣಗಳೂ ಅವರಲ್ಲಿಲ್ಲ. ಹಾಗೆಯೇ ವರ್ಣಾಶ್ರಮ ಗಳಿಗೆ ಅನುಸಾರವಾದ ಸಂಧ್ಯಾವಂದನೆ ಮುಂತಾದ ಸದಾಚಾರವೂ ಅವರಲ್ಲಿಲ್ಲ. ಪ್ರಾಣಿಗಳಿಗೆ ಹಿತವನ್ನು ಉಂಟುಮಾಡುವ ಸತ್ಯ ವಚನವೂ ಅವರಲಿಲ್ಲ, ಅವರು ಈ ಜಗತ್ತು ಅಬ್ರಹ್ಮಾತ್ಮಕವಾದುದೆಂದೂ, ಅಸತ್ಯವಾದುದೆಂದೂ, ಬ್ರಹ್ಮನ ಆಧಾರವಿಲ್ಲದುದೆಂದೂ, ಸತ್ಯಸಂಕಲ್ಪನಾದ ಪರಬ್ರಹ್ಮನಿಂದ ನಿಯಮಿಸಲ್ಪಟ್ಟಿದ್ದಲ್ಲವೆಂದೂ, ಪರಬ್ರಹ್ಮನೇ ಇಲ್ಲವೆಂದೂ ಹೇಳುವರು. ಈ ಪ್ರಪಂಚವು ಕಾಮದಿಂದ

ಉಂಟಾಗುವ ಸ್ತ್ರೀ-ಪುರುಷರ ಸಂಬಂಧದಿಂದ ಉಂಟಾಗಿದೆಯೇ ವಿನಃ ಬೇರೆಯಾವುದರಿಂದಲೂ ಉಂಟಾಗಿಲ್ಲ ವೆಂದೂ ಕಾಮವೇ ಈ ಪ್ರಪಂಚಕ್ಕೆ ಕಾರಣವೆಂದೂ ಹೇಳುತ್ತಾರೆ, ದೇಹಕ್ಕಿಂತ ಬೇರೆಯಾದ ಆತ್ಮವನ್ನು ನಂಬದ ಈ ಅಜ್ಞಾನಿಗಳು ಮೇಲೆ ಹೇಳಿದ ವಿಪರೀತ ಬುದ್ಧಿಯನ್ನು ಹೊಂದಿದವರಾಗಿ ಉಗ್ರಕರ್ಮಗಳ ಮೂಲಕ ಎಲ್ಲರಿಗೂ ಹಿಂಸೆ ಮಾಡುವವರಾಗಿ ಪ್ರಪಂಚವನ್ನು ನಾಶ ಮಾಡುವುದಕ್ಕೆ ಹುಟ್ಟಿದವರಾಗಿದ್ದಾರೆ. ತಮ್ಮಿಂದ ಹೊಂದಲು ಅಸಾಧ್ಯವಾದ ವಿಷಯಗಳಲ್ಲಿ ಆಸೆಹೊಂದಿ ಅದನ್ನು ಸಂಪಾದಿಸುವುದಕೋಸ್ಕರ ಅಜ್ಞಾನ, ಅವಿವೇಕಗಳಿಂದ ಕೂಡಿದವರಾಗಿ, ಅನ್ಯಾಯದಿಂದ ಸಂಪಾದಿಸಲ್ಪಟ್ಟ ಧನವನ್ನೂ, ವಸ್ತುಗಳನ್ನೂ ಸಂಗ್ರಹಿಸಿಕೊಂಡು, ದಂಭ, ಮಾನ, ಮದಾದಿಗಳಿಂದ ಕೂಡಿದವರಾಗಿ ಶಾಸ್ತ್ರವಿಹಿತವಲ್ಲದ ವ್ರತಗಳನ್ನು ಸಾಧಿಸಲು ಪ್ರಯತ್ನವನ್ನು ಮಾಡುತ್ತಾರೆ. ಕಾಮೋಪಭೋಗಕ್ಕಿಂತ ಬೇರೆಯಾದ ಪುರುಷಾರ್ಥವು ಇಲ್ಲವೆಂದು ನಿಶ್ಚಯಿಸಿಕೊಂಡು, ಲೆಕ್ಕವಿಲ್ಲದಷ್ಟು ವಿಷಯಭೋಗಗಳನ್ನು ಅನುಭವಿಸುವುದೇ ಪರಮ ಪುರುಷಾರ್ಥವೆಂದು ಭಾವಿಸಿಕೊಂಡು ಇಂದೋ ನಾಳೆಯೋ ಸಾಯುವವರಾಗಿದ್ದಾಗ್ಯೂ ಪ್ರಳಯಕಾಲದವರೆಗೂ ಪೂರ್ಣವಾಗದಷ್ಟು ಚಿಂತೆ ಪಡುತ್ತಿರುವರು.

ನೂರಾರು ಬಗೆಯ ಆಶಾಪಾಶಗಳಿಂದ ಕಟ್ಟಲ್ಪಟ್ಟ ಇವರು ಕಾಮಕ್ರೋಧ ವುಳ್ಳವರಾಗಿ, ಕಾಮೋಪಭೋಗಕ್ಕಾಗಿ ಅನ್ಯಾಯದಿಂದ ಧನವನ್ನು ಕೂಡಿ ಹಾಕಲು ಪ್ರಯತ್ನವನ್ನು ಪಡುವರು. ''ಈ ಕ್ಷೇತ್ರ ಪುತ್ರಾದಿಗಳೆಲ್ಲವೂ ನನ್ನ ಸಾಮರ್ಥ್ಯದಿಂದಲೇ ನನಗೆ ಲಭಿಸಿರುತ್ತದೆಯೇ ಹೊರತು ಅದೃಷ್ಟದಿಂದಲ್ಲ, ಈ ನನ್ನ ಮನೋರಥವನ್ನು ನಾನೇ ನನ್ನ ಸಾಮರ್ಥ್ಯದಿಂದಲೇ ಹೊಂದುತ್ತೇನೆ, ಈ ಹಣವು ನನ್ನ ಸಾಮರ್ಥ್ಯ ದಿಂದಲೇ ನನಗೆ ಲಭಿಸಿದೆ. ಇನ್ನೂ ಹೆಚ್ಚಾದ ಹಣವೂ ನನ್ನ ಸಾಮರ್ಥ್ಯದಿಂದಲೇ ಲಭಿಸುತ್ತದೆ. ಈ ಶತ್ರುವು ನನ್ನ ಬಲದಿಂದಲೇ ಕೊಲ್ಲಲ್ಪಟ್ಟಿದ್ದಾನೆ. ಇವರಲ್ಲದೆ ಇನ್ನೂ ಇತರ ಶತ್ರುಗಳನ್ನೂ ವೀರನಾದ ನಾನು ಕೊಲ್ಲುವೆನು, ನಾನೇ ಎಲ್ಲರನ್ನೂ ನಿಯಮಿಸುತ್ತಿರುವವನು, ನನ್ನ ಶಕ್ತಿಯಿಂದಲೇ ಒಳ್ಳೆಯ ಭೋಗವುಳ್ಳವನಾಗಿದ್ದೇನೆಯೇ ವಿನಃ ಅದೃಷ್ಟದ ಸಹಾಯದಿಂದಲ್ಲ, ನಾನೇ ಸ್ವತಃ ಸಿದ್ಧನೂ, ಬಲಿಷ್ಠನೂ, ಸುಖಿಯೂ ಆಗಿದ್ದೇನೆ. ನಾನೇ ನನ್ನ ಶಕ್ತಿಯಿಂದಲೇ ಸ್ವತಃ ದೊಡ್ಡ ಹಣಗಾರನಾಗಿದ್ದೇನೆ ಮತ್ತು ಮೇಲಾದ ವಂಶದಲ್ಲಿ ಹುಟ್ಟಿದವನಾಗಿದ್ದೇನೆ, ಈ ಲೋಕದಲ್ಲಿ ನನ್ನ ಹಾಗೆ ತನ್ನ

ಸಾಮರ್ಥ್ಯದಿಂದ ಸಮಸ್ತ ವೈಭವಗಳನ್ನು ಪಡೆದಿರುವಂತಹವರು ಯಾರಿರುವರು? ಈಶ್ವರನ ಅನುಗ್ರಹವಿಲ್ಲದೆ ನನ್ನ ಶಕ್ತಿಯಿಂದಲೇ ಯಜ್ಞದಾನಾದಿಗಳನ್ನು ಮಾಡಿ ಆನಂದಪಡುತ್ತೇನೆ'-ಹೀಗೆಂಬುದಾಗಿ ಅಜ್ಞಾನದಿಂದ ಮೋಹಗೊಂಡವರು ತಿಳಿಯುತ್ತಾರೆ. ಭಗವಂತನ ಸಹಾಯವಿಲ್ಲದೆ, ತಾವೇ ಸಮಸ್ತವನ್ನೂ ಮಾಡಲು ಶಕ್ಯರು ಎಂಬ ಅಜ್ಞಾನ ಪರಂಪರೆಯಿಂದ ಕೂಡಿದವರಾಗಿಯೂ, ಈ ರೀತಿಯಾದ ಮೋಹಜಾಲದ ಹಿಡಿತದಲ್ಲಿ ಸಿಕ್ಕಿಕೊಂಡವರಾಗಿಯೂ ಇರುವ ಇವರು ಕಾಮೋಪ ಭೋಗಗಳಲ್ಲಿ ಅತ್ಯಂತ ಆಸಕ್ತರಾಗಿ ಇರುವ ಕಾಲದಲ್ಲಿ ಮೃತರಾದಾಗ ಅಶುಚಿಯಾದ ನರಕದಲ್ಲಿ ಬೀಳುತ್ತಾರೆ.

ಹೀಗೆ ತಮ್ಮನ್ನು ತಾವೇ ಮಹಾತ್ಮರೆಂದು ಸ್ತೋತ್ರಮಾಡಿಕೊಳ್ಳುತ್ತಾ, ತಾವೇ ಪರಿಪೂರ್ಣರೆಂದು ತಿಳಿದು ಯಾವ ಕಾರ್ಯವನ್ನೂ ಮಾಡದೆ, ಧನ, ವಿದ್ಯೆ ಮೊದಲಾದವುಗಳಿಂದ ಅಹಂಕಾರವನ್ನು ಪಡುತ್ತಿರುವ ಇವರು, ಕೇವಲ ಹೆಸರನ್ನೂ ಪ್ರಶಂಸೆಗಳನ್ನೂ ಪಡೆಯುವುದಕ್ಕೆ ಮಾತ್ರ ಡಂಭದಿಂದ ಶಾಸ್ತ್ರರೀತಿಯಾದ ಕ್ರಮವನ್ನು ಬಿಟ್ಟು, ಅಕ್ರಮವಾದ ರೀತಿಯಲ್ಲಿ ಕಪಟ ಯಜ್ಞಯಾಗಾದಿಗಳನ್ನು ಮಾಡಿ ದೇವತೆಗಳನ್ನು ಆರಾಧಿಸುತ್ತಾರೆ. ಅವರು ಯಾವ ರೀತಿ ಯಜ್ಞವನ್ನು ಮಾಡುತ್ತಾರೆಂದರೆ ಯಾರ ಅಪೇಕ್ಷೆಯೂ ಇಲ್ಲದೆ ತಾವೇ ಮಾಡುತ್ತೇವೆ ಎಂಬ ಅಹಂಕಾರವನ್ನು ಹೊಂದಿದವರಾಗಿ, ಎಲ್ಲಾ ಕಾರ್ಯಗಳನ್ನು ಮಾಡುವಷ್ಟು ಬಲವು ತಮಗಿದೆ ಎನ್ನುತ್ತಾ, ತಮಗೆ ಸಮಾನರಾದವರು ಯಾರೂ ಇಲ್ಲ ಎಂಬ ದರ್ಪವನ್ನು ಹೊಂದಿ, ತಮ್ಮ ಇಚ್ಛಾಮಾತ್ರದಿಂದ ಎಲ್ಲವೂ ತಮಗೆ ಲಭಿಸುತ್ತದೆ ಎಂದು ಕಾಮವನ್ನು ಹೊಂದಿದವರಾಗಿ, ತಮಗೆ ಅನಿಷ್ಟವನ್ನು ಮಾಡತಕ್ಕವರನ್ನು ಬುಡಸಹಿತ ಉರುಳಿಸುವೆವು ಎಂಬ ಕ್ರೋಧವನ್ನು ಹೊಂದಿದವರಾಗಿ, ತಮ್ಮ ಮತ್ತು ಇತರರ ಎಲ್ಲರ ಹೃದಯದಲ್ಲಿ ಇದ್ದುಕೊಂಡು ಸಕಲ ಕಾರ್ಯಗಳನ್ನೂ ಮಾಡಿಸುತ್ತಾ ಇರುವ ಪುರುಷೋತ್ತಮನಾದ ಸರ್ವೇಶ್ವರನನ್ನು ದ್ವೇಷಿಸುತ್ತಾ, ಕುಯುಕ್ತಿಗಳಿಂದ ಭಗವಂತನು ಇದ್ದಾನೆ ಎಂಬ ವಿಷಯದಲ್ಲಿ ದೋಷಾರೋಪಣೆ ಮಾಡುತ್ತಾ, ಅಹಂಕಾರಾದಿ ಸಕಲ ದೋಷಗಳನ್ನೂ ಹೊಂದಿದವರಾಗಿ ಡಂಭಕ್ಕಾಗಿ ಯಾಗಾದಿಗಳನ್ನು ಮಾಡುತ್ತಾರೆ.

**III ಪರಮಾತ್ಮನು ಅಸುರ ಸ್ವಭಾವವುಳ್ಳವರನ್ನು ಅಸುರಯೋನಿಗಳಲ್ಲಿ ಹುಟ್ಟಿಸಿ ಅಧೋಗತಿ ಹೊಂದುವಂತೆ ಮಾಡುತ್ತಾನೆ. (ಶ್ಲೋಕಗಳು 19 ಮತ್ತು 20)**

ಹೀಗೆ ನನ್ನನ್ನು ದ್ವೇಷಿಸುವ ಕ್ರೂರರಾದ, ನರಾಧಮರಾದ,

ಅಶುಭರಾದವರನ್ನು ನಾನು ಹುಟ್ಟು, ಸಾವು, ಜರಗಳಿಂದ ಕೂಡಿರುವ ಸಂಸಾರದಲ್ಲಿ ಅದರಲ್ಲೂ ಅಸುರಯೋನಿಗಳಲ್ಲಿ ಹುಟ್ಟುವ ಹಾಗೆ ತಳ್ಳುವೆನು. ಹೀಗೆ ಭಗವಂತನಾದ ನನ್ನನ್ನು ಹೊಂದಲು ಅನುಕೂಲವಿಲ್ಲದ, ಅದಕ್ಕೆ ವಿರೋಧವಾದ ಅಸುರ ಜನ್ಮಗಳನ್ನು ಅವರು ಹೊಂದುತ್ತಾರೆ. ಹೀಗೆ ಅಸುರ ಜನ್ಮ ಪಡೆದ ಮೂಢರು ಪ್ರತಿ ಜನ್ಮದಲ್ಲಿಯೂ ವಿಪರೀತ ಜ್ಞಾನವುಳ್ಳವರಾಗಿ, ಪರಮಾತ್ಮನಾದ ನನ್ನನ್ನು ಹೊಂದದೆ, ಸರ್ವೇಶ್ವರನಾದ ವಾಸುದೇವನು ಇರುವನು ಎಂಬ ಜ್ಞಾನವನ್ನು ಪಡೆಯದೆ, ತಾವು ಈಗ ಇರುವ ಜನ್ಮಕ್ಕಿಂತ ಇನ್ನೂ ಕೆಳಗಿನ ಅಂತಸ್ತಿನ ಅಧೋಗತಿಯನ್ನು ಹೊಂದುತ್ತಾರೆ.

## IV ಅಸುರ ಸ್ವಭಾವಕ್ಕೆ ಮೂಲಕಾರಣ ಕಾಮ, ಕ್ರೋಧ, ಲೋಭಾದಿಗಳು ಮತ್ತು ಶಾಸ್ತ್ರಗಳ ಅನಾದರಣೆ (ಶ್ಲೋಕಗಳು 21 ರಿಂದ 23)

ಆತ್ಮನಾಶವನ್ನು ಉಂಟುಮಾಡುವ ಈ ಅಸುರ ಸ್ವಭಾವವು ಉಂಟಾಗುವುದಕ್ಕೆ ಮೂರು ಕಾರಣಗಳು ಇವೆ. ಅವು ಯಾವುವೆಂದರೆ ಕಾಮವು, ಕ್ರೋಧವು ಮತ್ತು ಲೋಭವು. ಇವುಗಳ ಸ್ವರೂಪವನ್ನು ಹಿಂದೆಯೇ ತಿಳಿಸಿದೆ. ಶಬ್ದಾದಿ ವಿಷಯಗಳಲ್ಲಿ ಅಪೇಕ್ಷೆ ಎಂಬ 'ಕಾಮವೂ' ಮತ್ತೊಬ್ಬರನ್ನು ಪೀಡಿಸುವ ಮನೋವಿಕಾರವೆಂಬ ''ಕ್ರೋಧವೂ'' ತನ್ನ ಸ್ವತ್ತನ್ನು ಯಾವ ಸಮಯದಲ್ಲಿಯೂ ಇತರರಿಗೆ ಕೊಡದಂತಹ ''ಲೋಭವೂ'' ಅಸುರ ಸ್ವಬಾವವೆಂಬ ನರಕಕ್ಕೆ ಮುಖ್ಯವಾದ ಮೂರು ಬಾಗಿಲುಗಳಾಗಿವೆ, ಇವು ಆತ್ಮನನ್ನು ನಾಶಗೊಳಿಸುತ್ತವೆ ಮತ್ತು ಘೋರವಾದ ನರಕ ಪ್ರಾಪ್ತಿಗೆ ಕಾರಣವಾಗಿವೆ. ಆದ್ದರಿಂದ ಇವುಗಳನ್ನು ತ್ಯಜಿಸಿಬಿಡು, ಈ ಕಾಮ, ಕ್ರೋಧ, ಲೋಭಗಳೆಂಬ ಈ ನರಕ ದ್ವಾರಗಳನ್ನು ಆಶ್ರಯಿಸದ ಮನುಷ್ಯನು ಅವುಗಳನ್ನು ಬಿಟ್ಟು ಆತ್ಮದ ಶ್ರೇಯಸ್ಸಿನ ಮಾರ್ಗವನ್ನು ಆಶ್ರಯಿಸುತ್ತಾನೆ. ಭಗವದ್ವಿಷಯ ಜ್ಞಾನವನ್ನು ಹೊಂದಿ, ಅದಕ್ಕೆ ಅನುಕೂಲವಾದ ಆಚರಣೆಯಲ್ಲಿ ತೊಡಗಿ, ಪರಮಗತಿಯಾದ ಭಗವಂತನನ್ನೇ ಹೊಂದುತ್ತಾನೆ. ಆದರೆ ಭಗವಂತನ ಆಜ್ಞಾರೂಪವಾದ ವೇದಶಾಸ್ತ್ರದ ವಿಧಿಯನ್ನು ಬಿಟ್ಟು ತನಗೆ ಇಷ್ಟಬಂದ ಮಾರ್ಗದಲ್ಲಿ ಯಾವನು ಚಲಿಸುತ್ತಾನೆಯೋ ಅವನು ಸಿದ್ಧಿಯನ್ನು ಹೊಂದುವುದಿಲ್ಲ. ಅವನು ಪರಲೋಕ ಸಿದ್ಧಿಯನ್ನು ಪಡೆಯುವುದಿಲ್ಲ. ಇಹಲೋಕದಲ್ಲಿಯೂ ಅವನಿಗೆ ಸುಖವು ದೊರೆಯುವುದಿಲ್ಲ ಮತ್ತು ಅವನು ಉತ್ತಮವಾದ ಗತಿಯನ್ನೂ ಪಡೆಯುವುದಿಲ್ಲ.

## V ಕಾರ್ಯ ಅಕಾರ್ಯ ವ್ಯವಸ್ಥೆಗಳಿಗೆಲ್ಲಾ ಶಾಸ್ತ್ರವೇ ಪ್ರಮಾಣವು (ಶ್ಲೋಕ 24)

(ಶಾಸ್ತ್ರಗಳಲ್ಲಿ ತಿಳಿಸಿರುವುದನ್ನು ಸರಿಯಾಗಿ ಅರಿತು ಕರ್ಮಗಳನ್ನು ಆಚರಿಸಬೇಕು)

ಧರ್ಮ ಶಾಸ್ತ್ರ ಇತಿಹಾಸ ಪುರಾಣಗಳೆಲ್ಲವನ್ನೂ ಉಪಬ್ರಹ್ಮಣಗಳಾಗಿ ಹೊಂದಿ ಅವೆಲ್ಲಕ್ಕೂ ಆಧಾರವಾದ ವೇದ ಶಾಸ್ತ್ರವೇ ಮಾಡಬೇಕಾದ ಕಾರ್ಯಗಳು ಯಾವುವು ಮತ್ತು ತ್ಯಜಿಸಬೇಕಾದ ಕಾರ್ಯಗಳು ಯಾವುವು ಎಂಬುದನ್ನು ನಿಶ್ಚಯಿಸಲು ಪ್ರಮಾಣವು. ಅದರಲ್ಲಿ ತಿಳಿಸಿರುವ ತತ್ತ್ವಗಳನ್ನು ಅರಿತು ಕರ್ಮವನ್ನು ಮಾಡುವವನಾಗು. ಪರಮ ಪುರುಷನೇ ಪರತತ್ತ್ವವೆಂದೂ, ಆ ಪರಮ ಪುರುಷನಿಗೆ ಪ್ರೀತಿಕರವಾಗಿಯೂ, ಅವನ ಪ್ರಾಪ್ತಿಗೆ ಉಪಾಯವಾಗಿಯೂ ಇರುವ ಕರ್ಮವನ್ನು ಮಾಡು ಎಂದು ವೇದವು ಬೋಧಿಸುತ್ತದೆ. ಹೀಗೆ ಶಾಸ್ತ್ರವು ತಿಳಿಸಿರುವ ತತ್ತ್ವಗಳನ್ನೂ ಕರ್ಮಗಳನ್ನೂ ಚೆನ್ನಾಗಿ ತಿಳಿದುಕೊಂಡು ಅದಕ್ಕೆ ಅನುಗುಣವಾಗಿ ಈ ಲೋಕದಲ್ಲಿ ಕರ್ಮವನ್ನು ಆಚರಿಸಬೇಕೆಂದು ಶ್ರೀಕೃಷ್ಣನು ಅರ್ಜುನನಿಗೆ ಉಪದೇಶ ಮಾಡಿದ್ದಾನೆ ಅಂದರೆ ಸತ್ಕುಲದಲ್ಲಿ ಜನಿಸಿ, ಸತ್ತ್ವಗುಣಾಧಿಕ್ಯವನ್ನು ಪಡೆದಿರುವ ಪುರುಷನು ವೇದಗಳಲ್ಲಿ ಬೋಧಿಸಿರುವ ಭಗವಂತನ ಆರಾಧನ ರೂಪಗಳಾದ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗಗಳನ್ನು ಸರಿಯಾಗಿ ಅರಿತು ಚೆನ್ನಾಗಿ ಆಚರಿಸಬೇಕೆಂಬುದು ಇದರ ಮುಖ್ಯವಾದ ತಾತ್ಪರ್ಯವು.

ಈ ಅಧ್ಯಾಯದಲ್ಲಿ ತಿಳಿಸಿರುವ ವಿಷಯಗಳನ್ನು ಶ್ರೀ ಯಾಮುನಾಚಾರ್ಯರು ಗೀತಾರ್ಥ ಸಂಗ್ರಹದ ಇಪ್ಪತ್ತನೆಯ ಶ್ಲೋಕದಲ್ಲಿ ಹೀಗೆ ತಿಳಿಸಿದ್ದಾರೆ.

**ದೇವಾಸುರ ವಿಭಾಗೋಕ್ತಿ ಪೂರ್ವಿಕಾ ಶಾಸ್ತ್ರವಶ್ಯತಾ ।**
**ತತ್ತ್ವಾನುಷ್ಠಾನ ವಿಜ್ಞಾನ ಸ್ಥೇಮ್ನೇ ಷೋಡಶ ಉಚ್ಯತೇ ॥**

ಶಾಸ್ತ್ರದಲ್ಲಿ ತಿಳಿಸಿರುವ ತತ್ತ್ವಗಳನ್ನೂ ಅನುಷ್ಠಾನಗಳನ್ನೂ ಚೆನ್ನಾಗಿ ಅರಿತು ಆಚರಿಸಬೇಕೆಂಬುದನ್ನು ಧೃಢ ಪಡಿಸುವ ಸಲುವಾಗಿ, ದೈವೀ ಸಂಪತ್ತುಳ್ಳವರು, ಆಸುರೀ ಸಂಪತ್ತುಳ್ಳವರು ಎಂಬ ಎರಡು ವಿಧವಾದ ಸೃಷ್ಟಿಯನ್ನು ತಿಳಿಸಿ, ಅದರಲ್ಲಿ ದೈವೀ ಪ್ರಕೃತಿಯುಳ್ಳವರಾಗಿ ಜನ್ಮವೆತ್ತಲು ಶಾಸ್ತ್ರದಲ್ಲಿ ಹೇಳಿರುವ ತತ್ತ್ವಗಳ ಮತ್ತು ಅನುಷ್ಠಾನಗಳ ಜ್ಞಾನವು ಅತ್ಯವಶ್ಯಕ ಎಂದು ಹದಿನಾರನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ.

*****

## ಹದಿನೇಳನೆಯ ಅಧ್ಯಾಯ

# ಶ್ರದ್ಧಾತ್ರಯ ವಿಭಾಗಯೋಗ

ವಿಷಯ ಸೂಚಿಕೆ :

I ಶಾಸ್ತ್ರವಿಧಿತ ಯಜ್ಞಯಾಗಾದಿ ಸಮಸ್ತ ಕರ್ಮಗಳ ಆಚರಣೆಯಲ್ಲಿ ಇರುವ ಸಾತ್ವಿಕ, ರಾಜಸ, ತಾಮಸ ಎಂಬ ತ್ರಿವಿಧ ಶ್ರದ್ಧೆಗಳ ವಿವರಣೆ. (ಶ್ಲೋಕಗಳು 1 ರಿಂದ 4)

II ಶಾಸ್ತ್ರ ವಿಹಿತವಲ್ಲದ ಕರ್ಮಗಳು ಅನರ್ಥ ಫಲವುಳ್ಳದ್ದಾಗಿವೆ. (ಶ್ಲೋಕಗಳು 5 ಮತ್ತು 6)

III ಸಾತ್ವಿಕ, ರಾಜಸ, ತಾಮಸ ಆಹಾರಗಳ ವರ್ಣನೆ. (ಶ್ಲೋಕಗಳು 7 ರಿಂದ 10)

IV ತ್ರಿವಿಧ ಯಾಗಗಳ ವರ್ಣನೆ. (ಶ್ಲೋಕಗಳು 11 - 13)

V ತ್ರಿವಿಧ ತಪಸ್ಸುಗಳ ವರ್ಣನೆ. (ಶ್ಲೋಕಗಳು 14 - 19)

VI ತ್ರಿವಿಧ ದಾನಗಳ ವರ್ಣನೆ. (ಶ್ಲೋಕಗಳು 20 - 22)

VII ಯಜ್ಞಾದಿ ಕರ್ಮಗಳೆಲ್ಲವೂ "ಓಂ ತತ್ ಸತ್" ಎಂಬ ಶಬ್ದಗಳೊಂದಿಗೆ ಆಚರಿಸಲ್ಪಟ್ಟರೆ ಅತ್ಯುತ್ತಮವು. (ಶ್ಲೋಕಗಳು 23 ರಿಂದ 28)

ಹದಿನಾರನೆಯ ಅಧ್ಯಾಯದಲ್ಲಿ ದೇವ ಮತ್ತು ಅಸುರಯೋನಿಗಳಲ್ಲಿ ಜನ್ಮ ಪಡೆದವರ ವಿಭಾಗವನ್ನು ತಿಳಿಸುವುದರ ಮೂಲಕ ಪ್ರಾಪ್ಯದ ಅಂದರೆ ಹೊಂದಬೇಕಾದ ಪುರುಷಾರ್ಥದ ಜ್ಞಾನವೂ ಮತ್ತು ಅದನ್ನು ಹೊಂದಲು ಬೇಕಾದ ಉಪಾಯದ ಜ್ಞಾನವೂ ವೇದ ಶಾಸ್ತ್ರದಿಂದ ಲಭಿಸುತ್ತದೆ ಎಂದು ತಿಳಿಸಲ್ಪಟ್ಟಿದೆ. ಈಗ ಈ ಹದಿನೇಳನೆಯ ಅಧ್ಯಾಯದಲ್ಲಿ ಶಾಸ್ತ್ರವಿಧಿ ರಹಿತವಾದ ಕರ್ಮಗಳು ಅಸುರ ಪ್ರಕೃತಿಯುಳ್ಳದ್ದಾಗಿ ಇರುವುದರಿಂದ ಅವುಗಳಿಗೆ ಫಲವು ಲಭಿಸುವುದಿಲ್ಲವೆಂದೂ, ಶಾಸ್ತ್ರ ವಿಹಿತವಾದ ಕರ್ಮಗಳು ಸತ್ವಾದಿ ತ್ರಿಗುಣಗಳಿಗೆ ಅನುಗುಣವಾಗಿ ಮೂರು ಪ್ರಕಾರವಾಗಿವೆ ಎಂದೂ ತಿಳಿಸಿದೆ ಮತ್ತು ಶಾಸ್ತ್ರಸಿದ್ಧವಾದ ಯಜ್ಞಾದಿಗಳ ಲಕ್ಷಣವೂ

ತಿಳಿಸಲ್ಪಟ್ಟಿದೆ. ಶಾಸ್ತ್ರ ವಿಧಿರಹಿತವಾದ ಯಜ್ಞಾದಿ ಕರ್ಮಗಳಿಗೆ ಫಲವಿಲ್ಲವೆಂಬುದನ್ನು ಅರಿಯದೆ ಅರ್ಜುನನು ಅವುಗಳು ಶ್ರದ್ಧೆಯಿಂದ ಮಾಡಲ್ಪಟ್ಟರೆ, ಅವುಗಳಿಗೆ ಫಲವುಂಟೇ ಎಂದು ಪ್ರಶ್ನೆಯನ್ನು ಮಾಡುತ್ತಾನೆ. ಅದಕ್ಕೆ ಉತ್ತರವಾಗಿ ಶ್ರೀಕೃಷ್ಣನು ಅದಕ್ಕೆ ಫಲವಿಲ್ಲವೆಂದು ಹೇಳಿ ಕರ್ಮಗಳೂ ಅವುಗಳ ಫಲವೂ ಸತ್ವರಜಸ್ತಮೋ ಗುಣಗಳ ನಿಮಿತ್ತದಿಂದ ಮೂರು ಬಗೆಯಾಗಿವೆ ಎಂದು ವಿವರಿಸಿ ತಿಳಿಸುತ್ತಾನೆ.

**I ಶಾಸ್ತ್ರವಿಧಿತ ಯಜ್ಞಯಾಗಾದಿ ಸಮಸ್ತ ಕರ್ಮಗಳ ಆಚರಣೆಯಲ್ಲಿ ಇರುವ ಸಾತ್ವಿಕ, ರಾಜಸ, ತಾಮಸ ಎಂಬ ತ್ರಿವಿಧ ಶ್ರದ್ಧೆಗಳ ವಿವರಣೆ.**
**(ಶ್ಲೋಕಗಳು 1 ರಿಂದ 4)**

ಶಾಸ್ತ್ರ ವಿಧಿಯನ್ನು ಬಿಟ್ಟು ಶ್ರದ್ಧೆಯಿಂದ ಕೂಡಿ ಯಜ್ಞಾದಿ ಕರ್ಮಗಳನ್ನು ಆಚರಿಸುವವರ ನಿಷ್ಠೆಯು ಸತ್ವಗುಣದಿಂದ ಉಂಟಾಗಿದೆಯೋ, ರಜೋಗುಣದಿಂದ ಉಂಟಾಗಿದೆಯೋ ಇಲ್ಲವೇ ತಮೋಗುಣದಿಂದ ಉಂಟಾಗಿದೆಯೋ ಎಂಬ ವಿಷಯವನ್ನು ತಿಳಿಸುವಂತೆ ಅರ್ಜುನನು ಶ್ರೀಕೃಷ್ಣನನ್ನು ಕೇಳುತ್ತಾನೆ. ಭಗವಂತನು ಅವನಿಗೆ ಅದರ ವಿಷಯವನ್ನು ಈ ರೀತಿ ತಿಳಿಸುತ್ತಾನೆ. "ಸಮಸ್ತ ಪ್ರಾಣಿಗಳ ಶ್ರದ್ಧೆ ಎಂಬುದು ಅವರವರ ಪ್ರಾಚೀನ ವಾಸನೆಗಳಿಂದ ಉಂಟಾಗಿರುವ ಬೇರೆ ಬೇರೆ ಸ್ವಭಾವಗಳ ಪರಿಣಾಮವಾಗಿದೆ. ಆದ್ದರಿಂದ ಶ್ರದ್ಧೆಯಲ್ಲಿ ಸಾತ್ವಿಕ ಶ್ರದ್ಧೆ, ರಾಜಸ ಶ್ರದ್ಧೆ ಮತ್ತು ತಾಮಸ ಶ್ರದ್ಧೆ ಎಂಬ ಮೂರು ಬಗೆಯ ಶ್ರದ್ಧೆಯು ಇದೆ. ಪುರುಷನ ಅಂತಃಕರಣವು ಈ ಮೂರು ಗುಣಗಳಲ್ಲಿ ಯಾವ ಗುಣದಿಂದ ಕೂಡಿರುತ್ತದೆಯೋ ಅಂತಹ ಶ್ರದ್ಧೆಯು ಅವನಿಗೆ ಉಂಟಾಗುತ್ತದೆ ಮತ್ತು ಆಯಾ ಗುಣ ಪ್ರಯುಕ್ತವಾದ ಫಲವನ್ನು ಅವನು ಹೊಂದುತ್ತಾನೆ.

**ಸಾತ್ವಿಕ ಶ್ರದ್ಧೆ** - ಸತ್ವಗುಣ ಪ್ರಚುರರಾದ ಜನರು ಸಾತ್ವಿಕ ಶ್ರದ್ಧೆಯುಳ್ಳವರಾಗಿ ಇಂದ್ರಾದಿಗಳನ್ನು ಸಾತ್ವಿಕ ಶ್ರದ್ಧೆಯಿಂದ ಆರಾಧಿಸಿ ದುಃಖ ಮಿಶ್ರಣವಿಲ್ಲದೇ ಇರುವ ಸುಖವನ್ನು ಅನುಭವಿಸುವರು. **ರಾಜಸಶ್ರದ್ಧೆ** - ರಜೋಗುಣ ಪ್ರಚುರರಾದವರು ರಾಜಸ ಶ್ರದ್ಧೆಯಿಂದ ಯಕ್ಷರಾಕ್ಷಸರುಗಳನ್ನು ಪೂಜಿಸಿ ದುಃಖಮಿಶ್ರಣವಾದ ಅಲ್ಪಸುಖವನ್ನು ಅನುಭವಿಸುವರು. **ತಾಮಸ ಶ್ರದ್ಧೆ** - ತಮೋಗುಣ ಪ್ರಚುರರಾದವರು ಭೂತಗಣಗಳನ್ನೂ ಪ್ರೇತಾದಿಗಳನ್ನೂ ಪೂಜಿಸಿ ದುಃಖಮಯವಾದ ಅತ್ಯಲ್ಪ ಸುಖವನ್ನು ಪಡೆಯುತ್ತಾರೆ.

## II ಶಾಸ್ತ್ರ ವಿಹಿತವಲ್ಲದ ಕರ್ಮಗಳು ಅನರ್ಥ ಫಲವುಳ್ಳದ್ದಾಗಿವೆ. (ಶ್ಲೋಕಗಳು 5 ಮತ್ತು 6)

ಶಾಸ್ತ್ರವಿರುದ್ಧವಾದ ಘೋರವಾದ ಅಂದರೆ ಅತ್ಯಂತ ಪರಿಶ್ರಮದಿಂದ ಕೂಡಿದ ತಪಸ್ಸನ್ನು ಆಚರಿಸುವವರು ಧಾರ್ಮಿಕರೆಂದು ಹೆಸರು ಪಡೆಯಬೇಕೆಂದು ಡಂಭದಿಂದಲೂ, ಅಹಂಕಾರದಿಂದಲೂ ಕೂಡಿ ಭೋಗವಸ್ತುಗಳಲ್ಲಿ ಅಧಿಕವಾದ ಆಸೆಯನ್ನು ಹೊಂದಿ ಶಾಸ್ತ್ರವಿಹಿತವಲ್ಲದ ಅತ್ಯಂತ ಕಠಿಣವಾದ ತಪಸ್ಸನ್ನೂ ಯಜ್ಞಯಾಗಾದಿಗಳನ್ನೂ ನಡೆಸುವರು. ಕಠಿಣ ಕರ್ಮಗಳಿಂದ ಶರೀರದೊಳಗಿರುವ ಪಂಚಭೂತಗಳನ್ನೂ, ಶರೀರದೊಳಗೆ ಅಂತರ್ಯಾಮಿಯಾಗಿ ನಿಯಮಿಸುತ್ತಿರುವ ಭಗವದಂಶನಾದ ಜೀವನನ್ನೂ ಕೃಶಮಾಡಿ ದಂಡಿಸುತ್ತಾರೆ. ಅವರನ್ನು ರಾಕ್ಷಸ ಸಂಬಂಧವಾದ ನಿಶ್ಚಯವುಳ್ಳವರನ್ನಾಗಿ ತಿಳಿ. ಭಗವಂತನ ಆಜ್ಞೆಗೆ ವಿಪರೀತವಾಗಿ ನಡೆಯುವವರೇ ಅಸುರರು. ಅವರಿಗೆ ಎಳ್ಳಷ್ಟೂ ಸುಖವಿಲ್ಲ ಮತ್ತು ಅನರ್ಥಕರವೂ, ಅಶುಚಿಯೂ ಆದ ನರಕವೇ ಗತಿಯಾಗುತ್ತದೆ. ಶ್ರದ್ಧೆಗಳೂ, ಶ್ರದ್ಧೆಯುಳ್ಳ ಚೇತನರೂ, ಶ್ರದ್ಧಾ ವಿಷಯವಾದ ಕರ್ಮಗಳೂ ಸಾತ್ವಿಕ, ರಾಜಸ ಮತ್ತು ತಾಮಸಗಳೆಂದು ಮೂರು ವಿಧಗಳಾಗಿವೆ ಎಂಬುದು ಮೇಲೆ ತಿಳಿಸಲ್ಪಟ್ಟಿದೆ.

## III ಸಾತ್ವಿಕ, ರಾಜಸ, ತಾಮಸ ಆಹಾರಗಳ ವರ್ಣನೆ. (ಶ್ಲೋಕಗಳು 7 ರಿಂದ 10)

ಈಗ ಮುಂದೆ ಶಾಸ್ತ್ರವಿಧಿತವಾದ ಯಜ್ಞಾದಿ ಕರ್ಮಗಳೂ, ಆಹಾರ, ಯಜ್ಞ, ದಾನ, ತಪಸ್ಸುಗಳೂ ಸತ್ವಾದಿಗುಣಗಳಿಂದ ಮೂರು ವಿಧಗಳಾಗಿವೆ ಎಂಬುದು ತಿಳಿಸಲ್ಪಡುತ್ತದೆ.

ಸತ್ವಾದಿ ಗುಣಗಳ ವೃದ್ಧಿಗೆ ಆಹಾರವೇ ಮೂಲ ಕಾರಣವಾಗಿರುವುದರಿಂದ ಮೊದಲು ಆಹಾರದಲ್ಲಿ ಇರುವ ತ್ರಿವಿಧ ಭೇದಗಳು ತಿಳಿಸಲ್ಪಡುತ್ತದೆ.

**ಸಾತ್ವಿಕ ಆಹಾರ** - ಸತ್ವಗುಣವುಳ್ಳ ಪುರುಷನಿಗೆ ಸಾತ್ವಿಕ ಆಹಾರವು ಪ್ರಿಯವಾಗಿರುತ್ತದೆ. **"ಆಯುಸ್ಸತ್ವ ಬಲಾರೋಗ್ಯ ಸುಖ ಪ್ರೀತಿ ವಿವರ್ಧನಾಃ"** - ಅಂದರೆ ಆಯುಸ್ಸು, ಜ್ಞಾನ, ಬಲ, ಆರೋಗ್ಯ, ಸುಖ, ಸಂತೋಷ, ಪ್ರೀತಿ ಇವೆಲ್ಲವನ್ನೂ ವೃದ್ಧಿಗೊಳಿಸುವಂತಹ, **'ರಸ್ಯಾಃ'** - ಮಧುರವಾದ ರಸದಿಂದ ಕೂಡಿದ; **'ಸ್ನಿಗ್ಧಾಃ'** - ಜಿಡ್ಡಿನಿಂದ ಕೂಡಿದ; **'ಸ್ಥಿರಾಃ'** - ದೇಹಕ್ಕೆ ಪುಷ್ಟಿ ಕೊಟ್ಟು ಸ್ಥಿರವಾದ ಪರಿಣಾಮವನ್ನು

ಉಂಟುಮಾಡುವ; **'ಹೃದ್ಯಾಃ'** – ನೋಡುವುದಕ್ಕೂ, ಸೇವಿಸುವುದಕ್ಕೂ ರಮಣೀಯ ವಾಗಿರುವ; – ಈ ರೀತಿಯಾಗಿ ಸತ್ತ್ವ ವಿವರ್ಧಕಗಳಾದ ಆಹಾರವು ಸತ್ತ್ವಗುಣವುಳ್ಳ ಪುರುಷರಿಗೆ ಪ್ರಿಯವಾಗಿದೆ.

**ರಾಜಸ ಆಹಾರ - 'ಕಟು'** ಅತಿಕಹಿಯಾದ; **'ಆಮ್ಲ'** – ಅತಿ ಹುಳಿಯಾದ **'ಲವಣ'** – ಅತಿ ಉಪ್ಪಾದ; **'ಅತ್ಯುಷ್ಣ'** – ತುಂಬ ಬಿಸಿಯಾದ; **'ತೀಕ್ಷ್ಣ'** – ಅತ್ಯಂತ ತೀಕ್ಷ್ಣವಾದ ಅಂದರೆ ಅತಿ ಬಿಸಿ, ಅತಿಶೀತವಾದ; **'ರೂಕ್ಷ'** – ದೇಹವನ್ನು ಶೋಷಿಸುವ; **'ವಿದಾಹಿ'** – ತಾಪಗಳನ್ನು ಉಂಟುಮಾಡುವ; – ಈ ವಿಧವಾದ ರಾಜಸ ಆಹಾರಗಳು ರಾಜಸ ಪುರುಷನಿಗೆ ಇಷ್ಟವಾದವುಗಳು. ಇವು ರಜೋಗುಣ ವರ್ಧಕವಾಗಿ ದುಃಖ, ಶೋಕ ರೋಗಾದಿಗಳನ್ನು ಹೆಚ್ಚಿಸುತ್ತವೆ.

**ತಾಮಸ ಆಹಾರ - 'ಯಾತಯಾಮಂ'** – ಬಹಳ ಕಾಲಕಳೆದು ಹೋಗಿ ಹಳಸಿ ಹೋಗಿರುವ; **'ಗತರಸಂ'** – ರಸಹೀನವಾದ; **'ಪೂತಿ'** – ದುರ್ಗಂಧದಿಂದ ಕೂಡಿರುವ **'ಪರ್ಯುಷಿತಂ'** – ಹಳಸಿ ಹೋಗಿರುವುದರಿಂದ ರಸಾಂತರ ಹೊಂದಿರುವ; **'ಉಚ್ಛಿಷ್ಟಂ'** – ಇತರರು ತಿಂದು ಎಂಜಲಾಗಿ ಮಿಕ್ಕಿರುವ; **'ಅಮೇಧ್ಯಂ'** – ಅಶುಚಿ ಯಾದ ಅಂದರೆ ಭಗವದರ್ಪಣ ಮಾಡದೆ ಅಯೋಗ್ಯವಾದ; – ಈ ರೀತಿ ತಮೋಮಯವಾದ ಆಹಾರವು ತಾಮಸ ಪುರುಷರಿಗೆ ಇಷ್ಟವಾದವುಗಳು, ಇವು ತಮೋಗುಣವನ್ನು ವೃದ್ಧಿಪಡಿಸುತ್ತವೆ. ಆದ್ದರಿಂದ ಸತ್ತ್ವಗುಣವನ್ನು ವೃದ್ಧಿಪಡಿಸಿ ಕೊಳ್ಳುವುದಕ್ಕಾಗಿ ಸಾತ್ವಿಕ ಆಹಾರವನ್ನೇ ಸೇವಿಸುವುದು ಉತ್ತಮವೆಂದು ಅಭಿಪ್ರಾಯ.

## IV ತ್ರಿವಿಧ ಯಜ್ಞಾದಿ ಕರ್ಮಗಳ ವರ್ಣನೆ. (ಶ್ಲೋಕಗಳು 11 - 13)

**ಸಾತ್ವಿಕ ಯಜ್ಞಾದಿ ಕರ್ಮಗಳು:-** ಪುರುಷರು ಫಲಾಪೇಕ್ಷೆರಹಿತರಾಗಿ ಶಾಸ್ತ್ರಗಳಲ್ಲಿ ಹೇಳಿರುವ ಮಂತ್ರದ್ರವ್ಯ ಮುಂತಾದ ಅಂಗಗಳೊಡನೆ ಕೂಡಿ ಭಗವದಾರಾಧನ ರೂಪವಾಗಿ ಕರ್ಮಮಾಡುವುದೇ ತಮ್ಮ ಕರ್ತವ್ಯವೆಂದೂ, ಅದೇ ಫಲವೆಂದೂ ಮನಸ್ಸಿನಲ್ಲಿ ನಿಶ್ಚಯ ಮಾಡಿಕೊಂಡು ಆಚರಿಸುವ ಯಜ್ಞಾದಿ ಕರ್ಮಗಳು ಸಾತ್ವಿಕ ಕರ್ಮಗಳು. ಇದು ಕೇವಲ ಯಜ್ಞಯಾಗಾದಿಗಳಿಗೆ ಮಾತ್ರ ಅನ್ವಯಿಸುವಂತಹುದಾಗಿರದೆ ಪುರುಷರು ಆಚರಿಸುವ ಸಮಸ್ತ ಕರ್ಮಗಳಿಗೂ ಅನ್ವಯಿಸುತ್ತದೆ. ಸಮಸ್ತಕರ್ಮಗಳನ್ನೂ ಈ ನಾಲ್ಕು ಅಂಗಗಳೊಂದಿಗೆ ಆಚರಿಸಿದರೆ

ಅವುಗಳೆಲ್ಲವೂ ಸಾತ್ವಿಕ ಕರ್ಮಗಳಾಗುತ್ತವೆ. (1) ಫಲಾಭಿಸಂಧಿರಹಿತತ್ವ - ಅಂದರೆ ಕರ್ಮದ ಫಲದಲ್ಲಿ ಆಸಕ್ತಿಯನ್ನು ಹೊಂದದೆ ಕರ್ಮಮಾಡುವುದನ್ನೇ ಪುರುಷಾರ್ಥವಾಗಿ ಹೊಂದಿರುವಿಕೆ; (2) ವಿಧಿ ದೃಷ್ಟತ್ವ - ಅಂದರೆ ಶಾಸ್ತ್ರ ವಿಧಿಗಳಿಗೆ ಅನುಸಾರವಾದ ರೀತಿಯಲ್ಲಿ ಅನುಷ್ಠಿಸುವಿಕೆ (3) ಯಷ್ಟವ್ಯತ್ವ ಕರ್ಮವು ಮಾಡಲು ಯೋಗ್ಯವಾದುದಾಗಿರುವಿಕೆ; ಅಂದರೆ ಯೋಗ್ಯವಾದ ಕರ್ಮಾನುಷ್ಠಾನವೇ ಭಗವದಾರಾಧನೆಯು ಮತ್ತು ಅದನ್ನು ಮಾಡುವುದೇ ತನ್ನ ಕರ್ತವ್ಯವು ಎಂಬ ಭಾವನೆಯನ್ನು ಹೊಂದಿರುವಿಕೆ, (4) ಮನಸ್ಸಮಾಧಾನತ್ವ - ಅಂದರೆ ಕರ್ಮಗಳನ್ನು ಆಚರಿಸುವಾಗ ಮನಸ್ಸಿನಲ್ಲಿ ಶಾಂತಿಯೂ, ಕರ್ಮ ಮಾಡುವುದರಲ್ಲಿಯೇ ಪ್ರೀತಿ ಸಂತೋಷಗಳು ಉಂಟಾಗಿ ಕರ್ಮವು ಶ್ರದ್ಧಾಭಕ್ತಿಗಳಿಂದ ಆಚರಿಸಲ್ಪಡುವಿಕೆ. ಈ ನಾಲ್ಕು ಅಂಗಗಳೊಂದಿಗೆ ಆಚರಿಸಲ್ಪಡುವ ಕರ್ಮಗಳೆಲ್ಲವೂ ಸಾತ್ವಿಕ ಕರ್ಮಗಳು.

**ರಾಜಸ ಯಜ್ಞಾದಿ ಕರ್ಮಗಳು :-** ಐಹಿಕಾಮುಷ್ಮಿಕ ಫಲಗಳನ್ನು ಪಡೆಯುವ ಅಪೇಕ್ಷೆಯಿಂದಲೂ, ಈ ಲೋಕದಲ್ಲಿ ಧಾರ್ಮಿಕನೆಂದು ಯಶಸ್ಸು ಪಡೆಯಬೇಕೆಂದು ಡಂಭಕ್ಕಾಗಿಯೂ ಮಾಡುವ ಯಜ್ಞಾದಿ ಕರ್ಮಗಳೆಲ್ಲವೂ ರಾಜಸ ಕರ್ಮಗಳು.

**ತಾಮಸ ಯಜ್ಞಾದಿ ಕರ್ಮಗಳು:-** **'ವಿಧಿಹೀನಂ'**- ಅಂದರೆ ''ಈ ಧರ್ಮವನ್ನು ಮಾಡು'' ಎಂದು ಶಿಷ್ಟರಿಂದ ಅಪ್ಪಣೆಯನ್ನು ಪಡೆಯದೆ; **'ಅಸೃಷ್ಟಾನ್ನಂ'** - ಅಂದರೆ ಅಧರ್ಮಾರ್ಜಿತವಾದ ಮತ್ತು ಅಪಾತ್ರ ವಿನಿಯೋಗವಾದ ದ್ರವ್ಯವುಳ್ಳ; **'ಮಂತ್ರಹೀನಂ'** - ಮಂತ್ರವಿಲ್ಲದ ಮತ್ತು ಭಗವನ್ನಾಮ ಸ್ಮರಣೆಯಿಲ್ಲದ; **'ಅದಕ್ಷಿಣಂ'** - ಅಂದರೆ ಇತರರಿಗೆ ದಕ್ಷಿಣೆಯನ್ನು ಕೊಡದೆ ಅಂದರೆ ತ್ಯಾಗವಿಲ್ಲದೆ ಲೋಭದಿಂದ ಮಾಡಲ್ಪಟ್ಟ; ಹೀಗೆ ಶ್ರದ್ಧಾರಹಿತವಾಗಿ ಮಾಡಿದ ಯಜ್ಞಾದಿ ಕರ್ಮಗಳು ತಾಮಸ ಯಜ್ಞವೆನಿಸುವುದು. ಇದರಿಂದ ಮಹಾದೋಷವುಂಟಾಗಿ ಅನರ್ಥಕ್ಕೆ ಕಾರಣ ವಾಗುತ್ತದೆ.

## V ತ್ರಿವಿಧ ತಪಸ್ಸುಗಳ ವರ್ಣನೆ. (ಶ್ಲೋಕಗಳು 14 - 19)

ತಪಸ್ಸು ಶರೀರದಿಂದಲೂ, ವಾಕ್ಕಿನಿಂದಲೂ, ಮನಸ್ಸಿನಿಂದಲೂ ಉಂಟಾಗುತ್ತದೆ. ಆದ್ದರಿಂದ ಶಾರೀರಿಕ ತಪಸ್ಸು, ವಾಚಿಕ ತಪಸ್ಸು ಮತ್ತು ಮಾನಸಿಕ ತಪಸ್ಸು ಎಂದು ಮೂರು ವಿಧವಾದ ತಪಸ್ಸುಗಳಿವೆ.

**ಶಾರೀರಿಕ ತಪಸ್ಸು :-** ಇದು ಶರೀರದ ಮೂಲಕ ಮಾಡಲ್ಪಡುವ ತಪಸ್ಸು. **'ದೇವದ್ವಿಜ ಗುರು ಪ್ರಾಜ್ಞ ಪೂಜನಂ'** - ದೇವತೆಗಳು, ಬ್ರಹ್ಮವಿತ್ತುಗಳು, ಗುರುಗಳು, ಜ್ಞಾನಿಗಳು, ಇವರುಗಳನ್ನು ಸತ್ಕರಿಸಿ ಪೂಜಿಸುವುದು; **'ಶೌಚಂ'**-ಪುಣ್ಯ-ತೀರ್ಥ ಸ್ನಾನಾದಿಗಳನ್ನು ಮಾಡಿ ಶುಚಿಯಾಗಿರುವುದು; **'ಆರ್ಜವಂ'** - ಮನೋವಾಕ್ಕಾಯಗಳಲ್ಲಿ ಏಕರೂಪವಾಗಿರುವುದು ಅಂದರೆ ಮನಸ್ಸಿನಲ್ಲಿ ಇರುವಂತೆ ಕಾರ್ಯದಲ್ಲಿ ಮಾಡುವುದು; **'ಬ್ರಹ್ಮಚರ್ಯಂ'** - ಸ್ತ್ರೀಯರಲ್ಲಿ ಭೋಗ್ಯತಾ ಬುದ್ಧಿಯನ್ನು ಬಿಟ್ಟಿರುವುದು; **'ಅಹಿಂಸಾ'** - ಪರರನ್ನು ಪೀಡಿಸದೇ ಇರುವುದು; ಇವು ಶಾರೀರಕ ತಪಸ್ಸುಗಳು.

**ವಾಚಿಕ ತಪಸ್ಸು-** ಇದು ಮಾತಿನಲ್ಲಿ ಮಾಡುವ ತಪಸ್ಸು **'ಅನುದ್ವೇಗಕರಂ ವಾಕ್ಯಂ'** - ಬೇರೆಯವರ ಮನಸ್ಸನ್ನು ನೋಯಿಸದಂತೆ ಅವರಿಗೆ ಉದ್ವೇಗ ಅಥವಾ ಕ್ಲೇಶ ಉಂಟುಮಾಡದಂತಹ ಮಾತುಗಳನ್ನು ಹೇಳುವುದು; **'ಸತ್ಯಂಪ್ರಿಯಹಿತಂ'**- ಸತ್ಯವೂ, ಪ್ರಿಯವೂ, ಹಿತವೂ ಆದ ಮಾತುಗಳನ್ನು ಹೇಳುವುದು. ಪ್ರಿಯವಾಗಿ ಹಿತವಲ್ಲದ ಮತ್ತು ಹಿತವಾಗಿ ಪ್ರಿಯವಲ್ಲದ ಮಾತುಗಳನ್ನು ಹೇಳಬಾರದು; **'ಸ್ವಾಧ್ಯಾಯ ಅಭ್ಯಸನಂ'** - ವೇದಾಧ್ಯಯನ ಮಾಡುವುದು ಅಂದರೆ ವೇದ ಮಂತ್ರ ಗಳನ್ನು ಬಾಯಲ್ಲಿ ಉಚ್ಚರಿಸುತ್ತಾ ಅಧ್ಯಯನ ಮಾಡಬೇಕು. ಇವುಗಳು ವಾಚಿಕ ತಪಸ್ಸುಗಳು.

**ಮಾನಸಿಕ ತಪಸ್ಸು :-** ಮನಸ್ಸಿನಲ್ಲಿ ಮಾಡುವ ತಪಸ್ಸು **'ಮನಃಪ್ರಸಾದಃ'** - ಮನಸ್ಸಿನಲ್ಲಿ ಕೋಪವಿಲ್ಲದೇ ಪ್ರಸನ್ನವಾಗಿ ಇರುವುದು ಅಂದರೆ ಶಾಂತವಾಗಿರುವುದು; **'ಸೌಮ್ಯತ್ವಂ'** - ಇತರರ ಶ್ರೇಯಸ್ಸನ್ನು ಕೋರುವುದು. ಅವರ ಏಳಿಗೆಯನ್ನು ಕಂಡು ಅಸೂಯೆ ಪಡದೆ ಹರ್ಷಗೊಳ್ಳುವುದು; **'ಮೌನಂ'** - ಮನಸ್ಸಿನ ಮೂಲಕ ವಾಕ್ಪ್ರವೃತ್ತಿಯನ್ನು ತಡೆಯುವುದು; ಕೆಟ್ಟ ಮಾತುಗಳನ್ನಾಡದಂತೆ ಮನಸ್ಸಿನ ಮೂಲಕ ತಡೆಯುವುದು; **'ಆತ್ಮವಿನಿಗ್ರಹ'** - ಮನಸ್ಸನ್ನು ಐಹಿಕ ವಿಷಯಗಳಲ್ಲಿ ಪ್ರವರ್ತಿಸದಂತೆ ತಡೆದು ಆತ್ಮಪರಮಾತ್ಮ-ಚಿಂತನೆಯಲ್ಲಿ ನಿಲ್ಲುವಂತೆ ಮಾಡುವುದು, ಮನೋವ್ಯಾಪಾರ ಗಳನ್ನು ಇತರ ವಿಷಯಗಳಲ್ಲಿ ಉಪಯೋಗಿಸದೆ ಭಗವಂತನ ಧ್ಯಾನ ದಲ್ಲಿಯೇ ನಿಲ್ಲಿಸುವುದು; **'ಭಾವಸಂಶುದ್ಧಿ'** - ಮನಸ್ಸಿನ ಭಾವಗಳು ಕಲ್ಮಶರಹಿತವಾಗಿ ಪರಿಶುದ್ಧ ವಾಗಿರುವಿಕೆ, ಆತ್ಮ ಪರಮಾತ್ಮಧ್ಯಾನವನ್ನು ಬಿಟ್ಟು ಇತರ ವಿಷಯಗಳನ್ನು ಚಿಂತೆ ಮಾಡಿ ಮನಸ್ಸನ್ನು ಕಲ್ಮಶ ಪಡಿಸಿಕೊಳ್ಳದೆ ಇರುವಿಕೆ - ಇವುಗಳು ಮಾನಸಿಕ ತಪಸ್ಸುಗಳು.

ಈ ಮೂರು ಬಗೆಯಾದ ಕಾಯಿಕ, ವಾಚಿಕ ಮತ್ತು ಮಾನಸಿಕ ತಪಸ್ಸುಗಳೂ ಗುಣಭೇದದಿಂದ ಸಾತ್ವಿಕ, ರಾಜಸ ಮತ್ತು ತಾಮಸ ಎಂದು ಮೂರು ಬಗೆಯಾಗಿರುವುದು.

**ಸಾತ್ವಿಕ ತಪಸ್ಸು :-** ಜನರು ಕರ್ಮ ಫಲದಲ್ಲಿ ಆಸೆ ಹೊಂದದೆ, ಭಗವಂತನ ಆರಾಧನೆ ಎಂಬ ಭಾವನೆಯಿಂದಲೂ, ಶ್ರದ್ಧೆಯಿಂದಲೂ ಆಚರಿಸುವ ಕಾಯಿಕ, ವಾಚಿಕ ಮತ್ತು ಮಾನಸಿಕ ತಪಸ್ಸುಗಳು ಸಾತ್ವಿಕ ತಪಸ್ಸು.

**ರಾಜಸ ತಪಸ್ಸು :-** ಇತರರು ಈತನು ಮಹಾ ತಪಸ್ವಿ ಎಂದು ಮನಸ್ಸಿನಲ್ಲಿ ತಿಳಿದು ಆದರಿಸಲಿ, ವಾಕ್ಕಿನ ಮೂಲಕ ತನ್ನನ್ನು ಸ್ತುತಿಸಿ ಹೊಗಳಲಿ, ಶರೀರದ ಮೂಲಕ ತನಗೆ ನಮಸ್ಕಾರಾದಿ ಪೂಜೆಗಳನ್ನು ಮಾಡಲಿ ಎಂಬ ಆಸೆಯಿಂದ ಫಲಾಪೇಕ್ಷೆ ಹೊಂದಿ ಡಂಭಕ್ಕಾಗಿ ಅನುಷ್ಠಿಸಲ್ಪಡುವ ಕಾಯಿಕ, ವಾಚಿಕ ಮತ್ತು ಮಾನಸಿಕ ತಪಸ್ಸುಗಳು ರಾಜಸ ತಪಸ್ಸು. ಇದು ಅಸ್ಥಿರವಾದುದೂ ಕ್ಷಯಿಸುವಂತಹದೂ ಆಗಿದೆ.

**ತಾಮಸ ತಪಸ್ಸು :-** ಮೂಢರು ಅಂದರೆ ವಿವೇಕವಿಲ್ಲದವರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಸರಿಯಾಗಿ ಗಮನಿಸಿಕೊಳ್ಳದೆ ಕಾಯ ಕ್ಲೇಶದ ಮೂಲಕ ತಮ್ಮನ್ನು ತಾವೇ ಹಿಂಸಿಸಿಕೊಂಡು, ಇತರರಿಗೂ ಕೇಡನ್ನು ಬಯಸಿ ಅವರನ್ನು ಪೀಡಿಸುವ ಉದ್ದೇಶದಿಂದ ಮಾಡುವ ಕಾಯಿಕ, ವಾಚಿಕ ಮತ್ತು ಮಾನಸಿಕ ತಪಸ್ಸುಗಳು ತಾಮಸ ತಪಸ್ಸು.

## VI ತ್ರಿವಿಧ ದಾನಗಳ ವರ್ಣನೆ. (ಶ್ಲೋಕಗಳು 20 - 22)

ತ್ರಿಗುಣಗಳ ಭೇದದಿಂದ ದಾನವೂ ಮೂರು ಬಗೆಯಾಗಿ ಇರುವುದು.

**ಸಾತ್ವಿಕದಾನ :- 'ದಾತವ್ಯಂ ಇತಿ ಯದ್ದಾನಂ'** - ಪ್ರತ್ಯುಪಕಾರವನ್ನು ಬಯಸದೆ ಕೇವಲ ದಾನವನ್ನು ಮಾಡಬೇಕೆಂಬ ಉದ್ದೇಶದಿಂದ ಮಾಡುವ ದಾನ, **'ಅನುಪಕಾರಿಣೇ ದೀಯತೇ'** - ತನಗೆ ಯಾವ ಉಪಕಾರವನ್ನೂ ಮಾಡದವನಿಗೆ ಕೊಡುವ ದಾನ, **'ದೇಶಕಾಲೇ ಪಾತ್ರೇಚದೀಯತೇ'**- ದೇಶ, ಕಾಲ, ಪಾತ್ರಗಳನ್ನು ನೋಡಿ ಸತ್‌ಕ್ಷೇತ್ರದಲ್ಲಿ, ಸತ್ಕಾಲದಲ್ಲಿ, ಸತ್ಪಾತ್ರನಿಗೆ ಕೊಡುವ ದಾನ, - ಇಂತಹ ದಾನವು ಸಾತ್ವಿಕ ದಾನವೆನಿಸುವುದು.

**ರಾಜಸದಾನ :-** ಪ್ರತ್ಯುಪಕಾರಾರ್ಥವಾದ ದಾನ ಅಂದರೆ ಮುಂದೆ ತನಗೆ ಉಪಕಾರ ಮಾಡಲಿ ಎಂದು ಪ್ರತ್ಯುಪಕಾರವನ್ನು ಪಡೆಯುವ ಅಪೇಕ್ಷೆಯಿಂದ ಮಾಡುವ ದಾನ, ಫಲೋದ್ದೇಶ್ಯದಿಂದ ಕೊಡಿದ ಅಂದರೆ ಇಂದು ತಾನು ಕೊಡುವ ದಾನಕ್ಕೆ ಮುಂದೆ ತನಗೆ ಫಲವು ದೊರೆಯುವುದೆಂಬ ಅಭಿಲಾಷೆಯಿಂದ ಮಾಡುವ ದಾನ, ಪರಿಶಿಷ್ಟವಾದ ದಾನ ಅಂದರೆ ಅನ್ಯಾಯದಿಂದ ಅರ್ಜಿಸಿದ ದ್ರವ್ಯವನ್ನು, ನಿಕೃಷ್ಟವಾದ ಅಂದರೆ ಕೆಟ್ಟು ಹೋದ ತನಗೆ ಬೇಡದ ಪದಾರ್ಥವನ್ನು ಅಶ್ರದ್ಧೆಯಿಂದಲೂ ಇತರರಿಗೆ ಕೊಡಬೇಕಲ್ಲ ಎಂಬ ಕ್ಲೇಶದಿಂದಲೂ ದಾನ ಮಾಡುವುದು - ಇವೆಲ್ಲವೂ ರಾಜಸ ದಾನವು.

**ತಾಮಸ ದಾನ :-** ಅಸತ್ಕೃತವಾದ ಅಂದರೆ ಆದರಗೌರವ ರಹಿತವಾದ, ಅವಜ್ಞಾತಾ ಅಂದರೆ ತಿರಸ್ಕಾರದಿಂದ ಕೊಡಿದ, ಅನುಪಚಾರವಾದ ಅಂದರೆ ಉಪಚಾರಗಳಿಲ್ಲದೆ ದೇಶ, ಕಾಲ, ಪಾತ್ರಗಳ ವಿಚಾರ ಮಾಡದೆ ಅಪಾತ್ರರಿಗೆ ಕೊಡುವ ದಾನವು ತಾಮಸದಾನವು. ಹೀಗೆ ಯಜ್ಞ, ದಾನ, ತಪಸ್ಸುಗಳು ಸತ್ವರಜಸ್ತಮೋಗುಣಗಳ ಭೇದದಿಂದ ಮೂರು ವಿಧವಾಗಿವೆ ಎಂಬುದು ತಿಳಿಸಲ್ಪಟ್ಟಿದೆ.

## VII ಯಜ್ಞಾದಿ ಕರ್ಮಗಳೆಲ್ಲವೂ "ಓಂ ತತ್ ಸತ್" ಎಂಬ ಶಬ್ದಗಳೊಂದಿಗೆ ಆಚರಿಸಲ್ಪಟ್ಟರೆ ಅತ್ಯುತ್ತಮವು. (ಶ್ಲೋಕಗಳು 23 - 28)

ಈಗ ಮುಂದೆ ಶಾಸ್ತ್ರ ವಿಹಿತವಾದ ಯಜ್ಞಾದಿ ಕರ್ಮಗಳೆಲ್ಲವೂ "ಓಂ ತತ್ ಸತ್" ಎಂಬ ಶಬ್ದದೊಂದಿಗೆ ಆಚರಿಸಲ್ಪಡಬೇಕೆಂಬುದು ತಿಳಿಸಲ್ಪಡುತ್ತದೆ. 'ಓಂ ತತ್ ಸತ್' ಎಂಬ ಈ ಮೂರು ಶಬ್ದಗಳೂ ವೇದವನ್ನು ನಿರ್ದೇಶಿಸುತ್ತವೆ. ವೇದದಲ್ಲಿ ತಿಳಿಸಿರುವ ಯಜ್ಞಾದಿ ಕರ್ಮಗಳು 'ಓಂ ತತ್ ಸತ್' ಎಂಬ ಮೂರು ಶಬ್ದಗಳೊಂದಿಗೆ ಸಂಬಂಧ ಪಡೆದಿವೆ. ಈ ಮೂರು ಶಬ್ದಗಳೊಂದಿಗೆ ಸಂಬಂಧ ಹೊಂದಿರುವ ಬ್ರಾಹ್ಮಣರೂ ಅಂದರೆ ವೇದಾನುಸಾರಿಗಳಾದ ತ್ರೈವರ್ಣಿಕರೂ, ವೇದಗಳೂ, ಯಜ್ಞಗಳೂ ಹಿಂದೆ ಪರಮಾತ್ಮನಿಂದ ನಿರ್ಮಿತವಾದವು. ಆದುದರಿಂದ ವೇದವಿತ್ತುಗಳಾದ ಬ್ರಹ್ಮವಾದಿಗಳು ಮಾಡುವ ವೇದವಿದಿತವಾದ ಯಜ್ಞ, ದಾನ, ತಪಸ್ಸು ಮೊದಲಾದ ಕರ್ಮಗಳೆಲ್ಲವೂ 'ಓಂ' ಎಂದು ಹೇಳಿ ಆರಂಭಿಸಲ್ಪಡುತ್ತವೆ. ಮೋಕ್ಷಾರ್ಥಿಗಳಾದ ಪುರುಷರು ವಿಧವಿಧವಾದ ವೇದಾಧ್ಯಯನಾದಿ ಯಜ್ಞ, ದಾನ, ತಪಸ್ಸು ಮೊದಲಾದ ಕ್ರಿಯೆಗಳನ್ನು ಫಲಾಪೇಕ್ಷೆ ಇಲ್ಲದೆ ಮಾಡುತ್ತಾರೆ. ಅವು

ಬ್ರಹ್ಮಪ್ರಾಪ್ತಿಗೆ ಉಪಾಯ ರೂಪವಾಗಿರುವುದರಿಂದ 'ತತ್' ಎಂಬ ಬ್ರಹ್ಮವಾಚಕ ಶಬ್ದೋಚ್ಚಾರಣೆಯೊಂದಿಗೆ ನಡೆಸಲ್ಪಡುತ್ತವೆ. 'ಸತ್' ಎಂಬ ಶಬ್ದವು ಸದ್ಭಾವದಲ್ಲಿಯೂ ಮತ್ತು ಸಾಧು ಭಾವದಲ್ಲಿಯೂ ಪ್ರಯೋಗಿಸಲ್ಪಡುತ್ತದೆ. ಎಲ್ಲಾ ಶುಭಕರ್ಮಗಳಿಗೂ 'ಸತ್' ಎಂಬ ಶಬ್ದವು ಲೋಕದಲ್ಲಿ ಪ್ರಯೋಗಿಸಲ್ಪಡುತ್ತದೆ. ಆದುದರಿಂದ ವೇದ ವಿಹಿತವಾದ ಯಜ್ಞ, ದಾನ, ತಪಸ್ಸುಗಳಲ್ಲಿರುವ ಸ್ಥಿರವಾದ ನಿಷ್ಠೆಯು 'ಸತ್' ಎಂದು ಹೇಳಲ್ಪಡುತ್ತದೆ ಮತ್ತು ಅದರ ಮೂಲಕ ಅನುಷ್ಠಿಸಲ್ಪಡುವ ಕರ್ಮಗಳೂ 'ಸತ್' ಎಂದು ಕರೆಯಲ್ಪಡುತ್ತವೆ. ಅಶ್ರದ್ಧೆಯಿಂದ ಅರ್ಪಿಸಲ್ಪಟ್ಟ ಹೋಮ, ಆಚರಿಸಲ್ಪಟ್ಟ ತಪಸ್ಸು, ಕೊಡಲ್ಪಟ್ಟ ದಾನ ಇವುಗಳು 'ಅಸತ್' ಎಂದು ಕರೆಯಲ್ಪಡುತ್ತವೆ. ಅಶ್ರದ್ಧೆಯಿಂದ ಮಾಡಲ್ಪಟ್ಟ ಇವು ಇಹಲೋಕದಲ್ಲಿ ಸಾಂಸಾರಿಕ ಫಲಕ್ಕೂ, ಪರಲೋಕದಲ್ಲಿ ಮೋಕ್ಷಫಲಕ್ಕೂ ಸಾಧನವಾಗುವುದಿಲ್ಲ.

ಶಾಸ್ತ್ರನಿಷ್ಠೆಯಷ್ಟೇ ಶ್ರದ್ಧೆಯು ಬಹಳ ಮಹತ್ವವುಳ್ಳದ್ದು ಎಂದು ಅಭಿಪ್ರಾಯ. ಸಾತ್ವಿಕ ಯಜ್ಞ, ದಾನ, ತಪಸ್ಸುಗಳಿಗೆ ಫಲಾಭಿಸಂಧಿರಹಿತತ್ವ, ಪರಮ ಪುರುಷ ಆರಾಧನರೂಪತ್ವ ಮತ್ತು ಸಾತ್ವಿಕಶ್ರದ್ಧಾಯುಕ್ತತ್ವ ಎಂಬ ಮೂರು ಅಂಗಗಳು ಅವಶ್ಯಕವೆಂದು ಮೇಲೆಯೇ ವಿವರಿಸಿದೆ. ಈ ಮೂರು ಅಂಗಗಳೊಡನೆ ಅವುಗಳನ್ನು ಆಚರಿಸುವುದಕ್ಕೆ ಒಂದು ಮಾರ್ಗವನ್ನು ಇಲ್ಲಿ ಶ್ರೀ ಕೃಷ್ಣನು ತಿಳಿಸಿದ್ದಾನೆ. ಶಾಸ್ತ್ರವಿಧಿತವಾದ ಯಜ್ಞದಾನ ತಪಸ್ಸುಗಳನ್ನು ಆಚರಿಸುವುದಕ್ಕೆ ಮೊದಲೂ, ಆಚರಿಸಿದ ಮೇಲೂ, ಅಂದರೆ ಪ್ರಾರಂಭದಲ್ಲೂ, ಮುಕ್ತಾಯದಲ್ಲೂ 'ಓಂ ತತ್ ಸತ್' ಎಂದು ಉಚ್ಚರಿಸಬೇಕು. '**ಓಂ**' ಎನ್ನುವುದರಿಂದ ಭಗವಂತನಿಗೂ ನಮಗೂ ಇರುವ ಸಂಬಂಧ ಜ್ಞಾನದ ಸ್ಮರಣೆಯು ಉಂಟಾಗಿ ಕರ್ಮದಲ್ಲಿ ಸಾತ್ವಿಕ ಶ್ರದ್ಧೆಯು ಹುಟ್ಟುತ್ತದೆ.

'**ತತ್**' ಎನ್ನುವುದರಿಂದ ಕರ್ಮದ ಫಲವು ತನ್ನದಲ್ಲ, ಪರಮಾತ್ಮನದು ಎಂಬ ಜ್ಞಾನವು ಹುಟ್ಟುತ್ತದೆ ಮತ್ತು ಅದರ ಫಲವಾಗಿ ಫಲಾಸಕ್ತಿರಾಹಿತ್ಯತೆ ಉಂಟಾಗುತ್ತದೆ. '**ಸತ್**' ಎನ್ನುವುದರಿಂದ ಕರ್ಮವು ಶುಭವಾದುದೂ, ಸತ್ಕರ್ಮವಾದುದೂ ಆಗಿರಬೇಕೆಂಬ ಜ್ಞಾನ ಉಂಟಾಗುತ್ತದೆ ಮತ್ತು ಆ ಶುಭ ಕರ್ಮವೇ ಭಗವದಾರಾಧನೆ ಎಂಬ ಭಾವನೆ ಬೆಳೆಯುತ್ತದೆ. ಆದ್ದರಿಂದ ಶಾಸ್ತ್ರ ವಿಧಿತವಾದ ಯಜ್ಞದಾನ ತಪಸ್ಸು ಮುಂತಾಗಿ ಸಮಸ್ತ ಕರ್ಮಗಳನ್ನೂ '**ಓಂ ತತ್ ಸತ್**' ಎಂದು ಉಚ್ಚರಿಸುತ್ತಾ ಸಾತ್ವಿಕ ಶ್ರದ್ಧೆಯಿಂದಲೂ, ಫಲಾಭಿಸಂಧಿರಹಿತವಾಗಿಯೂ, ಭಗವದಾರಾಧನ

ರೂಪವಾಗಿಯೂ ಕಾಯೇನ ವಾಚಾ ಮನಸಾ ಮಾಡಬೇಕು ಎಂಬುದೇ ಇಲ್ಲಿ ಶ್ರೀ ಕೃಷ್ಣನ ಉಪದೇಶ.

ಈ ಅಧ್ಯಾಯದಲ್ಲಿ ತಿಳಿಸಿರುವ ವಿಷಯಗಳನ್ನು ಶ್ರೀಯಾಮುನಾ ಚಾರ್ಯರು ಅವರ ಗೀತಾರ್ಥಸಂಗ್ರಹದ ಇಪ್ಪತ್ತೊಂದನೇ ಶ್ಲೋಕದಲ್ಲಿ ಹೀಗೆ ತಿಳಿಸಿದ್ದಾರೆ.

**ಅಶಾಸ್ತ್ರಮಾಸುರಂ ಕೃತ್ಸ್ನಂ ಶಾಸ್ತ್ರೀಯಂ ಗುಣತಃ ಪೃಥಕ್ ।**
**ಲಕ್ಷಣಂ ಶಾಸ್ತ್ರಸಿದ್ಧಸ್ಯತ್ರಿಧಾಸಪ್ತ ದಶೋದಿತಂ ॥**

ಶಾಸ್ತ್ರ ವಿಹಿತವಲ್ಲದ, ರಾಕ್ಷಸೀ ಕೃತ್ಯಗಳಾದ ಸಮಸ್ತ ಕರ್ಮಗಳೂ ನಿಷ್ಫಲವಾದವುಗಳಾಗಿವೆ ಎಂದೂ, ಶಾಸ್ತ್ರ ವಿಧಿತವಾದ ಕರ್ಮಗಳು ಸತ್ವ ರಜಸ್ತಮೋಗುಣಗಳ ಮೂಲಕ ಬೇರೆ ಬೇರೆಯಾಗಿ ಮೂರು ವಿಧಗಳಾಗಿವೆ ಎಂದೂ ಮತ್ತು ಆ ಕರ್ಮಗಳ ಮೂರು ವಿಧವಾದ ಲಕ್ಷಣಗಳೂ ಹದಿನೇಳನೆಯ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿವೆ.

*****

## ಹದಿನೆಂಟನೆಯ ಅಧ್ಯಾಯ

# ಮೋಕ್ಷಸನ್ಯಾಸ ಯೋಗ

ವಿಷಯ ಸೂಚಿಕೆ :

I ತ್ಯಾಗ ಮತ್ತು ಸನ್ಯಾಸ ಎರಡೂ ಒಂದೇ ಎಂಬ ಪ್ರತಿಪಾದನೆ ಮತ್ತು ಅವೆರಡರ ಸ್ವರೂಪ ವಿವರಣೆ. (ಶ್ಲೋಕಗಳು 1 ರಿಂದ 12)

II ಸರ್ವೇಶ್ವರನಾದ ಪರಮಾತ್ಮನಲ್ಲಿ ಸಮಸ್ತ ಕರ್ಮಗಳ ಕರ್ತೃತ್ವಾನುಸಂಧಾನದ ನಿರೂಪಣೆ. (ಶ್ಲೋಕಗಳು 13ರಿಂದ 17)

III ಕರ್ಮಾಚರಣೆಯಲ್ಲಿ ತ್ರಿಗುಣಗಳ ಕಾರ್ಯದ ವರ್ಣನೆ ಮತ್ತು ಸತ್ತ್ವಗುಣದ ಉಪಾದೇಯತ್ವ. (ಶ್ಲೋಕಗಳು 18 ರಿಂದ 40)

IV ವರ್ಣಾಶ್ರಮೋಚಿತವಾದ ಕರ್ಮಗಳನ್ನು ಭಗವದಾರಾಧನರೂಪವಾಗಿ ಮಾಡುವುದರಿಂದ ಭಗವತ್ಪ್ರಾಪ್ತಿ ಉಂಟಾಗುವಿಕೆ. (ಶ್ಲೋಕ 41 ರಿಂದ 60)

V ಗೀತಾಶಾಸ್ತ್ರದ ಪ್ರಕಾರ ಭಗವತ್ಪ್ರಾಪ್ತಿಗೆ ಭಕ್ತಿಯೇ ಉಪಾಯ; ಅದಕ್ಕೆ ಅಡ್ಡಿಯಾಗಿರುವ ಪಾಪಗಳ ನಿವಾರಣೆಗೆ ಭಗವಂತನಲ್ಲಿ ಶರಣಾಗತಿಯೇ ಉಪಾಯ ಎಂಬ ಭಗವಂತನ ಚರಮ ಸಂದೇಶ ಗೀತಾಶಾಸ್ತ್ರದ ಸಾರ. (ಶ್ಲೋಕಗಳು 61ರಿಂದ 78)

VI ಭಗವದ್ಗೀತೆಯ ಫಲಶ್ರುತಿ (ಶ್ಲೋಕಗಳು 67 ಮತ್ತು 68)

ಹಿಂದಿನ ಎರಡು ಅಧ್ಯಾಯಗಳಲ್ಲಿ ಲೌಕಿಕ ಉನ್ನತಿಗೂ, ಪಾರಮಾರ್ಥಿಕ ಶ್ರೇಯಸ್ಸಿಗೂ ವೇದ ವಿಧಿತವಾದ ಯಜ್ಞ, ದಾನ, ತಪಸ್ಸುಗಳು ಸಾಧನಗಳೆಂದೂ, ಅವು ಫಲಾಭಿಸಂಧಿರಹಿತವಾಗಿ ಮಾಡಲ್ಪಟ್ಟರೆ ಮೋಕ್ಷಸಾಧನವಾಗಬಲ್ಲವು ಎಂದೂ, ಆದರೆ ಫಲಾಭಿಸಂಧಿರಹಿತವಾಗಿ ಕರ್ಮಗಳನ್ನು ಆಚರಿಸಬೇಕಾದರೆ ಸತ್ತ್ವಗುಣವು ವೃದ್ಧಿಯಾಗಬೇಕೆಂದೂ, ಸತ್ತ್ವಗುಣವು ವೃದ್ಧಿಯಾಗಬೇಕಾದರೆ ಸಾತ್ತ್ವಿಕ ಆಹಾರ ಸೇವನೆ ಮಾಡಬೇಕೆಂದೂ ಹೇಳಲ್ಪಟ್ಟಿತು. ಈಗ ಈ ಅಧ್ಯಾಯದಲ್ಲಿ ಮೊದಲು ತ್ಯಾಗ ಮತ್ತು ಸನ್ಯಾಸ ಎರಡೂ ಒಂದೇ ಎಂದು ತಿಳಿಸಿ ಅವುಗಳೆರಡರ ಅರ್ಥವೂ

ವಿವರಿಸಲ್ಪಟ್ಟಿದೆ. ಕರ್ಮಾಚರಣೆಗೆ ಬೇಕಾದ ಜ್ಞಾನ, ಕರ್ಮ, ಕರ್ತಾ, ಬುದ್ಧಿ, ಧೃತಿ ಮತ್ತು ಕರ್ಮದಿಂದ ಉಂಟಾಗುವ ಸುಖ - ಇವುಗಳೊಂದೊಂದೂ ಸತ್ತ್ವರಜಸ್ತಮೋಗುಣಗಳಿಗೆ ಅನುಗುಣವಾಗಿ ತ್ರಿವಿಧವಾಗಿರುವುದನ್ನು ವಿವರಿಸಿ, ಅವುಗಳಲ್ಲಿ ಸತ್ತ್ವಗುಣವು ಉಪಾದೇಯವಾದುದು ಎಂದು ತಿಳಿಸಿದೆ. ಅನಂತರ ಮಾನವರಲ್ಲಿರುವ ತ್ರಿಗುಣಗಳ ತಾರತಮ್ಯಕ್ಕೆ ಅನುಗುಣವಾಗಿ ವರ್ಣಗಳು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂದು ನಾಲ್ಕು ವಿಧವಾಗಿವೆ ಎಂಬುದನ್ನು ವಿವರಿಸಿ, ಅವರವರು ತಮ್ಮ ತಮ್ಮ ಪ್ರಕೃತಿ ಸ್ವಭಾವಕ್ಕೆ ಅನುಗುಣವಾಗಿ ವರ್ಣಧರ್ಮದ ಕರ್ಮಗಳನ್ನು ಸಾತ್ತ್ವಿಕ ತ್ಯಾಗದೊಂದಿಗೆ (ಅಂದರೆ ಕರ್ತೃತ್ವಮಮತಾಫಲತ್ಯಾಗದೊಂದಿಗೆ) ಆಚರಿಸಿ ತಮ್ಮ ಆತ್ಮ ಶ್ರೇಯಸ್ಸನ್ನು ಪಡೆಯಬಹುದೆಂದು ತಿಳಿಸಿದೆ. ಕೊನೆಯಲ್ಲಿ ಭಕ್ತಿಯೇ ಮೋಕ್ಷಕ್ಕೆ ಸಾಧನವೆಂದು ತಿಳಿಸಿ, ಅದಕ್ಕೆ ಅಡ್ಡಿಯಾಗಿರುವ ಪಾಪವನ್ನು ಹೋಗಲಾಡಿಸಿಕೊಳ್ಳಲು ಭಗವಂತನಲ್ಲಿ ಶರಣಾಗತಿಯೇ ಉಪಾಯ; ಆದ್ದರಿಂದ ಸರ್ವಧರ್ಮಗಳನ್ನೂ ತ್ಯಜಿಸಿ ಅಂದರೆ ಮಮತಾಕರ್ತೃತ್ವಫಲತ್ಯಾಗದೊಂದಿಗೆ ಆಚರಿಸಿ, ಭಗವಂತನಲ್ಲಿ ಶರಣಾಗತಿಯನ್ನು ಮಾಡಿದರೆ, ಅವನು ಚೇತನನ ಭಕ್ತಿಗೆ ಪ್ರತಿಬಂಧಕಗಳಾದ ಸಕಲ ಪಾಪಗಳನ್ನೂ ಹೋಗಲಾಡಿಸಿ ಅವನನ್ನು ಅನುಗ್ರಹಿಸುತ್ತಾನೆ ಎಂಬ ಅತ್ಯಂತ ಶ್ರೇಷ್ಠವಾದ ಚರಮೋಪದೇಶದೊಂದಿಗೆ ಶ್ರೀ ಕೃಷ್ಣ ಪರಮಾತ್ಮನು ಗೀತೋಪದೇಶವನ್ನು ಮುಕ್ತಾಯಗೊಳಿಸಿದ್ದಾನೆ.

## I ತ್ಯಾಗ ಮತ್ತು ಸನ್ಯಾಸ ಎರಡೂ ಒಂದೇ ಎಂಬ ಪ್ರತಿಪಾದನೆ ಮತ್ತು ಅವೆರಡರ ಸ್ವರೂಪ ವಿವರಣೆ. (ಶ್ಲೋಕಗಳು 1 ರಿಂದ 12)

ಸಂನ್ಯಾಸ ಮತ್ತು ತ್ಯಾಗ ಶಬ್ದಗಳು ಒಂದೇ ಅರ್ಥವನ್ನು ಬೋಧಿಸುತ್ತವೆಯೋ, ಇಲ್ಲ ಬೇರೆ ಬೇರೆ ಅರ್ಥಗಳನ್ನು ಬೋಧಿಸುತ್ತವೆಯೋ ಎಂಬ ವಿಷಯವನ್ನೂ, ಅವುಗಳ ಸ್ವರೂಪವನ್ನೂ ತಿಳಿಸುವಂತೆ ಅರ್ಜುನನು ಶ್ರೀ ಕೃಷ್ಣನನ್ನು ಪ್ರಾರ್ಥಿಸುತ್ತಾನೆ. ಅದಕ್ಕೆ ಶ್ರೀಕೃಷ್ಣಪರಮಾತ್ಮನು ತ್ಯಾಗದ ವಿಷಯದಲ್ಲಿ ತನ್ನ ನಿಶ್ಚಯವನ್ನು ತಿಳಿಸುತ್ತಾನೆ. "ತ್ಯಾಗದಲ್ಲಿ ಮೂರು ವಿಧವಾದ ತ್ಯಾಗಗಳು ಹೇಳಲ್ಪಟ್ಟಿವೆ. ಅವುಗಳು ಯಾವುವೆಂದರೆ ಫಲತ್ಯಾಗ, ಕರ್ಮತ್ಯಾಗ ಮತ್ತು ಕರ್ತೃತ್ವ ತ್ಯಾಗಗಳು "ಈ ಕರ್ಮದಿಂದ ಉಂಟಾಗುವ ಫಲವು ನನಗೇ ಸೇರಬೇಕು" - ಎಂಬ

ಫಲಾಭಿಲಾಷೆಯನ್ನು ಬಿಡುವುದು ಫಲತ್ಯಾಗವು. **'ಈ ಕರ್ಮವು ನನ್ನದು'** ಎಂಬ ಕರ್ಮದ ಮೇಲಿನ ಮಮತೆಯನ್ನು ಬಿಡುವುದು ಕರ್ಮತ್ಯಾಗವು ಮತ್ತು **'ಈ ಕೆಲಸದ ಕರ್ತೃವು ನಾನೇ'.** ಎಂಬ ಅಹಂಕಾರವನ್ನು ಬಿಡುವುದು ಕರ್ತೃತ್ವದ ತ್ಯಾಗವು. ಇದನ್ನು **''ಮಯಿಸರ್ವಾಣಿ ಕರ್ಮಾಣಿ ಸನ್ನಸ್ಯಾಧ್ಯಾತ್ಮ ಚೇತಸಾ। ನಿರಾಶೀ ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ॥''** ಎಂದು ಹಿಂದೆಯೇ ಮೂರನೆಯ ಅಧ್ಯಾಯದ ಮೂವತ್ತನೇ ಶ್ಲೋಕದಲ್ಲಿ ತಿಳಿಸಿದೆ. ಅಂದರೆ ಕರ್ಮಗಳು ನಮ್ಮದಲ್ಲ, ಪರಮಾತ್ಮನಿಗೆ ಸೇರಿದವು ಎಂದೂ; ಅವುಗಳನ್ನು ಪರಮಾತ್ಮನೇ ನಮ್ಮಲ್ಲಿರುವ ಪ್ರಕೃತಿಜನ್ಯ ಸ್ವಭಾವ, ಗುಣಗಳನ್ನು ಅನುಸರಿಸಿ ನಮ್ಮಿಂದ ಮಾಡಿಸುತ್ತಿದ್ದಾನೆ; ಆದುದರಿಂದ ಕರ್ಮಗಳನ್ನು ಮಾಡುವವರು ನಾವಲ್ಲ, ಪರಮಾತ್ಮನೇ ಎಂದೂ; ಆದ್ದರಿಂದ ಕರ್ಮದಿಂದ ಲಭಿಸುವ ಫಲಗಳೂ ಪರಮಾತ್ಮನಿಗೇ ಸೇರತಕ್ಕದ್ದೆಂದೂ, ಹೀಗೆ ಕರ್ಮದಲ್ಲಿ ಮಮತೆಯನ್ನೂ ಕರ್ತೃತ್ವವನ್ನೂ ಫಲಾಸಕ್ತಿಯನ್ನೂ ಬಿಡಬೇಕೆಂದು ಹೇಳಿದೆ. ಹೀಗೆ ಕರ್ಮದಲ್ಲಿ ಮಮತೆಯನ್ನೂ ಕರ್ತೃತ್ವವನ್ನೂ ಕರ್ಮದ ಫಲದಲ್ಲಿ ಆಸೆಯನ್ನೂ ಬಿಡುವ ತ್ರಿವಿಧ ತ್ಯಾಗವೇ ತ್ಯಾಗವು ಎಂದು ಇಲ್ಲಿ ಶ್ರೀಕೃಷ್ಣನು ನಿಷ್ಕರ್ಷೆ ಮಾಡಿ ಹೇಳಿದ್ದಾನೆ.

ಯಜ್ಞ, ದಾನ, ತಪಸ್ಸು ಮುಂತಾದ ಕರ್ಮಗಳು ಉಪಾಸನೆಗೆ ಪ್ರತಿಬಂಧಕಗಳಾದ ಪ್ರಾಚೀನ ಪಾಪಗಳನ್ನು ಹೋಗಲಾಡಿಸತಕ್ಕವುಗಳಾಗಿವೆ ಮತ್ತು ಅವು ಪರಿಶುದ್ಧವೂ ದೋಷರಹಿತವೂ ಆಗಿರುವುದರಿಂದ ಆ ಕರ್ಮಗಳನ್ನು ಎಂದೂ ಬಿಡಕೂಡದು. ಅವುಗಳನ್ನು ಮುಮುಕ್ಷುಗಳು ಜೀವನ ಪರ್ಯಂತ ಆಚರಿಸುತ್ತಲೇ ಇರಬೇಕು. ಅವುಗಳನ್ನು ಮಾಡುವಾಗ ಅವುಗಳಲ್ಲಿ ತನ್ನದು ಎಂಬ ಅಭಿಮಾನವನ್ನೂ, ತಾನು ಮಾಡುತ್ತಿರುವೆನೆಂಬ ಅಹಂಕಾರವನ್ನೂ ಫಲಾಪೇಕ್ಷೆಯನ್ನೂ ಬಿಟ್ಟು ಮಾಡಲೇಬೇಕು ಎಂಬುದೇ ನನ್ನ ಸಿದ್ಧಾಂತ ಎಂದು ಶ್ರೀಕೃಷ್ಣನು ಸ್ಪಷ್ಟವಾಗಿ ತಿಳಿಸಿದ್ದಾನೆ.

ಇದಲ್ಲದೆ ತ್ಯಾಗದಲ್ಲಿ ಇನ್ನೂ ಮೂರು ವಿಧವಾದ ತ್ಯಾಗಗಳಿವೆ ಎಂಬುದನ್ನು ಮುಂದೆ ತಿಳಿಸುತ್ತಾನೆ. ಅವು ಯಾವುವೆಂದರೆ ತಾಮಸ ತ್ಯಾಗ, ರಾಜಸ ತ್ಯಾಗ ಮತ್ತು ಸಾತ್ವಿಕ ತ್ಯಾಗ ಎಂಬ ತ್ರಿಗುಣ ಪ್ರಯುಕ್ತವಾದ ತ್ಯಾಗಗಳು. ಶಾಸ್ತ್ರವಿಧಿತವಾದ ನಿತ್ಯ ನೈಮಿತ್ತಿಕ ಕರ್ಮಗಳ ತ್ಯಾಗವು ಎಂದಿಗೂ ಯುಕ್ತವಾದುದಲ್ಲ. ಈ ಕರ್ಮಗಳು ಮನಸ್ಸನ್ನು ಶುದ್ಧಿ ಮಾಡಿ ಮೋಕ್ಷಕ್ಕೆ ಕಾರಣವಾದ ಜ್ಞಾನವನ್ನು ಉಂಟು ಮಾಡಿ ಮೋಕ್ಷಕ್ಕೆ ಸಾಧನವಾಗುತ್ತವೆ.

**ತಾಮಸ ತ್ಯಾಗ :** ಜ್ಞಾನೋತ್ಪಾದಕಗಳಾದ ಈ ಕರ್ಮಗಳನ್ನು ಬಂಧನವೆಂದು

ಮೋಹ ಬುದ್ಧಿಯಿಂದ ತಿಳಿದು ಅವುಗಳನ್ನು ತ್ಯಜಿಸುವುದು ತಾಮಸ ತ್ಯಾಗವೆನಿಸುತ್ತದೆ.

**ರಾಜಸ ತ್ಯಾಗ :** ಈ ಕರ್ಮಗಳನ್ನೆಲ್ಲಾ ಅನುಷ್ಠಿಸಬೇಕಾದರೆ ಕಷ್ಟಪಟ್ಟು ಧರ್ಮದಿಂದ ದ್ರವ್ಯಾರ್ಜನೆಯನ್ನು ಮಾಡಬೇಕಾಗುತ್ತದೆ. ಆದರಿಂದಾಗಿ ಶಾರೀರಿಕ ಆಯಾಸವನ್ನು ಮಾನಸಿಕ ಕ್ಲೇಶವನ್ನು ಹೊಂದಬೇಕಾಗುತ್ತದೆ ಎಂಬ ಭಯದಿಂದ ಈ ಕಾಯಕ್ಲೇಶಗಳನ್ನೆಲ್ಲಾ ತಪ್ಪಿಸಿಕೊಳ್ಳಲು ಈ ಕರ್ಮಗಳನ್ನು ತ್ಯಜಿಸುವುದು ರಾಜಸ ತ್ಯಾಗವೆನಿಸುವುದು. ಹೀಗೆ ರಜೋಗುಣದಿಂದ ಕರ್ಮಗಳನ್ನು ಆಚರಿಸದೆ ಬಿಟ್ಟರೆ (ಅಂದರೆ ರಾಜಸ ತ್ಯಾಗದಿಂದ) ತ್ಯಾಗದ ಫಲವಾದ ಜ್ಞಾನವನ್ನು ಹೊಂದಲು ಆಗುವುದಿಲ್ಲ.

**ಸಾತ್ವಿಕ ತ್ಯಾಗ :-** ಶಾಸ್ತ್ರವಿಧಿತವಾದ, ನಿಯತವಾದ ನಿತ್ಯ ನೈಮಿತ್ತಿಕ ಕರ್ಮಗಳು ಭಗವಂತನ ಆರಾಧನಾ ರೂಪವಾದುದೆಂದೂ, ಸ್ವಯಂ ಪ್ರಯೋಜನವಾದವು ಗಳೆಂದೂ ತಿಳಿದು, ಆ ಕರ್ಮಗಳನ್ನು ಮಾಡುವುದೇ ತನ್ನ ಕರ್ತವ್ಯವು ಎಂಬ ಭಾವನೆಯಿಂದ ಆ ಕರ್ಮಗಳಲ್ಲಿ ಮಮಕಾರವನ್ನೂ ಫಲಾಪೇಕ್ಷೆಯನ್ನೂ ತ್ಯಜಿಸಿ, ಕರ್ಮವನ್ನು ಮಾಡುವುದೇ ಸಾತ್ವಿಕ ತ್ಯಾಗವು. ದೇಹಧಾರಿಗಳಾದ ಸಮಸ್ತರಿಗೆ ಎಲ್ಲಾ ಕರ್ಮಗಳನ್ನು ತ್ಯಜಿಸುವುದು ಸಾಧ್ಯವಿಲ್ಲ. ಏಕೆಂದರೆ ಶರೀರಧಾರಣೆಗಾಗಿ ಅನ್ನಪಾನಾದಿಗಳನ್ನು ಸೇವಿಸುವುದೂ, ಅದಕ್ಕೆ ಬೇಕಾದ ಇತರ ಕರ್ಮಗಳೂ ಅನಿವಾರ್ಯವಾಗಿ ಮಾಡಲೇಬೇಕಾದವುಗಳಾಗಿವೆ. ಆದ್ದರಿಂದ ಯಾರು ತಾವು ಮಾಡುವ ಕರ್ಮಗಳಲ್ಲಿ ಮಮಕಾರ ಮತ್ತು ಅದರ ಫಲಗಳಲ್ಲಿ ಆಸಕ್ತಿ ಇಲ್ಲದವರಾಗಿ ಅವುಗಳನ್ನು ಆಚರಿಸುತ್ತಾರೋ ಅವರೇ ತ್ಯಾಗಿಗಳೆಂದು ಕರೆಯಲ್ಪಟ್ಟಿದ್ದಾರೆ. ಅಂದರೆ ನಿತ್ಯ ನೈಮಿತ್ತಿಕ ಕರ್ಮಗಳನ್ನು ಆಚರಿಸಬೇಕು. ಆದರೆ ಅವುಗಳನ್ನು ಆಚರಿಸುವಾಗ ಆ ಕರ್ಮಗಳಲ್ಲಿ ಮಮಕಾರವನ್ನೂ ಕರ್ಮಫಲಗಳಲ್ಲಿ ಆಸಕ್ತಿಯನ್ನೂ ತ್ಯಜಿಸುವುದೇ ಸಾತ್ವಿಕ ತ್ಯಾಗವು."

ಆದ್ದರಿಂದ ಇಲ್ಲಿ ಶ್ರೀಕೃಷ್ಣನು ಸ್ಪಷ್ಟವಾಗಿ ತಿಳಿಸುವುದೇನೆಂದರೆ – ಕರ್ಮಗಳ ಕರ್ತೃತ್ವಸಂಗಫಲತ್ಯಾಗವೇ ಶಾಸ್ತ್ರವಿಧಿತವಾದ ತ್ಯಾಗವು. ಅದೇ ಶಾಸ್ತ್ರಸಿದ್ಧವಾದ ಸನ್ಯಾಸವು. ತ್ಯಾಗ ಮತ್ತು ಸನ್ಯಾಸ ಎಂಬ ಎರಡು ಪದಗಳೂ ಈ ಒಂದೇ ಅರ್ಥವನ್ನು ಪ್ರತಿಪಾದಿಸುತ್ತವೆ. ಕರ್ಮದ ಸ್ವರೂಪ ತ್ಯಾಗವು ತ್ಯಾಗವಲ್ಲ ಎಂದು ಸ್ಪಷ್ಟವಾಗಿ ಶ್ರೀಕೃಷ್ಣನು ಹೇಳಿದ್ದಾನೆ.

**II ಸರ್ವೇಶ್ವರನಾದ ಪರಮಾತ್ಮನಲ್ಲಿ ಸಮಸ್ತ ಕರ್ಮಗಳ ಕರ್ತೃತ್ವಾನುಸಂಧಾನದ ನಿರೂಪಣೆ. (ಶ್ಲೋಕಗಳು 13ರಿಂದ 17)**

ಎಲೈ ಅರ್ಜುನನೇ! ಸಾಂಖ್ಯ ಸಿದ್ಧಾಂತದಲ್ಲಿ ಸಮಸ್ತ ಕರ್ಮಗಳೂ ಸಿದ್ಧಿಸಬೇಕಾದರೆ ಅದಕ್ಕೆ ಐದು ಮುಖ್ಯವಾದ ಕಾರಣಗಳಿರಬೇಕೆಂದು ತಿಳಿಸಿದೆ. ಅವು ಯಾವುವೆಂದರೆ -

1) **ಅಧಿಷ್ಠಾನ** :- ಅಂದರೆ ಶರೀರ (ಜೀವಾತ್ಮನು ಅಧಿಷ್ಠಾನ ಮಾಡಿಕೊಂಡಿರುವ ಪಂಚ ಮಹಾಭೂತ ಸಮುದಾಯ ರೂಪವಾದ ಶರೀರವು)

2) **ಕರ್ತಾ**:- ಕರ್ಮವನ್ನು ಮಾಡುವ ಕರ್ತನಾದ ಜೀವಾತ್ಮನು.

3) **ಕರಣ**:- ಕೈಕಾಲು ಮುಂತಾದ ಹನ್ನೊಂದು ಇಂದ್ರಿಯಗಳು.

4) **ಚೇಷ್ಟಾ**:- ವಿಭಿನ್ನ ಪ್ರಕಾರದ ಬೇರೆ ಬೇರೆ ಚೇಷ್ಟೆಗಳು -ಶರೀರ, ಇಂದ್ರಿಯ ಮುಂತಾದವುಗಳನ್ನು ಧರಿಸಿರುವ ಪ್ರಾಣ ಅಪಾನಾದಿ ವಾಯುಚೇಷ್ಟೆಗಳು.

5) **ದೈವ ಸಂಕಲ್ಪ** :-ಇದೇ ಎಲ್ಲಕ್ಕೂ ಮೊದಲ ಕಾರಣ. ಎಲ್ಲರಲ್ಲೂ ಅಂತರ್ಯಾಮಿಯಾದ ಪರಮಾತ್ಮನು ಕರ್ಮಗಳಿಗೆಲ್ಲಾ ಪ್ರಧಾನ ಕಾರಣನಾಗಿದ್ದಾನೆ. ಆವನು ಎಲ್ಲರ ಹೃದಯದಲ್ಲಿ ಅಂತರ್ಯಾಮಿಯಾಗಿದ್ದುಕೊಂಡು ಎಲ್ಲರನ್ನೂ ಅವರವರ ಪ್ರಕೃತಿ ಗುಣಗಳಿಗೆ ಅನುಗುಣವಾಗಿ ಅವರವರು ಮಾಡುವ ಕರ್ಮದಲ್ಲಿ ನಿಯಮಿಸುತ್ತಾನೆ. ಅಂದರೆ ಚೇತನನಲ್ಲಿ ಇರುವ ಪೂರ್ವಾರ್ಜಿತವಾಸನಾನುಗುಣವಾದ ಅವನ ಇಚ್ಛಾ ಪ್ರವೃತ್ತಿಗಳನ್ನು ಅನುಸರಿಸಿ ಅವನು ಮಾಡಲು ಪ್ರಾರಂಭಿಸುವ ಕರ್ಮಗಳಿಗೆ ಪರಮಾತ್ಮನು ಅನುಮತಿ ಕೊಡುತ್ತಾನೆ. ಕರ್ಮ ಮಾಡಲು ಚೇತನನಿಗೆ ಸ್ವಾತಂತ್ರ್ಯವಿದ್ದರೂ ಅದಕ್ಕೆ ಪರಮಾತ್ಮನ ಅನುಮತಿ ಬೇಕು.

ಹೀಗಿರುವಾಗ ಅಂದರೆ ಒಂದು ಕರ್ಮವಾಗಬೇಕಾದರೆ ಈ ಐದೂ ಬೇಕಾಗಿರುವಾಗ ಚೇತನನು ತನ್ನ ಕರ್ಮಗಳಿಗೆಲ್ಲಾ ತಾನೇ ಕಾರಣನೆಂದು ತಿಳಿದರೆ ಅವನು ವಿಪರೀತ ಬುದ್ಧಿಯುಳ್ಳವನಾಗಿ ಯಥಾರ್ಥ ಅಂದರೆ ನಿಜ ಸ್ಥಿತಿಯನ್ನು ತಿಳಿಯಲಾರನು. ತನಗೆ ಕರ್ತೃತ್ವವು ಪರಮಾತ್ಮನ ಅನುಮತಿ ಪೂರ್ವಕವಾಗಿ ಬಂದುದೆಂದೂ, ತಾನು ಸ್ವತಂತ್ರನಲ್ಲವೆಂದೂ ತಿಳಿಯುವುದೇ

ಅಕರ್ತೃತ್ವಾನುಸಂಧಾನವು. ಪರಮಾತ್ಮನಲ್ಲಿ ಕರ್ತೃತ್ವವನ್ನು ಅನುಸಂಧಾನ ಮಾಡುತ್ತಾ ಯಾವ ಪುರುಷನ ಮನಸ್ಸಿನಲ್ಲಿ ನಾನು ಕರ್ತನು ಎಂಬ ಅಹಂಭಾವವಿಲ್ಲವೋ, ಯಾವನಿಗೆ ಈ ಕರ್ಮದಲ್ಲಿ ತನಗೆ ಕರ್ತೃತ್ವವೇ ಇಲ್ಲದೆ ಇರುವುದರಿಂದ ಇದರ ಫಲದಲ್ಲಿಯೂ ತನಗೆ ಯಾವ ಸಂಬಂಧವೂ ಇಲ್ಲ ಮತ್ತು ಈ ಕರ್ಮವೂ ತನ್ನದಲ್ಲ ಎಂಬ ಅರಿವು ಉಂಟಾಗುತ್ತದೆಯೋ ಅಂತಹವನು ಯುದ್ಧದಲ್ಲಿ ಭೀಷ್ಮರೇ ಮುಂತಾಗಿ ಈ ಲೋಕದ ಎಲ್ಲ ಜನರನ್ನು ಕೊಂದರೂ ಕೂಡ ಅವನು ಯಾರನ್ನೂ ಕೊಂದವನಾಗುವುದಿಲ್ಲ ಮತ್ತು ಯುದ್ಧವೆಂಬ ಕರ್ಮವೂ ಅವನನ್ನು ಬಂಧಿಸುವುದಿಲ್ಲ ಮತ್ತು ಅದರ ಫಲವನ್ನೂ ಅವನು ಅನುಭವಿಸುವುದಿಲ್ಲ.

ಇಲ್ಲಿಯವರೆಗೆ ಚೇತನನು ಅಂತರ್ಯಾಮಿಯಾದ ಪರಮಾತ್ಮನಲ್ಲಿ ಕರ್ತೃತ್ವಾನುಸಂಧಾನವನ್ನೂ, ಜೀವಾತ್ಮನಾದ ತನ್ನಲ್ಲಿ ಅಕರ್ತೃತ್ವಾನುಸಂಧಾನವನ್ನೂ ಮಾಡುವ ಪ್ರಕಾರವನ್ನು ತಿಳಿಸಿದ್ದಾನೆ. ಈ ಅನುಸಂಧಾನದೊಂದಿಗೆ ಕರ್ಮ ಮಾಡುವುದರಿಂದ ಕರ್ಮ ಮತ್ತು ಅದರ ಫಲದ ಮೇಲಿನ ಮಮತಾತ್ಯಾಗವೂ ತಾನಾಗಿಯೇ ಉಂಟಾಗುತ್ತದೆ. ಏತಕ್ಕೆಂದರೆ ಭಗವಂತನಾದ ಪರಮ ಪುರುಷನು ಜೀವಾತ್ಮನ ಮೂಲಕ, ಅವನಿಗೆ ತಾನೇ ಕೊಟ್ಟಿರುವ ಶರೀರ, ಇಂದ್ರಿಯ, ಪ್ರಾಣಾದಿಗಳ ಮೂಲಕ ತನ್ನ ಲೀಲೆಗಾಗಿಯೇ ಅವನಲ್ಲಿರುವ ಸತ್ತ್ವಾದಿ ಗುಣಗಳಿಗೆ ಅನುಗುಣವಾದ ಕರ್ಮಗಳನ್ನು ತಾನೇ ಮಾಡಿಸುತ್ತಾನೆ. ಆದ್ದರಿಂದ ಜೀವಾತ್ಮನಿಂದ ಮಾಡಲ್ಪಡುವ ಸಮಸ್ತ ಕರ್ಮಗಳೂ, ಅವುಗಳ ಫಲವೂ, ಅವುಗಳ ಕರ್ತೃತ್ವವೂ ಎಲ್ಲವೂ ಪರಮಾತ್ಮನದೇ ಆಗಿವೆ ಎಂಬ ಅನುಸಂಧಾನವೇ ಅಂತರಾತ್ಮನಾದ ಪರಮಾತ್ಮನಲ್ಲಿ ಕರ್ತೃತ್ವಾನುಸಂಧಾನವು ಮತ್ತು ಜೀವಾತ್ಮನಾದ ತನ್ನಲ್ಲಿ ಅಕರ್ತೃತ್ವಾನು ಸಂಧಾನವು. ಆದರೆ ಈ ವಿಧವಾದ ಅಕರ್ತೃತ್ವಾನುಸಂಧಾನವು ಸಾಧ್ಯವಾಗಬೇಕಾದರೆ ಸತ್ವಗುಣವು ವೃದ್ಧಿಯಾಗಬೇಕು. ಆದ್ದರಿಂದ ಮುಂದೆ ತ್ರಿಗುಣಗಳ ಕಾರ್ಯವೂ ಅವುಗಳಲ್ಲಿ ಸತ್ವಗುಣದ ಉಪಾದೇಯತ್ವವೂ ಪ್ರತಿಪಾದಿಸಲ್ಪಡುತ್ತದೆ.

## III ಕರ್ಮಾಚರಣೆಯಲ್ಲಿ ತ್ರಿಗುಣಗಳ ಕಾರ್ಯದ ವರ್ಣನೆ ಮತ್ತು ಸತ್ತ್ವಗುಣದ ಉಪಾಧೇಯತ್ವ (ಶ್ಲೋಕಗಳು 18 ರಿಂದ 40)

ಎಲೈ ಅರ್ಜುನನೇ! ಮುಂದೆ ನಾನು ಕರ್ಮಗಳಲ್ಲಿ ಸತ್ವಾದಿ ಗುಣಗಳಿಂದ ಉಂಟಾಗುವ ವಿಷಮತೆಯನ್ನು ಅಂದರೆ ಕರ್ಮಾಚರಣೆಗೆ ಬೇಕಾದ ಜ್ಞಾನ, ಕರ್ಮ,

ಕರ್ತೃ, ಬುದ್ಧಿ ಮತ್ತು ಧೃತಿಗಳೂ ಮತ್ತು ಕರ್ಮದಿಂದ ಲಭಿಸುವ ಸುಖವೂ ಎಲ್ಲವೂ ಸತ್ವರಜಸ್ತಮೋಗುಣಗಳ ಕಾರ್ಯದಿಂದ ತ್ರಿವಿಧವಾಗಿವೆ ಎಂಬುದನ್ನು ಮೊದಲು ವಿಸ್ತಾರವಾಗಿ ತಿಳಿಸಿ ಅವುಗಳಲ್ಲಿ ಸತ್ವಗುಣವೇ ಪ್ರಧಾನವಾದುದು ಎಂಬುದನ್ನು ತಿಳಿಸುತ್ತೇನೆ. ಒಂದು ಕರ್ಮವನ್ನು ಪ್ರಾರಂಭಿಸಬೇಕಾದರೆ ಮೊದಲು ಚೇತನನಿಗೆ ಆ ಕರ್ಮವನ್ನು ಮಾಡಬೇಕೆಂಬ ಇಚ್ಛೆಯೂ, ಉತ್ಸಾಹವೂ ಉಂಟಾಗಬೇಕು. ಅನಂತರ ಆ ಕರ್ಮವನ್ನು ಮಾಡಬೇಕಾದ ಜ್ಞಾನವೂ, ಅವನಲ್ಲಿ ಇರಬೇಕು. ಆದ್ದರಿಂದ ಕರ್ಮಪ್ರಚೋದನೆಗೆ **ಜ್ಞಾನ, ಜ್ಞೇಯ** ಮತ್ತು **ಪರಿಜ್ಞಾತಾ** ಎಂಬ ಮೂರೂ ಇರಬೇಕು.

ಜ್ಞಾನವೆಂದರೆ ಚೇತನನಿಗೆ ಕರ್ಮವನ್ನು ಮಾಡಬೇಕೆಂಬ ಇಚ್ಛೆಯೂ ಮತ್ತು ಅದನ್ನು ಮಾಡಲು ಇರಬೇಕಾದ ಜ್ಞಾನವು. ಜ್ಞೇಯವೆಂದರೆ ಜ್ಞಾನದಿಂದ ಮಾಡಲ್ಪಡುವ ಕರ್ಮವು ಮತ್ತು ಪರಿಜ್ಞಾತಾ ಎಂದರೆ ಆ ಕರ್ಮವನ್ನು ಮಾಡಬೇಕೆಂದು ಇರುವ ಅಧಿಕಾರಿಯು. ಇವು ಮೂರೂ ಕರ್ಮ ಪ್ರಚೋದನೆಗೆ ಇರಬೇಕು.

ಕರ್ಮವನ್ನು ಮಾಡಲು **ಕರಣ, ಕರ್ಮ,** ಮತ್ತು **ಕರ್ತಾ** ಇವು ಮೂರೂ ಇರಬೇಕು. ಕರಣ ಅಂದರೆ ಕರ್ಮಕ್ಕೆ ಸಾಧನವಾದ ದ್ರವ್ಯಾದಿಗಳು. ಕರ್ಮ ಎಂಬುದು ಯಜ್ಞ ಯಾಗ ಮುಂತಾದ ಕರ್ಮಗಳು ಮತ್ತು ಕರ್ತಾ ಎಂಬುದು ಕರ್ಮವನ್ನು ಮಾಡುವ ಚೇತನನು. ಇವು ಮೂರೂ ಕರ್ಮಮಾಡಲು ಬೇಕಾದವುಗಳಾಗಿವೆ.

ಹೀಗೆ ಮೇಲೆ ಹೇಳಿದ ಆರು ವಿಷಯಗಳಲ್ಲಿ ಕರ್ಮಕ್ಕೆ ಮುಖ್ಯವಾಗಿ ಬೇಕಾದುದು ಜ್ಞಾನ, ಕರ್ಮ ಮತ್ತು ಕರ್ತಾ ಅಂದರೆ ನಾವು ಆಚರಿಸಬೇಕಾದ ಕರ್ಮದ ವಿಷಯವಾದ ಜ್ಞಾನ (ಈ ಜ್ಞಾನದಲ್ಲೇ ಜ್ಞೇಯ ಮತ್ತು ಪರಿಜ್ಞಾತಾ ಎಂಬುದು ಅಡಗಿದೆ). ಆಚರಿಸಬೇಕಾದ ಕರ್ಮ (ಕರ್ಮದಲ್ಲಿ ಕರಣ, ಕರ್ತಾ ಎಂಬುದು ಅಡಗಿದೆ). ಮತ್ತು ಕರ್ಮವನ್ನು ಆಚರಿಸುವ ಕರ್ತಾ. ಈ ಮೂರರಲ್ಲಿ ಪ್ರತಿಯೊಂದೂ ಸಾತ್ವಿಕ, ರಾಜಸ ಮತ್ತು ತಾಮಸ ಗುಣಭೇದಗಳಿಂದ ಮೂರು ಮೂರು ವಿಧಗಳಾಗಿ ವಿಭಾಗಿಸಲ್ಪಟ್ಟಿವೆ. ಹೀಗೆ ತ್ರಿಗುಣಗಳಿಂದ ಬೇರೆ ಬೇರೆಯಾಗಿರುವ ಕರ್ಮಕ್ಕೆ ಬೇಕಾದ ಜ್ಞಾನ, ಕರ್ಮ, ಕರ್ತಾ, ಬುದ್ಧಿ ಮತ್ತು ಧೃತಿ ಮೊದಲಾದವನ್ನೂ, ಕರ್ಮದಿಂದ ಲಭಿಸುವ ಸುಖಗಳನ್ನೂ ಶ್ರೀ ಕೃಷ್ಣನು ಮುಂದೆ ವಿವರಿಸುತ್ತಾನೆ.

1. **ತ್ರಿವಿಧ ಜ್ಞಾನಗಳು** :- ಕರ್ಮಕ್ಕೆ ಬೇಕಾದ ಜ್ಞಾನವು ತ್ರಿಗುಣಗಳ ಕಾರ್ಯದಿಂದ ಮೂರು ವಿಧವಾಗಿವೆ.

**ಅ) ಸಾತ್ವಿಕ ಜ್ಞಾನ** :- ಸಮಸ್ತ ಭೂತಗಳಲ್ಲೂ ಶರೀರದಲ್ಲಿ ಭಿನ್ನತೆ ಇದ್ದರೂ ಅದರೊಳಗಿರುವ ಆತ್ಮರುಗಳು ನಾಶರಹಿತರಾಗಿ ಜ್ಞಾನೈಕಾಕಾರತೆಯಿಂದ ಒಂದೇ ವಿಧವಾದ ಸ್ವರೂಪವುಳ್ಳವರಾಗಿದ್ದಾರೆ ಎಂಬ ಜ್ಞಾನ ಹೊಂದಿ, ಫಲ ಕರ್ತೃತ್ವ ಮಮತಾ ತ್ಯಾಗ ಪೂರ್ವಕವಾಗಿ ಕರ್ಮವನ್ನು ಮಾಡುವುದೇ ಸಾತ್ವಿಕ ಜ್ಞಾನವು.

**ಆ) ರಾಜಸ ಜ್ಞಾನ** :- ಬ್ರಾಹ್ಮಣಾದಿ ಶರೀರಗಳಲ್ಲಿ ಬ್ರಾಹ್ಮಣತ್ವ ಮುಂತಾದ ಆಕಾರಗಳೂ, ಕಪ್ಪು ಬಿಳುಪು ಮುಂತಾದ ಗುಣಗಳೂ ಬೇರೆಯಾಗಿದ್ದು ಭೇದಗಳಿರುವಂತೆ, ಜೀವಾತ್ಮರೂ ನಾನಾ ಆಕಾರಗಳಲ್ಲಿ ಬೇರೆ ಬೇರೆ ಗುಣಗಳನ್ನು ಪಡೆದಿರುವರೆಂದು ತಿಳಿಯುವ ಜ್ಞಾನವು 'ರಾಜಸ'ವಾದುದು.

**ಇ) ತಾಮಸ ಜ್ಞಾನ** :- ಒಂದೇ ಕರ್ಮದಲ್ಲಿ ಸಮಸ್ತ ಫಲಗಳನ್ನೂ ನಿರೀಕ್ಷಿಸುತ್ತಾ ಅತ್ಯಾಸಕ್ತಿಯಿಂದ ಕೂಡಿ, ಅತ್ಯಲ್ಪ ಫಲಯುಕ್ತವೂ, ಅತ್ಯಲ್ಪವೂ ಆಗಿರುವ ಕರ್ಮದಲ್ಲಿ ಆಸಕ್ತಿಯನ್ನು ಹೊಂದಿ ವಾಸ್ತವವಲ್ಲದ ಒಂದು ಫಲವನ್ನು ಬಯಸಿ ಅತ್ಯಲ್ಪವಾದ ಫಲಕ್ಕೆ ಆಸೆಪಟ್ಟು ಸಾಧನವಲ್ಲದೇ ಇರುವುದನ್ನು ಸಾಧನವೆಂದು ತಿಳಿದುಕೊಂಡು ಕರ್ಮವು ಮಾಡಲ್ಪಟ್ಟರೆ ಆ ಜ್ಞಾನವು 'ತಾಮಸ ಜ್ಞಾನ' ವೆನಿಸುವುದು.

ಹೀಗೆ ಕರ್ಮ ಮಾಡುವಾಗ ಕರ್ತವ್ಯಕರ್ಮ ವಿಷಯ ಜ್ಞಾನವು ಅಧಿಕಾರಿಗಳ ಮನೋಭಾವನೆಗೆ ಅನುಸಾರವಾಗಿ ತ್ರಿಗುಣಗಳ ಕಾರ್ಯದಿಂದ ಮೂರು ವಿಧವಾಗಿವೆ ಎಂದು ತಿಳಿಸಲ್ಪಟ್ಟಿದೆ.

2) **ತ್ರಿವಿಧ ಕರ್ಮಗಳು** :- ಅನುಷ್ಠಿಸಲ್ಪಡುವ ಕರ್ಮಗಳು ತ್ರಿಗುಣಗಳ ಕಾರ್ಯದಿಂದ ಮೂರು ವಿಧವಾಗಿವೆ.

**ಅ) ಸಾತ್ವಿಕ ಕರ್ಮ** :- ನಾನೇ ಕರ್ತಾ ಎಂಬ ಸಂಗವಿಲ್ಲದ, ರಾಗದ್ವೇಷಗಳಿಲ್ಲದ ಫಲಾಸಕ್ತಿರಹಿತನಾದ ಪುರುಷನಿಂದ ಮಾಡಲ್ಪಡತಕ್ಕ ನಿಯತವಾದ ಅಂದರೆ ವರ್ಣಾಶ್ರಮ ಧರ್ಮಗಳಿಗೆ ಅನುಗುಣವಾದ ಕರ್ಮವು 'ಸಾತ್ವಿಕ ಕರ್ಮ' ವೆನಿಸುವುದು.

**ಆ) ರಾಜಸ ಕರ್ಮ :-** ತಾನೇ ಕರ್ತಾ ಎಂಬ ಅಭಿಮಾನವನ್ನು ಹೊಂದಿ ಫಲಾಪೇಕ್ಷೆಯಿಂದ ಕೂಡಿರುವ ಪುರುಷನಿಂದ ಅಹಂಕಾರದಿಂದ ಬಹಳ ಶ್ರಮವಹಿಸಿ ಮಾಡಲ್ಪಡುವ ಕರ್ಮವು 'ರಾಜಸ ಕರ್ಮ'ವೆನಿಸುವುದು.

**ಇ) ತಾಮಸ ಕರ್ಮ :-** ಕರ್ಮವನ್ನು ಮಾಡುವಾಗ ಅದರಿಂದ ಉಂಟಾಗಬಹುದಾದ ದುಃಖವನ್ನೂ, ಧನ ನಾಶವನ್ನೂ, ಅದರಿಂದ ತನಗೂ, ಇತರರಿಗೂ ಉಂಟಾಗಬಹುದಾದ ಹಿಂಸೆಯನ್ನೂ ಮತ್ತು ಕರ್ಮವನ್ನು ಪೂರ್ತಿಯಾಗಿ ಮಾಡಲು ತನಗೆ ಸಾಮರ್ಥ್ಯವಿದೆಯೇ ಎಂಬುದನ್ನೂ ಆಲೋಚನೆ ಮಾಡದೆ ಮೋಹದಿಂದ ಅಂದರೆ ಪರಮ ಪುರುಷನೇ ಕರ್ತನೆಂಬ ಜ್ಞಾನವೂ ಇಲ್ಲದೆ ಅಜ್ಞಾನದಿಂದ ಮಾಡಲ್ಪಡುವ ಕರ್ಮವು 'ತಾಮಸ ಕರ್ಮ'ವೆನಿಸುವುದು.

**3) ತ್ರಿವಿಧ ಕರ್ತೃಗಳು :-** ಕರ್ಮವನ್ನು ಆಚರಿಸುವ ಕರ್ತರೂ ಕೂಡ ತ್ರಿಗುಣಗಳ ಕಾರ್ಯದಿಂದ ಮೂರು ಬಗೆಯಾಗಿರುವರು.

**ಅ) ಸಾತ್ವಿಕ ಕರ್ತಾ :-** ಕರ್ಮದಲ್ಲಿ ಫಲಾಪೇಕ್ಷೆಯಿಲ್ಲದೆ, ತಾನೇ ಅದಕ್ಕೆ ಕರ್ತಾ ಎಂಬ ಅಭಿಮಾನವೂ ಇಲ್ಲದವನಾಗಿ, ಆರಂಭಿಸಿದ ಕೆಲಸವು ಪೂರ್ತಿಯಾಗುವವರೆಗೂ ಕಷ್ಟ ಸಹಿಸಿಕೊಂಡು ಧೈರ್ಯದಿಂದಲೂ, ಉತ್ಸಾಹದಿಂದಲೂ ಕೂಡಿದವನಾಗಿ ಕಾರ್ಯಸಿದ್ಧಿಯು ಆದರೂ, ಆಗದೇ ಇದ್ದರೂ, ಮನಸ್ಸು ಕರಗದೆ ನಿರ್ವಿಕಾರನಾಗಿದ್ದುಕೊಂಡು ಕರ್ಮವನ್ನು ಮಾಡುವವನು 'ಸಾತ್ವಿಕ ಕರ್ತಾ' ಎಂದು ಕರೆಯಲ್ಪಡುವನು.

**ಆ) ರಾಜಸ ಕರ್ತಾ :-** ಕೀರ್ತಿಯನ್ನು ಅಪೇಕ್ಷಿಸುತ್ತ, ಫಲವನ್ನು ಕೋರುತ್ತ, ಕರ್ಮದ ಸಫಲತೆಗೆ ಬೇಕಾದ ದ್ರವ್ಯವನ್ನು ವೆಚ್ಚಮಾಡಲು ಇಷ್ಟವಿಲ್ಲದ ಸ್ವಭಾವ ಹೊಂದಿ ಲೋಭಿಯಾಗಿ, ಇತರರಿಗೆ ಹಿಂಸೆ ಕೊಟ್ಟು ಅವರಿಂದ ಕರ್ಮ ಮಾಡಿಸಿಕೊಳ್ಳುವವನಾಗಿ, ಕರ್ಮ ಮಾಡುವುದಕ್ಕೆ ಬೇಕಾದ ಪವಿತ್ರತೆ ಇಲ್ಲದವನಾಗಿ, ಕರ್ಮದ ಜಯಾಪಜಯಗಳಲ್ಲಿ ಹರ್ಷ ಶೋಕ ಉಳ್ಳವನಾಗಿರುವ ಕರ್ತಾ 'ರಾಜಸ ಕರ್ತಾ' ಎನಿಸಿಕೊಳ್ಳುವನು.

**ಇ) ತಾಮಸ ಕರ್ತಾ :-** ಶಾಸ್ತ್ರೀಯವಾದ ಕರ್ಮಗಳಿಗೆ ಅಯೋಗ್ಯನಾಗಿಯೂ, ವಿದ್ಯೆಯು ಇಲ್ಲದವನಾಗಿಯೂ, ಯಾವ ಕೆಲಸವನ್ನೂ ಪ್ರಾರಂಭ ಮಾಡದೆ ಇರುವ ಸೋಮಾರಿತನದ ಸ್ವಭಾವವುಳ್ಳವನಾಗಿಯೂ, ಮಾಟ ಮುಂತಾದ

ಕರ್ಮಗಳಲ್ಲಿ ಅಭಿರುಚಿ ಉಳ್ಳವನಾಗಿಯೂ, ವಂಚನ ಪರನಾಗಿಯೂ, ಪ್ರಾರಂಭಿಸಿದ ಕೆಲಸವನ್ನು ಪೂರ್ತಿಯಾಗಿ ಮಾಡದೆ ಸೋಮಾರಿಯಾಗಿಯೂ, ಅಧಿಕವಾಗಿ ದುಃಖಪಡುವುದೇ ಸ್ವಭಾವವುಳ್ಳವನಾಗಿಯೂ, ಇತರರಿಗೆ ದೀರ್ಘಕಾಲ ಅನರ್ಥ ಉಂಟಾಗಲೆಂಬ ಆಲೋಚನೆ ಉಳ್ಳವನಾಗಿಯೂ ಇರುವ ಕರ್ತಾ 'ತಾಮಸ ಕರ್ತಾ' ಎನಿಸಿಕೊಳ್ಳುವನು.

**4) ತ್ರಿವಿಧ ಬುದ್ಧಿಗಳು :-** ಇಲ್ಲಿಯವರೆಗೆ ಕರ್ಮಕ್ಕೆ ಬೇಕಾದ ಜ್ಞಾನ, ಕರ್ಮ ಮತ್ತು ಕರ್ತಾ ಇವುಗಳು ತ್ರಿಗುಣಗಳ ಕಾರ್ಯದಿಂದ ಮೂರು ವಿಧಗಳಾಗಿರುವುದು ತಿಳಿಸಲ್ಪಟ್ಟಿತು. ಮುಂದೆ ವಿವೇಕದಿಂದ ಕೂಡಿರುವ ನಿಶ್ಚಯ ರೂಪವಾದ ಜ್ಞಾನವೆಂಬ ಬುದ್ಧಿಯೂ, ಆರಂಭಿಸಿದ ಕೆಲಸವನ್ನು ಬಿಡದೆ ವಿಘ್ನಗಳು ಉಂಟಾದರೂ ಅದನ್ನು ಸಹಿಸಿಕೊಂಡು ಮುಂದುವರಿಸುವ ಮಾನಸಿಕ ಶಕ್ತಿ ಸಾಮರ್ಥ್ಯವೆಂಬ ಧೃತಿಯೂ, ತ್ರಿಗುಣ ಕಾರ್ಯದಿಂದ ಮೂರು ಬಗೆಯಾಗಿವೆ ಎಂಬ ವಿಷಯವು ತಿಳಿಸಲ್ಪಡುತ್ತದೆ.

**ಅ) ಸಾತ್ವಿಕ ಬುದ್ಧಿ :-** ಲೌಕಿಕ ಉನ್ನತಿಗೆ ಸಾಧನವಾದ ಪ್ರವೃತ್ತಿ ಧರ್ಮವನ್ನೂ, ಮೋಕ್ಷಕ್ಕೆ ಸಾಧನವಾದ ನಿವೃತ್ತಿ ಧರ್ಮವನ್ನೂ ಯಾವುದು ಅರಿಯುತ್ತದೆಯೋ; ಇದು ಮಾಡಬೇಕಾದ ಕರ್ತವ್ಯವು, ಇದು ಕರ್ತವ್ಯವಲ್ಲ ಎಂಬುದನ್ನು ಯಾವುದು ಅರಿಯುತ್ತದೆಯೋ; ಭಯವನ್ನೂ ಅಭಯವನ್ನೂ ಅಂದರೆ ಶಾಸ್ತ್ರವನ್ನು ಅತಿಕ್ರಮಿಸಿ ನಡೆಯುವುದು ಭಯಕ್ಕೆ ಕಾರಣವು ಮತ್ತು ಶಾಸ್ತ್ರವನ್ನು ಅನುವರ್ತಿಸಿ ನಡೆಯುವುದು ಅಭಯಕ್ಕೆ ಕಾರಣವು, ಅಂದರೆ ಭಯರಹಿತವಾದುದು ಎಂಬುದನ್ನು ಯಾವುದು ಅರಿಯುತ್ತದೆಯೋ ಮತ್ತು ಬಂಧಮೋಕ್ಷವನ್ನು ಅಂದರೆ ಸಂಸಾರ ಯಥಾರ್ಥ ರೂಪವನ್ನೂ, ಅದರಿಂದ ನಿವೃತ್ತಿ ಹೊಂದುವ ಉಪಾಯವನ್ನೂ ಯಾವುದು ಅರಿಯುತ್ತದೆಯೋ ಅಂತಹ ಬುದ್ಧಿಯು 'ಸಾತ್ವಿಕ ಬುದ್ಧಿ' ಯೆನಿಸುವುದು. ಕರ್ಮಬಂಧ, ಕರ್ಮ ವಿಮೋಚನೆಗಳನ್ನು ಅರಿಯುವುದೇ ಸಾತ್ವಿಕ ಬುದ್ಧಿಯು.

**ಆ) ರಾಜಸ ಬುದ್ಧಿ :-** ಧರ್ಮ ಅಧರ್ಮಗಳನ್ನೂ ಕಾರ್ಯ ಅಕಾರ್ಯಗಳನ್ನೂ ಸರಿಯಾಗಿ ಯಥಾರ್ಥವಾಗಿ ತಿಳಿಯದೇ ಇರುವ ಬುದ್ಧಿಯು 'ರಾಜಸ ಬುದ್ಧಿ' ಯೆನಿಸುವುದು.

ಇ) **ತಾಮಸ ಬುದ್ಧಿ :-** ಎಲ್ಲವನ್ನೂ ವಿಪರೀತವಾಗಿ ತಿಳಿಯುವ ಅಂದರೆ ಅಧರ್ಮವನ್ನು ಧರ್ಮವೆಂದೂ, ಧರ್ಮವನ್ನು ಅಧರ್ಮವೆಂದೂ, ಇರುವ ವಸ್ತುವನ್ನು ಇಲ್ಲವೆಂದೂ, ಇಲ್ಲದ ವಸ್ತುವನ್ನು ಇದೆ ಎಂದೂ, ಪರತತ್ವವನ್ನು ಅಪರವೆಂದೂ, ಅಪರತತ್ವವನ್ನು ಪರವೆಂದೂ ಹೀಗೆ ಅಜ್ಞಾನದಿಂದ ಎಲ್ಲಾ ವಿಷಯಗಳನ್ನೂ ವಿಪರೀತವಾಗಿ ತಿಳಿಯುವ ಬುದ್ಧಿಯು 'ತಾಮಸ ಬುದ್ಧಿ'ಯೆನಿಸುವುದು.

5) **ತ್ರಿವಿಧ ಧೃತಿಗಳು :-** ಈಗ ಬುದ್ಧಿ ಧಾರ್ಢ್ಯರೂಪವಾದ ಧೃತಿ ಅಂದರೆ ಮನೋಬಲವು ತ್ರಿಗುಣಗಳಿಂದ ಮೂರು ಬಗೆಯಾಗಿರುವುದು ತಿಳಿಸಲ್ಪಡುತ್ತದೆ.

ಅ) **ಸಾತ್ವಿಕ ಧೃತಿ :-** ಮನಸ್ಸಿನಲ್ಲಿ ಧೃಢವಾದ ಸಂಕಲ್ಪ ಮಾಡಿಕೊಂಡು ಅದನ್ನು ಯಶಸ್ವಿಯಾಗಿ ಕೊನೆಗೊಳಿಸುವವರೆಗೂ ಬಿಡದೆ ನಡೆಸುವ ಚಿತ್ತಸ್ಥೈರ್ಯ ಅಂದರೆ ಮನೋಬಲವೇ ಧೃತಿಯು. ಇದರಲ್ಲಿ ಇಂದ್ರಿಯಗಳನ್ನೂ ಮನಸ್ಸನ್ನೂ ನಿಗ್ರಹಿಸಿ ತನ್ನ ವಶ ಮಾಡಿಕೊಂಡು ಅವುಗಳನ್ನು ಭಗವಂತನ ಚಿಂತನೆಯಲ್ಲಿ ನೆಲೆಗೊಳಿಸಬೇಕು.

ಆ) **ರಾಜಸ ಧೃತಿ :-** ಫಲದಲ್ಲಿ ಆಸಕ್ತಿ ಹೊಂದಿ ತನ್ನ ಮನಸ್ಸು, ಪ್ರಾಣ, ಇಂದ್ರಿಯಗಳ ವ್ಯಾಪಾರಗಳನ್ನೂ, ಧರ್ಮ ಅಧರ್ಮ ಕಾಮಾದಿಗಳನ್ನೂ ಸಾಧಿಸಲು ಬಳಸುವ ಧೃತಿಯೇ 'ರಾಜಸ ಧೃತಿ' ಎಂಬುದು.

ಇ) **ತಾಮಸ ಧೃತಿ :-** ಯಾವ ಮನೋಬಲದಿಂದ ದುರ್ಮತಿಯುಳ್ಳ ಪುರುಷನು ನಿದ್ರೆ, ವಿಷಯಾನುಭವದಿಂದ ಉಂಟಾಗುವ ಮದ, ಭಯ, ಅದರಿಂದ ಉಂಟಾಗುವ ಶೋಕ, ವಿಷಾದ, ಇವುಗಳನ್ನೆಲ್ಲಾ ಬಿಡದೆ, ಅವುಗಳನ್ನು ಉಂಟುಮಾಡುವ ವಸ್ತುಗಳನ್ನು ಪಡೆಯಲು ತನ್ನ ಮನಸ್ಸು, ಪ್ರಾಣ, ಇಂದ್ರಿಯಗಳನ್ನು ಬಳಸುವನೋ ಆ ಧೃತಿಯೇ 'ತಾಮಸ ಧೃತಿ' ಎಂಬುದು.

6) **ತ್ರಿವಿಧ ಸುಖಗಳು :-** ಇಲ್ಲಿಯವರೆಗೆ ತಿಳಿಸಿದ ಜ್ಞಾನ, ಕರ್ಮ, ಕರ್ತಾ, ಬುದ್ಧಿ ಧೃತಿ ಇವುಗಳೆಲ್ಲವೂ ಸುಖವನ್ನು ಹೊಂದಲು ಕಾರಣವಾಗುವುದರಿಂದ, ಅವುಗಳಿಂದ ಬರುವ ಸುಖವೂ ತ್ರಿಗುಣಗಳಿಂದ ಮೂರು ಬಗೆಯಾಗಿವೆ. ಮನುಷ್ಯನು ಅಭ್ಯಾಸ ಬಲದಿಂದ ಯಾವುದರಲ್ಲಿ ತೃಪ್ತಿ ಸುಖಗಳನ್ನು ಹೊಂದಿ ದುಃಖವನ್ನು ನುಂಗುವನೋ ಅಂತಹ ಸುಖವು ಮೂರು ಬಗೆಯಾಗಿದೆ.

**ಅ) ಸಾತ್ವಿಕ ಸುಖ :-** ಆರಂಭದಲ್ಲಿ ವಿಷಕ್ಕೆ ಸಮನಾಗಿದ್ದು ಕೊನೆಯಲ್ಲಿ ಅಮೃತಕ್ಕೆ ಸಮನಾಗುವಂತಹ ಮತ್ತು ಆತ್ಮಜ್ಞಾನದ ಪ್ರಸಾದದಿಂದ ಉಂಟಾಗುವಂತಹ ಸುಖವು ಸಾತ್ವಿಕ ಸುಖವು. ಅಂದರೆ ಯೋಗಾಭ್ಯಾಸವು. ಮಾಡುವಾಗ ಯೋಗದ ಆರಂಭದಲ್ಲಿ ಬಹಳ ಆಯಾಸವನ್ನು ಉಂಟುಮಾಡುವುದರಿಂದ ವಿಷದಂತೆ ದುಃಖಕರವಾಗಿ ತೋರಿದರೂ ಪರಿಣಾಮದಲ್ಲಿ ಆತ್ಮಜ್ಞಾನವು ಉಂಟಾಗಿ ಅದರ ಅನುಭವದಿಂದ ಬರುವ ಸುಖವು ಅಮೃತಕ್ಕೆ ಸಮಾನವಾಗಿರುವುದರಿಂದ ಮತ್ತು ಅದು ಆತ್ಮಬುದ್ಧಿ ಪ್ರಸಾದದಿಂದ ಉಂಟಾಗುವಂತಹುದು ಆಗಿರುವುದರಿಂದ ಅಂತಹ ಸುಖವು 'ಸಾತ್ವಿಕ ಸುಖ' ವೆನಿಸುವುದು.

**ಆ) ರಾಜಸ ಸುಖ :-** ವಿಷಯಗಳೊಡನೆ ಇಂದ್ರಿಯ ಸಂಬಂಧದಿಂದ ಉಂಟಾಗುವ ಸುಖವು ಮೊದಲು ಅಂದರೆ ಭೋಗಾನುಭವ ಕಾಲದಲ್ಲಿ ಅಮೃತದಂತೆ ಭೋಗ್ಯವಾಗಿದ್ದು ಕೊನೆಗೆ ಸುಖಾನುಭವಕ್ಕೆ ಕಾರಣವಾದ ಹಸಿವು ಮುಂತಾದುವು ಅಡಗಿದ ಮೇಲೆ ಅದು ದುಃಖರೂಪವಾಗುವುದು. ಅಂತಹ ಸುಖವು ರಾಜಸ ಸುಖವೆನಿಸುವುದು.

**ಇ) ತಾಮಸ ಸುಖ :-** ಯಾವ ಸುಖವು ಅನುಭವ ಕಾಲದಲ್ಲಿಯೂ, ಪರಿಣಾಮ ಕಾಲದಲ್ಲಿಯೂ ಜೀವನಿಗೆ ಯಥಾರ್ಥವನ್ನು ಅಂದರೆ ನಿಜಸ್ಥಿತಿಯನ್ನು ಪ್ರಕಾಶಪಡಿಸದೆ ಮೋಹವನ್ನು ಉಂಟುಮಾಡುತ್ತದೆಯೋ ಮತ್ತು ನಿದ್ರೆ, ಆಲಸ್ಯ ಇವುಗಳಿಂದ ಉಂಟಾಗುತ್ತದೆಯೋ, ಆ ಸುಖವು 'ತಾಮಸ ಸುಖ'ವೆನಿಸುವುದು.

ಭೂಮಿಯಲ್ಲಿರುವ ಮನುಷ್ಯರಲ್ಲಿಯಾಗಲೀ, ದೇವಲೋಕದಲ್ಲಿರುವ ದೇವತೆ ಗಳಲ್ಲಿಯಾಗಲೀ, ಪ್ರಕೃತಿಯಿಂದ ಉತ್ಪನ್ನವಾದ ಸತ್ವ, ರಜಸ್ಸು ತಮಸ್ಸು ಎಂಬ ಈ ಮೂರು ಗುಣಗಳಿಂದ ಬಿಡಲ್ಪಟ್ಟವರು ಯಾರೂ ಇಲ್ಲ. ಆದುದರಿಂದ ಮೋಕ್ಷಕ್ಕೆ ಇಚ್ಛೆ ಉಳ್ಳವರು ರಜೋಗುಣ, ತಮೋಗುಣಗಳನ್ನು ಅಡಗಿಸಿ ಸತ್ವಗುಣವನ್ನು ವೃದ್ಧಿಪಡಿಸಿಕೊಳ್ಳಲು ಪ್ರಯತ್ನಿಸಬೇಕು ಎಂಬುದೇ ಇಲ್ಲಿನ ಅಭಿಪ್ರಾಯ.

## IV ವರ್ಣಾಶ್ರಮೋಚಿತವಾದ ಕರ್ಮಗಳನ್ನು ಭಗವದಾರಾಧನರೂಪವಾಗಿ ಮಾಡುವುದರಿಂದ ಭಗವತ್ಪ್ರಾಪ್ತಿ ಉಂಟಾಗುವಿಕೆ. (ಶ್ಲೋಕ 41 ರಿಂದ 60)

### 1. ಚತುರ್ವರ್ಣದವರ ಸ್ವಭಾವ ಮತ್ತು ಅದಕ್ಕೆ ಅನುಗುಣವಾದ ಅವರ ಕರ್ಮಗಳು ಮತ್ತು ವೃತ್ತಿಗಳು (ಶ್ಲೋಕ 41 ರಿಂದ 44)

ಸತ್ತ್ವರಜಸ್ತಮೋಗುಣಗಳ ತಾರತಮ್ಯದಿಂದ ಉಂಟಾಗುವ ಬ್ರಾಹ್ಮಣಾದಿ ಚತುರ್ವಣದ ಅಧಿಕಾರಿಗಳ ವಿಭಾಗವನ್ನೂ, ಅವರವರ ಗುಣಗಳಿಗೆ ಅನುಗುಣವಾದ ಅವರವರ ಸ್ವಭಾವವನ್ನೂ ಮತ್ತು ಆಯಾ ಸ್ವಭಾವಗಳಿಗೆ ಅನುಗುಣವಾದ ಅವರವರ ಕರ್ತವ್ಯ ಕರ್ಮಗಳ ಸ್ವರೂಪವನ್ನೂ, ವೃತ್ತಿಗಳನ್ನೂ ಶ್ರೀಕೃಷ್ಣ ಪರಮಾತ್ಮನು ಇಲ್ಲಿ ವಿವರಿಸಿದ್ದಾನೆ. ಅಲ್ಲದೆ ಅವರವರು ತಮ್ಮ ತಮ್ಮ ವರ್ಣಾಶ್ರಮಗಳಿಗೆ ಅನುಗುಣವಾಗಿ ತಮ್ಮ ತಮ್ಮ ಕರ್ತವ್ಯ ಕರ್ಮಗಳನ್ನು ಪರಮಪುರುಷನ ಆರಾಧನ ರೂಪವಾಗಿ ಮಾಡಬೇಕೆಂದೂ, ಹಾಗೆ ಪರಮಪುರುಷನ ಆರಾಧನ ರೂಪವಾಗಿ ಮಾಡಲ್ಪಡುವ ಕರ್ಮವೇ ಮೋಕ್ಷಸಾಧನವಾದುದು ಮತ್ತು ಅಂತಹ ಕರ್ಮಕ್ಕೆ ಫಲವು ಪರಮ ಪುರುಷನ ಪ್ರಾಪ್ತಿ ಎಂದೂ ಸಿದ್ಧಪಡಿಸಿ ತಿಳಿಸಿದ್ದಾನೆ.

ಹಿಂದೆ ಭಗವದ್ಗೀತೆಯ ನಾಲ್ಕನೆಯ ಅಧ್ಯಾಯದಲ್ಲಿ ಶ್ರೀಕೃಷ್ಣ ಪರಮಾತ್ಮನು, 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ – ಅಂದರೆ ಗುಣ ಕರ್ಮಗಳಿಗೆ ಅನುಗುಣವಾಗಿ ನಾಲ್ಕು ವರ್ಣಗಳು ನನ್ನಿಂದ ಸೃಷ್ಟಿಸಲ್ಪಟ್ಟಿವೆ ಎಂದು ತಿಳಿಸಿದ್ದಾನೆ. ಈಗ ಚತುರ್ವರ್ಣದವರಲ್ಲಿ ಅವರವರ ಗುಣಗಳಿಗೆ ಅನುಗುಣವಾದ ಪ್ರತಿ ವರ್ಣದವರ ಕರ್ತವ್ಯ, ಕರ್ಮ ಮತ್ತು ವೃತ್ತಿಗಳನ್ನು ವಿವರಿಸಿ ತಿಳಿಸುತ್ತಾನೆ. ಮನುಷ್ಯರು ಅವರವರ ಪೂರ್ವಜನ್ಮದ ಕರ್ಮಗಳಿಂದ ಉಂಟಾಗಿರುವ ಅವರವರ ಸ್ವಭಾವಕ್ಕೆ ಅನುಗುಣವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ವರ್ಣಗಳಲ್ಲಿ ಜನ್ಮಪಡೆದವರಾಗಿರುತ್ತಾರೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ಈ ವರ್ಣಭೇಧಗಳು ಪ್ರಧಾನವಾಗಿ ಅವರಲ್ಲಿರುವ ಸತ್ತ್ವರಜಸ್ತಮೋಗುಣಗಳ ತಾರತಮ್ಯದಿಂದ ಉಂಟಾಗಿವೆ ಮತ್ತು ಈ ನಾಲ್ಕು ವರ್ಣದವರಿಗೆಲ್ಲಾ ಅವರವರ ಸ್ವಭಾವ ಗುಣಗಳಿಗೆ ತಕ್ಕಂತೆ ಅವರವರಿಗೆ ಬೇರೆ ಬೇರೆ ಕರ್ಮಗಳು ಶಾಸ್ತ್ರದಲ್ಲಿ ತಿಳಿಸಲ್ಪಟ್ಟಿವೆ.

1. **ಬ್ರಾಹ್ಮಣನ ಗುಣ ಮತ್ತು ಕರ್ಮಗಳು :** ಬ್ರಾಹ್ಮಣನ ಸ್ವಭಾವದ ಗುಣವು ರಜಸ್ಸು ಮತ್ತು ತಮಸ್ಸುಗಳನ್ನು ಅಡಗಿಸಿ ಪ್ರಾಬಲ್ಯವನ್ನು ಹೊಂದಿರುವ ಸತ್ತ್ವಗುಣವು. **'ಶಮಃ'** – ಅಂದರೆ ಬಾಹ್ಯೇಂದ್ರಿಯಗಳನ್ನು ಅಡಗಿಸುವಿಕೆ, **'ದಮಃ'** – ಅಂದರೆ ಅಂತರೇಂದ್ರಿಯಗಳನ್ನು ಅಡಗಿಸುವಿಕೆ, **'ತಪಃ'** – ಅಂದರೆ ಕಾಯಕ್ಲೇಶವು;

**'ಶೌಚಂ'** – ಅಂದರೆ ಶಾಸ್ತ್ರೀಯ ಕರ್ಮಾಚರಣೆಗೆ ಬೇಕಾದ ಯೋಗ್ಯತೆ.

'ಕ್ಷಾಂತಿಃ' - ಅಂದರೆ ಇತರರು ಪೀಡಿಸಿದರೂ ಚಿತ್ತ ವಿಕಾರವನ್ನು ಹೊಂದದೆ ಇರುವಿಕೆ.

**'ಆರ್ಜವಂ'**- ಅಂದರೆ ಅನ್ಯರೊಂದಿಗೆ ಮನೋವಾಕ್ಕಾಯಗಳಲ್ಲಿ ಒಂದೇ ತೆರನಾಗಿ ಇರುವಿಕೆ -**'ಜ್ಞಾನಂ'**- ಅಂದರೆ ಪರತತ್ತ್ವ, ಅಪರ ತತ್ತ್ವಗಳ ಯಾಥಾತ್ಮ್ಯ ಜ್ಞಾನ.

'ವಿಜ್ಞಾನಂ' - ಅಂದರೆ ಪರತತ್ತ್ವ ವಿಷಯದ ಅಸಾಧಾರಣ ವಿಶೇಷ ಜ್ಞಾನ.

**'ಆಸ್ತಿಕ್ಯಂ'** - ಅಂದರೆ ಸಮಸ್ತ ವೈದಿಕ ಕರ್ಮಗಳ ಮೂಲಕ ಆರಾಧಿಸಲ್ಪಡುವ ಪರಬ್ರಹ್ಮ ವಾಚ್ಯನಾದ ಪರಮಾತ್ಮನು ಧರ್ಮ ಅರ್ಥ ಕಾಮ ಮೋಕ್ಷಾದಿ ಸಮಸ್ತ ಫಲಗಳನ್ನು ಕೊಡುತ್ತಾನೆಂಬ ದೃಢವಾದ ನಂಬಿಕೆಯಿಂದ ಕೂಡಿರುವಿಕೆ. ಇವೆಲ್ಲವೂ ಬ್ರಾಹ್ಮಣನ ಸ್ವಭಾವಕ್ಕೆ ಅನುಗುಣವಾದ ಕರ್ಮಗಳು. ಅವನಲ್ಲಿ ಸತ್ತ್ವ ಗುಣವು ಅಧಿಕವಾಗಿರುವುದರಿಂದ ಶಮದಮಾದಿಗಳನ್ನು ಹೊಂದುವುದು ಅವನಿಗೆ ಸುಲಭವಾದುದಾಗಿದೆ.

2. **ಕ್ಷತ್ರಿಯನ ಸ್ವಭಾವ ಮತ್ತು ಕರ್ಮಗಳು :** ಕ್ಷತ್ರಿಯನ ಸ್ವಭಾವದ ಪ್ರಧಾನ ಗುಣವು ತಮಸ್ಸು ಮತ್ತು ಸತ್ತ್ವವನ್ನು ಅಡಗಿಸಿ ಪ್ರಾಬಲ್ಯವನ್ನು ಹೊಂದಿರುವ ರಜೋಗುಣವು. **ಶೌರ್ಯ** - ಅಂದರೆ ಯುದ್ಧದಲ್ಲಿ ನಿರ್ಭಯನಾಗಿ ಪ್ರವೇಶಿಸುವ ಸಾಮರ್ಥ್ಯ; **ತೇಜಃ** - ಅಂದರೆ ಇತರರಿಂದ ತಿರಸ್ಕರಿಸಲ್ಪಡದೆ ಇರುವಿಕೆ; **ಧೃತಿಃ** - ಅಂದರೆ ಪ್ರಾರಂಭಿಸಿದ ಕೆಲಸವನ್ನು ವಿಘ್ನಗಳು ಉಂಟಾದರೂ ಅದನ್ನು ಬಿಡದೆ ಪೂರ್ತಿಯಾಗಿ ಮಾಡುವ ಸಾಮರ್ಥ್ಯ.

**ದಾಕ್ಷ್ಯಂ** - ಅಂದರೆ ಸಮಸ್ತ ಕ್ರಿಯೆಗಳನ್ನೂ ನಡೆಸುವ ಸಾಮರ್ಥ್ಯ; **ಅಪಲಾಯನಂ** - ಅಂದರೆ ಯುದ್ಧದಲ್ಲಿ ತನಗೆ ಸಾವು ಉಂಟಾಗುವ ಸಂದರ್ಭ ಬಂದರೂ ಹಿಂತಿರುಗದೆ ಇರುವಿಕೆ, **ದಾನಂ** - ತನ್ನ ಹಣವನ್ನು ಇತರರಿಗೆ ಅವರ ಸ್ವತ್ತಾಗಿ ತ್ಯಾಗ ಮಾಡುವಿಕೆ.

**ಈಶ್ವರ ಭಾವಃ** :- ಅಂದರೆ ಇತರರೆಲ್ಲರನ್ನೂ ನಿಯಮಿಸುವ ಸಾಮರ್ಥ್ಯ. ಇವುಗಳೆಲ್ಲವೂ ಕ್ಷತ್ರಿಯನ ಸ್ವಭಾವಕ್ಕೆ ಅನುಗುಣವಾದ ಕರ್ಮಗಳು.

3. **ವೈಶ್ಯನ ಗುಣ ಮತ್ತು ಕರ್ಮಗಳು :-** ವೈಶ್ಯನ ಸ್ವಭಾವದ ಪ್ರಧಾನ ಗುಣವು ರಜಸ್ಸು ಮತ್ತು ಸತ್ತ್ವ ಗುಣಗಳನ್ನು ಅಡಗಿಸಿ ಸ್ವಲ್ಪ ಪ್ರಾಬಲ್ಯವನ್ನು ಹೊಂದಿರುವ ರಜೋಗುಣವು.

**ಕೃಷಿ :-** ಅಂದರೆ ಧಾನ್ಯವನ್ನು ಬೆಳೆಯಲು ಭೂಮಿಯನ್ನು ಉಳುವುದು.

**ಗೋರಕ್ಷಣೆ :** - ಅಂದರೆ ಪಶುಪಾಲನೆ; **ವಾಣಿಜ್ಯಂ** - ಅಂದರೆ ಹಣ ಸಂಪಾದನೆಗಾಗಿ ಪದಾರ್ಥಗಳನ್ನು ಕೊಂಡು ಮಾರುವುದು. ಇವುಗಳೆಲ್ಲವೂ ವೈಶ್ಯನ ಸ್ವಭಾವಕ್ಕೆ ಅನುಗುಣವಾದ ಕರ್ಮಗಳು.

**4. ಶೂದ್ರನ ಗುಣ ಮತ್ತು ಕರ್ಮಗಳು :-** ಶೂದ್ರನ ಸ್ವಭಾವದ ಪ್ರಧಾನ ಗುಣವು ರಜಸ್ಸು ಮತ್ತು ಸತ್ತ್ವ ಗುಣಗಳನ್ನು ಅಡಗಿಸಿ ಅತ್ಯಂತ ಪ್ರಾಬಲ್ಯವನ್ನು ಹೊಂದಿರುವ ತಮೋಗುಣವು. **ಪರಿಚರ್ಯಾತ್ಮಕವಾದ ಕರ್ಮ** - ಅಂದರೆ ಮೇಲೆ ಹೇಳಿದ ಮೂರು ವರ್ಣದವರಿಗೆ ಸೇವೆ ಮಾಡುವುದು. ಇದು ಶೂದ್ರನ ಸ್ವಭಾವಕ್ಕೆ ಅನುಗುಣವಾದ ಕರ್ಮವು.

ಹೀಗೆ ಅವರವರ ಸ್ವಭಾವ ಮತ್ತು ಗುಣಗಳಿಗೆ ಅನುಗುಣವಾಗಿ ಆಯಾ ವರ್ಣದವರಿಗೆ ಶಾಸ್ತ್ರದಲ್ಲಿ ಬೇರೆ ಬೇರೆ ಕರ್ಮಗಳೂ ಮತ್ತು ವೃತ್ತಿಗಳೂ ವಿಭಾಗಿಸಲ್ಪಟ್ಟು ತಿಳಿಸಲ್ಪಟ್ಟಿವೆ.

### 2. ಸ್ವಧರ್ಮಾಚರಣೆಯನ್ನು ಭಗವದಾರಾಧನ ರೂಪವಾಗಿ ಆಚರಿಸಿ ಭಗವತ್ಪ್ರಾಪ್ತಿರೂಪ ಸಿದ್ಧಿಯನ್ನು ಪಡೆಯುವಿಕೆ (ಶ್ಲೋಕ 45 ರಿಂದ 49)

ಚಾತುರ್ವರ್ಣದ ಕರ್ಮಭೇದಗಳು ಹೇಗಿದ್ದರೂ ಸರಿ ಮನುಷ್ಯನು ತನಗೆ ವಿಹಿತವಾದ ಕರ್ಮಗಳನ್ನು ಆಚರಿಸುವುದರಿಂದಲೇ ಪರಮಪದವನ್ನು ಹೊಂದಬಹುದು. ಪರಮಾತ್ಮನನ್ನು ಮಾನವರು ತಮ್ಮ ವರ್ಣೋಚಿತವಾದ, ತಮ್ಮ ತಮ್ಮ ಕರ್ತವ್ಯಗಳ ಮೂಲಕ ಆರಾಧಿಸಿ, ಪೂಜೆ ಮಾಡಿ, ಭಗವದನುಗ್ರಹ ಪಡೆದು ಉತ್ತಮ ಗತಿಯನ್ನು ಹೊಂದಬಲ್ಲರು.

ಸ್ವಧರ್ಮವು ವಿಗುಣವೆಂದು ತೋರಿದರೂ ಇತರರ ಧರ್ಮವನ್ನು ಅನುಷ್ಠಿಸುವುದಕ್ಕಿಂತ ಸ್ವಧರ್ಮವನ್ನು ಅನುಷ್ಠಿಸುವುದೇ ಶ್ರೇಯಸ್ಕರವಾದುದು. ಕರ್ತೃತ್ವ ಫಲಾಸಕ್ತಿಗಳನ್ನು ತ್ಯಜಿಸಿ ಭಗವದಾರಾಧನರೂಪವಾಗಿ ಆಚರಿಸಲ್ಪಡುವ, ತನಗೆ ಅನುಷ್ಠಿಸಲು ಯೋಗ್ಯವಾಗಿರುವ ಧರ್ಮವೇ ಸ್ವಧರ್ಮವು. ತನ್ನ ಸ್ವಧರ್ಮವನ್ನು ಕರ್ತೃತ್ವ ಫಲಾಸಕ್ತಿಗಳನ್ನು ತ್ಯಜಿಸಿ ಭಗವದಾರಾಧನ ರೂಪವಾಗಿ ಅನುಷ್ಠಿಸುವವನು ಪಾಪವನ್ನು ಹೊಂದುವುದಿಲ್ಲ. ತನಗೆ ಸಹಜವಾದ, ತನ್ನ ಸ್ವಭಾವಕ್ಕೆ ಅನುಗುಣವಾದ ಕರ್ಮಯೋಗವನ್ನು ಆಚರಿಸುವವನಿಗೆ ಆದರಿಂದ

ಪಾಪಸಂಭವವುಂಟಾಗುವುದಿಲ್ಲ. ಹೀಗೆ ಪ್ರಕೃತಿ ಸಂಬಂಧವುಳ್ಳ ಜನರಿಗೆ ಅವರ ಸ್ವಭಾವಕ್ಕೆ ಅನುಗುಣವಾಗಿ ಇಂದ್ರಿಯ ವ್ಯಾಪಾರ ರೂಪವಾದ ಕರ್ಮಯೋಗವು ಸಹಜವಾದುದಾಗಿಯೂ ಇದೆ. ಆದ್ದರಿಂದ ಫಲಾಪೇಕ್ಷೆ ಇಲ್ಲದೆ ಮನಸ್ಸನ್ನು ಜಯಿಸಿ ಪರಮಾತ್ಮನೇ ಕರ್ತನೆಂದು ಅನುಸಂಧಾನ ಮಾಡುತ್ತಾ, ಜೀವಾತ್ಮನಾದ ತಾನು ಅಕರ್ತನೆಂಬ ಭಾವನೆಯನ್ನು ಹೊಂದಿದವನಾಗಿ ಫಲಸಂಗ ಕರ್ತೃತ್ವ ತ್ಯಾಗದಿಂದ ಕೂಡಿ, ಭಗವದಾರಾಧನ ರೂಪವಾಗಿ ಕರ್ಮವನ್ನು ಆಚರಿಸುವವನು ಪರಮ ನೈಷ್ಕರ್ಮ್ಯಸಿದ್ಧಿಯನ್ನು ಹೊಂದುವನು. ಅಂದರೆ ಜ್ಞಾನಯೋಗದ ಫಲರೂಪವಾದ ಪರಮಧ್ಯಾನ ನಿಷ್ಠೆಯನ್ನು ಹೊಂದುವನು.

### 3. ನೈಷ್ಕರ್ಮ್ಯಸಿದ್ಧಿಯನ್ನು ಪಡೆದವನ ಜೀವನದ ರೀತಿ ಮತ್ತು ಅವನು ಹೊಂದುವ ಫಲವಾದ ಪರಭಕ್ತಿಯ ಸ್ವರೂಪ. (ಶ್ಲೋಕಗಳು 50 ರಿಂದ 55)

ಎಲ್ಲಾ ಇಂದ್ರಿಯಗಳ ವ್ಯಾಪಾರವಿಲ್ಲದೇ ಇರುವ ಸ್ಥಿತಿಯು ನೈಷ್ಕರ್ಮ್ಯವೆಂದು ಕರೆಯಲ್ಪಡುತ್ತದೆ. ಈ ಶರೀರವನ್ನು ಬಿಟ್ಟು ಹೋಗುವವರೆಗೂ ಪ್ರತಿ ದಿವಸವೂ ಕರ್ಮಯೋಗವನ್ನು ಆಚರಿಸುತ್ತಾ ಅದರ ಫಲವಾಗಿ ಧ್ಯಾನಸಿದ್ಧಿಯನ್ನು ಹೊಂದಿದ ಜೀವನು ಯಾವ ರೀತಿ ಜೀವನವನ್ನು ನಡೆಸುತ್ತಾ ಬ್ರಹ್ಮಪ್ರಾಪ್ತಿಯನ್ನು ಹೊಂದುತ್ತಾನೆಂಬುದು ಮುಂದೆ ಸಂಕ್ಷೇಪವಾಗಿ ತಿಳಿಸಲ್ಪಟ್ಟಿದೆ. ಶುದ್ಧವಾದ ಆತ್ಮಜ್ಞಾನ ಹೊಂದಿ ಮನಸ್ಸನ್ನು ನಿಗ್ರಹಿಸಿ ಶಬ್ದಾದಿ ವಿಷಯಗಳನ್ನು ತ್ಯಜಿಸಿ, ರಾಗದ್ವೇಷಗಳನ್ನು ನಾಶ ಮಾಡಿ, ಧ್ಯಾನಕ್ಕೆ ವಿಘ್ನವಿಲ್ಲದಂತೆ ನಿರ್ಜನವಾದ ಏಕಾಂತ ಪ್ರದೇಶಕ್ಕೆ ಹೋಗಿ, ಲಘುವಾದ ಆಹಾರವನ್ನು ಭುಜಿಸುತ್ತಾ ಮನೋವಾಕ್ಕಾಯಗಳನ್ನು ಜಯಿಸಿ ತನ್ನ ವಶ ಮಾಡಿಕೊಂಡು, ಧ್ಯಾನ ಯೋಗವನ್ನು ಆಚರಿಸುತ್ತಾ ವೈರಾಗ್ಯವನ್ನು ತಳೆದು ಅಹಂಕಾರವನ್ನೂ ಬಲವನ್ನೂ ಕಾಮಕ್ರೋಧಾದಿಗಳನ್ನೂ ಬಿಟ್ಟು ಮಮಕಾರ ರಹಿತನಾಗಿ ಶಾಂತನಾಗಿ ಧ್ಯಾನಯೋಗವನ್ನು ಆಚರಿಸುವವನು ಎಲ್ಲಾ ವಿಧವಾದ ಬಂಧಗಳಿಂದ ಬಿಡಲ್ಪಟ್ಟವನಾಗಿ ಆತ್ಮದ ಯಥಾರ್ಥ ಸ್ವರೂಪವನ್ನು ಅನುಭವಿಸುವನು. ಅವನು ಭಗವಂತನಿಗಿಂತಲೂ ಬೇರೆ ಯಾವ ವಸ್ತುಗಳನ್ನೂ ಅನುಭವಿಸಲು ಅಪೇಕ್ಷೆ ಇಲ್ಲದವನಾಗಿರುವುದರಿಂದ ಯಾವುದಕ್ಕೂ ದುಃಖ ಪಡುವುದಿಲ್ಲ ಮತ್ತು ಯಾವುದನ್ನೂ ಆಸೆ ಪಡುವುದಿಲ್ಲ. ಭಗವಂತನನ್ನು ಬಿಟ್ಟು ಇತರ ಎಲ್ಲಾ ವಸ್ತುಗಳನ್ನೂ ಹುಲ್ಲಿಗೆ ಸಮನಾಗಿ ಎಣಿಸಿ ಅವುಗಳನ್ನು ಅನಾದರಣೆ ಮಾಡಿ

ಭಗವಂತನಲ್ಲಿ ಪರಭಕ್ತಿಯನ್ನು ಹೊಂದಿದವನಾಗುತ್ತಾನೆ ಮತ್ತು ಭಗವಂತನು ಯಾರು, ಏನು ಎಂಬುದನ್ನೆಲ್ಲಾ ತತ್ವತಃ ಅರಿತವನಾಗುತ್ತಾನೆ ಆದರಿಂದ ಭಗವಂತನಲ್ಲಿ ಅಪಾರವಾದ ಭಕ್ತಿಯನ್ನು ಹೊಂದಿದವನಾಗಿ ಅವನಲ್ಲಿ ಪ್ರವೇಶಿಸುತ್ತಾನೆ ಅಂದರೆ ಅವನನ್ನೇ ಹೊಂದುತ್ತಾನೆಂದು ಪರಮಾತ್ಮನು ತಿಳಿಸಿದ್ದಾನೆ

## 4. ಕಾಮ್ಯಕರ್ಮಗಳನ್ನು ಭಗವದಾರಾಧನ ರೂಪವಾಗಿ ಮಾಡುವವನೂ ಭಗವದ್ಭಕ್ತಿಯನ್ನು ಹೊಂದುವನು (ಶ್ಲೋಕ 56 ರಿಂದ 58)

ಕಾಮ್ಯಕರ್ಮಗಳನ್ನು ಮಾಡುವವನೂ ಕೂಡ ಭಗವಂತನೇ ಶೇಷೀ ಎಂಬುದಾಗಿ ತಿಳಿದು, ಅವನ ಆಶ್ರಯವನ್ನು ಪಡೆದು, ಕರ್ತೃತ್ವಾದಿಗಳನ್ನು ಅವನಲ್ಲಿ ಅನುಸಂಧಾನ ಮಾಡುತ್ತಾ ಭಗವದಾರಾಧನ ರೂಪವಾಗಿ ಕರ್ಮ ಮಾಡಿದರೆ ಭಗವಂತನ ಅನುಗ್ರಹದಿಂದ ಅವನು ಶಾಶ್ವತವಾದ, ನಾಶರಹಿತವಾದ ಉತ್ತಮಪದವನ್ನು ಹೊಂದುವನು. ಅಂದರೆ ಭಗವಂತನಲ್ಲಿ ಅಪಾರವಾದ ಭಕ್ತಿಯನ್ನು ಪಡೆದವನಾಗಿ ಭಗವಂತನನ್ನು ಹೊಂದುವನು ಎಂದು ಅರ್ಥ.

ಶ್ರೀಕೃಷ್ಣನು ಹೇಳುತ್ತಾನೆ "ಆದ್ದರಿಂದ ಎಲ್ಲಾ ಲೌಕಿಕ ಕರ್ಮಗಳನ್ನೂ ಮಾನಸಿಕವಾಗಿ ನನಗೆ ಸಮರ್ಪಿಸಿ, ಮೂರನೆಯ ಅಧ್ಯಾಯದಲ್ಲಿ **"ಮಯಿ ಸರ್ವಾಣಿ ಕರ್ಮಾಣಿ ಸನ್ಯಸ್ಯ ಆಧ್ಯಾತ್ಮ ಚೇತಸಾ"** ಎಂದು ಹೇಳಿರುವಂತೆ ಸಮಸ್ತ ಕರ್ಮಗಳ ಕರ್ತೃತ್ವವನ್ನು ಪರಮಾತ್ಮನಾದ ನನ್ನಲ್ಲಿ ಅನುಸಂಧಾನ ಮಾಡುತ್ತಾ, ನನ್ನ ಆರಾಧನ ರೂಪವಾಗಿ ಆಚರಿಸುತ್ತಾ, ನನ್ನ ಪ್ರಾಪ್ತಿಯೇ ಪರಮ ಪ್ರಯೋಜನವೆಂದು ತಿಳಿದು ಕರ್ಮಗಳನ್ನು ಮಾಡುವವನಾಗು ಮತ್ತು ಈ ಬುದ್ಧಿಯೋಗವನ್ನು ಆಶ್ರಯಿಸಿ ಯಾವಾಗಲೂ ಪರಮಾತ್ಮನಾದ ನನ್ನಲ್ಲೇ ನೆಟ್ಟ ಮನಸ್ಸುಳ್ಳವನಾಗಿರು. ಹೀಗೆ ನೀನು ನನ್ನಲ್ಲಿ ಮನಸ್ಸನ್ನು ಇಟ್ಟು ನನ್ನ ಆರಾಧನೆಯ ರೂಪವಾಗಿ ಸಮಸ್ತ ಕರ್ಮಗಳನ್ನೂ ಆಚರಿಸುತ್ತಿದ್ದರೆ ನನ್ನ ಅನುಗ್ರಹದಿಂದ ಸಮಸ್ತ ಸಾಂಸಾರಿಕ ಕಷ್ಟಗಳನ್ನು ದಾಟುತ್ತೀಯೆ. ಹಾಗಿಲ್ಲದೆ ನೀನು "ನಾನೇ ಸ್ವತಃ ಸಮಸ್ತ ಕೃತ್ಯಾಕೃತ್ಯಗಳನ್ನು ತಿಳಿದಿರುವೆನು" ಎಂಬ ಅಹಂಕಾರ ಭಾವನೆಯನ್ನು ಹೊಂದಿ ನನ್ನ ಈ ಉಪದೇಶವನ್ನು ಕೇಳದಿದ್ದರೆ ನಾಶವನ್ನು ಹೊಂದುತ್ತೀಯೆ. ಸಮಸ್ತ ಪ್ರಾಣಿ ವರ್ಗಗಳ ಕೃತ್ಯಾಕೃತ್ಯಗಳನ್ನು ತಿಳಿದಿರತಕ್ಕವನೂ, ಅವುಗಳನ್ನು ನಿಯಮಿಸತಕ್ಕವನೂ ನಾನಲ್ಲದೆ ಬೇರೆ ಯಾರೂ ಅಲ್ಲ.'

### 5. ತನ್ನ ವರ್ಣಕ್ಕೆ ಸಹಜವಾದ ಯುದ್ಧವನ್ನು ಭಗವದಾರಾಧನ ರೂಪವಾಗಿ ಆಚರಿಸುವಂತೆ ಅರ್ಜುನನಿಗೆ ಶ್ರೀಕೃಷ್ಣನ ಉಪದೇಶ (ಶ್ಲೋಕಗಳು 59 ಮತ್ತು 60)

'ಅರ್ಜುನ ! ನನ್ನ ಮಾತನ್ನು ಕೇಳದೆ ಅಹಂಕಾರ ಹೊಂದಿದವನಾಗಿ "ನನ್ನ ಹಿತಾಹಿತಗಳನ್ನು ನಾನೇ ತಿಳಿದಿರುವೆನು, ನಾನು ಸ್ವತಂತ್ರನು" ಎಂದು ಭಾವಿಸಿಕೊಂಡು ನನ್ನ ಆಜ್ಞೆಯನ್ನು ಅನಾದರಣೆ ಮಾಡಿ ಈ ಯುದ್ಧವನ್ನು ಮಾಡುವುದಿಲ್ಲ ಎಂದು ನೀನು ನಿಶ್ಚಯಿಸಿದೆಯಾದರೆ ಈ ನಿಶ್ಚಯವು ಸುಳ್ಳಾಗಿ ಪರಿಣಮಿಸುವುದು. ನಿನ್ನನ್ನು ನಿನ್ನ ಪೂರ್ವವಾಸನೆಯು ಬಲಪೂರ್ವಕವಾಗಿ ಯುದ್ಧದಲ್ಲಿ ಪ್ರವರ್ತಿಸುವಂತೆ ಮಾಡುತ್ತದೆ. ಅದು ಹೇಗೆಂದರೆ ನಿನ್ನ ಕ್ಷತ್ರಿಯ ಪ್ರವೃತ್ತಿಯೇ ನಿನ್ನಿಂದ ಈ ಕೆಲಸವನ್ನು ಮಾಡಿಸುತ್ತದೆ. ಎಲೈ ಕೌಂತೇಯನೇ! ಕ್ಷತ್ರಿಯ ಜಾತಿಗೆ ಸ್ವಭಾವಜನ್ಯವಾದ ಗುಣವು ಶೌರ್ಯವು. ಈ ಶೌರ್ಯವೆಂಬ ಕರ್ಮಬಂಧನದಲ್ಲಿ ಕಟ್ಟಲ್ಪಟ್ಟಿರುವ ನೀನು ಮೋಹದಿಂದ ಅಂದರೆ ಅಜ್ಞಾನವಶದಿಂದ ಈ ಯುದ್ಧವನ್ನು ಮಾಡಲು ಇಷ್ಟಪಡದೆ ಇದ್ದರೂ ಕೂಡ ನಿನ್ನ ಕ್ಷತ್ರಿಯವರ್ಣಸ್ವಭಾವದಿಂದ ವಿವಶನಾಗಿ ನೀನು ಅದನ್ನು ಮಾಡಿಯೇ ತೀರುವೆ. ಇತರರು ನಿನ್ನನ್ನು ಅವಮಾನ ಪಡಿಸುವುದನ್ನು ನೀನು ಸಹಿಸಿಕೊಳ್ಳಲಾರದವನಾಗಿ ನೀನಾಗಿಯೇ ಯುದ್ಧವನ್ನು ಮಾಡಲು ಪ್ರವರ್ತಿಸುತ್ತೀಯೆ. ಆದ್ದರಿಂದ ನಿನ್ನ ವರ್ಣಕ್ಕೆ ಸಹಜವಾದ ಈ ಧರ್ಮಯುದ್ಧವನ್ನು ಭಗವದಾರಾಧನ ರೂಪವಾಗಿ ಆಚರಿಸು ಎಂಬುದೇ ಅರ್ಜುನನಿಗೆ ಶ್ರೀ ಕೃಷ್ಣನ ಉಪದೇಶ.

## V ಗೀತಾಶಾಸ್ತ್ರದ ಸಾರ (ಶ್ಲೋಕ 61– 66)

ಇವುಗಳು ಗೀತೆಯ ಸಾರವಾದ ಶ್ಲೋಕಗಳಾಗಿರುವುದರಿಂದ ಇವುಗಳನ್ನು ಸ್ವಲ್ಪ ವಿಸ್ತಾರವಾಗಿ ವಿವರಿಸಿದೆ.

### 1. ಪ್ರಕೃತಿಯ ಬಂಧನ ಮತ್ತು ಅದರಿಂದ ಮುಕ್ತಿಯನ್ನು ಹೊಂದಲು ಭಗವಂತನಲ್ಲಿ ಶರಣಾಗತಿಯೇ ಉಪಾಯ (ಶ್ಲೋಕಗಳು 61–63)

ಸಮಸ್ತ ಪ್ರಾಣಿಗಳೂ ಸರ್ವೇಶ್ವರನಾದ ಪರಮಾತ್ಮನಿಂದ ಅವರವರ ಪೂರ್ವಕರ್ಮಗಳಿಗೆ ಅನುಸಾರವಾಗಿ ನಿಯಮಿಸಲ್ಪಟ್ಟಿದ್ದಾರೆ ಎಂಬುದನ್ನು ಮುಂದೆ ತಿಳಿಸುತ್ತಾನೆ.

**ಶ್ಲೋಕ 61 :ಈಶ್ವರಸ್ಸರ್ವಭೂತಾನಾಂ ಹೃದ್ದೇಶೇ ಅರ್ಜುನ ತಿಷ್ಠತಿ।**

**ಭ್ರಾಮಯನ್ ಸರ್ವಭೂತಾನಿ ಯಂತ್ರಾ ರೂಢಾನಿ ಮಾಯಯಾ ॥**

ಅಂದರೆ ಪರಮಾತ್ಮನು ಸರ್ವ ಪ್ರಾಣಿಗಳ ಹೃದಯದಲ್ಲಿದ್ದುಕೊಂಡು ಪ್ರಕೃತಿ ಎಂಬ ಯಂತ್ರದಲ್ಲಿರುವ ಅವುಗಳೆಲ್ಲವನ್ನೂ ತನ್ನ ಮಾಯೆಯಿಂದ ಸುತ್ತಿಸುತ್ತಿರುವನು. ವಾಸುದೇವನಾದ ಪರಮಾತ್ಮನು ಎಲ್ಲಾ ಪ್ರಾಣಿಗಳ ಹೃದಯದಲ್ಲಿದ್ದುಕೊಂಡು ತನ್ನ ಮಾಯೆಯಿಂದ ತನ್ನಿಂದಲೇ ಸೃಷ್ಟಿಸಲ್ಪಟ್ಟ ದೇಹೇಂದ್ರಿಯಗಳಿಂದ ಕೂಡಿರುವ ಪ್ರಕೃತಿ ಎಂಬ ಯಂತ್ರದಲ್ಲಿ ಸಿಕ್ಕಿಕೊಂಡಿರುವ ಎಲ್ಲಾ ಭೂತಗಳನ್ನೂ ತನ್ನಿಂದ ಸೃಷ್ಟಿಸಲ್ಪಟ್ಟ ಸತ್ವ, ರಜಸ್ತಮೋಗುಣಮಯವಾದ ಮಾಯೆಯಿಂದ, ಆಯಾ ಪ್ರಾಣಿಗಳಲ್ಲಿ ಇರುವ ಸತ್ವಾದಿ ಗುಣಗಳಿಗೆ ಅನುಸಾರವಾಗಿ ಸುತ್ತಿಸುತ್ತಾ ಇದ್ದಾನೆ. ಆದ್ದರಿಂದ ಸಮಸ್ತ ಜೀವಿಗಳೂ ಈ ರೀತಿಯಾಗಿ ಅವರವರ ಪೂರ್ವಗುಣಗಳಿಗೆ ಅನುಗುಣವಾಗಿ ಸರ್ವೇಶ್ವರನಿಂದ ಪ್ರಕೃತಿಯಲ್ಲಿ ನಿಯಮಿಸಲ್ಪಟ್ಟು ವರ್ತಿಸುತ್ತಿರುವುದರಿಂದ, ತ್ರಿಗುಣಗಳಿಂದ ಕೂಡಿದ ಈ ಪ್ರಕೃತಿ ಸಂಬಂಧದಿಂದ ಮುಕ್ತರಾಗಿ ತಾವೇ ಸ್ವತಂತ್ರವಾಗಿ ಏನನ್ನೂ ಮಾಡಲಾರರು. ಇದನ್ನೇ ಹಿಂದೆ ಏಳನೆಯ ಅಧ್ಯಾಯದಲ್ಲಿ "ದೈವೀ ಹ್ಯೇಷಾ ಗುಣಮಯೀ ಮಮಮಾಯಾ ದುರತ್ಯಯಾ" ಅಂದರೆ ಪರಮಾತ್ಮನಿಂದ ಉಂಟಾಗಿರುವ ತ್ರಿಗುಣಗಳಿಂದ ಕೂಡಿರುವ ಈ ಪ್ರಕೃತಿ ಎಂಬ ಮಾಯೆಯನ್ನು ದಾಟುವುದು ಬಹಳ ಕಷ್ಟವೆಂದು ಹೇಳಿದ್ದಾನೆ.

ಆದರೆ "**ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂತರಂತಿತೇ**" ಅಂದರೆ ಈ ಮಾಯೆಯನ್ನು ದಾಟಲು ಒಂದು ಉಪಾಯವು ಉಂಟು. ಅದೇನೆಂದರೆ ಭಗವಂತನಲ್ಲಿ ಶರಣಾಗತಿ ಎಂದು ಅಲ್ಲಿ ತಿಳಿಸಿದ್ದಾನೆ. ಅದನ್ನೇ ಮತ್ತೆ ಇಲ್ಲಿ ಮುಂದಿನ ಶ್ಲೋಕದಲ್ಲಿ ವಿವರಿಸಿ ತಿಳಿಸಿದ್ದಾನೆ.

**ಶ್ಲೋಕ 62 :ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ।**

**ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಂ ॥**

ಅಂದರೆ ಎಲ್ಲರೂ ಹೀಗೆ ತ್ರಿಗುಣ ಮಯಿಯಾದ ಪ್ರಕೃತಿರೂಪವಾದ ಪರಮಾತ್ಮನ ಮಾಯೆಗೆ ಅಧೀನರಾಗಿರುವುದರಿಂದ ಸರ್ವಪ್ರಕಾರದಲ್ಲೂ ಆ ಪರಮಾತ್ಮನನ್ನೇ ಶರಣು ಹೊಂದಿದವನಾಗು. ಆಗ ಅವನ ಅನುಗ್ರಹದಿಂದ ನೀನು ಪರಮ ಶಾಂತಿಯನ್ನೂ ಶಾಶ್ವತವಾದ ಸ್ಥಾನವನ್ನೂ ಹೊಂದುವೆಯೆಂದು ಶ್ರೀ ಕೃಷ್ಣನು ಉಪದೇಶ ಮಾಡಿದ್ದಾನೆ.

ಅರ್ಜುನ! ನಿನಗೆ ಮೋಕ್ಷವನ್ನು ಪಡೆಯಲು ಅತ್ಯವಶ್ಯಕವಾದ, ರಹಸ್ಯಗಳಿಗಿಂತಲೂ ರಹಸ್ಯವಾದ ಜ್ಞಾನವನ್ನು ಉಪದೇಶಿಸಿದ್ದೇನೆ. ಅಲ್ಲದೆ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗಗಳ ವಿಷಯವನ್ನು ಎಲ್ಲವನ್ನೂ ತಿಳಿಸಿದ್ದೇನೆ. ಇವೆಲ್ಲವನ್ನೂ ಸಮಗ್ರವಾಗಿ ಆಲೋಚಿಸಿ, ವಿಮರ್ಶಿಸಿ ನಿನಗೆ ಯಾವುದನ್ನು ಮಾಡಲು ಇಷ್ಟವೋ ಅದನ್ನು ಆಚರಿಸು ಎಂದು ಅರ್ಜುನನಿಗೆ ಶ್ರೀಕೃಷ್ಣನು ತಿಳಿಸಿದ್ದಾನೆ.

**2. ಭಗವತ್ಪ್ರಾಪ್ತಿಗೆ ಭಕ್ತಿಯೋಗವೇ ಉಪಾಯ – ಭಕ್ತಿಯೋಗಕ್ಕೆ ಅಡ್ಡಿಯಾಗಿರುವ ಪಾಪ ನಿವಾರಣೆಗೆ ಭಗವಂತನಲ್ಲಿ ಶರಣಾಗತಿಯೇ ಉಪಾಯ ಎಂಬ ಭಗವಂತನ ಚರಮ ಸಂದೇಶ (ಶ್ಲೋಕಗಳು 64-66)**

"ಅರ್ಜುನ! ನೀನು ನನಗೆ ಅತ್ಯಂತ ಪ್ರಿಯನೂ ಸ್ನೇಹಿತನೂ ಆಗಿರುವುದರಿಂದ ನಿನಗೆ ಹಿತವನ್ನು ಹೇಳುತ್ತೇನೆ". ಎಂದು ಒಂಭತ್ತನೇ ಅಧ್ಯಾಯದಲ್ಲಿ ಶ್ರೀಕೃಷ್ಣ ಪರಮಾತ್ಮನು **'ಇದಂತುತೇ ಗುಹ್ಯತಮಂ ಪ್ರವಕ್ಷ್ಯಾಮಿ'** ಎಂದು ಭಕ್ತಿಯೋಗದ ಸಾರವನ್ನು ತಿಳಿಸಿದ್ದಾನೆ. ಮತ್ತೆ ಹದಿನೆಂಟನೇ ಅಧ್ಯಾಯದಲ್ಲಿ ಭಕ್ತಿಯೋಗವನ್ನೂ ಶರಣಾಗತಿ ಯೋಗವನ್ನೂ ವಿವರಿಸಿ ತಿಳಿಸುತ್ತಾನೆ.

**ಮನ್ಮನಾಭವ ಮದ್ಭಕ್ತೋ ಮದ್ಯಾಜೀಮಾಂ ನಮಸ್ಕುರು ।**
**ಮಾಮೇವೈಷ್ಯಸಿ ಸತ್ಯಂತೇ ಪ್ರತಿಜಾನೇ ಪ್ರಿಯೋऽಸಿಮೇ ॥ (ಶ್ಲೋಕ 65)**

**ಮನ್ಮನಾಭವ** :–ನನ್ನಲ್ಲೇ ನೆಟ್ಟ ಮನಸ್ಸುಳ್ಳವನಾಗಿ ಇರು ಅಂದರೆ ನನ್ನನ್ನು ಸರ್ವದಾ ಸ್ಮರಿಸುತ್ತಾ ಇರು.

**ಮದ್ಭಕ್ತಃ** :– ಆ ಸ್ಮರಣೆಯು ನನ್ನಲ್ಲಿ ಅತ್ಯಂತ ಪ್ರೀತಿಯಿಂದ ಕೂಡಿದ್ದಾಗಿರಲಿ. ಅಂದರೆ ನನ್ನಲ್ಲಿ ಭಕ್ತಿಹೊಂದಿ ನನ್ನನ್ನು ನಿರಂತರ ತೈಲಧಾರೆಯಂತೆ ಅವಿಚ್ಛಿನ್ನವಾಗಿ ಪ್ರೀತಿಯಿಂದ ಸ್ಮರಿಸುವವನಾಗು.

**ಮದ್ಯಾಜೀ**:– ನನ್ನನ್ನು ಪ್ರೀತಿಯಿಂದ ಪೂಜಿಸುವವನಾಗು. ನಿನ್ನ ಕರ್ತವ್ಯ ಕರ್ಮಗಳನ್ನು ನನ್ನ ಕೈಂಕರ್ಯ, ಪೂಜೆ, ಸೇವೆಯೆಂಬ ಭಾವನೆಯನ್ನು ಹೊಂದಿ ಪ್ರೀತಿಯಿಂದ ಮಾಡುವವನಾಗು. ನಿರಂತರ ನನ್ನ ಕೈಂಕರ್ಯಗಳನ್ನು ಪ್ರೀತಿಯಿಂದ ಮಾಡುವವನಾಗು.

**ಮಾಂ ನಮಸ್ಕುರು** :– ನನ್ನನ್ನು ಪ್ರೀತಿಯಿಂದ ನಮಸ್ಕರಿಸುವವನಾಗು.

**"ಮಾಮೇ ವೈಷ್ಯಸಿ ಸತ್ಯಂತೇ ಪ್ರತಿಜಾನೇ ಪ್ರಿಯೋಽಸಿಮೇ"** – ಅಂದರೆ "ನನ್ನನ್ನು ಪ್ರೀತಿಯಿಂದ ಸ್ಮರಿಸಿ, ಪೂಜಿಸುವ ನೀನು ನನ್ನನ್ನು ಸೇರುವೆ. ನೀನು ನನಗೆ ಪ್ರಿಯನಾಗಿರುವುದರಿಂದ ನಾನೇ ನೀನು ನನ್ನನ್ನು ಹೊಂದುವಂತೆ ಮಾಡುವೆನು. ಇದು ಸತ್ಯವಾದ ಮಾತು" ಎಂದು ಶ್ರೀಕೃಷ್ಣ ಪರಮಾತ್ಮನು ಹೇಳಿದ್ದಾನೆ. "ಯಾರಿಗೆ ನನ್ನಲ್ಲಿ ಅತ್ಯಂತ ಪ್ರೀತಿಯಿದೆಯೋ ಅವನ ಮೇಲೆ ನನಗೂ ಅತ್ಯಂತ ಪ್ರೀತಿ ಇದೆ. ಆದ್ದರಿಂದ ನನ್ನಲ್ಲಿ ಅತ್ಯಂತ ಪ್ರೀತಿ ಹೊಂದಿರುವ ನನ್ನ ಪರಮ ಭಕ್ತನಾದ ನಿನ್ನ ಮೇಲೆ ನನಗೂ ಅತ್ಯಂತ ಪ್ರೀತಿ ಉಂಟಾಗಿ ನಿನ್ನ ಅಗಲಿಕೆಯನ್ನು ಸಹಿಸಲಾರದವನಾಗಿ ನಾನೇ ನಿನ್ನನ್ನು ಅನುಗ್ರಹಿಸಿ ನೀನೇ ನನ್ನನ್ನು ಹೊಂದುವಂತೆ ಮಾಡುವೆನು. ಇದು ಸತ್ಯವಾದ ಮಾತು" ಎಂದು ಇಲ್ಲಿ ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಭರವಸೆ ನೀಡಿದ್ದಾನೆ.

ಇದು ಕೇವಲ ಅರ್ಜುನನಿಗೆ ಮಾತ್ರವಲ್ಲದೆ ತನ್ನಲ್ಲಿ ಶರಣಾಗುವ ಭಕ್ತರಿಗೆಲ್ಲಾ ಪರಮಾತ್ಮನು ನೀಡಿರುವ ಭರವಸೆಯಾಗಿದೆ.

**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂವ್ರಜ ।**
**ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ ॥** (ಶ್ಲೋ.66)

ಅಂದರೆ ಸರ್ವಧರ್ಮಗಳನ್ನೂ ಪರಿತ್ಯಾಗ ಮಾಡಿ ನನ್ನೊಬ್ಬನನ್ನೇ ಶರಣು ಹೊಂದು. ನಾನು ನಿನ್ನನ್ನು ಸಮಸ್ತ ಪಾಪಗಳಿಂದ ಮುಕ್ತನನ್ನಾಗಿ ಮಾಡುತ್ತೇನೆ ಎಂದು ಈ ಶ್ಲೋಕದಲ್ಲಿ ಶ್ರೀಕೃಷ್ಣಪರಮಾತ್ಮನು ಉಪದೇಶ ನೀಡಿದ್ದಾನೆ. ಇದು ಶ್ರೀ ಮದ್ಭಗವದ್ಗೀತೆಯಲ್ಲಿ ಬಹಳ ಮುಖ್ಯವಾದ ಶ್ಲೋಕವಾಗಿದೆ. ಗೀತಾಸಾರವೇ ಇದರಲ್ಲಿ ಅಡಗಿದೆ. ಮುಖ್ಯವಾಗಿ ಶರಣಾಗತಿ ಯೋಗವು ಇದರಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ. ಶರಣಾಗತನಾದ ಭಕ್ತನು ಅನುಷ್ಠಿಸಬೇಕಾದ ಎರಡು ಮುಖ್ಯವಾದ ಅಭ್ಯಾಸಗಳೂ ಮತ್ತು ಪರಮಾತ್ಮನು ಶರಣಾಗತನಾದ ಭಕ್ತನನ್ನು ಅನುಗ್ರಹಿಸುವ ಭರವಸೆಯೂ ಇದರಲ್ಲಿ ತಿಳಿಸಲ್ಪಟ್ಟಿದೆ.

**ಸರ್ವಧರ್ಮಾನ್ ಪರಿತ್ಯಜ್ಯ** :- ಸರ್ವಧರ್ಮಗಳ ಪರಿತ್ಯಾಗ –ಸರ್ವಧರ್ಮ ಗಳನ್ನೂ ಸಂಪೂರ್ಣವಾಗಿ ತ್ಯಜಿಸು ಎಂದು ಶ್ರೀಕೃಷ್ಣನು ಉಪದೇಶ ನೀಡಿದ್ದಾನೆ. "ಸರ್ವಧರ್ಮಾನ್" ಎಂಬ ಪದಕ್ಕೆ ಶ್ರೀರಾಮಾನುಜಾಚಾರ್ಯರು ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಮುಂತಾದ ಸಮಸ್ತ ಧರ್ಮಗಳನ್ನೂ ಎಂದು ಅರ್ಥ ತಿಳಿಸಿದ್ದಾರೆ. ಗೀತೆಯಲ್ಲಿ ಇಲ್ಲಿಯವರೆಗೆ ಶ್ರೀಕೃಷ್ಣನು ಕರ್ಮ-ಜ್ಞಾನ, ಭಕ್ತಿಯೋಗಗಳನ್ನೂ ಕರ್ತವ್ಯ ಕರ್ಮಗಳನ್ನೂ ಎಲ್ಲವನ್ನೂ ಮಾಡಲೇಬೇಕು ಎಂದು

ಉಪದೇಶ ಮಾಡಿದ್ದಾನೆ. ಈಗ ಕೊನೆಯಲ್ಲಿ ಎಲ್ಲವನ್ನೂ ಸಂಪೂರ್ಣವಾಗಿ ತ್ಯಜಿಸು ಎಂದು ಹೇಳಿರುವುದು ಏಕೆ ಎಂಬ ಶಂಕೆಯು ಉಂಟಾಗುತ್ತದೆ. ಆದರೆ "ಪರಿತ್ಯಜ್ಯ" ಎಂಬಲ್ಲಿ ತ್ಯಾಗ ಶಬ್ದಕ್ಕೆ ಬಿಡುವುದು ಎಂಬುದು ಪದದ ಅರ್ಥವಾಗಿದ್ದರೂ ಈ ಅಧ್ಯಾಯದ ಆರಂಭದಲ್ಲೇ ಒಂಭತ್ತನೇ ಶ್ಲೋಕದಲ್ಲಿ "**ಸಂಗಂತ್ಯಕ್ತ್ವಾ ಫಲಂ ಚೈವ ಸತ್ಯಾಗಿ ಸಾತ್ತ್ವಿಕೋಮತಃ॥** ಅಂದರೆ ಕರ್ಮಗಳ ಸ್ವರೂಪತ್ಯಾಗವು ಸಾತ್ತ್ವಿಕ ತ್ಯಾಗವಾಗಲಾರದು; ಕರ್ಮಗಳ ಕರ್ತೃತ್ವ, ಫಲ, ಮಮತಾ ತ್ಯಾಗವೇ ಸಾತ್ವಿಕ ತ್ಯಾಗ ಎಂದು ಸ್ಪಷ್ಟವಾಗಿ ತಿಳಿಸಿದ್ದಾನೆ. ಕರ್ಮಗಳಲ್ಲಿ ಕರ್ತೃತ್ವ ತ್ಯಾಗ ಮಮತಾ ತ್ಯಾಗ ಮತ್ತು ಫಲತ್ಯಾಗ ಎಂಬ ತ್ರಿವಿಧ ತ್ಯಾಗಗಳಿವೆ. ಆದ್ದರಿಂದ ಇಲ್ಲಿ ಸರ್ವಧರ್ಮಾನ್ ಪರಿತ್ಯಜ್ಯ" ಎಂಬುದರ ಅರ್ಥವೇನೆಂದರೆ ಸಮಸ್ತ ಧರ್ಮಗಳನ್ನೂ ಅಂದರೆ ಕರ್ಮಜ್ಞಾನ, ಭಕ್ತಿಯೋಗಗಳನ್ನೂ, ಕರ್ತವ್ಯ ಕರ್ಮಗಳನ್ನೂ ಮಾಡಲೇಬೇಕು; ಆದರೆ ಅವುಗಳಲ್ಲಿ ಕರ್ತೃತ್ವ, ಫಲ ಮತ್ತು ಮಮತಾ ತ್ಯಾಗಗಳನ್ನೂ ಮಾಡಬೇಕು ಅಂದರೆ ಕರ್ಮಗಳ ಕರ್ತೃತ್ವ ಫಲ ಎಲ್ಲವನ್ನೂ ಭಗವಂತನಲ್ಲಿ ಆರೋಪಿಸಿ ಭಗವದಾರಾಧನರೂಪವಾಗಿ ಸಂತೋಷದಿಂದ ಕರ್ಮಗಳನ್ನು ಆಚರಿಸಬೇಕು. ಅವುಗಳಲ್ಲಿ ಮಮತೆ, ಕರ್ತೃತ್ವ, ಫಲಾಸಕ್ತಿಗಳನ್ನೂ, ಉಪಾಯತ್ವಬುದ್ಧಿಯನ್ನೂ ಸಂಪೂರ್ಣವಾಗಿ ತ್ಯಜಿಸಬೇಕು. ಅಂದರೆ ಕರ್ಮವೂ ಪರಮಾತ್ಮನದು, ಕರ್ಮವನ್ನು ತನ್ನ ಮೂಲಕ ಮಾಡಿಸುವವನೂ ಪರಮಾತ್ಮನೇ ಆದ್ದರಿಂದ ಕರ್ಮದ ಫಲವೂ ಅವನಿಗೆ ಸೇರತಕ್ಕದ್ದು ಎಂಬ ಭಾವನೆ ಹೊಂದಿ ಭಕ್ತಿಯಿಂದ ಕರ್ಮವನ್ನು ಚೆನ್ನಾಗಿ ಮಾಡಬೇಕು.

**ಮಾಂ ಏಕಂ ಶರಣಂ ವ್ರಜ:-** ಅಂದರೆ ನನ್ನೊಬ್ಬನನ್ನೇ ಶರಣು ಹೊಂದುವವನಾಗು. ಇದೇ ಭಗವಂತನಲ್ಲಿ ಶರಣಾಗತಿ. ಪರಮಾತ್ಮನೊಬ್ಬನಲ್ಲೇ ಶರಣಾಗತಿ ಮಾಡಬೇಕೆಂದು ಇಲ್ಲಿ ತಿಳಿಸಿದೆ. ಅಂದರೆ ಕರ್ಮಜ್ಞಾನ ಭಕ್ತಿಯೋಗಗಳ ಸಾಧನೆಗಳಾಗಲೀ ಶರಣಾಗತಿಯೇ ಆಗಲೀ ಯಾವುದೂ ಪರಮಾತ್ಮನನ್ನು ಹೊಂದಲು ಉಪಾಯಗಳಾಗಲಾರವು. ಅವನನ್ನು ಹೊಂದಲು ಅವನೇ ಉಪಾಯವಾಗಿರುವುದರಿಂದ "ಮಾಂ ಏಕಂ" ಅಂದರೆ ನನ್ನೊಬ್ಬನನ್ನೇ ಶರಣು ಹೊಂದು ಎಂದು ಉಪದೇಶ ನೀಡಿದ್ದಾನೆ. ಯೋಗಸಾಧನೆಗಳು ಪರಮಾತ್ಮನನ್ನು ಹೊಂದಲು ಸ್ವತಃ ಉಪಾಯವಾಗಲಾರವು. ಅವುಗಳನ್ನು ಆಚರಿಸಿದರೆ ಅದರಿಂದ ಪ್ರೀತನಾದ ಪರಮಾತ್ಮನು ಶರಣಾಗತರಾದ ಭಕ್ತರನ್ನು ನಿಶ್ಚಯವಾಗಿಯೂ ರಕ್ಷಿಸುತ್ತಾನೆ. ಆದ್ದರಿಂದ ಸಮಸ್ತ ಕರ್ಮಗಳಲ್ಲೂ ಕರ್ಮ, ಜ್ಞಾನ, ಭಕ್ತಿ ಮತ್ತು ಶರಣಾಗತಿ ಯೋಗ ಸಾಧನೆಗಳಲ್ಲೂ ಉಪಾಯತ್ವ ಬುದ್ಧಿಯನ್ನು ತ್ಯಜಿಸಿ- ಅಂದರೆ

ಅವುಗಳು ಪರಮಾತ್ಮನನ್ನು ಹೊಂದಲು ಉಪಾಯಗಳೆಂಬ ಭಾವನೆ ಹೊಂದದೆ ಭಗವತ್ಪ್ರೀತ್ಯರ್ಥವಾಗಿಯೂ ಭಗವದಾರಾಧನರೂಪವಾಗಿಯೂ ಅವುಗಳನ್ನಾಚರಿಸ ಬೇಕು ಎಂದು ಅಭಿಪ್ರಾಯ.

**ಅಹಂತ್ವಾಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ** :- ಅಂದರೆ ನಾನು ನಿನ್ನನ್ನು ಸಮಸ್ತ ಪಾಪಗಳಿಂದ ಮುಕ್ತನನ್ನಾಗಿ ಮಾಡುವೆನು ಎಂದು ಪರಮಾತ್ಮನು ಭರವಸೆ ನೀಡಿದ್ದಾನೆ. ಶರಣಾಗತರಾದ ಭಕ್ತರಿಗೆ ಭಗವದನುಗ್ರಹ ಪ್ರಾಪ್ತಿಯು ಉಂಟಾಗುತ್ತದೆ. ಚೇತನನು ಮಾಡಬೇಕಾದ ಕರ್ತವ್ಯಗಳನ್ನು ಮಾಡದೆ, ಮಾಡಬಾರದ ಅಕೃತ್ಯಗಳನ್ನು ಮಾಡಿ ಅನೇಕ ಪಾಪಗಳಿಂದ ಕೂಡಿದವನಾಗಿರುತ್ತಾನೆ. ಈ ಪಾಪಗಳು ಪರಮಾತ್ಮನನ್ನು ಹೊಂದಲು ಅಡ್ಡಿಯಾಗಿವೆ. ಭಗವತ್ಪ್ರಾಪ್ತಿಗೆ ವಿರೋಧಿ ಗಳಾಗಿರುವ, ಅನಾದಿ ಕಾಲದಿಂದ ಸಂಚಿತವಾಗಿರುವ ಈ ಅನಂತ ಪಾಪಗಳಿಂದ ಶರಣಾಗತನಾದ ಭಕ್ತನನ್ನು ಮುಕ್ತನಾಗುವಂತೆ ನಾನೇ ಮಾಡುವೆನು ಎಂದು ಶ್ರೀಕೃಷ್ಣನು ಹೇಳಿದ್ದಾನೆ. ಆದ್ದರಿಂದ ಪಾಪ ನಿವೃತ್ತಿಗಾಗಿ ಕೃಚ್ಛ್ರಚಾಂದ್ರಾಯಣ ಅಗ್ನಿಷ್ಟೋಮ ಮುಂತಾದ ಪ್ರಾಯಶ್ಚಿತ್ತ ರೂಪಗಳಾದ ಯಾವ ಧರ್ಮವನ್ನೂ ಅವನು ಆಚರಿಸಬೇಕಾಗಿಲ್ಲ. ಪರಮಾತ್ಮನಲ್ಲಿ ಶರಣಾಗತಿ ಮಾಡಿದರೆ ಸಾಕು. ಪರಮಾತ್ಮನೇ ಭಕ್ತಿ ಉಂಟಾಗುವುದಕ್ಕೆ ವಿರೋಧಿಗಳಾದ ಸರ್ವಪಾಪಗಳಿಂದ ಅವನನ್ನು ಮುಕ್ತನನ್ನಾಗಿ ಮಾಡುವುದಾಗಿ ತಿಳಿಸಿದ್ದಾನೆ.

**ಮಾಶುಚಃ** :- ಪ್ರಪನ್ನನಾದ ನೀನು ಶಾಂತನಾಗಿ, ನಿರ್ಭಯನಾಗಿ ಇರು. ಪರಮಾತ್ಮನಲ್ಲಿ ಶರಣಾಗತಿ ಮಾಡಿದ ಮೇಲೆ ಶರಣಾಗತನಾದ ಭಕ್ತನು ತನ್ನನ್ನು ಪರಮಾತ್ಮನು ರಕ್ಷಿಸಿಯೇ ರಕ್ಷಿಸುತ್ತಾನೆ. ಎಂಬ ದೃಢ ನಂಬಿಕೆಯನ್ನು ಹೊಂದಿ ಶಾಂತಚಿತ್ತನಾಗಿ ಇರಬೇಕು ಎಂಬುದೇ ಇಲ್ಲಿ ಶ್ರೀಕೃಷ್ಣ ಪರಮಾತ್ಮನು ನೀಡಿರುವ ಸಂದೇಶ. ಸರ್ವರೂ ಪರಮಾತ್ಮನಲ್ಲಿ ಶರಣಾಗಿ, ನಿಶ್ಚಿಂತರಾಗಿ ಸರ್ವಧರ್ಮಬದ್ಧವಾದ ಕರ್ತವ್ಯ, ಕರ್ಮಗಳನ್ನು ಮಾಡಬೇಕು ಎಂಬುದೇ ಈ ಶ್ಲೋಕದ ಸಾರಾರ್ಥ.

## VI ಭಗವದ್ಗೀತೆಯ ಫಲಶ್ರುತಿ (ಶ್ಲೋಕಗಳು 67 ರಿಂದ 78)

"ನಾನು ಉಪದೇಶಿಸಿರುವ ಪರಮಶ್ರೇಷ್ಠವಾದ ಈ ಗೀತಾಶಾಸ್ತ್ರವನ್ನು ತಪಸ್ಸನ್ನು ಆಚರಿಸದವನಿಗೂ, ನನ್ನಲ್ಲಿ ಭಕ್ತಿಶ್ರದ್ಧೆಗಳು ಇಲ್ಲದವನಿಗೂ ಹೇಳಕೂಡದು. ಅದರಲ್ಲೂ ನನ್ನಲ್ಲಿ ದ್ವೇಷ ಹೊಂದಿ ನನ್ನನ್ನು ನಿಂದಿಸುವವನಿಗಂತೂ ಹೇಳಲೇಕೂಡದು. ಈ ಪರಮ

ರಹಸ್ಯವನ್ನು ನನ್ನ ಭಕ್ತನಿಗೆ ಯಾವನು ಹೇಳುವನೋ ಅವನು ನನ್ನಲ್ಲಿ ಪರಮ ಭಕ್ತಿಯನ್ನು ಹೊಂದಿ ನನ್ನನ್ನೇ ಹೊಂದುವನು. ನಮ್ಮಿಬ್ಬರ ಧರ್ಮಯುಕ್ತವಾದ ಈ ಸಂವಾದವನ್ನು ಯಾವನು ಅಧ್ಯಯನ ಮಾಡುತ್ತಾನೆಯೋ ಅವನು ಜ್ಞಾನಯಜ್ಞದಿಂದ ನನ್ನನ್ನು ಆರಾಧಿಸುವನು. ಶ್ರದ್ಧೆಯಿಂದ ಇದನ್ನು ಕಿವಿಯಲ್ಲಿ ಕೇಳುವವನೂ ಕೂಡ ಇದರ ಶ್ರವಣ ಮಾತ್ರದಿಂದ ಭಕ್ತಿಗೆ ವಿರೋಧಿಗಳಾದ ಪಾಪಗಳನ್ನೆಲ್ಲಾ ಕಳೆದುಕೊಂಡು ನನ್ನ ಭಕ್ತರ ಸಮೂಹವನ್ನು ಸೇರುತ್ತಾನೆ. ಅರ್ಜುನ! ನಾನು ಇದುವರೆಗೆ ಹೇಳಿದ್ದನ್ನೆಲ್ಲಾ ಸಾವಧಾನವಾಗಿ ಗಮನವಿಟ್ಟು ಕೇಳಿದೆಯಾ? ಇದರಿಂದ ನಿನ್ನ ಅಜ್ಞಾನದಿಂದ ಉಂಟಾದ ಮೋಹವು ನಾಶವಾಯಿತೇ?" ಎಂದು ಶ್ರೀಕೃಷ್ಣ ಪರಮಾತ್ಮನು ಅರ್ಜುನನನ್ನು ಕೇಳುತ್ತಾನೆ.

ಅದಕ್ಕೆ ಅರ್ಜುನನು "ನಿನ್ನ ಅನುಗ್ರಹದಿಂದ ಅಜ್ಞಾನದಿಂದ ಕೂಡಿದ ನನ್ನ ಮೋಹವೆಲ್ಲಾ ನಾಶವಾಗಿ ತತ್ವಜ್ಞಾನವುಂಟಾಯಿತು. **"ಕರಿಷ್ಯೇ ವಚನಂ ತವ"** ಅಂದರೆ ನಿನ್ನ ಮಾತನ್ನು ನಡೆಸುತ್ತೇನೆ' ಎಂದು ಶ್ರೀ ಕೃಷ್ಣ ಪರಮಾತ್ಮನಿಗೆ ಹೇಳುತ್ತಾನೆ. ಇಲ್ಲಿ ಅರ್ಜುನನು "ನಿನ್ನ ಉಪದೇಶಗಳನ್ನು ಅರಿತೆನು" ಎಂದು ಹೇಳದೆ "ಕರಿಷ್ಯೇ ಅಂದರೆ ನಿನ್ನ ಮಾತನ್ನು ಕಾರ್ಯತಃ ಅನುಷ್ಠಿಸುವೆನು" ಎಂದು ಹೇಳುತ್ತಾನೆ. ಅನಂತರ ಅರ್ಜುನನು ಯುದ್ಧವನ್ನು ಮಾಡಲು ಸಿದ್ಧನಾಗುತ್ತಾನೆ. ಆದ್ದರಿಂದ ಗೀತೋಪದೇಶಗಳನ್ನು ಸುಮ್ಮನೇ ಅರಿತರೆ ಸಾಲದು. ಅವುಗಳನ್ನು ಕಾರ್ಯತಃ ಅನುಷ್ಠಿಸಲು ಪ್ರಯತ್ನಿಸಬೇಕು ಎಂಬ ಮುಖ್ಯವಾದ ಸಂದೇಶವು ಇಲ್ಲಿ ಸೂಚಕವಾಗಿದೆ.

ಕೊನೆಯಲ್ಲಿ ಸಂಜಯನು ಧೃತರಾಷ್ಟ್ರ ಮಹಾರಾಜನಿಗೆ ಹೀಗೆ ಹೇಳುತ್ತಾನೆ. "ನಾನು ವ್ಯಾಸರ ಅನುಗ್ರಹದಿಂದ ದಿವ್ಯ ಚಕ್ಷುಸ್ಸನ್ನೂ ದಿವ್ಯ ಶ್ರೋತೃವನ್ನೂ ಪಡೆದುಕೊಂಡವನಾಗಿ ಶ್ರೀಕೃಷ್ಣನೇ ಸಾಕ್ಷಾತ್ತಾಗಿ ಅರ್ಜುನನಿಗೆ ಉಪದೇಶ ಮಾಡಿದ ಗೀತಾಶಾಸ್ತ್ರವನ್ನು ಕೇಳಿದೆನು. ಅದ್ಭುತವೂ, ಪುಣ್ಯಕರವೂ ಆದ ಕೃಷ್ಣಾರ್ಜುನರ ಸಂವಾದವನ್ನು ಆಗಾಗ ನೆನೆಸಿಕೊಂಡು ಆನಂದ ಪಡುತ್ತಿರುವೆನು. ಅಷ್ಟು ಮಾತ್ರವಲ್ಲದೆ ನಾನು ದರ್ಶನ ಮಾಡಿದ ಅತ್ಯದ್ಭುತವಾದ ಪರಮಾತ್ಮನ ವಿಶ್ವರೂಪವನ್ನು ಮತ್ತೆ ಮತ್ತೆ ನೆನೆಸಿಕೊಂಡಾಗಲೆಲ್ಲಾ ನನ್ನ ಮನಸ್ಸಿಗೆ ಮಹತ್ತಾದ ಆಶ್ಚರ್ಯವೂ ಸಂತೋಷವೂ ಆಗುತ್ತಿದೆ. ಕೊನೆಯದಾಗಿ ನಾನು ಒಂದು ಮುಖ್ಯವಾದ ವಿಷಯವನ್ನು ಹೇಳುತ್ತೇನೆ.

**ಯತ್ರ ಯೋಗೇಶ್ವರ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ।**
**ತತ್ರಶ್ರೀರ್ವಿಜಯೋಭೂತಿಃ ಧ್ರುವಾನೀತಿರ್ಮತಿರ್ಮಮ ॥**

ಅಂದರೆ ಯಾರ ಪಕ್ಷದಲ್ಲಿ ಯೋಗೇಶ್ವರನಾದ ಕೃಷ್ಣನಿರುವನೋ, ಯಾರ ಪಕ್ಷದಲ್ಲಿ ಧನುರ್ಧರನಾದ ಶ್ರೀಕೃಷ್ಣಶರಣನಾದ ಪಾರ್ಥನಿರುವನೋ ಆ ಪಕ್ಷದಲ್ಲಿ ಲಕ್ಷ್ಮಿಯೂ, ಜಯವೂ, ಸರ್ವವಿಧವಾದ ಐಶ್ವರ್ಯವೂ, ನೀತಿ ನ್ಯಾಯಗಳೂ, ಎಲ್ಲವೂ ಶಾಶ್ವತವಾಗಿ ಇರುವುವೆಂಬುದು ನನ್ನ ದೃಢವಾದ ಅಭಿಪ್ರಾಯವು ಎಂದು ಸಂಜಯನು ಧೃತರಾಷ್ಟ್ರನಿಗೆ ಹೇಳುತ್ತಾನೆ.

ಈ ಶ್ಲೋಕದಿಂದ ಸಕಲ ಉಪನಿಷತ್ತುಗಳ ಸಾರವಾದ ಗೀತಾಶಾಸ್ತ್ರವು ಮುಕ್ತಾಯಗೊಂಡಿದೆ. ಇದೇ ಶ್ರೀಮದ್ಭಗವದ್ಗೀತೆಯ ಮಂಗಳ ಶ್ಲೋಕ. ಈ ಶ್ಲೋಕದಲ್ಲಿ ಧನುರ್ಧಾರಿಯಾದ ಅರ್ಜುನ ಎಂದು ಹೇಳಿದೆಯೇ ವಿನಃ ಧನುಸ್ಸನ್ನು ಕೆಳಗೆ ಬಿಸುಟು ತಾನು ಯುದ್ಧ ಮಾಡುವುದಿಲ್ಲವೆಂದು ಹೇಳಿ ಯುದ್ಧರಂಗದಲ್ಲಿ ತೆಪ್ಪಗೆ ಕುಳಿತ ಅರ್ಜುನ ಎಂದು ಹೇಳಿಲ್ಲ. ಆದ್ದರಿಂದ ಶ್ರೀಕೃಷ್ಣನ ಗೀತೋಪದೇಶದ ಅನುಷ್ಠಾನವೇ ಮುಖ್ಯ ಎಂಬ ಅಭಿಪ್ರಾಯವು ಇಲ್ಲಿ ಸೂಚಿತವಾಗಿದೆ. ಇಲ್ಲಿ ತಿಳಿಸಿರುವಂತೆ ಎಲ್ಲಿ ಸಮಸ್ತರಿಗೂ ನಿಯಾಮಕನಾದ ಯೋಗೇಶ್ವರನಾದ ಶ್ರೀಕೃಷ್ಣ ಪರಮಾತ್ಮನೇ ಗುರುವಾಗಿ ಇದ್ದಾನೆಯೋ ಮತ್ತು **"ಕರಿಷ್ಯೇ ವಚನಂ ತವ"** ಎಂದು ಹೇಳಿ ಯುದ್ಧ ಮಾಡಲು ಸಿದ್ಧನಾಗಿ ಧನುರ್ಧಾರಿಯಾಗಿ ಅರ್ಜುನನಂತಹ, ಗುರುವಿನ ಸಂದೇಶಗಳನ್ನು ಅನುಷ್ಠಿಸಲು ಸಿದ್ಧನಾಗಿರುವ ಶಿಷ್ಯನಿರುವನೋ ಅಲ್ಲಿ ಸಂಪತ್ತೂ, ನೀತಿಯೂ ಶಾಶ್ವತವಾಗಿ ನೆಲೆಗೊಳ್ಳುತ್ತದೆ. ಆದ್ದರಿಂದ ಸರ್ವರೂ ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಉಪದೇಶಿಸಿರುವಂತೆ ತಮ್ಮ ತಮ್ಮ ಕರ್ತವ್ಯ ಕರ್ಮಗಳನ್ನು ಕರ್ತೃತ್ವ ಮಮತಾ ಫಲತ್ಯಾಗಗಳೊಂದಿಗೆ ಭಗವದಾರಾಧನ ರೂಪವಾಗಿ ಭಕ್ತಿಯಿಂದಲೂ, ಸಂತೋಷದಿಂದಲೂ ಆಚರಿಸುತ್ತಾ, ಭಗವಂತನಲ್ಲಿ ಶರಣಾಗಿ ಬಾಳುತ್ತಾ, ಭಗವದನುಗ್ರಹವನ್ನು ಪಡೆಯಬೇಕೆಂಬುದೇ ಭಗವದ್ಗೀತೆಯ ಅತಿಮುಖ್ಯವಾದ ಸರ್ವೋದಯ ಸಂದೇಶ. ಇದು ಕೇವಲ ಅರ್ಜುನನಿಗೆ ಮಾತ್ರ ನೀಡಿರುವ ಸಂದೇಶವಲ್ಲ. ಅರ್ಜುನನಂತೆ ಜೀವನದಲ್ಲಿ ಧರ್ಮಾಧರ್ಮಗಳ ಗೊಂದಲದಲ್ಲಿ ಸಿಕ್ಕಿಕೊಂಡು ಮನಸ್ಸಿನಲ್ಲಿ ಕಳವಳಗೊಂಡು ದಾರಿಕಾಣದೆ ಪರಿತಪಿಸುತ್ತಿರುವವರಿಗೂ ಮತ್ತು ಸಮಸ್ತ ಮಾನವರಿಗೂ ಪರಮಾತ್ಮನು ನೀಡಿರುವ ಸಂದೇಶವಾಗಿದೆ.

ಈ ಹದಿನೆಂಟನೆಯ ಅಧ್ಯಾಯದ ಸಾರವನ್ನು 'ಶ್ರೀಯಾಮುನಾಚಾರ್ಯರು ಅವರ ಗೀತಾರ್ಥ ಸಂಗ್ರಹದ ಇಪ್ಪತ್ತೆರಡನೆಯ ಶ್ಲೋಕದಲ್ಲಿ ಹೀಗೆ ತಿಳಿಸಿದ್ದಾರೆ.

**ಈಶ್ವರೇ ಕರ್ತೃತಾಬುದ್ಧಿಃ ಸತ್ತ್ವೋಪಾದೇಯತಾನ್ತಿಮೇ ||**
**ಸ್ವಕರ್ಮ ಪರಿಣಾಮಶ್ಚಶಾಸ್ತ್ರಸಾರಾರ್ಥ ಉಚ್ಯತೇ ||**

ಸರ್ವೇಶ್ವರನಾದ ಪರಮಾತ್ಮನೇ ಸಮಸ್ತ ಕರ್ಮಗಳ ಕರ್ತೃವು ಎಂಬ ಅನುಸಂಧಾನವೂ; ತ್ರಿಗುಣಗಳಲ್ಲಿ ಸತ್ವಗುಣವೇ ಸ್ವೀಕರಿಸತಕ್ಕದ್ದು ಎಂದೂ; ವರ್ಣಾಶ್ರಮೋಚಿತವಾದ ಸ್ವಧರ್ಮಾಚರಣೆಯನ್ನು ಕರ್ತೃತ್ವ ಮಮತಾ ಫಲ ತ್ಯಾಗ ಪೂರ್ವಕವಾಗಿ ಭಗವದಾರಾಧನರೂಪವಾಗಿ ಆಚರಿಸುವುದರಿಂದ ಭಗವತ್ಪ್ರಾಪ್ತಿಯು ಲಭಿಸಬಲ್ಲದು ಎಂದೂ, ಭಗವದ್ಭಕ್ತಿಯೇ ಮೋಕ್ಷಕ್ಕೆ ಸಾಧನ ಮತ್ತು ಅದಕ್ಕೆ ಭಗವಂತನಲ್ಲಿ ಶರಣಾಗತಿಯೇ ಉಪಾಯ ಎಂಬ ಗೀತಾಶಾಸ್ತ್ರದ ಸಾರಾರ್ಥವೂ ಈ ಹದಿನೆಂಟನೆಯ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿದೆ.

ಗೀತೆಯ ಒಟ್ಟು ಹದಿನೆಂಟು ಅಧ್ಯಾಯಗಳ ಸಾರಾರ್ಥವನ್ನು ಶ್ರೀಯಾಮುನಾ ಚಾರ್ಯರು ಗೀತಾರ್ಥ ಸಂಗ್ರಹದ ಮೊದಲನೆಯ ಶ್ಲೋಕದಲ್ಲಿ ಹೀಗೆ ಹೇಳಿದ್ದಾರೆ.

**ಸ್ವಧರ್ಮ ಜ್ಞಾನ ವೈರಾಗ್ಯ ಸಾಧ್ಯ ಭಕ್ತ್ಯೈಕಗೋಚರಃ |**
**ನಾರಾಯಣಃ ಪರಂಬ್ರಹ್ಮ ಗೀತಾಶಾಸ್ತ್ರೇ ಸಮೀರಿತಃ ||**

ಸ್ವಧರ್ಮವಾದ ಕರ್ತವ್ಯ ಕರ್ಮಾನುಷ್ಠಾನ ರೂಪವಾದ ಕರ್ಮ ಯೋಗಾಭ್ಯಾಸದಿಂದಲೂ, ಆತ್ಮಜ್ಞಾನ ಪ್ರಾಪ್ತಿ ರೂಪವಾದ ಜ್ಞಾನ ಯೋಗಾಭ್ಯಾಸ ದಿಂದಲೂ ಮತ್ತು ವೈರಾಗ್ಯ ಅಭ್ಯಾಸಗಳಿಂದಲೂ ಸಾಧಿಸಲ್ಪಡುವ ಭಕ್ತಿಯೊಂದರಿಂದ ಮಾತ್ರವೇ ಸಾಕ್ಷಾತ್ಕರಿಸಲ್ಪಡತಕ್ಕವನಾದ ಪರಬ್ರಹ್ಮವಾದ ಶ್ರೀಮನ್ನಾರಾಯಣನು ಗೀತಾಶಾಸ್ತ್ರದಲ್ಲಿ ಬೋಧಿಸಲ್ಪಟ್ಟಿದ್ದಾನೆ- ಅಂದರೆ ಶ್ರೀಮನ್ನಾರಾಯಣನೇ ಪರಬ್ರಹ್ಮನು; ಅವನನ್ನು ಹೊಂದಲು ಕರ್ಮಯೋಗ, ಜ್ಞಾನಯೋಗ, ವೈರಾಗ್ಯಾದಿ ಅಭ್ಯಾಸಗಳಿಂದ ಪ್ರಾಪ್ತವಾಗುವ ಭಕ್ತಿ ಒಂದೇ ಉಪಾಯ ಅಥವಾ ಮಾರ್ಗ ಎಂಬುದೇ ಭಗವದ್ಗೀತೆಯ ಸಾರಾರ್ಥವು.

**ಪ್ರಪನ್ನ ಪಾರಿಜಾತಾಯ ತೋತ್ರವೇತ್ರೈಕಪಾಣಯೇ |**
**ಜ್ಞಾನಮುದ್ರಾಯ ಕೃಷ್ಣಾಯ ಗೀತಾಮೃತದುಹೇ ನಮಃ ||**
**ವಸುದೇವಸುತಂ ದೇವಂ ಕಂಸಚಾಣೂರಮರ್ದನಂ |**
**ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಮ್ ||**

**|| ಶ್ರೀ ಕೃಷ್ಣಾರ್ಪಣಮಸ್ತು ||**

ಭಾಗ - ಎರಡು

ಲೇಖಕಿ: ಶ್ರೀಮತಿ ಎಂ.ಡಿ. ವೇದವಲ್ಲಿ

# ಭಗವದ್ಗೀತೆಯಲ್ಲಿ ಶ್ರೀಕೃಷ್ಣನ ಸಂದೇಶ

## ಉಪೋದ್ಘಾತ

ಭಗವದ್ಗೀತೆ ಒಂದು ಪವಿತ್ರ ಗ್ರಂಥ. ಶ್ರೀ ವ್ಯಾಸಮಹರ್ಷಿಯು ಮಹಾಭಾರತದ ಮಧ್ಯದಲ್ಲಿ ಇದನ್ನು ಬಹಳ ಸ್ವಾರಸ್ಯವಾಗಿ ರಚಿಸಿದ್ದಾರೆ. ಅಣ್ಣತಮ್ಮಂದಿರಾದ ಪಾಂಡು ಮತ್ತು ಧೃತರಾಷ್ಟ್ರನ ಮಕ್ಕಳುಗಳಲ್ಲಿ ವೈಮನಸ್ಯವುಂಟಾಗಿ ಅದು ಕುರುಕ್ಷೇತ್ರದಲ್ಲಿ ನಡೆದ ಮಹಾಯುದ್ಧದಲ್ಲಿ ಕೊನೆಗೊಂಡಿತು. ಈ ಯುದ್ಧದಲ್ಲಿ ಕೊನೆಗೆ ದುಷ್ಟರಾದ ಕೌರವರಿಗೆ ಸೋಲು ಉಂಟಾಗಿ, ಧರ್ಮಿಷ್ಠರಾದ ಪಾಂಡವರಿಗೇ ಜಯಲಕ್ಷ್ಮಿ ಒಲಿದಳು. ಧರ್ಮಕ್ಕೆ ಜಯವುಂಟಾಯಿತು. ಇದೇ ಮಹಾಭಾರತದ ಕಥೆಯ ಸಾರಾಂಶ. ಈ ಕಥೆಯನ್ನು ವ್ಯಾಸರು ಹದಿನೆಂಟು ಪರ್ವಗಳಲ್ಲಿ ಬಹಳ ವಿಸ್ತಾರವಾಗಿಯೂ, ಸುಂದರವಾಗಿಯೂ ವರ್ಣಿಸಿದ್ದಾರೆ. ಇದರಲ್ಲಿ ಅನೇಕ ಕಡೆಗಳಲ್ಲಿ ಧರ್ಮಾಧರ್ಮಗಳ ವಿಚಾರವಾಗಿ ಚರ್ಚೆಗಳು ನಡೆದಿವೆ. ಕುರುಕ್ಷೇತ್ರ ರಣರಂಗದಲ್ಲಿ ಯುದ್ಧವು ನಡೆಯುವುದಕ್ಕೆ ಮೊದಲು ಅರ್ಜುನನಿಗೂ ಅವನಿಗೆ ಸಾರಥಿಯಾಗಿದ್ದ ಶ್ರೀಕೃಷ್ಣನಿಗೂ ನಡೆದ ಸಂವಾದವೇ ಭಗವದ್ಗೀತೆಯು. ರಣರಂಗದಲ್ಲಿ ಶ್ರೀಕೃಷ್ಣಾರ್ಜುನ ಸಂವಾದರೂಪದಲ್ಲಿ ಗೀತೆಯ ಅವತಾರವಾಗಿದೆ. ಭಗವಂತನಾದ ಶ್ರೀಕೃಷ್ಣನು ತನ್ನ ಸ್ವಂತ ವಾಕ್ಯಗಳಿಂದಲೇ ಅರ್ಜುನನಿಗೆ ಉಪದೇಶ ಮಾಡಿದಂತೆ ಶ್ರೀ ವ್ಯಾಸ ಮಹರ್ಷಿಯು ತಿಳಿಸಿರುವುದರಿಂದ ಇದಕ್ಕೆ ಭಗವದ್ಗೀತೆ ಎಂದು ಹೆಸರು ಬಂದಿದೆ.

ಧೃತರಾಷ್ಟ್ರನು ಹುಟ್ಟು ಕುರುಡ. ಅವನು ತನ್ನ ಮಕ್ಕಳಾದ ಕೌರವರೂ, ತನ್ನ ಅಣ್ಣ ಪಾಂಡುವಿನ ಮಕ್ಕಳಾದ ಪಾಂಡವರೂ ಯುದ್ಧದಲ್ಲಿ ಏನೇನು ಮಾಡಿದರು ಎಂಬ ವಿಷಯವನ್ನೆಲ್ಲಾ ತನಗೆ ತಿಳಿಸುವಂತೆ ಸಂಜಯನನ್ನು ಕೇಳುತ್ತಾನೆ. ಇಲ್ಲಿಂದ ಭಗವದ್ಗೀತೆ ಪ್ರಾರಂಭವಾಗಿದೆ. ಸಂಜಯನಿಗೆ ತಾನಿರುವಲ್ಲಿಂದಲೇ ಯುದ್ಧವನ್ನು ನೋಡಿ ವರ್ಣಿಸುವ ಅದ್ಭುತಶಕ್ತಿಯು ಅನುಗ್ರಹಿಸಲ್ಪಟ್ಟಿತ್ತೆಂದು ಮಹಾಕಾವ್ಯವು

ತಿಳಿಸುತ್ತದೆ. ಧೃತರಾಷ್ಟ್ರನ ಪ್ರಶ್ನೆಗೆ ಉತ್ತರವಾಗಿ ಸಂಜಯನು ರಣರಂಗದಲ್ಲಿ ನಡೆದ ಕೃಷ್ಣಾರ್ಜುನರ ಸಂವಾದವನ್ನು ವಿಸ್ತಾರವಾಗಿ ವರ್ಣಿಸುತ್ತಾನೆ.

**ಧೃತರಾಷ್ಟ್ರ ಉವಾಚ:**

**ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ।**
**ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ ॥**

ಇದೇ ಭಗವದ್ಗೀತೆಯ ಮೊಟ್ಟ ಮೊದಲನೆಯ ಶ್ಲೋಕ. ''ಎಲೈ ಸಂಜಯನೇ! ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಯುದ್ಧ ಮಾಡಬೇಕೆಂಬ ಇಚ್ಛೆಯಿಂದ ಬಂದು ಸೇರಿರುವ ನನ್ನ ಮಕ್ಕಳಾದ ಕೌರವರೂ ಮತ್ತು ಪಾಂಡವರು ಏನೇನು ಮಾಡಿದರು'' – ಎಂದು ಧೃತರಾಷ್ಟ್ರನು ಸಂಜಯನನ್ನು ಕೇಳುತ್ತಾನೆ.

ಈ ಶ್ಲೋಕದಲ್ಲಿ ಬಹಳ ಗಹನವಾದ ಅರ್ಥ ಅಡಗಿದೆ ಎಂದು ಮಹಾತ್ಮಾ ಗಾಂಧೀಯವರೇ ಮುಂತಾಗಿ ಅನೇಕ ಮಾನ್ಯ ಮಹಾತ್ಮರುಗಳು ತಿಳಿಸಿದ್ದಾರೆ. ಧರ್ಮ ಕ್ಷೇತ್ರ ಕುರುಕ್ಷೇತ್ರ ಎಂದರೆ ಮನುಷ್ಯರ ದೇಹ ಎಂದು ಅರ್ಥ ಮಾಡಿದ್ದಾರೆ. ಶರೀರ ಆತ್ಮನಿಗೆ ಧರ್ಮಾಚರಣೆ ಮಾಡುವ ಕ್ಷೇತ್ರವಾಗಿ ತನ್ಮೂಲಕ ಮೋಕ್ಷಕ್ಕೆ ದ್ವಾರವಾಗಿದೆ. ಆದ್ದರಿಂದ ಅದು ಧರ್ಮಕ್ಷೇತ್ರವಾಗಿದೆ. ಆದರೆ ಈ ಶರೀರವು ಅವನಿಗೆ ಪೂರ್ವಾರ್ಜಿತ ಕರ್ಮಫಲವಾಗಿ ಪ್ರಾಪ್ತವಾಗಿರುವುದರಿಂದ ಇದು ಕುರುಕ್ಷೇತ್ರವೂ ಆಗಿದೆ. ಕೌರವ ಎಂದರೆ ಆಸುರೀ ವೃತ್ತಿ ಎಂದೂ, ಪಾಂಡವ ಎಂದರೇ ದೈವೀವೃತ್ತಿ ಎಂದೂ ಅರ್ಥ, ಈ ದೇಹದಲ್ಲಿ ಒಂದು ಕಡೆ ಅಹಂಕಾರ ಮಮಕಾರಗಳಿಂದ ಕೂಡಿದ ಕೆಟ್ಟ ವೃತ್ತಿಗಳಿವೆ, ಮತ್ತೊಂದು ಕಡೆ ವಿವೇಕದಿಂದ ಕೂಡಿದ ಒಳ್ಳೆಯ ವೃತ್ತಿಗಳಿವೆ. ಈ ಎರಡು ವೃತ್ತಿಗಳಿಗೂ ಒಳಗೆ ಸರ್ವದಾ ಕಲಹ ನಡೆಯುತ್ತಲೇ ಇದೆ ಎಂಬುದು ಎಲ್ಲರಿಗೂ ಅನುಭವವೇದ್ಯವಾದ ವಿಚಾರ. ಆದರೆ ಆ ಆಂತರಿಕ ಕುರುಕ್ಷೇತ್ರದಲ್ಲಿ ಏನು ನಡೆಯುತ್ತಿದೆ, ಜಯವು ಯಾರಿಗೆ? ಎಂಬುದು ವಿವೇಕವೆಂಬ ಕಣ್ಣುಗಳನ್ನು ಕಳೆದುಕೊಂಡು ಜ್ಞಾನಾಂಧರಾಗಿರುವ ನಮಗೆ ತಿಳಿಯುವುದಿಲ್ಲ, ಧೃತರಾಷ್ಟ್ರ ಬಾಹ್ಯ ದೃಷ್ಟಿಯಿಲ್ಲದೆ ಅಂಧನಾಗಿದ್ದ. ಆದರೆ ನಾವು ಆಂತರಿಕವಾಗಿ ನಮ್ಮಲ್ಲಿ ನಡೆಯುವ ಧರ್ಮಾಧರ್ಮಗಳ ವಿಚಾರಗಳನ್ನು ಅವಲೋಕಿಸುವಷ್ಟು ವಿವೇಕವಿಲ್ಲದೆ ಜ್ಞಾನಾಂಧರಾಗಿದ್ದೇವೆ. ಆದ್ದರಿಂದ ನಮಗೆ ಸಂಜಯ ಎಂಬ ಸದ್ಗುರುವಿನ ಉಪದೇಶ ಅವಶ್ಯಕ ಎಂದೂ ಮತ್ತು ಸದ್ಗುರುವಿನ ಉಪದೇಶಗಳ ಮೂಲಕ ನಮ್ಮ ಆಂತರಿಕ

ಯುದ್ಧದಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ನಾವು ಅರಿತು, ವಿವೇಕದಬಲದಿಂದ ನಮ್ಮ ಕೆಟ್ಟ ವೃತ್ತಿಗಳನ್ನೆಲ್ಲಾ ನಾಶಮಾಡಿ, ಒಳ್ಳೆಯ ವೃತ್ತಿಗಳು ಜಯಹೊಂದುವಂತೆ ಮಾಡಬೇಕು ಎಂಬ ಅಭಿಪ್ರಾಯವು ಈ ಒಂದು ಶ್ಲೋಕದಲ್ಲಿ ಅಡಗಿದೆ ಎಂದು ತಿಳಿಸಿದ್ದಾರೆ.

ಗೀತೆಗೆ ಅನೇಕ ಮಹಾಪುರುಷರು ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಸಂಜಯನು ಕೌರವರಿಗೂ ಪಾಂಡವರಿಗೂ ನಡೆದ ಕುರುಕ್ಷೇತ್ರ ಯುದ್ಧವನ್ನು ಅಂಧನಾದ ಧೃತರಾಷ್ಟ್ರನಿಗೆ ವರ್ಣಿಸಿದಂತೆ, ಭಗವದ್ಗೀತೆಯ ಉಪದೇಶಗಳು ಜ್ಞಾನಾಂಧರಾದ ನಮಗೆ ನಮ್ಮೊಳಗೆ ನಡೆಯುತ್ತಿರುವ ಆಸುರೀ ದೈವೀ ವೃತ್ತಿಗಳ ಕಲಹವನ್ನು ನಮ್ಮ ಆಂತರಿಕ ಜ್ಞಾನಕ್ಕೆ ಗೋಚರಿಸುವಂತೆ ಮಾಡಿ, ಅದರಲ್ಲಿ ದೈವೀ ಪ್ರವೃತ್ತಿಗಳು ಜಯಹೊಂದಲು ನಾವು ಮಾಡಬೇಕಾದ ಉಪಾಯಗಳನ್ನು ತಿಳಿಸುತ್ತದೆ. ಆದ್ದರಿಂದ ಭಗವದ್ಗೀತೆಯು ಕೃಷ್ಣ ಪರಮಾತ್ಮನು ಕೇವಲ ಅರ್ಜುನನಿಗೆ ಮಾತ್ರ ಮಾಡಿದ ಸಂದೇಶವಾಗಿರದೆ ಸರ್ವದೇಶ, ಸರ್ವಕಾಲ, ಸರ್ವಾವಸ್ಥೆಗಳಲ್ಲಿರುವ ಸಮಸ್ತ ಮಾನವರಿಗೂ ಮಾಡಿದ ಉಪದೇಶವಾಗಿದೆ. ಆದ್ದರಿಂದ ಅನಾದಿಕಾಲದಿಂದಲೂ ಮಹಾಮಹಾಜ್ಞಾನಿಗಳೆಲ್ಲಾ ಈ ಮಹಾಗ್ರಂಥಕ್ಕೆ ವಿಚಾರಪೂರ್ಣ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಶ್ರೀ ಆದಿಶಂಕರಾಚಾರ್ಯರ, ಶ್ರೀ ರಾಮಾನುಜಾಚಾರ್ಯರ ಮತ್ತು ಶ್ರೀ ಮಧ್ವಾಚಾರ್ಯರ ವ್ಯಾಖ್ಯಾನಗಳು ಬಹಳ ಮುಖ್ಯವಾದವು. ಆಧುನಿಕ ಮಹಾತ್ಮರುಗಳಾದ ಮಹಾತ್ಮಗಾಂಧೀ, ಬಾಲಗಂಗಾಧರ ತಿಲಕ್, ಅರವಿಂದಘೋಷ್ ಮುಂತಾದ ಮಹಾತ್ಮರೂ ಭಗವದ್ಗೀತೆಗೆ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ತತ್ತ್ವ ವಿಚಾರದಲ್ಲಿ ಇವರುಗಳ ವ್ಯಾಖ್ಯಾನಗಳಲ್ಲಿ ವ್ಯತ್ಯಾಸಗಳು ಕಂಡುಬಂದರೂ, ಮನುಷ್ಯನ ನಡತೆಯ ವಿಷಯದಲ್ಲಿ ಎಲ್ಲರೂ ಏಕಾಭಿಪ್ರಾಯದ ಉಪದೇಶ ಮಾಡಿದ್ದಾರೆ.

## ಅರ್ಜುನ ವಿಷಾದ ಯೋಗ -

ಗೀತೆಯ ಮೊದಲನೆಯ ಅಧ್ಯಾಯದಲ್ಲಿ ವ್ಯಾಸಮಹರ್ಷಿಯು ಅರ್ಜುನನ ವಿಷಾದವನ್ನು ವರ್ಣಿಸಿದ್ದಾರೆ. ಇದರಿಂದ ಇದನ್ನು ಅರ್ಜುನ ವಿಷಾದ ಯೋಗವೆಂದು ಕರೆದಿದ್ದಾರೆ. ಗೀತಾಮೃತಪಾನಕ್ಕೆ ಮುಂಚೆ ಅರ್ಜುನನ ವಿಷಾದವನ್ನೂ ಅದಕ್ಕೆ ಕಾರಣವನ್ನೂ ತಿಳಿಯುವುದು ಅತ್ಯವಶ್ಯಕ. ಕೌರವರು

ಪಾಂಡವರು ತಮ್ಮತಮ್ಮ ಸೈನ್ಯಗಳೊಂದಿಗೆ ಕುರುಕ್ಷೇತ್ರ ರಣರಂಗದಲ್ಲಿ ಯುದ್ಧ ಮಾಡಲು ಸಿದ್ಧರಾಗಿ ನೆರೆದಿದ್ದಾರೆ. ಅರ್ಜುನನು ಸಹ ರಥಾರೂಢನಾಗಿ ಯುದ್ಧ ಮಾಡಲು ಸಿದ್ಧನಾಗಿದ್ದಾನೆ. ಶ್ರೀಕೃಷ್ಣ ಪರಮಾತ್ಮನೇ ಅವನಿಗೆ ಸಾರಥಿಯಾಗಿದ್ದಾನೆ. ರಥವು ಎರಡು ಸೈನ್ಯಗಳ ಮಧ್ಯೆ ಬಂದು ನಿಂತಿದೆ. ಆಗ ಅರ್ಜುನನು ಸುತ್ತಲೂ ನೋಡುತ್ತಾನೆ. ಅವನು ತನ್ನ ಮುಂದೆ ಕಂಡದ್ದೇನು? ತನ್ನ ತಾತ ಭೀಷ್ಮರು, ತನ್ನ ಆಚಾರ್ಯ ದ್ರೋಣರು ತನ್ನ ಮುಂದೆ ಯುದ್ಧಕ್ಕಾಗಿ ನಿಂತಿದ್ದಾರೆ. ಒಬ್ಬರನ್ನೊಬ್ಬರು ಯುದ್ಧದಲ್ಲಿ ಕೊಲ್ಲುವುದಕ್ಕಾಗಿ ಎರಡು ಸೈನ್ಯಗಳಲ್ಲೂ ಬಂದು ನೆರೆದಿದ್ದ ತನ್ನ ಪಿತೃಗಳನ್ನು ಪಿತಾಮಹರನ್ನು ಗುರುಗಳನ್ನು ಸೋದರಮಾವಂದಿರನ್ನು ಸಹೋದರರನ್ನು, ಮಕ್ಕಳನ್ನು, ಮೊಮ್ಮಕ್ಕಳನ್ನು, ಮಾವಂದಿರನ್ನು, ಸ್ನೇಹಿತರನ್ನು ನೋಡಿದನು. ಹೀಗೆ ಯುದ್ಧ ಮಾಡಲು ಸನ್ನದ್ಧರಾಗಿ ಬಂದು ನಿಂತಿರುವ ತನ್ನ ಬಂಧು ಬಾಂಧವರನ್ನು ನೋಡುತ್ತಲೇ ಯಾವುದೋ ಅವ್ಯಕ್ತ ಶಕ್ತಿಗೆ ಅಧೀನನಾದಂತಾಗಿ ಪ್ರೇಮದಿಂದಲೂ, ಕನಿಕರದಿಂದಲೂ ಅರ್ಜುನನ ಮನಸ್ಸು ಕರಗಿ ಹೋಗುತ್ತದೆ. ಹೃದಯದಲ್ಲಿ ದುಃಖ ಉಕ್ಕಿ ಬರುತ್ತದೆ. ಸ್ವಜನ ಹತ್ಯೆಯಿಂದ ಲಭಿಸಬಹುದಾದ ಈ ರಾಜ್ಯಾದಿಭೋಗ ತನಗೇಕೆ, ಅದು ಬೇಡವೇ ಬೇಡ. ಈ ಯುದ್ಧದಿಂದ ಸ್ವಜನರನ್ನು ಕೊಲ್ಲುವುದು ಮಾತ್ರವಲ್ಲದೆ ಕುಲಕ್ಷಯವುಂಟಾಗಿ, ಕುಲಧರ್ಮವು ನಾಶವಾಗುತ್ತದೆ. ತಾನು ಇಂತಹ ಪಾಪಕಾರ್ಯ ಮಾಡುವುದಕ್ಕೆ ಬದಲು ಸುಮ್ಮಗೆ ಕುಳಿತು ಯುದ್ಧದಲ್ಲಿ ಸತ್ತರೂ ಅದೇ ತನಗೆ ಕ್ಷೇಮಕರವೆಂದು ಹೇಳುತ್ತಾ "ಕೃಷ್ಣ ನಾನು ಯುದ್ಧ ಮಾಡುವುದಿಲ್ಲ" - ಎಂದು ಹೇಳಿ ರಣರಂಗದಲ್ಲಿ ಧನುರ್ಬಾಣಗಳನ್ನು ಕೆಳಗಿಸೆದು ಶೋಕಸಂವಿಪ್ನಮಾನಸನಾಗಿ ರಥದಲ್ಲಿ ಸುಮ್ಮನೆ ಕುಳಿತು ಬಿಡುತ್ತಾನೆ.

ಹೀಗೆ ಯುದ್ಧರಂಗದಲ್ಲಿ ಅತ್ಯಂತ ದುಃಖಾಕ್ರಾಂತನಾಗಿ ಕಣ್ಣೀರು ಹಾಕುತ್ತಾ ಕುಳಿತಿರುವ ಅರ್ಜುನನನ್ನು ನೋಡಿ ಕೃಷ್ಣನು ಅವನನ್ನು ಯುದ್ಧಮಾಡುವಂತೆ ಪ್ರೇರೇಪಿಸುತ್ತಾನೆ - "ಅರ್ಜುನಾ, ಇದೇನಿದು! ಇಂತಹ ವಿಷಮ ಪರಿಸ್ಥಿತಿಯಲ್ಲಿ ನಿನಗೆ ಕಳವಳವು ಎಲ್ಲಿಂದ ಬಂದಿತು? ಇಂತಹ ಅಪಕೀರ್ತಿತರುವಂತಹ ದುಃಖವು ವಿವೇಕಿಯಾದ ನಿನಗೆ ಯೋಗ್ಯವಲ್ಲ. ಭಯಗೊಂಡು ಹೇಡಿಯಾಗಬೇಡ. ವೀರನಾದ ನಿನಗೆ ಇದು ತರವಲ್ಲ. ನಿನ್ನ ಹೀನವಾದ ಈ ಹೃದಯ ದೌರ್ಬಲ್ಯವನ್ನು ಬಿಟ್ಟು ಧೈರ್ಯದಿಂದ ಯುದ್ಧ ಮಾಡು ಎದ್ದೇಳು" - ಎನ್ನುತ್ತಾನೆ.

ಕೃಷ್ಣನ ಉಪದೇಶ ವ್ಯಾಕುಲ ಚಿತ್ತನಾದ ಅರ್ಜುನನಿಗೆ ಹಿತವಾಗಿ ಕಾಣಲಿಲ್ಲ.

"ಕೃಷ್ಣಾ! ದೈನ್ಯತೆ ಕರುಣೆ ಮತ್ತು ಪಾಪ ಭಯ ಮುಂತಾದ ದೋಷಗಳ ಹೊಡೆತದಿಂದ ನಾನು ಕಳವಳಗೊಂಡಿದ್ದೇನೆ. ನಾನು ಹೇಗೆ ವರ್ತಿಸಬೇಕೋ ಅದೇ ನನಗೆ ತಿಳಿಯದಾಗಿದೆ. ಯುದ್ಧ ಮಾಡುವುದು ಸರಿಯೋ, ಮಾಡದೇ ಇರುವುದು ಸರಿಯೋ ಎಂಬುದು ತಿಳಿಯದೆ ಧರ್ಮ ಸಂಕಟಕ್ಕೆ ಒಳಗಾಗಿದ್ದೇನೆ. ಆದ್ದರಿಂದ ನಿನ್ನನ್ನು ಮೊರೆಹೊಕ್ಕಿದ್ದೇನೆ. ನಿನಗೆ ಶಿಷ್ಯನಾಗಿದ್ದೇನೆ. ನನಗೆ ನಿಶ್ಚಯವಾಗಿ ಯಾವುದು ಶ್ರೇಯಸ್ಕರವೋ ಅದನ್ನು ನೀನೇ ನನಗೆ ತಿಳಿಸು. ನಿನ್ನಲ್ಲಿ ಶರಣಾಗತನಾದ ನನ್ನನ್ನು ತಿದ್ದಿ ನನಗೆ ನೀನೇ ಉಪದೇಶ ಮಾಡು. ನೀನೇ ನನಗೆ ಮಾರ್ಗದರ್ಶಕನಾಗಬೇಕು ಎಂದು ಹೇಳುತ್ತಾ, ಗೋವಿಂದನೇ ನಾನಂತೂ ಯುದ್ಧ ಮಾಡುವುದಿಲ್ಲ" ಎಂದು ಮತ್ತೆ ಹೇಳುತ್ತಾ ಅರ್ಜುನ ತೆಪ್ಪಗೆ ಕುಳಿತುಬಿಟ್ಟನು.

ಇದನ್ನು ನೋಡಿದ ಕೃಷ್ಣ, ಎರಡು ಪಕ್ಷದವರೂ ರಣಕಹಳೆ ಮೊಳಗಿಸಿಯಾಗಿದೆ. ಇನ್ನೇನು ಯುದ್ಧ ಪ್ರಾರಂಭವಾಗಲಿದೆ. ಇಂತಹ ವಿಷಮ ಗಳಿಗೆಯಲ್ಲಿ ವೀರ ಅರ್ಜುನ ತಟಸ್ಥನಾಗಿ, ಶಸ್ತ್ರವನ್ನು ಬಿಸುಟ್ಟು ದುಃಖದಿಂದ ಕಣ್ಣೀರು ಹಾಕುತ್ತಾ ಕುಳಿತಿದ್ದಾನೆ. ಅರ್ಜುನ ಮಹಾವೀರ. ಅವನು ಯುದ್ಧಕ್ಕೆ ಹೆದರಿ ಹೇಡಿಯಂತೆ ಕುಳಿತವನೂ ಅಲ್ಲ. ಅಥವಾ ಅಹಿಂಸಾವಾದಿಯಾಗಿ ಯುದ್ಧವನ್ನೇ ಮಾಡಕೂಡದೆಂಬ ಧ್ಯೇಯದಿಂದ ಕುಳಿತವನೂ ಅಲ್ಲ. ಹಾಗಿದ್ದ ಪಕ್ಷಕ್ಕೆ ಅವನು ರಣರಂಗಕ್ಕೆ ಬರುತ್ತಿರಲಿಲ್ಲ. ಅವನಿಗೆ ಸ್ವಜನರನ್ನು ಕಂಡು ವ್ಯಾಮೋಹ ಉಂಟಾಯಿತು. ಆದ್ದರಿಂದ ತನ್ನ ಧೈರ್ಯವನ್ನು ಕಳೆದುಕೊಂಡವನಾಗಿ, ತನ್ನ ಕರ್ತವ್ಯವನ್ನು ಮರೆತು, ಅರ್ಜುನನು ಯುದ್ಧ ಮಾಡಲು ಹಿಂಜರಿದನು. ಮೋಹ ಪರವಶನಾದ ಅವನು ಧರ್ಮಾಧರ್ಮಗಳ ವಿಚಾರಗಳನ್ನು ಹೇಳುತ್ತಾ, ಅದರಿಂದ ತನ್ನ ವ್ಯಾಮೋಹವನ್ನು ಮರೆಮಾಡಿಕೊಂಡು ವಿವೇಕಿಯಂತೆ ಮಾತನಾಡುತ್ತಾನೆ.

ಹೀಗೆ ಒಂದಕ್ಕೊಂದು ಪರಸ್ಪರ ವಿರೋಧವಾದ ಗುಣಗಳಿಂದ ಕೂಡಿದ ಅರ್ಜುನನನ್ನು ನೋಡಿ ಕೃಷ್ಣನಿಗೆ ಸೋಜಿಗವಾಗಿ ತೋರಿತು. ಹೀಗೆ ಎರಡು ಸೈನ್ಯಗಳ ಮಧ್ಯೆ ದುಃಖಿತನಾಗಿರುವ ಮತ್ತು ಧರ್ಮವನ್ನು ತಿಳಿಯಲು ತನ್ನಲ್ಲಿ ಶರಣಾಗತನಾಗಿರುವ ಅರ್ಜುನನನ್ನು ಕುರಿತು, ಅವನ ಅಜ್ಞಾನವನ್ನು ನೋಡಿ ಪರಿಹಾಸದಿಂದ ನಗುತ್ತಿರುವನೋ ಎಂಬಂತೆ ಶ್ರೀ ಕೃಷ್ಣನು ಅವನಿಗೆ ಈ ರೀತಿ ಉಪದೇಶ ಮಾಡಲು ಪ್ರಾರಂಭಿಸುತ್ತಾನೆ.

*****

## ಗೀತೆಯ ಉಪದೇಶದ ಪ್ರಾರಂಭ

ಭಗವದ್ಗೀತೆಯ ಉಪದೇಶ ಎರಡನೆಯ ಅಧ್ಯಾಯದ ಹನ್ನೊಂದನೆಯ ಶ್ಲೋಕದಿಂದ ಪ್ರಾರಂಭವಾಗುತ್ತದೆ. ಅರ್ಜುನನಿಗೆ ಮೋಹನಾಶವಾಗಿ ಶಾಂತಿ ಲಭಿಸಬೇಕಾದರೆ ಅವನಿಗೆ ಮೊದಲು ಆತ್ಮಯಥಾತ್ಮಜ್ಞಾನ ಅಂದರೆ ಆತ್ಮನ ನಿಜ ಸ್ವರೂಪದ ಜ್ಞಾನ ಉಂಟಾಗಬೇಕು ಮತ್ತು ಆತ್ಮ ಯಥಾತ್ಮ ಜ್ಞಾನವನ್ನು ಹೊಂದಲು ಉಪಾಯವಾದ ಸ್ವಧರ್ಮವಾದ ಧರ್ಮಯುದ್ಧವನ್ನು ಫಲಾಸಕ್ತಿರಹಿತವಾಗಿ ಮಾಡುವ ಕರ್ಮಯೋಗದ ಜ್ಞಾನ ಉಂಟಾಗಬೇಕು. ಇವೆರಡು ಜ್ಞಾನಗಳೂ ಉದಯವಾಗದೆ ಅವನ ಮೋಹವು ನಾಶವಾಗುವುದಿಲ್ಲವೆಂದು ತಿಳಿದು ಪೂಜ್ಯನಾದ ಪರಮ ಪುರುಷನಾದ ಶ್ರೀಕೃಷ್ಣನಿಂದ ಅಧ್ಯಾತ್ಮ ಶಾಸ್ತ್ರವು ಪ್ರಾರಂಭಿಸಲ್ಪಟ್ಟಿತು. ಆತ್ಮ ಪರಮಾತ್ಮರ ನಿಜ ಸ್ವರೂಪವನ್ನು ಮತ್ತು ಅದನ್ನು ಹೊಂದಲು ಉಪಾಯಗಳಾದ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಮತ್ತು ಶರಣಾಗತಿ ಯೋಗಗಳ ವಿಚಾರವನ್ನು ತಿಳಿಸುವ ಉಪದೇಶವನ್ನು **"ನತ್ವೇವಾಹಂ"** ಎಂದು ಆರಂಭಿಸಿ **"ಮೋಕ್ಷಯಿಷ್ಯಾಮಿ ಮಾಶುಚಃ"** ಎನ್ನುವವರೆಗಿನ ಗೀತಾಶ್ಲೋಕಗಳಲ್ಲಿ ಶ್ರೀಕೃಷ್ಣನು ಉಪದೇಶ ಮಾಡಿದ್ದಾನೆ.

**ಶ್ರೀಕೃಷ್ಣ ಪರಮಾತ್ಮನು ಗೀತೆಯ ಮೂಲಕ ಸಮಸ್ತ ಮಾನವರಿಗೂ ಉಪದೇಶ ನೀಡಿದ್ದಾನೆ.** ಗೀತೆಯಲ್ಲಿ ಬೋಧಿಸಿರುವ ಉಪದೇಶವು ಅರ್ಜುನನಿಗೆ ಮಾತ್ರವಲ್ಲದೆ ಎಲ್ಲಾ ಮಾನವರಿಗೂ ಅನ್ವಯಿಸುವ ಉಪದೇಶವಾಗಿದೆ. ಅರ್ಜುನನಂತೆ ಮಾನವರೂ ಅನೇಕ ವೇಳೆ ಧರ್ಮಾಧರ್ಮಗಳ ತೊಡಕಿಗೆ ಸಿಕ್ಕಿ ದಾರಿಕಾಣದೆ ಬಹಳ ಕಷ್ಟಪಡುತ್ತಾರೆ. ಅಜ್ಞಾನ, ಬಡತನ, ಕಲಹ, ಸಾವು, ನೋವು, ರೋಗರುಜಿನಾದಿಗಳ ಬಲೆಗೆ ಸಿಕ್ಕಿ ಮಾನವನು ದುಃಖವನ್ನು ಅನುಭವಿಸುವ ಸಂದರ್ಭಗಳು ಅನೇಕವಾಗಿವೆ. ಇಂತಹ ವಿಷಮ ಪರಿಸ್ಥಿತಿಗಳಲ್ಲಿ ಶಾಂತಿ ಸಿಗದೆ, ದಾರಿಕಾಣದೆ ಮಾನವನು ಬಹಳವಾಗಿ ಪರಿತಪಿಸುತ್ತಾನೆ. ಇದರೊಂದಿಗೆ ಧರ್ಮಕ್ಷೇತ್ರವೂ, ಕುರುಕ್ಷೇತ್ರವೂ ಆದ ಅವನ ಹೃದಯದಲ್ಲಿ ಒಳ್ಳೆಯ ಮತ್ತು ಕೆಟ್ಟ ಪ್ರವೃತ್ತಿಗಳಿಗೆ ಕಲಹ ನಡೆಯುತ್ತಲೇ ಇರುತ್ತದೆ. ಆದರಿಂದ ಮಾನವರು ಅರ್ಜುನನಂತೆ ಧರ್ಮಾಧರ್ಮಗಳ ತೊಡಕಿಗೆ ಸಿಕ್ಕಿ ತಾವು ಮುಂದೆ ಏನು ಮಾಡಬೇಕೆಂಬುದು ತಿಳಿಯದೆ ಒದ್ದಾಡುತ್ತಾರೆ. ಅವಿವೇಕಿಯಾದ ಮಾನವನು

ಅಧರ್ಮದ ಬಲೆಗೆ ಸಿಕ್ಕಿ ಬಿದ್ದಾಗ ಅವನ ಕೆಟ್ಟ ಪ್ರವೃತ್ತಿಗಳು ಜಯಹೊಂದುತ್ತವೆ. ಆಗ ಅವನು ಧರ್ಮಾಧರ್ಮಗಳ ವಿಚಾರವಾಗಿ ತರ್ಕವಿತರ್ಕಗಳನ್ನು ಮಾಡಿ ತಾನು ಮಾಡುವುದೇ ಸರಿ ಎಂದು ವಾದ ಮಾಡಿ ತೀರ್ಮಾನಿಸಿಕೊಳ್ಳುವ ಪ್ರಸಂಗಗಳೂ ಅನೇಕವಾಗಿ ಉಂಟು. ಇಂತಹ ವಿಷಮ ಗಳಿಗೆಗಳಲ್ಲಿ ಮಾನವನು ಅವಿವೇಕಿಯಾಗಿ ಅಕಾರ್ಯಗಳಲ್ಲಿ ತೊಡಗದೆ ಗೀತಾಸುಧಾಪಾನ ಮಾಡಿ ವಿವೇಕ ಹೊಂದಿ ಸನ್ಮಾರ್ಗದಲ್ಲಿ ಪ್ರವರ್ತಿಸಲೆಂದು ವ್ಯಾಸಮಹರ್ಷಿಯು ಭಗವದ್ಗೀತೆಯ ಎರಡನೇ ಅಧ್ಯಾಯದ ಹನ್ನೆರಡನೆಯ ಶ್ಲೋಕದಿಂದ ಹಿಡಿದು ಹದಿನೆಂಟನೆಯ ಅಧ್ಯಾಯ ಪೂರ್ತಿ ಸರ್ವದೇಶ, ಸರ್ವಕಾಲ, ಸರ್ವಾವಸ್ಥೆಗಳಲ್ಲಿರುವ ಸಮಸ್ತ ಮಾನವರಿಗೂ ಉಪದೇಶ ನೀಡಿದ್ದಾರೆ.

## ಗೀತೆಯ ಸಂದೇಶದ ಸಾರಾಂಶ:

ಶ್ರೀಯಃಪತಿಯಾದ ಸರ್ವೇಶ್ವರನು ಪರಮಕಾರುಣಿಕನಾದುದರಿಂದ ನಮ್ಮಂತಹ ಸಂಸಾರಿಗಳೂ ಕೂಡ ನೋಡಿ ಆಶ್ರಯಿಸಿ ಉಜ್ಜೀವಿಸುವ ಹಾಗೆ ಸಕಲ ಮನುಜರ ಕಣ್ಣುಗಳಿಗೂ ಗೋಚರನಾಗಿ ಶ್ರೀಕೃಷ್ಣನಾಗಿ ಅವತರಿಸಿ, ಕಂಸನೇ ಮೊದಲಾದ ಸಕಲ ಅಸುರರ ಸಮೂಹವನ್ನು ನಿರಸನ ಮಾಡಿ, ಅಕ್ರೂರ ಮಾಲಾಕಾರ ಮೊದಲಾದವರನ್ನು ಪರಮಭಾಗವತರನ್ನಾಗಿ ಮಾಡಿದನೆಂದು ಶ್ರೀಕೃಷ್ಣನ ಮಹಿಮೆಯನ್ನು ಭಾಗವತ ಮಹಾಪುರಾಣದಲ್ಲಿ ವರ್ಣಿಸಿದ್ದಾರೆ. ಅದೇ ಶ್ರೀಕೃಷ್ಣನು ತನಗೆ ಪರಮ ಮಿತ್ರನೂ, ಬಂಧುವೂ, ಶಿಷ್ಯನೂ ಆದ ಅರ್ಜುನನನ್ನು ಯುದ್ಧ ಮಾಡುವಂತೆ ಪ್ರೇರೇಪಿಸುವ ವ್ಯಾಜದಿಂದ ಭಕ್ತಿ ಶರಣಾಗತಿ ಯೋಗಗಳನ್ನು ಲೋಕ ಉಜ್ಜೀವನಾರ್ಥವಾಗಿ ಭಗವದ್ಗೀತೆಯ ಮೂಲಕ ಪ್ರಚಾರಗೊಳಿಸಿದಂತೆ ಮಹಾಭಾರತದಲ್ಲಿ ವರ್ಣಿಸಿದೆ. ತನ್ನ ಸ್ವಂತ ಬಂಧು ಜನರೊಂದಿಗೂ, ಸ್ನೇಹಿತರೊಂದಿಗೂ, ಯುದ್ಧ ಮಾಡಬೇಕಾದ ಅಹಿತಕರವಾದ ಕರ್ತವ್ಯವನ್ನು ಮಾಡಲು ಹಿಂಜರಿದ ಅರ್ಜುನನ ಮನಸ್ಸಿನ ವಿಷಾದವನ್ನು ಹೋಗಲಾಡಿಸಲು ಶ್ರೀಕೃಷ್ಣನು ತತ್ತ್ವಶಾಸ್ತ್ರ ನೀತಿಶಾಸ್ತ್ರ ಮತ್ತು ಧರ್ಮಶಾಸ್ತ್ರಗಳನ್ನೂ, ಕರ್ಮ, ಜ್ಞಾನ, ಭಕ್ತಿ, ಶರಣಾಗತಿ ಯೋಗ ಸಾಧನೆಗಳನ್ನೂ, ಭಗವದ್ಗೀತೆಯಲ್ಲಿ ಉಪದೇಶ ಮಾಡಿದ್ದಾನೆ.

ಇದು ಕೇವಲ ಅರ್ಜುನನಿಗೆ ಮಾತ್ರ ಮಾಡಿದ ಉಪದೇಶವಾಗಿರದೆ ಸರ್ವರಿಗೂ ಮಾಡಿದ ಉಪದೇಶವಾಗಿದೆ. ಸಮಸ್ತ ಮಾನವರೂ ಕರ್ಮಯೋಗವಾಗಿ

ಅವರವರ ವರ್ಣಾಶ್ರಮ ಧರ್ಮಗಳ ಪ್ರಕಾರ ಕರ್ತವ್ಯ ಕರ್ಮಗಳನ್ನು ನಡೆಸಿ, ನಿರ್ಮಲವಾದ ಮನಸ್ಸನ್ನು ಹೊಂದಬೇಕು. ತದನಂತರ ಜ್ಞಾನಯೋಗದ ಮೂಲಕ ಆತ್ಮಸಾಕ್ಷಾತ್ಕಾರ ಸಿದ್ಧಿಯನ್ನು ಪಡೆಯಬೇಕು. ಮತ್ತು ತನ್ಮೂಲಕ ಅಪಾರವಾದ ಭಕ್ತಿಯಿಂದ ಅಂದರೆ ಅತಿ ಪ್ರೀತಿಯಿಂದಲೂ ಶ್ರದ್ಧೆಯಿಂದಲೂ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬೇಕು ಮತ್ತು ಕೊನೆಯದಾಗಿ ಅವನಲ್ಲಿ ಶರಣಾಗಿ ಅವನಲ್ಲಿ ಪ್ರಪತ್ತಿ ಮಾಡಿ ಅವನನ್ನು ಹೊಂದಬೇಕು ಎಂದು ಉಪದೇಶ ಮಾಡುವುದೇ ಗೀತೆಯ ಮುಖ್ಯ ಸಂದೇಶ.

ಭಗವಂತನಿಗೆ ದಾಸಭೂತನಾದ ಚೇತನನು ವಿಹಿತವಾದ ಧರ್ಮಾಚರಣೆ ಯಲ್ಲಿ ತೊಡಗಿ ಆ ಕರ್ಮಾನುಷ್ಠಾನದಿಂದ ನಿರ್ಮಲವಾದ ಮನಸ್ಸನ್ನು ಹೊಂದಿ, ಅದರಿಂದ ಉಂಟಾಗುವ ಸ್ವಸ್ವರೂಪ ಪರಸ್ವರೂಪಗಳ ಸಮ್ಯಕ್ ಜ್ಞಾನವನ್ನು ಪಡೆದು, ಅದರಿಂದ ಹುಟ್ಟುವ ಭಕ್ತಿ ಪ್ರಪತ್ತಿ ಯೋಗಗಳನ್ನು ಸಾಧಿಸಬೇಕು ಮತ್ತು ಈ ಭಕ್ತಿಯೋಗ ದಿಂದ ಸಾಧಿಸಲ್ಪಡುವವನು ಶ್ರೀ ಕೃಷ್ಣ ಪರಮಾತ್ಮನೇ ಎಂದು ಗೀತಾಶಾಸ್ತ್ರವು ತಿಳಿಸುತ್ತದೆ.

ಒಟ್ಟಿನಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಸರ್ವೇಶ್ವರನಾದ ಪರಮಪುರುಷನಾದ ತಾನೇ ಪರಬ್ರಹ್ಮನೆಂದೂ, ತನ್ನನ್ನು ಹೊಂದಲು ಭಕ್ತಿಯೋಗ ಪ್ರಪತ್ತಿಯೋಗಗಳೇ ಮಾರ್ಗವೆಂದೂ, ಅದನ್ನು ಸಾಧಿಸಲು ಕರ್ಮಯೋಗ, ಜ್ಞಾನಯೋಗಗಳೆರಡೂ ಅಂಗಗಳೆಂದೂ ಭಗವದ್ಗೀತೆಯಲ್ಲಿ ಹದಿನೆಂಟು ಅಧ್ಯಾಯಗಳಿಂದ ವಿವರಿಸಿ ತಿಳಿಸಿದ್ದಾನೆ.

ಭಗವದ್ಗೀತೆಯನ್ನು ಮೂರು ಷಟ್ಕಗಳಾಗಿ ವಿಭಾಗಿಸಿ ಅರ್ಥ ಹೇಳಿದ್ದಾರೆ. ಮೊದಲನೆಯ ಷಟ್ಕದಲ್ಲಿ ಅಂದರೆ ಒಂದರಿಂದ ಆರರವರೆಗಿನ ಮೊದಲನೆಯ ಆರು ಅಧ್ಯಾಯಗಳಲ್ಲಿ ಕರ್ಮಯೋಗ ಜ್ಞಾನಯೋಗ ನಿಷ್ಠೆಯಿಂದ ಕೂಡಿದ ಆತ್ಮಸಾಕ್ಷಾತ್ಕಾರವು ತಿಳಿಸಲ್ಪಟ್ಟಿದೆ. ಎರಡನೆಯ ಷಟ್ಕದಲ್ಲಿ ಅಂದರೆ ಏಳರಿಂದ ಹನ್ನೆರಡರವರೆಗಿನ ಆರು ಅಧ್ಯಾಯಗಳಲ್ಲಿ ಭಗವಂತನ ಯಥಾರ್ಥ ಸ್ವರೂಪವು ವರ್ಣಿಸಲ್ಪಟ್ಟಿದೆ ಮತ್ತು ಅದನ್ನು ಹೊಂದಲು ಮಾರ್ಗವಾದ ಕರ್ಮಯೋಗ ಜ್ಞಾನಯೋಗಗಳಿಂದ ಸಿದ್ಧಿಸುವ ಭಕ್ತಿಯೋಗವು ವರ್ಣಿಸಲ್ಪಟ್ಟಿದೆ. ಮೂರನೆಯ ಷಟ್ಕದಲ್ಲಿ ಅಂದರೆ ಹದಿಮೂರರಿಂದ ಹದಿನೆಂಟರವರೆಗಿನ ಆರು ಅಧ್ಯಾಯಗಳಲ್ಲಿ ಪ್ರಕೃತಿ ಪುರುಷರಿಂದ ಕೂಡಿದ ಜಗತ್ತಿನ ಸ್ವರೂಪವೂ, ಸರ್ವೇಶ್ವರನ ಸ್ವರೂಪವೂ ವಿವರಿಸಲ್ಪಟ್ಟಿದೆ. ಸತ್ತ್ವರಜಸ್ತಮೋಗುಣಗಳ

ಮತ್ತು ಆಸುರೀ ದೈವೀ ಪ್ರವೃತ್ತಿಗಳ ವಿಷಯವೂ ವಿಮರ್ಶಿಸಲ್ಪಟ್ಟಿದೆ ಮತ್ತು ಹಿಂದಿನ ಅಧ್ಯಾಯಗಳಲ್ಲಿ ಸಂಗ್ರಹವಾಗಿ ಹೇಳಿದ ಕರ್ಮಜ್ಞಾನಭಕ್ತಿ ಮತ್ತು ಪ್ರಪತ್ತಿಯೋಗಗಳ ವಿಷಯವು ವಿಶದವಾಗಿ ವಿವರಿಸಲ್ಪಟ್ಟಿದೆ.

ಭಗವದ್ಗೀತೆಯಲ್ಲಿರುವ ಪ್ರತಿಷಟ್ಕದಲ್ಲೂ, ಅದರಲ್ಲಿರುವ ಪ್ರತಿ ಶ್ಲೋಕದಲ್ಲೂ ಕೃಷ್ಣನ ಉಪದೇಶಾಮೃತ ತುಂಬಿ ಹರಿಯುತ್ತಿದೆ. ಆದರೆ ಶ್ರೀಕೃಷ್ಣನ ಈ ಉಪದೇಶಗಳನ್ನು ಹೀಗೆ ಮೂರು ಷಟ್ಕಗಳಾಗಿ ವಿಭಾಗಿಸಿರುವುದರಿಂದ ಒಂದೊಂದು ಷಟ್ಕವೂ, ಒಂದೊಂದು ಅಧ್ಯಾಯವೂ ಬೇರೆ ಬೇರೆ ವಿಷಯಗಳನ್ನು ಪ್ರತಿಪಾದಿಸುತ್ತವೆ ಎಂದು ತಿಳಿಯಬಾರದು. ಸಮಸ್ತ ಮಾನವರೂ ಭಗವಂತನಲ್ಲಿ ಭಕ್ತಿ ಹೊಂದಿ ಅವನಲ್ಲಿ ಶರಣಾಗತರಾಗಿ ತಮ್ಮ ಬಾಳನ್ನು ಪವಿತ್ರಗೊಳಿಸಿಕೊಳ್ಳಬೇಕೆಂಬುದೇ ಗೀತೆಯ ಮುಖ್ಯವಾದ ಉಪದೇಶ. ಈ ಉಪದೇಶವು ಗೀತೆಯಲ್ಲಿರುವ ಪ್ರತಿಶ್ಲೋಕದಲ್ಲೂ, ಪ್ರತಿ ಅಧ್ಯಾಯದಲ್ಲೂ, ಪ್ರತಿಷಟ್ಕದಲ್ಲೂ ಅಡಗಿದೆ. ಆದರೆ ಗೀತೆಯನ್ನು ವ್ಯಾಸಂಗ ಮಾಡುವವರಿಗೆ ಅದರಲ್ಲಿ ಅಂತರ್ಗತವಾಗಿರುವ ಬಾಳಿನ ಮಹಾಸಿದ್ಧಾಂತಗಳು ಸುಲಭವಾಗಿ ಅರ್ಥವಾಗಲಿ ಎಂಬುದಕ್ಕಾಗಿ ಹೀಗೆ ಷಟ್ಕಗಳಾಗಿಯೂ, ಅಧ್ಯಾಯ ಗಳಾಗಿಯೂ ವಿಭಾಗಿಸಿ ಮಹಾಜ್ಞಾನಿಗಳು ವ್ಯಾಖ್ಯಾನಗಳೊದಿಗೆ ಅರ್ಥಗಳನ್ನು ವಿವರಿಸಿದ್ದಾರೆ. ಈ ಹದಿನೆಂಟು ಅಧ್ಯಾಯಗಳಿಂದ ಶ್ರೀಕೃಷ್ಣನು ಕರ್ಮಯೋಗ, ಜ್ಞಾನಯೋಗ, ರಾಜಯೋಗ, ಭಕ್ತಿಯೋಗ ಮತ್ತು ಪ್ರಪತ್ತಿ ಯೋಗಗಳನ್ನು ತಿಳಿಸಿದ್ದಾನೆಂದು ಮಹಾಜ್ಞಾನಿಗಳು ವ್ಯಾಖ್ಯಾನ ಮಾಡಿ ತಿಳಿಸಿದ್ದಾರೆ. ಹೀಗೆ ವಿಭಾಗ ಮಾಡಿ ತಿಳಿಸಿರುವುದೆಲ್ಲಾ ಮೇಲೆ ಹೇಳಿದಂತೆ ವ್ಯಾಸಂಗ ಮಾಡುವವರ ಅನುಕೂಲಕ್ಕಾಗಿಯಲ್ಲದೆ ಬೇರೆಯಲ್ಲ. ಕರ್ಮಯೋಗ, ಜ್ಞಾನಯೋಗ, ರಾಜಯೋಗ, ಧ್ಯಾನ ಯೋಗ, ಭಕ್ತಿಯೋಗ ಮತ್ತು ಶರಣಾಗತಿಯೋಗ ಮುಂತಾದ ಯೋಗಸಾಧನೆಗಳೆಲ್ಲವೂ ಪರಮಾತ್ಮನನ್ನು ಹೊಂದಲು ಬೇರೆ ಬೇರೆ ಮಾರ್ಗಗಳೆಂದು ತಿಳಿಯಕೂಡದು. ಈ ಎಲ್ಲ ಯೋಗಸಾಧನೆಗಳು ಒಂದಕ್ಕೊಂದು ಸೇರಿಕೊಂಡಿವೆಯೇ ವಿನಹ ಪ್ರತಿ ಒಂದೂ ಪ್ರತ್ಯೇಕವಾದ ಮಾರ್ಗವಲ್ಲ; ಒಂದೇ ದಾರಿಯ ಅನೇಕ ಭಾಗಗಳಾಗಿವೆ. ಕರ್ಮಯೋಗದಲ್ಲಿ ಜ್ಞಾನಭಕ್ತಿಯೋಗಗಳೂ, ಜ್ಞಾನಯೋಗದಲ್ಲಿ ಕರ್ಮಭಕ್ತಿಯೋಗಗಳೂ ಮತ್ತು ಭಕ್ತಿಯೋಗದಲ್ಲಿ ಕರ್ಮಜ್ಞಾನಯೋಗಗಳೂ ಅಂತರ್ಗತವಾಗಿವೆ. ಭಗವಂತನಲ್ಲಿ ಭಕ್ತಿಹೊಂದಿ ಅವನಿಗೆ ಶರಣಾಗುವುದೇ ಪರಮಪುರುಷಾರ್ಥವಾಗಿರುವುದರಿಂದ ಇತರ ಸಮಸ್ತ ಯೋಗಗಳೂ ಅದಕ್ಕೆ

ಅಂಗವಾಗಿವೆ ಎಂದರೆ ತಪ್ಪಾಗಲಾರದು. ಒಟ್ಟಿನಲ್ಲಿ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣಪರಮಾತ್ಮನು ತತ್ತ್ವಹಿತ ಪುರುಷಾರ್ಥಗಳೆಲ್ಲವೂ ಪರಮಾತ್ಮನಾದ ತಾನೇ ಎಂದು ಹೇಳಿದ್ದಾನೆ. ಪರಬ್ರಹ್ಮನೇ ಪರಮತತ್ತ್ವವೆಂದೂ, ಅವನನ್ನು ಹೊಂದುವುದೇ ಪರಮಪುರುಷಾರ್ಥವೆಂದೂ, ಅದಕ್ಕೆ ಅವನಲ್ಲಿ ಭಕ್ತಿ, ಶರಣಾಗತಿ ಮಾಡುವುದೇ ಉಪಾಯವೆಂದೂ ಸ್ಪಷ್ಟವಾಗಿ ಉಪದೇಶ ಮಾಡಿದ್ದಾನೆ.

## ಗೀತೆಯಲ್ಲಿ ಉಪದೇಶಿಸಿರುವ ಮುಖ್ಯವಾದ ಯೋಗ ಸಾಧನೆಗಳು:

ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳನ್ನು ಹದಿನೆಂಟು ಯೋಗಗಳೆಂದು ಕರೆದಿದ್ದಾರೆ. ಆದರೆ ಅವುಗಳನ್ನು ಮುಖ್ಯವಾಗಿ ಕರ್ಮಯೋಗ, ರಾಜಯೋಗ, ಜ್ಞಾನಯೋಗ, ಧ್ಯಾನಯೋಗ, ಭಕ್ತಿಯೋಗ ಮತ್ತು ಶರಣಾಗತಿ ಯೋಗ ಎಂಬ ಆರು ಯೋಗ ಸಾಧನೆಗಳಾಗಿ ವಿಭಾಗಿಸಿ ಮಹಾಜ್ಞಾನಿಗಳಾದ ಮಹಾ ಪುರುಷರು ಅರ್ಥ ವ್ಯಾಖ್ಯಾನಗಳನ್ನು ಹೇಳಿದ್ದಾರೆ. ಆದ್ದರಿಂದ ಈ ಆರು ಯೋಗಸಾಧನೆಗಳ ವಿಷಯವಾಗಿ ಶ್ರೀಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ ಹೇಳಿರುವ ಉಪದೇಶಗಳನ್ನು ಸ್ವಲ್ಪಮಟ್ಟಿಗೆ ಮುಂದೆ ತಿಳಿಸಿದೆ.

## 1. ಜ್ಞಾನಯೋಗ:-

ಜಗತ್ತಿನತತ್ತ್ವಗಳ ನಿಜಸ್ವರೂಪವನ್ನು ತಿಳಿದು ಅದನ್ನು ಅನುಸಂಧಾನ ಮಾಡುವುದೇ ಜ್ಞಾನಯೋಗವು. ಶ್ರೀಕೃಷ್ಣನು ಬಾಳಿನ ಈ ಮಹಾಸಿದ್ಧಾಂತವನ್ನು ಆದಿಯಲ್ಲಿಯೇ ಅಂದರೆ ಎರಡನೆಯ ಅಧ್ಯಾಯದಲ್ಲಿಯೇ ಉಪದೇಶ ಮಾಡಿದ್ದಾನೆ. "ಅರ್ಜುನ! ನೀನು ವಿವೇಕಿಯಂತೆ ಮಾತನಾಡುತ್ತಿದ್ದೀಯೆ ಮತ್ತು ಧರ್ಮಾಧರ್ಮ ವಿಚಾರಗಳನ್ನು ತರ್ಕಮಾಡಿ ವಾದಿಸಲು ಪ್ರಯತ್ನಿಸುತ್ತಿದ್ದೀಯೆ. ಆದರೆ ನೀನು ವಿವೇಕಿಯಲ್ಲ. ಏತಕ್ಕೆಂದರೆ ನೀನು ದುಃಖಪಡಲು ಯೋಗ್ಯರಲ್ಲದ ಈ ಕೌರವ ಬಂಧುಗಳ ಸಾವಿಗಾಗಿ ದುಃಖ ಪಡುತ್ತಿದ್ದೀಯೆ. ಪಂಡಿತರು ದೇಹಗಳ ವಿಷಯವಾಗಿಯಾಗಲಿ, ಆತ್ಮದ ವಿಷಯವಾಗಿಯಾಗಲಿ ದುಃಖ ಪಡುವುದಿಲ್ಲ"- ಎಂದು ಹೇಳಿ ಅವನಿಗೆ ದೇಹದ ಅನಿತ್ಯತೆಯನ್ನು ಆತ್ಮನ ನಿತ್ಯತೆಯನ್ನು ಮತ್ತು ದೇಹ ಮತ್ತು ಆತ್ಮರುಗಳ ವಿಲಕ್ಷಣತೆಯನ್ನು ಮೊಟ್ಟಮೊದಲು ಉಪದೇಶ ಮಾಡಲು ಪ್ರಾರಂಭಿಸಿದ್ದಾನೆ. ಆದ್ದರಿಂದ ಮಾನವನು ಮೊದಲು ಆತ್ಮನ ನಿಜಸ್ವರೂಪದ ಜ್ಞಾನವನ್ನು ಹೊಂದಬೇಕು. ಆತ್ಮನ ಯಥಾರ್ಥಸ್ವರೂಪ ಜ್ಞಾನ ಅನುಸಂಧಾನದೊಂದಿಗೆ ಇತರ

ಎಲ್ಲಾ ಯೋಗಸಾಧನೆಯನ್ನು ಮಾಡಬೇಕೆಂಬುದೇ ಶ್ರೀಕೃಷ್ಣನ ಉಪದೇಶ.

"ಅರ್ಜುನ! ಪರಮಾತ್ಮನಾದ ನಾನೂ, ನೀನೂ, ನಿನ್ನ ಎದುರಿಗೆ ನಿಂತಿರುವ ಈ ಸಮಸ್ತ ರಾಜರುಗಳೂ, ಎಲ್ಲರೂ ಕೇವಲ ದೇಹ ಸ್ವರೂಪಿಗಳು ಮಾತ್ರವಲ್ಲ; ಎಲ್ಲರೂ ನಿತ್ಯರಾದ, ಎಂದೆಂದೂ ಶಾಶ್ವತವಾಗಿ ಇರುವ ಆತ್ಮರುಗಳು" – ಎಂದು ಹೇಳಿ ಜಗತ್ತಿನಲ್ಲಿ ಜೀವಾತ್ಮ ಮತ್ತು ಪ್ರಕೃತಿ ಎಂದು ಎರಡು ಭಿನ್ನವಾದ ತತ್ತ್ವಗಳಿವೆ ಎಂಬುದನ್ನು ಪ್ರತಿಪಾದಿಸಿದ್ದಾನೆ. ಈ ಎರಡು ತತ್ತ್ವಗಳ ವಿಷಯವಾಗಿ ಶ್ರೀಕೃಷ್ಣನು ಹೇಳಿರುವುದೇನೆಂದರೆ – "ದೇಹವೇ ಬೇರೆ, ಆತ್ಮನೇ ಬೇರೆ. ದೇಹವು ಅನಿತ್ಯ ವಾದುದು; ಆತ್ಮನು ನಿತ್ಯನಾದವನು. ಆದ್ದರಿಂದ ಅರ್ಜುನ, ನೀನು ಯಾರನ್ನೂ ಕೊಲ್ಲಲಾರೆ ಮತ್ತು ಯಾರನ್ನೂ ಕೊಲ್ಲಿಸಲಾರೆ. ಶರೀರವು ಮಾತ್ರ ನಾಶವಾಗುತ್ತದೆಯೇ ವಿನಹ ಆತ್ಮನಿಗೆ ಎಂದೂ ನಾಶವಿಲ್ಲ; ಅವನು ಹರಿದುಹೋಗಿರುವ ಬಟ್ಟೆಯನ್ನು ಬಿಸಾಡಿ ಹೊಸದನ್ನು ಉಡುವಂತೆ, ಹಳೆಯ ಶರೀರವನ್ನು ತೊರೆದು ಹೊಸ ಶರೀರವನ್ನು ಹೊಂದುತ್ತಾನೆ."

**ಆತ್ಮನ ಸ್ವರೂಪವೇನೆಂದರೆ** – ಆತ್ಮನು ದೇಹ, ಇಂದ್ರಿಯ, ಮನಸ್ಸು, ಪ್ರಾಣ, ಬುದ್ಧಿ ಇವುಗಳಿಗಿಂತ ವಿಲಕ್ಷಣನು, ಜ್ಞಾನಸ್ವರೂಪನು, ಜ್ಞಾನಾಶ್ರಯನು, ಅವ್ಯಕ್ತನು, ಅಚಿಂತ್ಯನು, ಅವಯವರಹಿತನು, ವಿಕಾರರಹಿತನು, ನಿತ್ಯನು, ಸರ್ವಗತನು, ಅಚಲನು, ಸನಾತನನು, ಶಾಶ್ವತನು ಆಗಿದ್ದಾನೆ. ಅವನನ್ನು ಕತ್ತಿಯು ಕತ್ತರಿಸಲಾರದು, ಬೆಂಕಿಯು ಸುಡಲಾರದು, ನೀರು ನೆನೆಸಲಾರದು, ಮತ್ತು ಗಾಳಿಯು ಒಣಗಿಸಲಾರದು. ಆದ್ದರಿಂದ ಆತ್ಮನಿಗೆ ನಾಶವಿಲ್ಲ. ಅವನಿಗಾಗಿ ನೀನು ದುಃಖಿಸಲು ಕಾರಣವಿಲ್ಲ. ಇನ್ನು **ದೇಹದ ಲಕ್ಷಣವೇನೆಂದರೆ** – ದೇಹವು ಅನಿತ್ಯವಾದುದು. ಈ ದೇಹವು ಎಂದಿದ್ದರೂ ಒಂದಿಲ್ಲ ಒಂದು ದಿನ ನಾಶವಾಗಿಯೇ ಆಗುತ್ತದೆ. ಹುಟ್ಟಿದ ವಸ್ತುವಿಗೆ ಸಾವು ಅಂದರೆ ವಿನಾಶವು ಸಿದ್ಧವಾದುದು. ಆದ್ದರಿಂದ ಈ ದೇಹಕ್ಕೆ ಉತ್ಪತ್ತಿ ವಿನಾಶ ರೂಪಗಳಿಂದ ಪರಿಣಾಮ ಪರಂಪರೆಯು ಅನಿವಾರ್ಯವಾಗಿರುವುದರಿಂದ ದೇಹಗಳ ವಿನಾಶಕ್ಕಾಗಿ ಶೋಕಿಸುವುದು ಉಚಿತವಲ್ಲ.

**ಪರಮಾತ್ಮನ ಸ್ವರೂಪ** – ದೇಹ ಮತ್ತು ಆತ್ಮ ಸ್ವರೂಪಗಳನ್ನು ಎರಡನೆಯ ಅಧ್ಯಾಯದಲ್ಲಿ ವಿವರಿಸಿ, ಮುಂದೆ ಏಳನೆಯ ಅಧ್ಯಾಯದಲ್ಲಿ ಇವೆರಡನ್ನೂ ಆಳುವ, ಇವೆರಡಕ್ಕಿಂತ ಶ್ರೇಷ್ಠವಾದ ಇನ್ನೊಂದು ತತ್ತ್ವವುಂಟು; ಅದು ಯಾವುದೆಂದರೆ

ಪರಮಾತ್ಮನಾದ ತಾನು ಎಂದು ಶ್ರೀಕೃಷ್ಣನು ತಿಳಿಸಿದ್ದಾನೆ. ಈ ಜಗತ್ತಿನ ಸೃಷ್ಟಿ ಸ್ಥಿತಿಲಯಗಳಿಗೆಲ್ಲಾ ಕಾರಣನು ತಾನೆಂದೂ, ತನ್ನಿಂದ ಚೇತನಾಚೇತನ ವಸ್ತುಗಳಿಂದ ಕೂಡಿದ ಜಗತ್ತು ಉಂಟಾಗಿದೆಯೆಂದೂ, ಅದನ್ನು ರಕ್ಷಿಸುವವನು ತಾನೇ ಎಂದೂ ಹೇಳಿದ್ದಾನೆ. ಪರಮಪುರುಷನಾದ ತನಗೆ ಎರಡು ಪ್ರಕೃತಿಗಳಿವೆ; ಒಂದು ಪೃಥ್ವಿ, ನೀರು, ತೇಜಸ್ಸು, ವಾಯು, ಆಕಾಶ, ಮನಸ್ಸು, ಮಹತ್ತತ್ತ್ವ ಮತ್ತು ಅಹಂಕಾರ ಎಂಬ ಎಂಟು ಪ್ರಕಾರವಾಗಿ ಭಿನ್ನವಾದ ವಸ್ತುಗಳಿಂದ ಕೂಡಿದ ಈ ಜಗತ್ತು; ಇದು ಪರಮಾತ್ಮನಾದ ತನ್ನ ಶ್ರೇಷ್ಠವಲ್ಲದ ಪ್ರಕೃತಿ; ಇನ್ನೊಂದು ಚೇತನರೂಪವಾದ ಪ್ರಕೃತಿ; ಈ ಚೇತನತತ್ತ್ವದಿಂದ ಅಚೇತನವಾದ ಈ ಜಗತ್ತು ಧರಿಸಲ್ಪಟ್ಟಿದೆ ಮತ್ತು ಇದು ತನ್ನ ಶ್ರೇಷ್ಠವಾದ ಪ್ರಕೃತಿ ಎಂದೂ ಹೇಳಿದ್ದಾನೆ.

ಮುಂದೆ ಹದಿಮೂರನೆಯ ಅಧ್ಯಾಯದಲ್ಲಿ ಪ್ರಕೃತಿ ತತ್ತ್ವವನ್ನು ಕ್ಷೇತ್ರವೆಂದೂ, ಜೀವಾತ್ಮನನ್ನು **ವೈಯಕ್ತಿಕ ಕ್ಷೇತ್ರಜ್ಞನೆಂದೂ**, ಪರಮಾತ್ಮನಾದ ತನ್ನನ್ನು ಸರ್ವಕ್ಷೇತ್ರಗಳಲ್ಲಿಯೂ ಇರುವ **ಸಾರ್ವತ್ರಿಕ ಕ್ಷೇತ್ರಜ್ಞನೆಂದೂ** ವಿವರಿಸಿ ತಿಳಿಸಿರುವನು. ಅಂದರೇನು, ಜಗತ್ತಿನಲ್ಲಿರುವ ಸಮಸ್ತ ಜೀವಿಗಳಲ್ಲೂ ಕ್ಷೇತ್ರ ಮತ್ತು ಕ್ಷೇತ್ರಜ್ಞ ಅಥವಾ ಶರೀರ ಮತ್ತು ಜೀವಾತ್ಮ ಎಂಬ ಎರಡು ತತ್ತ್ವಗಳು ಮಾತ್ರವಲ್ಲದೆ ಮೂರನೆಯದಾದ ಪರಮಾತ್ಮ ತತ್ತ್ವವೂ ಕೂಡ ಅಂತರ್ಯಾಮಿಯಾಗಿರುವುದು ಎಂದು ತಿಳಿಯಬೇಕು. ಆದ್ದರಿಂದ ಗೀತೆಯಲ್ಲಿ ಕ್ಷೇತ್ರ ಅಥವಾ **ಶರೀರ**, ವೈಯಕ್ತಿಕ ಕ್ಷೇತ್ರಜ್ಞ ಅಥವಾ **ಜೀವಾತ್ಮ** ಮತ್ತು ಸಾರ್ವತ್ರಿಕ ಕ್ಷೇತ್ರಜ್ಞ ಅಥವಾ **ಪರಮಾತ್ಮ** ಎಂಬ ಮೂರು ತತ್ತ್ವಗಳನ್ನು ಶ್ರೀಕೃಷ್ಣನು ಪ್ರತಿಪಾದಿಸಿ ತಿಳಿಸಿದ್ದಾನೆ.

ಪ್ರತಿಮಾನವನೂ ತನ್ನ ದೇಹದ ನಶ್ವರತೆಯನ್ನೂ, ಆತ್ಮನ ನಿತ್ಯತ್ವವನ್ನೂ, ಪರಮಾತ್ಮನ ಸರ್ವೋತ್ಕೃಷ್ಟತೆಯನ್ನೂ ಅನುಸಂಧಾನ ಮಾಡುತ್ತಾ ಇರಬೇಕು. ಯಾವಾಗ ಅವನಿಗೆ ಗೀತೆಯ ಮೊದಲನೆಯ ಷಟ್ಕದ ವ್ಯಾಸಂಗದಿಂದ ಆತ್ಮನ ಯಥಾರ್ಥಸ್ವರೂಪಜ್ಞಾನದ ಅರಿವು ಉಂಟಾಗುತ್ತದೆಯೋ ಆಗ ಅವನ ಮನಸ್ಸು ಸ್ಥಿರವಾಗಿ ಅವನು ಸ್ಥಿತಪ್ರಜ್ಞನಾಗುವನು. ಸದಾ ಆತ್ಮಸ್ವರೂಪ ಚಿಂತನೆಯಲ್ಲೇ ಸಂತುಷ್ಟನಾಗಿ, ಮನಸ್ಸಿನಲ್ಲಿ ಉಂಟಾಗುವ ಇತರ ಸಮಸ್ತ ಆಸೆಗಳನ್ನು ಸಂಪೂರ್ಣವಾಗಿ ತ್ಯಾಗ ಮಾಡುವವನೇ ಸ್ಥಿತಪ್ರಜ್ಞನೆಂದು ಹೇಳಿ ಅವನ ಲಕ್ಷಣವನ್ನು ಎರಡನೇ ಅಧ್ಯಾಯದಲ್ಲಿ ವಿವರವಾಗಿ ಶ್ರೀಕೃಷ್ಣನು ವರ್ಣಿಸಿದ್ದಾನೆ. ಇಂತಹ ಆತ್ಮಸ್ವರೂಪ ಜ್ಞಾನ ಲಭಿಸಿದ ಮೇಲೆ ಚೇತನನಿಗೆ ಮತ್ತೆ ಆತ್ಮವೇ ದೇಹವೆಂಬ ಭ್ರಮೆಯಾಗಲಿ, ಮಮತಾದಿ

ಮೋಹವಾಗಲಿ ಹುಟ್ಟುವುದಿಲ್ಲ. ಆದರೆ ಈ ಜ್ಞಾನವು ಲಭಿಸುವುದು ಬಹಳ ಕಷ್ಟವೆಂದೂ, ಆತ್ಮ ಸಾಕ್ಷಾತ್ಕಾರ ಪಡೆದಿರುವ ಗುರುವಿನಿಂದ ಪ್ರಣಿಪಾತ, ಪರಿಪ್ರಶ್ನ ಸೇವಾದಿಗಳ ಮೂಲಕ ಉಪದೇಶ ಪಡೆಯಬೇಕೆಂದೂ ಶ್ರೀಕೃಷ್ಣನು ಹೇಳಿದ್ದಾನೆ.

ಭಗವದ್ಗೀತೆಯ ಎರಡನೆಯ ಷಟ್ಕದ (ಅಂದರೆ 7 ರಿಂದ 12ರ ವರೆಗಿನ 6 ಅಧ್ಯಾಯಗಳ) ವ್ಯಾಸಂಗದಿಂದ ಜಗತ್ತಿಗೆಲ್ಲಾ ಒಡೆಯನಾದ ಪರಮಾತ್ಮನು ಇರುವನು. ಅವನು ತನಗೂ ಅಂತರಾತ್ಮನು ಮತ್ತು ತಾನು ಅವನಿಗೆ ದಾಸಭೂತನು ಎಂಬ ಪವಿತ್ರಜ್ಞಾನ ಹುಟ್ಟುತ್ತದೆ. ಹೀಗೆ ಪರಮಾತ್ಮನ ಸರ್ವೋತ್ಕೃಷ್ಟವಾದ ಸ್ವರೂಪ ಜ್ಞಾನವು ಲಭಿಸಿದ ಮೇಲೆ ಚೇತನನು ಆತ್ಮ ಮತ್ತು ಪರಮಾತ್ಮರ ಯಥಾರ್ಥ ಸ್ವರೂಪಜ್ಞಾನ ಅನುಸಂಧಾನದಲ್ಲಿ ತೊಡಗುವನು. ಇದರಿಂದಾಗಿ ಅವನಿಗೆ ಪರಮಾತ್ಮನಲ್ಲಿ ಪ್ರೀತಿ ಉಂಟಾಗಿ ಅವನ ಜ್ಞಾನವು ಭಕ್ತಿರೂಪಾಪನ್ನಜ್ಞಾನವಾಗಿ ಮಾರ್ಪಡುವುದು. ಇದರಿಂದ ಜ್ಞಾನಯೋಗದಲ್ಲೂ ಭಕ್ತಿಯು ಅಂತರ್ಗತವಾಗಿದೆ ಎಂಬುದು ಸಿದ್ಧವಾಯಿತು.

## 2. ರಾಜಯೋಗ-

ಇಂದ್ರಿಯಗಳನ್ನು ಜಯಿಸಿ, ಕಾಮಕ್ರೋಧಾದಿಗಳಿಗೆ ವಶನಾಗದೆ ಜಿತೇಂದ್ರಿಯ ನಾಗಿರುವುದೇ ರಾಜಯೋಗವು. ಜಗತ್ತಿನ ಸತ್ಯದ ಜ್ಞಾನವನ್ನು ಬುದ್ಧಿಯಲ್ಲಿ ತಿಳಿದಮಾತ್ರಕ್ಕೆ ಸಾಲದು. ಅದನ್ನು ಅನುಷ್ಠಾನದಲ್ಲಿ ತರಬೇಕು. ಹಾಗೆ ಮಾಡಲು ಮನುಷ್ಯನು ತನ್ನ ಇಂದ್ರಿಯಗಳನ್ನು ಜಯಿಸಿ ಜಿತೇಂದ್ರಿಯನಾಗಬೇಕು. ಜಿತೇಂದ್ರಿಯನಾಗಲು ಪ್ರಯತ್ನಿಸುವುದೇ ರಾಜಯೋಗವು. ಇಂದ್ರಿಯಗಳನ್ನು ವಿಷಯಗಳಲ್ಲಿ ಪ್ರವರ್ತಿಸದಂತೆ ತಡೆಯಬೇಕು. ಇದು ಬಹಳ ಕಷ್ಟವಾದ ಕೆಲಸ. ಕಷ್ಟ ಪಟ್ಟು ಇಂದ್ರಿಯಗಳನ್ನು ವಿಷಯಗಳನ್ನು ಅನುಭವಿಸದಂತೆ ನಿಗ್ರಹಿಸಿದರೂ, ಮನಸ್ಸು ವಿಷಯ ಚಿಂತನೆಯಲ್ಲಿಯೇ ಮಗ್ನವಾಗಿರುವುದು. ಮನಸ್ಸನ್ನು ವಿಷಯ ಚಿಂತನೆ ಮಾಡದಂತೆ ತಡೆಯುವುದು ವಿಪರೀತ ಕಷ್ಟ. ಗಾಳಿಯು ನಾವೆಯನ್ನು ಹೊಡೆದು ಕೊಂಡು ಹೋಗುವಂತೆ ಪ್ರಯತ್ನಶೀಲನಾದ ಮನುಷ್ಯನ ಮನಸ್ಸನ್ನು ವಿಷಯಗಳು ಆಕರ್ಷಿಸಿ ತಮ್ಮ ಕಡೆಗೆ ಎಳೆಯುತ್ತವೆ. ಆ ವಿಷಯೋಪಭೋಗಗಳಲ್ಲಿ ಮಾನಸಿಕ ಸಂಗವು ಉಂಟಾಗಿ ಅದನ್ನು ಅನುಭವಿಸಬೇಕೆಂಬ ಆಸೆ ಹುಟ್ಟುತ್ತದೆ. ಅದು ಲಭಿಸದೇ ಹೋದರೆ ಕೋಪವೂ, ಕೋಪದಿಂದ ಮೋಹವೂ, ಮೋಹದಿಂದ ಸ್ಮೃತಿ ವಿಭ್ರಮೆಯೂ, ಅದರಿಂದ ಬುದ್ಧಿ ನಾಶವೂ ಉಂಟಾಗಿ ಮನುಷ್ಯನು ನಷ್ಟನಾಗುತ್ತಾನೆ.

ಉತ್ಪನ್ನವಾದ ಹಿಂದಿನ ಕರ್ಮ ವಾಸನೆಗಳಿಂದ ಉಂಟಾದ ಶಬ್ದಾದಿ ವಿಷಯಕವಾದ ಕಾಮವು ಮತ್ತು ಅದರಿಂದ ಉಂಟಾದ ಕ್ರೋಧವೂ ಜ್ಞಾನಯೋಗಾಭ್ಯಾಸಕ್ಕೆ ಶತ್ರುಗಳಾಗಿವೆ. ಕಾಮವನ್ನು ಮಹಾಶನ ಎಂದೂ, ಕ್ರೋಧವನ್ನು ಮಹಾಪಾಪ ಎಂದೂ ಶ್ರೀಕೃಷ್ಣ ಕರೆದಿದ್ದಾನೆ. ಕಾಮವು ಅಂದರೆ ವಿಷಯಾಭಿಲಾಷೆಯು ಎಷ್ಟು ಅನುಭವಿಸಿದರೂ ಇನ್ನೂ ಬೇಕು, ಇನ್ನೂ ಬೇಕು ಎಂಬ ಆಸೆಯಿಂದ ಕೂಡಿದುದಾಗಿ, ಎಷ್ಟು ಅನುಭವಿಸಿದರೂ ತೃಪ್ತಿ ಇಲ್ಲದುದಾಗಿದೆ. ಆದ್ದರಿಂದ ಇದು ಇವನನ್ನು ಸಮಸ್ತ ವಿಷಯೋಪಭೋಗಗಳಲ್ಲಿ ಬಲಾತ್ಕಾರವಾಗಿ ಆಕರ್ಷಿಸುತ್ತದೆ. ಈ ಕಾಮದ ಇಷ್ಟ ಪ್ರಾಪ್ತಿಗೆ ಏನಾದರೂ ವಿಘ್ನ ಉಂಟಾದರೆ ಕ್ರೋಧವು ಪ್ರಾಪ್ತವಾಗುತ್ತದೆ. ಇದು ವಿಶೇಷ ಪಾಪವ ಮಾಡುವಂತಹುದು. ಇಂದ್ರಿಯಗಳನ್ನು ವಶಪಡಿಸಿಕೊಂಡರೂ ಮನಸ್ಸನ್ನು ಜಯಿಸುವುದು ಕಷ್ಟ. ಮನಸ್ಸನ್ನು ವಶಪಡಿಸಿಕೊಂಡರೂ ಬುದ್ಧಿಯನ್ನು ಜಯಿಸುವುದು ಕಷ್ಟ. ಬುದ್ಧಿಯನ್ನಾದರೂ ವಿವೇಕವಾಗಿ ಮಾರ್ಪಡಿಸಿಕೊಳ್ಳ ಬಹುದು. ಆದರೆ ಎಲ್ಲಕ್ಕಿಂತಲೂ ಕಾಮವನ್ನು ಜಯಿಸುವುದು ಮನುಷ್ಯನಿಗೆ ಬಹಳಕಷ್ಟ. ಕಾಮವೇ ಎಲ್ಲಕ್ಕಿಂತ ಪ್ರಬಲವಾದ ಜ್ಞಾನ ವಿರೋಧಿ.

ಹಾಗಾದರೆ ಕಾಮಕ್ರೋಧಗಳನ್ನು ಜಯಿಸಲು ಮಾರ್ಗವಿಲ್ಲವೇ? ಎಂದರೆ ಇದೆ ''**ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತಮತ್ಪರಃ**'' - ಎನ್ನುತ್ತಾನೆ ಶ್ರೀಕೃಷ್ಣ ಇಂದ್ರಿಯಗಳನ್ನು ವಿಷಯಗಳಲ್ಲಿ ಪ್ರವರ್ತಿಸದಂತೆ ತಡೆದು, ಅದರೊಂದಿಗೆ ವಿಷಯ ಚಿಂತನೆಯಲ್ಲಿ ಮಗ್ನವಾಗಿರುವ ನಿನ್ನ ಮನಸ್ಸನ್ನು ಭಗವಂತನಾದ ನನ್ನ ಕಡೆಗೆ ತಿರುಗಿಸು ಎಂದು ಹೇಳಿದ್ದಾನೆ. ಅಂದರೇನು ಮನಸ್ಸಿನಲ್ಲಿ ಪರಮಾತ್ಮ ಚಿಂತನೆ ಮಾಡುತ್ತಿರು. ಹೀಗೆ ಮನಸ್ಸು ಪರಮಾತ್ಮ ಚಿಂತನೆಯಲ್ಲಿ ತೊಡಗಿದರೆ ಸಮಸ್ತ ಪಾಪಗಳೂ ಭಸ್ಮವಾಗಿ ಮನಸ್ಸು ನಿರ್ಮಲವಾಗುತ್ತದೆ. ಇದರ ಫಲವಾಗಿ ಮನಸ್ಸಿನಲ್ಲಿ ವಿಷಯಗಳ ಮೇಲಿರುವ ಆಸಕ್ತಿಯು ಹೋಗುತ್ತದೆ. ವಿಷಯ ರಾಗರಹಿತವಾದ ಮನಸ್ಸು ಇಂದ್ರಿಯಗಳನ್ನು ತನ್ನ ವಶಪಡಿಸಿಕೊಳ್ಳುವ ಶಕ್ತಿಯನ್ನು ಪಡೆಯುತ್ತದೆ. ಆಗ ವಿಷಯೋಪಭೋಗಗಳಲ್ಲಿ ಪ್ರವರ್ತಿಸದಂತೆ ತಡೆದಿರುವ ನಿನ್ನ ಇಂದ್ರಿಯಗಳನ್ನು ಕರ್ಮಯೋಗದಲ್ಲಿ ಪ್ರವರ್ತಿಸುವಂತೆ ಮಾಡು. ಅಂದರೇ **ಸುಬುದ್ಧಿಯ ಮೂಲಕ ಇಂದ್ರಿಯಗಳನ್ನು ಕರ್ತವ್ಯ ಕರ್ಮಾಚರಣೆಯಲ್ಲೂ, ಮನಸ್ಸನ್ನು ಪರಮಾತ್ಮ ಚಿಂತನೆಯಲ್ಲು ನೆಲೆಗೊಳಿಸಬೇಕು.** ಪರಮಾತ್ಮ ಚಿಂತನೆ ಮಾಡುತ್ತಾ ಶರೀರದ ಮೂಲಕ ಕರ್ತವ್ಯ ಕರ್ಮಗಳನ್ನು ಕರ್ಮಯೋಗವಾಗಿ ಮಾಡುತ್ತಾ ಇದ್ದರೆ, ಆಗ

ನೀನು ಕಾಮಕ್ರೋಧಾದಿಗಳನ್ನು ಜಯಿಸಿ, ಇಂದ್ರಿಯಗಳನ್ನು ನಿನ್ನ ವಶಪಡಿಸಿಕೊಂಡು ಆತ್ಮ ಪರಮಾತ್ಮ ಧ್ಯಾನ ಮಾಡಲು ಸಾಮರ್ಥ್ಯ ಹೊಂದುವೆ ಎಂದು ಶ್ರೀಕೃಷ್ಣ ಪರಮಾತ್ಮನು ಹೇಳಿದ್ದಾನೆ. ಹೀಗೆ ಪರಮಾತ್ಮ ಚಿಂತನೆಯೊಂದಿಗೆ ರಾಜಯೋಗ ಅಭ್ಯಾಸಗಳನ್ನು ಮಾಡಬೇಕು ಎಂದು ಗೀತೆಯಲ್ಲಿ ಹೇಳಿದೆ.

## 3. ಕರ್ಮಯೋಗ

ಕರ್ಮ ಎಂದರೆ ಕೆಲಸ. ಕರ್ತವ್ಯ ಕರ್ಮಗಳನ್ನು ಕರ್ಮಯೋಗವಾಗಿ ಮಾಡಬೇಕು ಎಂಬುದೇ ಶ್ರೀಕೃಷ್ಣನ ಉಪದೇಶ.

i) ಜಗತ್ತಿನಲ್ಲಿ ಸಮಸ್ತ ಜೀವಿಗಳೂ ಸರ್ವದಾ ಯಾವುದಾದರೊಂದು ಕರ್ಮ ಮಾಡುತ್ತಲೇ ಇರುವರು. ಕರ್ಮ ಮಾಡದೇ ಯಾರೂ ಒಂದು ಕ್ಷಣ ಕಾಲವೂ ಇರಲಾರರು. ಕರ್ಮ ಮಾಡುವುದೇ ದೇಹಿಯಾದ ಜೀವಾತ್ಮನಿಗೆ ಸ್ವಾಭಾವಿಕವಾದ ಅಭ್ಯಾಸವಾಗಿರುವುದರಿಂದ ಜ್ಞಾನಯೋಗ ಅಭ್ಯಾಸಕ್ಕಿಂತ ಕರ್ಮಯೋಗ ಅಭ್ಯಾಸವು ಸುಲಭವೂ, ಸುಖಕರವೂ ಆಗಿದೆ. ಜ್ಞಾನಯೋಗ ನಿಷ್ಠನೂ ಕೂಡ ಶರೀರಧಾರಣೆಗಾಗಿ ಕರ್ಮ ಮಾಡಲೇ ಬೇಕಾಗುತ್ತದೆ. ಮುಕ್ತ ಪುರುಷನೂ ಕೂಡ ಲೋಕಕಲ್ಯಾಣಕ್ಕಾಗಿ ಕರ್ಮ ಮಾಡಲೇಬೇಕು. ಮಹಾತ್ಮರ ನಡೆ ನುಡಿಗಳನ್ನು ಲೋಕದ ಜನರು ಅನುಸರಿಸಿ ನಡೆಯುವುದರಿಂದ ಅವರ ಉದ್ಧಾರಕ್ಕಾಗಿ ಜನಕಾದಿ ಮಹಾಜ್ಞಾನಿಗಳೂ ಕೂಡ ಕರ್ಮ ಮಾಡಿದರು ಮತ್ತು ಪರಮ ಪುರುಷನಾದ ತಾನೂ ಕರ್ಮ ಮಾಡುತ್ತಿರುವುದಾಗಿ ಶ್ರೀಕೃಷ್ಣ ಪರಮಾತ್ಮ ಹೇಳಿದ್ದಾನೆ.

ii) ಸಾಧಾರಣವಾಗಿ ಕರ್ಮ ಮಾಡುವುದಕ್ಕೂ ಕರ್ಮಯೋಗವಾಗಿ ಕರ್ಮ ಮಾಡುವುದಕ್ಕೂ ಬಹಳ ವ್ಯತ್ಯಾಸವಿದೆ. ಸಾಮಾನ್ಯವಾಗಿ ಮಾನವನು ಕರ್ಮ ಮಾಡುವಾಗ ಅಹಂಕಾರ ಮಮಕಾರಗಳಿಂದ ಕೂಡಿದವನಾಗಿ ಕರ್ಮ ಮಾಡುತ್ತಾನೆ. ಈ ಕರ್ಮ ನನ್ನದು, ಈ ಕರ್ಮದ ಕರ್ತೃ ನಾನು, ಇದರ ಫಲ ನನಗೇ ಸೇರಬೇಕೆಂಬ ಅಹಂಕಾರದೊಂದಿಗೂ, ಮಮಕಾರದೊಂದಿಗೂ, ಫಲಾಸಕ್ತಿಯೊಂದಿಗೂ, ಕರ್ಮ ಮಾಡುತ್ತಾನೆ. ಕರ್ಮಕ್ಕೆ ಫಲಸಿಗದಿದ್ದರೆ ಅಶಾಂತನಾಗುತ್ತಾನೆ. ಈ ಮನೋಭಾವನೆಯನ್ನು ಬದಲಾಯಿಸಿಕೊಂಡು ಮುಂದೆ ವಿವರಿಸಿರುವ ರೀತಿಯಲ್ಲಿ ಕರ್ಮ ಮಾಡುವುದೇ ಕರ್ಮಯೋಗವು.

**ಕರ್ಮಯೋಗದ ಅಭ್ಯಾಸಗಳು:**

**i) ಆತ್ಮ ಪರಮಾತ್ಮ ಸ್ವರೂಪ ಮನನದೊಂದಿಗೆ ಕರ್ತವ್ಯ ಕರ್ಮಗಳನ್ನು ಮಾಡಬೇಕು:-** ಕರ್ಮಯೋಗಿಯು ಕರ್ಮ ಮಾಡುವಾಗಲೆಲ್ಲಾ ತಾನು ನಶ್ವರವಾದ ದೇಹವಲ್ಲ; ಶಾಶ್ವತವಾದ ಆತ್ಮಸ್ವರೂಪನೆಂದೂ ಮತ್ತು ತನ್ನೊಳಗೆ ಪರಮಾತ್ಮನು ಅಂತರ್ಯಾಮಿಯಾಗಿ ಇರುವನೆಂದೂ ಸರ್ವದಾ ಮನನ ಮಾಡುತ್ತಾ ಇರಬೇಕು. ಹೀಗೆ ಆತ್ಮಯಥಾರ್ಥ ಸ್ವರೂಪ ಜ್ಞಾನದೊಂದಿಗೆ ಕರ್ಮ ಮಾಡುವುದರಿಂದ ಅವನು ಸರ್ವದಾ ಸತ್ಕರ್ಮಗಳನ್ನೇ ಮಾಡುವನು.

**ii) ಅಕರ್ತೃತ್ವಾನುಸಂಧಾನದೊಂದಿಗೆ ಅಹಂಕಾರರಹಿತನಾಗಿ ಕರ್ಮ ಮಾಡಬೇಕು:-** ಇದು ಕರ್ಮಯೋಗದ ಒಂದು ಅತಿಮುಖ್ಯವಾದ ಅಭ್ಯಾಸ. ಚೇತನನು ಆತ್ಮನಾದ ತಾನು ಕರ್ಮಕ್ಕೆ ಕರ್ತೃವಲ್ಲ ಎಂದು ತಿಳಿದು, ಅದನ್ನು ಅನುಸಂಧಾನ ಮಾಡುತ್ತಾ ಕರ್ಮ ಮಾಡಬೇಕು ಎಂಬುದೇ ಇದರ ಅರ್ಥ. ಅನಾದಿ ಕಾಲದಿಂದ ಮಾಡಲ್ಪಟ್ಟ ಪೂರ್ವಾಪೂರ್ವ ಕರ್ಮಗಳಿಂದ ದೇವಮನುಷ್ಯಾದಿ ವಿಧವಿಧವಾದ ಶರೀರಗಳ ರೂಪದಲ್ಲಿ ಜೀವಾತ್ಮನಿಗೆ ಪ್ರಕೃತಿ ಸಂಬಂಧವುಂಟಾಗುತ್ತದೆ. ಹೀಗೆ ತನಗೆ ಪ್ರಾಪ್ತವಾಗಿದ್ದ ಆಯಾ ಶರೀರಗಳಲ್ಲಿ ಅಭಿಮಾನ ಹುಟ್ಟಿ ಶರೀರಾಭಿಮಾನದಿಂದ ಕೂಡಿ ಕರ್ಮ ಮಾಡುವುದರ ಫಲವಾಗಿ ಚೇತನನಿಗೆ ಈಗ ಪ್ರಾಪ್ತವಾಗಿರುವ ಶರೀರ ಉಂಟಾಗಿದೆ. ಈ ಶರೀರದಲ್ಲಿರುವ ಕರ್ಮ, ವಾಸನಾದಿಗಳಿಗೆ ತಕ್ಕಂತೆ ಅವನಿಗೆ ಸತ್ತ್ವರಜಸ್ತಮೋ ಗುಣಗಳ ಸಂಪರ್ಕ ಉಂಟಾಗಿದೆ. ಈ ತ್ರಿಗುಣಗಳಿಂದ ಪ್ರೇರಿತನಾಗಿ ಅವನು ಕರ್ಮ ಮಾಡುತ್ತಾನೆ. ಆದ್ದರಿಂದ ತ್ರಿಗುಣಗಳಿಂದ ಕೂಡಿದ ಶರೀರದ ಮೂಲಕ ಅವನಿಗೆ ಕರ್ತೃತ್ವಾದಿಗಳು ಉಂಟಾಗುತ್ತವೆಯೇ ವಿನಹ ಆತ್ಮನ ನಿಜಸ್ವರೂಪದ ಮೂಲಕ ಅಂದರೆ ಆತ್ಮನ ಸ್ವರೂಪ ಪ್ರಯುಕ್ತವಾಗಿ ಉಂಟಾದುದಲ್ಲ.

ಅಷ್ಟು ಮಾತ್ರವಲ್ಲದೆ ಸಮಸ್ತ ಜೀವಿಗಳೂ ಪರಮಾತ್ಮನಿಗೆ ಶರೀರವಾಗಿರುವುದರಿಂದ ಅವನ ನಿಯಮನಕ್ಕೆ ಒಳಪಟ್ಟಿರುವುದೇ ಜೀವಾತ್ಮನ ಸ್ವರೂಪವಾಗಿದೆ. ಆದ್ದರಿಂದ ತ್ರಿಗುಣಗಳಿಂದ ಕೂಡಿದ ಶರೀರದಿಂದ ಮಾಡಲ್ಪಟ್ಟ ಕಾರ್ಯಗಳ ಕರ್ತೃತ್ವವನ್ನು ಸಮಸ್ತರಿಗೂ ಆತ್ಮ

ಸ್ವರೂಪನಾದ ಪರಮಾತ್ಮನಲ್ಲಿ ಆರೋಪಿಸಿ ಕರ್ಮವನ್ನು ಮಾಡಬೇಕು ಅಂದರೇನು, ನವದ್ವಾರವುಳ್ಳ ನಮ್ಮ ಶರೀರವನ್ನೇ ಒಂದು ಪಟ್ಟಣವಾಗಿ ಭಾವಿಸಿ, ಅದಕ್ಕೆ ಪರಮಾತ್ಮನೇ ಸಾರ್ವಭೌಮನೆಂದೂ, ಜೀವಾತ್ಮನಾದ ತಾನು ಪರಮಾತ್ಮನ ಭೃತ್ಯನೆಂದೂ ಮತ್ತು ಅವನ (ಪರಮಾತ್ಮನ) ಕಾರ್ಯ ನಿರ್ವಾಹಕ ಪೌರರಾದ ತನ್ನ ಇಂದ್ರಿಯಗಳನ್ನು ಪರಮಾತ್ಮನ ಪರವಾಗಿ ಆಳುವ ಅಧಿಕಾರಿ ತಾನೆಂದೂ ಭಾವಿಸಿಕೊಂಡು, ಜಿತೇಂದ್ರಿಯನಾಗಿ, ತಾನು ಕರ್ಮಗಳಿಗೆ ಕರ್ತೃವಲ್ಲ, ಪರಮಾತ್ಮನು ಜೀವಾತ್ಮನಾದ ತನ್ನ ಶರೀರದ ಮೂಲಕ ಅದರ ಗುಣಗಳಿಗೆ ಅನುಗುಣವಾಗಿ ಕರ್ಮಗಳನ್ನು ಮಾಡಿಸುತ್ತಿದ್ದಾನೆ ಎಂಬ ಅನುಸಂಧಾನದೊಂದಿಗೆ ಕರ್ಮಗಳನ್ನು ಮಾಡುತ್ತಿರಬೇಕು. ಕರ್ಮಯೋಗಿಯಾದ, ದೇಹಿಯಾದ ಜೀವಾತ್ಮನು ಕಣ್ಣಿನಿಂದ ನೋಡುವುದು, ಕಿವಿಯಿಂದ ಕೇಳುವುದು ಮುಂತಾಗಿ ಇಂದ್ರಿಯಗಳ ಮೂಲಕ ಶಾರೀರಿಕವಾಗಿ ಕರ್ಮಗಳನ್ನು ಮಾಡುತ್ತಿದ್ದರೂ ಮಾನಸಿಕವಾಗಿ, ಆತ್ಮನಾದ ತಾನು ಯಾವ ಕೆಲಸವನ್ನೂ ಮಾಡುತ್ತಿಲ್ಲ ಎಂದು ಅನುಸಂಧಾನ ಮಾಡುತ್ತಾ ಶಾಂತಚಿತ್ತನಾಗಿ ಇರುತ್ತಾನೆ. ಹೀಗೆ ಕರ್ಮದ ಕರ್ತೃ ತಾನಲ್ಲವೆಂಬ ಭಾವನೆ ಹೊಂದಿ, ಅಹಂಕಾರರಹಿತನಾಗಿರುವುದೇ ಅಕರ್ತೃತ್ವಾನುಸಂಧಾನವು.

**iii) ಫಲಾಭಿಸಂಧಿರಹಿತನಾಗಿ ಮಮಕಾರವಿಲ್ಲದೆ ಕರ್ಮಮಾಡಬೇಕು:-** ಕರ್ಮವೂ ಪರಮಾತ್ಮನದು, ಅದರ ಕರ್ತೃವೂ ಪರಮಾತ್ಮನು ಎಂದು ತಿಳಿದ ಮೇಲೆ, ಅದರ ಫಲಕ್ಕೆ ಜೀವಾತ್ಮನು ಅಧಿಕಾರಿಯಲ್ಲ ಎಂಬುದು ತಾನಾಗಿಯೇ ವ್ಯಕ್ತವಾಗುತ್ತದೆ. ಕರ್ಮದ ಫಲವೂ ಪರಮಾತ್ಮನಿಗೆ ಸೇರಿದ್ದೆಂಬ ಭಾವನೆಹೊಂದಿ ಫಲದಲ್ಲಿ ಆಸಕ್ತಿ ಇಟ್ಟುಕೊಳ್ಳದೆ ಮಮಕಾರರಹಿತನಾಗಿ ಕರ್ಮ ಮಾಡಬೇಕು.

**iv) ಸಮಚಿತ್ತನಾಗಿರಬೇಕು:-** ಕರ್ಮಕ್ಕೆ ಫಲ ದೊರಕಲಿ ದೊರಕದಿರಲಿ, ಲಾಭವುಂಟಾಗಲಿ ನಷ್ಟವುಂಟಾಗಲಿ, ಸುಖಬರಲಿ ದುಃಖಬರಲಿ, ಎಲ್ಲದರಲ್ಲೂ ಸಮಚಿತ್ತನಾಗಿರಬೇಕು. ಫಲಾಸಕ್ತಿರಹಿತನಾಗಿ ಕರ್ಮಮಾಡುವವನಿಗೆ ಸಮಚಿತ್ತತ್ವವು ತಾನಾಗಿಯೇ ಉಂಟಾಗುತ್ತದೆ. "ಅರ್ಜುನನೆ! ಸುಖದುಃಖಗಳನ್ನು, ಲಾಭ ನಷ್ಟಗಳನ್ನು ಸಮನಾಗಿ ಭಾವಿಸಿಕೊಂಡು, ಕರ್ತವ್ಯ

ಕರ್ಮವೆಂದು ಯುದ್ಧ ಮಾಡಿದೆಯಾದರೆ ನಿನಗೆ ಯಾವ ವಿಧವಾದ ಪಾಪವೂ ಉಂಟಾಗುವುದಿಲ್ಲ" - ಎಂದು ಶ್ರೀಕೃಷ್ಣನು ಹೇಳಿದ್ದಾನೆ.

**v) ಕರ್ಮವನ್ನು ಭಗವದಾರಾಧನೆ ಎಂಬ ಪವಿತ್ರ ಭಾವನೆಯೊಂದಿಗೆ ಮಾಡಬೇಕು:-** ಕರ್ಮದಲ್ಲಾಗಲಿ, ಕರ್ಮಫಲದಲ್ಲಾಗಲಿ ಆಸಕ್ತಿ ಇಲ್ಲದ ಮೇಲೆ ಕರ್ಮವನ್ನು ಏತಕ್ಕೆ ಮಾಡಬೇಕು ಎಂಬ ಅನಾದರಣೆ ಇರಕೂಡದು. ಕರ್ಮವು ಪರಮಾತ್ಮನ ಆರಾಧನೆ, ಅವನ ಪೂಜೆ ಎಂಬ ಭಾವನೆಯಿಂದ ಅದನ್ನು ಚೆನ್ನಾಗಿ ಮಾಡಬೇಕು. ಯಜ್ಞಾರ್ಥವಾಗಿ ಕರ್ಮಮಾಡು ಎಂದಿದ್ದಾನೆ ಶ್ರೀಕೃಷ್ಣ. ಯಜ್ಞ ಎಂದರೆ ಭಗವಂತನ ಪೂಜೆ ಎಂದು ಅರ್ಥ. ಆದ್ದರಿಂದ ಕರ್ಮವನ್ನು ಪರಮಪುರುಷನ ಆರಾಧನೆ ಎಂದು ಭಾವಿಸಿ ಭಕ್ತಿಯಿಂದ ಮಾಡಬೇಕು.

**vi) ಕರ್ಮಯೋಗಿಯು ಕರ್ಮದಲ್ಲಿ ಅಂತರ್ಗತವಾಗಿರುವ ಜ್ಞಾನಾಂಶಕ್ಕೆ ಪ್ರಧಾನತೆ ಕೊಡಬೇಕು:-** ಅಧ್ಯಾತ್ಮ ಚಿಂತನೆಯೊಂದಿಗೂ ಅಕರ್ತೃತ್ವಾನುಸಂಧಾನದೊಂದಿಗೂ ಕರ್ಮಮಾಡುವುದರಿಂದ ಕರ್ಮಯೋಗಕ್ಕೆ ಜ್ಞಾನಾಕಾರತೆ ಉಂಟಾಗುತ್ತದೆ. ಆದ್ದರಿಂದ ಕರ್ಮದಲ್ಲಿ ಕರ್ಮಾಂಶ ಮತ್ತು ಜ್ಞಾನಾಂಶ ಎಂಬ ಎರಡು ಅಂಶಗಳಿವೆ. ಅದನ್ನು ಶ್ರೀಕೃಷ್ಣ ಪರಮಾತ್ಮ ಕರ್ಮ, ಅಕರ್ಮ ಎಂದು ಕರೆದಿದ್ದಾನೆ. ಕ್ರಿಯಾರೂಪವಾದ ಕರ್ಮಾನುಷ್ಠಾನವೇ **ಕರ್ಮವು.** ಅದರಲ್ಲಿ ಅಂತರ್ಗತವಾಗಿರುವ ಜ್ಞಾನಾಂಶವೇ **ಅಕರ್ಮವು** ಮತ್ತು ಕರ್ಮಕ್ಕೆ ಸಾಧನವಾದ ದ್ರವ್ಯಾರ್ಜನೆ ಮುಂತಾದ ವಿಧ ವಿಧವಾದ ಕರ್ಮಗಳು **ವಿಕರ್ಮಗಳು.** ಕರ್ಮ, ಅಕರ್ಮ, ಮತ್ತು ವಿಕರ್ಮ ಇವುಗಳ ಸ್ವರೂಪವನ್ನು ಕರ್ಮಯೋಗಿಯು ಚೆನ್ನಾಗಿ ತಿಳಿಯಬೇಕು. ಮತ್ತು ಕರ್ಮದಲ್ಲಿ ಅಂತರ್ಗತವಾಗಿರುವ ಜ್ಞಾನಾಂಶಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು. ಕರ್ಮದಲ್ಲಿ ಜ್ಞಾನಾಂಶವು ಅಡಗಿರುವುದರಿಂದ ಕರ್ಮಯೋಗ, ಜ್ಞಾನಯೋಗ ಎರಡೂ ಒಂದರೊಂದಿಗೆ ಒಂದು ಸೇರಿಕೊಂಡಿವೆ ಎಂಬುದು ಸ್ಪಷ್ಟವಾಗಿದೆ ಮತ್ತು ಕರ್ತವ್ಯ ಕರ್ಮವನ್ನು ಭಗವದಾರಾಧನೆ ಎಂಬ ಭಕ್ತಿ ಭಾವದಿಂದ ಮಾಡುವುದರಿಂದ ಕರ್ಮಯೋಗದಲ್ಲೂ ಭಕ್ತಿಯು ಅಂತರ್ಗತವಾಗಿದೆ.

ಹೀಗೆ ಅಧ್ಯಾತ್ಮ ಚಿಂತನೆಯೊಂದಿಗೆ ಅಕರ್ತೃತ್ವಾನುಸಂಧಾನಯುತನಾಗಿ, ಫಲಾಸಕ್ತಿರಹಿತನಾಗಿ, ಸಮಚಿತ್ತನಾಗಿ, ಭಗವದಾರಾಧನೆ ಎಂದು ಕರ್ತವ್ಯ ಕರ್ಮಗಳನ್ನು ಮಾಡುವುದೇ ಕರ್ಮಯೋಗವು. ಇದನ್ನು ಗೀತೆಯಲ್ಲಿ–

**''ಮಯಿಸರ್ವಾಣಿಕರ್ಮಾಣಿಸನ್ನ್ಯಸ್ಯ ಅಧ್ಯಾತ್ಮ ಚೇತಸಾ ।**
**ನಿರಾಶೀಃ ನಿರ್ಮಮೋಽಭೂತ್ವಾಯುದ್ಧಸ್ವ ವಿಗತಃಜ್ವಾರಃ ॥''**

ಅಂದರೆ ಆತ್ಮ ಪರಮಾತ್ಮ ಸ್ವರೂಪ ಜ್ಞಾನದೊಂದಿಗೆ, ಪರಮೇಶ್ವರನಾದ ನನ್ನಲ್ಲಿ ಸಮಸ್ತ ಕರ್ಮಗಳನ್ನೂ ಸಮರ್ಪಿಸಿ, ಕರ್ಮವು ತನ್ನದೆಂಬ ಮಮತೆ ಇಲ್ಲದವನಾಗಿ, ಕರ್ಮದ ಫಲದಲ್ಲಿ ಆಸಕ್ತಿ ಇಲ್ಲದವನಾಗಿ, ಯಾವ ವಿಧವಾದ ಮಾನಸಿಕ ಸಂತಾಪವೂ ಇಲ್ಲದವನಾಗಿ ಯುದ್ಧವನ್ನು ಮಾಡು (ಕರ್ತವ್ಯ ಕರ್ಮಗಳನ್ನು ಮಾಡು) ಎಂದು ಶ್ರೀಕೃಷ್ಣ ಪರಮಾತ್ಮನು ಉಪದೇಶ ಮಾಡಿದ್ದಾನೆ.

## 4. ಧ್ಯಾನಯೋಗ

ಆತ್ಮ ಪರಮಾತ್ಮರ ಯಥಾರ್ಥಸ್ವರೂಪ ಜ್ಞಾನಹೊಂದಿ, ಅದನ್ನು ನಿರಂತರವಾಗಿ ಮನಸ್ಸಿನಲ್ಲಿ ನಿಲ್ಲಿಸುವುದೇ ಧ್ಯಾನಯೋಗವು. ಗ್ರಂಥ ವ್ಯಾಸಂಗದಿಂದಲೂ, ಗುರೂಪದೇಶದಿಂದಲೂ ಲಭಿಸುವ ಆತ್ಮಪರಮಾತ್ಮ ಸ್ವರೂಪ ಜ್ಞಾನವು ಅಪೂರ್ಣವಾದುದು. ಬುದ್ಧಿಯ ಮೂಲಕ ಗ್ರಹಿಸಿದ ಆ ಜ್ಞಾನವನ್ನು ಅಲ್ಲಿಗೇ ನಿಲ್ಲಿಸದೆ ಅನುಭವಕ್ಕೆ ತಂದುಕೊಳ್ಳುವ ಅಭ್ಯಾಸ ಮಾಡಬೇಕು. ಅದನ್ನು ಮನನ ಮಾಡುತ್ತಾ, ಧ್ಯಾನಮಾಡುತ್ತಾ ಅನುಭವ ವೇದ್ಯವಾಗುವಂತೆ ಮಾಡಿಕೊಳ್ಳಬೇಕು. ಸರ್ವದಾ ಅದನ್ನೇ ಮೇಲೆ ಮೇಲೆ ಸ್ಮರಿಸುತ್ತಾ, ನಿರಂತರ ಚಿಂತನೆ ಮಾಡುತ್ತಾ, ಮನನ ಮಾಡುತ್ತಾ ಮತ್ತು ಧ್ಯಾನ ಮಾಡುತ್ತಾ ಮನಸ್ಸನ್ನು ಧ್ಯಾನ ವಿಷಯದಲ್ಲಿ ನಿಲ್ಲಿಸುವುದೇ ಧ್ಯಾನಯೋಗವು. ಇದು ಬಹಳ ಕಷ್ಟವಾದ ಸಾಧನೆ. ಏಕೆಂದರೆ ಮನಸ್ಸು ಚಲಿಸುತ್ತಲೇ ಇರುವುದರಿಂದ ಅದು ಧ್ಯಾನ ವಿಷಯದಲ್ಲಿ ನಿಲ್ಲುವುದಿಲ್ಲ.

## ಧ್ಯಾನ ಯೋಗದ ಅಭ್ಯಾಸಗಳು:

ಮನಸ್ಸನ್ನು ಧ್ಯಾನ ವಿಷಯದಲ್ಲಿ ನಿಲ್ಲಿಸುವುದಕ್ಕಾಗಿ ಧ್ಯಾನನಿಷ್ಠನು ಮಾಡಬೇಕಾದ ಅಭ್ಯಾಸಗಳನ್ನು ಗೀತೆಯ ಆರನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ವಿವರವಾಗಿ ಉಪದೇಶಮಾಡಿದ್ದಾನೆ.

i) ಧ್ಯಾನಯೋಗನಿಷ್ಠನು ಬ್ರಹ್ಮಚರ್ಯವ್ರತಪಾಲನೆ ಮಾಡಬೇಕು. ಅವನು ಆಹಾರ, ವಿಹಾರ, ನಿದ್ರೆ, ಜಾಗರಣೆ, ಊಟ, ಉಪವಾಸ ಮುಂತಾಗಿ ಎಲ್ಲದರಲ್ಲೂ ಒಂದು ಪರಿಮಿತಿಗೆ ಒಳಪಟ್ಟವನಾಗಿ ಇರಬೇಕು. ಅತಿ ನಿದ್ರೆಯಾಗಲಿ, ಅತಿ ಜಾಗರಣೆಯಾಗಲಿ, ಅತಿ ಊಟವಾಗಲಿ, ಅತಿ ಉಪವಾಸವಾಗಲಿ ಮಾಡಕೂಡದು. ಎಲ್ಲದರಲ್ಲೂ ಮಿತಿ ಇರಬೇಕು.

ii) ಧ್ಯಾನವನ್ನು ಒಂದು ಏಕಾಂತ ಸ್ಥಳದಲ್ಲಿ ಕುಳಿತುಕೊಂಡು ಮಾಡಬೇಕು. ಇಲ್ಲದಿದ್ದರೆ ಏಕಾಗ್ರತೆ ಬರುವುದಿಲ್ಲ. ಕುಳಿತುಕೊಳ್ಳುವ ಸ್ಥಳ ತುಂಬಾ ಎತ್ತರವಾಗಿಲ್ಲದೆ ಮತ್ತು ತುಂಬಾ ತಗ್ಗಾಗಿರದೆ ಮಧ್ಯಸ್ಥವಾದ ಸ್ಥಳವಾಗಿರಬೇಕು ಮತ್ತು ಅದು ಪರಿಶುದ್ಧವಾಗಿರಬೇಕು. ಆ ಸ್ಥಳದಲ್ಲಿ ಕೃಷ್ಣಾಜಿನ, ದರ್ಭೆ, ವಸ್ತ್ರ ಇವುಗಳನ್ನು ಒಂದರ ಮೇಲೊಂದನ್ನು ಇಟ್ಟು ಅದರ ಮೇಲೆ ಕುಳಿತು ಧ್ಯಾನ ಮಾಡಬೇಕು.

iii) ಶರೀರ, ಶಿರಸ್ಸು, ಕಂಠ ಇವುಗಳನ್ನು ಅಲ್ಲಾಡಿಸದೆ ಸಮವಾಗಿ ನಿಲ್ಲಿಸಿ ದಿಕ್ಕುಗಳನ್ನು ನೋಡದೆ ಮೂಗಿನ ತುದಿಯನ್ನು ನೋಡುತ್ತಾ ಧ್ಯಾನ ಮಾಡಬೇಕು.

iv) ಸಂಕಲ್ಪಜನ್ಯವಾದ ಸಮಸ್ತ ಕಾಮಗಳನ್ನೂ ನಿಶ್ಶೇಷವಾಗಿ ಬಿಟ್ಟು ಜಿತೇಂದ್ರಿಯನಾಗಿ ಮೆಲ್ಲಮೆಲ್ಲಗೆ ಬುದ್ಧಿಯಿಂದ ಮನಸ್ಸನ್ನು ಮತ್ತಾವುದನ್ನೂ ಚಿಂತಿಸದಂತೆ ತಡೆದು, ಧ್ಯಾನ ವಿಷಯದಲ್ಲೇ ಮಗ್ನವಾಗುವಂತೆ ಮಾಡಬೇಕು. ಚಂಚಲವಾದ ಅಸ್ಥಿರವಾದ ಮನಸ್ಸು ಯಾವ ಯಾವ ವಿಷಯಗಳನ್ನು ಹುಡುಕುತ್ತಾ ಓಡುತ್ತದೆಯೋ ಅವುಗಳ ಕಡೆಗೆ ಹೋಗದಂತೆ ಅದನ್ನು ತಡೆದು ಬಲವಂತದಿಂದ ಧ್ಯಾನವಸ್ತುವಿನ ಕಡೆಗೆ ತಿರುಗಿಸಿ ಅಲ್ಲಿಯೇ ನಿಲ್ಲುವಂತೆ ಮಾಡಬೇಕು.

v) ಧ್ಯಾನವು ಮೌನವಾಗಿ ನಡೆಯಬೇಕು. ಮೌನಧ್ಯಾನವೇ ಶ್ರೇಷ್ಠವಾದುದು.

vi) ಮನಸ್ಸನ್ನು ನಿಗ್ರಹಿಸಿ ಪ್ರಶಾಂತವಾಗಿಟ್ಟುಕೊಳ್ಳಬೇಕು. ಮನಸ್ಸಿನಲ್ಲಿ ಯಾವ ವಿಧವಾದ ಭಯವಾಗಲಿ ಚಿಂತೆಯಾಗಲಿ ಇರಬಾರದು.

ಅಭ್ಯಾಸ ಮತ್ತು ವೈರಾಗ್ಯದಿಂದ ಚಂಚಲವಾದ ಮನಸ್ಸನ್ನು ಸ್ವಾಧೀನಪಡಿಸಿ ಕೊಳ್ಳುವ ಪ್ರಯತ್ನ ಮಾಡಬೇಕು.

ಅಭ್ಯಾಸವೆಂದರೆ ಪುನಃ ಪುನಃ ಪ್ರಯತ್ನಪಟ್ಟು ಮಾಡುವುದು. ಬಹು ಕಾಲದ ಸತತ ಪ್ರಯತ್ನದಿಂದ ಮಾಡಬೇಕಾದ ಕೆಲಸವನ್ನು ಸಾಧಿಸುವುದೇ ಅಭ್ಯಾಸವು. ವೈರಾಗ್ಯವೆಂದರೆ ಇಂದ್ರಿಯಗಳನ್ನೂ ಮನಸ್ಸನ್ನೂ ವಿಷಯದಲ್ಲಿ ಪ್ರವರ್ತಿಸದಂತೆ ತಡೆಯುವುದು - **"ಮನಸ್ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ"** - ಅಂದರೆ ಮನಸ್ಸನ್ನು ನಿಗ್ರಹಿಸಿ ಪರಮಾತ್ಮನಾದ ನನ್ನಲ್ಲಿಯೇ ಮನಸ್ಸುಳ್ಳವನಾಗಿ ನನ್ನನ್ನೇ ಆಶ್ರಯಿಸಿ, ಧ್ಯಾನಯೋಗ ಯುಕ್ತನಾಗು ಎಂದು ಶ್ರೀಕೃಷ್ಣನು ಉಪದೇಶ ಮಾಡಿದ್ದಾನೆ

ಈ ಅಭ್ಯಾಸಗಳ ಫಲವಾಗಿ ಯಾವಾಗ ಮನಸ್ಸು ಅಲ್ಲಿ ಇಲ್ಲಿ ಚಲಿಸದೆ ನಿಂತು ಧ್ಯಾನ ವಿಷಯದಲ್ಲಿ ಏಕಾಗ್ರತೆ ಹೊಂದುತ್ತದೆಯೋ ಆಗ ಧ್ಯಾನ ಯೋಗವು ಸಫಲವಾಗುತ್ತದೆ. ಆದರೆ ಒಂದು ವೇಳೆ ಧ್ಯಾನ ಯೋಗ ಅಭ್ಯಾಸದಲ್ಲಿ ನಿರತನಾದವನು ಪ್ರಯತ್ನಪಟ್ಟ ಮೇಲೂ ಚಂಚಲವಾದ ಮನಸ್ಸನ್ನು ಸ್ವಾಧೀನಪಡಿಸಿಕೊಳ್ಳಲು ಶಕ್ತನಾಗದೆ ಯೋಗಭ್ರಷ್ಟನಾದರೂ ಏನೂ ಭಯಪಡಬೇಕಾಗಿಲ್ಲ, ಒಳ್ಳೆಯ ಕೆಲಸಕ್ಕೆ ಕೈ ಹಾಕಿದ ಅವನಿಗೆ ಎಂದಿಗೂ ನಷ್ಟವಿಲ್ಲ. ಅದನ್ನು ಸ್ವಲ್ಪ ಆಚರಿಸಿದರೂ ಅದರಿಂದ ಮಹತ್ವವುಂಟು. ಇಂದಿನ ಜನ್ಮದಲ್ಲಿ ಸಾಧಿಸಲಾಗದಿದ್ದರೂ ಮುಂದಿನ ಜನ್ಮದಲ್ಲಾದರೂ ಮಹಾತ್ಮರ ಅಥವಾ ಯೋಗಿಗಳ ಮನೆಯಲ್ಲಿ ಹುಟ್ಟಿ ಅದನ್ನು ಸಾಧಿಸಲು ಶಕ್ತನಾಗುತ್ತಾನೆ ಎಂದು ಶ್ರೀಕೃಷ್ಣ ಭರವಸೆ ನೀಡಿದ್ದಾನೆ.

ಕೇವಲ ಪ್ರತ್ಯಗಾತ್ಮ ಸ್ವರೂಪವನ್ನು ಮಾತ್ರ ಧ್ಯಾನ ಮಾಡುವವನು ಧ್ಯಾನಯೋಗವು ಸಫಲ ವಾದಾಗ ಜೀವಾತ್ಮ ಸ್ವರೂಪವನ್ನು ಸಾಕ್ಷಾತ್ಕರಿಸುವನು. ಅದೇ ರೀತಿ ಪರಮಾತ್ಮ ಸ್ವರೂಪವನ್ನು ಧ್ಯಾನ ಮಾಡುವವನು ಕೊನೆಯಲ್ಲಿ ಪರಮಾತ್ಮನ ಸಾಕ್ಷಾತ್ಕಾರ ಪಡೆಯುವನು.

"ಆದರೆ ಎಲ್ಲರಿಗಿಂತಲೂ ಯಾವನು ಪರಮಾತ್ಮನಾದ ನನ್ನಲ್ಲೇ ನೆಟ್ಟ ಮನಸ್ಸುಳ್ಳವನಾಗಿ, ನನ್ನನ್ನು ಹೊಂದಲು ಶ್ರದ್ಧೆ ಉಳ್ಳವನಾಗಿ ನನ್ನನ್ನು ಭಜಿಸುತ್ತಾನೆಯೋ ಅವನೇ ಯೋಗಿಗಳೆಲ್ಲೆಲ್ಲಾ ಶ್ರೇಷ್ಠತಮನು ಎಂಬುದೇ ನನ್ನ ಅಭಿಪ್ರಾಯ" ಎಂದು ಶ್ರೀಕೃಷ್ಣನು ಆರನೆಯ ಅಧ್ಯಾಯದ ಕೊನೆಯಲ್ಲಿ ಸ್ಪಷ್ಟವಾಗಿ ಉಪದೇಶ ಮಾಡಿದ್ದಾನೆ ಆದ್ದರಿಂದ ಪರಮಾತ್ಮ ಸ್ವರೂಪ ಧ್ಯಾನವೇ ಶ್ರೇಷ್ಠವಾದುದು.

## 5. ಭಕ್ತಿಯೋಗ

ಭಗವಂತನ ಮೇಲಿನ ಪ್ರೀತಿಯೇ ಭಕ್ತಿಯು. ಭಗವಂತನನ್ನು ಪ್ರೀತಿಯಿಂದ

ಸ್ತೋತ್ರ, ಮನನ ಮತ್ತು ಧ್ಯಾನ ಮಾಡುವುದೇ ಭಕ್ತಿಯೋಗವು. ಎಲ್ಲಾ ಯೋಗ ಸಾಧನೆಗಳನ್ನೂ ಪರಮಾತ್ಮನಲ್ಲಿ ಪ್ರೀತಿ ಗೌರವಗಳಿಂದ ಮಾಡಿದರೆ ಅದು ಭಕ್ತಿಯೋಗದ ಅಭ್ಯಾಸವಾಗುವುದು.

ಜಗತ್ತಿನಲ್ಲಿ ಪರಮಾತ್ಮನನ್ನು ಸಾಕ್ಷಾತ್ಕರಿಸಬೇಕೆಂಬುದೇ ಸಮಸ್ತ ಮಾನವರ ಮುಖ್ಯ ಧ್ಯೇಯವಾಗಿರಬೇಕು. ಈ ಧ್ಯೇಯ ಸಾಧನೆಗೆ ಭಗವಂತನನ್ನು ಭಕ್ತಿಯಿಂದ ಉಪಾಸನೆ ಮಾಡುವುದೇ ಉಪಾಯ. ಹಾಗಾದರೆ ಈ ಭಗವಂತನು ಯಾರು ಎಂದರೆ ಜಗತ್ತಿನಲ್ಲಿ ಮಾನವರು ಹೊಂದಬೇಕಾದ ಸರ್ವೋತ್ಕೃಷ್ಟವಾದ ಫಲವೂ, ಪರಬ್ರಹ್ಮನೂ, ನಿತ್ಯನೂ, ಸಕಲಜಗತ್ತಿಗೂ ಕಾರಣಭೂತನೂ, ಸಕಲವನ್ನು ಅರಿತವನೂ, ಸರ್ವಶರೀರಕನೂ, ಸಂಕಲ್ಪಿಸಿದ್ದನ್ನೆಲ್ಲಾ ಸಫಲಗೊಳಿಸುವವನೂ, ಮಹತ್ತಾದ ಐಶ್ವರ್ಯ ವಿಭೂತಿಗಳುಳ್ಳವನೂ, ಸರ್ವಾಂತರ್ಯಾಮಿಯೂ, ಸರ್ವರಕ್ಷಕನೂ, ಚತುರ್ವಿಧಫಲಪ್ರದನೂ, ಆರ್ತ, ಅರ್ಥಾರ್ಥಿ, ಜಿಜ್ಞಾಸು, ಜ್ಞಾನಿ ಎಂಬ ಚತುರ್ವಿಧ ಭಕ್ತರಿಗೂ ಆಶ್ರಯಣೀಯನೂ ಆಗಿರುವ ಪರಮೇಶ್ವರನಾದ ತಾನೇ ಎಂದೂ; ಪರಮೇಶ್ವರನನ್ನು ಭಕ್ತಿಯಿಂದ ಉಪಾಸಿಸುವುದೇ ಅವನನ್ನು ಹೊಂದಬೇಕೆಂಬ ಸರ್ವೋತ್ಕೃಷ್ಟವಾದ ಧ್ಯೇಯ ಸಾಧನೆಗೆ ಉಪಾಯವು; ಇದೇ ಭಕ್ತಿಯೋಗವು ಎಂದೂ ಶ್ರೀಕೃಷ್ಣನು ಹೇಳಿದ್ದಾನೆ. ಮೇಲೆ ವಿವರಿಸಿದ ಕರ್ಮಯೋಗ, ರಾಜಯೋಗ, ಜ್ಞಾನಯೋಗ ಮತ್ತು ಧ್ಯಾನಯೋಗಗಳೆಲ್ಲವೂ ಈ ಭಕ್ತಿಯೋಗ ಸಾಧನೆಗೆ ಅಂಗಗಳಾಗಿವೆ. ಭಗವಂತನ ಧ್ಯಾನವು ಭಕ್ತಿರೂಪವನ್ನು ಹೊಂದಿದರೆ ಆಗ ಅದು ಅವನನ್ನು ಹೊಂದಲು ಉಪಾಯವಾಗುತ್ತದೆ.

ಹಾಗಾದರೆ **ಭಕ್ತಿರೂಪಾಪನ್ನಧ್ಯಾನ** ಎಂದರೇನು? ಮಾನವನು ಮಾಡುವ ಸ್ತೋತ್ರ, ಪ್ರವಚನ, ವೇದಾಧ್ಯಯನ, ಧ್ಯಾನ ಮುಂತಾದುವುಗಳಿಂದ ಮಾತ್ರ ಪರಮಾತ್ಮನ ಸಾಕ್ಷಾತ್ಕಾರವು ಸಾಧ್ಯವಿಲ್ಲ. ಭಗವಂತನಿಗೆ ಚೇತನನ ಮೇಲೆ ಪ್ರೀತಿ ಉಂಟಾದರೆ ಆಗ ಇವನು ಅವನ (ಚೇತನನು ಭಗವಂತನ) ಕೃಪೆಗೆ ಪಾತ್ರನಾಗುತ್ತಾನೆ. ಆದ್ದರಿಂದ ಭಗವಂತನ ಪ್ರೀತಿಯನ್ನು ಸಂಪಾದಿಸುವುದಕ್ಕಾಗಿ ಮಾನವನು ಸರ್ವದಾ ಎಡಬಿಡದೆ ಅವನನ್ನು ಸ್ಮರಿಸುತ್ತಿರಬೇಕು. ಆದರೆ ಈ ಸ್ಮರಣೆಯು ಪ್ರೀತಿಯಿಂದ ಕೂಡಿದ್ದಾಗಿರಬೇಕು. ಹೀಗೆ ಅವನನ್ನು ಪ್ರೀತಿಯಿಂದ ಸ್ಮರಿಸಬೇಕಾದರೆ ಸ್ಮರಣೆಗೆ ವಿಷಯನಾದ ಪರಮಾತ್ಮನಲ್ಲಿ ಮಾನವನಿಗೆ ಎಲ್ಲಕ್ಕಿಂತಲೂ ಅಧಿಕವಾದ ಪ್ರೀತಿ ಉಂಟಾಗಬೇಕು. ಅನಂತರ ತೈಲಧಾರೆಯ ಹಾಗೆ ನಿರಂತರ ಅವಿಚ್ಛಿನ್ನವಾಗಿ

ಎಡಬಿಡದೆ ಅವನನ್ನು ಪ್ರೀತಿಯಿಂದ ಸ್ಮರಿಸುತ್ತಿರಬೇಕು ಮತ್ತು ಭಗವಂತನು ಇವನನ್ನು ಪ್ರೀತಿಸುವಂತೆ ಇವನು ಜೀವನದಲ್ಲಿ ನಡೆಯಬೇಕು. ಇಂತಹ ಪ್ರೀತಿಯುತವಾದ ನಿರಂತರವಾದ ಭಗವಂತನ ಸ್ಮರಣೆಯನ್ನು **ಧ್ರುವಾಸ್ಮೃತಿ** ಎಂದೂ **ಭಕ್ತಿರೂಪಾಪನ್ನ ಧ್ಯಾನವೆಂದೂ, ಉಪಾಸನೆ** ಎಂದೂ ಕರೆದಿದ್ದಾರೆ. ಪ್ರೀತಿ ಗೌರವಗಳಿಂದ ಭಗವಂತನನ್ನು ಎಡೆಬಿಡದೆ ಸದಾಕಾಲದಲ್ಲಿಯೂ ಸ್ಮರಿಸುತ್ತಾ ಮಾಡುವ ಉಪಾಸನೆ, ಸ್ತೋತ್ರ, ಮನನ, ಧ್ಯಾನಾದಿಗಳೇ ಭಕ್ತಿಯು, ಈ ಭಕ್ತಿಮಾರ್ಗವೇ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಉಪಾಯವು ಎಂದು ಶ್ರೀಕೃಷ್ಣನು ಬಹಳ ವಿಶದವಾಗಿ ಗೀತೆಯ ಎರಡನೆಯ ಷಟ್ಕದಲ್ಲಿ ಉಪದೇಶ ಮಾಡಿದ್ದಾನೆ. "ಅನನ್ಯಾಶ್ಚಿಂತಯಂತೋಮಾಂ" - "ಮನ್ಮನಾಭವ" - "ಮಯ್ಯೇವಮನ ಆದತ್ಸ್ವ"- "ಮಯ್ಯಾಸಕ್ತ ಮನಃ"- ಅನನ್ಯಚೇತಾಃ" "ಮತ್ಕರ್ಮಕೃತ್ ಮತ್ಪರಮಃ" - ಇವೇ ಮುಂತಾದ ಅನೇಕ ಶ್ಲೋಕಗಳಲ್ಲಿ ತಿಳಿಸಿದ್ದಾನೆ.

**ಭಕ್ತಿಯೋಗದ ಅಭ್ಯಾಸಗಳು -**

i) ಪರಮಾತ್ಮನನ್ನು ಅತ್ಯಂತವಾಗಿ ಪ್ರೀತಿಸಬೇಕು ಮತ್ತು ಪರಮಾತ್ಮನನ್ನು ಬಿಟ್ಟು ಇತರ ವಸ್ತುಗಳಲ್ಲಿ ವೈರಾಗ್ಯಹೊಂದಬೇಕು.

ii) ಭಗವಂತನ ವಿಷಯವನ್ನು ಶ್ರವಣ, ಮನನ, ಕೀರ್ತನ, ಸ್ತೋತ್ರ, ಧ್ಯಾನಾದಿಗಳ ಮೂಲಕ ಪ್ರೀತಿಯಿಂದ ಸ್ಮರಿಸುತ್ತಲೂ, ಧ್ಯಾನ ಮಾಡುತ್ತಲೂ ಇರಬೇಕು.

iii) ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ ತಿಳಿಸಿರುವ ಕರ್ಮಯೋಗಿಯಾದ ಭಕ್ತನ ಗುಣಗಳನ್ನು ದಿನಚರಿಯಲ್ಲಿ ಅಭ್ಯಾಸಮಾಡಲು ಪ್ರಯತ್ನಿಸಬೇಕು.

**ಚತುರ್ವಿಧ ಭಕ್ತರು :-** ಆರ್ತ, ಅರ್ಥಾರ್ಥಿ, ಜಿಜ್ಞಾಸು, ಜ್ಞಾನಿ ಎಂಬ ನಾಲ್ಕು ವಿಧ ಭಕ್ತರನ್ನು ಶ್ರೀಕೃಷ್ಣ ತಿಳಿಸಿದ್ದಾನೆ. ತಮ್ಮ ತಮ್ಮ ಇಷ್ಟಾರ್ಥಗಳ ಸಲುವಾಗಿ ಸಕಾಮರಾಗಿ ಭಗವಂತನನ್ನು ಮೊರೆಹೊಕ್ಕ ಆರ್ತ, ಅರ್ಥಾರ್ಥಿ, ಜಿಜ್ಞಾಸು ಎಂಬ ತ್ರಿವಿಧ ಭಕ್ತರೂ ಉತ್ತಮರೆಂದೂ, ಅವರಿಗೂ ಫಲದಭರವಸೆ ಇದೆ ಎಂದೂ, ಆದರೆ ಅವರೆಲ್ಲರಿಗಿಂತ ಜ್ಞಾನಿಯೇ ತನಗೆ ಅತ್ಯಂತ ಪ್ರಿಯನು, ಏಕೆಂದರೆ, ಅವನು ಭಗವಂತನಾದ ತನ್ನೊಬ್ಬನನ್ನೇ ಹೊಂದುವ ಆಸೆಯೊಂದನ್ನು ಮಾತ್ರ ಹೊಂದಿದ್ದಾನೆ ಎಂದೂ ಹೇಳಿದ್ದಾನೆ

ಒಟ್ಟಿನಲ್ಲಿ ಶ್ರೀಕೃಷ್ಣನು ಕರ್ಮ, ಜ್ಞಾನ, ಭಕ್ತಿ ಎಲ್ಲವೂ ಪರಮಾತ್ಮನ ಭಕ್ತಿಯಿಂದ ಕೂಡಿದ್ದಾಗಿ ಆಚರಿಸಲ್ಪಡಬೇಕು ಎಂದು ಈ ಶ್ಲೋಕದ ಮೂಲಕ ಹೇಳಿದ್ದಾನೆ.

**"ಮತ್ಕರ್ಮಕೃತ್ ಮತ್ಪರಮೋ ಮದ್ಭಕ್ತಃ ಸ್ಸಂಗ ವರ್ಜಿತಃ।**
**ನಿರ್ವೈರಸ್ಸರ್ವಭೂತೇಷು ಯಸ್ಸ ಮಾಮೇತಿ ಪಾಂಡವ॥**

**ಮತ್ ಕರ್ಮಕೃತ್**:- ನೀನು ಮಾಡುವ ಕರ್ತವ್ಯಕರ್ಮಗಳನ್ನೆಲ್ಲಾ ನನ್ನ ಕರ್ಮವೆಂದು ಮಾಡು – ನನ್ನ ಆರಾಧನೆ ಎಂದು ಮಾಡು.

**ಮತ್ಪರಮಃ** :- ನಾನೇ ನಿನಗೆ ಅತ್ಯುತ್ತಮ ಪ್ರಯೋಜನವೆಂದು ತಿಳಿದವನಾಗು. ಸರ್ವದಾ ನನ್ನನ್ನು ಧ್ಯಾನಮಾಡು.

**ಮದ್ಭಕ್ತಃ** :- ನನ್ನಲ್ಲಿ ಅತ್ಯಂತ ಪ್ರೀತಿ ಉಳ್ಳವನಾಗು. ನನ್ನನ್ನು ಸರ್ವದಾ ಎಡಬಿಡದೆ ಕೀರ್ತನ, ಸ್ತೋತ್ರ, ಧ್ಯಾನಾದಿಗಳ ಮೂಲಕ ಪ್ರೀತಿಯಿಂದ ಸ್ಮರಿಸುತ್ತಿರು.

**ಸಂಗವರ್ಜಿತಃ** :- ನನ್ನನ್ನು ಬಿಟ್ಟು ಇತರ ವಿಷಯಗಳಲ್ಲಿ ಸಂಗರಹಿತನಾಗಿರು.

**ನಿರ್ವೈರಃ ಸರ್ವಭೂತೇಷು** :- ಎಲ್ಲಾ ಪ್ರಾಣಿಗಳಲ್ಲೂ ದ್ವೇಷವಿಲ್ಲದವನಾಗು.

**ಯಃ** :- ಯಾವನು ಹೀಗೆ ಇರುತ್ತಾನೋ.

**ಸಃ ಮಾಂ ಏತಿ** :- ಅವನು ನನ್ನನ್ನು ಹೊಂದುತ್ತಾನೆ (ಅಂದರೆ ನನ್ನ ಅನುಭವದ ಆನಂದ ಪಡೆಯುತ್ತಾನೆ)

## 6. ಶರಣಾಗತಿ ಯೋಗ

ಭಗವಂತನಿಗೆ ಶರಣಾಗುವುದೇ ಶರಣಾಗತಿ ಯೋಗವು. ಭಕ್ತಿಯೋಗ ಅಭ್ಯಾಸಗಳ ಆಚರಣೆಯಿಂದ ಭಕ್ತನಲ್ಲಿ ಭಕ್ತಿಭಾವವು ಹೆಚ್ಚು ಹೆಚ್ಚಾಗಿ ಬೆಳೆಯುತ್ತದೆ. ಮೊದಲು ಸಾಧನಭಕ್ತಿ ಅಥವಾ ಉಪಾಯ ಭಕ್ತಿಯಾಗಿ ಪ್ರಾರಂಭವಾಗಿ ಕಾಲಕ್ರಮದಲ್ಲಿ ಪರಮ ಭಕ್ತಿಯಾಗಿ ಮಾರ್ಪಾಡಾಗುತ್ತದೆ. ತನಗೆ ಆಧಾರನೂ, ರಕ್ಷಕನೂ ಮತ್ತು ಸಮಸ್ತವೂ ಭಗವಂತನೇ ಎಂದು ಅರಿತ ಜ್ಞಾನಿಯಾದ ಭಕ್ತನು ತನ್ನ ಮತ್ತು ತನಗೆ ಸೇರಿದ ಸಮಸ್ತ ಚೇತನಾಚೇತನ ವಸ್ತುಗಳ ರಕ್ಷಣೆಯ ಭಾರವನ್ನೆಲ್ಲಾ ಭಗವಂತನಿಗೆ ವಹಿಸಿ, ಅವನಿಗೆ ಶರಣಾಗತನಾಗುತ್ತಾನೆ. ಹೀಗೆ **ಅಹಂಕಾರ ಮಮಕಾರರಹಿತನಾಗಿ ಭಗವಂತನಲ್ಲಿ ಶರಣಾಗುವುದೇ ಶರಣಾಗತಿಯೋಗವು.** ಯಾವಾಗ ಭಕ್ತನಿಗೆ ಭಗವಂತನೇ ತನಗೆ ಉಪಾಯ, ಅವನ ಕೃಪೆಯಿಂದಲೇ ತನಗೆ

ಮುಕ್ತಿ ದೊರೆಯುತ್ತದೆಯೇ ವಿನಹ, ತಾನು ಅನುಷ್ಠಿಸುವ ಕೇವಲ ಕರ್ಮ, ಜ್ಞಾನ, ಭಕ್ತಿ ಯೋಗಗಳಿಂದ ಅದು ಸಾಧ್ಯವಿಲ್ಲ ಎಂಬ ತತ್ತ್ವಜ್ಞಾನ ಉಂಟಾಗುತ್ತದೆಯೋ, ಆಗ ಅವನು ತಾನು ಮಾಡುವ ಧ್ಯಾನ, ಉಪಾಸನಾದಿ ಭಕ್ತಿಯುತ ಅಭ್ಯಾಸಗಳಲ್ಲಿ ಉಪಾಯಬುದ್ಧಿಯನ್ನು ತ್ಯಜಿಸಿ, ಅವುಗಳನ್ನು ಭಗವಂತನ ಕೈಂಕರ್ಯಗಳೆಂಬ ಭಾವನೆಯಿಂದ ಮಾಡುತ್ತಾ, ಭಗವಂತನೇ ತನಗೆ ಉಪಾಯವೆಂದು ನಂಬಿ ಅವನಲ್ಲಿ ಶರಣಾಗತನಾಗುತ್ತಾನೆ. ಇದೇ ಶರಣಾಗತಿ ಯೋಗವು. ಇದನ್ನು ಗೀತೆಯ ಕೊನೆಯಲ್ಲಿ ಹದಿನೆಂಟನೇ ಅಧ್ಯಾಯದಲ್ಲಿ "ಈಶ್ವರಸ್ಸರ್ವಭೂತಾನಾಂ" ಮತ್ತು "ತಮೇವಂ ಶರಣಂಗಚ್ಛ" ಎಂಬ ಶ್ಲೋಕಗಳಿಂದ ಶ್ರೀಕೃಷ್ಣ ಪರಮಾತ್ಮ ಉಪದೇಶ ಮಾಡಿದ್ದಾನೆ- "ಅರ್ಜುನ ಈಶ್ವರನಾದ ನಾನು ಸಮಸ್ತ ಪ್ರಾಣಿಗಳ ಹೃದಯದಲ್ಲಿದ್ದುಕೊಂಡು ಎಲ್ಲಾ ಪ್ರಾಣಿಗಳನ್ನೂ ಆಡಿಸುತ್ತಿದ್ದೇನೆ. ಆದ್ದರಿಂದ ಎಲ್ಲಾ ವಿಧದಲ್ಲಿಯೂ ಪರಮಾತ್ಮನಾದ ನನ್ನನ್ನೇ ಶರಣು ಹೊಂದು. ಪರಮಾತ್ಮನಾದ ನನ್ನ ಅನುಗ್ರಹದಿಂದ ಉತ್ತಮವಾದ ಶಾಂತಿಯನ್ನೂ, ಶಾಶ್ವತವಾದ ಸ್ಥಾನವನ್ನೂ ಹೊಂದುತ್ತೀಯೆ" - ಎಂದು ಹೇಳಿದ್ದಾನೆ.

ಹೀಗೆ ಶರಣಾಗತನಾದ ಭಕ್ತನು ಇನ್ನು ಮುಂದೆ ತಾನು ಮಾಡುವ ಕರ್ಮಯೋಗ, ಜ್ಞಾನಯೋಗ, ಧ್ಯಾನಯೋಗ ಮತ್ತು ಭಕ್ತಿಯೋಗ ಸಾಧನೆಗಳೆಲ್ಲವನ್ನೂ ಅವು ಭಗವಂತನ ಕೈಂಕರ್ಯಗಳೆಂದು ಆಚರಿಸುತ್ತಾನೆಯೇ ವಿನಹ ಭಗವತ್‌ಪ್ರಾಪ್ತಿಗೆ ಉಪಾಯಗಳೆಂದು ಆಚರಿಸುವುದಿಲ್ಲ. ಇದನ್ನು ಶ್ರೀಕೃಷ್ಣನು ಹದಿನೆಂಟನೆಯ ಅಧ್ಯಾಯದಲ್ಲಿ,

**"ಸರ್ವಧರ್ಮಾನ್ ಪರಿತ್ಯಜ್ಯಮಾಂ ಏಕಂ ಶರಣಂ ವ್ರಜ ।**
**ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ ॥"**

ಎಂಬ ಶ್ಲೋಕದಿಂದ - "ಸರ್ವಧರ್ಮಗಳನ್ನೂ ಪರಿತ್ಯಾಗ ಮಾಡಿ ನನ್ನೊಬ್ಬನನ್ನೇ ಶರಣುಹೊಂದು, ನಾನು ನಿನ್ನನ್ನು ಅನಂತ ಪಾಪಗಳಿಂದ ಮುಕ್ತನನ್ನಾಗಿ ಮಾಡುತ್ತೇನೆ ಶೋಕಿಸಬೇಡ" - ಎಂದು ಉಪದೇಶ ಮಾಡಿದ್ದಾನೆ.

ಸರ್ವಧರ್ಮಗಳನ್ನೂ ಪರಿತ್ಯಾಗಮಾಡು ಎಂದು ಹೇಳಿರುವುದರಿಂದ, ಇಲ್ಲಿಯವರೆಗೆ ಅವನು ಉಪದೇಶಿಸಿದ ಕರ್ಮ, ಜ್ಞಾನ, ಭಕ್ತಿ ಸಾಧನೆಗಳನ್ನೆಲ್ಲಾ ಸಂಪೂರ್ಣವಾಗಿ ಬಿಟ್ಟು ಬಿಡಬೇಕು ಎಂದು ಅರ್ಥವಲ್ಲ. ಏಕೆಂದರೆ '**ತ್ಯಾಗ**' ಎಂಬ

ಪದಕ್ಕೆ ಹದಿನೆಂಟನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನೇ "ಸಂಗಂತ್ಯಕ್ತ್ವಾ ಫಲಂಚೈವ ಸತ್ಯಾಗಃ ಸಾತ್ತ್ವಿಕೋಮತಃ" – ಅಂದರೆ ಸಂಗವನ್ನೂ ಫಲದ ಮೇಲಿನ ಆಸಕ್ತಿಯನ್ನೂ ಬಿಡುವುದೇ ಸಾತ್ತ್ವಿಕ ತ್ಯಾಗವು ಎಂದು ಹೇಳಿದ್ದಾನೆ. ಆದ್ದರಿಂದ 'ಸರ್ವಧರ್ಮಾನ್ ಪರಿತ್ಯಜ್ಯ' – ಎಂದರೆ ಸಮಸ್ತ ಯೋಗಸಾಧನೆಗಳನ್ನೂ, ಧರ್ಮಗಳನ್ನೂ ಫಲಕರ್ಮಕರ್ತೃತ್ವ ತ್ಯಾಗದೊಂದಿಗೆ, ಭಗವಂತನ ಕೈಂಕರ್ಯವೆಂಬ ಭಾವನೆಯಿಂದ ಪ್ರೀತಿಯಿಂದ ಅನುಷ್ಠಿಸಬೇಕು ಎಂದು ಅರ್ಥ. ಆದ್ದರಿಂದ ಕರ್ಮ, ಜ್ಞಾನ, ಭಕ್ತಿಯೋಗಗಳನ್ನೆಲ್ಲಾ ಅಕರ್ತೃತ್ವಾನುಸಂಧಾನಯುತನಾಗಿ, ಫಲಾಸಕ್ತಿರಹಿತನಾಗಿ, ಅವುಗಳೆಲ್ಲವೂ ಭಗವಂತನ ಆರಾಧನೆ ಎಂಬ ಭಾವನೆಯಿಂದ ಪ್ರೀತಿಯಿಂದಲೂ ಭಕ್ತಿಯಿಂದಲೂ ಆಚರಿಸುತ್ತಾ, ಭಗವಂತನೇ ಉಪಾಯವೆಂದು ನಂಬಿ ಅವನಲ್ಲಿ ಶರಣಾಗುವುದೇ ಅತ್ಯಂತ ಶ್ರೇಷ್ಠವಾದ ಮಾರ್ಗ ಎಂದು ಶ್ರೀಕೃಷ್ಣ ಉಪದೇಶ ಮಾಡಿದ್ದಾನೆ.

ಕೃಷ್ಣನ ಈ ಉಪದೇಶಾಮೃತವನ್ನು ಪಾನ ಮಾಡದೆ ಕೇವಲ ಶರೀರವೇ ತಾನೆಂಬ ಜ್ಞಾನ ಹೊಂದಿರುವ ಚೇತನನು ಅರ್ಥಕಾಮ ಪುರುಷಾರ್ಥಗಳಲ್ಲಿ ಅಭಿರುಚಿ ಹೊಂದಿ, ಅವುಗಳಿಗಾಗಿ ಶ್ರಮಿಸುತ್ತಾ ಜನ್ಮಪರಂಪರೆಗಳಲ್ಲಿ ಸುಖದುಃಖಗಳನ್ನು ಅನುಭವಿಸುತ್ತಾ ಇರುವನು. ಅವನಿಗೆ ಗೀತೆಯ ಮೊದಲನೆಯ ಷಟ್ಕದ ಆರು ಅಧ್ಯಾಯಗಳ ವ್ಯಾಸಂಗದಿಂದ ತಾನು ಕೇವಲ ಶರೀರ ಮಾತ್ರವಲ್ಲ, ಅದರೊಳಗಿರುವ ಪ್ರತ್ಯಗಾತ್ಮ ಸ್ವರೂಪನು ಎಂಬ ಜ್ಞಾನ ಹುಟ್ಟಿದರೆ ಆಗ ಅವನು ಆತ್ಮಾನುಭವವೆಂಬ ಮೋಕ್ಷ ಪುರುಷಾರ್ಥದಲ್ಲಿ ತ್ವರೆ ಹೊಂದಿದವನಾಗಿ ಪ್ರತ್ಯಗಾತ್ಮ ಸ್ವರೂಪ ಧ್ಯಾನದಲ್ಲಿ ಮಗ್ನನಾಗುವನು. ಆದರೆ ಭಗವಂತನ ಕೃಪೆಯಿಂದ ಅವನಿಗೆ ಭಗವದ್ಗೀತೆಯ ಸಮಸ್ತ ಉಪದೇಶಗಳ ಅರಿವು ಉಂಟಾದರೆ ಅವನು ಪ್ರತ್ಯಗಾತ್ಮನಾದ ತನ್ನಲ್ಲಿ ಪರಮಾತ್ಮನು ಅಂತರ್ಯಾಮಿಯಾಗಿದ್ದುಕೊಂಡು ತನ್ನನ್ನು ರಕ್ಷಿಸುತ್ತಿರುವನು ಎಂಬ ತತ್ತ್ವಜ್ಞಾನವನ್ನು ಹೊಂದಿದವನಾಗಿ, ಭಗವದನುಭವವೆಂಬ ಮೋಕ್ಷ ಪುರುಷಾರ್ಥದಲ್ಲಿ ತ್ವರೆ ಹೊಂದಿ, ಕರ್ಮ, ಜ್ಞಾನ, ಧ್ಯಾನ, ಭಕ್ತಿ ಮತ್ತು ಪ್ರಪತ್ತಿ ಯೋಗ ಸಾಧನೆಗಳನ್ನೆಲ್ಲಾ ಭಗವಂತನ ಉಪಾಸನೆ ಎಂಬ ಭಾವನೆಯಿಂದ ಆಚರಿಸುವನು. ತನ್ನ ಅಹಂಕಾರ ಮಮಕಾರಯುತ ಸ್ವಪ್ರಯತ್ನಗಳನ್ನು ತ್ಯಜಿಸಿ, ಸ್ವಾರ್ಥ ಮನೋಭಾವನೆಗಳನ್ನೆಲ್ಲಾ ಬಿಟ್ಟು ಭಗವಂತನಿಗೆ ದಾಸನಾಗಿ ಶರಣಾಗಿ ತನ್ನ ಕರ್ತವ್ಯ ಕರ್ಮಗಳನ್ನೆಲ್ಲಾ ಅಕರ್ತೃತ್ವಾನುಸಂಧಾನಯುತನಾಗಿ, ಫಲಾಸಕ್ತಿರಹಿತನಾಗಿ,

ಭಗವಂತನ ಆರಾಧನೆ ಎಂದು ಭಾವಿಸಿ, ಅವನ ಪ್ರೀತಿಗಾಗಿ ಭಕ್ತಿಯಿಂದ ಮಾಡುತ್ತಾ, ತನ್ನ ಮತ್ತು ತನಗೆ ಸೇರಿದ ಚೇತನಾಚೇತನ ವಸ್ತುಗಳ ರಕ್ಷಣೆಯ ಭಾರವನ್ನೆಲ್ಲಾ ಭಗವಂತನಿಗೆ ವಹಿಸಿ, ಆತ್ಮ ಸಮರ್ಪಣೆ ಮಾಡಿ ತಾನು ನಿರ್ಭಯನಾಗಿ ಶಾಂತನಾಗಿ ಇರುತ್ತಾನೆ.

## ಗೀತೆಯಲ್ಲಿ ಉಪದೇಶಿಸಿರುವ ನೈತಿಕ ಅಭ್ಯಾಸಗಳು:-

ಶ್ರೀಕೃಷ್ಣ ಭಗವದ್ಗೀತೆಯಲ್ಲಿ ನೈತಿಕ ಅಭ್ಯಾಸಗಳನ್ನು ಅನೇಕ ಕಡೆಗಳಲ್ಲಿ ವರ್ಣಿಸಿದ್ದಾನೆ. ಗೀತೆಯ ಪ್ರತಿಶ್ಲೋಕದಲ್ಲಿಯೂ ನೈತಿಕ ಅಭ್ಯಾಸವಿಚಾರ ಅಡಗಿದೆ. ಆದರೆ ಅದು ಅವ್ಯಕ್ತವಾಗಿದೆ ಎನ್ನಬಹುದು. ಕೆಲವು ಕಡೆಗಳಲ್ಲಿ ಅದನ್ನು ವ್ಯಕ್ತವಾಗಿಯೂ, ಅತ್ಯಂತ ವಿಸ್ತಾರವಾಗಿಯೂ, ವಿವರವಾಗಿಯೂ ವರ್ಣಿಸಿದ್ದಾನೆ. ಎರಡನೇ ಅಧ್ಯಾಯದಲ್ಲಿ ಸ್ಥಿತಪ್ರಜ್ಞನ ಗುಣಗಳನ್ನೂ, ಆರನೇ ಅಧ್ಯಾಯದಲ್ಲಿ ಧ್ಯಾನಯೋಗನಿಷ್ಠನ ಗುಣಗಳನ್ನೂ, ಹನ್ನೆರಡನೇ ಅಧ್ಯಾಯದಲ್ಲಿ ಭಕ್ತನ ಗುಣಗಳನ್ನೂ, ಹದಿಮೂರನೇ ಅಧ್ಯಾಯದಲ್ಲಿ ಜ್ಞಾನಾಭ್ಯಾಸಗಳನ್ನೂ, ಹದಿನಾಲ್ಕನೇ ಅಧ್ಯಾಯದಲ್ಲಿ ತ್ರಿಗುಣಾತೀತನ ಗುಣಗಳನ್ನೂ, ಹದಿನಾರನೇ ಅಧ್ಯಾಯದಲ್ಲಿ ದೈವೀ ಸಂಪತ್ತನ್ನು ಪಡೆದಿರುವವನ ಗುಣಗಳನ್ನೂ, ಹದಿನೇಳನೇ ಮತ್ತು ಹದಿನೆಂಟನೇ ಅಧ್ಯಾಯಗಳಲ್ಲಿ ಸಾತ್ತ್ವಿಕ ಅಭ್ಯಾಸಗಳನ್ನೂ ವಿಸ್ತಾರವಾಗಿ ತಿಳಿಸಿದ್ದಾನೆ. ಇವುಗಳನ್ನೆಲ್ಲಾ ಅರ್ಥ ತಿಳಿದು ಮನನ ಮಾಡುತ್ತಾ ಬಾಳಿನಲ್ಲಿ ಆಚರಣೆಗೆ ತರುವ ಪರಯತ್ನ ಮಾಡಬೇಕು. ಅದು ಬಹಳ ಕಷ್ಟವಾದರೂ, ಗೀತೆಯ ಶ್ಲೋಕಗಳನ್ನೆಲ್ಲಾ ಮನನ ಮಾಡುತ್ತಿದ್ದರೆ ಮನಸ್ಸು ಸ್ವಲ್ಪ ಸ್ವಲ್ಪವಾಗಿಯಾದರೂ ಪರಿವರ್ತನೆಯಾದೀತು. ಮಾನಸಿಕ ಪರಿವರ್ತನೆಯನ್ನು ಅಭ್ಯಾಸ ವೈರಾಗ್ಯಗಳಿಂದಲೇ ಸಾಧಿಸಬೇಕು ಎಂದು ಶ್ರೀಕೃಷ್ಣನೇ ಉಪದೇಶ ಮಾಡಿದ್ದಾನೆ.

## ಭಗವದ್ಗೀತೆಯಲ್ಲಿ ಅನಂತವಾದ ಉಪದೇಶಗಳೂ ಅನಂತವಾದ ತತ್ತ್ವಾರ್ಥಗಳೂ ಅಡಗಿವೆ:-

ಶ್ರೀಕೃಷ್ಣ ಗೀತೆಯ ಹದಿನೆಂಟು ಅಧ್ಯಾಯಗಳಲ್ಲಿ ಅನೇಕ ಗಹನವಾದ ತತ್ತ್ವಾರ್ಥಗಳನ್ನೂ ಉಪದೇಶಗಳನ್ನೂ ಮಾನವರಿಗೆ ನೀಡಿದ್ದಾನೆ. ಆದರೆ ಆ ಮಹಾಸಾಗರದ ಒಳಗೆ ಪ್ರವೇಶಿಸಿ ಮಥನ ಮಾಡಿ ತಿಳಿದರೆ ಆಗ ಅದರೊಳಗಿರುವ ಶಾಸ್ತ್ರಾರ್ಥಗಳೆಲ್ಲಾ ತಿಳಿಯುತ್ತವೆ. ಇದು ಮಹಾಜ್ಞಾನಿಗಳಿಗೆ ಮಾತ್ರವಲ್ಲದೆ ಇತರರಿಗೆ

ಸಾಧ್ಯವಿಲ್ಲ. ಆದರೆ ಸರ್ವ ಮಾನವರೂ ಅವರವರ ಶಕ್ತಿಗೆ ಅನುಸಾರವಾಗಿ, ಅವರವರ ಮನೋಭಾವನೆಗೆ ಅನುಗುಣವಾಗಿ, ತಮತಮಗೆ ಲಭಿಸಿದಷ್ಟು ಗೀತಾಸುಧೆಯನ್ನು ಪಾನ ಮಾಡಿ ತಮ್ಮ ಜನ್ಮ ಸಾರ್ಥಕ ಮಾಡಿಕೊಳ್ಳಲಿ ಎಂದು ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಸರ್ವ ಮಾನವರಿಗೂ ಸುಲಭವಾಗಿ ತಿಳಿಯುವಂತೆ ಅನೇಕ ಉಪದೇಶಗಳನ್ನು ನೀಡಿದ್ದಾನೆ.

ಒಟ್ಟಿನಲ್ಲಿ ಭಗವದ್ಗೀತೆಯು ಮನುಷ್ಯನ ಜೀವನಶಾಸ್ತ್ರ. ಗೀತೆಯ ಉಪದೇಶಗಳ ವ್ಯಾಸಂಗದಿಂದ ಮಾನವನಿಗೆ ಬಹಳ ಉಪಯೋಗವುಂಟು. ಇದರಿಂದ ಮಾನವನು ಮೃಗಸ್ಥಿತಿಯಿಂದ ಮನುಷ್ಯ ಸ್ಥಿತಿ ಹೊಂದಿ ಕೊನೆಗೆ ದೈವಿಕ ಸ್ಥಿತಿಗೆ ಅರ್ಹತೆ ಪಡೆಯಬಹುದು. ತಮೋಗುಣದಿಂದ ರಜೋಗುಣ ಹೊಂದಿ ಕೊನೆಗೆ ಸತ್ತ್ವಗುಣವನ್ನು ಪಡೆಯುವ ಅರ್ಹತೆ ಹೊಂದಬಹುದು. ಮನುಷ್ಯನಿಗೆ ದುಃಖಗಳು ಉಂಟಾದಾಗ ಇದು ಅವನ ಮನಸ್ಸಿಗೆ ಶಾಂತಿಯನ್ನು ನೀಡುತ್ತದೆ. ಅವನು ಧರ್ಮಾಧರ್ಮಗಳ ತೊಡಕಿಗೆ ಸಿಕ್ಕಿ ದಾರಿಕಾಣದೆ ಪರಿತಪಿಸುವಾಗ ಅವನಿಗೆ ವಿವೇಕ ಜ್ಞಾನವನ್ನು ಉಂಟುಮಾಡಿ ಸನ್ಮಾರ್ಗವನ್ನು ತೋರಿಸುತ್ತದೆ; ಗೀತೆಯ ಉಪದೇಶಗಳನ್ನು ಅಭ್ಯಾಸ ಮಾಡುವವನು ಕರ್ತವ್ಯ ಕರ್ಮಗಳನ್ನು ಅತ್ಯುತ್ತಮ ರೀತಿಯಲ್ಲಿ ನಡೆಸುವನು; ಗೀತೆಯಲ್ಲಿ ತಿಳಿಸಿರುವ ಯೋಗಸಾಧನೆಗಳನ್ನು ಅನುಷ್ಠಿಸುವವನು ಆತ್ಮಸಾಕ್ಷಾತ್ಕಾರ ಮತ್ತು ಭಗವಂತನ ಸಾಕ್ಷಾತ್ಕಾರ ಪಡೆಯುವನು; ಹಾಗೆ ಅದರಲ್ಲಿ ಜಯ ಪಡೆಯದವನೂ ಕೂಡ ಯೋಗಭ್ರಷ್ಟನಾದಾಗ್ಯೂ ಶಾಂತಿಯನ್ನು ಹೊಂದಿ ಉತ್ತಮ ಜನ್ಮವನ್ನು ಪಡೆಯುವನು ಎಂದು ಶ್ರೀಕೃಷ್ಣ ಪರಮಾತ್ಮನು ಸರ್ವರಿಗೂ ಭರವಸೆ ನೀಡಿದ್ದಾನೆ.

**ಗೀತೆಯಲ್ಲಿರುವ ಉಪದೇಶಗಳನ್ನು ಸರ್ವರೂ ಅನುಷ್ಠಾನದಲ್ಲಿ ತರಲು ಪ್ರಯತ್ನಿಸಬೇಕು ಎಂದು ವ್ಯಾಸ ಮಹರ್ಷಿಯು ಉಪದೇಶ ನೀಡಿದ್ದಾರೆ.**

ಗೀತೆಯಲ್ಲಿರುವ ಶ್ರೀಕೃಷ್ಣನ ಉಪದೇಶಗಳನ್ನು ವ್ಯಾಸಂಗ ಮಾಡಿ ಮಾನಸಿಕವಾಗಿ ತಿಳಿದರೆ ಸಾಲದು. ಅದರೊಂದಿಗೆ ಅದನ್ನು ಅನುಷ್ಠಿಸಲು ಸತತ ಪ್ರಯತ್ನ ಮಾಡಬೇಕು ಎಂದು ವ್ಯಾಸಮಹರ್ಷಿಯು ಕೊನೆಯಲ್ಲಿ ಹೇಳಿದ್ದಾರೆ.

**''ಯತ್ರ ಯೋಗೇಶ್ವರ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।**
**ತತ್ರ ಶ್ರೀ ವಿಜಯೋಭೂತಿರ್ಧ್ರುವಾನೀತಿರ್ಮತಿ ಮಮ ॥**

ಅಂದರೆ ಎಲ್ಲಿ ಯೋಗೇಶ್ವರನಾದ ಶ್ರೀಕೃಷ್ಣ ಪರಮಾತ್ಮನೇ ಗುರುವಾಗಿ ಇರುವನೋ, ಎಲ್ಲಿ ಅವನ ಉಪದೇಶಗಳನ್ನು ಅನುಷ್ಠಿಸಲು ಸಿದ್ಧನಾದ ಧನುರ್ಧಾರಿಯಾದ ಪಾರ್ಥನಂತೆ ಪ್ರಪನ್ನನಾದ ಶಿಷ್ಯನಿರುವನೋ ಅಲ್ಲಿ ಶ್ರೀ, ವಿಜಯ, ಐಶ್ವರ್ಯ, ನೀತಿ ಎಲ್ಲವೂ ನೆಲೆಸುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ ಅರ್ಜುನನು ತನಗೆ ಸಾರಥಿಯಾದ ಕೃಷ್ಣನ ಕೈಗೆ ತನ್ನ ಕುದುರೆಗಳ ಲಗಾಮನ್ನು ಕೊಟ್ಟು ಅವನನ್ನು ಮೊರೆಹೊಕ್ಕಂತೆ ಮಾನವರು ತಮ್ಮ ಹೃದಯದಲ್ಲಿ ಅಂತರ್ಯಾಮಿಯಾಗಿರುವ ಪರಮಾತ್ಮನನ್ನು ಧ್ಯಾನಮಾಡಿ, ತಮ್ಮ ಮನಸ್ಸಿನ ಲಗಾಮನ್ನು ಅವನಿಗೆ ವಹಿಸಿ ಶರಣು ಹೊಕ್ಕರೆ ಅವನೇ ಅವರಿಗೂ ಸಾರಥಿಯಾಗಿ, ತಾನೇ ಅವರನ್ನು ಸನ್ಮಾರ್ಗದಲ್ಲಿ ನಡೆಸಿ ಕೃತಾರ್ಥರನ್ನಾಗಿ ಮಾಡುತ್ತಾನೆ ಎಂಬುದೇ ಗೀತೆಯಲ್ಲಿ ಶ್ರೀಕೃಷ್ಣನ ಸಂದೇಶದ ಸಾರಾಂಶ.

**"ಯತ್ಕರೋಷಿ ಯದಶ್ನಾಸಿ ಯಜ್ಜುಹೋಸಿ ದದಾಸಿಯತ್ ।**
**ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಂ ॥"**

ಅಂದರೆ "ನೀನಂ ಮಾಡುವ ಲೌಕಿಕ ಕರ್ಮಗಳನ್ನೂ ದೇಹ ಪೋಷಣೆಗಾಗಿ ನೀನು ಭುಜಿಸುವ ಆಹಾರಗಳನ್ನೂ, ನೀನು ಮಾಡುವ ಹೋಮ, ದಾನ, ತಪಸ್ಸು ಮುಂತಾದ ವೈದಿಕ ಕರ್ತವ್ಯ ಕರ್ಮಗಳನ್ನೂ ಎಲ್ಲವನ್ನೂ ನನಗೆ ಸಮರ್ಪಿಸಲ್ಪಟ್ಟದ್ದಾಗಿ ಮಾಡು."

ಎಂದು ಶ್ರೀಕೃಷ್ಣನು ಉಪದೇಶ ಮಾಡಿರುವಂತೆ ಅವನ ಉಪದೇಶಗಳ ಸಾರ ಸಂಗ್ರಹವಾದ ಈ ಚಿಕ್ಕ ಲೇಖನ ಪುಷ್ಪವನ್ನು ಶ್ರೀಕೃಷ್ಣಪರಮಾತ್ಮನ ಅಡಿದಾವರೆಗಳಲ್ಲಿ ಸಮರ್ಪಿಸುತ್ತೇನೆ.

**॥ ಶ್ರೀಕೃಷ್ಣಾರ್ಪಣಮಸ್ತು ॥**

*****

**(ಉಡುಪಿಯಲ್ಲಿ 1973ರಲ್ಲಿ ನಡೆದ ಭಗವದ್ಗೀತಾ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದು ಶ್ರೀ ಅದಮಾರು ಮಠದ ಸ್ವಾಮಿಯವರಿಂದ ಆಶೀರ್ವದಿಸಲ್ಪಟ್ಟ ಲೇಖನ)**

# ಭಗವದ್ಗೀತೆ

## ಮೊದಲನೆಯ ಅಧ್ಯಾಯ

## ಅರ್ಜುನ ವಿಷಾದಯೋಗವು

ಧೃತರಾಷ್ಟ್ರ ಉವಾಚ -

ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ।
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ॥ ॥೧॥

ಸಂಜಯ ಉವಾಚ -

ದೃಷ್ಟ್ವಾತು ಪಾಂಡವಾನೀಕಂ ವ್ಯೂಢಂ ದುರ್ಯೋಧನಸ್ತದಾ ।
ಆಚಾರ್ಯಮುಪಸಂಗಮ್ಯ ರಾಜಾ ವಚನಮಬ್ರವೀತ್॥ ॥೨॥
ಪಶ್ಯೈತಾಂ ಪಾಂಡುಪುತ್ರಾಣಾಂ ಆಚಾರ್ಯ ಮಹತೀಂ ಚಮೂಂ ।
ವ್ಯೂಢಾಂ ದ್ರುಪದಪುತ್ರೇಣ ತವ ಶಿಷ್ಯೇಣ ಧೀಮತಾ ॥ ॥೩॥
ಅತ್ರ ಶೂರಾ ಮಹೇಷ್ವಾಸಾ ಭೀಮಾರ್ಜುನಸಮಾ ಯುಧಿ ।
ಯುಯುಧಾನೋವಿರಾಟಶ್ಚ ದ್ರುಪದಶ್ಚ ಮಹಾರಥಃ॥ ॥೪॥
ಧೃಷ್ಟಕೇತುಶ್ಚೇಕಿತಾನಃ ಕಾಶೀರಾಜಶ್ಚ ವೀರ್ಯವಾನ್ ।
ಪುರುಜಿತ್ಕುಂತಿಭೋಜಶ್ಚ ಶೈಬ್ಯಶ್ಚ ನರಪುಂಗವಃ ॥ ॥೫॥
ಯುಧಾಮನ್ಯುಶ್ಚ ವಿಕ್ರಾಂತಃ ಉತ್ತಮೌಜಾಶ್ಚ ವೀರ್ಯವಾನ್ ।
ಸೌಭದ್ರೋ ದ್ರೌಪದೇಯಾಶ್ಚ ಸರ್ವ ಏವ ಮಹಾರಥಾಃ ॥ ॥೬॥
ಅಸ್ಮಾಕಂ ತು ವಿಶಿಷ್ಟಾ ಯೇ ತಾನ್ನಿಬೋಧ ದ್ವಿಜೋತ್ತಮ ।
ನಾಯಕಾ ಮಮ ಸೈನ್ಯಸ್ಯ ಸಂಜ್ಞಾರ್ಥಂ ತಾನ್ ಬ್ರವೀಮಿ ತೇ ॥ ॥೭॥
ಭವಾನ್ ಭೀಷ್ಮಶ್ಚ ಕರ್ಣಶ್ಚ ಕೃಪಶ್ಚ ಸಮಿತಿಂಜಯಃ ।
ಅಶ್ವತ್ಥಾಮಾ ವಿಕರ್ಣಶ್ಚ ಸೋಮದತ್ತಿಸ್ತಥೈವ ಚ ॥ ॥೮॥
ಅನ್ಯೇ ಚ ಬಹವಶ್ಶೂರಾಃ ಮದರ್ಥೇ ತ್ಯಕ್ತಜೀವಿತಾಃ ।
ನಾನಾಶಸ್ತ್ರಪ್ರಹರಣಾಃ ಸರ್ವೇ ಯುದ್ಧವಿಶಾರದಾಃ ॥ ॥೯॥
ಅಪರ್ಯಾಪ್ತಂ ತದಸ್ಮಾಕಂ ಬಲಂ ಭೀಷ್ಮಾಭಿರಕ್ಷಿತಂ ।
ಪರ್ಯಾಪ್ತಂ ತ್ವಿದಮೇತೇಷಾಂ ಬಲಂ ಭೀಮಾಭಿರಕ್ಷಿತಂ ॥ ॥೧೦॥
ಅಯನೇಷು ಚ ಸರ್ವೇಷು ಯಥಾಭಾಗಮವಸ್ಥಿತಾಃ ।
ಭೀಷ್ಮಮೇವಾಭಿರಕ್ಷಂತು ಭವಂತಸ್ಸರ್ವ ಏವ ಹಿ ॥ ॥೧೧॥

ತಸ್ಯ ಸಂಜನಯನ್ ಹರ್ಷಂ ಕುರುವೃದ್ಧಃ ಪಿತಾಮಹಃ ।
ಸಿಂಹನಾದಂ ವಿನದ್ಯೋಚ್ಚೈಃ ಶಂಖಂ ದಧ್ಮೌ ಪ್ರತಾಪವಾನ್॥ ॥೧೨॥
ತತಃ ಶಂಖಾಶ್ಚ ಭೇರ್ಯಶ್ಚ ಪಣವಾನಕಗೋಮುಖಾಃ ।
ಸಹಸೈವಾಭ್ಯಹನ್ಯಂತ ಸ ಶಬ್ದಸ್ತುಮುಲೋಽಭವತ್॥ ॥೧೩॥
ತತಃ ಶ್ವೇತೈರ್ಹಯೈರ್ಯುಕ್ತೇ ಮಹತಿ ಸ್ಯಂದನೇ ಸ್ಥಿತೌ ।
ಮಾಧವಃ ಪಾಂಡವಶ್ಚೈವ ದಿವ್ಯೌ ಶಂಖೌ ಪ್ರದಧ್ಮತುಃ॥ ॥ ೧೪॥
ಪಾಂಚಜನ್ಯಂ ಹೃಷೀಕೇಶೋ ದೇವದತ್ತಂ ಧನಂಜಯಃ ।
ಪೌಂಡ್ರಂ ದಧ್ಮೌ ಮಹಾಶಂಖಂ ಭೀಮಕರ್ಮಾ ವೃಕೋದರಃ॥ ॥ ೧೫॥
ಅನಂತವಿಜಯಂ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।
ನಕುಲಃ ಸಹದೇವಶ್ಚ ಸುಘೋಷಮಣಿಪುಷ್ಪಕೌ॥ ॥ ೧೬॥
ಕಾಶ್ಯಶ್ಚ ಪರಮೇಷ್ವಾಸಃ ಶಿಖಂಡೀ ಚ ಮಹಾರಥಃ।
ಧೃಷ್ಟದ್ಯುಮ್ನೋ ವಿರಾಟಶ್ಚ ಸಾತ್ಯಕಿಶ್ಚಾಪರಾಜಿತಃ ॥ ॥೧೭॥
ದ್ರುಪದೋ ದ್ರೌಪದೇಯಾಶ್ಚ ಸರ್ವಶಃ ಪೃಥಿವೀಪತೇ ।
ಸೌಭದ್ರಶ್ಚ ಮಹಾಬಾಹುಃ ಶಂಖಾನ್ ದಧ್ಮುಃ ಪೃಥಕ್ ಪೃಥಕ್॥ ॥೧೮॥
ಸ ಘೋಷೋ ಧಾರ್ತರಾಷ್ಟ್ರಾಣಾಂ ಹೃದಯಾನಿ ವ್ಯದಾರಯತ್ ।
ನಭಶ್ಚ ಪೃಥಿವೀಂ ಚೈವ ತುಮುಲೋ ವ್ಯನುನಾದಯನ್ ॥ ॥೧೯॥
ಅಥ ವ್ಯವಸ್ಥಿತಾನ್ ದೃಷ್ಟ್ವಾ ಧಾರ್ತರಾಷ್ಟ್ರಾನ್ ಕಪಿಧ್ವಜಃ ।
ಪ್ರವೃತ್ತೇ ಶಸ್ತ್ರಸಂಪಾತೇ ಧನುರುದ್ಯಮ್ಯ ಪಾಂಡವಃ॥ ॥ ೨೦ ॥
ಹೃಷೀಕೇಶಂ ತದಾ ವಾಕ್ಯಮಿದಮಾಹ ಮಹೀಪತೇ ।
ಅರ್ಜುನ ಉವಾಚ -
ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ ॥ ॥೨೧॥
ಯಾವದೇತಾನ್ನಿರೀಕ್ಷೇಽಹಂ ಯೋದ್ಧುಕಾಮಾನವಸ್ಥಿತಾನ್ ।
ಕೈರ್ಮಯಾ ಸಹ ಯೋದ್ಧವ್ಯಂ ಅಸ್ಮಿನ್ ರಣಸಮುದ್ಯಮೇ ॥ ॥೨೨॥
ಯೋತ್ಸ್ಯಮಾನಾನವೇಕ್ಷೇಽಹಂ ಯ ಏತೇಽತ್ರ ಸಮಾಗತಾಃ ।
ಧಾರ್ತರಾಷ್ಟ್ರಸ್ಯ ದುರ್ಬುದ್ಧೇಃ ಯುದ್ಧೇ ಪ್ರಿಯಚಿಕೀರ್ಷವಃ ॥ ॥೨೩॥

ಸಂಜಯ ಉವಾಚ –

ಏವಮುಕ್ತೋ ಹೃಷೀಕೇಶೋ ಗುಡಾಕೇಶೇನ ಭಾರತ ।
ಸೇನಯೋರುಭಯೋರ್ಮಧ್ಯೇ ಸ್ಥಾಪಯಿತ್ವಾ ರಥೋತ್ತಮಂ ॥ ॥೨೪॥
ಭೀಷ್ಮದ್ರೋಣಪ್ರಮುಖತಃ ಸರ್ವೇಷಾಂ ಚ ಮಹೀಕ್ಷಿತಾಂ ।
ಉವಾಚ ಪಾರ್ಥ ಪಶ್ಯೈತಾನ್ ಸಮವೇತಾನ್ ಕುರೂನಿತಿ॥ ॥ ೨೫ ॥
ತತ್ರಾಪಶ್ಯತ್ ಸ್ಥಿತಾನ್ಪಾರ್ಥಃ ಪಿತೄನಥ ಪಿತಾಮಹಾನ್ ।
ಆಚಾರ್ಯಾನ್ ಮಾತುಲಾನ್ ಭ್ರಾತೄನ್ ಪುತ್ರಾನ್ ಪೌತ್ರಾನ್ ಸಖೀನ್ ತಥಾ॥
॥ ೨೬ ॥
ಶ್ವಶುರಾನ್ ಸುಹೃದಶ್ಚೈವ ಸೇನಯೋರುಭಯೋರಪಿ ।
ತಾನ್ ಸಮೀಕ್ಷ್ಯ ಸ ಕೌಂತೇಯಃ ಸರ್ವಾನ್ ಬಂಧೂನವಸ್ಥಿತಾನ್॥ ॥೨೭॥
ಕೃಪಯಾ ಪರಯಾಮಿಷ್ಟೋ ವಿಷೀದನ್ನಿದಮಬ್ರವೀತ್ ।

ಅರ್ಜುನ ಉವಾಚ –

ದೃಷ್ಟ್ವೇಮಂ ಸ್ವಜನಂ ಕೃಷ್ಣ ಯುಯುತ್ಸುಂ ಸಮುಪಸ್ಥಿತಂ॥ ॥೨೮॥
ಸೀದಂತಿ ಮಮ ಗಾತ್ರಾಣಿ ಮುಖಂ ಚ ಪರಿಶುಷ್ಯತಿ ।
ವೇಪಥುಶ್ಚ ಶರೀರೇ ಮೇ ರೋಮಹರ್ಷಶ್ಚ ಜಾಯತೇ॥ ॥೨೯ ॥
ಗಾಂಡೀವಂ ಸ್ರಂಸತೇ ಹಸ್ತಾತ್ ತ್ವಕ್ಚೈವ ಪರಿದಹ್ಯತೇ ।
ನ ಚ ಶಕ್ನೋಮ್ಯವಸ್ಥಾತುಂ ಭ್ರಮತೀವ ಚ ಮೇ ಮನಃ॥ ॥೩೦॥
ನಿಮಿತ್ತಾನಿ ಚ ಪಶ್ಯಾಮಿ ವಿಪರೀತಾನಿ ಕೇಶವ ।
ನ ಚ ಶ್ರೇಯೋಽನುಪಶ್ಯಾಮಿ ಹತ್ವಾ ಸ್ವಜನಮಾಹವೇ॥ ॥೩೧॥
ನ ಕಾಂಕ್ಷೇ ವಿಜಯಂ ಕೃಷ್ಣ ನ ಚ ರಾಜ್ಯಂ ಸುಖಾನಿ ಚ ।
ಕಿಂ ನೋ ರಾಜ್ಯೇನ ಗೋವಿಂದ ಕಿಂ ಭೋಗೈರ್ಜೀವಿತೇನ ವಾ॥ ॥೩೨॥
ಯೇಷಾಮರ್ಥೇ ಕಾಂಕ್ಷಿತಂ ನೋ ರಾಜ್ಯಂ ಭೋಗಾಃ ಸುಖಾನಿ ಚ।
ತ ಇಮೇಽವಸ್ಥಿತಾ ಯುದ್ಧೇ ಪ್ರಾಣಾಂಸ್ತ್ಯಕ್ತ್ವಾ ಧನಾನಿ ಚ॥ ॥೩೩॥
ಆಚಾರ್ಯಾಃ ಪಿತರಃ ಪುತ್ರಾಃ ತಥೈವ ಚ ಪಿತಾಮಹಾಃ ।
ಮಾತುಲಾಃ ಶ್ವಶುರಾಃ ಪೌತ್ರಾಃ ಶ್ಯಾಲಾಃ ಸಂಬಂಧಿನಸ್ತಥಾ॥ ॥೩೪॥
ಏತಾನ್ನ ಹಂತುಮಿಚ್ಛಾಮಿ ಘ್ನತೋಽಪಿ ಮಧುಸೂದನ ।
ಅಪಿ ತ್ರೈಲೋಕ್ಯರಾಜ್ಯಸ್ಯ ಹೇತೋಃ ಕಿಂ ನು ಮಹೀಕೃತೇ॥ ॥೩೫॥

ನಿಹತ್ಯ ಧಾರ್ತರಾಷ್ಟ್ರಾನ್ ನಃ ಕಾ ಪ್ರೀತಿಃ ಸ್ಯಾಜ್ಜನಾರ್ದನ ।
ಪಾಪಮೇವಾಶ್ರಯೇದಸ್ಮಾನ್ ಹತ್ವೈತಾನಾತತಾಯಿನಃ॥ ॥೩೬॥
ತಸ್ಮಾನ್ನಾರ್ಹಾ ವಯಂ ಹಂತುಂ ಧಾರ್ತರಾಷ್ಟ್ರಾನ್ ಸಬಾಂಧವಾನ್ ।
ಸ್ವಜನಂ ಹಿ ಕಥಂ ಹತ್ವಾ ಸುಖಿನಃ ಸ್ಯಾಮ ಮಾಧವ॥ ॥೩೭॥
ಯದ್ಯಪ್ಯೇತೇ ನ ಪಶ್ಯಂತಿ ಲೋಭೋಪಹತಚೇತಸಃ ।
ಕುಲಕ್ಷಯಕೃತಂ ದೋಷಂ ಮಿತ್ರದ್ರೋಹೇ ಚ ಪಾತಕಂ॥ ॥೩೮॥
ಕಥಂ ನ ಜ್ಞೇಯಮಸ್ಮಾಭಿಃ ಪಾಪಾದಸ್ಮಾನ್ನಿವರ್ತಿತುಂ ।
ಕುಲಕ್ಷಯಕೃತಂ ದೋಷಂ ಪ್ರಪಶ್ಯದ್ಭಿರ್ಜನಾರ್ದನ॥ ॥೩೯॥
ಕುಲಕ್ಷಯೇ ಪ್ರಣಶ್ಯಂತಿ ಕುಲಧರ್ಮಾಃ ಸನಾತನಾಃ ।
ಧರ್ಮೇ ನಷ್ಟೇ ಕುಲಂ ಕೃತ್ಸ್ನಂ ಅಧರ್ಮೋಽಭಿಭವತ್ಯುತ ॥ ॥೪೦॥
ಅಧರ್ಮಾಭಿಭವಾತ್ ಕೃಷ್ಣ ಪ್ರದುಷ್ಯಂತಿ ಕುಲಸ್ತ್ರಿಯಃ ।
ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ ॥ ॥೪೧॥
ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ ।
ಪತಂತಿ ಪಿತರೋ ಹ್ಯೇಷಾಂ ಲುಪ್ತಪಿಂಡೋದಕಕ್ರಿಯಾಃ ॥ ॥೪೨॥
ದೋಷೈರೇತೈಃ ಕುಲಘ್ನಾನಾಂ ವರ್ಣಸಂಕರಕಾರಕೈಃ ।
ಉತ್ಸಾದ್ಯಂತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ ॥ ॥೪೩॥
ಉತ್ಸನ್ನಕುಲಧರ್ಮಾಣಾಂ ಮನುಷ್ಯಾಣಾಂ ಜನಾರ್ದನ ।
ನರಕೇ ನಿಯತಂ ವಾಸೋ ಭವತೀತ್ಯನುಶುಶ್ರುಮ ॥ ॥೪೪॥
ಅಹೋ ಬತ ಮಹತ್ಪಾಪಂ ಕರ್ತುಂ ವ್ಯವಸಿತಾ ವಯಂ ।
ಯದ್ರಾಜ್ಯಸುಖಲೋಭೇನ ಹಂತುಂ ಸ್ವಜನಮುದ್ಯತಾಃ ॥ ॥೪೫॥
ಯದಿ ಮಾಮಪ್ರತೀಕಾರಂ ಅಶಸ್ತ್ರಂ ಶಸ್ತ್ರಪಾಣಯಃ ।
ಧಾರ್ತರಾಷ್ಟ್ರಾ ರಣೇ ಹನ್ಯುಸ್ತನ್ಮೇ ಕ್ಷೇಮತರಂ ಭವೇತ್ ॥ ॥೪೬॥

ಸಂಜಯ ಉವಾಚ –

ಏವಮುಕ್ತ್ವಾರ್ಜುನಃ ಸಂಖ್ಯೇ ರಥೋಪಸ್ಥ ಉಪಾವಿಶತ್ ।
ವಿಸೃಜ್ಯ ಸಶರಂ ಚಾಪಂ ಶೋಕಸಂವಿಗ್ನಮಾನಸಃ ॥ ॥೪೭॥

ಇತಿ ಅರ್ಜುನವಿಷಾದಯೋಗೋನಾಮ ಪ್ರಥಮೋಽಧ್ಯಾಯಃ ।

## ಎರಡನೆಯ ಅಧ್ಯಾಯ

## ಸಾಂಖ್ಯಯೋಗ

ಸಂಜಯ ಉವಾಚ -

ತಂ ತಥಾ ಕೃಪಯಾವಿಷ್ಟಂ ಅಶ್ರುಪೂರ್ಣಾಕುಲೇಕ್ಷಣಂ ।
ವಿಷೀದಂತಮಿದಂ ವಾಕ್ಯಂ ಉವಾಚ ಮಧುಸೂದನಃ ॥ ॥೧॥

ಶ್ರೀಭಗವಾನುವಾಚ -

ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಂ ।
ಅನಾರ್ಯಜುಷ್ಟಂ ಅಸ್ವರ್ಗ್ಯಂ ಅಕೀರ್ತಿಕರಂ ಅರ್ಜುನ ॥ ॥೨॥
ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ ।
ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥ ॥೩॥

ಅರ್ಜುನ ಉವಾಚ -

ಕಥಂ ಭೀಷ್ಮಮಹಂ ಸಂಖ್ಯೇ ದ್ರೋಣಂ ಚ ಮಧುಸೂದನ ।
ಇಷುಭಿಃ ಪ್ರತಿಯೋತ್ಸ್ಯಾಮಿ ಪೂಜಾರ್ಹಾವರಿಸೂದನ ॥ ॥೪॥
ಗುರೂನಹತ್ವಾ ಹಿ ಮಹಾನುಭಾವಾನ್ ಶ್ರೇಯಶ್ಚರ್ತುಂ ಭೈಕ್ಷ್ಯಮಪೀಹ ಲೋಕೇ।
ಹತ್ವಾರ್ಥಕಾಮಾಂಸ್ತು ಗುರೂನಿಹೈವ ಭುಂಜೀಯ ಭೋಗಾನ್ ರುಧಿರಪ್ರದಿಗ್ಧಾನ್ ॥
॥೫॥
ನ ಚೈತದ್ವಿದ್ಮಃ ಕತರನ್ನೋ ಗರೀಯೋ ಯದ್ವಾ ಜಯೇಮ ಯದಿ ವಾ ನೋ ಜಯೇಯುಃ।
ಯಾನೇವ ಹತ್ವಾ ನ ಜಿಜೀವಿಷಾಮಃ ತೇಽವಸ್ಥಿತಾಃ ಪ್ರಮುಖೇ ಧಾರ್ತರಾಷ್ಟ್ರಾಃ ॥
॥೬॥
ಕಾರ್ಪಣ್ಯದೋಷೋಪಹತಸ್ವಭಾವಃ ಪೃಚ್ಛಾಮಿ ತ್ವಾ ಧರ್ಮಸಂಮೂಢಚೇತಾಃ ।
ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಂ ॥
॥ ೭ ॥
ನಹಿಪ್ರಪಶ್ಯಾಮಿ ಮಮಾಪನುದ್ಯಾತ್ ಯಚ್ಛೋಕಮುಚ್ಛೋಷಣಮಿಂದ್ರಿಯಾಣಾಂ ।
ಅವಾಪ್ಯ ಭೂಮಾವಸಪತ್ನಮೃದ್ಧಂ ರಾಜ್ಯಂ ಸುರಾಣಾಮಪಿ ಚಾಧಿಪತ್ಯಂ॥ ॥ ೮ ॥

ಸಂಜಯ ಉವಾಚ -

ಏವಮುಕ್ತ್ವಾ ಹೃಷೀಕೇಶಂ ಗುಡಾಕೇಶಃ ಪರಂತಪಃ ।

ನ ಯೋತ್ಸ್ಯಾಮೀತಿ ಗೋವಿಂದಂ ಉಕ್ತ್ವಾ ತೂಷ್ಣೀಂ ಬಭೂವ ಹ ॥ ॥ ೯ ॥
ತಮುವಾಚ ಹೃಷಿಕೇಶಃ ಪ್ರಹಸನ್ನಿವ ಭಾರತ ।
ಸೇನಯೋರುಭಯೋರ್ಮಧ್ಯೇ ಸೀದಮಾನಮಿದಂ ವಚಃ ॥ ॥ ೧೦ ॥
ಶ್ರೀಭಗವಾನುವಾಚ -
ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ ।
ಗತಾಸೂನಗತಾಸೂಂಶ್ಚ ನಾನುಶೋಚಂತಿ ಪಂಡಿತಾಃ ॥ ॥೧೧॥
ನ ತ್ವೇವಾಹಂ ಜಾತು ನಾಸಂ ನ ತ್ವಂ ನೇಮೇ ಜನಾಧಿಪಾಃ ।
ನ ಚೈವ ನ ಭವಿಷ್ಯಾಮಃ ಸರ್ವೇ ವಯಮತಃಪರಂ ॥ ॥೧೨॥
ದೇಹಿನೋಽಸ್ಮಿನ್ ಯಥಾ ದೇಹೇ ಕೌಮಾರಂ ಯೌವ್ವನಂ ಜರಾ ।
ತಥಾ ದೇಹಾಂತರಪ್ರಾಪ್ತಿಃ ಧೀರಸ್ತತ್ರ ನ ಮುಹ್ಯತಿ ॥ ॥ ೧೩ ॥
ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣ ಸುಖದುಃಖದಾಃ ।
ಆಗಮಾಪಾಯಿನೋಽನಿತ್ಯಾಃ ತಾನ್ ತಿತಿಕ್ಷಸ್ವ ಭಾರತ ॥ ॥೧೪ ॥
ಯಂ ಹಿ ನ ವ್ಯಥಯಂತ್ಯೇತೇ ಪುರುಷಂ ಪುರುಷರ್ಷಭ ।
ಸಮದುಃಖಸುಖಂ ಧೀರಂ ಸೋಽಮೃತತ್ವಾಯ ಕಲ್ಪತೇ ॥ ॥ ೧೫ ॥
ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।
ಉಭಯೋರಪಿ ದೃಷ್ಟೋಽಂತಸ್ತ್ವನಯೋಃ ತತ್ತ್ವದರ್ಶಿಭಿಃ ॥ ॥೧೬॥
ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಂ ।
ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ ಕರ್ತುಮರ್ಹತಿ ॥ ॥೧೭॥
ಅಂತವಂತ ಇಮೇ ದೇಹಾ ನಿತ್ಯಸ್ಯೋಕ್ತಾಃ ಶರೀರಿಣಃ ।
ಅನಾಶಿನೋಽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ ॥ ॥ ೧೮ ॥
ಯ ಏನಂ ವೇತ್ತಿ ಹಂತಾರಂ ಯಶ್ಚೈನಂ ಮನ್ಯತೇ ಹತಂ ।
ಉಭೌ ತೌ ನ ವಿಜಾನೀತೋ ನಾಯಂ ಹಂತಿ ನ ಹನ್ಯತೇ ॥ ॥೧೯॥
ನ ಜಾಯತೇ ಮ್ರಿಯತೇ ವಾ ಕದಾಚಿತ್ ನಾಯಂ ಭೂತ್ವಾ ಭವಿತಾ ವಾ ನ ಭೂಯಃ ।
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ ನ ಹನ್ಯತೇ ಹನ್ಯಮಾನೇ ಶರೀರೇ ॥
॥೨೦ ॥
ವೇದಾವಿನಾಶಿನಂ ನಿತ್ಯಂ ಯ ಏನಮಜಮವ್ಯಯಮ್ ।
ಕಥಂ ಸ ಪುರುಷಃ ಪಾರ್ಥ ಕಂ ಘಾತಯತಿ ಹಂತಿ ಕಂ ॥ ॥ ೨೧ ॥

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನರೋಽಪರಾಣಿ ।
ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥ ॥೨೨॥

ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ ।
ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ ॥ ॥ ೨೩ ॥

ಅಚ್ಛೇದ್ಯೋಽಯಮದಾಹ್ಯೋಽಯಂ ಅಕ್ಲೇದ್ಯೋಽಶೋಷ್ಯ ಏವ ಚ ।
ನಿತ್ಯಸ್ಸರ್ವಗತಃ ಸ್ಥಾಣುಃ ಅಚಲೋಽಯಂ ಸನಾತನಃ ॥ ॥೨೪ ॥

ಅವ್ಯಕ್ತೋಽಯಂ ಅಚಿಂತ್ಯೋಽಯಂ ಅವಿಕಾರ್ಯೋಽಯಮುಚ್ಯತೇ ।
ತಸ್ಮಾದೇವಂ ವಿದಿತ್ವೈನಂ ನಾನುಶೋಚಿತುಮರ್ಹಸಿ ॥ ॥೨೫॥

ಅಥಚೈನಂ ನಿತ್ಯಜಾತಂ ನಿತ್ಯಂ ವಾ ಮನ್ಯಸೇ ಮೃತಂ ।
ತಥಾಪಿ ತ್ವಂ ಮಹಾಬಾಹೋ ನೈವಂ ಶೋಚಿತುಮರ್ಹಸಿ ॥ ॥೨೬॥

ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯ ಚ ।
ತಸ್ಮಾದಪರಿಹಾರ್ಯೇಽರ್ಥೇ ನ ತ್ವಂ ಶೋಚಿತುಮರ್ಹಸಿ ॥ ॥೨೭॥

ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ ।
ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿದೇವನಾ ॥ ॥ ೨೮॥

ಆಶ್ಚರ್ಯವತ್ಪಶ್ಯತಿ ಕಶ್ಚಿದೇನಂ ಆಶ್ಚರ್ಯವದ್ವದತಿ ತಥೈವ ಚಾನ್ಯಃ ।
ಆಶ್ಚರ್ಯವಚ್ಚೈನಮನ್ಯಃ ಶೃಣೋತಿ ಶ್ರುತ್ವಾಪ್ಯೇನಂ ವೇದ ನ ಚೈವ ಕಶ್ಚಿತ್॥ ॥೨೯॥

ದೇಹೀ ನಿತ್ಯಮವಧ್ಯೋಽಯಂ ದೇಹೇ ಸರ್ವಸ್ಯ ಭಾರತ ।
ತಸ್ಮಾತ್ಸರ್ವಾಣಿ ಭೂತಾನಿ ನ ತ್ವಂ ಶೋಚಿತುಮರ್ಹಸಿ ॥ ॥೩೦॥

ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತುಮರ್ಹಸಿ ।
ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ ॥ ॥೩೧॥

ಯದೃಚ್ಛಯಾ ಚೋಪಪನ್ನಂ ಸ್ವರ್ಗದ್ವಾರ ಮಪಾವೃತಂ ।
ಸುಖಿನಃ ಕ್ಷತ್ರಿಯಾ ಪಾರ್ಥ ಲಭಂತೇ ಯುದ್ಧಮೀದೃಶಂ ॥ ॥೩೨॥

ಅಥ ಚೇತ್ತ್ವಮಿಮಂ ಧರ್ಮ್ಯಂ ಸಂಗ್ರಾಮಂ ನ ಕರಿಷ್ಯಸಿ ।
ತತಃ ಸ್ವಧರ್ಮಂ ಕೀರ್ತಿಂ ಚ ಹಿತ್ವಾ ಪಾಪಮವಾಪ್ಸ್ಯಸಿ ॥ ॥೩೩॥

ಅಕೀರ್ತಿಂ ಚಾಪಿ ಭೂತಾನಿ ಕಥಯಿಷ್ಯಂತಿ ತೇಽವ್ಯಯಾಂ ।
ಸಂಭಾವಿತಸ್ಯ ಚಾಕೀರ್ತಿಃ ಮರಣಾದತಿರಿಚ್ಯತೇ ॥ ॥೩೪॥

ಭಯಾದ್ರಣಾದುಪರತಂ ಮನ್ಯಂತೇ ತ್ವಾಂ ಮಹಾರಥಾಃ ।
ಯೇಷಾಂ ಚ ತ್ವಂ ಬಹುಮತೋ ಭೂತ್ವಾ ಯಾಸ್ಯಸಿ ಲಾಘವಂ ॥ ॥೩೫॥
ಅವಾಚ್ಯವಾದಾಂಶ್ಚ ಬಹೂನ್ ವದಿಷ್ಯಂತಿ ತವಾಹಿತಾಃ ।
ನಿಂದಂತಸ್ತವ ಸಾಮರ್ಥ್ಯಂ ತತೋ ದುಃಖತರಂ ನು ಕಿಮ್ ॥ ॥೩೬॥
ಹತೋ ವಾ ಪ್ರಾಪ್ಸ್ಯಸೇ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಂ ।
ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಃ ॥ ॥ ೩೭ ॥
ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ ॥೩೮ ॥
ಏಷಾ ತೇಽಭಿಹಿತಾ ಸಾಂಖ್ಯೇ ಬುದ್ಧಿರ್ಯೋಗೇ ತ್ವಿಮಾಂ ಶೃಣು ।
ಬುದ್ಧ್ಯಾ ಯುಕ್ತೋ ಯಯಾ ಪಾರ್ಥ ಕರ್ಮಬಂಧಂ ಪ್ರಹಾಸ್ಯಸಿ ॥ ॥೩೯॥
ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ ।
ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥ ॥೪೦॥
ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ ।
ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಂ ॥ ॥೪೧॥
ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವದಂತ್ಯವಿಪಶ್ಚಿತಃ ।
ವೇದವಾದರತಾಃ ಪಾರ್ಥ ನಾನ್ಯದಸ್ತೀತಿ ವಾದಿನಃ ॥ ॥೪೨॥
ಕಾಮಾತ್ಮಾನಃ ಸ್ವರ್ಗಪರಾಃ ಜನ್ಮಕರ್ಮಫಲಪ್ರದಾಂ ।
ಕ್ರಿಯಾವಿಶೇಷಬಹುಳಾಂ ಭೋಗೈಶ್ವರ್ಯಗತಿಂ ಪ್ರತಿ ॥ ॥೪೩॥
ಭೋಗೈಶ್ವರ್ಯಪ್ರಸಕ್ತಾನಾಂ ತಯಾಪಹೃತಚೇತಸಾಂ ।
ವ್ಯವಸಾಯಾತ್ಮಿಕಾ ಬುದ್ಧಿಃ ಸಮಾಧೌ ನ ವಿಧೀಯತೇ ॥೪೪॥
ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ ।
ನಿರ್ದ್ವಂದ್ವೋ ನಿತ್ಯಸತ್ವಸ್ಥೋ ನಿರ್ಯೋಗಕ್ಷೇಮ ಆತ್ಮವಾನ್ ॥ ॥೪೫॥
ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ
ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥ ॥ ೪೬॥
ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
ಮಾ ಕರ್ಮಫಲಹೇತುರ್ಭೂಃ ಮಾ ತೇ ಸಂಗೋಽಸ್ತ್ವಕರ್ಮಣಿ ॥ ॥೪೭॥

ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ।
ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ ॥ ॥೪೮॥
ದೂರೇಣ ಹ್ಯವರಂ ಕರ್ಮ ಬುದ್ಧಿಯೋಗಾದ್ಧನಂಜಯ ।
ಬುದ್ಧೌ ಶರಣಮನ್ವಿಚ್ಛ ಕೃಪಣಾಃ ಫಲಹೇತವಃ ॥ ॥೪೯॥
ಬುದ್ಧಿಯುಕ್ತೋ ಜಹಾತೀಹ ಉಭೇ ಸುಕೃತದುಷ್ಕೃತೇ ।
ತಸ್ಮಾದ್ಯೋಗಾಯ ಯುಜ್ಯಸ್ವ ಯೋಗಃ ಕರ್ಮಸು ಕೌಶಲಂ ॥ ॥೫೦॥
ಕರ್ಮಜಂ ಬುದ್ಧಿಯುಕ್ತಾ ಹಿ ಫಲಂ ತ್ಯಕ್ತ್ವಾ ಮನೀಷಿಣಃ ।
ಜನ್ಮಬಂಧವಿನಿರ್ಮುಕ್ತಾಃ ಪದಂ ಗಚ್ಛಂತ್ಯನಾಮಯಂ ॥ ॥೫೧॥
ಯದಾ ತೇ ಮೋಹಕಲಿಲಂ ಬುದ್ಧಿರ್ವ್ಯತಿತರಿಷ್ಯತಿ ।
ತದಾ ಗಂತಾಸಿ ನಿರ್ವೇದಂ ಶ್ರೋತವ್ಯಸ್ಯ ಶ್ರುತಸ್ಯ ಚ ॥ ॥ ೫೨ ॥
ಶ್ರುತಿವಿಪ್ರತಿಪನ್ನಾ ತೇ ಯದಾ ಸ್ಥಾಸ್ಯತಿ ನಿಶ್ಚಲಾ ।
ಸಮಾಧಾವಚಲಾ ಬುದ್ಧಿಃ ತದಾ ಯೋಗಮವಾಪ್ಸ್ಯಸಿ ॥ ॥೫೩॥

ಅರ್ಜುನ ಉವಾಚ -

ಸ್ಥಿತಪ್ರಜ್ಞಸ್ಯ ಕಾ ಭಾಷಾ ಸಮಾಧಿಸ್ಥಸ್ಯ ಕೇಶವ ।
ಸ್ಥಿತಧೀಃ ಕಿಂ ಪ್ರಭಾಷೇತ ಕಿಮಾಸೀತ ವ್ರಜೇತ ಕಿಂ ॥ ॥೫೪॥

ಶ್ರೀ ಭಗವಾನುವಾಚ -

ಪ್ರಜಹಾತಿ ಯದಾ ಕಾಮಾನ್ ಸರ್ವಾನ್ ಪಾರ್ಥ ಮನೋಗತಾನ್ ।
ಆತ್ಮನ್ಯೇವಾತ್ಮನಾ ತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ ॥ ॥೫೫॥
ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ ।
ವೀತರಾಗಭಯಕ್ರೋಧಃ ಸ್ಥಿತಧೀಃ ಮುನಿರುಚ್ಯತೇ ॥ ॥ ೫೬॥
ಯಸ್ಸರ್ವತ್ರಾನಭಿಸ್ನೇಹಃ ತತ್ತತ್ ಪ್ರಾಪ್ಯ ಶುಭಾಶುಭಮ್ ।
ನಾಭಿನಂದತಿ ನ ದ್ವೇಷ್ಟಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ ॥ ೫೭ ॥
ಯದಾ ಸಂಹರತೇ ಚಾಯಂ ಕೂರ್ಮೋಽಂಗಾನೀವ ಸರ್ವಶಃ ।
ಇಂದ್ರಿಯಾಣೀಂದ್ರಿಯಾರ್ಥೇಭ್ಯಃ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ ॥ ೫೮ ॥
ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ।
ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥ ॥೫೯॥

ಯತತೋ ಹ್ಯಪಿ ಕೌಂತೇಯ ಪುರುಷಸ್ಯ ವಿಪಶ್ಚಿತಃ ।
ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ ॥ ॥೬೦॥
ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತ ಮತ್ಪರಃ ।
ವಶೇ ಹಿ ಯಸ್ಯೇಂದ್ರಿಯಾಣಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ ॥ ೬೧ ॥
ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ ।
ಸಂಗಾತ್ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ ॥ ॥೬೨॥
ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ ।
ಸ್ಮೃತಿಭ್ರಂಶಾತ್ ಬುದ್ಧಿನಾಶಃ ಬುದ್ಧಿನಾಶಾತ್ ಪ್ರಣಶ್ಯತಿ ॥ ॥೬೩॥
ರಾಗದ್ವೇಷವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರನ್ ।
ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ ॥ ॥ ೬೪ ॥
ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ ।
ಪ್ರಸನ್ನಚೇತಸೋ ಹ್ಯಾಶು ಬುದ್ಧಿಃ ಪರ್ಯವತಿಷ್ಠತೇ ॥ ॥ ೬೫॥
ನಾಸ್ತಿ ಬುದ್ಧಿರಯುಕ್ತಸ್ಯ ನ ಚಾಯುಕ್ತಸ್ಯ ಭಾವನಾ ।
ನ ಚಾಭಾವಯತಃ ಶಾಂತಿಃ ಅಶಾಂತಸ್ಯ ಕುತಃ ಸುಖಂ ॥ ॥೬೬॥
ಇಂದ್ರಿಯಾಣಾಂ ಹಿ ಚರತಾಂ ಯನ್ಮನೋಽನುವಿಧೀಯತೇ ।
ತದಸ್ಯ ಹರತಿ ಪ್ರಜ್ಞಾಂ ವಾಯುರ್ನಾವಮಿವಾಂಭಸಿ ॥ ॥ ೬೭ ॥
ತಸ್ಮಾದ್ಯಸ್ಯ ಮಹಾಬಾಹೋ ನಿಗೃಹೀತಾನಿ ಸರ್ವಶಃ ।
ಇಂದ್ರಿಯಾಣೀಂದ್ರಿಯಾರ್ಥೇಭ್ಯಃ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ ॥೬೮॥
ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।
ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥ ॥೬೯॥
ಆಪೂರ್ಯಮಾಣಂ ಅಚಲಪ್ರತಿಷ್ಠಂ ಸಮುದ್ರಮಾಪಃ ಪ್ರವಿಶಂತಿ ಯದ್ವತ್ ।
ತದ್ವತ್ಕಾಮಾ ಯಂ ಪ್ರವಿಶಂತಿ ಸರ್ವೇ ಸ ಶಾಂತಿಮಾಪ್ನೋತಿ ನ ಕಾಮಕಾಮೀ॥ ॥೭೦॥
ವಿಹಾಯ ಕಾಮಾನ್ ಯಃ ಸರ್ವಾನ್ ಪುಮಾಂಶ್ಚರತಿ ನಿಸ್ಪೃಹಃ ।
ನಿರ್ಮಮೋ ನಿರಹಂಕಾರಃ ಸ ಶಾಂತಿಮಧಿಗಚ್ಛತಿ ॥ ॥೭೧॥
ಏಷಾ ಬ್ರಾಹ್ಮೀ ಸ್ಥಿತಿಃ ಪಾರ್ಥ ನೈನಾಂ ಪ್ರಾಪ್ಯ ವಿಮುಹ್ಯತಿ ।
ಸ್ಥಿತ್ವಾಸ್ಯಾಂ ಅಂತಕಾಲೇಽಪಿ ಬ್ರಹ್ಮನಿರ್ವಾಣಮೃಚ್ಛತಿ ॥ ॥೭೨॥

ಇತಿ ಸಾಂಖ್ಯಯೋಗೋನಾಮ ದ್ವಿತೀಯೋಽಧ್ಯಾಯಃ ।

# ಮೂರನೆಯ ಅಧ್ಯಾಯ

## ಕರ್ಮಯೋಗ

ಅರ್ಜುನ ಉವಾಚ -

ಜ್ಯಾಯಸೀ ಚೇತ್ಕರ್ಮಣಸ್ತೇ ಮತಾ ಬುದ್ಧಿರ್ಜನಾರ್ದನ ।
ತತ್ಕಿಂ ಕರ್ಮಣಿ ಘೋರೇ ಮಾಂ ನಿಯೋಜಯಸಿ ಕೇಶವ ॥ ॥೧॥
ವ್ಯಾಮಿಶ್ರೇಣೈವ ವಾಕ್ಯೇನ ಬುದ್ಧಿಂ ಮೋಹಯಸೀವ ಮೇ ।
ತದೇಕಂ ವದ ನಿಶ್ಚಿತ್ಯ ಯೇನ ಶ್ರೇಯೋಽಹಮಾಪ್ನುಯಾಂ ॥ ॥೨॥

ಶ್ರೀ ಭಗವಾನುವಾಚ -

ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ ಪುರಾ ಪ್ರೋಕ್ತಾ ಮಯಾನಘ ।
ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಂ ॥ ॥೩॥
ನ ಕರ್ಮಣಾಮನಾರಂಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ ।
ನ ಚ ಸನ್ನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ॥ ॥೪॥
ನ ಹಿ ಕಶ್ಚಿತ್ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।
ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ॥ ॥೫॥
ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾ ಸ್ಮರನ್ ।
ಇಂದ್ರಿಯಾರ್ಥಾನ್ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ ॥ ॥೬॥
ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯಾರಭತೇಽರ್ಜುನ ।
ಕರ್ಮೇಂದ್ರಿಯೈಃ ಕರ್ಮಯೋಗಂ ಅಸಕ್ತಃ ಸ ವಿಶಿಷ್ಯತೇ ॥ ॥೭॥
ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ ।
ಶರೀರಯಾತ್ರಾಪಿ ಚ ತೇ ನ ಪ್ರಸಿದ್ಧ್ಯೇದಕರ್ಮಣಃ ॥ ॥೮॥
ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ ।
ತದರ್ಥಂ ಕರ್ಮ ಕೌಂತೇಯ ಮುಕ್ತಸಂಗಸ್ಸಮಾಚರ ॥ ॥೯॥
ಸಹ ಯಜ್ಞೈಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ ।
ಅನೇನ ಪ್ರಸವಿಷ್ಯಧ್ವಂ ಏಷ ವೋಽಸ್ತ್ವಿಷ್ಟಕಾಮಧುಕ್ ॥ ॥೧೦॥
ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ ।
ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ॥ ॥೧೧॥

ಇಷ್ಟಾನ್ ಭೋಗಾನ್ ಹಿ ವೋ ದೇವಾ ದಾಸ್ಯಂತೇ ಯಜ್ಞಭಾವಿತಾಃ ।
ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ ॥ ॥೧೨॥

ಯಜ್ಞಶಿಷ್ಟಾಶಿನಸ್ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ ।
ತೇ ತ್ವಘಂ ಭುಂಜತೇ ಪಾಪಾ ಯೇ ಪಚಂತ್ಯಾತ್ಮಕಾರಣಾತ್ ॥ ॥೧೩॥

ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನ ಸಂಭವಃ ।
ಯಜ್ಞಾದ್ಭವತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ ॥ ॥೧೪॥

ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರ ಸಮುದ್ಭವಂ ।
ತಸ್ಮಾತ್ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಂ ॥ ॥೧೫॥

ಏವಂ ಪ್ರವರ್ತಿತಂ ಚಕ್ರಂ ನಾನುವರ್ತಯತೀಹ ಯಃ ।
ಅಘಾಯುರಿಂದ್ರಿಯಾರಾಮೋ ಮೋಘಂ ಪಾರ್ಥ ಸ ಜೀವತಿ ॥ ॥೧೬॥

ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ ।
ಆತ್ಮನ್ಯೇವ ಚ ಸಂತುಷ್ಟಃ ತಸ್ಯ ಕಾರ್ಯಂ ನ ವಿದ್ಯತೇ ॥ ॥೧೭॥

ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ ।
ನ ಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯಪಾಶ್ರಯಃ ॥ ॥೧೮ ॥

ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ ।
ಅಸಕ್ತೋ ಹ್ಯಾಚರನ್ಕರ್ಮ ಪರಮಾಪ್ನೋತಿ ಪೂರುಷಃ ॥ ॥ ೧೯॥

ಕರ್ಮಣೈವ ಹಿ ಸಂಸಿದ್ಧಿಂ ಆಸ್ಥಿತಾ ಜನಕಾದಯಃ ।
ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ॥ ॥೨೦॥

ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।
ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥ ॥೨೧॥

ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ ।
ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥ ॥೨೨॥

ಯದಿ ಹ್ಯಹಂ ನ ವರ್ತೇಯಂ ಜಾತು ಕರ್ಮಣ್ಯತಂದ್ರಿತಃ ।
ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥ ॥ ೨೩ ॥

ಉತ್ಸೀದೇಯುರಿಮೇ ಲೋಕಾಃ ನ ಕುರ್ಯಾಂ ಕರ್ಮ ಚೇದಹಂ ।
ಸಂಕರಸ್ಯ ಚ ಕರ್ತಾ ಸ್ಯಾಂ ಉಪಹನ್ಯಾಮಿಮಾಃ ಪ್ರಜಾಃ॥ ॥ ೨೪॥

ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾ ಕುರ್ವಂತಿ ಭಾರತ ।
ಕುರ್ಯಾದ್ವಿದ್ವಾಂಸ್ತಥಾಽಸಕ್ತಃ ಚಿಕೀರ್ಷುರ್ಲೋಕಸಂಗ್ರಹಂ ॥ ॥೨೫॥
ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಂ ।
ಜೋಷಯೇತ್ಸರ್ವಕರ್ಮಾಣಿ ವಿದ್ವಾನ್ಯುಕ್ತಸ್ಸಮಾಚರನ್ ॥ ॥೨೬॥
ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ ।
ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ ॥ ॥೨೭॥
ತತ್ತ್ವವಿತ್ತು ಮಹಾಬಾಹೋ ಗುಣಕರ್ಮವಿಭಾಗಯೋಃ ।
ಗುಣಾ ಗುಣೇಷು ವರ್ತಂತೇ ಇತಿ ಮತ್ವಾ ನ ಸಜ್ಜತೇ ॥ ॥೨೮॥
ಪ್ರಕೃತೇರ್ಗುಣಸಂಮೂಢಾಃ ಸಜ್ಜಂತೇ ಗುಣಕರ್ಮಸು ।
ತಾನಕೃತ್ಸ್ನವಿದೋ ಮಂದಾನ್ ಕೃತ್ಸ್ನವಿನ್ನ ವಿಚಾಲಯೇತ್ ॥ ॥೨೯॥
ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮಚೇತಸಾ ।
ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ ॥ ॥ ೩೦॥
ಯೇ ಮೇ ಮತಮಿದಂ ನಿತ್ಯಮನುತಿಷ್ಠಂತಿ ಮಾನವಾಃ ।
ಶ್ರದ್ಧಾವಂತೋಽನಸೂಯಂತೋ ಮುಚ್ಯಂತೇ ತೇಽಪಿ ಕರ್ಮಭಿಃ ॥ ॥೩೧॥
ಯೇ ತ್ವೇತದಭ್ಯಸೂಯಂತೋ ನಾನುತಿಷ್ಠಂತಿ ಮೇ ಮತಂ ।
ಸರ್ವಜ್ಞಾನವಿಮೂಢಾಂಸ್ತಾನ್ ವಿದ್ಧಿ ನಷ್ಟಾನಚೇತಸಃ ॥ ॥ ೩೨॥
ಸದೃಶಂ ಚೇಷ್ಟತೇ ಸ್ವಸ್ಯಾಃ ಪ್ರಕೃತೇರ್ಜ್ಞಾನವಾನಪಿ ।
ಪ್ರಕೃತಿಂ ಯಾಂತಿ ಭೂತಾನಿ ನಿಗ್ರಹಃ ಕಿಂ ಕರಿಷ್ಯತಿ ॥ ॥೩೩॥
ಇಂದ್ರಿಯಸ್ಯೇಂದ್ರಿಯಸ್ಯಾರ್ಥೇ ರಾಗದ್ವೇಷೌ ವ್ಯವಸ್ಥಿತೌ ।
ತಯೋರ್ನ ವಶಮಾಗಚ್ಛೇತ್ ತೌ ಹ್ಯಸ್ಯ ಪರಿಪಂಥಿನೌ ॥ ॥೩೪॥
ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥ ॥೩೫॥

ಅರ್ಜುನ ಉವಾಚ -

ಅಥ ಕೇನ ಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ ।
ಅನಿಚ್ಛನ್ನಪಿ ವಾರ್ಷ್ಣೇಯ ಬಲಾದಿವ ನಿಯೋಜಿತಃ ॥ ॥೩೬॥

ಶ್ರೀ ಭಗವಾನುವಾಚ -
ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ ।
ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಂ ॥ ॥೩೭॥
ಧೂಮೇನಾವ್ರಿಯತೇ ವಹ್ನಿಃ ಯಥಾದರ್ಶೋ ಮಲೇನ ಚ ।
ಯಥೋಲ್ಬೇನಾವೃತೋ ಗರ್ಭಃ ತಥಾ ತೇನೇದಮಾವೃತಂ॥ ॥೩೮॥
ಆವೃತಂ ಜ್ಞಾನಮೇತೇನ ಜ್ಞಾನಿನೋ ನಿತ್ಯವೈರಿಣಾ ।
ಕಾಮರೂಪೇಣ ಕೌಂತೇಯ ದುಷ್ಪೂರೇಣಾನಲೇನ ಚ ॥ ॥೩೯॥
ಇಂದ್ರಿಯಾಣಿ ಮನೋಬುದ್ಧಿರಸ್ಯಾಧಿಷ್ಠಾನಂ ಉಚ್ಯತೇ ।
ಏತೈರ್ವಿಮೋಹಯತ್ಯೇಷಃ ಜ್ಞಾನಮಾವೃತ್ಯ ದೇಹಿನಂ ॥ ॥ ೪೦ ॥
ತಸ್ಮಾತ್ತ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ ।
ಪಾಪ್ಮಾನಂ ಪ್ರಜಹಿ ಹ್ಯೇನಂ ಜ್ಞಾನವಿಜ್ಞಾನನಾಶನಂ ॥ ॥೪೧॥
ಇಂದ್ರಿಯಾಣಿ ಪರಾಣ್ಯಾಹುರಿಂದ್ರಿಯೇಭ್ಯಃ ಪರಂ ಮನಃ ।
ಮನಸಸ್ತು ಪರಾ ಬುದ್ಧಿಃ ಯೋ ಬುದ್ಧೇಃ ಪರತಸ್ತು ಸಃ ॥ ॥೪೨॥
ಏವಂ ಬುದ್ಧೇಃ ಪರಂ ಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ ।
ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಂ ॥೪೩॥

ಇತಿ ಕರ್ಮಯೋಗೋನಾಮ ತೃತೀಯೋऽಧ್ಯಾಯಃ ।

# ನಾಲ್ಕನೆಯ ಅಧ್ಯಾಯ

## ಜ್ಞಾನ ಯೋಗಃ

ಶ್ರೀ ಭಗವಾನುವಾಚ -

ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಂ ।
ವಿವಸ್ವಾನ್ಮನವೇ ಪ್ರಾಹ ಮನುರಿಕ್ಷ್ವಾಕವೇಽಬ್ರವೀತ್ ॥ ॥೧॥

ಏವಂ ಪರಂಪರಾಪ್ರಾಪ್ತಮಿಮಂ ರಾಜರ್ಷಯೋ ವಿದುಃ ।
ಸ ಕಾಲೇನೇಹ ಮಹತಾ ಯೋಗೋ ನಷ್ಟಃ ಪರಂತಪ ॥ ॥೨॥

ಸ ಏವಾಯಂ ಮಯಾ ತೇಽದ್ಯ ಯೋಗಃ ಪ್ರೋಕ್ತಃ ಪುರಾತನಃ ।
ಭಕ್ತೋಽಸಿ ಮೇಸಖಾ ಚೇತಿ ರಹಸ್ಯಂ ಹ್ಯೇತದುತ್ತಮಂ ॥ ॥೩॥

ಅರ್ಜುನ ಉವಾಚ -

ಅಪರಂ ಭವತೋ ಜನ್ಮ ಪರಂ ಜನ್ಮ ವಿವಸ್ವತಃ ।
ಕಥಮೇತದ್ವಿಜಾನೀಯಾಂ ತ್ವಮಾದೌ ಪ್ರೋಕ್ತವಾನಿತಿ ॥ ॥೪॥

ಶ್ರೀ ಭಗವಾನುವಾಚ -

ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ ।
ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ ॥ ॥೫॥

ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್ ।
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥ ॥೬॥

ಯದಾಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥ ॥೭॥

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥ ॥೮॥

ಜನ್ಮ ಕರ್ಮ ಚ ಮೇ ದಿವ್ಯಂ ಏವಂ ಯೋ ವೇತ್ತಿ ತತ್ತ್ವತಃ ।
ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ ॥ ॥೯॥

ವೀತರಾಗಭಯಕ್ರೋಧಾಃ ಮನ್ಮಯಾ ಮಾಮುಪಾಶ್ರಿತಾಃ ।
ಬಹವೋ ಜ್ಞಾನತಪಸಾ ಪೂತಾ ಮದ್ಭಾವಮಾಗತಾಃ ॥ ॥೧೦॥

ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ ।
ಮಮವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥ ॥೧೧॥
ಕಾಂಕ್ಷಂತಃ ಕರ್ಮಣಾಂ ಸಿದ್ಧಿಂ ಯಜಂತ ಇಹ ದೇವತಾಃ ।
ಕ್ಷಿಪ್ರಂ ಹಿ ಮಾನುಷೇ ಲೋಕೇ ಸಿದ್ಧಿರ್ಭವತಿ ಕರ್ಮಜಾ ॥ ॥ ೧೨॥
ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ।
ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಂ ॥ ॥೧೩॥
ನ ಮಾಂ ಕರ್ಮಾಣಿ ಲಿಂಪಂತಿ ನ ಮೇ ಕರ್ಮಫಲೇ ಸ್ಪೃಹಾ ।
ಇತಿ ಮಾಂ ಯೋಽಭಿಜಾನಾತಿ ಕರ್ಮಭಿರ್ನ ಸ ಬಧ್ಯತೇ ॥ ॥೧೪॥
ಏವಂ ಜ್ಞಾತ್ವಾ ಕೃತಂ ಕರ್ಮ ಪೂರ್ವೈರಪಿ ಮುಮುಕ್ಷುಭಿಃ ।
ಕುರು ಕರ್ಮೈವ ತಸ್ಮಾತ್ತ್ವಂ ಪೂರ್ವೈಃ ಪೂರ್ವತರಂ ಕೃತಂ ॥ ॥೧೫॥
ಕಿಂ ಕರ್ಮ ಕಿಮಕರ್ಮೇತಿ ಕವಯೋಽಪ್ಯತ್ರ ಮೋಹಿತಾಃ ।
ತತ್ತೇ ಕರ್ಮ ಪ್ರವಕ್ಷ್ಯಾಮಿ ಯತ್ ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥ ॥೧೬॥
ಕರ್ಮಣೋ ಹ್ಯಪಿ ಬೋದ್ಧವ್ಯಂ ಬೋದ್ಧವ್ಯಂ ಚ ವಿಕರ್ಮಣಃ ।
ಅಕರ್ಮಣಶ್ಚ ಬೋದ್ಧವ್ಯಂ ಗಹನಾ ಕರ್ಮಣೋ ಗತಿಃ ॥ ॥೧೭॥
ಕರ್ಮಣ್ಯಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮ ಯಃ ।
ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್ ॥ ॥೧೮॥
ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ ।
ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ ॥ ॥೧೯॥
ತ್ಯಕ್ತ್ವಾ ಕರ್ಮಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ ।
ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ಕರೋತಿ ಸಃ ॥ ॥೨೦॥
ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ ।
ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಂ ॥ ॥೨೧॥
ಯದೃಚ್ಛಾಲಾಭಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ ।
ಸಮಃ ಸಿದ್ಧಾವಸಿದ್ಧೌ ಚ ಕೃತ್ವಾಪಿ ನ ನಿಬಧ್ಯತೇ ॥ ॥೨೨॥
ಗತಸಂಗಸ್ಯ ಮುಕ್ತಸ್ಯ ಜ್ಞಾನಾವಸ್ಥಿತಚೇತಸಃ ।
ಯಜ್ಞಾಯಾಚರತಃ ಕರ್ಮ ಸಮಗ್ರಂ ಪ್ರವಿಲೀಯತೇ ॥ ॥೨೩॥

ಬ್ರಹ್ಮಾರ್ಪಣಂ ಬ್ರಹ್ಮ ಹವಿಃ ಬ್ರಹ್ಮಾಗ್ನೌ ಬ್ರಹ್ಮಣಾ ಹುತಂ ।
ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮಸಮಾಧಿನಾ ॥ ॥೨೪॥

ದೈವಮೇವಾಪರೇ ಯಜ್ಞಂ ಯೋಗಿನಃ ಪರ್ಯುಪಾಸತೇ ।
ಬ್ರಹ್ಮಾಗ್ನಾವಪರೇ ಯಜ್ಞಂ ಯಜ್ಞೇನೈವೋಪಜುಹ್ವತಿ ॥ ॥೨೫॥

ಶ್ರೋತ್ರಾದೀನೀಂದ್ರಿಯಾಣ್ಯನ್ಯೇ ಸಂಯಮಾಗ್ನಿಷು ಜುಹ್ವತಿ ।
ಶಬ್ದಾದೀನ್ವಿಷಯಾನನ್ಯೇ ಇಂದ್ರಿಯಾಗ್ನಿಷು ಜುಹ್ವತಿ ॥ ॥೨೬॥

ಸರ್ವಾಣೀಂದ್ರಿಯಕರ್ಮಾಣಿ ಪ್ರಾಣಕರ್ಮಾಣಿ ಚಾಪರೇ ।
ಆತ್ಮಸಂಯಮಯೋಗಾಗ್ನೌ ಜುಹ್ವತಿ ಜ್ಞಾನದೀಪಿತೇ ॥ ॥೨೭॥

ದ್ರವ್ಯಯಜ್ಞಾಸ್ತಪೋಯಜ್ಞಾಃ ಯೋಗಯಜ್ಞಾಸ್ತಥಾಪರೇ ।
ಸ್ವಾಧ್ಯಾಯಜ್ಞಾನಯಜ್ಞಾಶ್ಚ ಯತಯಃ ಸಂಶಿತವ್ರತಾಃ ॥ ॥೨೮॥

ಅಪಾನೇ ಜುಹ್ವತಿ ಪ್ರಾಣಂ ಪ್ರಾಣೇಽಪಾನಂ ತಥಾಪರೇ ।
ಪ್ರಾಣಾಪಾನಗತೀ ರುದ್ಧ್ವಾ ಪ್ರಾಣಾಯಾಮಪರಾಯಣಾಃ ॥ ॥೨೯॥

ಅಪರೇ ನಿಯತಾಹಾರಾಃ ಪ್ರಾಣಾನ್ ಪ್ರಾಣೇಷು ಜುಹ್ವತಿ ।
ಸರ್ವೇಽಪ್ಯೇತೇ ಯಜ್ಞವಿದೋ ಯಜ್ಞಕ್ಷಪಿತಕಲ್ಮಷಾಃ ॥ ॥೩೦॥

ಯಜ್ಞಶಿಷ್ಟಾಮೃತಭುಜೋ ಯಾಂತಿ ಬ್ರಹ್ಮ ಸನಾತನಂ।
ನಾಯಂ ಲೋಕೋಽಸ್ತ್ಯಯಜ್ಞಸ್ಯ ಕುತೋಽನ್ಯಃ ಕುರುಸತ್ತಮ ॥ ॥೩೧॥

ಏವಂ ಬಹುವಿಧಾ ಯಜ್ಞಾ ವಿತತಾ ಬ್ರಹ್ಮಣೋ ಮುಖೇ ।
ಕರ್ಮಜಾನ್ವಿದ್ಧಿ ತಾನ್ ಸರ್ವಾನೇವಂ ಜ್ಞಾತ್ವಾ ವಿಮೋಕ್ಷ್ಯಸೇ ॥ ॥೩೨॥

ಶ್ರೇಯಾನ್ ದ್ರವ್ಯಮಯಾದ್ಯಜ್ಞಾತ್ ಜ್ಞಾನಯಜ್ಞಃ ಪರಂತಪ ।
ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ॥ ॥೩೩॥

ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।
ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ॥ ॥೩೪॥

ಯತ್ಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ ಪಾಂಡವ ।
ಯೇನ ಭೂತಾನ್ಯಶೇಷೇಣ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ ॥ ॥೩೫॥

ಅಪಿ ಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ ।
ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ॥ ॥೩೬॥

ಯಥೈಧಾಂಸಿ ಸಮಿದ್ಧೋಽಗ್ನಿಃ ಭಸ್ಮಸಾತ್ಕುರುತೇಽರ್ಜುನ ।
ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ ॥ ॥೩೭॥
ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ।
ತತ್ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿಂದತಿ ॥ ॥೩೮॥
ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯತೇಂದ್ರಿಯಃ ।
ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ ॥ ॥೩೯॥
ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ ।
ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ ॥ ॥೪೦॥
ಯೋಗಸಂನ್ಯಸ್ತಕರ್ಮಾಣಂ ಜ್ಞಾನಸಂಛಿನ್ನಸಂಶಯಂ ।
ಆತ್ಮವಂತಂ ನ ಕರ್ಮಾಣಿ ನಿಬಧ್ನಂತಿ ಧನಂಜಯ ॥ ॥೪೧॥
ತಸ್ಮಾದಜ್ಞಾನಸಂಭೂತಂ ಹೃತ್ಸ್ಥಂ ಜ್ಞಾನಾಸಿನಾತ್ಮನಃ ।
ಛಿತ್ತ್ವೈನಂ ಸಂಶಯಂ ಯೋಗಮಾತಿಷ್ಠೋತ್ತಿಷ್ಠ ಭಾರತ ॥ ॥೪೨॥

ಇತಿ ಜ್ಞಾನಯೋಗೋನಾಮ ಚತುರ್ಥೋಽಧ್ಯಾಯಃ ।

# ಐದನೆಯ ಅಧ್ಯಾಯ

## ಕರ್ಮಸಂನ್ಯಾಸಯೋಗಃ

ಅರ್ಜುನ ಉವಾಚ-

ಸಂನ್ಯಾಸಂ ಕರ್ಮಣಾಂ ಕೃಷ್ಣ ಪುನರ್ಯೋಗಂ ಚ ಶಂಸಸಿ ।
ಯಚ್ಛ್ರೇಯ ಏತಯೋರೇಕಂ ತನ್ಮೇ ಬ್ರೂಹಿ ಸುನಿಶ್ಚಿತಮ್ ॥ ॥೧॥

ಶ್ರೀ ಭಗವಾನುವಾಚ -

ಸಂನ್ಯಾಸಃ ಕರ್ಮಯೋಗಶ್ಚ ನಿಶ್ಶ್ರೇಯಸಕರಾವುಭೌ ।
ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ ॥ ॥೨॥
ಜ್ಞೇಯಃ ಸ ನಿತ್ಯಸಂನ್ಯಾಸೀ ಯೋ ನ ದ್ವೇಷ್ಟಿ ನ ಕಾಂಕ್ಷತಿ ।
ನಿರ್ದ್ವಂದ್ವೋ ಹಿ ಮಹಾಬಾಹೋ ಸುಖಂ ಬಂಧಾತ್ಪ್ರಮುಚ್ಯತೇ ॥ ॥೩॥
ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದಂತಿ ನ ಪಂಡಿತಾಃ ।
ಏಕಮಪ್ಯಾಸ್ಥಿತಸ್ಸಮ್ಯಕ್ ಉಭಯೋರ್ವಿಂದತೇ ಫಲಂ ॥ ॥೪॥
ಯತ್ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ ತದ್ಯೋಗೈರಪಿ ಗಮ್ಯತೇ ।
ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ ॥ ॥೫॥
ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ ।
ಯೋಗಯುಕ್ತೋ ಮುನಿರ್ಬ್ರಹ್ಮ ನ ಚಿರೇಣಾಧಿಗಚ್ಛತಿ ॥ ॥೬॥
ಯೋಗಯುಕ್ತೋ ವಿಶುದ್ಧಾತ್ಮಾ ವಿಜಿತಾತ್ಮಾ ಜಿತೇಂದ್ರಿಯಃ ।
ಸರ್ವಭೂತಾತ್ಮಭೂತಾತ್ಮಾ ಕುರ್ವನ್ನಪಿ ನ ಲಿಪ್ಯತೇ ॥ ॥೭॥
ನೈವ ಕಿಂಚಿತ್ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್ ।
ಪಶ್ಯನ್ ಶೃಣ್ವನ್ ಸ್ಪೃಶನ್ ಜಿಘ್ರನ್ ಅಶ್ನನ್ ಗಚ್ಛನ್ ಸ್ವಪನ್ ಶ್ವಸನ್ ॥ ॥೮॥
ಪ್ರಲಪನ್ ವಿಸೃಜನ್ ಗೃಹ್ಣನ್ ಉನ್ಮಿಷನ್ನಿಮಿಷನ್ನಪಿ ।
ಇಂದ್ರಿಯಾಣೀಂದ್ರಿಯಾರ್ಥೇಷು ವರ್ತಂತ ಇತಿ ಧಾರಯನ್ ॥ ॥೯॥
ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ ।
ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥ ॥೧೦॥

ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ ।
ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾಽಽತ್ಮ ಶುದ್ಧಯೇ ॥ ॥೧೧॥
ಯುಕ್ತಃ ಕರ್ಮಫಲಂ ತ್ಯಕ್ತ್ವಾ ಶಾಂತಿಮಾಪ್ನೋತಿ ನೈಷ್ಠಿಕೀಂ ।
ಅಯುಕ್ತಃ ಕಾಮಕಾರೇಣ ಫಲೇ ಸಕ್ತೋ ನಿಬಧ್ಯತೇ ॥ ॥೧೨॥
ಸರ್ವಕರ್ಮಾಣಿ ಮನಸಾ ಸಂನ್ಯಸ್ಯಾಸ್ತೇ ಸುಖಂ ವಶೀ ।
ನವದ್ವಾರೇ ಪುರೇ ದೇಹೀ ನೈವ ಕುರ್ವನ್ನಕಾರಯನ್ ॥ ॥೧೩॥
ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ ।
ನ ಕರ್ಮಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ ॥ ॥೧೪॥
ನಾದತ್ತೇ ಕಸ್ಯಚಿತ್ಪಾಪಂ ನಚೈವ ಸುಕೃತಂ ವಿಭುಃ ।
ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ ॥ ॥೧೫॥
ಜ್ಞಾನೇನ ತು ತದಜ್ಞಾನಂ ಯೇಷಾಂ ನಾಶಿತಮಾತ್ಮನಃ ।
ತೇಷಾಂ ಆದಿತ್ಯವತ್‌ಜ್ಞಾನಂ ಪ್ರಕಾಶಯತಿ ತತ್ಪರಂ ॥ ॥೧೬॥
ತದ್ಬುದ್ಧಯಸ್ತದಾತ್ಮಾನಸ್ತನ್ನಿಷ್ಠಾಸ್ತತ್ಪರಾಯಣಾಃ ।
ಗಚ್ಛಂತ್ಯಪುನರಾವೃತ್ತಿಂ ಜ್ಞಾನನಿರ್ಧೂತಕಲ್ಮಷಾಃ ॥ ॥೧೭॥
ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ ॥ ॥೧೮॥
ಇಹೈವ ತೈರ್ಜಿತಃ ಸರ್ಗಃ ಯೇಷಾಂ ಸಾಮ್ಯೇ ಸ್ಥಿತಂ ಮನಃ ।
ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್‌ಬ್ರಹ್ಮಣಿತೇ ಸ್ಥಿತಾಃ ॥ ॥೧೯॥
ನ ಪ್ರಹೃಷ್ಯೇತ್ ಪ್ರಿಯಂ ಪ್ರಾಪ್ಯ ನೋದ್ವಿಜೇತ್‌ಪ್ರಾಪ್ಯ ಚಾಪ್ರಿಯಂ ।
ಸ್ಥಿರಬುದ್ಧಿರಸಂಮೂಢೋ ಬ್ರಹ್ಮವಿದ್‌ಬ್ರಹ್ಮಣಿ ಸ್ಥಿತಃ ॥ ॥೨೦॥
ಬಾಹ್ಯಸ್ಪರ್ಶೇಷ್ವಸಕ್ತಾತ್ಮಾ ವಿಂದತ್ಯಾತ್ಮನಿ ಯಃ ಸುಖಮ್ ।
ಸ ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯಮಶ್ನುತೇ ॥ ॥೨೧॥
ಯೇ ಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ ಏವ ತೇ ।
ಆದ್ಯಂತವಂತಃ ಕೌಂತೇಯ ನ ತೇಷು ರಮತೇ ಬುಧಃ ॥ ॥೨೨॥
ಶಕ್ನೋತೀಹೈವ ಯಃ ಸೋಢುಂ ಪ್ರಾಕ್ ಶರೀರ ವಿಮೋಕ್ಷಣಾತ್ ।
ಕಾಮಕ್ರೋಧೋದ್ಭವಂ ವೇಗಂ ಸ ಯುಕ್ತಃ ಸ ಸುಖೀ ನರಃ ॥ ॥೨೩॥

ಯೋಽಂತಸ್ಸುಖೋಽಂತರಾರಾಮಸ್ತಥಾಂತರ್ಜ್ಯೋತಿರೇವ ಯಃ ।
ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಭೂತೋಽಧಿಗಚ್ಛತಿ ॥ ॥೨೪॥

ಲಭಂತೇ ಬ್ರಹ್ಮನಿರ್ವಾಣಂ ಋಷಯಃ ಕ್ಷೀಣಕಲ್ಮಷಾಃ ।
ಛಿನ್ನದ್ವೈಧಾ ಯತಾತ್ಮಾನಃ ಸರ್ವಭೂತಹಿತೇ ರತಾಃ ॥ ॥೨೫॥

ಕಾಮಕ್ರೋಧವಿಯುಕ್ತಾನಾಂ ಯತೀನಾಂ ಯತಚೇತಸಾಂ ।
ಅಭಿತೋ ಬ್ರಹ್ಮನಿರ್ವಾಣಂ ವರ್ತತೇ ವಿಜಿತಾತ್ಮನಾಂ ॥ ॥ ೨೬॥

ಸ್ಪರ್ಶಾನ್ ಕೃತ್ವಾ ಬಹಿರ್ಬಾಹ್ಯಾನ್ ಚಕ್ಷುಶ್ಚೈವಾಂತರೇ ಭ್ರುವೋಃ ।
ಪ್ರಾಣಾಪಾನೌ ಸಮೌ ಕೃತ್ವಾ ನಾಸಾಭ್ಯಂತರಚಾರಿಣೌ ॥ ॥೨೭॥

ಯತೇಂದ್ರಿಯಮನೋಬುದ್ಧಿಃ ಮುನಿರ್ಮೋಕ್ಷಪರಾಯಣಃ ।
ವಿಗತೇಚ್ಛಾಭಯಕ್ರೋಧೋ ಯಸ್ಸದಾ ಮುಕ್ತ ಏವ ಸಃ ॥ ॥೨೮॥

ಭೋಕ್ತಾರಂ ಯಜ್ಞತಪಸಾಂ ಸರ್ವಲೋಕ ಮಹೇಶ್ವರಂ ।
ಸುಹೃದಂ ಸರ್ವಭೂತಾನಾಂ ಜ್ಞಾತ್ವಾ ಮಾಂ ಶಾಂತಿಮೃಚ್ಛತಿ ॥ ॥೨೯॥

ಇತಿ ಕರ್ಮಸಂನ್ಯಾಸಯೋಗೋನಾಮ ಪಂಚಮೋಽಧ್ಯಾಯಃ ।

# ಆರನೆಯ ಅಧ್ಯಾಯ

## ಆತ್ಮಸಂಯಮಯೋಗಃ

ಶ್ರೀ ಭಗವಾನುವಾಚ -

ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ ।
ಸ ಸಂನ್ಯಾಸೀ ಚ ಯೋಗೀ ಚ ನ ನಿರಗ್ನಿರ್ನ ಚಾಕ್ರಿಯಃ ॥ ॥೧॥
ಯಂ ಸಂನ್ಯಾಸ ಇತಿ ಪ್ರಾಹುಃ ಯೋಗಂ ತಂ ವಿದ್ಧಿ ಪಾಂಡವ ।
ನ ಹ್ಯಸಂನ್ಯಸ್ತಸಂಕಲ್ಪೋ ಯೋಗೀ ಭವತಿ ಕಶ್ಚನ ॥ ॥೨॥
ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ ।
ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥ ॥೩॥
ಯದಾ ಹಿ ನೇಂದ್ರಿಯಾರ್ಥೇಷು ನ ಕರ್ಮಸ್ವನುಷಜ್ಜತೇ ।
ಸರ್ವಸಂಕಲ್ಪಸಂನ್ಯಾಸೀ ಯೋಗಾರೂಢಸ್ತದೋಚ್ಯತೇ ॥ ॥೪॥
ಉದ್ಧರೇದಾತ್ಮನಾಽಽತ್ಮಾನಂ ನಾತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥ ॥೫॥
ಬಂಧುರಾತ್ಮಾಽಽತ್ಮನಸ್ತಸ್ಯ ಯೇನಾತ್ಮೈವಾತ್ಮನಾ ಜಿತಃ ।
ಅನಾತ್ಮನಸ್ತು ಶತ್ರುತ್ವೇ ವರ್ತೇತಾತ್ಮೈವ ಶತ್ರುವತ್ ॥ ॥೬॥
ಜಿತಾತ್ಮನಃ ಪ್ರಶಾಂತಸ್ಯ ಪರಮಾತ್ಮಾ ಸಮಾಹಿತಃ ।
ಶೀತೋಷ್ಣಸುಖದುಃಖೇಷು ತಥಾ ಮಾನಾವಮಾನಯೋಃ ॥ ॥೭॥
ಜ್ಞಾನವಿಜ್ಞಾನತೃಪ್ತಾತ್ಮಾ ಕೂಟಸ್ಥೋ ವಿಜಿತೇಂದ್ರಿಯಃ ।
ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾಶ್ಮಕಾಂಚನಃ ॥ ॥೮॥
ಸುಹೃನ್ಮಿತ್ರಾರ್ಯುದಾಸೀನಮಧ್ಯಸ್ಥದ್ವೇಷ್ಯಬಂಧುಷು ।
ಸಾಧುಷ್ವಪಿ ಚ ಪಾಪೇಷು ಸಮಬುದ್ಧಿರ್ವಿಶಿಷ್ಯತೇ ॥೯॥
ಯೋಗೀ ಯುಂಜೀತ ಸತತಂ ಆತ್ಮಾನಂ ರಹಸಿ ಸ್ಥಿತಃ ।
ಏಕಾಕೀ ಯತಚಿತ್ತಾತ್ಮಾ ನಿರಾಶೀರಪರಿಗ್ರಹಃ ॥ ॥೧೦॥
ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ ।
ನಾತ್ಯುಚ್ಛ್ರಿತಂ ನಾತಿನೀಚಂ ಚೇಲಾಜಿನಕುಶೋತ್ತರಂ ॥ ॥೧೧॥

ತತ್ರೈಕಾಗ್ರ್ಯಂ ಮನಃ ಕೃತ್ವಾ ಯತಚಿತ್ತೇಂದ್ರಿಯಕ್ರಿಯಃ ।
ಉಪವಿಶ್ಯಾಸನೇ ಯುಂಜ್ಯಾದ್ಯೋಗಮಾತ್ಮವಿಶುದ್ಧಯೇ ॥ ॥೧೨॥
ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಂ ।
ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್ ॥ ॥೧೩॥
ಪ್ರಶಾಂತಾತ್ಮಾ ವಿಗತಭೀಃ ಬ್ರಹ್ಮಚಾರಿವ್ರತೇ ಸ್ಥಿತಃ ।
ಮನಸ್ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ ॥ ॥೧೪॥
ಯುಂಜನ್ನೇವಂ ಸದಾಽಽತ್ಮಾನಂ ಯೋಗೀ ನಿಯತಮಾನಸಃ ।
ಶಾಂತಿಂ ನಿರ್ವಾಣಪರಮಾಂ ಮತ್ಸಂಸ್ಥಾಮಧಿಗಚ್ಛತಿ ॥ ॥೧೫॥
ನಾತ್ಯಶ್ನತಸ್ತು ಯೋಗೋಽಸ್ತಿ ನಚೈಕಾಂತಮನಶ್ನತಃ ।
ನ ಚಾತಿಸ್ವಪ್ನಶೀಲಸ್ಯ ಜಾಗ್ರತೋ ನೈವ ಚಾರ್ಜುನ ॥ ॥೧೬॥
ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।
ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥ ॥೧೭॥
ಯದಾ ವಿನಿಯತಂ ಚಿತ್ತಂ ಆತ್ಮನ್ಯೇವಾವತಿಷ್ಠತೇ ।
ನಿಃಸ್ಪೃಹಸ್ಸರ್ವಕಾಮೇಭ್ಯೋ ಯುಕ್ತ ಇತ್ಯುಚ್ಯತೇ ತದಾ ॥ ॥೧೮॥
ಯಥಾ ದೀಪೋ ನಿವಾತಸ್ಥೋ ನೇಂಗತೇ ಸೋಪಮಾ ಸ್ಮೃತಾ ।
ಯೋಗಿನೋ ಯತಚಿತ್ತಸ್ಯ ಯುಂಜತೋ ಯೋಗಮಾತ್ಮನಃ ॥ ॥೧೯॥
ಯತ್ರೋಪರಮತೇ ಚಿತ್ತಂ ನಿರುದ್ಧಂ ಯೋಗಸೇವಯಾ ।
ಯತ್ರ ಚೈವಾತ್ಮನಾಽಽತ್ಮಾನಂ ಪಶ್ಯನ್ನಾತ್ಮನಿ ತುಷ್ಯತಿ ॥ ॥೨೦॥
ಸುಖಮಾತ್ಯಂತಿಕಂ ಯತ್ತದ್ಬುದ್ಧಿಗ್ರಾಹ್ಯಂ ಅತೀಂದ್ರಿಯಂ ।
ವೇತ್ತಿ ಯತ್ರ ನ ಚೈವಾಯಂ ಸ್ಥಿತಶ್ಚಲತಿ ತತ್ತ್ವತಃ ॥ ॥೨೦॥
ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ ।
ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಽಪಿ ವಿಚಾಲ್ಯತೇ ॥ ॥೨೨॥
ತಂ ವಿದ್ಯಾದ್ದುಃಖಸಂಯೋಗವಿಯೋಗಂ ಯೋಗಸಂಜ್ಞಿತಂ ।
ಸ ನಿಶ್ಚಯೇನ ಯೋಕ್ತವ್ಯೋ ಯೋಗೋಽನಿರ್ವಿಣ್ಣಚೇತಸಾ ॥ ॥೨೩॥
ಸಂಕಲ್ಪಪ್ರಭವಾನ್ ಕಾಮಾನ್ ತ್ಯಕ್ತ್ವಾ ಸರ್ವಾನಶೇಷತಃ ।
ಮನಸೈವೇಂದ್ರಿಯಗ್ರಾಮಂ ವಿನಿಯಮ್ಯ ಸಮಂತತಃ ॥ ॥೨೪॥

ಶನೈಶ್ಶನೈರುಪರಮೇತ್ ಬುದ್ಧ್ಯಾ ಧೃತಿಗೃಹೀತಯಾ ।
ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿಂತಯೇತ್ ॥ ॥೨೫॥
ಯತೋ ಯತೋ ನಿಶ್ಚರತಿ ಮನಶ್ಚಂಚಲಮಸ್ಥಿರಮ್ ।
ತತಸ್ತತೋ ನಿಯಮ್ಯೈತದಾತ್ಮನ್ಯೇವ ವಶಂ ನಯೇತ್ ॥ ॥೨೬॥
ಪ್ರಶಾಂತಮನಸಂ ಹ್ಯೇನಂ ಯೋಗಿನಂ ಸುಖಮುತ್ತಮಂ ।
ಉಪೈತಿ ಶಾಂತರಜಸಂ ಬ್ರಹ್ಮಭೂತಮಕಲ್ಮಷಂ ॥ ॥೨೭॥
ಏವಂ ಯುಂಜನ್ ಸದಾಽತ್ಮಾನಂ ಯೋಗೀ ವಿಗತಕಲ್ಮಷಃ ।
ಸುಖೇನ ಬ್ರಹ್ಮಸಂಸ್ಪರ್ಶಮತ್ಯಂತಂ ಸುಖಮಶ್ನುತೇ ॥ ॥೨೮॥
ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥ ॥೨೯॥
ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ ।
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ ॥ ॥೩೦॥
ಸರ್ವಭೂತಸ್ಥಿತಂ ಯೋ ಮಾಂ ಭಜತ್ಯೇಕತ್ವಮಾಸ್ಥಿತಃ ।
ಸರ್ವಥಾ ವರ್ತಮಾನೋಽಪಿ ಸ ಯೋಗೀ ಮಯಿ ವರ್ತತೇ ॥ ॥೩೧॥
ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ ।
ಸುಖಂ ವಾ ಯದಿ ವಾ ದುಃಖಂ ಸ ಯೋಗೀ ಪರಮೋ ಮತಃ ॥ ॥೩೨॥
ಅರ್ಜುನ ಉವಾಚ-
ಯೋಽಯಂ ಯೋಗಸ್ತ್ವಯಾ ಪ್ರೋಕ್ತಃ ಸಾಮ್ಯೇನ ಮಧುಸೂದನ ।
ಏತಸ್ಯಾಹಂ ನ ಪಶ್ಯಾಮಿ ಚಂಚಲತ್ವಾತ್ ಸ್ಥಿತಿಂ ಸ್ಥಿರಾಮ್ ॥ ॥೩೩॥
ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ದೃಢಂ ।
ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಂ ॥ ॥೩೪॥
ಶ್ರೀ ಭಗವಾನುವಾಚ -
ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಂ ।
ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥ ॥೩೫॥
ಅಸಂಯತಾತ್ಮನಾ ಯೋಗೋ ದುಷ್ಪ್ರಾಪ ಇತಿ ಮೇ ಮತಿಃ ।
ವಶ್ಯಾತ್ಮನಾ ತು ಯತತಾ ಶಕ್ಯೋಽವಾಪ್ತುಮುಪಾಯತಃ ॥ ॥೩೬॥

ಅರ್ಜುನ ಉವಾಚ-

ಅಯತಿಃ ಶ್ರದ್ಧಯೋಪೇತೋ ಯೋಗಾಚ್ಚಲಿತಮಾನಸಃ ।
ಅಪ್ರಾಪ್ಯ ಯೋಗಸಂಸಿದ್ಧಿಂ ಕಾಂ ಗತಿಂ ಕೃಷ್ಣ ಗಚ್ಛತಿ ॥ ॥೩೭॥
ಕಚ್ಚಿನ್ನೋಭಯವಿಭ್ರಷ್ಟಃ ಛಿನ್ನಾಭ್ರಮಿವ ನಶ್ಯತಿ ।
ಅಪ್ರತಿಷ್ಠೋ ಮಹಾಬಾಹೋ ವಿಮೂಢೋ ಬ್ರಹ್ಮಣಃ ಪಥಿ ॥ ॥೩೮॥
ಏತಂ ಮೇ ಸಂಶಯಂ ಕೃಷ್ಣ! ಛೇತ್ತುಮರ್ಹಸ್ಯಶೇಷತಃ ।
ತ್ವದನ್ಯಃ ಸಂಶಯಸ್ಯಾಸ್ಯ ಛೇತ್ತಾ ನಹ್ಯುಪಪದ್ಯತೇ ॥ ॥೩೯॥

ಶ್ರೀ ಭಗವಾನುವಾಚ -

ಪಾರ್ಥ ನೈವೇಹ ನಾಮುತ್ರ ವಿನಾಶಸ್ತಸ್ಯ ವಿದ್ಯತೇ ।
ನ ಹಿ ಕಲ್ಯಾಣಕೃತ್ಕಶ್ಚಿದ್ದುರ್ಗತಿಂ ತಾತ ಗಚ್ಛತಿ ॥ ॥೪೦॥
ಪ್ರಾಪ್ಯ ಪುಣ್ಯಕೃತಾಂ ಲೋಕಾನುಷಿತ್ವಾ ಶಾಶ್ವತೀಃ ಸಮಾಃ ।
ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ ॥ ॥೪೧॥
ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಂ ।
ಏತದ್ಧಿ ದುರ್ಲಭತರಂ ಲೋಕೇ ಜನ್ಮ ಯದೀದೃಶಂ ॥ ॥೪೨॥
ತತ್ರ ತಂ ಬುದ್ಧಿಸಂಯೋಗಂ ಲಭತೇ ಪೌರ್ವದೈಹಿಕಂ ।
ಯತತೇ ಚ ತತೋ ಭೂಯಃ ಸಂಸಿದ್ಧೌ ಕುರುನಂದನ ॥ ॥೪೩॥
ಪೂರ್ವಾಭ್ಯಾಸೇನ ತೇನೈವ ಹ್ರಿಯತೇ ಹ್ಯವಶೋಽಪಿ ಸಃ ।
ಜಿಜ್ಞಾಸುರಪಿ ಯೋಗಸ್ಯ ಶಬ್ದಬ್ರಹ್ಮಾತಿವರ್ತತೇ ॥ ॥೪೪॥
ಪ್ರಯತ್ನಾದ್ಯತಮಾನಸ್ತು ಯೋಗೀ ಸಂಶುದ್ಧಕಿಲ್ಬಿಷಃ ।
ಅನೇಕ ಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಂ ॥ ॥೪೫॥
ತಪಸ್ವಿಭ್ಯೋಽಧಿಕೋ ಯೋಗೀ ಜ್ಞಾನಿಭ್ಯೋಽಪಿ ಮತೋಽಧಿಕಃ ।
ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್ಯೋಗೀ ಭವಾರ್ಜುನ ॥ ॥೪೬॥
ಯೋಗಿನಾಮಪಿ ಸರ್ವೇಷಾಂ ಮದ್ಗತೇನಾಂತರಾತ್ಮನಾ ।
ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ ॥ ॥೪೭॥

ಇತಿ ಸಂಯಮಯೋಗೋನಾಮ ಷಷ್ಠೋಽಧ್ಯಾಯಃ ।

## ಏಳನೆಯ ಅಧ್ಯಾಯ

# ಜ್ಞಾನವಿಜ್ಞಾನಯೋಗಃ

ಶ್ರೀ ಭಗವಾನುವಾಚ -

ಮಯ್ಯಾಸಕ್ತಮನಾಃ ಪಾರ್ಥ ಯೋಗಂ ಯುಂಜನ್ಮದಾಶ್ರಯಃ ।
ಅಸಂಶಯಂ ಸಮಗ್ರಂ ಮಾಂ ಯಥಾ ಜ್ಞಾಸ್ಯಸಿ ತಚ್ಛೃಣು ॥ ॥೧॥

ಜ್ಞಾನಂ ತೇಽಹಂ ಸವಿಜ್ಞಾನಂ ಇದಂ ವಕ್ಷ್ಯಾಮ್ಯಶೇಷತಃ ।
ಯಜ್ಜ್ಞಾತ್ವಾ ನೇಹ ಭೂಯೋಽನ್ಯತ್ ಜ್ಞಾತವ್ಯಮವಶಿಷ್ಯತೇ ॥ ॥೨॥

ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ ॥ ॥೩॥

ಭೂಮಿರಾಪೋಽನಲೋ ವಾಯುಃ ಖಂ ಮನೋ ಬುದ್ಧಿರೇವ ಚ ।
ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ॥ ॥೪॥

ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಂ ।
ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್॥ ॥೫॥

ಏತದ್ಯೋನೀನಿ ಭೂತಾನಿ ಸರ್ವಾಣೀತ್ಯುಪಧಾರಯ ।
ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ॥ ॥೬॥

ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ।
ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ॥ ॥೭॥

ರಸೋಽಹಮಪ್ಸು ಕೌಂತೇಯ ಪ್ರಭಾಽಸ್ಮಿ ಶಶಿಸೂರ್ಯಯೋಃ ।
ಪ್ರಣವಃ ಸರ್ವವೇದೇಷು ಶಬ್ದಃ ಖೇ ಪೌರುಷಂ ನೃಷು॥ ॥೮॥

ಪುಣ್ಯೋ ಗಂಧಃ ಪೃಥಿವ್ಯಾಂ ಚ ತೇಜಶ್ಚಾಸ್ಮಿ ವಿಭಾವಸೌ ।
ಜೀವನಂ ಸರ್ವಭೂತೇಷು ತಪಶ್ಚಾಸ್ಮಿ ತಪಸ್ವಿಷು॥ ॥೯॥

ಬೀಜಂ ಮಾಂ ಸರ್ವಭೂತಾನಾಂ ವಿದ್ಧಿ ಪಾರ್ಥ ಸನಾತನಮ್ ।
ಬುದ್ಧಿರ್ಬುದ್ಧಿಮತಾಮಸ್ಮಿ ತೇಜಸ್ತೇಜಸ್ವಿನಾಮಹಮ್॥ ॥೧೦॥

ಬಲಂ ಬಲವತಾಂ ಚಾಹಂ ಕಾಮರಾಗವಿವರ್ಜಿತಂ ।
ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ॥ ॥೧೧॥

ಯೇ ಚೈವ ಸಾತ್ವಿಕಾ ಭಾವಾ ರಾಜಸಾಸ್ತಾಮಸಾಶ್ಚ ಯೇ ।
ಮತ್ತ ಏವೇತಿ ತಾನ್ವಿದ್ಧಿ ನ ತ್ವಹಂ ತೇಷು ತೇ ಮಯಿ॥ ॥೧೨॥
ತ್ರಿಭಿರ್ಗುಣಮಯೈರ್ಭಾವೈಃ ಏಭಿಃ ಸರ್ವಮಿದಂ ಜಗತ್ ।
ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಂ॥ ॥೧೩॥
ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।
ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ ॥ ॥೧೪॥
ನ ಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯಂತೇ ನರಾಧಮಾಃ ।
ಮಾಯಯಾಽಪಹೃತಜ್ಞಾನಾಃ ಆಸುರಂ ಭಾವಮಾಶ್ರಿತಾಃ॥ ॥೧೫॥
ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ ।
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ॥ ॥ ೧೬॥
ತೇಷಾಂ ಜ್ಞಾನೀ ನಿತ್ಯಯುಕ್ತಃ ಏಕಭಕ್ತಿರ್ವಿಶಿಷ್ಯತೇ ।
ಪ್ರಿಯೋ ಹಿ ಜ್ಞಾನಿನೋಽತ್ಯರ್ಥಂ ಅಹಂ ಸ ಚ ಮಮ ಪ್ರಿಯಃ॥ ॥೧೭॥
ಉದಾರಾಸ್ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಂ ।
ಆಸ್ಥಿತಃ ಸ ಹಿ ಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಂ॥ ॥೧೮॥
ಬಹೂನಾಂ ಜನ್ಮನಾಮಂತೇ ಜ್ಞಾನವಾನ್ಮಾಂ ಪ್ರಪದ್ಯತೇ ।
ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ॥ ॥೧೯॥
ಕಾಮೈಸ್ತೈಸ್ತೈರ್ಹೃತಜ್ಞಾನಾಃ ಪ್ರಪದ್ಯಂತೇಽನ್ಯದೇವತಾಃ ।
ತಂತಂ ನಿಯಮಮಾಸ್ಥಾಯ ಪ್ರಕೃತ್ಯಾ ನಿಯತಾಃ ಸ್ವಯಾ॥ ॥೨೦॥
ಯೋಯೋ ಯಾಂಯಾಂ ತನುಂ ಭಕ್ತಃ ಶ್ರದ್ಧಯಾಽರ್ಚಿತುಮಿಚ್ಛತಿ ।
ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಂ॥ ॥೨೧॥
ಸ ತಯಾ ಶ್ರದ್ಧಯಾ ಯುಕ್ತಃ ತಸ್ಯಾರಾಧನಮೀಹತೇ ।
ಲಭತೇ ಚ ತತಃ ಕಾಮಾನ್ ಮಯೈವ ವಿಹಿತಾನ್ ಹಿ ತಾನ್॥ ॥೨೨॥
ಅಂತವತ್ತು ಫಲಂ ತೇಷಾಂ ತದ್ಭವತ್ಯಲ್ಪಮೇಧಸಾಂ ।
ದೇವಾನ್ದೇವಯಜೋ ಯಾಂತಿ ಮದ್ಭಕ್ತಾ ಯಾಂತಿ ಮಾಮಪಿ॥ ॥೨೩॥
ಅವ್ಯಕ್ತಂ ವ್ಯಕ್ತಿಮಾಪನ್ನಂ ಮನ್ಯಂತೇ ಮಾಮಬುದ್ಧಯಃ ।
ಪರಂ ಭಾವಮಜಾನಂತೋ ಮಮಾವ್ಯಯಮನುತ್ತಮಂ॥ ॥೨೪॥

ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾಸಮಾವೃತಃ ।
ಮೂಢೋಽಯಂ ನಾಭಿಜಾನಾತಿ ಲೋಕೋ ಮಾಮಜಮವ್ಯಯಂ ॥ ॥೨೫॥

ವೇದಾಹಂ ಸಮತೀತಾನಿ ವರ್ತಮಾನಾನಿ ಚಾರ್ಜುನ ।
ಭವಿಷ್ಯಾಣಿ ಚ ಭೂತಾನಿ ಮಾಂ ತು ವೇದ ನ ಕಶ್ಚನ॥ ॥೨೬॥

ಇಚ್ಛಾದ್ವೇಷಸಮುತ್ಥೇನ ದ್ವಂದ್ವಮೋಹೇನ ಭಾರತ ।
ಸರ್ವಭೂತಾನಿ ಸಂಮೋಹಂ ಸರ್ಗೇ ಯಾಂತಿ ಪರಂತಪ॥ ॥೨೭॥

ಯೇಷಾಂ ತ್ವಂತಗತಂ ಪಾಪಂ ಜನಾನಾಂ ಪುಣ್ಯಕರ್ಮಣಾಂ ।
ತೇ ದ್ವಂದ್ವ ಮೋಹನಿರ್ಮುಕ್ತಾ ಭಜಂತೇ ಮಾಂ ದೃಢವ್ರತಾಃ॥ ॥೨೮॥

ಜರಾಮರಣಮೋಕ್ಷಾಯ ಮಾಮಾಶ್ರಿತ್ಯ ಯತಂತಿ ಯೇ ।
ತೇ ಬ್ರಹ್ಮ ತದ್ವಿದುಃಕೃತ್ಸ್ನಂ ಅಧ್ಯಾತ್ಮಂ ಕರ್ಮ ಚಾಖಿಲಮ್॥ ॥ ೨೯॥

ಸಾಧಿಭೂತಾಧಿದೈವಂ ಮಾಂ ಸಾಧಿಯಜ್ಞಂ ಚ ಯೇ ವಿದುಃ ।
ಪ್ರಯಾಣಕಾಲೇಽಪಿ ಚ ಮಾಂ ತೇ ವಿದುರ್ಯುಕ್ತಚೇತಸಃ॥ ॥೩೦॥

ಇತಿ ಜ್ಞಾನವಿಜ್ಞಾನಯೋಗೋನಾಮ ಸಪ್ತಮೋಽಧ್ಯಾಯಃ ।

## ಎಂಟನೆಯ ಅಧ್ಯಾಯ

# ಅಕ್ಷರಬ್ರಹ್ಮಯೋಗಃ

ಅರ್ಜುನ ಉವಾಚ-

ಕಿಂ ತದ್ಬ್ರಹ್ಮ ಕಿಮಧ್ಯಾತ್ಮಂ ಕಿಂ ಕರ್ಮ ಪುರುಷೋತ್ತಮ ।
ಅಧಿಭೂತಂ ಚ ಕಿಂ ಪ್ರೋಕ್ತಂ ಅಧಿದೈವಂ ಕಿಮುಚ್ಯತೇ॥ ॥೧॥
ಅಧಿಯಜ್ಞಃ ಕಥಂ ಕೋಽತ್ರ ದೇಹೇಽಸ್ಮಿನ್ ಮಧುಸೂದನ ।
ಪ್ರಯಾಣಕಾಲೇ ಚ ಕಥಂ ಜ್ಞೇಯೋಽಸಿ ನಿಯತಾತ್ಮಭಿಃ॥ ॥೨॥

ಶ್ರೀ ಭಗವಾನುವಾಚ -

ಅಕ್ಷರಂ ಬ್ರಹ್ಮ ಪರಮಂ ಸ್ವಭಾವೋಽಧ್ಯಾತ್ಮಮುಚ್ಯತೇ ।
ಭೂತಭಾವೋದ್ಭವಕರೋ ವಿಸರ್ಗಃ ಕರ್ಮಸಂಜ್ಞಿತಃ॥ ॥೩॥
ಅಧಿಭೂತಂ ಕ್ಷರೋ ಭಾವಃ ಪುರುಷಶ್ಚಾಧಿದೈವತಮ್ ।
ಅಧಿಯಜ್ಞೋಽಹಮೇವಾತ್ರ ದೇಹೇ ದೇಹಭೃತಾಂ ವರ॥ ॥೪॥
ಅಂತಕಾಲೇ ಚ ಮಾಮೇವ ಸ್ಮರನ್ ಮುಕ್ತ್ವಾ ಕಲೇವರಮ್ ।
ಯಃ ಪ್ರಯಾತಿ ಸ ಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ॥ ॥೫॥
ಯಂಯಂ ವಾಽಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಂ ।
ತಂತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ॥ ॥೬॥
ತಸ್ಮಾತ್ಸರ್ವೇಷು ಕಾಲೇಷು ಮಾಮನುಸ್ಮರ ಯುಧ್ಯ ಚ ।
ಮಯ್ಯರ್ಪಿತಮನೋಬುದ್ಧಿಃ ಮಾಮೇವೈಷ್ಯಸ್ಯಸಂಶಯಃ॥ ॥೭॥
ಅಭ್ಯಾಸಯೋಗಯುಕ್ತೇನ ಚೇತಸಾನಾನ್ಯಗಾಮಿನಾ ।
ಪರಮಂ ಪುರುಷಂ ದಿವ್ಯಂ ಯಾತಿ ಪಾರ್ಥಾನುಚಿಂತಯನ್॥ ॥೮॥
ಕವಿಂ ಪುರಾಣಮನುಶಾಸಿತಾರಂ ಅಣೋರಣೀಯಾಂಸಮನುಸ್ಮರೇದ್ಯಃ ।
ಸರ್ವಸ್ಯ ಧಾತಾರಮಚಿಂತ್ಯರೂಪಂ ಆದಿತ್ಯವರ್ಣಂ ತಮಸಃ ಪರಸ್ತಾತ್॥ ॥೯॥
ಪ್ರಯಾಣಕಾಲೇ ಮನಸಾಽಚಲೇನ ಭಕ್ತ್ಯಾ ಯುಕ್ತೋ ಯೋಗಬಲೇನ ಚೈವ ।
ಭ್ರುವೋರ್ಮಧ್ಯೇ ಪ್ರಾಣಮಾವೇಶ್ಯ ಸಮ್ಯಕ್ ಸ ತಂ ಪರಂ ಪುರುಷಮುಪೈತಿ ದಿವ್ಯಂ॥
॥೧೦॥

ಯದಕ್ಷರಂ ವೇದವಿದೋ ವದಂತಿ ವಿಶಂತಿ ಯದ್ಯತಯೋ ವೀತರಾಗಾಃ ।
ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ ತತ್ತೇ ಪದಂ ಸಂಗ್ರಹೇಣ ಪ್ರವಕ್ಷ್ಯೇ ॥
॥ ೧೧॥

ಸರ್ವದ್ವಾರಾಣಿ ಸಂಯಮ್ಯ ಮನೋ ಹೃದಿ ನಿರುಧ್ಯ ಚ ।
ಮೂರ್ಧ್ನ್ಯಾಧಾಯಾಽತ್ಮನಃ ಪ್ರಾಣಂ ಆಸ್ಥಿತೋ ಯೋಗಧಾರಣಾಂ॥ ॥೧೨॥
ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ಮಾಮನುಸ್ಮರನ್ ।
ಯಃ ಪ್ರಯಾತಿ ತ್ಯಜನ್ದೇಹಂ ಸ ಯಾತಿ ಪರಮಾಂ ಗತಿಂ ॥ ॥ ೧೩॥
ಅನನ್ಯಚೇತಾಸ್ಸತತಂ ಯೋ ಮಾಂ ಸ್ಮರತಿ ನಿತ್ಯಶಃ ।
ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ ॥ ॥೧೪॥
ಮಾಮುಪೇತ್ಯ ಪುನರ್ಜನ್ಮ ದುಃಖಾಲಯಮಶಾಶ್ವತಂ ।
ನಾಪ್ನುವಂತಿ ಮಹಾತ್ಮಾನಃ ಸಂಸಿದ್ಧಿಂ ಪರಮಾಂ ಗತಾಃ ॥ ॥೧೫॥
ಆಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ ।
ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ ॥ ॥೧೬॥
ಸಹಸ್ರಯುಗಪರ್ಯಂತಂ ಅಹರ್ಯದ್ಬ್ರಹ್ಮಣೋ ವಿದುಃ ।
ರಾತ್ರಿಂ ಯುಗಸಹಸ್ರಾಂತಾಂ ತೇಽಹೋರಾತ್ರವಿದೋ ಜನಾಃ॥ ॥೧೭॥
ಅವ್ಯಕ್ತಾದ್ವ್ಯಕ್ತಯಃ ಸರ್ವಾಃ ಪ್ರಭವಂತ್ಯಹರಾಗಮೇ ।
ರಾತ್ರ್ಯಾಗಮೇ ಪ್ರಲೀಯಂತೇ ತತ್ರೈವಾವ್ಯಕ್ತಸಂಜ್ಞಕೇ ॥ ॥೧೮॥
ಭೂತಗ್ರಾಮಃ ಸ ಏವಾಯಂ ಭೂತ್ವಾ ಭೂತ್ವಾ ಪ್ರಲೀಯತೇ ।
ರಾತ್ರ್ಯಾಗಮೇಽವಶಃ ಪಾರ್ಥ ಪ್ರಭವತ್ಯಹರಾಗಮೇ ॥ ॥೧೯॥
ಪರಸ್ತಸ್ಮಾತ್ತು ಭಾವೋಽನ್ಯೋಽವ್ಯಕ್ತೋಽವ್ಯಕ್ತಾತ್ ಸನಾತನಃ ।
ಯಃ ಸ ಸರ್ವೇಷು ಭೂತೇಷು ನಶ್ಯತ್ಸು ನ ವಿನಶ್ಯತಿ ॥ ॥೨೦॥
ಅವ್ಯಕ್ತೋಽಕ್ಷರ ಇತ್ಯುಕ್ತಃ ತಮಾಹುಃ ಪರಮಾಂ ಗತಿಂ ।
ಯಂ ಪ್ರಾಪ್ಯ ನ ನಿವರ್ತಂತೇ ತದ್ಧಾಮ ಪರಮಂ ಮಮ ॥ ॥೨೧॥
ಪುರುಷಃ ಸ ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ ।
ಯಸ್ಯಾಂತಃಸ್ಥಾನಿ ಭೂತಾನಿ ಯೇನ ಸರ್ವಮಿದಂ ತತಂ ॥ ॥೨೨॥

ಯತ್ರ ಕಾಲೇ ತ್ವನಾವೃತ್ತಿಂ ಆವೃತ್ತಿಂ ಚೈವ ಯೋಗಿನಃ ।
ಪ್ರಯಾತಾ ಯಾಂತಿ ತಂ ಕಾಲಂ ವಕ್ಷ್ಯಾಮಿ ಭರತರ್ಷಭ ॥ ॥೨೩॥
ಅಗ್ನಿರ್ಜ್ಯೋತಿರಹಃ ಶುಕ್ಲಃ ಷಣ್ಮಾಸಾ ಉತ್ತರಾಯಣಂ ।
ತತ್ರ ಪ್ರಯಾತಾ ಗಚ್ಛಂತಿ ಬ್ರಹ್ಮ ಬ್ರಹ್ಮವಿದೋ ಜನಾಃ ॥ ॥೨೪॥
ಧೂಮೋ ರಾತ್ರಿಸ್ತಥಾಕೃಷ್ಣಃ ಷಣ್ಮಾಸಾ ದಕ್ಷಿಣಾಯನಂ ।
ತತ್ರ ಚಾಂದ್ರಮಸಂ ಜ್ಯೋತಿಃ ಯೋಗೀ ಪ್ರಾಪ್ಯ ನಿವರ್ತತೇ ॥ ॥ ೨೫॥
ಶುಕ್ಲಕೃಷ್ಣೇ ಗತೀ ಹ್ಯೇತೇ ಜಗತಶ್ಶಾಶ್ವತೇ ಮತೇ ।
ಏಕಯಾ ಯಾತ್ಯನಾವೃತ್ತಿಂ ಅನ್ಯಯಾವರ್ತತೇ ಪುನಃ ॥ ॥೨೬॥
ನೈತೇ ಸೃತೀ ಪಾರ್ಥ ಜಾನನ್ ಯೋಗೀ ಮುಹ್ಯತಿ ಕಶ್ಚನ ।
ತಸ್ಮಾತ್ಸರ್ವೇಷು ಕಾಲೇಷು ಯೋಗಯುಕ್ತೋ ಭವಾರ್ಜುನ ॥ ॥೨೭॥
ವೇದೇಷು ಯಜ್ಞೇಷು ತಪಸ್ಸು ಚೈವ ದಾನೇಷು ಯತ್ಪುಣ್ಯಫಲಂ ಪ್ರದಿಷ್ಟಂ ।
ಅತ್ಯೇತಿ ತತ್ಸರ್ವಮಿದಂ ವಿದಿತ್ವಾ ಯೋಗೀ ಪರಂ ಸ್ಥಾನಮುಪೈತಿ ಚಾದ್ಯಂ॥ ॥೨೮॥

ಇತಿ ಅಕ್ಷರ ಪರಬ್ರಹ್ಮಯೋಗೋನಾಮ ಅಷ್ಟಮೋಽಧ್ಯಾಯಃ

## ಒಂಭತ್ತನೆಯ ಅಧ್ಯಾಯ

## ರಾಜವಿದ್ಯಾ-ರಾಜಗುಹ್ಯಯೋಗಃ

ಶ್ರೀ ಭಗವಾನುವಾಚ-

ಇದಂ ತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ ।
ಜ್ಞಾನಂ ವಿಜ್ಞಾನ ಸಹಿತಂ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥ ॥೧॥
ರಾಜವಿದ್ಯಾ ರಾಜಗುಹ್ಯಂ ಪವಿತ್ರಮಿದಮುತ್ತಮಂ ।
ಪ್ರತ್ಯಕ್ಷಾವಗಮಂ ಧರ್ಮ್ಯಂ ಸುಸುಖಂ ಕರ್ತುಮವ್ಯಯಂ ॥ ॥೨॥
ಅಶ್ರದ್ಧಧಾನಾಃ ಪುರುಷಾಃ ಧರ್ಮಸ್ಯಾಸ್ಯ ಪರಂತಪ ।
ಅಪ್ರಾಪ್ಯ ಮಾಂ ನಿವರ್ತಂತೇ ಮೃತ್ಯುಸಂಸಾರ ವರ್ತ್ಮನಿ ॥ ॥೩॥
ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ ।
ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥ ॥೪॥
ನ ಚ ಮತ್ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಮ್ ।
ಭೂತಭೃನ್ನಚ ಭೂತಸ್ಥೋ ಮಮಾತ್ಮಾ ಭೂತಭಾವನಃ ॥ ॥೫॥
ಯಥಾಽಽಕಾಶಸ್ಥಿತೋ ನಿತ್ಯಂ ವಾಯುಃ ಸರ್ವತ್ರಗೋ ಮಹಾನ್ ।
ತಥಾ ಸರ್ವಾಣಿ ಭೂತಾನಿ ಮತ್ಸ್ಥಾನೀತ್ಯುಪಧಾರಯ ॥ ॥೬॥
ಸರ್ವಭೂತಾನಿ ಕೌಂತೇಯ ಪ್ರಕೃತಿಂ ಯಾಂತಿ ಮಾಮಿಕಾಂ ।
ಕಲ್ಪಕ್ಷಯೇ ಪುನಸ್ತಾನಿ ಕಲ್ಪಾದೌ ವಿಸೃಜಾಮ್ಯಹಮ್ ॥ ॥೭॥
ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃ ಪುನಃ ।
ಭೂತಗ್ರಾಮಮಿಮಂ ಕೃತ್ಸ್ನಂ ಅವಶಂ ಪ್ರಕೃತೇರ್ವಶಾತ್ ॥ ॥೮॥
ನ ಚ ಮಾಂ ತಾನಿ ಕರ್ಮಾಣಿ ನಿಬಧ್ನಂತಿ ಧನಂಜಯ ।
ಉದಾಸೀನವದಾಸೀನಂ ಅಸಕ್ತಂ ತೇಷು ಕರ್ಮಸು ॥ ॥೯॥
ಮಯಾಽಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್ ।
ಹೇತುನಾಽನೇನ ಕೌಂತೇಯ ಜಗದ್ವಿಪರಿವರ್ತತೇ ॥ ॥೧೦॥
ಅವಜಾನಂತಿ ಮಾಂ ಮೂಢಾಃ ಮಾನುಷೀಂ ತನುಮಾಶ್ರಿತಮ್ ।
ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಮ್ ॥ ॥೧೧॥

ಮೋಘಾಶಾ ಮೋಘಕರ್ಮಾಣೋ ಮೋಘಜ್ಞಾನಾ ವಿಚೇತಸಃ ।
ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ ॥ ॥೧೨॥
ಮಹಾತ್ಮಾನಸ್ತು ಮಾಂ ಪಾರ್ಥ ದೈವೀಂ ಪ್ರಕೃತಿಮಾಶ್ರಿತಾಃ ।
ಭಜಂತ್ಯನನ್ಯಮನಸೋ ಜ್ಞಾತ್ವಾ ಭೂತಾದಿಮವ್ಯಯಮ್ ॥ ॥೧೩॥
ಸತತಂ ಕೀರ್ತಯಂತೋ ಮಾಂ ಯತಂತಶ್ಚ ದೃಢವ್ರತಾಃ ।
ನಮಸ್ಯಂತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ ॥ ॥೧೪॥
ಜ್ಞಾನಯಜ್ಞೇನ ಚಾಪ್ಯನ್ಯೇ ಯಜಂತೋ ಮಾಮುಪಾಸತೇ ।
ಏಕತ್ವೇನ ಪೃಥಕ್ತ್ವೇನ ಬಹುಧಾ ವಿಶ್ವತೋಮುಖಮ್ ॥ ॥೧೫॥
ಅಹಂ ಕ್ರತುರಹಂ ಯಜ್ಞಃ ಸ್ವಧಾಽಹಮಹಮೌಷಧಮ್ ।
ಮಂತ್ರೋಽಹಮಹಮೇವಾಽಜ್ಯಂ ಅಹಮಗ್ನಿರಹಂ ಹುತಮ್ ॥ ॥೧೬॥
ಪಿತಾಽಹಮಸ್ಯ ಜಗತೋ ಮಾತಾ ಧಾತಾ ಪಿತಾಮಹಃ ।
ವೇದ್ಯಂ ಪವಿತ್ರಮೋಂಕಾರಃ ಋಕ್ಸಾಮ ಯಜುರೇವ ಚ ॥ ॥೧೭॥
ಗತಿರ್ಭರ್ತಾ ಪ್ರಭುಸ್ಸಾಕ್ಷೀ ನಿವಾಸಃ ಶರಣಂ ಸುಹೃತ್ ।
ಪ್ರಭವಪ್ರಲಯಸ್ಥಾನಂ ನಿಧಾನಂ ಬೀಜಮವ್ಯಯಮ್ ॥ ॥೧೮॥
ತಪಾಮ್ಯಹಮಹಂ ವರ್ಷಂ ನಿಗೃಹ್ಣಾಮ್ಯುತ್ಸೃಜಾಮಿ ಚ ।
ಅಮೃತಂ ಚೈವ ಮೃತ್ಯುಶ್ಚ ಸದಸಚ್ಚಾಹಮರ್ಜುನ ॥ ॥೧೯॥
ತ್ರೈವಿದ್ಯಾ ಮಾಂ ಸೋಮಪಾಃ ಪೂತಪಾಪಾಃ ಯಜ್ಞೈರಿಷ್ಟ್ವಾ ಸ್ವರ್ಗತಿಂ ಪ್ರಾರ್ಥಯಂತೇ।
ತೇ ಪುಣ್ಯಮಾಸಾದ್ಯ ಸುರೇಂದ್ರಲೋಕಂ ಅಶ್ನಂತಿ ದಿವ್ಯಾನ್ದಿವಿ ದೇವಭೋಗಾನ್॥
॥೨೦॥

ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ ।
ಏವಂ ತ್ರಯೀಧರ್ಮಮನುಪ್ರಪನ್ನಾಃ ಗತಾಗತಂ ಕಾಮಕಾಮಾ ಲಭಂತೇ ॥
॥೨೧॥

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥ ॥೨೨॥
ಯೇಽಪ್ಯನ್ಯದೇವತಾಭಕ್ತಾಃ ಯಜಂತೇ ಶ್ರದ್ಧಯಾಽನ್ವಿತಾಃ ।
ತೇಽಪಿ ಮಾಮೇವ ಕೌಂತೇಯ ಯಜಂತ್ಯವಿಧಿಪೂರ್ವಕಮ್ ॥ ॥೨೩॥

ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ ।
ನ ತು ಮಾಮಭಿಜಾನಂತಿ ತತ್ತ್ವೇನಾತಶ್ಚ್ಯವಂತಿ ತೇ ॥ ॥೨೪॥
ಯಾಂತಿ ದೇವವ್ರತಾ ದೇವಾನ್ ಪಿತೄನ್ಯಾಂತಿ ಪಿತೃವ್ರತಾಃ ।
ಭೂತಾನಿ ಯಾಂತಿ ಭೂತೇಜ್ಯಾಃ ಯಾಂತಿ ಮದ್ಯಾಜಿನೋಽಪಿ ಮಾಮ್ ॥
॥೨೫॥
ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮನಃ ॥ ॥೨೬॥
ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್ ॥ ॥೨೭॥
ಶುಭಾಶುಭಫಲೈರೇವಂ ಮೋಕ್ಷ್ಯಸೇ ಕರ್ಮಬಂಧನೈಃ ।
ಸಂನ್ಯಾಸಯೋಗಯುಕ್ತಾತ್ಮಾ ವಿಮುಕ್ತೋ ಮಾಮುಪೈಷ್ಯಸಿ ॥ ॥೨೮॥
ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।
ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್ ॥ ॥೨೯॥
ಅಪಿ ಚೇತ್ಸುದುರಾಚಾರೋ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥ ॥೩೦॥
ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।
ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ॥ ॥೩೧॥
ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಃ ತೇಽಪಿ ಯಾಂತಿ ಪರಾಂ ಗತಿಮ್ ॥ ॥೩೨॥
ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾಃ ಭಕ್ತಾ ರಾಜರ್ಷಯಸ್ತಥಾ ।
ಅನಿತ್ಯಮಸುಖಂ ಲೋಕಂ ಇಮಂ ಪ್ರಾಪ್ಯ ಭಜಸ್ವ ಮಾಮ್ ॥ ॥೩೩॥
ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಯುಕ್ತ್ವೈವಂ ಆತ್ಮಾನಂ ಮತ್ಪರಾಯಣಃ ॥ ॥೩೪॥

ಇತಿ ರಾಜವಿದ್ಯಾರಾಜಗುಹ್ಯಯೋಗೋನಾಮ ನವಮೋಽಧ್ಯಾಯಃ ।

## ಹತ್ತನೆಯ ಅಧ್ಯಾಯ

## ವಿಭೂತಿ ಯೋಗಃ

ಶ್ರೀ ಭಗವಾನುವಾಚ-

ಭೂಯ ಏವ ಮಹಾಬಾಹೋ ಶೃಣು ಮೇ ಪರಮಂ ವಚಃ ।
ಯತ್ತೇಽಹಂ ಪ್ರೀಯಮಾಣಾಯ ವಕ್ಷ್ಯಾಮಿ ಹಿತಕಾಮ್ಯಯಾ ॥ ॥೧॥
ನ ಮೇ ವಿದುಃ ಸುರಗಣಾಃ ಪ್ರಭವಂ ನ ಮಹರ್ಷಯಃ ।
ಅಹಮಾದಿರ್ಹಿ ದೇವಾನಾಂ ಮಹರ್ಷೀಣಾಂ ಚ ಸರ್ವಶಃ ॥ ॥೨॥
ಯೋ ಮಾಮಜಮನಾದಿಂ ಚ ವೇತ್ತಿ ಲೋಕಮಹೇಶ್ವರಮ್ ।
ಅಸಮ್ಮೂಢಃ ಸ ಮರ್ತ್ಯೇಷು ಸರ್ವಪಾಪೈಃ ಪ್ರಮುಚ್ಯತೇ ॥ ॥೩॥
ಬುದ್ಧಿರ್ಜ್ಞಾನಮಸಮ್ಮೋಹಃ ಕ್ಷಮಾ ಸತ್ಯಂ ದಮಃ ಶಮಃ ।
ಸುಖಂ ದುಃಖಂ ಭವೋಽಭಾವೋ ಭಯಂ ಚಾಭಯಮೇವ ಚ ॥ ॥೪॥
ಅಹಿಂಸಾ ಸಮತಾ ತುಷ್ಟಿಃ ತಪೋ ದಾನಂ ಯಶೋಽಯಶಃ ।
ಭವಂತಿ ಭಾವಾ ಭೂತಾನಾಂ ಮತ್ತ ಏವ ಪೃಥಗ್ವಿಧಾಃ ॥ ॥೫॥
ಮಹರ್ಷಯಃ ಸಪ್ತ ಪೂರ್ವೇ ಚತ್ವಾರೋ ಮನವಸ್ತಥಾ ।
ಮದ್ಭಾವಾ ಮಾನಸಾ ಜಾತಾಃ ಯೇಷಾಂ ಲೋಕ ಇಮಾಃ ಪ್ರಜಾಃ ॥ ॥೬॥
ಏತಾಂ ವಿಭೂತಿಂ ಯೋಗಂ ಚ ಮಮ ಯೋ ವೇತ್ತಿ ತತ್ತ್ವತಃ ।
ಸೋಽವಿಕಂಪೇನ ಯೋಗೇನ ಯುಜ್ಯತೇ ನಾತ್ರ ಸಂಶಯಃ ॥ ॥೭॥
ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ ।
ಇತಿ ಮತ್ವಾ ಭಜಂತೇ ಮಾಂ ಬುಧಾ ಭಾವಸಮನ್ವಿತಾಃ ॥ ॥೮॥
ಮಚ್ಚಿತ್ತಾ ಮದ್ಗತಪ್ರಾಣಾಃ ಬೋಧಯಂತಃ ಪರಸ್ಪರಮ್ ।
ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿ ಚ ॥ ॥೯॥
ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ ।
ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ ॥ ॥೧೦॥
ತೇಷಾಮೇವಾನುಕಂಪಾರ್ಥಂ ಅಹಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥ ॥೧೧॥

ಅರ್ಜುನ ಉವಾಚ -

ಪರಂ ಬ್ರಹ್ಮ ಪರಂ ಧಾಮ ಪವಿತ್ರಂ ಪರಮಂ ಭವಾನ್ ।
ಪುರುಷಂ ಶಾಶ್ವತಂ ದಿವ್ಯಂ ಆದಿದೇವಮಜಂ ವಿಭುಮ್ ॥ ॥೧೨॥
ಆಹುಸ್ತ್ವಾಮೃಷಯಃ ಸರ್ವೇ ದೇವರ್ಷಿರ್ನಾರದಸ್ತಥಾ ।
ಅಸಿತೋ ದೇವಲೋ ವ್ಯಾಸಃ ಸ್ವಯಂ ಚೈವ ಬ್ರವೀಷಿ ಮೇ ॥ ॥೧೩॥
ಸರ್ವಮೇತದೃತಂ ಮನ್ಯೇ ಯನ್ಮಾಂ ವದಸಿ ಕೇಶವ ।
ನ ಹಿ ತೇ ಭಗವನ್ವ್ಯಕ್ತಿಂ ವಿದುರ್ದೇವಾ ನ ದಾನವಾಃ ॥ ॥೧೪॥
ಸ್ವಯಮೇವಾಽತ್ಮನಾಽಽತ್ಮಾನಂ ವೇತ್ಥ ತ್ವಂ ಪುರುಷೋತ್ತಮ ।
ಭೂತಭಾವನ ಭೂತೇಶ ದೇವದೇವ ಜಗತ್ಪತೇ ॥ ॥೧೫॥
ವಕ್ತುಮರ್ಹಸ್ಯಶೇಷೇಣ ದಿವ್ಯಾಹ್ಯಾತ್ಮವಿಭೂತಯಃ ।
ಯಾಭಿರ್ವಿಭೂತಿಭಿರ್ಲೋಕಾನ್ ಇಮಾಂಸ್ತ್ವಂ ವ್ಯಾಪ್ಯ ತಿಷ್ಠಸಿ ॥ ॥೧೬॥
ಕಥಂ ವಿದ್ಯಾಮಹಂ ಯೋಗೀ ತ್ವಾಂ ಸದಾ ಪರಿಚಿಂತಯನ್ ।
ಕೇಷು ಕೇಷು ಚ ಭಾವೇಷು ಚಿಂತ್ಯೋಽಸಿ ಭಗವನ್ಮಯಾ ॥ ॥೧೭॥
ವಿಸ್ತರೇಣಾಽತ್ಮನೋ ಯೋಗಂ ವಿಭೂತಿಂ ಚ ಜನಾರ್ದನ ।
ಭೂಯಃ ಕಥಯ ತೃಪ್ತಿರ್ಹಿ ಶೃಣ್ವತೋ ನಾಸ್ತಿ ಮೇಽಮೃತಮ್ ॥ ॥೧೮॥

ಶ್ರೀ ಭಗವಾನುವಾಚ -

ಹಂತ ತೇ ಕಥಯಿಷ್ಯಾಮಿ ವಿಭೂತೀರಾತ್ಮನಃ ಶುಭಾಃ ।
ಪ್ರಾಧಾನ್ಯತಃ ಕುರುಶ್ರೇಷ್ಠ ನಾಸ್ತ್ಯಂತೋ ವಿಸ್ತರಸ್ಯ ಮೇ ॥ ॥೧೯॥
ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯ ಸ್ಥಿತಃ ।
ಅಹಮಾದಿಶ್ಚ ಮಧ್ಯಂ ಚ ಭೂತಾನಾಮಂತ ಏವ ಚ ॥ ॥ ೨೦॥
ಆದಿತ್ಯಾನಾಮಹಂ ವಿಷ್ಣುಃ ಜ್ಯೋತಿಷಾಂ ರವಿರಂಶುಮಾನ್ ।
ಮರೀಚಿರ್ಮರುತಾಮಸ್ಮಿ ನಕ್ಷತ್ರಾಣಾಮಹಂ ಶಶೀ ॥ ॥೨೧॥
ವೇದಾನಾಂ ಸಾಮವೇದೋಽಸ್ಮಿ ದೇವಾನಾಮಸ್ಮಿ ವಾಸವಃ ।
ಇಂದ್ರಿಯಾಣಾಂ ಮನಶ್ಚಾಸ್ಮಿ ಭೂತಾನಾಮಸ್ಮಿ ಚೇತನಾ ॥ ॥೨೨॥
ರುದ್ರಾಣಾಂ ಶಂಕರಶ್ಚಾಸ್ಮಿ ವಿತ್ತೇಶೋ ಯಕ್ಷರಕ್ಷಸಾಮ್ ।
ವಸೂನಾಂ ಪಾವಕಶ್ಚಾಸ್ಮಿ ಮೇರುಃ ಶಿಖರಿಣಾಮಹಮ್ ॥ ॥೨೩॥

ಪುರೋಧಸಾಂ ಚ ಮುಖ್ಯಂ ಮಾಂ ವಿದ್ಧಿ ಪಾರ್ಥ ಬೃಹಸ್ಪತಿಮ್ ।
ಸೇನಾನೀನಾಮಹಂ ಸ್ಕಂದಃ ಸರಸಾಮಸ್ಮಿ ಸಾಗರಃ ॥ ॥೨೪॥
ಮಹರ್ಷೀಣಾಂ ಭೃಗುರಹಂ ಗಿರಾಮಸ್ಮ್ಯೇಕಮಕ್ಷರಮ್ ।
ಯಜ್ಞಾನಾಂ ಜಪಯಜ್ಞೋಽಸ್ಮಿ ಸ್ಥಾವರಾಣಾಂ ಹಿಮಾಲಯಃ ॥ ॥೨೫॥
ಅಶ್ವತ್ಥಃ ಸರ್ವವೃಕ್ಷಾಣಾಂ ದೇವರ್ಷೀಣಾಂ ಚ ನಾರದಃ ।
ಗಂಧರ್ವಾಣಾಂ ಚಿತ್ರರಥಃ ಸಿದ್ಧಾನಾಂ ಕಪಿಲೋ ಮುನಿಃ ॥ ॥೨೬॥
ಉಚ್ಚೈಃಶ್ರವಸಮಶ್ವಾನಾಂ ವಿದ್ಧಿ ಮಾಮಮೃತೋದ್ಭವಮ್ ।
ಐರಾವತಂ ಗಜೇಂದ್ರಾಣಾಂ ನರಾಣಾಂ ಚ ನರಾಧಿಪಮ್ ॥ ॥೨೭॥
ಆಯುಧಾನಾಮಹಂ ವಜ್ರಂ ಧೇನೂನಾಮಸ್ಮಿ ಕಾಮಧುಕ್ ।
ಪ್ರಜನಶ್ಚಾಸ್ಮಿ ಕಂದರ್ಪಃ ಸರ್ಪಾಣಾಮಸ್ಮಿ ವಾಸುಕಿಃ ॥ ॥೨೮॥
ಅನಂತಶ್ಚಾಸ್ಮಿ ನಾಗಾನಾಂ ವರುಣೋ ಯಾದಸಾಮಹಮ್ ।
ಪಿತೄಣಾಮರ್ಯಮಾ ಚಾಸ್ಮಿ ಯಮಃ ಸಂಯಮತಾಮಹಮ್ ॥ ॥೨೯॥
ಪ್ರಹ್ಲಾದಶ್ಚಾಸ್ಮಿ ದೈತ್ಯಾನಾಂ ಕಾಲಃ ಕಲಯತಾಮಹಮ್ ।
ಮೃಗಾಣಾಂ ಚ ಮೃಗೇಂದ್ರೋಽಹಂ ವೈನತೇಯಶ್ಚ ಪಕ್ಷಿಣಾಮ್ ॥ ॥೩೦॥
ಪವನಃ ಪವತಾಮಸ್ಮಿ ರಾಮಃ ಶಸ್ತ್ರಭೃತಾಮಹಮ್ ।
ಝಷಾಣಾಂ ಮಕರಶ್ಚಾಸ್ಮಿ ಸ್ರೋತಸಾಮಸ್ಮಿ ಜಾಹ್ನವೀ ॥ ॥೩೧॥
ಸರ್ಗಾಣಾಮಾದಿರಂತಶ್ಚ ಮಧ್ಯಂ ಚೈವಾಹಮರ್ಜುನ ।
ಅಧ್ಯಾತ್ಮವಿದ್ಯಾ ವಿದ್ಯಾನಾಂ ವಾದಃ ಪ್ರವದತಾಮಹಮ್ ॥ ॥೩೨॥
ಅಕ್ಷರಾಣಾಮಕಾರೋಽಸ್ಮಿ ದ್ವಂದ್ವಃ ಸಾಮಾಸಿಕಸ್ಯ ಚ ।
ಅಹಮೇವಾಕ್ಷಯಃ ಕಾಲೋ ಧಾತಾಽಹಂ ವಿಶ್ವತೋಮುಖಃ ॥ ॥೩೩॥
ಮೃತ್ಯುಃ ಸರ್ವಹರಶ್ಚಾಹಂ ಉದ್ಭವಶ್ಚ ಭವಿಷ್ಯತಾಮ್ ।
ಕೀರ್ತಿಃ ಶ್ರೀರ್ವಾಕ್ಚ ನಾರೀಣಾಂ ಸ್ಮೃತಿರ್ಮೇಧಾ ಧೃತಿಃ ಕ್ಷಮಾ ॥ ॥೩೪॥
ಬೃಹತ್ಸಾಮ ತಥಾ ಸಾಮ್ನಾಂ ಗಾಯತ್ರೀ ಛಂದಸಾಮಹಂ ।
ಮಾಸಾನಾಂ ಮಾರ್ಗಶೀರ್ಷೋಽಹಂ ಋತೂನಾಂ ಕುಸುಮಾಕರಃ॥ ॥೩೫॥
ದ್ಯೂತಂ ಛಲಯತಾಮಸ್ಮಿ ತೇಜಸ್ತೇಜಸ್ವಿನಾಮಹಂ ।
ಜಯೋಽಸ್ಮಿ ವ್ಯವಸಾಯೋಽಸ್ಮಿ ಸತ್ತ್ವಂ ಸತ್ತ್ವವತಾಮಹಂ ॥ ॥೩೬॥
ವೃಷ್ಣೀನಾಂ ವಾಸುದೇವೋಽಸ್ಮಿ ಪಾಂಡವಾನಾಂ ಧನಂಜಯಃ ।
ಮುನೀನಾಮಪ್ಯಹಂ ವ್ಯಾಸಃ ಕವೀನಾಮುಶನಾ ಕವಿಃ ॥ ॥೩೭॥

ದಂಡೋ ದಮಯತಾಮಸ್ಮಿ ನೀತಿರಸ್ಮಿ ಜಿಗೀಷತಾಮ್ ।
ಮೌನಂ ಚೈವಾಸ್ಮಿ ಗುಹ್ಯಾನಾಂ ಜ್ಞಾನಂ ಜ್ಞಾನವತಾಮಹಮ್ ॥ ॥೩೮॥
ಯಚ್ಚಾಪಿ ಸರ್ವಭೂತಾನಾಂ ಬೀಜಂ ತದಹಮರ್ಜುನ ।
ನ ತದಸ್ತಿ ವಿನಾ ಯತ್ ಸ್ಯಾತ್ ಮಯಾ ಭೂತಂ ಚರಾಚರಮ್ ॥ ॥೩೯॥
ನಾಂತೋಽಸ್ತಿ ಮಮ ದಿವ್ಯಾನಾಂ ವಿಭೂತೀನಾಂ ಪರಂತಪ ।
ಏಷ ತೂದ್ದೇಶತಃ ಪ್ರೋಕ್ತೋ ವಿಭೂತೇರ್ವಿಸ್ತರೋ ಮಯಾ ॥ ॥೪೦॥
ಯದ್ಯದ್ವಿಭೂತಿಮತ್ಸತ್ವಂ ಶ್ರೀಮದೂರ್ಜಿತಮೇವ ವಾ ।
ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶಸಂಭವಮ್ ॥ ॥೪೧॥
ಅಥವಾ ಬಹುನೈತೇನ ಕಿಂ ಜ್ಞಾತೇನ ತವಾರ್ಜುನ ।
ವಿಷ್ಟಭ್ಯಾಹಮಿದಂ ಕೃತ್ಸ್ನಂ ಏಕಾಂಶೇನ ಸ್ಥಿತೋ ಜಗತ್ ॥ ॥೪೨॥

ಇತಿ ವಿಭೂತಿಯೋಗೋನಾಮ ದಶಮೋಽಧ್ಯಾಯಃ ।

## ಹನ್ನೊಂದನೆಯ ಅಧ್ಯಾಯ

## ವಿಶ್ವರೂಪ ದರ್ಶನ ಯೋಗಃ

ಅರ್ಜುನ ಉವಾಚ -

ಮದನುಗ್ರಹಾಯ ಪರಮಂ ಗುಹ್ಯಮಧ್ಯಾತ್ಮಸಂಜ್ಞಿತಮ್ ।
ಯತ್ತ್ವಯೋಕ್ತಂ ವಚಸ್ತೇನ ಮೋಹೋಽಯಂ ವಿಗತೋ ಮಮ ॥ ॥೧॥
ಭವಾಪ್ಯಯೌ ಹಿ ಭೂತಾನಾಂ ಶ್ರುತೌ ವಿಸ್ತರಶೋ ಮಯಾ ।
ತ್ವತ್ತಃ ಕಮಲಪತ್ರಾಕ್ಷ ಮಾಹಾತ್ಮ್ಯಮಪಿ ಚಾವ್ಯಯಮ್ ॥ ॥೨॥
ಏವಮೇತದ್ಯಥಾಽಽತ್ಥ ತ್ವಂ ಆತ್ಮಾನಂ ಪರಮೇಶ್ವರ ।
ದ್ರಷ್ಟುಮಿಚ್ಛಾಮಿ ತೇ ರೂಪಂ ಐಶ್ವರಂ ಪುರುಷೋತ್ತಮ ॥ ॥೩॥
ಮನ್ಯಸೇ ಯದಿ ತಚ್ಛಕ್ಯಂ ಮಯಾ ದ್ರಷ್ಟುಮಿತಿ ಪ್ರಭೋ ।
ಯೋಗೇಶ್ವರ ತತೋ ಮೇ ತ್ವಂ ದರ್ಶಯಾಽತ್ಮಾನಮವ್ಯಯಮ್ ॥ ॥೪॥

ಶ್ರೀ ಭಗವಾನುವಾಚ -

ಪಶ್ಯ ಮೇ ಪಾರ್ಥ ರೂಪಾಣಿ ಶತಶೋಽಥ ಸಹಸ್ರಶಃ ।
ನಾನಾವಿಧಾನಿ ದಿವ್ಯಾನಿ ನಾನಾವರ್ಣಾಕೃತೀನಿ ಚ॥ ॥೫॥
ಪಶ್ಯಾಽದಿತ್ಯಾನ್ ವಸೂನ್ ರುದ್ರಾನ್ ಅಶ್ವಿನೌ ಮರುತಸ್ತಥಾ ।
ಬಹೂನ್ಯದೃಷ್ಟಪೂರ್ವಾಣಿ ಪಶ್ಯಾಽಶ್ಚರ್ಯಾಣಿ ಭಾರತ॥ ॥೬॥
ಇಹೈಕಸ್ಥಂ ಜಗತ್ಕೃತ್ಸ್ನಂ ಪಶ್ಯಾದ್ಯ ಸಚರಾಚರಮ್ ।
ಮಮ ದೇಹೇ ಗುಡಾಕೇಶ ಯಚ್ಚಾನ್ಯದ್ದ್ರಷ್ಟುಮಿಚ್ಛಸಿ ॥ ॥೭॥
ನ ತು ಮಾಂ ಶಕ್ಯಸೇ ದ್ರಷ್ಟುಂ ಅನೇನೈವ ಸ್ವಚಕ್ಷುಷಾ ।
ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯ ಮೇ ಯೋಗಮೈಶ್ವರಮ್ ॥ ॥೮॥

ಸಂಜಯ ಉವಾಚ-

ಏವಮುಕ್ತ್ವಾ ತತೋ ರಾಜನ್ ಮಹಾಯೋಗೇಶ್ವರೋ ಹರಿಃ ।
ದರ್ಶಯಾಮಾಸ ಪಾರ್ಥಾಯ ಪರಮಂ ರೂಪಮೈಶ್ವರಮ್ ॥ ॥೯॥
ಅನೇಕವಕ್ತ್ರನಯನಂ ಅನೇಕಾದ್ಭುತದರ್ಶನಮ್ ।
ಅನೇಕದಿವ್ಯಾಭರಣಂ ದಿವ್ಯಾನೇಕೋದ್ಯತಾಯುಧಮ್ ॥ ॥೧೦॥

ದಿವ್ಯಮಾಲ್ಯಾಂಬರಧರಂ ದಿವ್ಯಗಂಧಾನುಲೇಪನಮ್ ।
ಸರ್ವಾಶ್ಚರ್ಯಮಯಂ ದೇವಂ ಅನಂತಂ ವಿಶ್ವತೋಮುಖಂ ॥ ॥೧೧॥
ದಿವಿ ಸೂರ್ಯಸಹಸ್ರಸ್ಯ ಭವೇದ್ಯುಗಪದುತ್ಥಿತಾ ।
ಯದಿ ಭಾಃ ಸದೃಶೀ ಸಾ ಸ್ಯಾತ್ ಭಾಸಸ್ತಸ್ಯ ಮಹಾತ್ಮನಃ ॥ ॥೧೨॥
ತತ್ರೈಕಸ್ಥಂ ಜಗತ್ಕೃತ್ಸ್ನಂ ಪ್ರವಿಭಕ್ತಮನೇಕಧಾ ।
ಅಪಶ್ಯದ್ದೇವದೇವಸ್ಯ ಶರೀರೇ ಪಾಂಡವಸ್ತದಾ ॥ ॥೧೩॥
ತತಃ ಸ ವಿಸ್ಮಯಾವಿಷ್ಟೋ ಹೃಷ್ಟರೋಮಾ ಧನಂಜಯಃ ।
ಪ್ರಣಮ್ಯ ಶಿರಸಾ ದೇವಂ ಕೃತಾಂಜಲಿರಭಾಷತ ॥ ॥೧೪॥

ಅರ್ಜುನ ಉವಾಚ -

ಪಶ್ಯಾಮಿ ದೇವಾಂಸ್ತವ ದೇವ ದೇಹೇ ಸರ್ವಾಂಸ್ತಥಾ ಭೂತವಿಶೇಷಸಂಘಾನ್ ।
ಬ್ರಹ್ಮಾಣಮೀಶಂ ಕಮಲಾಸನಸ್ಥಂ ಋಷೀಂಶ್ಚ ಸರ್ವಾನುರಗಾಂಶ್ಚ ದಿವ್ಯಾನ್ ॥
॥೧೫॥

ಅನೇಕಬಾಹೂದರವಕ್ತ್ರನೇತ್ರಂ ಪಶ್ಯಾಮಿ ತ್ವಾಂ ಸರ್ವತೋಽನಂತರೂಪಮ್ ।
ನಾಂತಂ ನ ಮಧ್ಯಂ ನ ಪುನಸ್ತವಾಽದಿಂ ಪಶ್ಯಾಮಿ ವಿಶ್ವೇಶ್ವರ ವಿಶ್ವರೂಪ॥ ॥೧೬॥
ಕಿರೀಟಿನಂ ಗದಿನಂ ಚಕ್ರಿಣಂ ಚ ತೇಜೋರಾಶಿಂ ಸರ್ವತೋ ದೀಪ್ತಿಮಂತಮ್ ।
ಪಶ್ಯಾಮಿ ತ್ವಾಂ ದುರ್ನಿರೀಕ್ಷ್ಯಂ ಸಮಂತಾತ್ ದೀಪ್ತಾನಲಾರ್ಕದ್ಯುತಿಮಪ್ರಮೇಯಮ್॥
॥೧೭॥

ತ್ವಮಕ್ಷರಂ ಪರಮಂ ವೇದಿತವ್ಯಂ ತ್ವಮಸ್ಯ ವಿಶ್ವಸ್ಯ ಪರಂ ನಿಧಾನಮ್ ।
ತ್ವಮವ್ಯಯಃ ಶಾಶ್ವತಧರ್ಮಗೋಪ್ತಾ ಸನಾತನಸ್ತ್ವಂ ಪುರುಷೋ ಮತೋ ಮೇ ॥
॥೧೮॥

ಅನಾದಿಮಧ್ಯಾಂತಮನಂತವೀರ್ಯಂ ಅನಂತಬಾಹುಂ ಶಶಿಸೂರ್ಯನೇತ್ರಮ್ ।
ಪಶ್ಯಾಮಿ ತ್ವಾ ದೀಪ್ತಹುತಾಶವಕ್ತ್ರಂ ಸ್ವತೇಜಸಾ ವಿಶ್ವಮಿದಂ ತಪಂತಮ್ ॥
॥೧೯॥

ದ್ಯಾವಾಪೃಥಿವ್ಯೋರಿದಮಂತರಂ ಹಿ ವ್ಯಾಪ್ತಂ ತ್ವಯೈಕೇನ ದಿಶಶ್ಚ ಸರ್ವಾಃ ।
ದೃಷ್ಟ್ವಾದ್ಭುತಂ ರೂಪಮುಗ್ರಂ ತವೇದಂ ಲೋಕತ್ರಯಂ ಪ್ರವ್ಯಥಿತಂ ಮಹಾತ್ಮನ್॥
॥೨೦॥

ಅಮೀ ಹಿ ತ್ವಾಸುರಸಂಘಾ ವಿಶಂತಿ ಕೇಚಿದ್ಭೀತಾಃ ಪ್ರಾಂಜಲಯೋ ಗೃಣಂತಿ ।
ಸ್ವಸ್ತೀತ್ಯುಕ್ತ್ವಾ ಮಹರ್ಷಿಸಿದ್ಧಸಂಘಾಃ ಸ್ತುವಂತಿ ತ್ವಾಂ ಸ್ತುತಿಭಿಃ ಪುಷ್ಕಲಾಭಿಃ ॥
॥೨೧॥

ರುದ್ರಾದಿತ್ಯಾವಸವೋ ಯೇ ಚ ಸಾಧ್ಯಾಃ ವಿಶ್ವೇಽಶ್ವಿನೌ ಮರುತಶ್ಚೋಷ್ಮಪಾಶ್ಚ ।
ಗಂಧರ್ವಯಕ್ಷಾಸುರಸಿದ್ಧಸಂಘಾಃ ವೀಕ್ಷಂತೇ ತ್ವಾಂ ವಿಸ್ಮಿತಾಶ್ಚೈವ ಸರ್ವೇ ॥
॥೨೨॥

ರೂಪಂ ಮಹತ್ತೇ ಬಹುವಕ್ತ್ರನೇತ್ರಂ ಮಹಾಬಾಹೋ ಬಹುಬಾಹೂರುಪಾದಮ್ ।
ಬಹೂದರಂ ಬಹುದಂಷ್ಟ್ರಾಕರಾಲಂ ದೃಷ್ಟ್ವಾ ಲೋಕಾಃ
ಪ್ರವ್ಯಥಿತಾಸ್ತಥಾಽಹಂ ॥ ॥೨೩॥
ನಭಃಸ್ಪೃಶಂ ದೀಪ್ತಮನೇಕವರ್ಣಂ ವ್ಯಾತ್ತಾನನಂ ದೀಪ್ತವಿಶಾಲನೇತ್ರಂ ।
ದೃಷ್ಟ್ವಾ ಹಿ ತ್ವಾಂ ಪ್ರವ್ಯಥಿತಾಂತರಾತ್ಮಾ ಧೃತಿಂ ನ ವಿಂದಾಮಿ ಶಮಂ ಚ ವಿಷ್ಣೋ ॥
॥೨೪॥

ದಂಷ್ಟ್ರಾಕರಾಲಾನಿ ಚ ತೇ ಮುಖಾನಿ ದೃಷ್ಟ್ವೈವ ಕಾಲಾನಲಸನ್ನಿಭಾನಿ ।
ದಿಶೋ ನ ಜಾನೇ ನ ಲಭೇ ಚ ಶರ್ಮ ಪ್ರಸೀದ ದೇವೇಶ ಜಗನ್ನಿವಾಸ॥ ॥೨೫॥
ಅಮೀ ಚ ತ್ವಾಂ ಧೃತರಾಷ್ಟ್ರಸ್ಯ ಪುತ್ರಾಃ ಸರ್ವೇ ಸಹೈವಾವನಿಪಾಲಸಂಘೈಃ ।
ಭೀಷ್ಮೋ ದ್ರೋಣಃ ಸೂತಪುತ್ರಸ್ತಥಾಽಸೌ ಸಹಾಸ್ಮದೀಯೈರಪಿ
ಯೋಧಮುಖ್ಯೈಃ ॥ ॥೨೬॥
ವಕ್ತ್ರಾಣಿ ತೇ ತ್ವರಮಾಣಾ ವಿಶಂತಿ ದಂಷ್ಟ್ರಾಕರಾಲಾನಿ ಭಯಾನಕಾನಿ ।
ಕೇಚಿದ್ವಿಲಗ್ನಾ ದಶನಾಂತರೇಷು ಸಂದೃಶ್ಯಂತೇ ಚೂರ್ಣಿತೈರುತ್ತಮಾಂಗೈಃ ॥
॥೨೭॥

ಯಥಾ ನದೀನಾಂ ಬಹವೋಽಂಬುವೇಗಾಃ ಸಮುದ್ರಮೇವಾಭಿಮುಖಾ ದ್ರವಂತಿ ।
ತಥಾ ತವಾಮೀ ನರಲೋಕವೀರಾಃ ವಿಶಂತಿ ವಕ್ತ್ರಾಣ್ಯಭಿವಿಜ್ವಲಂತಿ ॥ ॥೨೮॥
ಯಥಾ ಪ್ರದೀಪ್ತಂ ಜ್ವಲನಂ ಪತಂಗಾಃ ವಿಶಂತಿ ನಾಶಾಯ ಸಮೃದ್ಧವೇಗಾಃ ।
ತಥೈವ ನಾಶಾಯ ವಿಶಂತಿ ಲೋಕಾಃ ತವಾಪಿ ವಕ್ತ್ರಾಣಿ ಸಮೃದ್ಧವೇಗಾಃ॥ ॥೨೯॥
ಲೇಲಿಹ್ಯಸೇ ಗ್ರಸಮಾನಃ ಸಮಂತಾತ್ ಲೋಕಾನ್ ಸಮಗ್ರಾನ್ ವದನೈರ್ಜ್ವಲದ್ಭಿಃ ।
ತೇಜೋಭಿರಾಪೂರ್ಯ ಜಗತ್ ಸಮಗ್ರಂ ಭಾಸಸ್ತವೋಗ್ರಾಃ ಪ್ರತಪಂತಿ ವಿಷ್ಣೋ ॥
॥೩೦॥

ಆಖ್ಯಾಹಿ ಮೇ ಕೋ ಭವಾನುಗ್ರರೂಪೋ ನಮೋಽಸ್ತು ತೇ ದೇವವರ ಪ್ರಸೀದ ।
ವಿಜ್ಞಾತುಮಿಚ್ಛಾಮಿ ಭವಂತಮಾದ್ಯಂ ನ ಹಿ ಪ್ರಜಾನಾಮಿ ತವ ಪ್ರವೃತ್ತಿಮ್ ॥
॥೩೧॥

ಶ್ರೀಭಗವಾನುವಾಚ-

ಕಾಲೋಽಸ್ಮಿ ಲೋಕಕ್ಷಯಕೃತ್ಪ್ರವೃದ್ಧೋ ಲೋಕಾನ್ ಸಮಾಹರ್ತುಮಿಹ ಪ್ರವೃತ್ತಃ ।
ಋತೇಽಪಿ ತ್ವಾನ ಭವಿಷ್ಯಂತಿ ಸರ್ವೇ ಯೇಽವಸ್ಥಿತಾಃ ಪ್ರತ್ಯನೀಕೇಷು ಯೋಧಾಃ ॥
॥೩೨॥

ತಸ್ಮಾತ್ತ್ವಮುತ್ತಿಷ್ಠ ಯಶೋಲಭಸ್ವ ಜಿತ್ವಾಶತ್ರೂನ್ಭುಂಕ್ಷ್ವ ರಾಜ್ಯಂ ಸಮೃದ್ಧಮ್ ।
ಮಯೈವೈತೇ ನಿಹತಾಃ ಪೂರ್ವಮೇವ ನಿಮಿತ್ತಮಾತ್ರಂ ಭವ ಸವ್ಯಸಾಚಿನ್ ॥
॥೩೩॥

ದ್ರೋಣಂ ಚ ಭೀಷ್ಮಂ ಚ ಜಯದ್ರಥಂ ಚ ಕರ್ಣಂ ತಥಾಽನ್ಯಾನಪಿ
ಯೋಧವೀರಾನ್ ।
ಮಯಾ ಹತಾಂಸ್ತ್ವಂ ಜಹಿ ಮಾ ವ್ಯಥಿಷ್ಠಾಃ ಯುಧ್ಯಸ್ವ ಜೇತಾಸಿ ರಣೇ ಸಪತ್ನಾನ್ ॥
॥೩೪॥

ಸಂಜಯ ಉವಾಚ-

ಏತಚ್ಛ್ರುತ್ವಾ ವಚನಂ ಕೇಶವಸ್ಯ ಕೃತಾಂಜಲಿರ್ವೇಪಮಾನಃ ಕಿರೀಟೀ ।
ನಮಸ್ಕೃತ್ವಾಭೂಯ ಏವಾಽಹ ಕೃಷ್ಣಂ ಸಗದ್ಗದಂ ಭೀತಭೀತಃ ಪ್ರಣಮ್ಯ॥ ॥೩೫॥

ಅರ್ಜುನ ಉವಾಚ-

ಸ್ಥಾನೇ ಹೃಷೀಕೇಶ ತವ ಪ್ರಕೀರ್ತ್ಯಾ ಜಗತ್ಪ್ರಹೃಷ್ಯತ್ಯನುರಜ್ಯತೇ ಚ ।
ರಕ್ಷಾಂಸಿ ಭೀತಾನಿ ದಿಶೋ ದ್ರವಂತಿ ಸರ್ವೇ ನಮಸ್ಯಂತಿ ಚ ಸಿದ್ಧಸಂಘಾಃ ॥
॥೩೬॥

ಕಸ್ಮಾಚ್ಚ ತೇ ನ ನಮೇರನ್ ಮಹಾತ್ಮನ್ ಗರೀಯಸೇ ಬ್ರಹ್ಮಣೋಽಪ್ಯಾದಿಕರ್ತ್ರೇ ।
ಅನಂತ ದೇವೇಶ ಜಗನ್ನಿವಾಸ ತ್ವಮಕ್ಷರಂ ಸದಸತ್ತತ್ಪರಂ ಯತ್ ॥ ॥೩೭॥
ತ್ವಮಾದಿದೇವಃ ಪುರುಷಃ ಪುರಾಣಃ ತ್ವಮಸ್ಯ ವಿಶ್ವಸ್ಯ ಪರಂ ನಿಧಾನಂ ।
ವೇತ್ತಾಸಿ ವೇದ್ಯಂ ಚ ಪರಂ ಚ ಧಾಮ ತ್ವಯಾ ತತಂ ವಿಶ್ವಮನಂತರೂಪ॥ ॥೩೮॥

ವಾಯುರ್ಯಮೋಽಗ್ನಿರ್ವರುಣಶ್ಶಶಾಂಕಃ ಪ್ರಜಾಪತಿಸ್ತ್ವಂ ಪ್ರಪಿತಾಮಹಶ್ಚ ।
ನಮೋ ನಮಸ್ತೇಽಸ್ತು ಸಹಸ್ರಕೃತ್ವಃ ಪುನಶ್ಚ ಭೂಯೋಽಪಿ ನಮೋ ನಮಸ್ತೇ ॥
॥೩೯॥

ನಮಃ ಪುರಸ್ತಾದಥ ಪೃಷ್ಠತಸ್ತೇ ನಮೋಽಸ್ತು ತೇ ಸರ್ವತ ಏವಸರ್ವ ।
ಅನಂತವೀರ್ಯಾಮಿತ ವಿಕ್ರಮಸ್ತ್ವಂ ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ ॥
॥೪೦॥

ಸಖೇತಿ ಮತ್ವಾ ಪ್ರಸಭಂ ಯದುಕ್ತಂ ಹೇ ಕೃಷ್ಣ ಹೇ ಯಾದವ ಹೇ ಸಖೇತಿ।
ಅಜಾನತಾ ಮಹಿಮಾನಂ ತವೇಮಂ ಮಯಾ ಪ್ರಮಾದಾತ್ಪ್ರಣಯೇನ ವಾಽಪಿ ॥
॥೪೧॥

ಯಚ್ಚಾವಹಾಸಾರ್ಥಮಸತ್ಕೃತೋಽಸಿ ವಿಹಾರಶಯ್ಯಾಸನಭೋಜನೇಷು ।
ಏಕೋಽಥವಾಽಪ್ಯಚ್ಯುತ ತತ್ಸಮಕ್ಷಂ ತತ್ ಕ್ಷಾಮಯೇ
ತ್ವಾಮಹಮಪ್ರಮೇಯಮ್ ॥ ॥೪೨॥
ಪಿತಾಸಿ ಲೋಕಸ್ಯ ಚರಾಚರಸ್ಯ ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್ ।
ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ ಲೋಕತ್ರಯೇಽಪ್ಯಪ್ರತಿಮ ಪ್ರಭಾವ॥
॥೪೩॥

ತಸ್ಮಾತ್ ಪ್ರಣಮ್ಯ ಪ್ರಣಿಧಾಯ ಕಾಯಂ ಪ್ರಸಾದಯೇ ತ್ವಾಮಹಮೀಶಮೀಡ್ಯಮ್ ।
ಪಿತೇವ ಪುತ್ರಸ್ಯ ಸಖೇವ ಸಖ್ಯುಃ ಪ್ರಿಯಃ ಪ್ರಿಯಾಯಾರ್ಹಸಿ ದೇವ
ಸೋಢುಮ್ ॥ ॥೪೪॥
ಅದೃಷ್ಟಪೂರ್ವಂ ಹೃಷಿತೋಽಸ್ಮಿ ದೃಷ್ಟ್ವಾ ಭಯೇನ ಚ ಪ್ರವ್ಯಥಿತಂ ಮನೋ ಮೇ ।
ತದೇವ ಮೇ ದರ್ಶಯ ದೇವ ರೂಪಂ ಪ್ರಸೀದ ದೇವೇಶ ಜಗನ್ನಿವಾಸ ॥
॥೪೫॥

ಕಿರೀಟಿನಂ ಗದಿನಂ ಚಕ್ರಹಸ್ತಂ ಇಚ್ಛಾಮಿ ತ್ವಾಂ ದ್ರಷ್ಟುಮಹಂ ತಥೈವ ।
ತೇನೈವ ರೂಪೇಣ ಚತುರ್ಭುಜೇನ ಸಹಸ್ರಬಾಹೋ ಭವ ವಿಶ್ವಮೂರ್ತೇ ॥
॥೪೬॥

ಶ್ರೀ ಭಗವಾನುವಾಚ–
ಮಯಾ ಪ್ರಸನ್ನೇನ ತವಾರ್ಜುನೇದಂ ರೂಪಂ ಪರಂ ದರ್ಶಿತಮಾತ್ಮಯೋಗಾತ್ ।

ತೇಜೋಮಯಂ ವಿಶ್ವಮನಂತಮಾದ್ಯಂ ಯನ್ಮೇ ತ್ವದನ್ಯೇನ ನ
ದೃಷ್ಟಪೂರ್ವಮ್ ॥ ॥೪೭॥

ನ ವೇದ ಯಜ್ಞಾಧ್ಯಯನೈರ್ನ ದಾನೈಃ ನ ಚ ಕ್ರಿಯಾಭಿರ್ನ ತಪೋಭಿರುಗ್ರೈಃ।
ಏವಂರೂಪಃ ಶಕ್ಯ ಅಹಂ ನೃಲೋಕೇ ದ್ರಷ್ಟುಂ ತ್ವದನ್ಯೇನ ಕುರುಪ್ರವೀರ ॥
॥ ೪೮ ॥

ಮಾ ತೇ ವ್ಯಥಾ ಮಾ ಚ ವಿಮೂಢಭಾವೋ ದೃಷ್ಟ್ವಾ ರೂಪಂ
ಘೋರಮೀದೃಙ್ಮಮೇದಮ್ ।
ವ್ಯಪೇತಭೀಃ ಪ್ರೀತಮನಾಃ ಪುನಸ್ತ್ವಂ ತದೇವ ಮೇ ರೂಪಮಿದಂ ಪ್ರಪಶ್ಯ॥ ॥೪೯॥

ಸಂಜಯ ಉವಾಚ-

ಇತ್ಯರ್ಜುನಂ ವಾಸುದೇವಸ್ತಥೋಕ್ತ್ವಾ ಸ್ವಕಂ ರೂಪಂ ದರ್ಶಯಾಮಾಸ ಭೂಯಃ।
ಆಶ್ವಾಸಯಾಮಾಸ ಚ ಭೀತಮೇನಂ ಭೂತ್ವಾ ಪುನಃ ಸೌಮ್ಯವಪುರ್ಮಹಾತ್ಮಾ ॥
॥೫೦॥

ಅರ್ಜುನ ಉವಾಚ-

ದೃಷ್ಟ್ವೇದಂ ಮಾನುಷಂ ರೂಪಂ ತವ ಸೌಮ್ಯಂ ಜನಾರ್ದನ।
ಇದಾನೀಮಸ್ಮಿ ಸಂವೃತ್ತಃ ಸಚೇತಾಃ ಪ್ರಕೃತಿಂ ಗತಃ॥ ॥೫೧॥

ಶ್ರೀಭಗವಾನುವಾಚ-

ಸುದುರ್ದರ್ಶಮಿದಂ ರೂಪಂ ದೃಷ್ಟವಾನಸಿ ಯನ್ಮಮ।
ದೇವಾ ಅಪ್ಯಸ್ಯ ರೂಪಸ್ಯ ನಿತ್ಯಂ ದರ್ಶನಕಾಂಕ್ಷಿಣಃ॥ ॥೫೨॥
ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ।
ಶಕ್ಯ ಏವಂವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ॥ ॥೫೩॥
ಭಕ್ತ್ಯಾ ತ್ವನನ್ಯಯಾ ಶಕ್ಯಃ ಅಹಮೇವಂವಿಧೋಽರ್ಜುನ।
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ॥ ॥೫೪॥
ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ।
ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಂಡವ॥ ॥೫೫॥

ಇತಿ ವಿಶ್ವರೂಪದರ್ಶನ ಯೋಗೋನಾಮ ಏಕಾದಶೋಽಧ್ಯಾಯಃ।

## ಹನ್ನೆರಡನೆಯ ಅಧ್ಯಾಯ

# ಭಕ್ತಿ ಯೋಗಃ

ಅರ್ಜುನ ಉವಾಚ-

ಏವಂ ಸತತಯುಕ್ತಾ ಯೇ ಭಕ್ತಾಸ್ತ್ವಾಂ ಪರ್ಯುಪಾಸತೇ ।
ಯೇ ಚಾಪ್ಯಕ್ಷರಮವ್ಯಕ್ತಂ ತೇಷಾಂ ಕೇ ಯೋಗವಿತ್ತಮಾಃ ॥ ॥೧॥

ಶ್ರೀಭಗವಾನ್ ಉವಾಚ-

ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ ।
ಶ್ರದ್ಧಯಾ ಪರಯೋಪೇತಾಃ ತೇ ಮೇ ಯುಕ್ತತಮಾ ಮತಾಃ ॥ ॥೨॥
ಯೇ ತ್ವಕ್ಷರಮನಿರ್ದೇಶ್ಯಂ ಅವ್ಯಕ್ತಂ ಪರ್ಯುಪಾಸತೇ ।
ಸರ್ವತ್ರಗಮಚಿಂತ್ಯಂ ಚ ಕೂಟಸ್ಥಮಚಲಂ ಧ್ರುವಮ್ ॥ ॥೩॥
ಸನ್ನಿಯಮ್ಯೇಂದ್ರಿಯಗ್ರಾಮಂ ಸರ್ವತ್ರ ಸಮಬುದ್ಧಯಃ ।
ತೇ ಪ್ರಾಪ್ನುವಂತಿ ಮಾಮೇವ ಸರ್ವಭೂತಹಿತೇ ರತಾಃ ॥ ॥೪॥
ಕ್ಲೇಶೋಽಧಿಕತರಸ್ತೇಷಾಂ ಅವ್ಯಕ್ತಾಸಕ್ತಚೇತಸಾಮ್ ।
ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ ॥ ॥೫॥
ಯೇ ತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ ।
ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ ॥ ॥೬॥
ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।
ಭವಾಮಿ ನ ಚಿರಾತ್ಪಾರ್ಥ ಮಯ್ಯಾವೇಶಿತಚೇತಸಾಮ್ ॥ ॥೭॥
ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ।
ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥ ॥೮॥
ಅಥ ಚಿತ್ತಂ ಸಮಾಧಾತುಂ ನ ಶಕ್ನೋಷಿ ಮಯಿ ಸ್ಥಿರಮ್ ।
ಅಭ್ಯಾಸಯೋಗೇನ ತತೋ ಮಾಮಿಚ್ಛಾಽಪ್ತುಂ ಧನಂಜಯ ॥ ॥೯॥
ಅಭ್ಯಾಸೇಽಪ್ಯಸಮರ್ಥೋಽಸಿ ಮತ್ಕರ್ಮಪರಮೋ ಭವ ।
ಮದರ್ಥಮಪಿ ಕರ್ಮಾಣಿ ಕುರ್ವನ್ ಸಿದ್ಧಿಮವಾಪ್ಸ್ಯಸಿ ॥ ॥೧೦॥
ಅಥೈತದಪ್ಯಶಕ್ತೋಽಸಿ ಕರ್ತುಂ ಮದ್ಯೋಗಮಾಶ್ರಿತಃ ।
ಸರ್ವಕರ್ಮಫಲತ್ಯಾಗಂ ತತಃ ಕುರು ಯತಾತ್ಮವಾನ್ ॥ ॥೧೧॥

ಶ್ರೇಯೋ ಹಿ ಜ್ಞಾನಮಭ್ಯಾಸಾತ್ ಜ್ಞಾನಾದ್ಧ್ಯಾನಂ ವಿಶಿಷ್ಯತೇ।
ಧ್ಯಾನಾತ್ಕರ್ಮಫಲತ್ಯಾಗಃ ತ್ಯಾಗಾಚ್ಛಾಂತಿರನಂತರಮ್ ॥ ॥೧೨॥
ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ।
ನಿರ್ಮಮೋ ನಿರಹಂಕಾರಃ ಸಮದುಃಖಸುಖಃ ಕ್ಷಮೀ ॥ ॥೧೩॥
ಸಂತುಷ್ಟಃ ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ।
ಮಯ್ಯರ್ಪಿತಮನೋಬುದ್ಧಿಃ ಯೋ ಮದ್ಭಕ್ತಃ ಸ ಮೇ ಪ್ರಿಯಃ ॥ ॥೧೪॥
ಯಸ್ಮಾನ್ನೋದ್ವಿಜತೇ ಲೋಕಃ ಲೋಕಾನ್ನೋದ್ವಿಜತೇ ಚ ಯಃ।
ಹರ್ಷಾಮರ್ಷಭಯೋದ್ವೇಗೈಃ ಮುಕ್ತೋ ಯಃ ಸ ಚ ಮೇ ಪ್ರಿಯಃ ॥ ॥೧೫॥
ಅನಪೇಕ್ಷಃ ಶುಚಿರ್ದಕ್ಷಃ ಉದಾಸೀನೋ ಗತವ್ಯಥಃ।
ಸರ್ವಾರಂಭಪರಿತ್ಯಾಗೀಯೋ ಯೋ ಮದ್ಭಕ್ತಃ ಸ ಮೇ ಪ್ರಿಯಃ ॥ ॥೧೬॥
ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ।
ಶುಭಾಶುಭಪರಿತ್ಯಾಗೀ ಭಕ್ತಿಮಾನ್ ಯಃ ಸ ಮೇ ಪ್ರಿಯಃ॥ ॥೧೭॥
ಸಮಃ ಶತ್ರೌ ಚ ಮಿತ್ರೇ ಚ ತಥಾ ಮಾನಾಪಮಾನಯೋಃ।
ಶೀತೋಷ್ಣಸುಖದುಃಖೇಷು ಸಮಃ ಸಂಗವಿವರ್ಜಿತಃ ॥ ॥೧೮॥
ತುಲ್ಯನಿಂದಾಸ್ತುತಿರ್ಮೌನೀ ಸಂತುಷ್ಟೋ ಯೇನ ಕೇನಚಿತ್।
ಅನಿಕೇತಃ ಸ್ಥಿರಮತಿಃ ಭಕ್ತಿಮಾನ್ಮೇ ಪ್ರಿಯೋ ನರಃ ॥ ॥೧೯॥
ಯೇ ತು ಧರ್ಮ್ಯಾಮೃತಮಿದಂ ಯಥೋಕ್ತಂ ಪರ್ಯುಪಾಸತೇ।
ಶ್ರದ್ಧಧಾನಾ ಮತ್ಪರಮಾಃ ಭಕ್ತಾಸ್ತೇಽತೀವ ಮೇ ಪ್ರಿಯಾಃ ॥ ॥೨೦॥

ಇತಿ ಭಕ್ತಿಯೋಗೋನಾಮ ದ್ವಾದಶೋಽಧ್ಯಾಯಃ।

## ಹದಿಮೂರನೆಯ ಅಧ್ಯಾಯ

## ಕ್ಷೇತ್ರ ಕ್ಷೇತ್ರಜ್ಞ ವಿಭಾಗಯೋಗಃ

ಶ್ರೀ ಭಗವಾನುವಾಚ -

ಇದಂ ಶರೀರಂ ಕೌಂತೇಯ ಕ್ಷೇತ್ರಮಿತ್ಯಭಿಧೀಯತೇ।
ಏತತ್ ಯೋ ವೇತ್ತಿ ತಂ ಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ॥ ॥೧॥
ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ।
ಕ್ಷೇತ್ರಕ್ಷೇತ್ರಜ್ಞಯೋರ್ಜ್ಞಾನಂ ಯತ್ತಜ್ಜ್ಞಾನಂ ಮತಂ ಮಮ॥ ॥೨॥
ತತ್‌ಕ್ಷೇತ್ರಂ ಯಚ್ಚ ಯಾದೃಕ್ಚ ಯದ್ವಿಕಾರಿ ಯತಶ್ಚ ಯತ್।
ಸ ಚ ಯೋ ಯತ್ಪ್ರಭಾವಶ್ಚ ತತ್ಸಮಾಸೇನ ಮೇ ಶೃಣು॥ ॥೩॥
ಋಷಿಭಿರ್ಬಹುಧಾ ಗೀತಂ ಛಂದೋಭಿರ್ವಿವಿಧೈಃ ಪೃಥಕ್।
ಬ್ರಹ್ಮಸೂತ್ರಪದೈಶ್ಚೈವ ಹೇತುಮದ್ಭಿಃ ವಿನಿಶ್ಚಿತೈಃ॥ ॥೪॥
ಮಹಾಭೂತಾನ್ಯಹಂಕಾರೋ ಬುದ್ಧಿರವ್ಯಕ್ತಮೇವ ಚ।
ಇಂದ್ರಿಯಾಣಿ ದಶೈಕಂ ಚ ಪಂಚ ಚೇಂದ್ರಿಯಗೋಚರಾಃ॥ ॥೫॥
ಇಚ್ಛಾ ದ್ವೇಷಃ ಸುಖಂ ದುಃಖಂ ಸಂಘಾತಶ್ಚೇತನಾಧೃತಿಃ।
ಏತತ್ ಕ್ಷೇತ್ರಂ ಸಮಾಸೇನ ಸವಿಕಾರಮುದಾಹೃತಮ್॥ ॥೬॥
ಅಮಾನಿತ್ವಮದಂಭಿತ್ವಂ ಅಹಿಂಸಾ ಕ್ಷಾಂತಿರಾರ್ಜವಮ್।
ಆಚಾರ್ಯೋಪಾಸನಂ ಶೌಚಂ ಸ್ಥೈರ್ಯಮಾತ್ಮವಿನಿಗ್ರಹಃ॥ ॥೭॥
ಇಂದ್ರಿಯಾರ್ಥೇಷು ವೈರಾಗ್ಯಂ ಅನಹಂಕಾರ ಏವ ಚ।
ಜನ್ಮಮೃತ್ಯುಜರಾವ್ಯಾಧಿ ದುಃಖದೋಷಾನುದರ್ಶನಮ್॥ ॥೮॥
ಅಸಕ್ತಿರನಭಿಷ್ವಂಗಃ ಪುತ್ರದಾರಗೃಹಾದಿಷು।
ನಿತ್ಯಂ ಚ ಸಮಚಿತ್ತತ್ವಂ ಇಷ್ಟಾನಿಷ್ಟೋಪಪತ್ತಿಷು॥ ॥೯॥
ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ।
ವಿವಿಕ್ತದೇಶಸೇವಿತ್ವಂ ಅರತಿರ್ಜನಸಂಸದಿ॥ ॥೧೦॥
ಅಧ್ಯಾತ್ಮಜ್ಞಾನನಿತ್ಯತ್ವಂ ತತ್ತ್ವಜ್ಞಾನಾರ್ಥದರ್ಶನಮ್।
ಏತತ್ ಜ್ಞಾನಮಿತಿ ಪ್ರೋಕ್ತಂ ಅಜ್ಞಾನಂ ಯದತೋಽನ್ಯಥಾ॥ ॥೧೧॥

ಜ್ಞೇಯಂ ಯತ್ತತ್ ಪ್ರವಕ್ಷ್ಯಾಮಿ ಯಜ್ಞಾತ್ವಾಽಮೃತಮಶ್ನುತೇ ।
ಅನಾದಿಮತ್ ಪರಂ ಬ್ರಹ್ಮ ನ ಸತ್ ತನ್ನಾಸದುಚ್ಯತೇ॥ ॥೧೨॥
ಸರ್ವತಃಪಾಣಿಪಾದಂ ತತ್ ಸರ್ವತೋಽಕ್ಷಿಶಿರೋಮುಖಮ್।
ಸರ್ವತಶ್ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ॥ ॥೧೩॥
ಸರ್ವೇಂದ್ರಿಯಗುಣಾಭಾಸಂ ಸರ್ವೇಂದ್ರಿಯವಿವರ್ಜಿತಮ್ ।
ಅಸಕ್ತಂ ಸರ್ವಭೃಚ್ಚೈವ ನಿರ್ಗುಣಂ ಗುಣಭೋಕ್ತೃ ಚ॥ ॥೧೪॥
ಬಹಿರಂತಶ್ಚ ಭೂತಾನಾಂ ಅಚರಂ ಚರಮೇವ ಚ।
ಸೂಕ್ಷ್ಮತ್ವಾತ್ ತದವಿಜ್ಞೇಯಂ ದೂರಸ್ಥಂ ಚಾಂತಿಕೇ ಚ ತತ್॥ ॥೧೫॥
ಅವಿಭಕ್ತಂ ಚ ಭೂತೇಷು ವಿಭಕ್ತಮಿವ ಚ ಸ್ಥಿತಮ್।
ಭೂತಭರ್ತೃ ಚ ತಜ್ಜ್ಞೇಯಂ ಗ್ರಸಿಷ್ಣು ಪ್ರಭವಿಷ್ಣು ಚ ॥ ॥೧೬॥
ಜ್ಯೋತಿಷಾಮಪಿ ತಜ್ಜ್ಯೋತಿಃ ತಮಸಃ ಪರಮುಚ್ಯತೇ ।
ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ ಹೃದಿ ಸರ್ವಸ್ಯ ವಿಷ್ಠಿತಮ್॥ ॥೧೭॥
ಇತಿ ಕ್ಷೇತ್ರಂ ತಥಾ ಜ್ಞಾನಂ ಜ್ಞೇಯಂ ಚೋಕ್ತಂ ಸಮಾಸತಃ।
ಮದ್ಭಕ್ತ ಏತದ್ವಿಜ್ಞಾಯ ಮದ್ಭಾವಾಯೋಪಪದ್ಯತೇ॥ ॥೧೮॥
ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ ।
ವಿಕಾರಾಂಶ್ಚ ಗುಣಾಂಶ್ಚೈವ ವಿದ್ಧಿ ಪ್ರಕೃತಿಸಂಭವಾನ್॥ ॥೧೯॥
ಕಾರ್ಯಕಾರಣಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ।
ಪುರುಷಃ ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ॥ ॥೨೦॥
ಪುರುಷಃ ಪ್ರಕೃತಿಸ್ಥೋ ಹಿ ಭುಂಕ್ತೇ ಪ್ರಕೃತಿಜಾನ್ ಗುಣಾನ್।
ಕಾರಣಂ ಗುಣಸಂಗೋಽಸ್ಯ ಸದಸದ್ಯೋನಿಜನ್ಮಸು॥ ॥೨೧॥
ಉಪದ್ರಷ್ಟಾಽನುಮಂತಾ ಚ ಭರ್ತಾ ಭೋಕ್ತಾ ಮಹೇಶ್ವರಃ ।
ಪರಮಾತ್ಮೇತಿ ಚಾಪ್ಯುಕ್ತೋ ದೇಹೇಽಸ್ಮಿನ್ ಪುರುಷಃ ಪರಃ॥ ॥೨೨॥
ಯ ಏನಂ ವೇತ್ತಿ ಪುರುಷಂ ಪ್ರಕೃತಿಂ ಚ ಗುಣೈಃ ಸಹ ।
ಸರ್ವಥಾ ವರ್ತಮಾನೋಽಪಿ ನ ಸ ಭೂಯೋಽಭಿಜಾಯತೇ॥ ॥೨೩॥
ಧ್ಯಾನೇನಾಽತ್ಮನಿ ಪಶ್ಯಂತಿ ಕೇಚಿದಾತ್ಮಾನಮಾತ್ಮನಾ ।
ಅನ್ಯೇ ಸಾಂಖ್ಯೇನ ಯೋಗೇನ ಕರ್ಮಯೋಗೇನ ಚಾಪರೇ॥ ॥ ೨೪॥

ಅನ್ಯೇ ತ್ವೇವಮಜಾನಂತಃ ಶ್ರುತ್ವಾಽನ್ಯೇಭ್ಯ ಉಪಾಸತೇ।
ತೇಽಪಿ ಚಾತಿತರಂತ್ಯೇವ ಮೃತ್ಯುಂ ಶ್ರುತಿಪರಾಯಣಾಃ॥ ॥೨೫॥
ಯಾವತ್ಸಂಜಾಯತೇ ಕಿಂಚಿತ್ ಸತ್ವಂ ಸ್ಥಾವರಜಂಗಮಮ್।
ಕ್ಷೇತ್ರಕ್ಷೇತ್ರಜ್ಞಸಂಯೋಗಾತ್ ತದ್ವಿದ್ಧಿ ಭರತರ್ಷಭ॥ ॥೨೬॥
ಸಮಂ ಹಿ ಸರ್ವಭೂತೇಷು ತಿಷ್ಠಂತಂ ಪರಮೇಶ್ವರಮ್।
ವಿನಶ್ಯತ್ಸ್ವವಿನಶ್ಯಂತಂ ಯಃ ಪಶ್ಯತಿ ಸ ಪಶ್ಯತಿ॥ ॥೨೭॥
ಸಮಂ ಪಶ್ಯನ್ ಹಿ ಸರ್ವತ್ರ ಸಮವಸ್ಥಿತಮೀಶ್ವರಮ್।
ನ ಹಿನಸ್ತ್ಯಾತ್ಮನಾಽಽತ್ಮಾನಂ ತತೋ ಯಾತಿ ಪರಾಂ ಗತಿಮ್॥ ॥೨೮॥
ಪ್ರಕೃತ್ಯೈವ ಚ ಕರ್ಮಾಣಿ ಕ್ರಿಯಮಾಣಾನಿ ಸರ್ವಶಃ।
ಯಃ ಪಶ್ಯತಿ ತಥಾಽಽತ್ಮಾನಂ ಅಕರ್ತಾರಂ ಸ ಪಶ್ಯತಿ॥ ॥೨೯॥
ಯದಾ ಭೂತಪೃಥಗ್ಭಾವಂ ಏಕಸ್ಥಮನುಪಶ್ಯತಿ।
ತತ ಏವ ಚ ವಿಸ್ತಾರಂ ಬ್ರಹ್ಮ ಸಂಪದ್ಯತೇ ತದಾ॥ ॥೩೦॥
ಅನಾದಿತ್ವಾನ್ನಿರ್ಗುಣತ್ವಾತ್ ಪರಮಾತ್ಮಾಽಯಮವ್ಯಯಃ।
ಶರೀರಸ್ಥೋಽಪಿ ಕೌಂತೇಯ ನ ಕರೋತಿ ನ ಲಿಪ್ಯತೇ॥ ॥೩೧॥
ಯಥಾ ಸರ್ವಗತಂ ಸೌಕ್ಷ್ಮ್ಯಾದಾಕಾಶಂ ನೋಪಲಿಪ್ಯತೇ।
ಸರ್ವತ್ರಾವಸ್ಥಿತೋ ದೇಹೇ ತಥಾಽಽತ್ಮಾ ನೋಪಲಿಪ್ಯತೇ॥ ॥೩೨॥
ಯಥಾ ಪ್ರಕಾಶಯತ್ಯೇಕಃ ಕೃತ್ಸ್ನಂ ಲೋಕಮಿಮಂ ರವಿಃ।
ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ॥ ॥೩೩॥
ಕ್ಷೇತ್ರಕ್ಷೇತ್ರಜ್ಞಯೋರೇವಂ ಅಂತರಂ ಜ್ಞಾನಚಕ್ಷುಷಾ।
ಭೂತಪ್ರಕೃತಿಮೋಕ್ಷಂ ಚ ಯೇ ವಿದುರ್ಯಾಂತಿ ತೇ ಪರಮ್॥ ॥೩೪॥

ಇತಿ ಕ್ಷೇತ್ರಕ್ಷೇತ್ರಜ್ಞವಿಭಾಗಯೋಗೋನಾಮತ್ರಯೋದಶೋಽಧ್ಯಾಯಃ।

# ಹದಿನಾಲ್ಕನೆಯ ಅಧ್ಯಾಯ

## ಗುಣತ್ರಯವಿಭಾಗಯೋಗಃ

ಶ್ರೀಭಗವಾನುವಾಚ-

ಪರಂ ಭೂಯಃ ಪ್ರವಕ್ಷ್ಯಾಮಿ ಜ್ಞಾನಾನಾಂ ಜ್ಞಾನಮುತ್ತಮಮ್।
ಯಜ್ಜ್ಞಾತ್ವಾ ಮುನಯಃ ಸರ್ವೇ ಪರಾಂ ಸಿದ್ಧಿಮಿತೋ ಗತಾಃ॥ ॥೧॥
ಇದಂ ಜ್ಞಾನಮುಪಾಶ್ರಿತ್ಯ ಮಮ ಸಾಧರ್ಮ್ಯಮಾಗತಾಃ।
ಸರ್ಗೇಽಪಿ ನೋಪಜಾಯಂತೇ ಪ್ರಲಯೇ ನ ವ್ಯಥಂತಿ ಚ॥ ॥೨॥
ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಮ್।
ಸಂಭವಃ ಸರ್ವಭೂತಾನಾಂ ತತೋ ಭವತಿ ಭಾರತ॥ ॥೩॥
ಸರ್ವಯೋನಿಷು ಕೌಂತೇಯ ಮೂರ್ತಯಃ ಸಂಭವಂತಿ ಯಾಃ।
ತಾಸಾಂ ಬ್ರಹ್ಮ ಮಹದ್ಯೋನಿಃ ಅಹಂ ಬೀಜಪ್ರದಃ ಪಿತಾ॥ ॥೪॥
ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ ।
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಮ್॥ ॥೫॥
ತತ್ರ ಸತ್ತ್ವಂ ನಿರ್ಮಲತ್ವಾತ್ ಪ್ರಕಾಶಕಮನಾಮಯಮ್।
ಸುಖಸಂಗೇನ ಬಧ್ನಾತಿ ಜ್ಞಾನಸಂಗೇನ ಚಾನಘ॥ ॥೬॥
ರಜೋ ರಾಗಾತ್ಮಕಂ ವಿದ್ಧಿ ತೃಷ್ಣಾಸಂಗಸಮುದ್ಭವಮ್।
ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಮ್॥ ॥೭॥
ತಮಸ್ತ್ವಜ್ಞಾನಜಂ ವಿದ್ಧಿ ಮೋಹನಂ ಸರ್ವದೇಹಿನಾಮ್।
ಪ್ರಮಾದಾಲಸ್ಯನಿದ್ರಾಭಿಃ ತನ್ನಿಬಧ್ನಾತಿ ಭಾರತ॥ ॥೮॥
ಸತ್ತ್ವಂ ಸುಖೇ ಸಂಜಯತಿ ರಜಃ ಕರ್ಮಣಿ ಭಾರತ।
ಜ್ಞಾನಮಾವೃತ್ಯ ತು ತಮಃ ಪ್ರಮಾದೇ ಸಂಜಯತ್ಯುತ॥ ॥೯॥
ರಜಸ್ತಮಶ್ಚಾಭಿಭೂಯ ಸತ್ತ್ವಂ ಭವತಿ ಭಾರತ।
ರಜಃ ಸತ್ತ್ವಂ ತಮಶ್ಚೈವ ತಮಃ ಸತ್ತ್ವಂ ರಜಸ್ತಥಾ॥ ॥೧೦॥
ಸರ್ವದ್ವಾರೇಷು ದೇಹೇಽಸ್ಮಿನ್ ಪ್ರಕಾಶ ಉಪಜಾಯತೇ।
ಜ್ಞಾನಂ ಯದಾ ತದಾ ವಿದ್ಯಾತ್ ವಿವೃದ್ಧಂ ಸತ್ತ್ವಮಿತ್ಯುತ॥ ॥೧೧॥

ಲೋಭಃ ಪ್ರವೃತ್ತಿರಾರಂಭಃ ಕರ್ಮಣಾಮಶಮಃ ಸ್ಪೃಹಾ।
ರಜಸ್ಯೇತಾನಿ ಜಾಯಂತೇ ವಿವೃದ್ಧೇ ಭರತರ್ಷಭ॥ ||೧೨||
ಅಪ್ರಕಾಶೋಽಪ್ರವೃತ್ತಿಶ್ಚ ಪ್ರಮಾದೋ ಮೋಹ ಏವ ಚ।
ತಮಸ್ಯೇತಾನಿ ಜಾಯಂತೇ ವಿವೃದ್ಧೇ ಕುರುನಂದನ॥ ||೧೩||
ಯದಾ ಸತ್ತ್ವೇ ಪ್ರವೃದ್ಧೇ ತು ಪ್ರಲಯಂ ಯಾತಿ ದೇಹಭೃತ್।
ತದೋತ್ತಮವಿದಾಂ ಲೋಕಾನ್ ಅಮಲಾನ್ ಪ್ರತಿಪದ್ಯತೇ॥ ||೧೪||
ರಜಸಿ ಪ್ರಲಯಂ ಗತ್ವಾ ಕರ್ಮಸಂಗಿಷು ಜಾಯತೇ।
ತಥಾ ಪ್ರಲೀನಸ್ತಮಸಿ ಮೂಢಯೋನಿಷು ಜಾಯತೇ॥ ||೧೫||
ಕರ್ಮಣಃ ಸುಕೃತಸ್ಯಾಹುಃ ಸಾತ್ತ್ವಿಕಂ ನಿರ್ಮಲಂ ಫಲಮ್।
ರಜಸಸ್ತು ಫಲಂ ದುಃಖಂ ಅಜ್ಞಾನಂ ತಮಸಃ ಫಲಮ್॥ ||೧೬||
ಸತ್ತ್ವಾತ್ ಸಂಜಾಯತೇ ಜ್ಞಾನಂ ರಜಸೋ ಲೋಭ ಏವ ಚ।
ಪ್ರಮಾದಮೋಹೌ ತಮಸಃ ಭವತೋಽಜ್ಞಾನಮೇವ ಚ॥ ||೧೭||
ಊರ್ಧ್ವಂ ಗಚ್ಛಂತಿ ಸತ್ತ್ವಸ್ಥಾಃ ಮಧ್ಯೇ ತಿಷ್ಠಂತಿ ರಾಜಸಾಃ।
ಜಘನ್ಯಗುಣವೃತ್ತಿಸ್ಥಾಃ ಅಧೋಗಚ್ಛಂತಿ ತಾಮಸಾಃ॥ ||೧೮||
ನಾನ್ಯಂ ಗುಣೇಭ್ಯಃ ಕರ್ತಾರಂ ಯದಾ ದ್ರಷ್ಟಾಽನುಪಶ್ಯತಿ।
ಗುಣೇಭ್ಯಶ್ಚ ಪರಂ ವೇತ್ತಿ ಮದ್ಭಾವಂ ಸೋಽಧಿಗಚ್ಛತಿ॥ ||೧೯||
ಗುಣಾನೇತಾನತೀತ್ಯ ತ್ರೀನ್ ದೇಹೀ ದೇಹಸಮುದ್ಭವಾನ್।
ಜನ್ಮಮೃತ್ಯುಜರಾದುಃಖೈಃ ವಿಮುಕ್ತೋಽಮೃತಮಶ್ನುತೇ॥ ||೨೦||
ಅರ್ಜುನ ಉವಾಚ-
ಕೈರ್ಲಿಂಗೈಸ್ತ್ರೀನ್ ಗುಣಾನೇತಾನ್ ಅತೀತೋ ಭವತಿ ಪ್ರಭೋ।
ಕಿಮಾಚಾರಃ ಕಥಂ ಚೈತಾನ್ ತ್ರೀನ್ ಗುಣಾನತಿವರ್ತತೇ॥ ||೨೧||
ಶ್ರೀ ಭಗವಾನುವಾಚ-
ಪ್ರಕಾಶಂ ಚ ಪ್ರವೃತ್ತಿಂ ಚ ಮೋಹಮೇವ ಚ ಪಾಂಡವ।
ನ ದ್ವೇಷ್ಟಿ ಸಂಪ್ರವೃತ್ತಾನಿ ನ ನಿವೃತ್ತಾನಿ ಕಾಂಕ್ಷತಿ॥ ||೨೨||
ಉದಾಸೀನವದಾಸೀನೋ ಗುಣೈರ್ಯೋ ನ ವಿಚಾಲ್ಯತೇ।
ಗುಣಾ ವರ್ತಂತ ಇತ್ಯೇವ ಯೋಽವತಿಷ್ಠತಿ ನೇಂಗತೇ॥ ||೨೩||

ಸಮದುಃಖಸುಖಃ ಸ್ವಸ್ಥಃ ಸಮಲೋಷ್ಟಾಶ್ಮಕಾಂಚನಃ।
ತುಲ್ಯಪ್ರಿಯಾಪ್ರಿಯೋ ಧೀರಃ ತುಲ್ಯನಿಂದಾತ್ಮಸಂಸ್ತುತಿಃ ॥ ॥೨೪॥
ಮಾನಾಪಮಾನಯೋಸ್ತುಲ್ಯಃ ತುಲ್ಯೋ ಮಿತ್ರಾರಿಪಕ್ಷಯೋಃ।
ಸರ್ವಾರಂಭಪರಿತ್ಯಾಗೀ ಗುಣಾತೀತಃ ಸ ಉಚ್ಯತೇ॥ ॥೨೫॥
ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ।
ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ॥ ॥೨೬॥
ಬ್ರಹ್ಮಣೋ ಹಿ ಪ್ರತಿಷ್ಠಾಽಹಂ ಅಮೃತಸ್ಯಾವ್ಯಯಸ್ಯ ಚ।
ಶಾಶ್ವತಸ್ಯ ಚ ಧರ್ಮಸ್ಯ ಸುಖಸ್ಯೈಕಾಂತಿಕಸ್ಯ ಚ॥ ॥೨೭॥

ಇತಿ ಗುಣತ್ರಯ ವಿಭಾಗಯೋಗೋನಾಮ ಚತುರ್ದಶೋಽಧ್ಯಾಯಃ।

# ಹದಿನೈದನೆಯ ಅಧ್ಯಾಯ

## ಪುರುಷೋತ್ತಮ ಯೋಗಃ

ಶ್ರೀ ಭಗವಾನುವಾಚ-

ಊರ್ಧ್ವಮೂಲಮಧಃಶಾಖಂ ಅಶ್ವತ್ಥಂ ಪ್ರಾಹುರವ್ಯಯಮ್।
ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದ ಸ ವೇದವಿತ್॥ ॥೧॥
ಅಧಶ್ಚೋರ್ಧ್ವಂ ಪ್ರಸೃತಾಸ್ತಸ್ಯ ಶಾಖಾಃ ಗುಣಪ್ರವೃದ್ಧಾ ವಿಷಯಪ್ರವಾಲಾಃ।
ಅಧಶ್ಚ ಮೂಲಾನ್ಯನುಸಂತತಾನಿ ಕರ್ಮಾನುಬಂಧೀನಿ ಮನುಷ್ಯಲೋಕೇ॥ ॥೨॥
ನ ರೂಪಮಸ್ಯೇಹ ತಥೋಪಲಭ್ಯತೇ ನಾಂತೋ ನ ಚಾಽದಿರ್ನ ಚ ಸಂಪ್ರತಿಷ್ಠಾ।
ಅಶ್ವತ್ಥಮೇನಂ ಸುವಿರೂಢಮೂಲಂ ಅಸಂಗಶಸ್ತ್ರೇಣ ದೃಢೇನ ಛಿತ್ವಾ॥ ॥೩॥
ತತಃ ಪದಂ ತತ್ ಪರಿಮಾರ್ಗಿತವ್ಯಂ ಯಸ್ಮಿನ್ ಗತಾ ನ ನಿವರ್ತಂತಿ ಭೂಯಃ।
ತಮೇವ ಚಾದ್ಯಂ ಪುರುಷಂ ಪ್ರಪದ್ಯೇದ್ಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ॥ ॥೪॥
ನಿರ್ಮಾನಮೋಹಾ ಜಿತಸಂಗದೋಷಾಃ ಅಧ್ಯಾತ್ಮನಿತ್ಯಾ ವಿನಿವೃತ್ತಕಾಮಾಃ।
ದ್ವಂದ್ವೈರ್ವಿಮುಕ್ತಾಃ ಸುಖದುಃಖಸಂಜ್ಞೈಃ ಗಚ್ಛಂತ್ಯಮೂಢಾಃ ಪದಮವ್ಯಯಂ ತತ್॥
॥೫॥

ನ ತದ್ಭಾಸಯತೇ ಸೂರ್ಯೋ ನ ಶಶಾಂಕೋ ನ ಪಾವಕಃ।
ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ॥ ॥೬॥
ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ।
ಮನಃಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ॥ ॥೭॥
ಶರೀರಂ ಯದವಾಪ್ನೋತಿ ಯಚ್ಚಾಪ್ಯುತ್ಕ್ರಾಮತೀಶ್ವರಃ।
ಗೃಹೀತ್ವೈತಾನಿ ಸಂಯಾತಿ ವಾಯುರ್ಗಂಧಾನಿವಾಶಯಾತ್ ॥ ॥೮॥
ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ।
ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ॥ ॥೯॥
ಉತ್ಕ್ರಾಮಂತಂ ಸ್ಥಿತಂ ವಾಪಿ ಭುಂಜಾನಂ ವಾ ಗುಣಾನ್ವಿತಮ್ ।
ವಿಮೂಢಾ ನಾನು ಪಶ್ಯಂತಿ ಪಶ್ಯಂತಿ ಜ್ಞಾನಚಕ್ಷುಷಃ॥ ॥೧೦॥
ಯತಂತೋ ಯೋಗಿನಶ್ಚೈನಂ ಪಶ್ಯಂತ್ಯಾತ್ಮನ್ಯವಸ್ಥಿತಮ್ ।
ಯತಂತೋಽಪ್ಯಕೃತಾತ್ಮಾನೋ ನೈನಂ ಪಶ್ಯಂತ್ಯಚೇತಸಃ॥ ॥೧೧॥

ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಮ್।
ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಮ್॥ ॥೧೨॥
ಗಾಮಾವಿಶ್ಯ ಚ ಭೂತಾನಿ ಧಾರಯಾಮ್ಯಹಮೋಜಸಾ।
ಪುಷ್ಣಾಮಿ ಚೌಷಧೀಃ ಸರ್ವಾಃ ಸೋಮೋ ಭೂತ್ವಾ ರಸಾತ್ಮಕಃ॥ ॥೧೩॥
ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ।
ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್॥ ॥೧೪॥
ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟೋ ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ।
ವೇದೈಶ್ಚ ಸರ್ವೈರಹಮೇವ ವೇದ್ಯೋ ವೇದಾಂತಕೃದ್ವೇದವಿದೇವ ಚಾಹಮ್॥
॥೧೫॥
ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ।
ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ॥ ॥೧೬॥
ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ।
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ॥ ॥೧೭॥
ಯಸ್ಮಾತ್ ಕ್ಷರಮತೀತೋಽಹಂ ಅಕ್ಷರಾದಪಿ ಚೋತ್ತಮಃ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ॥ ॥೧೮॥
ಯೋ ಮಾಮೇವಮಸಮ್ಮೂಢೋ ಜಾನಾತಿ ಪುರುಷೋತ್ತಮಮ್।
ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ॥ ॥೧೯॥
ಇತಿ ಗುಹ್ಯತಮಂ ಶಾಸ್ತ್ರಂ ಇದಮುಕ್ತಂ ಮಯಾಽನಘ।
ಏತದ್ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ॥ ॥೨೦॥

ಇತಿ ಪುರುಷೋತ್ತಮ ಯೋಗೋನಾಮ ಪಂಚದಶೋಽಧ್ಯಾಯಃ।

## ಹದಿನಾರನೆಯ ಅಧ್ಯಾಯ

## ದೈವಾಸುರಸಂಪದ್ವಿಭಾಗಯೋಗಃ

ಶ್ರೀಭಗವಾನುವಾಚ-

ಅಭಯಂ ಸತ್ತ್ವಸಂಶುದ್ಧಿಃ ಜ್ಞಾನಯೋಗವ್ಯವಸ್ಥಿತಿಃ।
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಮ್॥ ॥೧॥
ಅಹಿಂಸಾ ಸತ್ಯಮಕ್ರೋಧಃ ತ್ಯಾಗಃ ಶಾಂತಿರಪೈಶುನಮ್।
ದಯಾ ಭೂತೇಷ್ವಲೋಲುಪ್ತ್ವಂ ಮಾರ್ದವಂ ಹ್ರೀರಚಾಪಲಮ್॥ ॥೨॥
ತೇಜಃ ಕ್ಷಮಾ ಧೃತಿಃ ಶೌಚಂ ಅದ್ರೋಹೋ ನಾತಿಮಾನಿತಾ।
ಭವಂತಿ ಸಂಪದಂ ದೈವೀಂ ಅಭಿಜಾತಸ್ಯ ಭಾರತ॥ ॥೩॥
ದಂಭೋ ದರ್ಪೋಽಭಿಮಾನಶ್ಚ ಕ್ರೋಧಃ ಪಾರುಷ್ಯಮೇವ ಚ।
ಅಜ್ಞಾನಂ ಚಾಭಿಜಾತಸ್ಯ ಪಾರ್ಥ ಸಂಪದಮಾಸುರೀಮ್॥ ॥೪॥
ದೈವೀ ಸಂಪದ್ವಿಮೋಕ್ಷಾಯ ನಿಬಂಧಾಯಾಸುರೀ ಮತಾ।
ಮಾ ಶುಚಃ ಸಂಪದಂ ದೈವೀಮಭಿಜಾತೋಽಸಿ ಪಾಂಡವ। ॥೫॥
ದ್ವೌ ಭೂತಸರ್ಗೌ ಲೋಕೇಽಸ್ಮಿನ್ ದೈವ ಆಸುರ ಏವ ಚ।
ದೈವೋ ವಿಸ್ತರಶಃ ಪ್ರೋಕ್ತಃ ಆಸುರಂ ಪಾರ್ಥ ಮೇ ಶೃಣು। ॥೬॥
ಪ್ರವೃತ್ತಿಂ ಚ ನಿವೃತ್ತಿಂ ಚ ಜನಾ ನ ವಿದುರಾಸುರಾಃ।
ನ ಶೌಚಂ ನಾಪಿ ಚಾಽಚಾರೋ ನ ಸತ್ಯಂ ತೇಷು ವಿದ್ಯತೇ॥ ॥೭॥
ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಮ್।
ಅಪರಸ್ಪರಸಂಭೂತಂ ಕಿಮನ್ಯತ್ ಕಾಮಹೇತುಕಮ್॥ ॥೮॥
ಏತಾಂ ದೃಷ್ಟಿಮವಷ್ಟಭ್ಯ ನಷ್ಟಾತ್ಮಾನೋಽಲ್ಪಬುದ್ಧಯಃ।
ಪ್ರಭವಂತ್ಯುಗ್ರಕರ್ಮಾಣಃ ಕ್ಷಯಾಯ ಜಗತೋಽಹಿತಾಃ॥ ॥೯॥
ಕಾಮಮಾಶ್ರಿತ್ಯ ದುಷ್ಪೂರಂ ದಂಭಮಾನಮದಾನ್ವಿತಾಃ।
ಮೋಹಾದ್ಗೃಹೀತ್ವಾಽಸದ್ಗ್ರಾಹಾನ್ ಪ್ರವರ್ತಂತೇಽಶುಚಿವ್ರತಾಃ॥ ॥೧೦॥
ಚಿಂತಾಮಪರಿಮೇಯಾಂ ಚ ಪ್ರಲಯಾಂತಾಮುಪಾಶ್ರಿತಾಃ।
ಕಾಮೋಪಭೋಗಪರಮಾಃ ಏತಾವದಿತಿ ನಿಶ್ಚಿತಾಃ॥ ॥೧೧॥

ಆಶಾಪಾಶಶತೈರ್ಬದ್ಧಾಃ ಕಾಮಕ್ರೋಧಪರಾಯಣಾಃ।
ಈಹಂತೇ ಕಾಮಭೋಗಾರ್ಥಮನ್ಯಾಯೇನಾರ್ಥಸಂಚಯಾನ್॥ ॥೧೨॥
ಇದಮದ್ಯ ಮಯಾ ಲಬ್ಧಮಿಮಂ ಪ್ರಾಪ್ಸ್ಯೇ ಮನೋರಥಮ್।
ಇದಮಸ್ತೀದಮಪಿ ಮೇ ಭವಿಷ್ಯತಿ ಪುನರ್ಧನಮ್॥ ॥೧೩॥
ಅಸೌ ಮಯಾ ಹತಃ ಶತ್ರುರ್ಹನಿಷ್ಯೇ ಚಾಪರಾನಪಿ।
ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ ಸುಖೀ॥ ॥೧೪॥
ಆಢ್ಯೋಽಭಿಜನವಾನಸ್ಮಿ ಕೋಽನ್ಯೋಽಸ್ತಿ ಸದೃಶೋ ಮಯಾ।
ಯಕ್ಷ್ಯೇ ದಾಸ್ಯಾಮಿ ಮೋದಿಷ್ಯ ಇತ್ಯಜ್ಞಾನವಿಮೋಹಿತಾಃ॥ ॥೧೫॥
ಅನೇಕಚಿತ್ತ ವಿಭ್ರಾಂತಾ ಮೋಹಜಾಲಸಮಾವೃತಾಃ ।
ಪ್ರಸಕ್ತಾಃ ಕಾಮಭೋಗೇಷು ಪತಂತಿ ನರಕೇಽಶುಚೌ॥ ॥೧೬॥
ಆತ್ಮ ಸಂಭಾವಿತಾಃ ಸ್ತಬ್ಧಾ ಧನಮಾನಮದಾನ್ವಿತಾಃ।
ಯಜಂತೇ ನಾಮಯಜ್ಞೈಸ್ತೇ ದಂಭೇನಾವಿಧಿಪೂರ್ವಕಮ್॥ ॥೧೭॥
ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಚ ಸಂಶ್ರಿತಾಃ।
ಮಾಮಾತ್ಮ ಪರದೇಹೇಷು ಪ್ರದ್ವಿಷಂತೋಽಭ್ಯಸೂಯಕಾಃ॥ ॥೧೮॥
ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್।
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು॥ ॥೧೯॥
ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ।
ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮ್॥ ॥೨೦॥
ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।
ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್॥ ॥೨೧॥
ಏತೈರ್ವಿಮುಕ್ತಃ ಕೌಂತೇಯ ತಮೋದ್ವಾರೈಸ್ತ್ರಿಭಿರ್ನರಃ ।
ಆಚರತ್ಯಾತ್ಮನಃ ಶ್ರೇಯಸ್ತತೋ ಯಾತಿ ಪರಾಂ ಗತಿಮ್॥ ॥೨೨॥
ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ।
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಮ್॥ ॥೨೩॥
ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ।
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ॥ ॥೨೪॥

ಇತಿ ದೈವಾಸುರಸಂಪದ್ವಿಭಾಗಯೋಗೋನಾಮ ಷೋಡಶೋಽಧ್ಯಾಯಃ।

## ಹದಿನೇಳನೆಯ ಅಧ್ಯಾಯ

## ಶ್ರದ್ಧಾತ್ರಯವಿಭಾಗಯೋಗಃ

ಅರ್ಜುನ ಉವಾಚ-

ಯೇ ಶಾಸ್ತ್ರವಿಧಿಮುತ್ಸೃಜ್ಯ ಯಜಂತೇ ಶ್ರದ್ಧಯಾಽನ್ವಿತಾಃ।
ತೇಷಾಂ ನಿಷ್ಠಾ ತು ಕಾ ಕೃಷ್ಣ ಸತ್ತ್ವಮಾಹೋ ರಜಸ್ತಮಃ॥ ॥೧॥

ಶ್ರೀಭಗವಾನುವಾಚ

ತ್ರಿವಿಧಾ ಭವತಿ ಶ್ರದ್ಧಾ ದೇಹಿನಾಂ ಸಾ ಸ್ವಭಾವಜಾ।
ಸಾತ್ತ್ವಿಕೀ ರಾಜಸೀ ಚೈವ ತಾಮಸೀ ಚೇತಿ ತಾಂ ಶೃಣು॥ ॥೨॥
ಸತ್ತ್ವಾನುರೂಪಾ ಸರ್ವಸ್ಯ ಶ್ರದ್ಧಾ ಭವತಿ ಭಾರತ।
ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ॥ ॥೩॥
ಯಜಂತೇ ಸಾತ್ತ್ವಿಕಾ ದೇವಾನ್ ಯಕ್ಷರಕ್ಷಾಂಸಿ ರಾಜಸಾಃ।
ಪ್ರೇತಾನ್ ಭೂತಗಣಾಂಶ್ಚಾನ್ಯೇ ಯಜಂತೇ ತಾಮಸಾ ಜನಾಃ॥ ॥೪॥
ಅಶಾಸ್ತ್ರವಿಹಿತಂ ಘೋರಂ ತಪ್ಯಂತೇ ಯೇ ತಪೋ ಜನಾಃ।
ದಂಭಾಹಂಕಾರ ಸಂಯುಕ್ತಾಃ ಕಾಮರಾಗ ಬಲಾನ್ವಿತಾಃ॥ ॥೫॥
ಕರ್ಶಯಂತಃ ಶರೀರಸ್ಥಂ ಭೂತಗ್ರಾಮಮಚೇತಸಃ।
ಮಾಂ ಚೈವಾಂತಃಶರೀರಸ್ಥಂ ತಾನ್ ವಿದ್ಧ್ಯಾಸುರನಿಶ್ಚಯಾನ್॥ ॥೬॥
ಆಹಾರಸ್ತ್ವಪಿ ಸರ್ವಸ್ಯ ತ್ರಿವಿಧೋ ಭವತಿ ಪ್ರಿಯಃ।
ಯಜ್ಞಸ್ತಪಸ್ತಥಾ ದಾನಂ ತೇಷಾಂ ಭೇದಮಿಮಂ ಶೃಣು॥ ॥೭॥
ಆಯುಸ್ಸತ್ತ್ವ ಬಲಾರೋಗ್ಯ ಸುಖ ಪ್ರೀತಿವಿವರ್ಧನಾಃ।
ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾ ಆಹಾರಾಃ ಸಾತ್ತ್ವಿಕ ಪ್ರಿಯಾಃ॥ ॥೮॥
ಕಟ್ವಮ್ಲಲವಣಾತ್ಯುಷ್ಣ- ತೀಕ್ಷ್ಣ- ರೂಕ್ಷವಿದಾಹಿನಃ।
ಆಹಾರಾ ರಾಜಸಸ್ಯೇಷ್ಟಾ ದುಃಖ ಶೋಕಾಮಯಪ್ರದಾಃ॥ ॥೯॥
ಯಾತಯಾಮಂ ಗತರಸಂ ಪೂತಿ ಪರ್ಯುಷಿತಂ ಚ ಯತ್।
ಉಚ್ಛಿಷ್ಟಮಪಿ ಚಾಮೇಧ್ಯಂ ಭೋಜನಂ ತಾಮಸಪ್ರಿಯಮ್॥ ॥೧೦॥
ಅಫಲಾಕಾಂಕ್ಷಿಭಿರ್ಯಜ್ಞೋ ವಿಧಿದೃಷ್ಟೋ ಯ ಇಜ್ಯತೇ।
ಯಷ್ಟವ್ಯಮೇವೇತಿ ಮನಃ ಸಮಾಧಾಯ ಸ ಸಾತ್ತ್ವಿಕಃ॥ ॥೧೧॥

ಅಭಿಸಂಧಾಯ ತು ಫಲಂದಂಭಾರ್ಥಮಪಿ ಚೈವ ಯತ್ ।
ಇಜ್ಯತೇ ಭರತಶ್ರೇಷ್ಠ ತಂ ಯಜ್ಞಂ ವಿದ್ಧಿ ರಾಜಸಮ್॥ ॥೧೨॥
ವಿಧಿಹೀನಮಸೃಷ್ಟಾನ್ನಂ ಮಂತ್ರಹೀನಮದಕ್ಷಿಣಮ್ ।
ಶ್ರದ್ಧಾ ವಿರಹಿತಂ ಯಜ್ಞಂ ತಾಮಸಂ ಪರಿಚಕ್ಷತೇ ॥ ॥೧೩॥
ದೇವದ್ವಿಜಗುರು ಪ್ರಾಜ್ಞಪೂಜನಂ ಶೌಚಮಾರ್ಜವಮ್।
ಬ್ರಹ್ಮಚರ್ಯಮಹಿಂಸಾಚ ಶಾರೀರಂ ತಪ ಉಚ್ಯತೇ॥ ॥೧೪॥
ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್ ।
ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ ॥ ॥೧೫॥
ಮನಃ ಪ್ರಸಾದಃ ಸೌಮ್ಯತ್ವಂ ಮೌನಮಾತ್ಮವಿನಿಗ್ರಹಃ।
ಭಾವಸಂಶುದ್ಧಿರಿತ್ಯೇತತ್ತಪೋ ಮಾನಸ ಮುಚ್ಯತೇ ॥ ॥೧೬॥
ಶ್ರದ್ಧಯಾ ಪರಯಾ ತಪ್ತಂ ತಪಸ್ತತ್ತ್ರಿವಿಧಂ ನರೈಃ ।
ಅಫಲಾಕಾಂಕ್ಷಿಭಿರ್ಯುಕ್ತೈಃ ಸಾತ್ತ್ವಿಕಂ ಪರಿಚಕ್ಷತೇ॥ ॥೧೭॥
ಸತ್ಕಾರಮಾನ ಪೂಜಾರ್ಥಂ ತಪೋ ದಂಭೇನ ಚೈವ ಯತ್ ।
ಕ್ರಿಯತೇ ತದಿಹ ಪ್ರೋಕ್ತಂ ರಾಜಸಂ ಚಲಮಧ್ರುವಮ್॥ ॥೧೮॥
ಮೂಢಗ್ರಾಹೇಣಾತ್ಮನೋ ಯತ್ಪೀಡಯಾ ಕ್ರಿಯತೇ ತಪಃ।
ಪರಸ್ಯೋತ್ಸಾದನಾರ್ಥಂ ವಾ ತತ್ತಾಮಸಮುದಾಹೃತಮ್॥ ॥೧೯॥
ದಾತವ್ಯಮಿತಿ ಯದ್ದಾನಂ ದೀಯತೇಽನುಪಕಾರಿಣೇ।
ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ತ್ವಿಕಂ ಸ್ಮೃತಮ್ ॥ ॥೨೦॥
ಯತ್ತು ಪ್ರತ್ಯುಪಕಾರಾರ್ಥಂ ಫಲಮುದ್ದಿಶ್ಯ ವಾ ಪುನಃ ।
ದೀಯತೇ ಚ ಪರಿಕ್ಲಿಷ್ಟಂ ತದ್ದಾನಂ ರಾಜಸಂ ಸ್ಮೃತಮ್ ॥ ॥೨೧॥
ಅದೇಶಕಾಲೇ ಯದ್ದಾನಮಪಾತ್ರೇಭ್ಯಶ್ಚ ದೀಯತೇ ।
ಅಸತ್ಕೃತಮವಜ್ಞಾತಂ ತತ್ತಾಮಸಮುದಾಹೃತಮ್॥ ॥೨೨॥
ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ ।
ಬ್ರಾಹ್ಮಣಾಸ್ತೇನ ವೇದಾಶ್ಚ ಯಜ್ಞಾಶ್ಚ ವಿಹಿತಾಃ ಪುರಾ॥ ॥೨೩॥
ತಸ್ಮಾದೋಮಿತ್ಯುದಾಹೃತ್ಯ ಯಜ್ಞದಾನ ತಪಃ ಕ್ರಿಯಾಃ ।
ಪ್ರವರ್ತಂತೇ ವಿಧಾನೋಕ್ತಾಃ ಸತತಂ ಬ್ರಹ್ಮವಾದಿನಾಮ್॥ ॥೨೪॥

ತದಿತ್ಯನಭಿಸಂಧಾಯ ಫಲಂ ಯಜ್ಞತಪಃ ಕ್ರಿಯಾಃ ।
ದಾನಕ್ರಿಯಾಶ್ಚ ವಿವಿಧಾಃ ಕ್ರಿಯಂತೇ ಮೋಕ್ಷಕಾಂಕ್ಷಿಭಿಃ॥ ॥೨೫॥
ಸದ್ಭಾವೇ ಸಾಧು ಭಾವೇ ಚ ಸದಿತ್ಯೇತತ್ ಪ್ರಯುಜ್ಯತೇ ।
ಪ್ರಶಸ್ತೇ ಕರ್ಮಣಿ ತಥಾ ಸಚ್ಛಬ್ದಃ ಪಾರ್ಥ ಯುಜ್ಯತೇ ॥ ॥೨೬॥
ಯಜ್ಞೇ ತಪಸಿ ದಾನೇ ಚ ಸ್ಥಿತಿಃ ಸದಿತಿ ಚೋಚ್ಯತೇ ।
ಕರ್ಮಚೈವ ತದರ್ಥೀಯಂ ಸದಿತ್ಯೇವಾಭಿಧೀಯತೇ ॥ ॥೨೭॥
ಅಶ್ರದ್ಧಯಾ ಹುತಂ ದತ್ತಂ ತಪಸ್ತಪ್ತಂ ಕೃತಂ ಚ ಯತ್।
ಅಸದಿತ್ಯುಚ್ಯತೇ ಪಾರ್ಥ ನ ಚ ತತ್ಪ್ರೇತ್ಯ ನೋ ಇಹ ॥ ॥೨೮॥

ಇತಿ ಶ್ರದ್ಧಾತ್ರಯ ವಿಭಾಗಯೋಗೋನಾಮ ಸಪ್ತದಶೋಽಧ್ಯಾಯಃ।

# ಹದಿನೆಂಟನೆಯ ಅಧ್ಯಾಯ

## ಮೋಕ್ಷಸಂನ್ಯಾಸ ಯೋಗಃ

ಅರ್ಜುನ ಉವಾಚ-

ಸಂನ್ಯಾಸಸ್ಯ ಮಹಾಬಾಹೋ ತತ್ತ್ವಮಿಚ್ಛಾಮಿ ವೇದಿತುಮ್ ।
ತ್ಯಾಗಸ್ಯ ಚ ಹೃಷೀಕೇಶ ಪೃಥಕ್ಕೇಶಿನಿಷೂದನ ॥ ॥೧॥

ಶ್ರೀ ಭಗವಾನುವಾಚ

ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸಂನ್ಯಾಸಂ ಕವಯೋ ವಿದುಃ ।
ಸರ್ವಕರ್ಮ ಫಲತ್ಯಾಗಂ ಪ್ರಾಹುಸ್ತ್ಯಾಗಂ ವಿಚಕ್ಷಣಾಃ॥ ॥೨॥
ತ್ಯಾಜ್ಯಂ ದೋಷವದಿತ್ಯೇಕೇ ಕರ್ಮ ಪ್ರಾಹುರ್ಮನೀಷಿಣಃ ।
ಯಜ್ಞದಾನ ತಪಃ ಕರ್ಮ ನ ತ್ಯಾಜ್ಯಮಿತಿ ಚಾಪರೇ॥ ॥೩॥
ನಿಶ್ಚಯಂ ಶೃಣು ಮೇ ತತ್ರ ತ್ಯಾಗೇ ಭರತಸತ್ತಮ।
ತ್ಯಾಗೋ ಹಿ ಪುರುಷವ್ಯಾಘ್ರ ತ್ರಿವಿಧಃ ಸಂಪ್ರಕೀರ್ತಿತಃ ॥ ॥೪॥
ಯಜ್ಞದಾನ ತಪಃ ಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್।
ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್॥ ॥೫॥
ಏತಾನ್ಯಪಿ ತು ಕರ್ಮಾಣಿ ಸಂಗಂ ತ್ಯಕ್ತ್ವಾ ಫಲಾನಿ ಚ ।
ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಮ್॥ ॥೬॥
ನಿಯತಸ್ಯ ತು ಸಂನ್ಯಾಸಃ ಕರ್ಮಣೋ ನೋಪಪದ್ಯತೇ ।
ಮೋಹಾತ್ತಸ್ಯ ಪರಿತ್ಯಾಗಸ್ತಾಮಸಃ ಪರಿಕೀರ್ತಿತಃ ॥ ॥೭॥
ದುಃಖಮಿತ್ಯೇವ ಯತ್ಕರ್ಮ ಕಾಯಕ್ಲೇಶಭಯಾತ್ತ್ಯಜೇತ್ ।
ಸ ಕೃತ್ವಾ ರಾಜಸಂ ತ್ಯಾಗಂ ನೈವ ತ್ಯಾಗಫಲಂ ಲಭೇತ್ ॥ ॥೮॥
ಕಾರ್ಯಮಿತ್ಯೇವ ಯತ್ಕರ್ಮ ನಿಯತಂ ಕ್ರಿಯತೇಽರ್ಜುನ ।
ಸಂಗಂ ತ್ಯಕ್ತ್ವಾ ಫಲಂ ಚೈವ ಸ ತ್ಯಾಗಃ ಸಾತ್ತ್ವಿಕೋ ಮತಃ ॥ ॥೯॥
ನ ದ್ವೇಷ್ಟ್ಯಕುಶಲಂ ಕರ್ಮ ಕುಶಲೇ ನಾನುಷಜ್ಜತೇ ।
ತ್ಯಾಗೀ ಸತ್ತ್ವಸಮಾವಿಷ್ಟೋ ಮೇಧಾವೀ ಛಿನ್ನಸಂಶಯಃ ॥ ॥೧೦॥
ನ ಹಿ ದೇಹಭೃತಾ ಶಕ್ಯಂ ತ್ಯಕ್ತುಂ ಕರ್ಮಾಣ್ಯಶೇಷತಃ ।
ಯಸ್ತು ಕರ್ಮಫಲತ್ಯಾಗೀ ಸ ತ್ಯಾಗೀತ್ಯಭಿಧೀಯತೇ ॥ ॥೧೧॥

ಅನಿಷ್ಟಮಿಷ್ಟಂ ಮಿಶ್ರಂ ಚ ತ್ರಿವಿಧಂ ಕರ್ಮಣಃ ಫಲಮ್ ।
ಭವತ್ಯತ್ಯಾಗಿನಾಂ ಪ್ರೇತ್ಯ ನ ತು ಸಂನ್ಯಾಸಿನಾಂ ಕ್ವಚಿತ್ ॥ ॥೧೨॥
ಪಂಚೈತಾನಿ ಮಹಾಬಾಹೋ ಕಾರಣಾನಿ ನಿಬೋಧ ಮೇ ।
ಸಾಂಖ್ಯೇ ಕೃತಾಂತೇ ಪ್ರೋಕ್ತಾನಿ ಸಿದ್ಧಯೇ ಸರ್ವಕರ್ಮಣಾಮ್॥ ॥೧೩॥
ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಮ್ ।
ವಿವಿಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಮ್॥ ॥೧೪॥
ಶರೀರವಾಙ್ಮನೋಭಿರ್ಯತ್ಕರ್ಮ ಪ್ರಾರಭತೇ ನರಃ ।
ನ್ಯಾಯ್ಯಂ ವಾ ವಿಪರೀತಂ ವಾ ಪಂಚೈತೇ ತಸ್ಯ ಹೇತವಃ ॥ ॥೧೫॥
ತತ್ರೈವಂ ಸತಿ ಕರ್ತಾರಮಾತ್ಮಾನಂ ಕೇವಲಂ ತು ಯಃ ।
ಪಶ್ಯತ್ಯಕೃತಬುದ್ಧಿತ್ವಾನ್ನ ಸ ಪಶ್ಯತಿ ದುರ್ಮತಿಃ ॥ ॥೧೬॥
ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ ।
ಹತ್ವಾಽಪಿ ಸ ಇಮಾನ್ ಲೋಕಾನ್ನ ಹಂತಿ ನ ನಿಬಧ್ಯತೇ ॥ ॥೧೭॥
ಜ್ಞಾನಂ ಜ್ಞೇಯಂ ಪರಿಜ್ಞಾತಾ ತ್ರಿವಿಧಾ ಕರ್ಮಚೋದನಾ ।
ಕರಣಂ ಕರ್ಮ ಕರ್ತೇತಿ ತ್ರಿವಿಧಃ ಕರ್ಮಸಂಗ್ರಹಃ ॥ ॥೧೮॥
ಜ್ಞಾನಂ ಕರ್ಮ ಚ ಕರ್ತಾ ಚ ತ್ರಿಧೈವ ಗುಣಭೇದತಃ ।
ಪ್ರೋಚ್ಯತೇ ಗುಣಸಂಖ್ಯಾನೇ ಯಥಾವಚ್ಛೃಣು ತಾನ್ಯಪಿ ॥ ॥೧೯॥
ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ ।
ಅವಿಭಕ್ತಂ ವಿಭಕ್ತೇಷು ತಜ್ಜ್ಞಾನಂ ವಿದ್ಧಿ ಸಾತ್ತ್ವಿಕಮ್ ॥ ॥೨೦॥
ಪೃಥಕ್ತ್ವೇನ ತು ಯಜ್ಜ್ಞಾನಂ ನಾನಾಭಾವಾನ್ ಪೃಥಗ್ವಿಧಾನ್ ।
ವೇತ್ತಿ ಸರ್ವೇಷು ಭೂತೇಷು ತಜ್ಜ್ಞಾನಂ ವಿದ್ಧಿ ರಾಜಸಮ್ ॥ ॥೨೧॥
ಯತ್ತು ಕೃತ್ಸ್ನವದೇಕಸ್ಮಿನ್ ಕಾರ್ಯೇ ಸಕ್ತಮಹೇತುಕಮ್ ।
ಅತತ್ತ್ವಾರ್ಥವದಲ್ಪಂ ಚ ತತ್ತಾಮಸಮುದಾಹೃತಮ್ ॥ ॥೨೨॥
ನಿಯತಂ ಸಂಗರಹಿತಮರಾಗದ್ವೇಷತಃ ಕೃತಮ್ ।
ಅಫಲಪ್ರೇಪ್ಸುನಾ ಕರ್ಮ ಯತ್ತತ್ಸಾತ್ತ್ವಿಕಮುಚ್ಯತೇ ॥ ॥೨೩॥
ಯತ್ತು ಕಾಮೇಪ್ಸುನಾ ಕರ್ಮ ಸಾಹಂಕಾರೇಣ ವಾ ಪುನಃ ।
ಕ್ರಿಯತೇ ಬಹುಲಾಯಾಸಂ ತದ್ರಾಜಸಮುದಾಹೃತಮ್ ॥ ॥೨೪॥

ಅನುಬಂಧಂ ಕ್ಷಯಂ ಹಿಂಸಾಮನವೇಕ್ಷ್ಯ ಚ ಪೌರುಷಮ್ ।
ಮೋಹಾದಾರಭ್ಯತೇ ಕರ್ಮ ಯತ್ತತ್ತಾಮಸಮುಚ್ಯತೇ ॥ ॥೨೫॥

ಮುಕ್ತ ಸಂಗೋಽನಹಂವಾದೀ ಧೃತ್ಯುತ್ಸಾಹಸಮನ್ವಿತಃ ।
ಸಿದ್ಧ್ಯಸಿದ್ಧ್ಯೋರ್ನಿರ್ವಿಕಾರಃ ಕರ್ತಾ ಸಾತ್ತ್ವಿಕ ಉಚ್ಯತೇ ॥ ॥೨೬॥

ರಾಗೀ ಕರ್ಮಫಲಪ್ರೇಪ್ಸುರ್ಲುಬ್ಧೋ ಹಿಂಸಾತ್ಮಕೋಽಶುಚಿಃ ।
ಹರ್ಷಶೋಕಾನ್ವಿತಃ ಕರ್ತಾ ರಾಜಸಃ ಪರಿಕೀರ್ತಿತಃ ॥ ॥೨೭॥

ಅಯುಕ್ತಃ ಪ್ರಾಕೃತಃ ಸ್ತಬ್ಧಃ ಶಠೋ ನೈಕೃತಿಕೋಽಲಸಃ ।
ವಿಷಾದೀ ದೀರ್ಘಸೂತ್ರೀ ಚ ಕರ್ತಾ ತಾಮಸ ಉಚ್ಯತೇ ॥ ॥೨೮॥

ಬುದ್ಧೇರ್ಭೇದಂ ಧೃತೇಶ್ಚೈವ ಗುಣತಸ್ತ್ರಿವಿಧಂ ಶೃಣು ।
ಪ್ರೋಚ್ಯಮಾನಮಶೇಷೇಣ ಪೃಥಕ್ತ್ವೇನ ಧನಂಜಯ ॥ ॥೨೯॥

ಪ್ರವೃತ್ತಿಂ ಚ ನಿವೃತ್ತಿಂ ಚ ಕಾರ್ಯಾಕಾರ್ಯೇ ಭಯಾಭಯೇ ।
ಬಂಧಂ ಮೋಕ್ಷಂ ಚ ಯಾ ವೇತ್ತಿ ಬುದ್ಧಿಃ ಸಾ ಪಾರ್ಥ ಸಾತ್ತ್ವಿಕೀ ॥ ॥೩೦॥

ಯಯಾ ಧರ್ಮಮಧರ್ಮಂ ಚ ಕಾರ್ಯಂಚಾಕಾರ್ಯಮೇವ ಚ ।
ಅಯಥಾವತ್ಪ್ರಜಾನಾತಿ ಬುದ್ಧಿಃ ಸಾಪಾರ್ಥ ರಾಜಸೀ ॥ ॥೩೧॥

ಅಧರ್ಮಂ ಧರ್ಮಮಿತಿ ಯಾ ಮನ್ಯತೇ ತಮಸಾವೃತಾ ।
ಸರ್ವಾರ್ಥಾನ್ವಿಪರೀತಾಂಶ್ಚ ಬುದ್ಧಿಃ ಸಾ ಪಾರ್ಥ ತಾಮಸೀ ॥ ॥೩೨॥

ಧೃತ್ಯಾ ಯಯಾ ಧಾರಯತೇ ಮನಃಪ್ರಾಣೇಂದ್ರಿಯಕ್ರಿಯಾಃ ।
ಯೋಗೇನಾವ್ಯಭಿಚಾರಿಣ್ಯಾ ಧೃತಿಃ ಸಾ ಪಾರ್ಥ ಸಾತ್ತ್ವಿಕೀ ॥ ॥೩೩॥

ಯಯಾ ತು ಧರ್ಮಕಾಮಾರ್ಥಾನ್ ಧೃತ್ಯಾ ಧಾರಯತೇಽರ್ಜುನ ।
ಪ್ರಸಂಗೇನ ಫಲಾಕಾಂಕ್ಷೀ ಧೃತಿಃ ಸಾ ಪಾರ್ಥ ರಾಜಸೀ ॥ ॥೩೪॥

ಯಯಾ ಸ್ವಪ್ನಂ ಭಯಂ ಶೋಕಂ ವಿಷಾದಂ ಮದಮೇವ ಚ ।
ನ ವಿಮುಂಚತಿ ದುರ್ಮೇಧಾ ಧೃತಿಃ ಸಾ ಪಾರ್ಥ ತಾಮಸೀ ॥ ॥೩೫॥

ಸುಖಂ ತ್ವಿದಾನೀಂ ತ್ರಿವಿಧಂ ಶೃಣು ಮೇ ಭರತರ್ಷಭ ।
ಅಭ್ಯಾಸಾದ್ರಮತೇ ಯತ್ರ ದುಃಖಾಂತಂ ಚ ನಿಗಚ್ಛತಿ ॥ ॥೩೬॥

ಯತ್ತದಗ್ರೇ ವಿಷಮಿವ ಪರಿಣಾಮೇಽಮೃತೋಪಮಮ್ ।
ತತ್ಸುಖಂ ಸಾತ್ತ್ವಿಕಂ ಪ್ರೋಕ್ತಮಾತ್ಮಬುದ್ಧಿಪ್ರಸಾದಜಮ್ ॥ ॥೩೭॥

ವಿಷಯೇಂದ್ರಿಯ ಸಂಯೋಗಾದ್ಯತ್ತದಗ್ರೇಽಮೃತೋಪಮಮ್ ।
ಪರಿಣಾಮೇ ವಿಷಮಿವ ತತ್ಸುಖಂ ರಾಜಸಂ ಸ್ಮೃತಮ್ ॥ ॥೩೮॥
ಯದಗ್ರೇ ಚಾನುಬಂಧೇ ಚ ಸುಖಂ ಮೋಹನಮಾತ್ಮನಃ ।
ನಿದ್ರಾಽಽಲಸ್ಯ ಪ್ರಮಾದೋತ್ಥಂ ತತ್ತಾಮಸಮುದಾಹೃತಮ್॥ ॥೩೯॥
ನತದಸ್ತಿ ಪೃಥಿವ್ಯಾಂ ವಾ ದಿವಿ ದೇವೇಷು ವಾಪುನಃ ।
ಸತ್ತ್ವಂ ಪ್ರಕೃತಿಜೈರ್ಮುಕ್ತಂ ಯದೇಭಿಃ ಸ್ಯಾತ್ತ್ರಿಭಿರ್ಗುಣೈಃ ॥ ॥೪೦॥
ಬ್ರಾಹ್ಮಣ ಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ ।
ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವ ಪ್ರಭವೈರ್ಗುಣೈಃ॥ ॥೪೧॥
ಶಮೋ ದಮಸ್ತಪಃ ಶೌಚಂ ಕ್ಷಾಂತಿರಾರ್ಜವಮೇವ ಚ ।
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಾಹ್ಮಂ ಕರ್ಮ ಸ್ವಭಾವಜಮ್ ॥ ॥೪೨॥
ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇ ಚಾಪ್ಯಪಲಾಯನಮ್ ।
ದಾನಮೀಶ್ವರಭಾವಶ್ಚ ಕ್ಷಾತ್ರಂ ಕರ್ಮ ಸ್ವಭಾವಜಮ್ ॥ ॥೪೩॥
ಕೃಷಿಗೋರಕ್ಷ್ಯವಾಣಿಜ್ಯಂ ವೈಶ್ಯಕರ್ಮ ಸ್ವಭಾವಜಮ್ ।
ಪರಿಚರ್ಯಾತ್ಮಕಂ ಕರ್ಮ ಶೂದ್ರ ಸ್ಯಾಪಿ ಸ್ವಭಾವಜಮ್॥ ॥೪೪॥
ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ।
ಸ್ವಕರ್ಮನಿರತಃ ಸಿದ್ಧಿಂ ಯಥಾ ವಿಂದತಿ ತಚ್ಛೃಣು ॥ ॥೪೫॥
ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥ ॥ ೪೬॥
ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
ಸ್ವಭಾವನಿಯತಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್ ॥ ॥ ೪೭॥
ಸಹಜಂ ಕರ್ಮ ಕೌಂತೇಯ ಸದೋಷಮಪಿ ನ ತ್ಯಜೇತ್ ।
ಸರ್ವಾರಂಭಾ ಹಿ ದೋಷೇಣ ಧೂಮೇನಾಗ್ನಿರಿವಾವೃತಾಃ ॥ ॥೪೮॥
ಅಸಕ್ತಬುದ್ಧಿಃ ಸರ್ವತ್ರ ಜಿತಾತ್ಮಾ ವಿಗತಸ್ಪೃಹಃ ।
ನೈಷ್ಕರ್ಮ್ಯಸಿದ್ಧಿಂ ಪರಮಾಂ ಸಂನ್ಯಾಸೇನಾಧಿಗಚ್ಛತಿ ॥ ॥೪೯॥
ಸಿದ್ಧಿಂ ಪ್ರಾಪ್ತೋ ಯಥಾ ಬ್ರಹ್ಮ ತಥಾಪ್ನೋತಿ ನಿಬೋಧ ಮೇ ।
ಸಮಾಸೇನೈವ ಕೌಂತೇಯ ನಿಷ್ಠಾ ಜ್ಞಾನಸ್ಯ ಯಾ ಪರಾ ॥ ॥೫೦॥

ಬುದ್ಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾಽತ್ಮಾನಂ ನಿಯಮ್ಯ ಚ ।
ಶಬ್ದಾದೀನ್ವಿಷಯಾಂಸ್ತ್ಯಕ್ತ್ವಾ ರಾಗದ್ವೇಷೌ ವ್ಯುದಸ್ಯ ಚ ॥ ॥೫೧॥
ವಿವಿಕ್ತಸೇವೀ ಲಘ್ವಾಶೀ ಯತವಾಕ್ಕಾಯಮಾನಸಃ ।
ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ ॥ ॥೫೨॥
ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಮ್।
ವಿಮುಚ್ಯ ನಿರ್ಮಮಃ ಶಾಂತೋ ಬ್ರಹ್ಮಭೂಯಾಯ ಕಲ್ಪತೇ ॥ ॥೫೩॥
ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ ।
ಸಮಃ ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಮ್ ॥ ॥೫೪॥
ಭಕ್ತ್ಯಾ ಮಾಮಭಿಜಾನಾತಿ ಯಾವಾನ್ಯಶ್ಚಾಸ್ಮಿ ತತ್ತ್ವತಃ ।
ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಮ್ ॥ ॥೫೫॥
ಸರ್ವಕರ್ಮಾಣ್ಯಪಿ ಸದಾ ಕುರ್ವಾಣೋ ಮದ್ವ್ಯಪಾಶ್ರಯಃ ।
ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಮ್॥ ॥೫೬॥
ಚೇತಸಾ ಸರ್ವಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಃ ।
ಬುದ್ಧಿಯೋಗಮುಪಾಶ್ರಿತ್ಯ ಮಚ್ಚಿತ್ತಃ ಸತತಂ ಭವ॥ ॥೫೭॥
ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ ।
ಅಥ ಚೇತ್ತ್ವಮಹಂಕಾರಾತ್ ನ ಶ್ರೋಷ್ಯಸಿ ವಿನಂಕ್ಷ್ಯಸಿ ॥ ॥೫೮॥
ಯದಹಂಕಾರಮಾಶ್ರಿತ್ಯ ನ ಯೋತ್ಸ್ಯ ಇತಿ ಮನ್ಯಸೇ ।
ಮಿಥ್ಯೈಷ ವ್ಯವಸಾಯಸ್ತೇ ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ ॥ ॥೫೯॥
ಸ್ವಭಾವಜೇನ ಕೌಂತೇಯ ನಿಬದ್ಧಃ ಸ್ವೇನ ಕರ್ಮಣಾ ।
ಕರ್ತುಂ ನೇಚ್ಛಸಿ ಯನ್ಮೋಹಾತ್ಕರಿಷ್ಯಸ್ಯವಶೋಽಪಿ ತತ್ ॥ ॥೬೦॥
ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।
ಭ್ರಾಮಯನ್ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ॥ ॥೬೧॥
ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।
ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್॥ ॥೬೨॥
ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ಗುಹ್ಯತರಂ ಮಯಾ ।
ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು॥ ॥೬೩॥

ಸರ್ವಗುಹ್ಯತಮಂ ಭೂಯಃ ಶೃಣು ಮೇ ಪರಮಂ ವಚಃ ।
ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಮ್॥ ॥೬೪॥
ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ॥ ॥೬೫॥
ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥ ॥೬೬॥
ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ ।
ನ ಚಾಶುಶ್ರೂಷವೇ ವಾಚ್ಯಂ ನ ಚ ಮಾಂ ಯೋಽಭ್ಯಸೂಯತಿ॥ ॥೬೭॥
ಯ ಇದಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ ।
ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇವೈಷ್ಯತ್ಯಸಂಶಯಃ ॥ ॥೬೮॥
ನ ಚ ತಸ್ಮಾನ್ಮನುಷ್ಯೇಷು ಕಶ್ಚಿನ್ಮೇ ಪ್ರಿಯಕೃತ್ತಮಃ ।
ಭವಿತಾ ನ ಚಮೇ ತಸ್ಮಾದನ್ಯಃ ಪ್ರಿಯತರೋ ಭುವಿ॥ ॥೬೯॥
ಅಧ್ಯೇಷ್ಯತೇ ಚ ಯ ಇಮಂ ಧರ್ಮ್ಯಂ ಸಂವಾದಮಾವಯೋಃ ।
ಜ್ಞಾನಯಜ್ಞೇನ ತೇನಾಹಂ ಇಷ್ಟಃ ಸ್ಯಾಮಿತಿ ಮೇ ಮತಿಃ ॥ ॥೭೦॥
ಶ್ರದ್ಧಾವಾನನಸೂಯಶ್ಚ ಶೃಣುಯಾದಪಿ ಯೋ ನರಃ।
ಸೋಽಪಿ ಮುಕ್ತಃ ಶುಭಾನ್ ಲೋಕಾನ್ ಪ್ರಾಪ್ನುಯಾತ್ಪುಣ್ಯ ಕರ್ಮಣಾಮ್॥ ॥೭೧॥
ಕಚ್ಚಿದೇತಚ್ಛ್ರುತಂ ಪಾರ್ಥ ತ್ವಯೈಕಾಗ್ರೇಣ ಚೇತಸಾ ।
ಕಚ್ಚಿದಜ್ಞಾನ ಸಂಮೋಹಃ ಪ್ರನಷ್ಟಸ್ತೇ ಧನಂಜಯ ॥ ।೭೨॥
ಅರ್ಜುನ ಉವಾಚ-
ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ।
ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ। ॥೭೩॥
ಸಂಜಯ ಉವಾಚ-
ಇತ್ಯಹಂ ವಾಸುದೇವಸ್ಯ ಪಾರ್ಥಸ್ಯ ಚ ಮಹಾತ್ಮನಃ ।
ಸಂವಾದಮಿಮಮಶ್ರೌಷಂ ಅದ್ಭುತಂ ರೋಮಹರ್ಷಣಮ್ ॥ ॥೭೪॥
ವ್ಯಾಸ ಪ್ರಸಾದಾಚ್ಛ್ರುತವಾನೇತದ್ಗುಹ್ಯಮಹಂ ಪರಮ್ ।
ಯೋಗಂ ಯೋಗೇಶ್ವರಾತ್ ಕೃಷ್ಣಾತ್ ಸಾಕ್ಷಾತ್ಕಥಯತಃ ಸ್ವಯಮ್ ॥ ॥೭೫॥

ರಾಜನ್ ಸಂಸ್ಮೃತ್ಯ ಸಂಸ್ಮೃತ್ಯ ಸಂವಾದಮಿಮಮದ್ಭುತಮ್।
ಕೇಶವಾರ್ಜುನಯೋಃ ಪುಣ್ಯಂ ಹೃಷ್ಯಾಮಿ ಚ ಮುಹುರ್ಮುಹುಃ ॥ ॥೭೬॥
ತಚ್ಚ ಸಂಸ್ಮೃತ್ಯ ಸಂಸ್ಮೃತ್ಯ ರೂಪಮತ್ಯದ್ಭುತಂ ಹರೇಃ ।
ವಿಸ್ಮಯೋ ಮೇ ಮಹಾನ್ ರಾಜನ್ ಹೃಷ್ಯಾಮಿ ಚ ಪುನಃ ಪುನಃ ॥ ॥೭೭॥
ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿಃ ಧ್ರುವಾ ನೀತಿರ್ಮತಿರ್ಮಮ ॥ ॥೭೮॥

ಇತಿ ಮೋಕ್ಷಸಂನ್ಯಾಸಯೋಗೋನಾಮ ಅಷ್ಟಾದಶೋऽಧ್ಯಾಯಃ।

## ಶ್ರೀಮತಿ ಎಂ.ಎ. ಸಿಂಗಮ್ಮನವರ ಇತರ ಕೃತಿಗಳು

1. ಶ್ರೀ ಭಗವದ್ರಾಮಾನುಜರು
2. 'ಸಪ್ತಗಿರಿ' ಮತ್ತು 'ಉಭಯವೇದ' ಪತ್ರಿಕೆಗಳಲ್ಲಿ ಲೇಖನಗಳು

## ಶ್ರೀಮತಿ ಎಂ.ಡಿ. ವೇದವಲ್ಲಿ ಮತ್ತು ಶ್ರೀಮತಿ ಎಂ.ಎ. ಸಿಂಗಮ್ಮನವರ ಇತರ ಕೃತಿಗಳು

1. ಆಳ್ವಾರ್‍ರುಗಳ ಜೀವನ ಮತ್ತು ಕೃತಿ ಪರಿಚಯ
2. ಶ್ರೀ ವೈಷ್ಣವ ಆಚಾರ್ಯರುಗಳ ಜೀವನ ಮತ್ತು ಕೃತಿ ಪರಿಚಯ

## ಶ್ರೀಮತಿ ಎಂ.ಡಿ. ವೇದವಲ್ಲಿಯವರ ಇತರ ಕೃತಿಗಳು

1. ಶಾಂತಿ ಸಾಧನೆ ಮತ್ತು ಪವಿತ್ರ ಜೀವನ
2. ಓಂ ನಮೋ ನಾರಾಯಣಾಯ ಎಂಬ ಮಂತ್ರರಾಜ
3. ಈಶಾವಾಸ್ಯೋಪನಿಷತ್ತು
4. ಗೀತೆಯ ಸಂದೇಶ (ಕರ್ಮಯೋಗ-ಜ್ಞಾನಯೋಗಗಳ ವಿವರಣೆ)
5. ವಿಶಿಷ್ಟಾದ್ವೈತ ಸಿದ್ಧಾಂತ
6. ಮುಮುಕ್ಷುಪ್ಪಡಿ
7. ಭಗವದ್ಗೀತೆಯ ಸಾರಾರ್ಥ
   (ಶ್ರೀಯಾಮುನಾಚಾರ್ಯರ ಗೀತಾರ್ಥ ಸಂಗ್ರಹವನ್ನನುಸರಿಸಿ
8. ಕರ್ಮ, ಜ್ಞಾನ, ಭಕ್ತಿ ಮತ್ತು ಶರಣಾಗತಿ ಯೋಗಗಳು
9. ಶ್ರೀ ಆಂಡಾಳ್ ತಿರುಪ್ಪಾವೈ ಸಂದೇಶ
10. ಆಳ್ವಾರ್‍ರುಗಳ ಜೀವನ ಮತ್ತು ಕೃತಿ ಪರಿಚಯ
11. ಶ್ರೀ ವೈಷ್ಣವ ಆಚಾರ್ಯರುಗಳ ಜೀವನ ಮತ್ತು ಕೃತಿ ಪರಿಚಯ
12. ಶ್ರೀ ನಮ್ಮಾಳ್ವಾರ್ ತಿರುವಾಯ್ಮೊಳಿ ದಿವ್ಯ ಪ್ರಬಂಧದ ಸಾರಾರ್ಥ
13. ಶ್ರೀ ಪೆರಿಯಾಳ್ವಾರ್ ತಿರುಪಲ್ಲಾಣ್ಡು
14. ಶ್ರೀ ಭಗವದ್ರಾಮಾನುಜಾಚಾರ್ಯರು ಅನುಗ್ರಹಿಸಿರುವ ಶರಣಾಗತಿ ಗದ್ಯ
15. ಶ್ರೀ ವಿಷ್ಣು ಸಹಸ್ರನಾಮ